ಕರ್ನಾಟಕ ಸರ್ಕಾರ

ಜಾಗತಿಕ ಇತಿಹಾಸ

ಪ್ರಥಮ ಪಿ.ಯು.ಸಿ.
ಇತಿಹಾಸ ಪಠ್ಯ ಪುಸ್ತಕ

2017 - 2018

ಪದವಿ ಪೂರ್ವ ಶಿಕ್ಷಣ ಇಲಾಖೆ,

ಮಲ್ಲೇಶ್ವರಂ, ಬೆಂಗಳೂರು – 12

www.pue.kar.nic.in

First Edition
March - 2013

© Directorate of Pre-University Education 2014.

Second Edition
March - 2014

All Rights Are Reserved

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

Printed on 80 GSM paper

The Karnataka Text Book Society ®
100 feet Ring Road,
Banashankari III Stage, BANGALORE - 560 085.

Publishers2:

Sree Subramanyeswara Printers
50, 3rd Main Road New Tharagupet
Bengaluru - 560 002 Ph : 26706558, 41221110

ಮುನ್ನುಡಿ

ಪದವಿಪೂರ್ವ. ಶಿಕ್ಷಣ. ಇಲಾಖೆ,. ಕರ್ನಾಟಕ. ಸರ್ಕಾರ,. ಇವರು. ಪ್ರಥಮ. ಪಿಯುಸಿ. ವಿದ್ಯಾರ್ಥಿಗಳಿಗಾಗಿ. ಪಠ್ಯಕ್ರಮವನ್ನು ಹಾಗೂ. ಪಠ್ಯಪುಸ್ತಕವನ್ನು. ರಚಿಸುವ. ಕಾರ್ಯವನ್ನು. ಇತಿಹಾಸ. ಪಠ್ಯಪುಸ್ತಕ. ಸಮಿತಿಗೆ. ವಹಿಸಿತು.. ಪಠ್ಯಪುಸ್ತಕವನ್ನು ರಚಿಸುವಾಗ. ಅನುಸರಿಸಬೇಕಾದ. ವಿವಿಧ. ಸೂಚನೆಗಳನ್ನೂ. ಮಾರ್ಗದರ್ಶಿ. ಸೂತ್ರಗಳನ್ನೂ. ಇಲಾಖೆ. ನೀಡಿತ್ತು.. ಪಠ್ಯಕ್ರಮದ ಪುನರ್ವಿಮರ್ಶನಾ. ಸಮಿತಿ. ಹಾಗೂ. ಪರಿಶೋಧನಾ. ಸಮಿತಿಗಳು. ಯಥೋಚಿತ. ಸೇರ್ಪಡೆ,. ತೆಗೆದುಹಾಕಬೇಕಾದ. ಅಂಶಗಳು ಮತ್ತು. ತಿದ್ದುಪಡಿಗಳನ್ನು. ತಿಳಿಸುವುದರ. ಮೂಲಕ. ನೆರವಾಗಿವೆ.. ಇಲಾಖೆಯ. ಆದೇಶದ. ಮೇರೆಗೆ,. ಎನ್.ಸಿ.ಇ.ಆರ್.ಟಿ. ಹಾಗೂ. ನೆರೆರಾಜ್ಯಗಳ. ಪಠ್ಯಕ್ರಮಗಳನ್ನು. ಪರಿಗಣಿಸಿ,. ಸಮಿತಿಯು. ಪಠ್ಯಕ್ರಮವನ್ನು. ತಯಾರಿಸಿದೆ.. ವಿದ್ಯಾರ್ಥಿಯ. ಹಿಂದಿನ ಜ್ಞಾನವನ್ನೂ. ಗಣನೆಗೆ. ತೆಗೆದುಕೊಳ್ಳಲಾಗಿದೆ.

ಸಾಕಷ್ಟು. ಪರ್ಯಾಲೋಚನೆಗಳು. ಹಾಗೂ. ಚರ್ಚೆಗಳ. ನಂತರ. ಸಮಿತಿಯು,. ಪ್ರಥಮ. ಪಿಯುಸಿ. ವಿದ್ಯಾರ್ಥಿಗಳಿಗೆ ಜಾಗತಿಕ. ಇತಿಹಾಸವನ್ನು. ಪಠ್ಯ. ವಿಷಯವನ್ನಾಗಿಡಲು. ನಿರ್ಧರಿಸಿತು.. ಸಮಿತಿಯು. ಕಾಲಘಟ್ಟದ (Periodical). ಇತಿಹಾಸವನ್ನು ಕೈಬಿಟ್ಟು,. ಅವಿಚ್ಛಿನ್ನವಾಗಿ. ಮತ್ತು. ಇಡಿಯಾಗಿ. ಅನುಸರಿಸುವ. ಹಾಗೂ. ಇತಿಹಾಸದ. ವಸ್ತುವಿಷಯವನ್ನು. ಸರಳವಾಗಿ. ಹಾಗೂ ಪಕ್ಷಪಾತರಹಿತವಾಗಿ. ವಿವರಣೆ. ನೀಡುವ. ನಿರ್ಧಾರ. ಮಾಡಿತು.. . ವಿದ್ಯಾರ್ಥಿಗಳು,. ಮೊದಲ. ವರ್ಷದಲ್ಲಿ. ಜಾಗತಿಕ. ಇತಿಹಾಸದ ಪಕ್ಷಿನೋಟ. ಅಥವಾ. ಮೇಲ್ನೋಟವನ್ನು. ಹೊಂದಿ,. ಜಾಗತಿಕ. ಇತಿಹಾಸವನ್ನು. ಅರ್ಥೈಸಿಕೊಂಡ. ಹಿನ್ನೆಲೆಯಲ್ಲಿ,. ದ್ವಿತೀಯ ವರ್ಷದಲ್ಲಿ. ಭಾರತ. ಹಾಗೂ. ಕರ್ನಾಟಕದ. ಇತಿಹಾಸಗಳನ್ನು. ಅಭ್ಯಸಿಸುತ್ತಾರೆ.. ಮೇಲೆ. ಚರ್ಚಿಸಿದ. ವಿಷಯಗಳಿಂದಾಗಿ, ಸಮಿತಿಯು. ಭಾರತದ. ಇತಿಹಾಸದ. ಯಾವುದೇ. ಅಧ್ಯಾಯಗಳನ್ನು. ಜಾಗತಿಕ. ಇತಿಹಾಸದಲ್ಲಿ. ಸೇರಿಸದಿರುವ. (ಸೇರಿಸಲು ಅರ್ಹವಾಗಿದ್ದರೂ). ನಿರ್ಧಾರ. ಮಾಡಿತು.. . ಮಾನವನ. ವಿಕಸನದಿಂದ. ಸಮಕಾಲೀನ. ಘಟನೆಗಳಾದ. ಆಲಿಪ್ತ. ಚಳುವಳಿ, ರಷ್ಯಾದ. ವಿಘಟನೆ. ಮುಂತಾದವುಗಳವರೆಗೆ. ಜಾಗತಿಕ. ಇತಿಹಾಸದ. ವ್ಯಾಪ್ತಿ. ವಿಸ್ತರಿಸಿದೆ.

ವಿದ್ಯಾರ್ಥಿಗಳ. ಹೆಚ್ಚಿನ. ಜ್ಞಾನಕ್ಕಾಗಿ,. ಸ್ವತಂತ್ರ್ಯ. ಆಲೋಚನೆಗಳನ್ನು. ವರ್ಧಿಸಲು. ಮತ್ತು. ಸೃಜನಶೀಲತೆಯನ್ನು. ಬೆಳೆಸಲು ಈ. ಪಠ್ಯಪುಸ್ತಕದಲ್ಲಿ. ಶಬ್ದಾರ್ಥ. ಪಟ್ಟಿ,. ಬಾಕ್ಸ್‌ನಲ್ಲಿರುವ. ಮಾಹಿತಿ,. ಚಟುವಟಿಕೆಗಳು. ಮತ್ತು. ಚಿತ್ರಗಳನ್ನು. ನೀಡಲಾಗಿದೆ. ಇವುಗಳ. ಬಗ್ಗೆ. ಕಿರುಪರೀಕ್ಷೆಗಳು. ಹಾಗೂ. ಪರೀಕ್ಷೆಗಳಲ್ಲಿ. ಪ್ರಶ್ನೆಗಳನ್ನು. ಕೇಳಬಾರದೆಂಬುದನ್ನು. ಗಮನಕ್ಕೆ. ತರಲಾಗಿದೆ.. ಪ್ರತೀ ಘಟಕ. ಅಥವಾ. ಅಧ್ಯಾಯದ. ನಂತರ. ಪ್ರಶ್ನೆಗಳನ್ನು. ನೀಡಲಾಗಿದೆ.. ಇದರಿಂದ. ವಿದ್ಯಾರ್ಥಿಗೆ. ಪರೀಕ್ಷೆಗೆ. ಸಿದ್ಧವಾಗಲು ಸಹಾಯವಾಗುತ್ತದೆ. ಮತ್ತು. ಅವುಗಳನ್ನು. ಉತ್ತರಿಸುವುದರಿಂದ. ವಿಷಯವನ್ನು. ಇನ್ನೂ. ಸ್ಪಷ್ಟವಾಗಿ. ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಪಠ್ಯಪುಸ್ತಕದಲ್ಲಿ,. ಸಾ.ಶ.ಪೂ.. (ಸಾಮಾನ್ಯ. ಶಕೆ. ಪೂರ್ವ). ಹಾಗು. ಸಾ.ಶ. (ಸಾಮಾನ್ಯ. ಶಕೆ). ಎಂಬ. ಪದಗಳನ್ನು ಮೊದಲು. ಉಪಯೋಗಿಸುತ್ತಿದ್ದ. . ಕ್ರಿ.ಪೂ. ಮತ್ತು. ಕ್ರಿ.ಶ. ಕ್ಕೆ. ಬದಲಾಗಿ. ಉಪಯೋಗಿಸಲಾಗಿದೆ.. ಪಠ್ಯಪುಸ್ತಕವನ್ನು. 120 ಘಂಟೆಗಳ. ಬೋಧನೆಗಾಗಿ. ತಯಾರಿಸಲಾಗಿದೆ.. . ಪ್ರತೀ. ಅಧ್ಯಾಯಕ್ಕೂ. ನಿಗದಿಪಡಿಸಿರುವ. ಅವಧಿ,. ಬೋಧನೆಯ,. ಕಲಿಕೆಯ, ಅರ್ಥೈಸಿಕೊಳ್ಳುವ. ಕ್ಲಿಷ್ಟತೆಯ. ಮಟ್ಟ. ಹಾಗೂ. ಅಧ್ಯಾಯಗಳ. ವಿಸ್ತಾರವನ್ನು. ಅವಲಂಬಿಸಿದೆ.. ಪುಸ್ತಕದ. ಕೊನೆಯಲ್ಲಿ. ಒಂದು ಮಾದರಿ. ಪ್ರಶ್ನೆ. ಪತ್ರಿಕೆ. ಮತ್ತು. ಅದರ. ನೀಲಿನಕ್ಷೆಯನ್ನು. ಕೊಡಲಾಗಿದೆ.. ಹಿಂದಿನ. ಪ್ರಶ್ನೆಪತ್ರಿಕೆಗಳಿಗೆ. ಹೋಲಿಸಿದರೆ. ಕೆಲವೊಂದು ಅಲ್ಪ. ಪ್ರಮಾಣದ. ಬದಲಾವಣೆಗಳನ್ನು. ತರಲಾಗಿದೆ. ಎಂಬುದು. ಗಮನಿಸಬೇಕಾದ. ಅಂಶ.

ಸಮಿತಿಯು. ಅನೇಕ. ಸಭೆಗಳನ್ನು. ನಡೆಸಿ,. ಅನೇಕ. ವಿಷಯ. ತಜ್ಞರನ್ನು. ಭೇಟಿಯಾಗಿ,. ಪುಸ್ತಕವನ್ನು. ತಯಾರಿಸುವಲ್ಲಿ ಗರಿಷ್ಠ. ಪ್ರಯತ್ನ. ಮಾಡಿದೆ.. ಪುಸ್ತಕವು,. ಅದರ. ಉದ್ದೇಶವನ್ನು. ಈಡೇರಿಸುವುದೆಂದೂ,. ಓದಗರೆಲ್ಲರಿಗೂ ಉಪಯುಕ್ತವಾಗುವುದೆಂದೂ. ಪ್ರಾಮಾಣಿಕವಾಗಿ. ಭಾವಿಸುತ್ತೇನೆ.

ಡಾ. ಗಾಯತ್ರಿ ದೇವಿ. ಎ.ಹೆಚ್.
ಅಧ್ಯಕ್ಷರು
ಇತಿಹಾಸ. ಪಠ್ಯ. ಪುಸ್ತಕ. ರಚನಾ. ಸಮಿತಿ

ಕೃತಜ್ಞತೆಗಳು

ಪಠ್ಯಪುಸ್ತಕ. ತಯಾರಿಕೆಯಲ್ಲಿ. ಪ್ರತ್ಯಕ್ಷವಾಗಿ. ಹಾಗೂ. ಪರೋಕ್ಷವಾಗಿ. ಸಹಾಯ. ಮಾಡಿರುವ ಎಲ್ಲರಿಗೂ. ಇತಿಹಾಸ. ಪಠ್ಯರಚನಾ. ಸಮಿತಿ. ಅಭಾರಿಯಾಗಿದೆ.. ಸಮಿತಿಯ. ಸದಸ್ಯರು ಪಠ್ಯರಚನೆಯಲ್ಲಿ. ವಿವಿಧ. ಗ್ರಂಥಾಲಯಗಳಿಂದ,. ವಿವಿಧ. ಭಾರತೀಯ. ಹಾಗೂ. ವಿದೇಶೀ ಬರಹಗಾರರ. ಪುಸ್ತಕಗಳಿಂದ. ಮಾಹಿತಿಯನ್ನು. ಸಂಗ್ರಹಿಸಿದ್ದಾರೆ.. ಅಲ್ಲದೇ. ಅಂತರ್ಜಾಲದ ವಿವಿಧ. ವೆಬ್‌ಸೈಟ್‌ಗಳಿಂದ. ಮಾಹಿತಿಯನ್ನು. ಸಂಗ್ರಹಿಸಿದ್ದಾರೆ.. ಅನೇಕ. ವಿಷಯ. ತಜ್ಞರನ್ನು ಸಂಪರ್ಕಿಸಿ. ಅವರ. ಸೇವೆಯನ್ನು. ಉಪಯೋಗಿಸಿಕೊಳ್ಳಲಾಯಿತು.

ಬೆಂಗಳೂರಿನ. ಸಿ.ಇ.ಟಿ.. ಕಛೇರಿ,. ಮಲ್ಲೇಶ್ವರಂನ. ಬಾಲಕಿಯರ. ಸರ್ಕಾರಿ. ಪದವಿಪೂರ್ವ ಕಾಲೇಜು,. ಮಹಾರಾಣಿ. ಲಕ್ಷ್ಮಿ. ಅಮ್ಮಣ್ಣಿ. ಕಾಲೇಜುಗಳಲ್ಲಿ. ಸಮಿತಿಯ. ಸಭೆಗಳನ್ನು. ನಡೆಸಲು ಸ್ಥಳಾವಕಾಶವನ್ನು. ಮಾಡಿಕೊಡಲಾಗಿತ್ತು.. ಅದೇ. ರೀತಿ,. ಬಾಳೆಹೊನ್ನೂರಿನ. ರಂಭಾಪುರಿ ಮಠ. ಹಾಗೂ. ಇಡುಗುಂಜಿಯ. ಮಹಾಗಣಪತಿ. ದೇವಾಲಯದ. ಟ್ರಸ್ಟ್. ಪಠ್ಯ. ಪುಸ್ತಕ ಸಮಿತಿಯ. ಸಭೆಗಳಿಗೆ. ಅವಕಾಶ. ಮಾಡಿಕೊಟ್ಟಿತ್ತು.. ಸರ್ಕಾರಿ. ಪದವಿಪೂರ್ವ. ಕಾಲೇಜು, ಮಲ್ಲೇಶ್ವರಂನ. ಪ್ರಾಂಶುಪಾಲರು. ವಿಶೇಷವಾಗಿ. ನಮಗೆ. ಸಹಕರಿಸಿದ್ದಾರೆ.. ಪುಸ್ತಕದ ಮುಖಪುಟವನ್ನು. ಶ್ರೀ.ವೀರೇಶ್. ಅವರು. ಅಂದವಾಗಿ. ಮುದ್ರಿಸಿದ್ದಾರೆ.. ಸಮಿತಿಯು. ಈ ಎಲ್ಲರ. ಸಹಾಯವನ್ನೂ. ಸ್ಮರಿಸುತ್ತಾ,. ಹೃದಯಪೂರ್ವಕ. ಕೃತಜ್ಞತೆಯನ್ನು. ಸಲ್ಲಿಸುತ್ತದೆ.

ಪ್ರಥಮ. ಪಿಯುಸಿಗೆ. ಪಠ್ಯಪುಸ್ತಕವನ್ನು. ಹೊರತರುವಲ್ಲಿ. ಪ್ರಮುಖ. ಪಾತ್ರ. ವಹಿಸಿರುವ ಪದವಿಪೂರ್ವ. ಶಿಕ್ಷಣ. ಇಲಾಖೆಯ. ಎಲ್ಲಾ. ಅಧಿಕಾರಿಗಳಿಗೂ. ಸಮಿತಿಯು. ಅಭಾರಿಯಾಗಿದೆ.

ಸಮಿತಿಯ ಪರವಾಗಿ

ಇತಿಹಾಸ ಪಠ್ಯ ಪುಸ್ತಕ ರಚನಾ ಸಮಿತಿ

ಕ್ರ.ಸಂ	ಹೆಸರು ಮತ್ತು ವಿಳಾಸ	ಹುದ್ದೆ
1	**ಡಾ. ಶ್ರೀಮತಿ. ಗಾಯತ್ರಿ ದೇವಿ ಎ. ಎಚ್,** ಬಾಲಕಿಯರ. ಸರ್ಕಾರಿ. ಪದವಿ. ಪೂರ್ವ. ಕಾಲೇಜು,. 3ನೇ. ಅಡ್ಡರಸ್ತೆ,. ಮಲ್ಲೇಶ್ವರಂ,. ಬೆಂಗಳೂರು.	ಅಧ್ಯಕ್ಷರು
2	**ಶ್ರೀ ಹಾಲೇಶಪ್ಪ ಕೆ.ಜಿ.,** ಶ್ರೀ. ಮುರಳಿ. ಪದವಿ. ಪೂರ್ವ. ಕಾಲೇಜು,. ನೆಲಮಂಗಲ,. ಬೆಂಗಳೂರು. ಗ್ರಾಮಾಂತರ. ಜಿಲ್ಲೆ.	ಸಂಚಾಲಕರು
3	**ಶ್ರೀ ಶಾಮ ಪ್ರಸಾದ್ ಕೆ,** ಇಸ್ಲಾಮಿಯಾ. ಸಂ.ಪ.ಪೂರ್ವ. ಕಾಲೇಜು,. ಬೆಳಗಾವಿ.	ಸದಸ್ಯರು
4	**ಶ್ರೀ ಸದಾಶಿವ ಭಟ್. ಎಮ್,** ಶ್ರೀ. ರಾಮಕುಂಜೇಶ್ವರ. ಪ. ಪೂ. ಕಾಲೇಜು,. ರಾಮಕುಂಜ,. ಪುತ್ತೂರು. ತಾ.. ದ.ಕ.ಜಿಲ್ಲೆ.	ಸದಸ್ಯರು
5	**ಡಾ. ಶ್ರೀ ದುರುಗಪ್ಪ ಮಾಲಿ ಕನಕಪ್ಪನವರ್,** ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ಕನಕಗಿರಿ,. ಗಂಗಾವತಿ. ತಾ.. ಕೊಪ್ಪಳ. ಜಿಲ್ಲೆ.	ಸದಸ್ಯರು
6	**ಶ್ರೀ ಶುಭಕರ್ ಎಚ್ ವಿ,** ನ್ಯಾಷನಲ್. ಪ.ಪೂ.ಕಾಲೇಜು,. ಬಾಲರಾಜ್. ಅರಸ್. ರಸ್ತೆ,. ಶಿವಮೊಗ್ಗ.	ಸದಸ್ಯರು
7	**ಶ್ರೀ ದಯಾನಂದ ಜೆ ಎಸ್,** ಬಾಲಕಿಯರ. ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ಬಸವನಹಳ್ಳಿ,. ಚಿಕ್ಕಮಗಳೂರು.	ಸದಸ್ಯರು
8	**ಶ್ರೀ ತಮ್ಮೇಗೌಡ. ಎಚ್.ಪಿ.** ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ವಿ. ಸಿ. ಫಾರ್ಮ್,. ಮಂಡ್ಯ.	ಸದಸ್ಯರು
9	**ಶ್ರೀ ಓಂಪ್ರಕಾಶ್ ವಿ. ದಡ್ಡೆ,** ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ಔರಾದ್,. ಬೀದರ್. ಜಿಲ್ಲೆ.	ಸದಸ್ಯರು
10	**ಶ್ರೀ ಶಿವಕುಮಾರ ಎಮ್ ಮಠದ್,** ಸರ್ಕಾರಿ. ಪದವಿ. ಪೂರ್ವ. ಕಾಲೇಜು,ಕಮಲಾಪುರ,. ತಾ.. ಹೊಸಪೇಟೆ,. . ಬಳ್ಳಾರಿ. ಜಿಲ್ಲೆ.	ಸದಸ್ಯರು
11	**ಶ್ರೀ ಶಿರಗಾಂವ್‌ಕರ್ ಎನ್ ವಿ,** ಆರ್. ಡಿ. ಸಂ.ಪ.. ಪೂರ್ವ. ಕಾಲೇಜು,. ಚಿಕ್ಕೋಡಿ,. ಬೆಳಗಾವಿ. ಜಿಲ್ಲೆ.	ಸದಸ್ಯರು
12	**ಡಾ. ರಮೇಶ್ ಸಿ ಎಸ್,** ಇಂದಿರಾ. ಪ. ಪೂ. ಕಾಲೇಜು,. ಉಪ್ಪಾರಹಳ್ಳಿ,. ತುಮಕೂರು.	ಸದಸ್ಯರು
13	**ಶ್ರೀ ಶ್ರೀಕಾಂತ್ ವೈ ಶಾನವಾಡ್,** ಬೆನನ್. ಸ್ಮಿಥ್. ಪದವಿ. ಪೂರ್ವ. ಕಾಲೇಜು,. ಬೆಳಗಾವಿ.	ಸದಸ್ಯರು
14	**ಡಾ. ಶ್ರೀ ಗೋಪಾಲ್ ಜಿ ವಿ,** ಬಾಲಕಿಯರ. ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ಕುಣಿಗಲ್,. . ತುಮಕೂರು. ಜಿಲ್ಲೆ.	ಸದಸ್ಯರು
15	**ಶ್ರೀ ಗುರುರಾಜ್ ಜೆ ಆರ್,** ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ಶ್ರೀರಾಮಪುರ,. ಬೆಂಗಳೂರು.	ಸದಸ್ಯರು
16	**ಶ್ರೀ ನಿಂಗರಾಜು ಎನ್ ಆರ್,** ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ಯಲಹಂಕ,. ಬೆಂಗಳೂರು	ಸದಸ್ಯರು
17	**ಶ್ರೀ ರಾಜೇಶ್ ಎಚ್ ಜಿ,** ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ಸೀಗೆಹಳ್ಳಿ,. ತುರುವೇಕೆರೆ,. ತಾ.. ತುಮಕೂರು.	ಸದಸ್ಯರು

ಇತಿಹಾಸ ಪಠ್ಯ ಕ್ರಮ ಪರಿಶೀಲನಾ ಸಮಿತಿ

ಕ್ರ.ಸಂ	ವಿಳಾಸ	ಹುದ್ದೆ
1	**ಶ್ರೀಮತಿ. ಸಿ.ಎಸ್. ಗೀತಾದೇವಿ,** ಪ್ರಾಂಶುಪಾಲರು,. ಸರ್ಕಾರಿ. ಪದವಿ. ಪೂರ್ವ. ಕಾಲೇಜು, ತ್ರಿಪುರಾಂತೇಶ್ವರ. ಮಠ,. ಹೊಸಕೆರೆ,. ಕುಣಿಗಲ್,. ತುಮಕೂರು. ಜಿಲ್ಲೆ	ಸದಸ್ಯರು
2	**ಶ್ರೀಮತಿ.** ರತ್ನಮ್ಮ. ಎಂ. ಪ್ರಾಂಶುಪಾಲರು,. ಸರ್ಕಾರಿ. ಪದವಿ. ಪೂರ್ವ. ಕಾಲೇಜು,. ನೆಲಮಂಗಲ,. ಬೆಂಗಳೂರು ಗ್ರಾಮಾಂತರ. ಜಿಲ್ಲೆ.	ಸದಸ್ಯರು
3	ಶ್ರೀ **ಯು.ಎಸ್. ಪಾಟೀಲ್,** ಪ್ರಾಂಶುಪಾಲರು,. ಬಂಗೂರ್‌ನಗರ್. ಪ.ಪೂ. ಕಾಲೇಜು,. ದಾಂಡೇಲಿ,. ಉ.ಕ.	ಸದಸ್ಯರು

ಇತಿಹಾಸ ಪಠ್ಯ ಪುಸ್ತಕ ಪರಿಶೀಲನಾ ಸಮಿತಿ

ಕ್ರ.ಸಂ	ವಿಳಾಸ	ಹುದ್ದೆ
1	**ಶ್ರೀ. ಎಸ್ ಎಮ್ ಕಮದಾಳ್,** ಪ್ರಾಂಶುಪಾಲರು. ಎಸ್.ಎಸ್.ಆರ್.. ಪದವಿ. ಪೂರ್ವ. ಕಾಲೇಜು, ಮೂಡಲಗಿ,. ಗೋಕಾಕ್,. ಬೆಳಗಾವಿ.	ಸದಸ್ಯರು
2	**ಶ್ರೀ ಎಸ್ ಜಿ ಭಟ್,.** ಪ್ರಾಂಶುಪಾಲರು,. ಶ್ರೀ. ಸುಬ್ರಮಣ್ಯ ಸಂ.. ಪದವಿ. ಪೂರ್ವ. ಕಾಲೇಜು,. ಕಾವಲಕ್ಕಿ,. ಹೊನ್ನಾವರ,. ಉ.ಕ.	ಸದಸ್ಯರು
3	. ಶ್ರೀ **ಆಲ್‌ಬೆನ್ ಫ್ರಾನ್ಸಿಸ್ ಪಿಕಾರ್ಡೊ,** ಎಸ್.ಎಂ.ಎಸ್. .ಪ.ಪೂರ್ವ. ಕಾಲೇಜು,. ಬ್ರಹ್ಮಾವರ,. ಉಡುಪಿ	ಸದಸ್ಯರು

ಪಠ್ಯಕ್ರಮ – ಜಾಗತಿಕ ಇತಿಹಾಸ

ಒಟ್ಟು ಬೋಧನಾ ಅವಧಿಗಳು : 120 ಗಂಟೆಗಳು

ಅಧ್ಯಾಯಗಳು	ಪಠ್ಯವಸ್ತು	ಬೋಧನಾ ಅವಧಿ	ಪುಟ ಸಂಖ್ಯೆ
01.	**ಪೀಠಿಕೆ:** 1.1 ಇತಿಹಾಸದ. ಅರ್ಥ. ಮತ್ತು. ವ್ಯಾಖ್ಯೆ. –. ಹೆರೋಡೊಟಸ್, ಅಗಸ್ಟಿನ್,. ಕಾರ್ಲ್‌ಮಾರ್ಕ್ಸ್,. ಜೆ.ಬಿ.ಬ್ಯೂರಿ,. ನೆಹರೂ. ಮತ್ತು ಟಾಯ್ನ್‌ಬಿ. 1.2 ಇತಿಹಾಸ. ಅಧ್ಯಯನದ. ಪ್ರಾಮುಖ್ಯತೆ.	**05** 2 3	**1-7**
02.	**ಮಾನವ ವಿಕಸನದ ಕಥೆ:**	**08**	**8-21**
03.	**ಪ್ರಾಚೀನ ನಾಗರಿಕತೆಗಳ ಇತಿಹಾಸ:** 3.1. ಪೀಠಿಕೆ 3.2. ಈಜಿಪ್ತ್. ನಾಗರಿಕತೆ . 3.3. ಮೆಸೊಪೊಟೇಮಿಯಾ. ನಾಗರಿಕತೆ. 3.4. ಚೀನಾದ. ನಾಗರಿಕತೆ.	**12** 3 3 3 3	**22-51**
04.	**ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳ ಸ್ಥಾಪನೆ–ಕೊಡುಗೆಗಳು:** 4.1. ಗ್ರೀಕಿನ. ನಗರ. ರಾಜ್ಯಗಳು–ಸಾಂಸ್ಕೃತಿಕ. ಕೊಡುಗೆಗಳು. 4.2. ರೋಮಿನ. ಗಣರಾಜ್ಯಗಳು–ರೋಮನ್ನರ. ಕೊಡುಗೆಗಳು.	**12** 6 6	**52-77**
05.	**ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಉದಯ ಮತ್ತು ಪ್ರಸಾರ:** 5.1. ಯೇಸುಕ್ರಿಸ್ತನ. ಜೀವನ. ಮತ್ತು. ಬೋಧನೆಗಳು– 5.2. ಪ್ರವಾದಿ. ಮಹಮದ್‌ರ. ಜೀವನ. ಮತ್ತು. ಬೋಧನೆಗಳು	**06** 3 3	**78-91**
06.	**ಮಧ್ಯಕಾಲೀನ ಯುಗ–ಬದಲಾವಣೆಯತ್ತ –** ಚರ್ಚ್,. ಸಮಾಜ. ಮತ್ತು. ರಾಜ್ಯ–ಊಳಿಗಮಾನ್ಯ. ಪದ್ಧತಿ.	**05**	**92-103**
07.	**ಆಧುನಿಕ ಯುಗದ ಆರಂಭ:** 7.1. ಭೌಗೋಳಿಕ. ಅನ್ವೇಷಣೆಗಳು. 7.2. ಪುನರುಜ್ಜೀವನ. 7.3. ಮತಸುಧಾರಣೆ–. ಮಾರ್ಟಿನ್‌ಲೂಥರ್–ಪ್ರತಿಸುಧಾರಣೆ.	**12** 4 4 4	**104-130**

08.	**ಪ್ರಪಂಚದ ಕ್ರಾಂತಿಗಳು:**	**14**	**131-161**
	8.1. ಕೈಗಾರಿಕಾ. ಕ್ರಾಂತಿ.	3	
	8.2. ಅಮೇರಿಕಾದ. ಸ್ವಾತಂತ್ರ್ಯ. ಸಂಗ್ರಾಮ.	3	
	8.3. ಫ್ರಾನ್ಸ್. ಕ್ರಾಂತಿ. (1789–1795).	4	
	8.4. ರಷ್ಯಾದ. ಕ್ರಾಂತಿ.	3	
09.	**ನೆಪೋಲಿಯನ್ ಮತ್ತು ರಾಷ್ಟ್ರೀಯತೆಯ ಉದಯ:**	**10**	**162-182**
	9.1. ನೆಪೋಲಿಯನ್. ಬೊನಪಾರ್ಟೆ.	4	
	9.2. ಇಟಲಿ. ಏಕೀಕರಣ.	3	
	9.3. ಜರ್ಮನಿ. ಏಕೀಕರಣ	3	
10.	**ಪ್ರಪಂಚ ಯುದ್ಧಗಳು ಮತ್ತು ಅಂತಾರಾಷ್ಟ್ರೀಯ ಸಂಘಗಳು.:**	**14**	**183-211**
	10.1. ಪ್ರಥಮ. ಜಾಗತಿಕ. ಯುದ್ಧ–ವರ್ಸೇಲ್ಸ್. ಒಪ್ಪಂದ.	4	
	10.2. ಸರ್ವಾಧಿಕಾರತ್ವಗಳ. ಏಳಿಗೆ	2	
	10.3. 2ನೇ. ಜಾಗತಿಕ. ಯುದ್ಧ.	3	
	10.4. ವಿಶ್ವಸಂಸ್ಥೆ–ಅಂಗಗಳು–ಸಾಧನೆಗಳು.	5	
11.	**ಸಮಕಾಲೀನ ಪ್ರಪಂಚ:**	**08**	**212-233**
	11.1. ಶೀತಲ. ಸಮರ.	5	
	11.2. ಯು.ಎಸ್.ಎಸ್.ಆರ್. ವಿಘಟನೆ.	2	
	11.3. ಸಿ.ಐ.ಎಸ್.. ರಚನೆ.	1	
12.	**ಅಲಿಪ್ತ ಚಳುವಳಿ–ತೃತೀಯ ಜಗತ್ತಿನ ಉದಯ:**	**08**	**234-246**
13.	**ಭೂಪಟ–ಪ್ರಪಂಚದ ಪ್ರಮುಖ ಐತಿಹಾಸಿಕ ಸ್ಥಳಗಳು:**	**06**	**247-252**
	ನೀಲಿ ನಕ್ಷೆ		**253**
	ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಮೌಲ್ಯಮಾಪನಾ ಯೋಜನೆ		**254-264**

ಅಧ್ಯಾಯ 1

ಪೀಠಿಕೆ

1.1. ಇತಿಹಾಸದ ಅರ್ಥ

ಇತಿಹಾಸವು ಮಾನವನ ಜ್ಞಾನದ ಶ್ರೇಷ್ಠ ಶಾಖೆಗಳಲ್ಲಿ ಒಂದಾಗಿದೆ. ಹಿಸ್ಟರಿ ಎಂಬ ಪದವು ಗ್ರೀಕ್ ಪದವಾದ **'ಹಿಸ್ಟೋರಿಯಾ'** ಎಂಬ ಮೂಲದಿಂದ ಬಂದಿದ್ದು, **'ವಿಚಾರಣೆ'** ಅಥವಾ **'ತನಿಖೆ'** ಎಂಬ ಅರ್ಥವನ್ನು ಹೊಂದಿದೆ. ಸಂಸ್ಕೃತದಲ್ಲಿ ಇತಿಹಾಸವೆಂದರೆ ಖಚಿತವಾಗಿ ಘಟಿಸಿದ ಘಟನೆಗಳು ಎಂದರ್ಥ. ಸತ್ಯಾನ್ವೇಷಣೆಯೇ ಇತಿಹಾಸದ ಉದ್ದೇಶ. ವಿಶಾಲವಾದ ಅರ್ಥದಲ್ಲಿ ಇತಿಹಾಸವು ಮಾನವನ ಜೀವನದ ಎಲ್ಲಾ ಆಯಾಮಗಳನ್ನು ಕುರಿತು ಅಧ್ಯಯನ ಮಾಡುತ್ತದೆ.

ಇತಿಹಾಸವನ್ನು ವೈಜ್ಞಾನಿಕವಾಗಿ ಬರೆಯುವ ಕಲೆಯನ್ನು ಮೊದಲಿಗೆ ಗ್ರೀಕರು ವಿಕಸನಗೊಳಿಸಿದರು. ಇತಿಹಾಸವನ್ನು ಬರೆಯಲು ಆರಂಭಿಸಿದವರಲ್ಲಿ ಗ್ರೀಕ್ ಇತಿಹಾಸಕಾರ ಹೆರೊಡೋಟಸ್ ಮೊದಲಿಗನಾಗಿದ್ದು, ಆತನನ್ನು **'ಇತಿಹಾಸದ ಪಿತಾಮಹ'** ನೆಂದು ಕರೆಯಲಾಗಿದೆ.

ವ್ಯಾಖ್ಯೆಗಳು:

ಸಾಮಾನ್ಯವಾಗಿ ಇತಿಹಾಸವೆಂದರೆ ಗತಕಾಲದ ಘಟನೆಗಳ ದಾಖಲೆ ಎಂದು ತಿಳಿಯಲಾಗಿದೆ.. ಸಾರ್ವತ್ರಿಕವಾಗಿ ಒಪ್ಪಿತವಾದ ಇತಿಹಾಸದ ವ್ಯಾಖ್ಯೆ ಇಲ್ಲ. ಇದನ್ನು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಹೆರೊಡೋಟಸ್‌ನಿಂದ ಅಮೇರಿಕಾದ ಇತಿಹಾಸಕಾರ ವಿಲ್ ಡುರಂಟ್‌ರವರೆಗೆ ಹಲವಾರು ಇತಿಹಾಸಕಾರರು ಇತಿಹಾಸವನ್ನು ವಿವಿಧ ದೃಷ್ಟಿ ಕೋನಗಳಲ್ಲಿ ವ್ಯಾಖ್ಯಾನಿಸಿದ್ದಾರೆ.

1. ಹೆರೊಡೋಟಸ್ (ಸಾ.ಶ.ಪೂ 484–424)



ಹೆರೊಡೋಟಸ್ ಸಾ.ಶ.ಪೂ 5ನೇ ಶತಮಾನದಲ್ಲಿ ಜೀವಿಸಿದ್ದ ಗ್ರೀಕ್ ಇತಿಹಾಸಕಾರ. ಇವನು ಇತಿಹಾಸ ಮತ್ತು ಮಾನವಶಾಸ್ತ್ರಕ್ಕೆ ಗಣನೀಯವಾದ ಕೊಡುಗೆ ಸಲ್ಲಿಸಿದ್ದಾನೆ. ಗ್ರೀಸ್ ಮತ್ತು ಪಶ್ಚಿಮ ಏಷ್ಯಾದಲ್ಲಿ ವ್ಯಾಪಕ ಸಂಚಾರ ಮಾಡಿದ ಹೆರೊಡೋಟಸ್ ಗ್ರೀಕ್ ನಗರ–ರಾಜ್ಯಗಳ ಬಗೆಗೆ ಅನೇಕ ಸಂಗತಿಗಳನ್ನು ಸಂಗ್ರಹಿಸಿ ಅವುಗಳನ್ನು ಒಂಬತ್ತು ಸಂಪುಟಗಳಲ್ಲಿ ಬರೆದಿದ್ದಾನೆ. ಅವುಗಳಲ್ಲಿ **'ದಿ ಹಿಸ್ಟ್ರಿ ಆಫ್ ಪರ್ಷಿಯನ್ ವಾರ್ಸ್'(ಪರ್ಷಿಯನ್ ಕದನಗಳ ಇತಿಹಾಸ)** ಪ್ರಮುಖವಾದುದಾಗಿದ್ದು ಅದು ಗ್ರೀಕರು ಮತ್ತು ಪರ್ಷಿಯನ್ನರ ನಡುವೆ ನಡೆದ ಕದನಗಳನ್ನು ಕುರಿತದ್ದಾಗಿದೆ. ಇದು ಇತಿಹಾಸದ ಆರಂಭಿಕ ಕೃತಿಯಾಗಿದೆ. ಈತನೇ ಇತಿಹಾಸದ ಅರ್ಥ ಮತ್ತು ವ್ಯಾಪ್ತಿಯನ್ನು ಮೊದಲು ತಿಳಿಸಿದವನು.

ಹೆರೊಡೋಟಸ್‌ನ ಪ್ರಕಾರ:– "ಮುಂದಿನ ಪೀಳಿಗೆಯು ನೆನಪಿಡಬೇಕಾದ ಮಹಾನ್ ವೀರರ ಅಥವಾ ಮಹತ್ವಪೂರ್ಣವಾದ ಘಟನೆಗಳ ದಾಖಲೆಯೇ ಇತಿಹಾಸ". ಈ ವ್ಯಾಖ್ಯೆಯಲ್ಲಿ ಹೆರೊಡೋಟಸ್‌ನು ಭವಿಷ್ಯದ ತಲೆಮಾರುಗಳು ಮಹಾನ್ ವ್ಯಕ್ತಿಗಳ ಸಾಧನೆ ಹಾಗೂ ಮಹತ್ವಪೂರ್ಣ ಘಟನೆಗಳಿಂದ ಕಲಿಯಬಹುದಾದ ಪಾಠಗಳ ಮೇಲೆ ತನ್ನ ವಿಚಾರಗಳನ್ನು ಕೇಂದ್ರೀಕರಿಸಿದ್ದಾನೆ.

2. ಸಂತ ಆಗಸ್ಟೈನ್: (ಸಾ.ಶ. 354–430)

ಆಗಸ್ಟೈನ್ ಒಬ್ಬ ಶ್ರೇಷ್ಠ ಕ್ರಿಶ್ಚಿಯನ್ ಸಂತ ಹಾಗೂ ಚಿಂತಕ. ಈತ ಮಧ್ಯಕಾಲೀನ ಯುಗದ ಚರ್ಚಿನ ಶ್ರೇಷ್ಠ ಇತಿಹಾಸಕಾರ. ಈತನ **'ದ ಸಿಟಿ ಆಫ್ ಗಾಡ್'** (The City of God) ಕೃತಿಯು ಪ್ರಪಂಚದ ಪ್ರಸಿದ್ಧ ಕೃತಿಗಳಲ್ಲಿ ಒಂದಾಗಿದೆ. ಆಗಸ್ಟೈನನ ಪ್ರಕಾರ:– **"ಇತಿಹಾಸವು ದೇವರು ಮತ್ತು ಸೈತಾನನ ನಡುವಿನ ಸಂಘರ್ಷದ ಕಥೆಯಾಗಿದ್ದು, ಅಂತಿಮವಾಗಿ ದೇವರು (ಶಿಷ್ಟ) ಸೈತಾನನ (ದುಷ್ಟ) ಮೇಲೆ ಸಾಧಿಸುವ ವಿಜಯದಲ್ಲಿ ಪರ್ಯಾವಸನಗೊಳ್ಳುತ್ತದೆ".**

ಸಂತ ಆಗಸ್ಟೈನ್ ಒಬ್ಬ ಚರ್ಚಿನ ಇತಿಹಾಸಕಾರನಾಗಿದ್ದು ತನ್ನ ಬರವಣಿಗೆಯಲ್ಲಿ ಪವಾಡಗಳು ಮತ್ತು ಸಂತರಿಗೆ ಹೆಚ್ಚು ಪ್ರಾಧಾನ್ಯತೆ ನೀಡಿದ್ದಾನೆ. ಇವನು ಮಾನವನ ಇತಿಹಾಸವು ದೇವರಿಂದ ಮಾರ್ಗದರ್ಶಿಸಲ್ಪಡುತ್ತದೆ ಎಂದು ಬಲವಾಗಿ ನಂಬಿದ್ದನು. ಮಧ್ಯಕಾಲೀನ ಯೂರೋಪಿನ ಇತಿಹಾಸವು ಅನೇಕ ಶತಮಾನಗಳವರೆಗೆ ಪಾದ್ರಿಗಳ ಏಕಸ್ವಾಮ್ಯದಲ್ಲಿತ್ತು. ಇವರು ಜಾತ್ಯಾತೀತ ಮತ್ತು ಧಾರ್ಮಿಕ ಇತಿಹಾಸಗಳೆರಡನ್ನು ಒಂದು ಸಾಧನವಾಗಿ ಚರ್ಚಿನ ನಂಬಿಕೆಯನ್ನು ಜನಪ್ರಿಯಗೊಳಿಸಲು ಬಳಸಿದರು.

3. ಕಾರ್ಲ್‌ಮಾರ್ಕ್ಸ್: (1818–1883)



ಕಾರ್ಲ್‌ಮಾರ್ಕ್ಸ್ ಒಬ್ಬ ಜರ್ಮನ್ ತತ್ವಜ್ಞಾನಿ, ಅರ್ಥಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ, ಇತಿಹಾಸಕಾರ, ಪತ್ರಕರ್ತ ಮತ್ತು ಕ್ರಾಂತಿಕಾರಿ ಸಮಾಜವಾದಿ. ಸಮಾಜ ವಿಜ್ಞಾನಗಳು ಮತ್ತು ಸಮಾಜವಾದಿ ಚಳುವಳಿಗಳ ಬೆಳವಣಿಗೆಯಲ್ಲಿ ಈತನ ಚಿಂತನೆಗಳು ಪ್ರಮುಖ ಪಾತ್ರವಹಿಸಿವೆ. ಈತನನ್ನು ಇತಿಹಾಸದಲ್ಲಿ ಪ್ರಖ್ಯಾತ ಅರ್ಥಶಾಸ್ತ್ರಜ್ಞನೆಂದು ಪರಿಗಣಿಸಲಾಗಿದೆ. ಈತನು ಇತಿಹಾಸವನ್ನು ಹೊಸ ಆರ್ಥಿಕ ದೃಷ್ಟಿಕೋನದಿಂದ ಅರ್ಥೈಸಿ ವ್ಯಾಖ್ಯಾನಿಸಿದನು. **ಕಾರ್ಲ್‌ಮಾರ್ಕ್ಸ್‌ನ ಪ್ರಕಾರ "ಇತಿಹಾಸವೆಂದರೆ ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷ".** ಈ ವ್ಯಾಖ್ಯೆಯಲ್ಲಿ ಮಾರ್ಕ್ಸ್‌ನು ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷಕ್ಕೆ ಒತ್ತು ನೀಡಿದ್ದಾನೆ. ಅದುವೇ ಬಡವರು ಮತ್ತು ಶ್ರೀಮಂತರ ನಡುವಿನ ಹೋರಾಟ. ಶೋಷಕರು ಮತ್ತು ಶೋಷಿಸಲ್ಪಡುವವರ ನಡುವೆ ನಿರಂತರ ಸಂಘರ್ಷ ನಡೆಯುತ್ತದೆ ಎಂದು ಮಾರ್ಕ್ಸ್‌ನು ವಾದಿಸಿದ್ದಾನೆ. ಈತನು **'ದಾಸ್ ಕ್ಯಾಪಿಟಲ್'** ಮತ್ತು **'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ'** ಎಂಬ ಎರಡು ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾನೆ.

4. ಜೆ.ಬಿ. ಬ್ಯೂರಿ (1861–1927)

ಒಬ್ಬ ಐರಿಷ್ ಇತಿಹಾಸಕಾರ ಮತ್ತು ವಿದ್ವಾಂಸ. ಇವನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಆಧುನಿಕ ಇತಿಹಾಸದ ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸಿದನು.

ಜೆ.ಬಿ. ಬ್ಯೂರಿ ಪ್ರಕಾರ 'ಇತಿಹಾಸವು ಒಂದು ವಿಜ್ಞಾನ; ಹೆಚ್ಚು ಅಲ್ಲ. ಕಡಿಮೆಯೂ ಅಲ್ಲ'. ಬ್ಯೂರಿಯು ಪ್ರತಿಯೊಬ್ಬ ಇತಿಹಾಸಕಾರನು ಒಬ್ಬ ವಿಜ್ಞಾನಿಯ ಹಾಗೆ ಕಾರ್ಯನಿರ್ವಹಿಸಬೇಕೆಂದು, ನಿರ್ದಿಷ್ಟ ದಾಖಲೆಗಳು



ಮತ್ತು ಅಂಕಿ–ಅಂಶಗಳನ್ನು ಸಂಗ್ರಹಿಸಬೇಕೆಂದು ಹೇಳಿದ್ದಾನೆ. ಈತನು ವಿಷಯವನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿ ಯಾವುದೇ ಪೂರ್ವಾಗ್ರಹವಿಲ್ಲದೆ ಸತ್ಯವನ್ನು ಹೊರತರಬೇಕೆಂದು ಹೇಳಿದ್ದಾನೆ. ಆದರೆ, ಅವಲೋಕನ ಮತ್ತು ಪ್ರಯೋಗ ಇತಿಹಾಸದಲ್ಲಿ ಸಾಧ್ಯವಿಲ್ಲ. ಅಂತೆಯೇ ಇತಿಹಾಸದ ಘಟನೆಗಳನ್ನು ಪುನರ್ ನಿರ್ಮಾಣಮಾಡಲು ಸಾಧ್ಯವಿಲ್ಲ. ಅದ್ದರಿಂದ ಇತಿಹಾಸ ಪರಿಶುದ್ಧ ವಿಜ್ಞಾನವಲ್ಲ. **ಜೆ.ಬಿ.ಬ್ಯೂರಿಯವರೇ ಹೇಳುವಂತೆ– "ಇತಿಹಾಸವು ಒಂದು ಪ್ರಾಚೀನ ಕಲೆ ಮತ್ತು ವಿಜ್ಞಾನವಾಗಲು ಹೊರಟಿರುವ ಇತ್ತೀಚಿನ ಆಕಾಂಕ್ಷಿ"**. ಇತಿಹಾಸಕಾರ ವಿಷಯವನ್ನು ಪ್ರಸ್ತುತಪಡಿಸುವಲ್ಲಿ ತನ್ನ ಪ್ರತಿಭೆಯನ್ನು ಕ್ರಿಯಾತ್ಮಕವಾದ ರೀತಿಯಲ್ಲಿ ಬಳಸಿಕೊಳ್ಳಬೇಕು.

5. ಆರ್ನಾಲ್ಡ್ ಟಾಯ್ನ್‌ಬಿ: (1889–1975)



ಆರ್ನಾಲ್ಡ್ ಟಾಯ್ನ್‌ಬಿ ಒಬ್ಬ ಬ್ರಿಟೀಷ್ ಇತಿಹಾಸಕಾರ. ಇವನು ಇತಿಹಾಸದ ಪ್ರಾಧ್ಯಾಪಕನಾಗಿ ಲಂಡನ್ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಿದನು. ಧರ್ಮ ಮತ್ತು ಇತಿಹಾಸದ ಕುರಿತಾದ ಅನೇಕ ಕೃತಿಗಳನ್ನು ಇವನು ಬರೆದಿದ್ದಾನೆ. ಇವನ ಪ್ರಸಿದ್ಧ ಕೃತಿ **'ಎ ಸ್ಟಡಿ ಆಫ್ ಹಿಸ್ಟರಿ'** ಹನ್ನೆರಡು ಸಂಪುಟಗಳಲ್ಲಿದೆ. ಇವನು ಜಗತ್ತಿನ 26 ನಾಗರಿಕತೆಗಳನ್ನು ಅಧ್ಯಯನ ಮಾಡಿದ್ದಾನೆ. ಇವನ ಪ್ರಕಾರ – **"ಇತಿಹಾಸವು ನಾಗರಿಕತೆಗಳ ಏಳು ಬೀಳಿನ ಕಥೆ"**. ಟಾಯ್ನ್‌ಬಿ ವಿವರಿಸಿದಂತೆ– ಇತಿಹಾಸವು ಮಾನವನ ಅಧ್ಯಯನವಾಗಿದೆ. ಆದರೆ ಇದು ವ್ಯಕ್ತಿಗಳ, ಅಧಿಕಾರ, ವೈಭವ ಮತ್ತು ಯುದ್ಧಗಳ ಕಥೆಯಲ್ಲ. ಇತಿಹಾಸದಲ್ಲಿ 'ಮಾನವನಿಗೆ' ಮಹತ್ವಕೊಡಬೇಕು. ಇತಿಹಾಸವು ಜ್ಞಾನದ ಭಂಡಾರ ಹಾಗೂ ಸಂಸ್ಕೃತಿ ಮತ್ತು ನಾಗರಿಕತೆಗಳ ಬೆಳವಣಿಗೆಯಲ್ಲಿ ಅವನ ಪಾತ್ರವು ಮಹತ್ವದ್ದಾಗಿದೆ ಎಂದು ಟಾಯ್ನ್‌ಬಿ ವಿವರಿಸಿದ್ದಾನೆ.

6. ಜವಾಹಾರಲಾಲ್ ನೆಹರು: (1889–1964)



ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿದ್ದ ನೆಹರು ಇತಿಹಾಸದ ಬಗೆಗೆ ಅತೀವ ಆಸಕ್ತಿಯನ್ನು ಹೊಂದಿದ್ದರು. **'ಡಿಸ್ಕವರಿ ಆಫ್ ಇಂಡಿಯಾ'** ಮತ್ತು **'ದಿ ಗ್ಲಿಂಪ್ಸ್‌ಸ್ ಆಫ್ ವರ್ಲ್ಡ್ ಹಿಸ್ಟರಿ'** ಅವರ ಪ್ರಸಿದ್ಧ ಕೃತಿಗಳು. ಅವರು ರಾಜಕೀಯ ಬಂಧಿಯಾಗಿದ್ದಾಗ ಈ ಎರಡೂ ಕೃತಿಗಳನ್ನು ಬರೆದಿದ್ದಾರೆ. **'ದಿ ಗ್ಲಿಂಪ್ಸ್‌ಸ್ ಆಫ್ ವರ್ಲ್ಡ್ ಹಿಸ್ಟರಿ'**ಯು ನೆಹರುರವರು ತಮ್ಮ ಮಗಳು ಇಂದಿರಾಗಾಂಧಿಯವರಿಗೆ ಬರೆದ ಪತ್ರಗಳ ಸಂಗ್ರಹವಾಗಿದೆ. ನೆಹರು ಪ್ರಕಾರ–**"ಅನಾಗರಿಕತೆಯಿಂದ ನಾಗರಿಕತೆಯಡೆಗೆ ಸಾಗಿದ ಮಾನವನ ಕಥೆಯೇ ಇತಿಹಾಸ"**. ಯುಗ ಯುಗಗಳಲ್ಲಿ ಮಾನವನು ಪ್ರತಿ ಹಂತದಲ್ಲೂ ಪ್ರಗತಿ ಹೊಂದಲು ಸಂಘರ್ಷ ಮಾಡಿದ್ದಾನೆ ಎಂದು ನೆಹರು ಅಭಿಪ್ರಾಯ ಪಟ್ಟಿದ್ದಾರೆ. ಮಾನವನು ನಾಗರಿಕತೆಯ ಉನ್ನತ ಮಟ್ಟವನ್ನು ತಲುಪಲು ಸಂಘರ್ಷ ಹಾಗೂ ಸಾಮರಸ್ಯಗಳೆರಡು ಸಹಾಯ ಮಾಡಿವೆ ಎಂದಿದ್ದಾರೆ. ಈ ಅಂಶವನ್ನು 4000 ವರ್ಷಗಳಿಗೂ ಹೆಚ್ಚಿನ ಮಾನವನ ಇತಿಹಾಸದ ಹಿನ್ನಲೆಯಲ್ಲಿ ಖಚಿತ ಪಡಿಸಿಕೊಳ್ಳಲಾಗಿದೆ.

ಈ ಮೇಲಿನ ವ್ಯಾಖ್ಯೆಗಳಿಂದ ಇತಿಹಾಸವು ಪ್ರಮುಖವಾಗಿ ಮಾನವನ ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿದೆ ಎಂದು ಸ್ಪಷ್ಟವಾಗುತ್ತದೆ. ಇದು ಪ್ರಾಚೀನ ಘಟನೆಗಳ ವಿವರವಾಗಿದೆ ಮತ್ತು ಮಾನವನನ್ನು ಸರಿಯಾದ ಮಾರ್ಗದಲ್ಲಿ ಮುನ್ನೆಡೆಸಿದೆ. ಅಂತಿಮವಾಗಿ ಹೇಳವುದಾದರೆ–**ಇತಿಹಾಸವು ಮಾನವನ ಎಲ್ಲಾ ಮಹತ್ವಪೂರ್ಣ ಚಟುವಟಿಕೆಗಳ, ವಿವಿಧ ಆಯಾಮಗಳ ಅಧ್ಯಯನವಾಗಿದ್ದು 'ಕಾಲ' ಮತ್ತು 'ಸ್ಥಳ'ಗಳಿಂದ ಪ್ರತಿಬಂಧಿತವಾಗಿದೆ.**

1.2 ಇತಿಹಾಸ ಅಧ್ಯಯನದ ಮಹತ್ವ

ಅನಾದಿಕಾಲದಿಂದ ಇಂದಿನವರೆಗಿನ ಮಾನವ ಜನಾಂಗದ ಸಂಸ್ಕೃತಿಯ ಬೆಳವಣಿಗೆಯ ವಿವರಣೆಗಳನ್ನು ಇತಿಹಾಸದ ಅಧ್ಯಯನವು ನೀಡುತ್ತದೆ. ಇತಿಹಾಸವು ವಿವಿಧ ಜನರ ಅನುಭವಗಳ ಸಾಗರವನ್ನು ಪ್ರಸ್ತುತಪಡಿಸುತ್ತದೆ. ಹೀಗಾಗಿ ಇತಿಹಾಸದ ಅಧ್ಯಯನವು ಮಾನವನನಿಗೆ ವಿವಿಧ ರೀತಿಯಲ್ಲಿ ಉಪಯೋಗಕಾರಿಯಾಗಿದೆ.

1. ಇತಿಹಾಸವು ಗತಕಾಲದ ಘಟನೆಗಳ ಸ್ಮರಣೆಯಾಗಿದೆ:

ಇತಿಹಾಸದ ಅಧ್ಯಯನವು ನಮಗೆ ವಿಶ್ವದ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಮತ್ತು ಪ್ರಮುಖ ಘಟನಾವಳಿಗಳನ್ನು ಕುರಿತು ತಿಳಿಸುತ್ತದೆ. ಇದು ಮಾನವರ ಹೋರಾಟ, ಆತ ಪರಿಸರಕ್ಕೆ ಹೊಂದಿಕೊಂಡ ರೀತಿ ಹಾಗೂ ಅವನ ಏಳಿಗೆ ಮತ್ತು ವೈಫಲ್ಯಗಳ ಬಗೆಗೆ ಒಳನೋಟವನ್ನೊದಗಿಸುತ್ತದೆ. **"ಒಂದು ದೇಶದ ಗತಕಾಲವು ಒಬ್ಬ ವ್ಯಕ್ತಿಯ ಸ್ಮೃತಿಯಿದ್ದಂತೆ ಸ್ಮೃತಿ ಹೋದರೆ ಅದರೊಂದಿಗೆ ಚಿತ್ತಸ್ವಾಸ್ಥ್ಯವೂ ಹೋಗುತ್ತದೆ"** ಎಂದು ವಿಲ್‌ಡುರೆಂಟ್ ಅಭಿಪ್ರಾಯ ಪಟ್ಟಿದ್ದಾನೆ. ಅದ್ದರಿಂದ ಮಾನವನ ಬುದ್ಧಿಶಕ್ತಿ ಮತ್ತು ಜ್ಞಾನದ ಬೆಳವಣಿಗೆಗೆ ಅವನು ತನ್ನ ಪರಿಸರ ಹಾಗೂ ಇಡೀ ಜಗತ್ತನ್ನು ಅರ್ಥ ಮಾಡಿಕೊಳ್ಳವುದು ಅವಶ್ಯವಾಗಿದೆ. **"ವ್ಯಕ್ತಿಗೆ ನೆನಪು ಇದ್ದಂತೆ ಮನುಕುಲಕ್ಕೆ ಇತಿಹಾಸ"**. ಎಂದು **ಹೇಸ್** ಮತ್ತು **ಮೂನ್** ಬರೆಯುತ್ತಾರೆ.

2. ಇತಿಹಾಸವು ಧಾರ್ಮಿಕ ಸಹಿಷ್ಣುತೆಯನ್ನು ಬೋಧಿಸುತ್ತದೆ:

ಸಮಾಜದಲ್ಲಿಯ ಶಾಂತಿ ಮತ್ತು ಸೌಹಾರ್ದತೆಗೆ ವಿವಿಧ ಪಂಥಗಳ ನಡುವೆ ಧಾರ್ಮಿಕ ಸಹಿಷ್ಣುತೆ ಅವಶ್ಯಕವಾಗಿದೆ. ಶಾಂತಿ ಸಮಾಜದಲ್ಲಿಯ ಸಮೃದ್ಧಿಗೆ ಕಾರಣವಾಗುತ್ತದೆ. ಧಾರ್ಮಿಕ ಅಸಹಿಷ್ಣುತೆಯಿಂದ ಯಾವುದೇ ಸಮಾಜದ ಪ್ರಗತಿ ಸಾಧ್ಯವಿಲ್ಲವೆಂದು ಇತಿಹಾಸಕಾರರು ಎಚ್ಚರಿಸಿದ್ದಾರೆ. ಧಾರ್ಮಿಕ ದಿಗ್ಗಜರಾದ– ಏಸುಕ್ರಿಸ್ತ, ಕಬೀರ್, ಗುರುನಾನಕ್ ಸೂಫಿಸಂತರು, ಬಸವೇಶ್ವರ ಮತ್ತು ರಾಮಕೃಷ್ಣ ಪರಮಹಂಸರು ಮಾನವನ ಅಂತರಾಳದಲ್ಲಿ ಪ್ರೀತಿ ವಾತ್ಸಲ್ಯದ ಬೀಜವನ್ನು ಬಿತ್ತಲು ಪ್ರಯತ್ನಿಸಿದರು. ಆ ಮೂಲಕ ಸಮಾಜದಲ್ಲಿ ಧಾರ್ಮಿಕ ಸಾಮರಸ್ಯವನ್ನು ಪ್ರಚಾರಮಾಡಿದರು. ಆದ್ದರಿಂದ ಧಾರ್ಮಿಕ ಸಹಿಷ್ಣುತೆಯ ಬೆಳವಣಿಗೆಗೆ ಇತಿಹಾಸದ ಜ್ಞಾನ ತುಂಬಾ ಅಗತ್ಯವಾದುದು. ಆರ್ನಾಲ್ಡ್ ಟಾಯ್ನಬಿ ಮಾತಿನಲ್ಲಿ ಹೇಳುವುದಾದರೆ **'ಭಾರತದ ಧರ್ಮ ಸಹಿಷ್ಣುತೆ ಮಾನವ ಜನಾಂಗದ ಉಳಿವಿಗೆ ಏಕೈಕ ಮಾರ್ಗವಾಗಿದೆ'**.

3. ಇತಿಹಾಸವು ಸ್ಫೂರ್ತಿಯ ಮೂಲವಾಗಿದೆ:

ಇತಿಹಾಸವು ಮಾನವನ ಅನುಭವಗಳ ಸಾಗರವಿದ್ದಂತೆ. ಇತಿಹಾಸವು ಮಹಾನ್ ವ್ಯಕ್ತಿಗಳ ಸುಖ–ದುಃಖ, ಶ್ರೇಷ್ಠಕಾರ್ಯಗಳು, ಸಾಧನೆಗಳು, ಸಾಹಸಗಳು, ಕೊಡುಗೆಗಳು, ಚಿಂತನೆಗಳು ಮತ್ತು ತ್ಯಾಗಗಳ ದಾಖಲೆಯಾಗಿದೆ. ಅದ್ದರಿಂದ ಇದು ಸ್ಫೂರ್ತಿಯ ಸೆಲೆಯಾಗಿದೆ. ಉದಾಹರಣೆಗೆ– ಪರಂಪರೆ ಮತ್ತು ಸಂಸ್ಕೃತಿ, ಮಹಾ ಪುರುಷರಾದ ಮಹಾವೀರ, ಬುದ್ಧ, ಆಚಾರ್ಯರುಗಳಾದ ಶಂಕರ, ರಾಮಾನುಜ ಮತ್ತು ಮಧ್ವಾಚಾರ್ಯ, ವಿವೇಕಾನಂದ, ಅಬ್ರಹಾಂ ಲಿಂಕನ್ ಮತ್ತು ನೆಲ್ಸನ್ ಮಂಡೇಲರ ಆದರ್ಶಗಳು

ಸ್ಫೂರ್ತಿಯ ಮೂಲವಾಗಿವೆ. ಅವರ ಬೋಧನೆ ಮತ್ತು ಉಪದೇಶಗಳು ಜನರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖವಾದ ಪಾತ್ರವಹಿಸಿದೆ. **"ಮಹಾಪುರುಷರು ಇಂದಿಲ್ಲ, ಆದರೆ ಪ್ರಪಂಚದ ಇತಿಹಾಸ ಮತ್ತು ಮಹಾನ್ ಪುರುಷರ ಆತ್ಮಚರಿತ್ರೆಗಳು ಮಾತ್ರ ಇನ್ನೂ ಉಳಿದಿವೆ". ಎಂದು** ಥಾಮಸ್ ಕಾರ್ಲೈಲ್ ಹೇಳಿದ್ದಾನೆ.

4. ಇತಿಹಾಸವು ದೇಶಾಭಿಮಾನವನ್ನು ಮೂಡಿಸುತ್ತದೆ:

ದೇಶಾಭಿಮಾನವನ್ನು ಮೂಡಿಸುವಲ್ಲಿ ಇತಿಹಾಸದ ಅಧ್ಯಯನವು ಒಂದು ಪ್ರಮುಖವಾದ ಅಂಶವಾಗಿದೆ. ಒಂದು ದೇಶದ ಸಂಸ್ಕೃತಿ ಕಲೆ, ಸಂಗೀತ, ಸಾಹಿತ್ಯ, ಧರ್ಮ, ತತ್ವಶಾಸ್ತ್ರ, ಜಾನಪದ ಮುಂತಾದವುಗಳು ರಾಷ್ಟ್ರೀಯತೆಯ ಅಡಿಗಲ್ಲುಗಳಾಗಿವೆ. ಪರಂಪರೆಯ ಅರಿವು ವ್ಯಕ್ತಿಯನ್ನು ಹೆಮ್ಮೆಪಡುವಂತೆ ಮಾಡುತ್ತದೆ. ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟಂತೆ 19 ನೇ ಶತಮಾನದಲ್ಲಿ ನಡೆದ ಸಂಶೋಧನೆಗಳು ಭಾರತದ ರಾಷ್ಟ್ರೀಯತೆಗೆ ಭದ್ರವಾದ ತಳಪಾಯ ಹಾಕಿದವು. ಶಿವಾಜಿ, ಕಿತ್ತೂರು ಚನ್ನಮ್ಮ, ಲಕ್ಷ್ಮೀಬಾಯಿ, ಬಾಲಗಂಗಾಧರ್‌ತಿಲಕ್, ಭಗತ್‌ಸಿಂಗ್, ಚಂದ್ರಶೇಖರ ಆಜಾದ್, ಸುಭಾಷ್‌ಚಂದ್ರ ಭೋಸ್ ಮತ್ತು ಮಹಾತ್ಮ ಗಾಂಧೀಜಿಯವರ ಜೀವನ ಮತ್ತು ಸಾಧನೆಗಳು ನಮ್ಮಲ್ಲಿ ರಾಷ್ಟ್ರಾಭಿಮಾನವನ್ನು ಮೂಡಿಸುತ್ತದೆ.

5. ಇತಿಹಾಸವು ಸಮಾಜ ವಿಜ್ಞಾನಗಳ ಪ್ರಯೋಗ ಶಾಲೆ:

ಇತಿಹಾಸವು– ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮನೋವಿಜ್ಞಾನ, ಧರ್ಮಶಾಸ್ತ್ರ, ತತ್ವಶಾಸ್ತ್ರ, ತರ್ಕಶಾಸ್ತ್ರ, ಭೂಗೋಳಶಾಸ್ತ್ರ ಮುಂತಾದವುಗಳಿಗೆ ಬೇಕಾದ ಐತಿಹಾಸಿಕ ಮಾಹಿತಿಯನ್ನು ಒದಗಿಸಿಕೊಡುತ್ತದೆ. ಆದ್ದರಿಂದ ಇತಿಹಾಸ ಎಲ್ಲಾ ಸಾಮಾಜ ವಿಜ್ಞಾನಗಳ ಬೇರು. ಹಿಂದೆ ಸಮಾಜವಿಜ್ಞಾನಗಳು ಇತಿಹಾಸದ ಶಾಖೆಗಳಾಗಿ ಅಭ್ಯಸಿಸಲ್ಪಡುತ್ತಿದ್ದವು. ಆದ್ದರಿಂದ ಇತಿಹಾಸವು ಅವುಗಳಿಗೆ ಜ್ಞಾನವನ್ನು ಒದಗಿಸುವ ಪ್ರಯೋಗಶಾಲೆಯಂತಿದೆ. ವಿಶ್ವಸಂಸ್ಥೆಯ ಬಹುಪಾಲು ರಾಜಕೀಯ ಠರಾವುಗಳು ಇತಿಹಾಸದಿಂದ ಕಲಿತ ಪಾಠಗಳ ಮೇಲೆಯೇ ಅವಲಂಬಿತವಾಗಿವೆ. ಆದ್ದರಿಂದ ಪ್ರತಿಯೊಬ್ಬ ಸಾಮಾಜ ವಿಜ್ಞಾನಿಯು ಅಂತಿಮ ಅಭಿಪ್ರಾಯ ಕೈಗೊಳ್ಳುವಲ್ಲಿ ಇತಿಹಾಸದ ಆಧಾರಗಳ ಮೇಲೆಯೇ ಅವಲಂಬಿತನಾಗಿದ್ದಾನೆ.

6. ಇತಿಹಾಸವು ಉದಾತ್ತ ಧ್ಯೇಯಗಳನ್ನು ಬೆಳೆಸುತ್ತದೆ :

ಆಧುನಿಕ ಯುಗವು ಲೌಕಿಕ ಉನ್ನತಿ ಸಾಧಿಸಿದೆಯೇ ಹೊರತು ಅಲೌಕಿಕ ಜಗತ್ತಿನಲ್ಲಿ ಅಲ್ಲ. ಅಂದರೆ ಜನರಲ್ಲಿ ಮೌಲ್ಯ ಹಾಗೂ ನೀತಿಗಳ ಬಗ್ಗೆ ಗೌರವ ಕುಸಿಯುತ್ತಿದೆ ಎಂದರ್ಥ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಹಿಂದಿನ ಮಹಾಪುರುಷರು ಪ್ರತಿಪಾದಿಸಿದ ಮೌಲ್ಯಗಳನ್ನು ಆಧುನಿಕ ಮಾನವ ಅಳವಡಿಸಿಕೊಳ್ಳಬೇಕಿದೆ. ಆಶೋಕ, ಏಸು ಕ್ರಿಸ್ತ, ಪ್ರವಾದಿ ಮಹಮ್ಮದ್, ಕನಕದಾಸ, ಡಾ: ಬಿ.ಆರ್.ಅಂಬೇಡ್ಕರ್, ಮದರ್ ಥೆರೆಸಾ, ಮುಂತಾದವರ ಮಹಾನ್ ಆದರ್ಶಗಳ ಬಗೆಗೆ ಇತಿಹಾಸವು ವಿವರಣೆ ನೀಡುತ್ತದೆ. ಉದಾತ್ತ ಆದರ್ಶಗಳನ್ನು ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗಲು ಇತಿಹಾಸದ ಅಧ್ಯಯನವು ಸಹಕಾರಿಯಾಗಿದೆ. ಉದಾತ್ತ ಧ್ಯೇಯಗಳಾದ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಸತ್ಯಸಂದತೆ, ನೀತಿ, ಅಹಿಂಸೆ, ಅನ್ಯರ ಸೇವೆ, ಪ್ರೀತಿ, ಕ್ಷಮಾಗುಣ, ದಯೆ, ಉತ್ತಮ ರಾಜನೀತಿ, ಧಾರ್ಮಿಕ ಸಹಿಷ್ಣುತೆ, ಮುಂತಾದವುಗಳನ್ನು ಇತಿಹಾಸವು ಆಧುನಿಕ ಪೀಳಿಗೆಗೆ ಬಳುವಳಿಯಾಗಿ ನೀಡಿದೆ. ಜಾರ್ಜ್ ಸಂತಯನನ ಪ್ರಕಾರ **"ಇತಿಹಾಸವು ಉದಾತ್ತ ಧ್ಯೇಯಗಳ ಗಣಿಯಾಗಿದೆ ಮತ್ತು ಸನ್ಮಾರ್ಗತೋರುವ ದಾರಿ ದೀಪವಾಗಿದೆ"**.

7. ಇತಿಹಾಸವು ನಮ್ಮ ದೃಷ್ಟಿ ಕೋನವನ್ನು ವಿಸ್ತರಿಸುತ್ತದೆ:

ಇತಿಹಾಸದ ಅಧ್ಯಯನವು ನಮಗೆ ವಿವಿಧ ದೇಶಗಳ ಜನರು, ಸಂಪ್ರದಾಯ, ಸಂಸ್ಕೃತಿ ಮತ್ತು ನಾಗರಿಕತೆಗಳ ಬಗ್ಗೆ ಹೆಚ್ಚು ಜ್ಞಾನವನ್ನು ಸಂಪಾದಿಸಲು ಸಹಾಯಮಾಡುತ್ತದೆ. ಆ ಮೂಲಕ ಮನುಕುಲದ ದೃಷ್ಟಿಕೋನವನ್ನು ವಿಶಾಲಗೊಳಿಸುತ್ತದೆ. ಇತಿಹಾಸದಲ್ಲಿ ದಾಖಲಾದ ಕಲೆ, ವಾಸ್ತುಶಿಲ್ಪ, ಸಾಹಿತ್ಯ ಮತ್ತು ಧರ್ಮಕ್ಕೆ ಸಂಬಂಧಿಸಿದ ವಿಚಾರಗಳು ವ್ಯಕ್ತಿಯ ಜ್ಞಾನದ ದಿಗಂತವನ್ನು ವಿಸ್ತರಿಸುತ್ತವೆ.

8. ಇತಿಹಾಸವು ವಿಶ್ವಶಾಂತಿಯನ್ನು ಬೆಳೆಸುತ್ತದೆ:

ಜಗತ್ತು ಈಗಾಗಲೇ ಎರಡು ಮಹಾಯುದ್ಧಗಳ ದುಷ್ಪರಿಣಾಮಗಳನ್ನು ಕಂಡಿದೆ. ಭವಿಷ್ಯದಲ್ಲಿ ಇನ್ನೊಂದು ಯುದ್ಧವಾದರೆ ಅದು ಇಡೀ ಪ್ರಪಂಚವನ್ನೇ ವಿನಾಶಗೊಳಿಸುತ್ತದೆ. ಸಂಸ್ಕೃತಿಯ ಅರಿವಿಲ್ಲದಿರುವುದು ಹಾಗೂ ಸಂಕುಚಿತ ರಾಷ್ಟ್ರೀಯತೆ ಈ ಯುದ್ಧಗಳಿಗೆ ಕಾರಣವಾಗಿದೆಯೆಂದು ಇತಿಹಾಸವು ತೋರಿಸಿಕೊಟ್ಟಿದೆ.

ಅಣ್ವಸ್ತ್ರಗಳು ಮತ್ತು ಯುದ್ಧ ಸಂಬಂಧಿತ ಉಪಕರಣಗಳನ್ನು ಹೊಂದಲು ಇಂದು ವಿಶ್ವದ ವಿವಿಧ ರಾಷ್ಟ್ರಗಳ ನಡುವೆ ಭಾರಿ ಸ್ಪರ್ಧೆ ಏರ್ಪಟ್ಟಿದೆ. ದೇಶಗಳ ನಡುವಣ ಸೌಹಾರ್ದಯುತ ಬಾಂಧವ್ಯ ವೃದ್ಧಿಗೆ ಪ್ರಪಂಚದ ಇತಿಹಾಸದ ಅಧ್ಯಯನ ಇಂದಿನ ಅಗತ್ಯವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಹಾಗೂ ಸಾರಿಗೆ ಸಂಪರ್ಕಗಳ ಸುಧಾರಣೆಗಳಿಂದಾಗಿ ವಿಶ್ವವೇ ಒಂದು ಗ್ರಾಮವಾಗಿದೆ. ಪ್ರತಿಯೊಂದು ರಾಷ್ಟ್ರ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಬೇರೊಂದು ರಾಷ್ಟ್ರದ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ರಾಷ್ಟ್ರಗಳು ಸ್ನೇಹಭಾವದಿಂದ ಪರಸ್ಪರ ಅರ್ಥಮಾಡಿಕೊಳ್ಳುವಿಕೆಯ ಅಗತ್ಯವಿದೆ. ರಾಷ್ಟ್ರಗಳ ಸಂಘ ಮತ್ತು ವಿಶ್ವಸಂಸ್ಥೆಯ ಪ್ರಾಮುಖ್ಯತೆ ಮತ್ತು ಪ್ರಪಂಚದ ಶಾಂತಿ ಸ್ಥಾಪನೆಯಲ್ಲಿ ಅವುಗಳ ಪಾತ್ರವನ್ನು ಕುರಿತು ಇತಿಹಾಸ ವಿವರಣೆ ನೀಡಿದೆ. ಅದ್ದರಿಂದ ಇತಿಹಾಸವು ಎಲ್ಲರೂ ಸಮಾನರೆಂದು ಬೋಧಿಸುತ್ತದೆ. ಸಮಾಜದಲ್ಲಿ ಜಾತಿ, ಪಂಥ ಮತ್ತು ಧರ್ಮದ ಆಧಾರದ ಮೇಲೆ ಯಾವುದೇ ತಾರತಮ್ಯವಿರಬಾರದು.

9. ಇತಿಹಾಸವು ವೃತ್ತಿಪರ ಉಪಯೋಗಗಳನ್ನು ಹೊಂದಿದೆ:

ಇದು ಸ್ಪರ್ಧಾತ್ಮಕ ಪ್ರಪಂಚ. IAS, IPS, IFS, KAS, ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇತಿಹಾಸವು ಪ್ರಮುಖವಾದ ಐಚ್ಛಿಕ ವಿಷಯವಾಗಿದೆ. ಐತಿಹಾಸಿಕ ಜ್ಞಾನವು ಇಂದು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ, ವಕೀಲರಿಗೆ, ಪತ್ರಕರ್ತರಿಗೆ, ಆಡಳಿತಗಾರರಿಗೆ ಮತ್ತು ರಾಜನೀತಿಜ್ಞರಿಗೆ ಅತ್ಯವಶ್ಯವಾಗಿದೆ. ಆಡಳಿತ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ರಾಜಕಾರಣಿಗಳಿಗೆ ಐತಿಹಾಸಿಕ ಜ್ಞಾನ ಅಗತ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಬರುವ ಪುರಾತತ್ವ ಇಲಾಖೆಗಳಲ್ಲಿ ಸಾವಿರಾರು ಇತಿಹಾಸಕಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಾಕ್ತನಶಾಸ್ತ್ರಜ್ಞರು ಉತ್ಖನನಗಳನ್ನು ನಡೆಸಿ ಗತಕಾಲದ ಮೇಲೆ ಹೊಸ ಬೆಳಕು ಚೆಲ್ಲುತ್ತಾರೆ. ಪುರಾತನ ವಸ್ತುಗಳನ್ನು ಶೋಧಿಸುವುದು ಮಾತ್ರವಲ್ಲದೆ ಅವುಗಳನ್ನು ರಕ್ಷಿಸುತ್ತಾರೆ. ಇದಕ್ಕಾಗಿಯೇ ಸರ್ಕಾರ ವೃತ್ತಿಪರ ಇತಿಹಾಸಕಾರರನ್ನು ನೇಮಿಸುತ್ತದೆ. ವಸ್ತುಸಂಗ್ರಹಾಲಯ, ಪತ್ರಾಗಾರ ಹಾಗೂ ಪ್ರವಾಸೋದ್ಯಮ ಮತ್ತು ಅದರ ಸಂಬಂಧಿ ಕ್ಷೇತ್ರಗಳಲ್ಲಿ ಇತಿಹಾಸದ ವಿದ್ಯಾರ್ಥಿಗಳಿಗೆ ಹೊಸ ಹೊಸ ಅವಕಾಶಗಳಿವೆ. ಈ ರೀತಿ ಇತಿಹಾಸ ವೃತ್ತಿಪರ ಉಪಯೋಗಗಳನ್ನು ಹೊಂದಿದೆ.

10. ಇತಿಹಾಸವು ಪೂರ್ವಾಗ್ರಹಗಳನ್ನು ಹೋಗಲಾಡಿಸುತ್ತದೆ.

ಜಾತಿ, ಪಂಥ, ವರ್ಣ, ವರ್ಗ, ಭಾಷೆ ಮುಂತಾದವುಗಳಿಗೆ ಸಂಬಂಧಪಟ್ಟ ಪೂರ್ವಾಗ್ರಹಗಳನ್ನು ಹೋಗಲಾಡಿಸಲು ಇತಿಹಾಸ ಸಹಾಯಮಾಡುತ್ತದೆ. ಹಿಂದೆ ಜನರು ಮತ್ತು ದೇಶಗಳಿಗೆ ಈ ಪೂರ್ವಾಗ್ರಹಗಳು ತೀವ್ರ ತೊಂದರೆ ಉಂಟುಮಾಡಿದವು. ಉಗ್ರ ರಾಷ್ಟ್ರೀಯತೆ ಎರಡೂ ಜಾಗತಿಕ ಯುದ್ಧಗಳಿಗೆ ಒಂದು ಪ್ರಮುಖ ಕಾರಣವಾಗಿದೆ. ಈ ಯುದ್ಧಗಳು ಮಿಲಿಯಾಂತರ ಜನರ ಸಾವಿಗೆ ಕಾರಣವಾಗಿ ಹೇಳಲಸಾಧ್ಯವಾದ ತೊಂದರೆಯನ್ನುಂಟುಮಾಡಿದವು. ಆದ್ದರಿಂದ ರಾಷ್ಟ್ರಗಳ ನಡುವೆ ಶಾಂತಿ, ಸ್ನೇಹ ಮತ್ತು ಸಹಕಾರವಿರಬೇಕು. ಇದು ಇತಿಹಾಸದ ಅಧ್ಯಯನದಿಂದ ಮಾತ್ರ ಸಾಧ್ಯ

ಒಟ್ಟಾರೆಯಾಗಿ ಇತಿಹಾಸವು ವ್ಯಕ್ತಿಗಳಿಗೆ, ರಾಷ್ಟ್ರಗಳಿಗೆ ಹಾಗೂ ಇಡೀ ಪ್ರಪಂಚಕ್ಕೆ ಸ್ಫೂರ್ತಿಯ ಸೆಲೆಯಾಗಿದೆ. ಇದು ನಿರ್ದಿಷ್ಟವಾಗಿ ಎಲ್ಲಾ ಸಮಾಜವಿಜ್ಞಾನಗಳಿಗೆ ಹಾಗೂ ಸಾಮಾನ್ಯವಾಗಿ ಇತರೆಲ್ಲಾ ಜ್ಞಾನದ ಶಾಖೆಗಳಿಗೆ ಪ್ರಯೋಗಶಾಲೆಯಾಗಿ ಸೇವೆ ಸಲ್ಲಿಸುತ್ತದೆ. "ಉದಾಹರಣೆಗಳೊಂದಿಗೆ ಬೋಧಿಸಲ್ಪಡುವ ತತ್ವಜ್ಞಾನವೇ ಇತಿಹಾಸ". ಇದು ಮಾನವನ ಎಲ್ಲಾ ಚಟುವಟಿಕೆಗಳ ಸಾರವಾಗಿದ್ದು ಮಾನವ ಜನಾಂಗಕ್ಕೆ ಮಾರ್ಗದರ್ಶಿಯಾಗಿ ಸೇವೆಸಲ್ಲಿಸುತ್ತದೆ. ಡಾ: ಬಿ.ಆರ್. ಅಂಬೇಡ್ಕರ್ ಹೇಳಿರುವಂತೆ **"ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು"**.

ಪ್ರಶ್ನೆಗಳು

ಈ ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಒಂದು ಅಂಕ)

1) 'ಹಿಸ್ಟರಿ' ಪದದ ಅರ್ಥವೇನು?
2) 'ಹಿಸ್ಟರಿ' ಪದವು ಯಾವ ಭಾಷೆಯಿಂದ ಬಂದಿದೆ?
3) 'ಇತಿಹಾಸದ ಪಿತಾಮಹ' ಎಂದು ಯಾರನ್ನು ಕರೆಯಲಾಗಿದೆ?
4) ಹೆರೊಡೋಟಸ್ ಯಾವ ದೇಶಕ್ಕೆ ಸೇರಿದವನು?
5) ಹೆರೊಡೋಟಸ್‌ನ ಕೃತಿಯನ್ನು ಹೆಸರಿಸಿ.
6) 'ದಿ ಸಿಟಿ ಆಫ್ ಗಾಡ್' ಕೃತಿಯನ್ನು ಬರೆದವನು ಯಾರು?
7) ಇತಿಹಾಸದ ಆರ್ಥಿಕ ಅರ್ಥ ವಿವರಣೆಯನ್ನು ನೀಡಿದವನು ಯಾರು?
8) ಕಾರ್ಲ್‌ಮಾರ್ಕ್ಸ್‌ನ ಇತಿಹಾಸದ ವ್ಯಾಖ್ಯೆಯನ್ನು ಬರೆಯಿರಿ.
9) ಇತಿಹಾಸಕ್ಕೆ ಸಂಬಂಧಿಸಿದಂತೆ ಜೆ.ಬಿ.ಬ್ಯೂರಿಯ ವ್ಯಾಖ್ಯೆ ಯಾವುದು?
10) ಆರ್ನಾಲ್ಡ್ ಟಾಯ್ನ್‌ಬಿಯ ಕೃತಿಯನ್ನು ತಿಳಿಸಿ.
11) ಇತಿಹಾಸವನ್ನು 'ನಾಗರಿಕತೆಗಳ ಏಳು ಬೀಳಿನ ಕಥೆ' ಎಂದು ವ್ಯಾಖ್ಯಾನಿಸಿದ್ದು ಯಾರು?
12) ಇತಿಹಾಸಕ್ಕೆ ಜವಾಹಾರ್‌ಲಾಲ್ ನೆಹರು ನೀಡಿದ ವ್ಯಾಖ್ಯೆ ಏನು?

ಈ ಕೆಳಗಿನವುಗಳಿಗೆ ಎರಡು ಪದ ಅಥವಾ ಎರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಎರಡು ಅಂಕಗಳು)

1) ಇತಿಹಾಸದ ಯಾವುದಾದರೂ ಎರಡು ವ್ಯಾಖ್ಯೆಗಳನ್ನು ವಿವರಿಸಿ.
2) ಕಾರ್ಲ್‌ಮಾರ್ಕ್ಸ್‌ನ ಕೃತಿಗಳನ್ನು ಹೆಸರಿಸಿ.
3) ಜವಾಹಾರಲಾಲ್ ನೆಹರು ರಚಿಸಿದ ಪ್ರಸಿದ್ಧ ಕೃತಿಗಳಾವುವು?
4) ಇತಿಹಾಸದ ಎರಡು ವೃತ್ತಿಪರ ಉಪಯೋಗಗಳನ್ನು ತಿಳಿಸಿ.

15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ:–(ಪ್ರತಿಯೊಂದಕ್ಕೂ ಐದು ಅಂಕಗಳು)

1) ಇತಿಹಾಸದ ವ್ಯಾಖ್ಯೆಗಳನ್ನು ಬರೆಯಿರಿ.
2) ಇತಿಹಾಸದ ಅಧ್ಯಯನದ ಪ್ರಾಮುಖ್ಯತೆಯನ್ನು ವಿವರಿಸಿ.

❖ ❖ ❖ ❖ ❖

ಅಧ್ಯಾಯ 2

ಮಾನವ ವಿಕಸನದ ಕಥೆ

ಈ ಅಧ್ಯಾಯದಲ್ಲಿ ಮಾನವನ ವಿಕಸನವನ್ನು ಕುರಿತು ಚರ್ಚಿಸಲಿದ್ದೇವೆ. ಮಾನವ (Human) ಶಬ್ದವು ಲ್ಯಾಟಿನ್ ಭಾಷೆಯ 'ಹ್ಯೂಮನಸ್' (Humanus) ನಿಂದ ಉತ್ಪತ್ತಿಯಾಗಿದೆ. ಹ್ಯೂಮನಸ್ ಪದವು ಲ್ಯಾಟಿನ್ ಭಾಷೆಯ ಹೊಮೊ (Homo) ಪದದ ಗುಣವಾಚಕವಾಗಿದೆ. 'ಹೊಮೊ' ಎಂದರೆ 'ಮಾನವ' ಅಥವಾ 'ಮನುಷ್ಯ' ಎಂದು ಅರ್ಥ. ಮಾನವ ವಿಕಾಸವು ದೀರ್ಘ, ನಿಧಾನ ಹಾಗು ಅನುಕ್ರಮ ವಿಧಾನದಲ್ಲಿ ಹಲವಾರು ಮಿಲಿಯ ವರ್ಷಗಳಿಂದ ನಡೆದಿದೆ. ಆದರೆ ಮಾನವನ ವಿಕಸನದ ಈ ದೀರ್ಘಾವಧಿಯು ಭೂಮಿಯ ಉಗಮ ಮತ್ತು ವಿಕಸನ ಹಾಗು ತದನಂತರದ ಭೂಮಿಯ ಮೇಲೆ ಜೀವಿಗಳ ಉಗಮ ಮತ್ತು ವಿಕಸನಕ್ಕೆ ಹೋಲಿಸಿದಾಗ ಚಿಕ್ಕ ಅವಧಿಯಾಗಿ ಕಂಡು ಬರುತ್ತದೆ. ಭೂಮಿಯ ವಿಕಸನ ಹಾಗು ಜೀವ ವಿಕಸನಗಳು ನಿರಂತರವಾಗಿ ನಡೆದಿದ್ದು ಉಗಮದ ನಂತರ ಎಂದೂ ಸ್ಥಗಿತಗೊಂಡಿಲ್ಲ.

ಭೂಮಿಯ ಉಗಮ ಮತ್ತು ವಿಕಸನ

ಭೂಮಿಯ ಉಗಮದ ಕುರಿತು ಹಲವಾರು ಸಿದ್ಧಾಂತಗಳಿವೆ. ಆದರೆ ಭೂಮಿಯು ಉಗಮವನ್ನು ನಿರ್ಣಾಯಕವಾಗಿ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಈ ಸಿದ್ಧಾಂತಗಳು ಭೂಮಿಯ ಉಗಮದ ರಹಸ್ಯ ಬೇಧಿಸುವ ಪ್ರಯತ್ನಗಳು ಮಾತ್ರವೇ ಆಗಿವೆ. ಈ ಸಿದ್ಧಾಂತಗಳಲ್ಲಿ ಕೆಲವು ತತ್ವಶಾಸ್ತ್ರ ಇಲ್ಲವೇ ಧಾರ್ಮಿಕ ಸಿದ್ಧಾಂತಗಳಾಗಿದ್ದರೆ ಉಳಿದವು ವೈಜ್ಞಾನಿಕ ಸಿದ್ಧಾಂತಗಳು. ವೈಜ್ಞಾನಿಕ ಸಿದ್ಧಾಂತಗಳಲ್ಲಿ ಸ್ಥಿರ ಭೂಮಿ ಸಿದ್ಧಾಂತ (the Steady State theory), ಮಿಡಿತ ಸಿದ್ಧಾಂತ (the Pulsating theory), ಮಹಾ ಸ್ಫೋಟ ಸಿದ್ಧಾಂತ (the Big Bang theory), ಮುಂತಾದವುಗಳಿವೆ. ಇವುಗಳಲ್ಲಿ ಮಹಾ ಸ್ಫೋಟ ಸಿದ್ಧಾಂತವು ಜನಪ್ರಿಯವಾಗಿದ್ದು ಬಹುತೇಕರು ಒಪ್ಪಿರುವುದಾಗಿದೆ.

1) **ಸ್ಥಿರ ಭೂಮಿ ಸಿದ್ಧಾಂತದ ಪ್ರಕಾರ ಆಕಾಶ ಗಂಗೆಗಳು ನಿರಂತರವಾಗಿ ರೂಪುಗೊಳ್ಳುತ್ತಾ ಖಾಲಿ ಸ್ಥಳಗಳನ್ನು ಆವರಿಸುತ್ತಿರುತ್ತವೆ.**

2) **ಮಿಡಿತ ಸಿದ್ಧಾಂತದ ಪ್ರಕಾರ ಜಗತ್ತು ನಿರಂತರವಾಗಿ ಹಿಗ್ಗುವ ಮತ್ತು ಕುಗ್ಗುವ ಕ್ರಿಯೆಯಲ್ಲಿರುತ್ತದೆ. ಇದು ಮಿಡಿತದಂತಿರುತ್ತದೆ.**

3) **ಮಹಾ ಸ್ಫೋಟ ಸಿದ್ಧಾಂತದ ಪ್ರಕಾರ ಭೌತವಸ್ತುಗಳು ಮೊದಲು ಬೆಂಕಿಯುಂಡೆಯ ರೂಪದಲ್ಲಿ ಒಂದೇ ಸ್ಥಳದಲ್ಲಿತ್ತು. ಒಂದು ಮಹಾಸ್ಫೋಟದಿಂದ ಅದು ಎಲ್ಲಾ ದಿಕ್ಕುಗಳಲ್ಲಿ ಚದುರಿ ಅನೇಕ ಆಕಾಶಗಂಗೆಗಳನ್ನು ಸೃಷ್ಟಿಸಿತು. ಭೂಮಿಯು ಆಕಾಶ ಗಂಗೆಯಲ್ಲಿ (Milky Way) ಒಂದು ಸಣ್ಣ ವಸ್ತು.**

ಭೂಮಿಯು ಸೌರವ್ಯೂಹದಲ್ಲಿನ ಒಂದು ಗ್ರಹವಾಗಿದೆ. ಭೂಮಿಯ ಮೇಲೆ ಮಾತ್ರ ಜೀವ ವಿಕಸನಗೊಂಡಿದೆ. ಸುಮಾರು 4.5 ಬಿಲಿಯ ವರ್ಷಗಳ ಪೂರ್ವದಲ್ಲಿ ಭೂಮಿ ಉಗಮವಾಯಿತೆಂದು ಹೇಳಲಾಗಿದೆ. ಭೂಮಿಯ ಆಗಿನ ತಾಪಮಾನವೆಷ್ಟಿತ್ತೆಂದರೆ ಅದು ಕರಗಿದ ಬಂಡೆಗಳ ಉರಿಯುವ ಗೋಳವಾಗಿತ್ತು. ಅದು ಪದೇಪದೇ ಜ್ವಾಲಾಮುಖಿಗಳ ಸ್ಫೋಟ ಹಾಗೂ ದಕ್ಕಾಮುಕ್ಕಿಗಳಿಗೊಳಪಟ್ಟಿತು. ವಿಕಸನದ ಆರಂಭಿಕ ಅವಧಿಯಲ್ಲಿ ಅನೇಕ ಧೂಮಕೇತುಗಳು ಹಾಗು ಉಲ್ಕೆಗಳು ಭೂಮಿಯನ್ನು ಅಪ್ಪಳಿಸಿದವು. ಅಂತಹ ಒಂದು ಬೃಹತ್ ಅಪ್ಪಳಿಸುವಿಕೆಯಿಂದ ಭೂಮಿಯ ವಾಲುವಿಕೆ ಹಾಗೂ ಚಂದ್ರನ ಉಗಮವಾಯಿತು. ಇವೆರಡು ಅಂಶಗಳು ಭೂಮಿಯ ಹವಾಗುಣ ಮತ್ತು ವಾತಾವರಣದ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿವೆ.

ಚಟುವಟಿಕೆ 1: ಭೂಮಿಯ ಉತ್ಪತ್ತಿ ಮತ್ತು ವಿಕಸನ ಹಾಗು ಜೀವಿಗಳ ಉಗಮ ಹಾಗು ವಿಕಸನವನ್ನು ಕುರಿತ ಧಾರ್ಮಿಕ ಕಥೆಗಳನ್ನು ಸಂಗ್ರಹಿಸಿರಿ.

ಚಟುವಟಿಕೆ 2: ಭೂಮಿಯ ಉತ್ಪತ್ತಿ ಮತ್ತು ವಿಕಸನ ಹಾಗು ಜೀವಿಗಳ ಉಗಮ ಹಾಗು ವಿಕಸನವನ್ನು ಕುರಿತ ವೈಜ್ಞಾನಿಕ ಸಿದ್ಧಾಂತಗಳ ಮಾಹಿತಿಯನ್ನು

ಹಲವು ಮಿಲಿಯ ವರ್ಷಗಳ ಕಾಲ ಕರಗಿದ ಬಿಸಿ ಗೋಳವಾಗಿದ್ದ ಭೂಮಿಯು ಕ್ರಮೇಣ ತಂಪಾಗಲಾರಂಭಿಸಿತು ಅಂತೆಯೇ ಜ್ವಾಲಾಮುಖಿ ಸ್ಫೋಟಗಳು ಕಡಿಮೆಗೊಂಡವು. ಇದರಿಂದ ಭೂಮಿಯ ಮೇಲ್ಪದರವು ಗಟ್ಟಿ ಶಿಲೆಯಾಗಿ ಮಾರ್ಪಟ್ಟಿತು. ಇದನ್ನು ಭೂಮಿಯ ಕ್ರಸ್ಟ್ (Crust) ಎಂದು ಕರೆಯಲಾಗುತ್ತದೆ. ತಂಪಾಗುವಿಕೆಯ ಪ್ರಕ್ರಿಯೆ ಮುಂದುವರೆದು ಭೂಮಿಯ ಮೇಲ್ಪದರವು ಕುಗ್ಗಲಾರಂಭಿಸಿ ಬೆಟ್ಟಗಳು ಹಾಗು ಕಣಿವೆಗಳು ಸೃಷ್ಟಿಯಾದವು. ಒಂದು ಸೇಬಿನ ಹಣ್ಣನ್ನು ಹಲವು ದಿನಗಳ ಕಾಲ ಒಣಗಲು ಬಿಟ್ಟಾಗ, ಅದರ ಮೇಲ್ಮೈಯಲ್ಲಿ ಉಂಟಾಗುವ ಮಡಿಕೆಗಳನ್ನು ಈ ಪ್ರಕ್ರಿಯೆಗೆ ಹೋಲಿಸಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಜ್ವಾಲಮುಖಿಗಳಿಂದ ಬಿಡುಗಡೆಯಾದ ಅನಿಲಗಳು ಭೂಮಿಯ ಆರಂಭಿಕ ವಾತಾವರಣವನ್ನು ಸೃಷ್ಟಿಸಿತು. ಭೂಮಿಯ ಮೇಲ್ಮೈ (Crust) ಅತಿ ಹೆಚ್ಚು ಉಷ್ಣಾಂಶವನ್ನು ಹೊಂದಿದ್ದು ನೀರು ಆವಿಯ ರೂಪದಲ್ಲಿತ್ತು. ಭೂಮಿಯು ಮತ್ತಷ್ಟು ತಂಪಾಗಲಾರಂಭಿಸಿದಂತೆ ಆವಿಯು ಮೋಡಗಳಾಗಿ ನಂತರ ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿತು. ಈ ದೀರ್ಘ ಸುರಿಮಳೆಯು ಭೂಮಿಯ ಮೇಲೆ ಕೆರೆ, ಕೊಳ್ಳ, ನದಿ, ಸರೋವರ ಮತ್ತು ಸಮುದ್ರಗಳನ್ನು ನಿರ್ಮಿಸಿತು. ಈ ಸುರಿಮಳೆ ಮತ್ತು ಮಾರುತಗಳು ಬೆಟ್ಟ ಹಾಗು ಕಣಿವೆಗಳನ್ನು ಸವೆಸಲಾರಂಭಿಸಿದವು. ಶಿಲೆಗಳು ಸಣ್ಣ ಕಣಗಳಾಗಿ ಸವೆದು ಮರಳು, ಮಣ್ಣು ಮತ್ತು ಸಮುದ್ರ ತಳ ನಿರ್ಮಿತಗೊಂಡವು.

ಇಷ್ಟೆಲ್ಲಾ ಆದರೂ ಭೂಮಿಯ ಮೇಲೆ ಜೀವ ಉದಯಿಸಲು ಪೂರಕ ವಾತಾವರಣ ಇನ್ನೂ ಸಿದ್ಧಗೊಂಡಿರಲಿಲ್ಲ. ಏಕೆಂದರೆ ಭೂಮಿಯ ವಾತಾವರಣ ವಿಷಯುಕ್ತವಾಗಿತ್ತು.

ಜೀವದ ಉಗಮ ಹಾಗು ವಿಕಸನ

ಭೂಮಿಯ ಮೇಲೆ ಜೀವದ ಉಗಮವನ್ನು ಕುರಿತು ಅನೇಕ ಸಿದ್ಧಾಂತಗಳಿವೆ. ಜನಪ್ರಿಯ ಸಿದ್ಧಾಂತವೊಂದರ ಪ್ರಕಾರ ಸುಮಾರು 700 ಮಿಲಿಯ ವರ್ಷಗಳ ಹಿಂದೆ ವಾತಾವರಣದಲ್ಲಿನ ಮೂಲಭೂತ ರಸಾಯನಿಕಗಳಾದ ಜಲಜನಕ ಮತ್ತು ಇಂಗಾಲಗಳು ಯಾವುದೋ (ಈವರೆಗೆ ಕಂಡು ಹಿಡಿಯಲಾಗದ) ರೀತಿಯಲ್ಲಿ ಸಮ್ಮಿಲಿತಗೊಂಡು ಜೀವವು ನೀರಿನಲ್ಲಿ ಉದಯಿಸಿತು. ಇದು ನಿಧಾನ ಗತಿಯಲ್ಲಿ ವಿಕಸನಗೊಂಡು ಆರಂಭಿಕ ಗಿಡಗಳಾಗಿ ಮಾರ್ಪಟ್ಟಿತು. ಕ್ರಮೇಣ ಈ ನೀರಿನ ಗಿಡಗಳು ಆಳವಿಲ್ಲದ ಬೆಚ್ಚನ ಸಮುದ್ರ ಭಾಗಗಳನ್ನೆಲ್ಲಾ ಆಕ್ರಮಿಸಿತು. ನಂತರ ವಾತಾವರಣಕ್ಕೆ ಹೊಂದಿಕೊಳ್ಳುತ್ತಾ ಭೂಭಾಗವನ್ನು ಅತಿಕ್ರಮಿಸಿ ಬೆಳೆಯಲಾರಂಭಿಸಿದವು. ಸುಮಾರು 500 ಮಿಲಿಯ ವರ್ಷಗಳ ಪೂರ್ವದಲ್ಲಿ 'ಪ್ರೋಟೊಜೋವ' ನೀರಿನಲ್ಲಿ ಉತ್ಪತ್ತಿಯಾಯಿತು. ಅದು ಪ್ರಾಣಿ ಪ್ರಭೇದದ ಉಗಮದಲ್ಲಿನ ಪ್ರಥಮ ರೂಪವೆಂದು ಪರಿಗಣಿಸಲಾಗಿದೆ. ನಂತರ ಏಕಜೀವಕೋಶಗಳು ಬಹುಜೀವಕೋಶಗಳಾಗಿ ಪರಿವರ್ತನೆಗೊಂಡವು. ಈ ದ್ಯುತಿಸಂಶ್ಲೇಷಿತ ಏಕಾಣುಜೀವಿಗಳು ವಿಕಸನಗೊಂಡಂತೆ ಆಮ್ಲಜನಕವನ್ನು ವಾತಾವರಣಕ್ಕೆ ಬಿಡುಗಡೆ ಮಾಡಲಾರಂಭಿಸಿದವು. ಈ ಕ್ರಿಯೆಯಿಂದ ಭೂಮಿಯು ಉನ್ನತ ಜೀವಿಗಳ ಉಗಮ ಮತ್ತು ವಿಕಸನಕ್ಕೆ ಕಾರಣವಾಯಿತು ಹಾಗು ವಾಸಯೋಗ್ಯವಾಯಿತು.

ನಂತರ ಜಲಜೀವಿಗಳು ಸೃಷ್ಟಿಯಾದವು. ಕೀಟಾಣುಗಳು ಮತ್ತು ಉಬಯಚರಿಗಳು ಅಸ್ತಿತ್ವಕ್ಕೆ ಬಂದವು. ಉಭಯಚರಿಗಳು ಜಲ ಹಾಗು ನೆಲದ ಮೇಲೆರಡೂ ಕಡೆ ಜೀವಿಸಲು ಶಕ್ತವಾದವು. ಆನಂತರ ಸರೀಸೃಪಗಳು ಜನಿಸಿದವು ಮತ್ತು ಅವುಗಳಲ್ಲಿ ಕೆಲವು ಪ್ರಭೇದಗಳು ಕಾಲ ಕ್ರಮೇಣ ಪಕ್ಷಿಗಳಾಗಿ ಪರಿವರ್ತನೆಗೊಂಡವು. ಹೀಗೆ ಬಗೆಬಗೆಯ ಜೀವವಿಧಗಳು ವಿಕಸನಗೊಳ್ಳಲು ಸುಮಾರು 400 ಮಿಲಿಯ ವರ್ಷಗಳು ಬೇಕಾದವು. ಸಸ್ತನಿಗಳು ಸುಮಾರು 200 ಮಿಲಿಯ ವರ್ಷಗಳ ಹಿಂದೆ ವಿಕಸನಗೊಂಡವು. ಕುದುರೆ, ಒಂಟೆ, ನಾಯಿ, ಮುಂತಾದವು 50 ಮಿಲಿಯ ವರ್ಷಗಳ ಹಿಂದೆ ಜನಿಸಿದವು.

ಹೀಗೆ ಹಲವಾರು ಜೀವ ಪ್ರಭೇದಗಳು ಉಗಮಿಸಿ ಪ್ರವರ್ಧಿಸಿದವು, ಅವುಗಳಲ್ಲಿ ಹಲವು ಪ್ರಭೇದಗಳು ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಇಲ್ಲವೇ, ಇತರೆ ಜೀವಿಗಳ ಪ್ರಾಬಲ್ಯವನ್ನು ಎದುರಿಸಲಾಗದೆ ಅಳಿದು ಹೋದವು. ಉದಾಹರಣೆಗೆ ಒಂದೊಮ್ಮೆ ಪ್ರಭಲವಾಗಿದ್ದ ಡೈನೋಸಾರ್‌ಗಳು ಸುಮಾರು 65 ಮಿಲಿಯ ವರ್ಷಗಳ ಹಿಂದೆ ಅಳಿದವು.

ಮಾನವನ ಉಗಮ ಮತ್ತು ವಿಕಸನ

ಮಾನವ ವಿಕಾಸದ ಅಧ್ಯಯನವು ಒಂದು ಜಟಿಲ ವಿಷಯವಾಗಿದೆ. ಇದು ಮಾನವಶಾಸ್ತ್ರ, ಪುರಾತತ್ವಶಾಸ್ತ್ರ, ಭಾಷಾಶಾಸ್ತ್ರ, ಭ್ರೂಣಶಾಸ್ತ್ರ ಮತ್ತು ತಳಿವಿಜ್ಞಾನಶಾಸ್ತ್ರಗಳನ್ನು ಒಳಗೊಂಡಿದೆ. ಮಾನವ ಪಳಿಯುಳಿಕೆಗಳ ಶೋಧಗಳು, ಶಿಲಾಯುಧಗಳು ಮತ್ತು ಗುಹಾಚಿತ್ರಗಳು ಈ ಅಧ್ಯಯನಕ್ಕೆ ಪುರಾವೆಗಳಾಗುತ್ತವೆ. ದೊರಕಿರುವ ಬಹುತೇಕ ಪಳಿಯುಳಿಕೆಗಳು ಅಳಿದುಹೋದ ಮಾನವ ಪ್ರಭೇದಗಳದ್ದಾಗಿವೆ. ಇಂದಿನ ಮಾನವ ಪ್ರಭೇದದ ವಿಕಸನವನ್ನು ಅರಿಯಲು ಅವು ಕೊಂಡಿಗಳಂತೆ ಕೆಲಸ ಮಾಡುತ್ತವೆ. ಸಾಮಾನ್ಯವಾಗಿ ಪಳಿಯುಳಿಕೆಗಳ ಶೋಧವು ಆಕಸ್ಮಿಕವಾಗಿ ನಡೆದವುಗಳಾಗಿವೆ ಮತ್ತು ಅವುಗಳನ್ನು ಆಕರಿಸುವ ಪ್ರಕ್ರಿಯೆಯು ಬಹು ಕ್ಲಿಷ್ಟವಾದ ಹಾಗು ಶ್ರಮದಾಯಕವಾದ ಕೆಲಸವಾಗಿದೆ. ಇಂತಹ ಪಳಿಯುಳಿಕೆಗಳ ದಿನಾಂಕವನ್ನು ನಿರ್ಧರಿಸಲು ನೇರವಾಗಿ ರಸಾಯನಿಕ ವಿಶ್ಲೇಷಣೆಗೆ ಒಳಪಡಿಸುವುದು ಒಂದು ವಿಧಾನವಾಗಿದ್ದರೆ ಮತ್ತೊಂದು ವಿಧಾನವು ಪಳಿಯುಳಿಕೆಯ ಮೇಲಿನ ಗೋಡುಮಣ್ಣನ್ನು ರಸಾಯನಿಕ ವಿಶ್ಲೇಷಣೆಗೆ ಒಳಪಡಿಸುವುದಾಗಿದೆ. ದಿನ ಕಳೆದಂತೆ ಆಗುತ್ತಿರುವ ವಿಜ್ಞಾನದ ಅಭಿವೃದ್ಧಿ ಹಾಗು ದೊರೆಯುವ ಹೊಸ ಮಾಹಿತಿಗಳಿಂದ ಅನೇಕ ಕಗ್ಗಂಟಿನ ಸಮಸ್ಯೆಗಳು ಬಗೆಹರಿಯುತ್ತಿವೆ. ಡಾರ್ವಿನ್ ರಚಿಸಿರುವ 'ದಿ ಒರಿಜಿನ್ ಆಫ್ ದಿ ಸ್ಪೀಶೀಸ್' (The Origin of the Species) ಕೃತಿಯಲ್ಲಿನ **'ನೈಸರ್ಗಿಕ ಆಯ್ಕೆ'** (Natural Selection) ಸಿದ್ಧಾಂತವು ಮಾನವ ವಿಕಾಸದ ಕಥೆಯನ್ನು ಅರಿಯಲು ಸಹಾಯ ಮಾಡಿದೆ. ಅಂತೆಯೇ ಅವರ **'ಸಬಲರು ಬದುಕಿ ಉಳಿಯುವ'** (Survival of the fittest) ಸಿದ್ಧಾಂತವು ಅನೇಕ ಜೀವ ಪ್ರಭೇದಗಳ ವಿಕಾಸ ಮತ್ತು ಅಳಿಯುವಿಕೆಯನ್ನು ತಿಳಿಯಲು ಸಹಾಯಕವಾಗಿದೆ. ಮಾನವ ವಿಕಸನವನ್ನು ತಿಳಿಯಲು ಇರುವ ಬಹು ದೊಡ್ಡ ತೊಂದರೆ ಎಂದರೆ ಅದನ್ನು ಅರಿಯಲು ಬೇಕಾಗಿರುವ ಆಧಾರಗಳು ಬಹು ಪ್ರಾಚೀನ ಕಾಲದ್ದಾಗಿದ್ದು ಸಾವಿರಾರು ವರ್ಷಗಳಷ್ಟು ಪುರಾತನವಾದುದಾಗಿದೆ

ಚಾರ್ಲ್ಸ್ ರಾಬರ್ಟ ಡಾರ್ವಿನ್ (12–02–1809 ರಿಂದ 19–04–1882) ಒಬ್ಬ ಬ್ರಿಟೀಷ್ ನಿಸರ್ಗ ವಿಜ್ಞಾನಿ. ಎಲ್ಲಾ ಪ್ರಭೇದಗಳ ವಿಕಸನ ಒಂದೇ ಮೂಲದಿಂದ ವಂಶಾನುಗತವಾಗಿ ಹಾಗೂ ಕಾಲಾನುಕ್ರಮವಾಗಿ ನಡೆದಿದೆ ಎಂದು ಪ್ರತಿಪಾದಿಸಿದನು. ಇವರ ವೈಜ್ಞಾನಿಕ ಸಿದ್ಧಾಂತವು ವಿಕಸನ ಪ್ರಕ್ರಿಯೆಯಲ್ಲಿ ಜೀವ ಪ್ರಭೇದಗಳ ವಿಭಜನೆಯು ನೈಸರ್ಗಿಕ ಆಯ್ಕೆಯ ಪರಿಣಾಮವಾಗಿದೆ ಎಂದು ಪ್ರತಿಪಾದಿಸುತ್ತದೆ. ಜೀವ ಬದುಕಿ ಉಳಿಯಲು ಸಂಘರ್ಷ ಮಾಡುತ್ತವೆ ಹಾಗು ಆ ನಿಟ್ಟಿನಲ್ಲಿ ಸಂಗಾತಿಯನ್ನು ಆಯ್ಕೆ ಮಾಡುತ್ತವೆ. 1859ರಲ್ಲಿ ಪ್ರಕಟಿಸಿದ 'ಆನ್ ದಿ ಒರಿಜಿನ್ ಆಫ್ ಸ್ಪೀಷೀಸ್' ಕೃತಿಯಲ್ಲಿ ಪುರಾವೆಗಳೊಂದಿಗೆ ವಿಕಸನ ಸಿದ್ಧಾಂತವನ್ನು ಮಂಡಿಸಿ ಅಂದು ಪ್ರಚಲಿತದಲ್ಲಿದ್ದ ಪ್ರಭೇದಗಳ 'ರೂಪ ಬದಲಾವಣೆ ಸಿದ್ಧಾಂತ' ತಿರಸ್ಕೃತಗೊಳ್ಳಲು ಕಾರಣರದರು.

ಈ ಮೇಲಿನ ಚಿತ್ರದಲ್ಲಿ ವಿವಿಧ ವಾನರಗಳ ಮತ್ತು ಮಾನವ ಅಸ್ಥಿ ಪಂಜರಗಳನ್ನು ಕಾಣಬಹುದು. ಅಂತೆಯೇ ಅವುಗಳ ನಡುವೆ ಇರುವ ಸಾಮ್ಯತೆಯನ್ನು ಗಮನಿಸಬಹುದು. ಈ ಸಾಮ್ಯತೆಗಳು ಮಾನವ ಮತ್ತು ವಾನರಗಳು ಒಂದೇ ಮೂಲದಿಂದ ಉಗಮಗೊಂಡಿರುವುದಕ್ಕೆ ಪುರಾವೆಗಳಾಗಿವೆ.



ಈ ಮೇಲಿನ ಚಿತ್ರದಲ್ಲಿ ಗೋರಿಲ್ಲಾ ಹಾಗು ವಿವಿಧ ಕಾಲಗಳ ಮಾನವ ಪ್ರಭೇದಗಳ ತಲೆಬುರುಡೆಗಳನ್ನು ಕಾಣಬಹುದು. ತಲೆಬುರುಡೆಗಳು, ವಸಡು–ಹಲ್ಲುಗಳು ಮತ್ತು ಹಣೆಗಳ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು

ಗಮನಿಸಬಹುದು. ಸಾಮ್ಯತೆಗಳು ಗೋರಿಲ್ಲಾ ಮತ್ತು ಮಾನವರು ಒಂದೇ ಮೂಲದಿಂದ ಉದಯಿಸಿದ ಕುರುಹುಗಳಾಗಿವೆ. ಮಾನವ ಪ್ರಭೇದಗಳ ತಲೆಬುರುಡೆಗಳ ನಡುವಿರುವ ವ್ಯತ್ಯಾಸಗಳು ಕಾಲಾನುಕ್ರಮದ ವಿಕಸನದ ಕುರುಹುಗಳಾಗಿವೆ.



ಪ್ರಸಕ್ತ ಪ್ರಭೇದಗಳ ವಂಶವೃಕ್ಷ

ಇಂದಿನ ಮಾನವರು. ಚಿಂಪಾಜಿಗಳು ಮತ್ತು ಬೊನಬೊಗಳು, ಗೋರಿಲ್ಲಾಗಳು, ಒರಂಗುಟಾನುಗಳು ಹಾಗು ಗಿಬ್ಬನ್‌ಗಳ ಪೂರ್ವಜ ಪ್ರಭೇದಗಳು **ಹೋಮಿನಾಯ್ಡೇ (**Hominoidea) ಎಂಬ ಮೇಲುಕುಟುಂಬಕ್ಕೆ ಸೇರಿದ್ದವು. ಈ ಮೇಲುಕುಟುಂಬದ ಪ್ರಭೇದಗಳನ್ನು **'**ಹೋಮಿನಾಯ್ಡ್**'** (Hominoid)ಗಳೆಂದು ಕರೆಯಲಾಗುತ್ತದೆ. ಇವುಗಳನ್ನು **'**ಪ್ರೈಮೇಟ್**'** (Primate)ಗಳೆಂದು ವರ್ಗೀಕರಿಸಲಾಗಿದೆ. ಸುಮಾರು 36 ಮಿಲಿಯ ವರ್ಷಗಳ ಹಿಂದೆ ಇವು ಸಸ್ಥನಿಗಳಿಂದ ಟಿಸಿಲೊಡೆದವು. ಪ್ರಸಕ್ತ ಪ್ರಭೇದಗಳನ್ನು ವಂಶವೃಕ್ಷದ ಬಾಕ್ಸಿನಲ್ಲಿ ಅನುಕ್ರಮವಾಗಿ ಸಂಬಂಧಪಟ್ಟ ಕುಲದ ಅಡಿಯಲ್ಲಿ ತೋರಿಸಲಾಗಿದೆ.

1 ಹೋಮಿನಾಯ್ಡೇ ಮೇಲುಕುಟುಂಬವು **'ಹೋಮಿನಿಡೇ'** (Hominidae) ಹಾಗು **'ಹೈಲೋಬಟಿಡೇ' (**Hylobatidae) ಕುಟುಂಬಗಳಾಗಿ ವಿಭಜನೆಗೊಂಡವು. ಈ ಕುಟುಂಬಗಳ ಜೀವಜಾತಿಗಳನ್ನು ಹೋಮಿನಿಡ್‌ಗಳು ಹಾಗು ಹೈಲೋಬಟಿಡ್‌ಗಳೆಂದು ಕರೆಯಲಾಗಿದೆ. ಹೋಮಿನಿಡ್‌ಗಳಾದ ಮಾನವರು, ಚಿಂಪಾಂಜಿ ಮತ್ತು ಬೊನಬೊ, ಗೋರಿಲ್ಲಾಗಳು ಹಾಗು ಒರಂಗುಟಾನುಗಳು ಹೈಲೋಬಟಿಡ್‌ಗಳಾದ ಗಿಬ್ಬನ್‌ಗಳಿಂದ ಕವಲೊಡೆದವು.

2. ಹೋಮಿನಿಡೇ ಕುಟುಂಬವು **'ಹೋಮಿನಿನೇ'** (Hominінae) ಹಾಗು **'ಪಾಂಜಿನೇ' (**Ponginae**)** ಒಳಕುಟುಂಬಗಳಾಗಿ ವಿಭಜನೆಗೊಂಡವು. ಅನುಕ್ರಮವಾಗಿ ಈ ಒಳಕುಟುಂಬಗಳ ಪ್ರಭೇದಗಳು ಹೋಮಿನಿನ್‌ಗಳು ಹಾಗು ಪಾಂಜೀನ್‌ಗಳೆಂದು ಕರೆಯಲ್ಪಟ್ಟಿವೆ. ಹೋಮಿನಿನೇಗಳಾದ ಮಾನವರು, ಚಿಂಪಾಂಜಿ

ಮತ್ತು ಬೊನಬೊ ಹಾಗು ಗೋರಿಲ್ಲಾಗಳು ಪಾಂಜಿನೆಗಳಾದ ಒರಾಂಗುಟಾನ್‌ಗಳಿಂದ ಕವಲೊಡೆದವು.

3. ಹೋಮಿನಿನೇ ಒಳಕುಟುಂಬವು **'ಹೋಮಿನಿನಿ'** (Hominini) ಹಾಗು **'ಗೋರಿಲೀನಿ'** (Gorillini) ಪಂಗಡಗಳಾಗಿ ವಿಭಜನೆಗೊಂಡವು. ಹೋಮಿನಿನಿಗಳಾದ ಮಾನವರು ಹಾಗು ಚಿಂಪಾಂಜಿ ಮತ್ತು ಬೊನಬೊಗಳು ಗೋರಿಲೀನಿಗಳಾದ ಗೋರಿಲ್ಲಾಗಳಿಂದ ಕವಲೊಡೆದವು.

4. ಹೋಮಿನಿನಿ ಪಂಗಡವು ಹೋಮೊ (Homo) ಹಾಗು ಪಾನ್ (Pan) ಕುಲಗಳಾಗಿ ವಿಭಜನೆಗೊಂಡವು. ಅಂದರೆ ಹೋಮೊ ಕುಲದ ಮಾನವ ಪ್ರಭೇದವು ಪಾನ್ ಕುಲದ ಚಿಂಪಾಂಜಿಗಳು ಮತ್ತು ಬೊನಬೊಗಳಿಂದ ಕವಲೊಡೆದವು. ಹೀಗಾಗಿ ಚಿಂಪಾಂಜಿ ಮತ್ತು ಬೊನಬೊಗಳು ಮಾನವರ ಅತಿ ಹತ್ತಿರದ ಸಂಬಂಧಿಗಳಾಗಿವೆ.

ಹೋಮಿನಾಯ್ಡೇ ಮೇಲುಕುಟುಂಬದಿಂದ ಹೋಮೊ ಕುಲದವರೆಗಿನ ವಿಕಸನವು ನಡೆಯಲು ಸುಮಾರು 30 ಮಿಲಿಯ ವರ್ಷಗಳು ಬೇಕಾದವು. ಹೋಮೊ ಕುಲದ ಉದಯವು ಮಾನವರಂತಹ ಜೀವಿಗಳನ್ನು ಭೂಮಿಯ ಮೇಲೆ ಸುಮಾರು 5.6 ಮಿಲಿಯ ವರ್ಷಗಳ ಪೂರ್ವದಲ್ಲಿ ಸೃಷ್ಟಿಸಿತು.

ಪ್ರಸಕ್ತ ಮಾನವ ಪ್ರಜಾತಿಯ ತತ್ ಪೂರ್ವಜರ ಪಟ್ಟಿ

- *ಹೋಮೊ ಹಬಿಲಿಸ್ (Homo habilis)*
- *ಹೋಮೊ ರುಡೊಲ್ಫೆನ್ಸಿಸ್ (Homo rudolfensis)*
- *ಹೋಮೊ ಎರಗಾಸ್ಟರ್ (Homo ergaster)*
- *ಹೋಮೊ ಜಾರ್ಜಿಕಸ್ (Homo georgicus)*
- *ಹೋಮೊ ಎರಕ್ಟಸ್ (Homo* erectus*)*
- *ಹೋಮೊ ಸೆಪ್ರನ್ಸಿಸ್ (Homo cepranensis)*
- *ಹೋಮೊ ಎಂಟೆಸೆಸರ್ (Homo* antecessor*)*
- *ಹೋಮೊ ಹಿಡೆಲ್ಬರ್ಜೆನ್ಸಿಸ್ (Homo heidelbergensis)*
- *ಹೋಮೊ ರೋಡೆಸೆನ್ಸಿಸ್ (Homo* rhodesiensis*)*
- *ಹೋಮೊ ನಿಯಾಂಡರ್ತಲೆನ್ಸಿಸ್ (Homo neanderthalensis)*
- *ಹೋಮೊ ಸೇಪಿಯನ್ಸ್ (Homo sapiens)*
- *ಹೋಮೊಸೇಪಿಯನ್ಸ್ ಇಡಾಲ್ಟು Homo sapiens idaltu*
- *ಕ್ರೋ–ಮ್ಯಾಗ್ನಾನ್ Archaic Homo sapiens* (Cro-magnon)

ಮಾನವ ವಿಕಸನದ ಪ್ರಮುಖ ಅಂಶಗಳು

1. ವಾಯುಗುಣ ಬದಲಾವಣೆ

ವಾಯುಗುಣ ಹಾಗು ವಾತಾವರಣದ ಬದಲಾವಣೆಗಳು ಮಾನವನ ವಿಕಸನದ ಮೇಲೆ ಅತಿ ಹೆಚ್ಚಿನ ಪ್ರಭಾವ ಬೀರಿತು. ಕಳೆದ 6 ರಿಂದ 8 ಮಿಲಿಯ ವರ್ಷಗಳಲ್ಲಿ ಭೂಮಿಯು ಸಾಮಾನ್ಯವಾಗಿ ತಂಪಾಗುವಿಕೆಯ ಪ್ರಕ್ರಿಯೆಯನ್ನು ಕಂಡಿದ್ದು, ಹಲವು ಶೀತಯುಗಗಳನ್ನು ಎದುರಿಸಿದೆ. ಸುಮಾರು 2.5 ಮಿಲಿಯ ವರ್ಷಗಳ

ಪೂರ್ವದ ಶೀತಯುಗದಲ್ಲಿ ಭೂಮಿಯ ಬಹುತೇಕ ಭಾಗಗಳು ಹಿಮಾಚ್ಛಾದಿತಗೊಂಡು ವಾಯುಗುಣ ಮತ್ತು ಸಸ್ಯರಾಶಿಗಳಲ್ಲಿ ಮಹತ್ವದ ಬದಲಾವಣೆಗಳುಂಟಾದವು. ತಂಪು ಹಾಗು ಒಣ ಹವಾಗುಣವು ಅರಣ್ಯಗಳನ್ನು ಕುಗ್ಗಿಸಿ ಬಯಲು, ಹುಲ್ಲುಗಾವಲು ಮತ್ತು ಮರುಭೂಮಿ ಪ್ರದೇಶಗಳನ್ನು ಹೆಚ್ಚಿಸಿತು. ಇದರಿಂದ ಸಸ್ಯ ಹಾಗು ಪ್ರಾಣಿಗಳಲ್ಲಿ ಆಹಾರಕ್ಕಾಗಿ ತೀವ್ರ ಪೈಪೋಟಿ ಆರಂಭವಾಯಿತು. ಯಾವ ಜೀವಜಾತಿಯು ಈ ವಾಯುಗುಣಕ್ಕೆ ಹೊಂದಿಕೊಂಡು ಆಹಾರ ಸಂಪಾದಿಸಲು ಸಶಕ್ತವಾದವೊ ಅವು ಬದುಕುಳಿದರೆ ಉಳಿದವುಗಳು ಅಳಿದವು. ಶೀತಯುಗವು ಆರಂಭಿಕ ಮಾನವರಿಗೆ ಪ್ರಾಣಿಗಳ ಚರ್ಮವನ್ನು ಧರಿಸಿ ದೇಹವನ್ನು ಬೆಚ್ಚಗಿಟ್ಟುಕೊಳ್ಳಲು ಪ್ರೇರೇಪಿಸಿತು. ಅನೇಕ ಸಲ ಅಸ್ತಿತ್ವದಲ್ಲಿದ್ದ ಪ್ರಭೇದಗಳಿಂದ ವಾಯುಗುಣಕ್ಕೆ ಸೂಕ್ತ ರೀತಿಯಲ್ಲಿ ಹೊಂದಿಕೊಳ್ಳುವಂತಹ ಹೊಸ ಪ್ರಜಾತಿಗಳು ಉದಯಿಸಿದವು. ಆಸ್ಟ್ರಾಲೋಪಿಥಿಕಸ್ ಪ್ರಜಾತಿಯು ಕ್ರಮೇಣ ಅಳಿದರೆ ಒಣ ವಾಯುಗುಣಕ್ಕೆ ಹೊಂದಿಕೊಂಡ ಹೋಮೊ (ಆರಂಭಿಕ ಮಾನವ) ಬದುಕುಳಿದ. 20,000 ವರ್ಷಗಳ ಮೊದಲು ಭೂಮಿಯು ಕೊನೆಯ ಶೀತಯುಗವನ್ನು ಕಂಡಿತು. ಹೀಗೆ ಅನೇಕ ಪ್ರಭೇದಗಳಲ್ಲಿ ಬದುಕುಳಿಯಲು ಆದ ಬದಲಾವಣೆಗಳಿಗೆ ಭೂಮಿಯ ವಾಯುಗುಣವು ಪ್ರಮುಖವಾಗಿ ಕಾರಣವಾಯಿತು. ಹಿಂದಿನ 6 ರಿಂದ 8 ಮಿಲಿಯ ವರ್ಷಗಳಿಗೆ ಹೋಲಿಸಿದರೆ ನಾವು ಇಂದು ಬೆಚ್ಚನೆಯ ವಾಯುಗುಣವನ್ನು ಹೊಂದಿದ್ದೇವೆ. ವಿವಿಧ ಪ್ರಭೇದಗಳ ಉಗಮ ಮತ್ತು ವಿಕಸನ ಹಾಗು ಅಸ್ತಿತ್ವ ಮತ್ತು ಅಳಿವಿಗೆ ಭೂಮಿಯ ವಾತಾವರಣ ಹಾಗು ವಾಯುಗುಣ ಪ್ರಮುಖ ಕಾರಣವಾಯಿತು.

2. ಮಿದುಳಿನ ಗಾತ್ರದಲ್ಲಿ ವೃದ್ಧಿ

ಪ್ರಕೃತಿಯ ಸವಾಲುಗಳನ್ನು ಎದುರಿಸಲು ಮಾನವ ಪ್ರಜಾತಿಯಲ್ಲಿ ದೊಡ್ಡ ಗಾತ್ರದ ಮತ್ತು ಸಂಕೀರ್ಣವಾದ ಮಿದುಳು ವಿಕಸನಗೊಂಡಿತು. ಮಾನವರು ತಮಗಿಂತ ದೈಹಿಕವಾಗಿ ಪ್ರಬಲ ಪ್ರಾಣಿಗಳನ್ನು ಎದುರಿಸಿ ಬದುಕುಳಿಯಬೇಕಾಗಿತ್ತು. ಹೋಮೊ ಹಬಿಲಿಸ್ ಪ್ರಜಾತಿಯ ಮಿದುಳಿನ ಗಾತ್ರವು 600 ಘನ ಸೆಂಟಿ ಮೀಟರಗಳಾಗಿತ್ತು (ಸಿ.ಸಿ.). ಚಿಂಪಾಂಜಿಗಳ ಮಿದುಳಿನ ಗಾತ್ರಕ್ಕಿಂತ ಇದು ಸ್ವಲ್ಪ ಮಾತ್ರವೇ ಹೆಚ್ಚಾಗಿತ್ತು. ಹೋಮೊ ಎರೆಕ್ಟಸ್ ಪ್ರಜಾತಿಯ ಮಿದುಳಿನ ಗಾತ್ರವು 800–1100 ಸಿ.ಸಿ., ನಿಯಾಂಡರ್ ಮಾನವನ ಮಿದುಳಿನ ಗಾತ್ರ 1200–1900 ಸಿ,ಸಿ. ಹಾಗು ಇಂದಿನ ಹೋಮೊ ಸೇಪಿಯನ್ಸ್ (ಜಾಣ ಮಾನವನ) ಮಿದುಳಿನ ಗಾತ್ರ ಸುಮಾರು 1400 ಸಿ.ಸಿ. ಇದು ಚಿಂಪಾಂಜಿಯ ಅಥವಾ ಗೋರಿಲ್ಲಾ ಮಿದುಳಿನ ದುಪ್ಪಟ್ಟು ಗಾತ್ರಕ್ಕಿಂತ ಹೆಚ್ಚು. ಮಿದುಳಿನ ಗಾತ್ರದ ವೃದ್ಧಿಯಿಂದಾಗಿ ದೃಷ್ಟಿ ಸುಧಾರಣೆ, ನೇರ ಅಂಗವಿನ್ಯಾಸ, ದ್ವಿಪಾದ ಚಲನೆ, ಆಯುಧಗಳ (ಉಪಕರಣಗಳು), ಬೆಂಕಿಯ ಉಪಯೋಗ, ಯೋಜಿತ ಬೇಟೆ, ಆಹಾರ ಸಂಗ್ರಹಣೆ, ಭಾಷೆ, ಮುಂತಾದವು ಸಾಧ್ಯವಾಯಿತು. ಈ ಚಟುವಟಿಕೆಗಳು ಮೆದುಳಿನ ಗಾತ್ರದ ವೃದ್ಧಿಗೆ ಸಹಾಯ ಮಾಡಿದವು.

ಇಂದಿನ ಮಾನವ ಅಂದರೆ ಹೋಮೊ ಸೇಪಿಯನ್ಸ್‌ನ ಮಿದುಳಿನ ಗಾತ್ರವು ಸುಮಾರು 1400 ಸಿ.ಸಿ. ಇದು ನಿಯಾಂಡರ್ ಮಾನವನ ಮಿದುಳಿನ ಗಾತ್ರಕ್ಕಿಂತ ಕಡಿಮೆ. ಇದು ಸಹ ವಿಕಸನ ಕ್ರಿಯೆಯಾಗಿದೆ. ನಿಯಾಂಡರ್ ಮಾನವನ ಮಿದುಳು 1200–1900 ಸಿ.ಸಿ. ಇಷ್ಟು ದೊಡ್ಡ ಮಿದುಳು ಆಹಾರದ ಕೊರತೆಯ ಸಮಯದಲ್ಲಿ ಹೆಚ್ಚು ಆಹಾರಾಂಶಗಳನ್ನು (Calorie) ಮತ್ತು ಅಮೈನೊ ಅಮ್ಲಗಳನ್ನು (Amino acids) ಕಬಳಿಸುತ್ತಿತ್ತು. ಅಲ್ಲದೆ ಮಿದುಳಿನ ಗಾತ್ರದ ಏರಿಕೆಯು ಒಂದು ನಿರ್ದಿಷ್ಟ ಗಾತ್ರದ ನಂತರ ಅನುಪಯುಕ್ತವಾಗಿ ಕೇವಲ ಶಕ್ತಿಯ ವ್ಯಯ ಮಾತ್ರವೇ ಆಗುತ್ತಿತ್ತು. ಹೀಗೆ ಮಿದುಳು ತನ್ನ ವಿಕಾಸದಲ್ಲಿ ಅನುಕೂಲಕರ ಸ್ಥಿತಿಗೆ ಅನುಗುಣವಾಗಿ ಹೋಮೊ ಸೇಪಿಯನ್ಸ್‌ನಲ್ಲಿ ಸಮತೋಲನಗೊಂಡಿತು.

3. ಆಹಾರ ಹಾಗು ಆಶ್ರಯ ತಾಣ

ಎ) **ಹೋಮಿನಾಯ್ಡ್**ಗಳು ಮರಗಳ ಮೇಲೆ ಜೀವಿಸುತ್ತಿದ್ದವು. ಗಿಡಮರಗಳು ಇವುಗಳಿಗೆ ಪರಭಕ್ಷಕಗಳಿಂದ ರಕ್ಷಣೆ ನೀಡುವ ಆಶ್ರಯ ತಾಣಗಳಾಗಿದ್ದವು. ಹೋಮಿನಾಯ್ಡ್‌ಗಳು ಬೀಜಗಳು, ಹಣ್ಣುಗಳು, ಗಡ್ಡೆಗಳು, ಮುಂತಾದ ಆಹಾರವನ್ನು ಸಂಗ್ರಹಿಸುತ್ತಿದ್ದವು. ಇವು ಮಾಂಸಾಹಾರಿಗಳಾಗಿರಲಿಲ್ಲ.

ಬಿ) **ಹೋಮಿನಿಡ್**ಗಳು ಭೂಮಿಗೆ (ನೆಲ) ಹೊಂದಿಕೊಳ್ಳಲು ಆರಂಭಿಸಿದವು. ವಾಯುಗುಣ (ಶೀತಯುಗ / ಹಿಮಯುಗ) ಬದಲಾವಣೆಯು ಅರಣ್ಯಗಳನ್ನು ಕುಗ್ಗಿಸಿ ಬಯಲು, ಹುಲ್ಲುಗಾವಲು ಮತ್ತು ಮರುಭೂಮಿ ಪ್ರದೇಶಗಳನ್ನು ಹೆಚ್ಚಿಸಿತು. ಇದರಿಂದ ಆಹಾರ ಸಂಗ್ರಹಿಸಲು ಮರಗಿಡಗಳನ್ನು ಬಿಟ್ಟು ನೆಲದ ಮೇಲೆ ಬರುವುದು ಅನಿವಾರ್ಯವಾಯಿತು. ಮೊದಮೊದಲು ಅತಿ ಕಡಿಮೆ ಅವಧಿ ನೆಲದ ಮೇಲೆ ಕಳೆಯುತ್ತಿದ್ದ ಹೋಮಿನಿಡ್‌ಗಳು ಕ್ರಮೇಣ ದೀರ್ಘಾವಧಿಗೆ ಹೊಂದಿಕೊಳ್ಳಲಾರಂಭಿಸಿದವು. ಹೀಗೆ ನೆಲದ ಜೀವನಕ್ಕೆ ಹೊಂದಿಕೊಂಡ ಹೋಮಿನಿಡ್‌ಗಳು ಗುಹೆಗಳು ಮತ್ತು ವಿಸ್ತರಿಸಿದ ಬಂಡೆಗಳನ್ನು ಆಶ್ರಯ ತಾಣಗಳನ್ನಾಗಿ ಮಾಡಿಕೊಂಡವು. ಈ ತಾಣಗಳು ಅವುಗಳಿಗೆ ತಕ್ಕಮಟ್ಟಿಗೆ ಸೂರ್ಯ, ಮಳೆ, ಗಾಳಿ ಹಾಗು ಪರಭಕ್ಷಕಗಳಿಂದ ರಕ್ಷಣೆ ನೀಡಿದವು. ನಿಯಾಂಡರ್ ಮಾನವ ಗುಹೆಗಳನ್ನು ಆಶ್ರಯಿಸಿದ ಮೊದಲ ಮಾನವ ಪ್ರಜಾತಿ. ಆಹಾರದ ಕೊರತೆಯು ಅಹಾರ ಸಂಗ್ರಹಣೆಯ ಜೊತೆ ಜೊತೆಗೆ ಸ್ವಾಭಾವಿಕವಾಗಿ ಸತ್ತ ಪ್ರಾಣಿಗಳನ್ನು ಇಲ್ಲವೆ ಪರಭಕ್ಷಕಗಳು ಕೊಂದು ತಿಂದು ಉಳಿಸಿದ ಆಹಾರವನ್ನು ಬಳಸಲಾರಂಭಿಸಿದವು. ಹೀಗೆ ಸತ್ತ ಪ್ರಾಣಿಗಳನ್ನು ಅರಸಲು ನೆಲದ ಮೇಲೆ ಹೆಚ್ಚು ಹೆಚ್ಚು ದೂರ ಕ್ರಮಿಸಬೇಕಾಗತೊಡಗಿತು. ಈ ಚಟುವಟಿಕೆಗಳು ನೇರ ಅಂಗವಿನ್ಯಾಸ ಮತ್ತು ದ್ವಿಪಾದ ಚಲನೆಯನ್ನು ಅಭಿವೃದ್ಧಿಪಡಿಸಿತು. ಬದುಕುಳಿಯಲು ಇದು ಅವಶ್ಯಕವಾಗಿತ್ತು.

ಹೋಮೊ ನಿಯಾಂಡರ್ತೆಲೆನ್ಸಿಸ್ (Homo Neanderthalensis)– 1856ರಲ್ಲಿ ಜರ್ಮನಿಯ ನಿಯಾಂಡರ್ ಕಣಿವೆಯಲ್ಲಿ ಜೊಹಾನ್ ಕಾರ್ಲ್ ಫುಲರಾಟ್‌ನಿಂದ ಶೋಧಿಸಲ್ಪಟ್ಟಿತು, ಅತ್ಯಾಧುನಿಕ ಸಲಕರಣೆಗಳೊಂದಿಗೆ (ಅಂದಿನವರೆಗಿನ ಮಾನವ ಪ್ರಜಾತಿಗಳಿಗೆ ಹೋಲಿಸಿದಾಗ) ದೊರೆತ ಈ ಪಳಿಯುಳಿಕೆ 'ನಿಯಾಂಡರ್ ಮಾನವ' (Neander Man) ಎಂದು ಪ್ರಸಿದ್ಧವಾಗಿದೆ. ಇದು ಇಂದಿನ ಮಾನವ ಪ್ರಜಾತಿಗೆ ಹತ್ತಿರದ ಪ್ರಜಾತಿಯಾಗಿದ್ದು ಗುಹೆಗಳನ್ನು ಆಶ್ರಯಿಸಿದ ಮೊದಲ ಪ್ರಜಾತಿಯಾದ್ದರಿಂದ 'ಗುಹಾ ಮಾನವ' (Cave Man) ಎಂದು ಸಹ ಕರೆಯಲಾಗಿದೆ. ಬೆಂಕಿಯನ್ನು ಆಹಾರ ಬೇಯಿಸಲು ಮತ್ತು ಬೆಚ್ಚಗಿರಲು ಉಪಯೋಗಿಸಲು ಕಲಿತಿದ್ದ ನಿಯಾಂಡರ್ ಮಾನವ. ಸತ್ತವರನ್ನು ಹೂಳುವುದು ಹಾಗು ಅದನ್ನು ಗುರುತು ಮಾಡುತ್ತಿದ್ದ ಈ ಪ್ರಜಾತಿಯು ಮಾನವ ಸಂಸ್ಕೃತಿಯ ಹರಿಕಾರ ಪ್ರಜಾತಿ.

ಸಿ) **ಹೋಮಿನಿನ್**ಗಳು ಅಂದರೆ ಆರ್ಕಾಯಿಕ್ ಮಾನವ ಪ್ರಜಾತಿ. ಅವು ಆಹಾರ ಸಂಗ್ರಹಣೆ ಮತು ಸತ್ತಪ್ರಾಣಿಗಳ ಸಂಗ್ರಹದ ಜೊತೆಗೆ ಯೋಜಿತವಾದ ಬೇಟೆ ಮತ್ತು ಮೀನು ಹಿಡಿಯುವುದನ್ನು ಆರಂಭಿಸಿದವು. ಯೋಜಿತ ಬೇಟೆ ಹಾಗು ದೊಡ್ಡ ಪ್ರಾಣಿಗಳನ್ನು ವಧಿಸಿರುವ ಅತ್ಯಂತ ಪ್ರಾಚೀನ ಕುರುಹುಗಳು ಎರಡು ಸ್ಥಳಗಳಲ್ಲಿ ಕಂಡು ಬಂದಿವೆ. 1) ಇಂಗ್ಲೆಂಡಿನ ಬಾಕ್ಸಗ್ರೋವ್ (Boxgrove) – 500,000 ಮತ್ತು 2) ಜರ್ಮನಿಯ ಷಾನಿಂಜೆನ್ (Schoningen) – 400,000. ವರ್ಷಗಳ ಹಿಂದೆ ಯೋಜಿತವಾದ ಬೇಟೆಗೆ ಆಯುಧಗಳನ್ನು ಅಭಿವೃದ್ಧಿಪಡಿಸುವ ಹಾಗು ಸಹವರ್ತಿಗಳ ಸಹಯೋಗದ ಅವಶ್ಯಕತೆ ಇತ್ತು. ಏಕೆಂದರೆ ಬೇಟೆಯಾಡಬೇಕಿದ್ದ ಪ್ರಾಣಿಗಳು ಬೇಟೆಯಾಡುವವರಿಗಿಂತ ದೊಡ್ಡ, ವೇಗ ಹಾಗು ಬಲಿಷ್ಟವಾಗಿದ್ದವು. ಯೋಜಿತ ಬೇಟೆ ಹಾಗು ಆಯುಧಗಳನ್ನು ಮಾಡುವ ಕ್ರಿಯೆಯು ಮಿದುಳನ್ನು ಉತ್ತೇಜಿಸಿ ಮಿದುಳಿನ ಗಾತ್ರ ಹೆಚ್ಚಳಿಕೆಗೆ ಕಾರಣವಾಯಿತು. ಅಂತೆಯೇ ಮಿದುಳಿನ ಗಾತ್ರದ ಹೆಚ್ಚಳವು ಸುಧಾರಿತ ಯೋಜನೆ ಹಾಗು ಆಯುಧ ನಿರ್ಮಿಸಲು ಕಾರಣವಾಯಿತು.

ಹೆಚ್ಚಿನ ಆಹಾರ ದೊರೆಯುತ್ತಿದ್ದ ನದಿ ಹಾಗು ಕೆರೆಕೊಳ್ಳಗಳಂತಹ ಸ್ಥಳಗಳಿಗೆ ಮೇಲಿಂದ ಮೇಲೆ ಭೇಟಿ

ನೀಡಲಾರಂಭಿಸಿದ ಆರ್ಕಾಯಿಕ್ ಮಾನವರು, ಅವುಗಳ ಸಮೀಪ ಆಶ್ರಯಕ್ಕಾಗಿ ಯಾವುದೇ ಗುಹೆಗಳು ಇಲ್ಲವೇ ವಿಸ್ತರಿಸಿದ ಬಂಡೆಗಳು ದೊರೆಯದೇ ಹೋದಾಗ ದೊಡ್ಡ ಪ್ರಾಣಿಗಳ ಅಸ್ಥಿಪಂಜರ, ಕಟ್ಟಿಗೆ, ಕಲ್ಲು, ಹುಲ್ಲು ಮುಂತಾದವನ್ನು ಉಪಯೋಗಿಸಿ ಆಶ್ರಯತಾಣಗಳನ್ನು ಬಯಲಲ್ಲಿ ನಿರ್ಮಿಸಲು ಆರಂಭಿಸಿದರು. ಹೀಗೆ ಮಾನವ ಪ್ರಜಾತಿಯ ಪಯಣವು ಮರಗಳ ಮೇಲೆ ಆರಂಭವಾಗಿ, ಗುಹೆಗಳಲ್ಲಿ ಮುಂದುವರೆದು ಬಯಲುಗಳಲ್ಲಿ ಕಟ್ಟಡಗಳನ್ನು ನಿರ್ಮಿಸುವ ಹಂತಕ್ಕೆ ಬಂದು ತಲುಪಿತು.

ಐರ್ಲೆಂಡಿನ ಪೋಲ್ನಾಬೊರ್ನ್ ಡಾಲ್ಮೆನ್‌ನಲ್ಲಿ ದೊರೆತಿರುವ ಹೋಮಿನನ ಆಶ್ರಯ ತಾಣ

4. ದ್ವಿಪಾದ ಚಲನೆ. (Bipedalism)

ಹೋಮಿನಾಯ್ಡ್‌ಗಳು ಚತುಷ್ಪಾದಿಗಳಾಗಿದ್ದವು ಅಂದರೆ ನಾಲ್ಕು ಕಾಲುಗಳನ್ನು ಉಪಯೋಗಿಸಿ ಚಲಿಸುತ್ತಿದ್ದವು. ಆದರೆ ಮುಂಗಾಲುಗಳು ಸಡಿಲವಾಗಿ ಹಾಗು ಬಾಗಿಸಲು (Flexible) ಬರುವಂತಿತ್ತು. ಹೋಮಿನಿಡ್‌ಗಳು ಕ್ರಮೇಣ ನೇರ ಅಂಗರಚನೆಯನ್ನು ಹೊಂದಿದವು. ಹೋಮಿನಿನ್‌ಗಳು ದ್ವಿಪಾದ ಚಲನೆಯನ್ನು ರೂಢಿಸಿಕೊಂಡವು. ದ್ವಿಪಾದ ಚಲನೆ ಎಂದರೆ ಎರಡು ಕಾಲುಗಳನ್ನು ಉಪಯೋಗಿಸಿ ನಡೆಯುವುದು ಇಲ್ಲವೇ ಓಡುವುದು. ದ್ವಿಪಾದ ಚಲನೆಗೆ ಅನುಕೂಲಕರವಾಗಿ ಅಸ್ಥಿಪಂಜರದ ವಿನ್ಯಾಸ ಹಾಗು ಸ್ನಾಯುಗಳು ಸಹ ಮಾರ್ಪಾಟುಗೊಂಡಿತು. ದ್ವಿಪಾದ ಚಲನೆ ಮುಂಗಾಲುಗಳನ್ನು ಸ್ವತಂತ್ರಗೊಳಿಸಿತು. ಹೀಗೆ ಸ್ವತಂತ್ರಗೊಂಡ ಮುಂಗಾಲುಗಳು ನಿಧಾನವಾಗಿ ಸೂಕ್ಷ್ಮ ಹಿಡಿತ ಮತ್ತು ಮುಷ್ಠಿ ಹಿಡಿತವನ್ನು ಅಭಿವೃದ್ಧಿಸಿಕೊಂಡು ಕೈಗಳಾಗಿ ಪರಿವರ್ತಿತವಾದವು. ಇದು ಬೇಟೆಯಾಡಲು ಹಾಗು ಪರಭಕ್ಷಕಗಳಿಂದ ರಕ್ಷಿಸಿಕೊಳ್ಳಲು, ಆಯುಧಗಳನ್ನು ತಯಾರಿಸಲು ಮತ್ತು ಆಯುಧಗಳನ್ನು ಉಪಯೋಗಿಸಲು ಸಹಕಾರಿಯಾಯಿತು. ದ್ವಿಪಾದ ಚಲನೆಯು ದೂರದವರೆಗೂ ದೃಷ್ಟಿಹರಿಸಲು ಹಾಗು ದೂರ ಪ್ರಯಾಣವನ್ನು ಹೆಚ್ಚು ಶ್ರಮವಿಲ್ಲದೆ ಕ್ರಮಿಸಲು ಸಹ ಸಹಾಯಕವಾಯಿತು.

ಚಟುವಟಿಕೆ 3: ಸೂಕ್ಷ್ಮ ಹಿಡಿತ ಮತ್ತು ಮುಷ್ಠಿ ಹಿಡಿತದ ಚಟುವಟಿಕೆಗಳ ಪಟ್ಟಿ ಸಿದ್ದ ಪಡಿಸಿ, ಅಂತೆಯೇ ನಾವು ಮಾಡುವ ದೈನಂದಿನ ಕೆಲಸಗಳನ್ನು ವಾನರಗಳು ಸೂಕ್ಷ್ಮ ಹಿಡಿತ ಮತ್ತು ಮುಷ್ಠಿ ಹಿಡಿತವಿಲ್ಲದ ಕಾರಣ ಮಾಡಲಾಗುವುದಿಲ್ಲ ಎಂಬುದನ್ನು ಗಮನಿಸಿ

5. ಉಪಕರಣಗಳ ತಯಾರಿಕೆ

ಉಪಕರಣಗಳ (ಆಯುಧಗಳು) ಉಪಯೋಗ ಕೇವಲ ಮಾನವರಿಗೆ ಸೀಮಿತವಾಗಿರದೆ ಕೆಲವು ವಾನರಗಳು ಗಟ್ಟಿಯಾದ ಕಾಯಿಗಳು ಮತ್ತು ಬೀಜಗಳನ್ನು ಒಡೆಯಲು ಕಲ್ಲುಗಳನ್ನು ಉಪಕರಣಗಳನ್ನಾಗಿ ಬಳಸುತ್ತವೆ.

ಆದರೆ ಮಾನವನ ಉಪಕರಣಗಳ ಬಳಕೆಯು ವಾನರಗಳ ಉಪಕರಣ ಬಳಕೆಗಿಂತ ಬಹಳ ಸುಧಾರಿತವಾದುದಾಗಿದೆ. ಉಪಕರಣಗಳನ್ನು ನಿರ್ಮಿಸುವ ಮತ್ತು ಬಳಸುವ ಪ್ರಕ್ರಿಯೆಗೆ ಹೆಚ್ಚಿನ ಬುದ್ಧಿಶಕ್ತಿಯ ಅವಶ್ಯಕತೆಯಿತ್ತು. ಕಟ್ಟಿಗೆ, ಮೂಳೆ ಮತ್ತು ಶಿಲೆಗಳನ್ನು ಉಪಯೋಗಿಸಿ ಉಪಕರಣಗಳು ತಯಾರಿಸಲ್ಪಡುತ್ತಿತ್ತು. ಉಪಕರಣಗಳನ್ನು ಸಾಮಾನ್ಯವಾಗಿ ಬೇಟೆಗಾಗಿ ಹಾಗು ಪರಭಕ್ಷಕಗಳಿಂದ ರಕ್ಷಿಸಿಕೊಳ್ಳಲು ಬಳಸಲಾಗುತ್ತಿತ್ತು. ಕಲ್ಲಿನ ಉಪಕರಣಗಳ ಬಳಕೆಯನ್ನು ಇತಿಹಾಸದಲ್ಲಿ 'ಶಿಲಾಯುಗ' ಎಂದು ಅಭ್ಯಸಿಸಲಾಗುತ್ತಿದೆ. ಉಪಕರಣಗಳ ತಯಾರಿಕೆ ಮತ್ತು ಅವುಗಳ ಬಳಕೆ ಮುಂಗಾಲುಗಳು ಕೈಗಳಾಗಿ ಪರಿವರ್ತಿತವಾಗಲು ಹಾಗು ಮಿದುಳಿನ ಗಾತ್ರದ ಏರಿಕೆಗೂ ಕಾರಣವಾಯಿತು. ನಮಗೆ ದೊರೆತಿರುವ ಅತ್ಯಂತ ಪುರಾತನ ಉಪಕರಣಗಳು ಎಂದರೆ 2.6 ಮಿಲಿಯ ವರ್ಷ ಪೂರ್ವದ ಇಥಿಯೋಪಿಯಾದ 'ಓಲ್ಡವಾನ್ ಶಿಲಾಯುಧಗಳು' (Oldwan Stone tools). ಈ ಉಪಕರಣಗಳನ್ನು ತಯಾರಿಸುವ ನೈಪುಣ್ಯತೆಯನ್ನು ಆಧರಿಸಿ ಪ್ರಾಚೀನ (Paleolithic), ಮಧ್ಯಕಾಲೀನ (Mesolithic) ಹಾಗು ನವ (Neolithic) ಶಿಲಾಯುಗಗಳೆಂದು ವರ್ಗೀಕರಿಸಲಾಗಿದೆ. ಅಂತೆಯೆ ಉಪಕರಣಗಳನ್ನು ಲೋಹಗಳಿಂದ ತಯಾರಿಸುವಾಗ ಸಂಬಂಧಿಸಿದ ಲೋಹ ಯುಗವಾಗಿ ವರ್ಗೀಕರಿಸಲಾಗಿದೆ. ಆಸ್ಟ್ರಲೋಪಿಥಿಕಸ್ ನೈಸರ್ಗಿಕವಾಗಿ ದೊರೆಯುವ ಶಿಲೆಗಳನ್ನು ಆಯುಧವಾಗಿ ಮೊದಲಿಗೆ ಬಳಸಿದ ಪ್ರಜಾತಿಯಾದರೆ ನೈಸರ್ಗಿಕ ಶಿಲೆಗಳನ್ನು ಆಯುಧಗಳನ್ನಾಗಿ ತಯಾರಿಸಿ ಬಳಸಿದ ಪ್ರಜಾತಿಯು ಹೋಮೊ ಹಬಿಲಿಸ್ ಎಂದು ಗುರುತಿಸಲಾಗಿದೆ.

ಆಸ್ಟ್ರಲೋಪಿಥಿಕಸ್ (Australopithecus) ಎಂದರೆ ದಕ್ಷಿಣದ ವಾನರ. ಈ ಪ್ರಜಾತಿಯು ಸುಮಾರು 3.2 ಮಿಲಿಯ ವರ್ಷಗಳ ಪೂರ್ವದಲ್ಲಿ ಅಸ್ತಿತ್ವದಲ್ಲಿತ್ತು. ಈ ವಾನರ ಆರಂಭಿಕ ಮಾನವ ಪ್ರಜಾತಿಗೆ ಅತಿ ಹತ್ತಿರದ ಹೋಲಿಕೆಯನ್ನು ಹೊಂದಿತ್ತು. ಆಸ್ಟ್ರಲೋಪಿಥಿ ಕಸ್ ಪ್ರಜಾತಿಯ ಪಳಿಯುಳಿಕೆಗಳು ಟಾಂಜೆನಿಯಾ, ಇಥಿಯೋಪಿಯಾ ಹಾಗು ದಕ್ಷಿಣ ಆಫ್ರಿಕಾಗಳಲ್ಲಿ ಶೋಧಿಸಲ್ಪಟ್ಟವೆ. ಇವುಗಳ ಮಿದುಳಿನ ಗಾತ್ರವು ಕೇವಲ 500 ಘನ ಸೆಂಟಿ ಮೀಟರ್‌ಗಳು. ಇವು ನೇರ ಅಂಗವಿನ್ಯಾಸವನ್ನು ಹೊಂದಿದ್ದು ಎರಡು ಕಾಲುಗಳ ಮೇಲೆ ನಡೆಯಲು ಆರಂಭಿಸಿದ್ದವು. ಹೋಮೊ ಪ್ರವರ್ಗಕ್ಕೆ ಇವು ಅತಿ ಹತ್ತಿರದ ಬಂಧುಗಳು.

ಹೋಮೊ ಹಬಿಲಿಸ್



ಹೋಮೊ ಹಬಿಲಿಸ್ ಪುನರ್ ರಚನೆ

ಹೋಮೊ ಹಬಿಲಿಸ್ (Homo habilis) ಹೋಮೊ ಪ್ರವರ್ಗದ ಮೊದಲ ಪ್ರಜಾತಿಯಾಗಿದೆ. ಇದು ಸುಮಾರು 2 ಮಿಲಿಯ ವರ್ಷಗಳ ಪೂರ್ವದಲ್ಲಿ ಜೀವಿಸಿತ್ತು. ಈ ಪ್ರಜಾತಿಯ ಪಳಿಯುಳಿಕೆ ಟಾಂಜೆನಿಯದ ಓಲ್ಡುವಾಯಿ ಗಾರ್ಜ್‌ನಲ್ಲಿ ಲೂಯಿಸ್ ಲೇಖಿ ಮತ್ತು ಅವನ ತಂಡದಿಂದ ಶೋಧಿಸಲ್ಪಟ್ಟಿತು. ಹೋಮೊ ಹಬಿಲಿಸ್ ಪ್ರಜಾತಿಯನ್ನು 'ಕೈ ಮಾನವ' ಎಂದು ಕೈಗಳ ಉತ್ತಮ ವಿಕಸನದಿಂದಾಗಿ ಕರೆಯಲಾಗಿದೆ. ಈ ಪ್ರಜಾತಿಯು ಬೇಟೆಗಾಗಿ ಉಪಕರಣಗಳನ್ನು ತಯಾರಿಸಲು ಆರಂಭಿಸಿತು.



ಹೋಮೊ ಎರೆಕ್ಟಸ್ (Homo Erectus) ಎಂದರೆ 'ನೇರ ಅಂಗವಿನ್ಯಾಸ'ದ ಮಾನವ. ಈ ಪ್ರಜಾತಿಯು ಸುಮಾರು 1.5 ಮಿಲಿಯ ವರ್ಷಗಳ ಪೂರ್ವದಲ್ಲಿ ಜೀವಿಸುತ್ತಿದ್ದವು. ಆಸ್ಟ್ರಲೋಪಿಥಿಕಸ್ ಹಾಗು ಹೋಮೊ ಎರೆಕ್ಟಸ್‌ಗಳೆರಡು ನೇರ ಅಂಗವಿನ್ಯಾಸವನ್ನು ಹೊಂದಿದ್ದವು ಆದರೆ ಸಂಪೂರ್ಣ ನೇರ ಅಂಗರಚನೆಯು ಹೋಮೊ ಎರೆಕ್ಟಸ್ ಪ್ರಜಾತಿ ಹೊಂದಿತ್ತು. ಈ ಪ್ರಜಾತಿಯ ಹಲವು ಜೀವಿಗಳು ಆಫ್ರಿಕಾದಿಂದ ಯೂರೋಪ್ ಹಾಗು ಏಷ್ಯಗಳಿಗೆ ವಲಸೆಹೋದವು. ಆದರೆ ಈ ಪ್ರಜಾತಿಯು ಸುಮಾರು 500,000 ವರ್ಷಗಳ ಹಿಂದೆ ಅಳಿದು ಹೋಯಿತು.

6. ಭಾಷೆ

ಯೋಜಿತ ಬೇಟೆಗೆ ಸಹಕಾರದ ಅವಶ್ಯಕತೆಯಿತ್ತು. ಇದಕ್ಕಾಗಿ ಆರಂಭಿಕ ಮಾನವರು ಸಂಜ್ಞೆಗಳನ್ನು ಹಾಗು ಕ್ರಮೇಣ ಎರಡು ಅಥವಾ ಮೂರು ಶಬ್ದಗಳ ಉಚ್ಚಾರಗಳನ್ನು ಮಾಡಲಾರಂಭಿಸಿದರು. ಈ ರೀತಿಯ ಅಪಕ್ವ ಸಂಪರ್ಕ ನಿಧಾನವಾಗಿ ಸುಧಾರಣೆಗೊಳ್ಳುತ್ತಾ ಕಾಲಕ್ರಮೇಣ ವಿವಿಧ ಉಚ್ಚಾರಣೆಗಳು ಮತ್ತು ಶಬ್ದಗಳನ್ನು ರೂಢಿಸಿಕೊಳ್ಳುತ್ತಾ ಭಾಷೆಯ ಉಗಮಕ್ಕೆ ಕಾರಣರಾದರು. ಮಿದುಳಿನ ಗಾತ್ರದ ಏರಿಕೆಯು ಭಾಷೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿತು. ಭಾಷೆಯ ಅಭಿವೃದ್ಧಿಗೆ ಅಲ್ಪಾವಧಿ ಸ್ಮೃತಿಯ ಅವಶ್ಯಕತೆ ಇತ್ತು. ಹಲವು ಶಬ್ದ, ಆಲೋಚನೆ, ತರ್ಕ, ಮತ್ತು ಸಂಜ್ಞೆಗಳ ಕ್ರಮಬದ್ಧ ಸಂಯೋಜನೆಗಳನ್ನು ಮಾನವನ ಮಿದುಳು ನೆನಪಿಟ್ಟುಕೊಂಡು ಬಳಸಲಾರಂಭಿಸಿದ್ದರಿಂದ ಭಾಷೆ ಉಗಮಿಸಿತು. ಮಾನವನ ಅತಿ ಹತ್ತಿರದ ದಾಯಾದಿ ಪ್ರಭೇದವಾದ ಚಿಂಪಾಂಜಿ ಯಾವುದೇ 2–3 ಶಬ್ದಗಳು, ಸಂಜ್ಞೆಗಳು, ತರ್ಕ, ಆಲೋಚನೆಗಳು ಅಥವಾ ಚಿಹ್ನೆಗಳನ್ನು ನೆನಪಿಡುವ ಸಾಮರ್ಥ್ಯವನ್ನು ಹೊಂದಿಲ್ಲ. ಭಾಷೆಯ ಬಳಕೆಯು ಮಿದುಳನ್ನು ಉದ್ದೀಪಿಸಿ ಮತ್ತಷ್ಟು ವಿಕಸನಕ್ಕೆ ಕಾರಣವಾಯಿತು.

7. ಪಶುಪಾಲನೆ ಮತ್ತು ಕೃಷಿಯ ಆರಂಭ

ಮೊದಲಿಗೆ ಪಶುಪಾಲನೆ ಪ್ರಾರಂಭವಾಗಿ ಆನಂತರ ಕೃಷಿ ಚಟುವಟಿಕೆಗಳು ನಡೆದವು. ಆಹಾರ ಸಂಗ್ರಹಕರು ಹಾಗು ಬೇಟೆಗಾರರಾಗಿದ್ದ ಮಾನವರು 'ಆಹಾರ ಬೆಳೆಯುವವರು' ಅಥವಾ 'ಆಹಾರೋತ್ಪಾದಕ'ರಾದರು. ಹಿಮಯುಗದಂತಹ ಪ್ರತಿಕೂಲ ವಾಯುಗುಣದ ಪ್ರಭಾವವನ್ನು ಪಶುಪಾಲನೆ ಮತ್ತು ಕೃಷಿ ಚಟುವಟಿಕೆಗಳಿಂದ ಎದುರಿಸಿದರು. ಪಶುಪಾಲನೆಯಿಂದಾಗಿ ಆಹಾರವು ಸದಾ ಅವರೊಂದಿಗಿತ್ತು.

ನಾಯಿಯು ಮಾನವರಿಂದ ಪಳಗಿಸಲ್ಪಟ್ಟ ಮೊದಲ ಪ್ರಾಣಿ ಎಂದು ನಂಬಲಾಗಿದೆ. ನಾಯಿಯು ಬೇಟೆಗಾರನಾಗಿದ್ದ ಮಾನವನ ಆಶ್ರಯ ತಾಣಗಳ ಬಳಿ ಮೂಳೆ ಮತ್ತು ಮಾಂಸದ ತುಣುಕುಗಳಿಗಾಗಿ ಸುಳಿಯಲಾರಂಭಿಸಿತು. ಇಬ್ಬರ ನಡುವೆ ಅನುಬಂಧ ಏರ್ಪಟ್ಟಿತು. ಹೀಗೆ ನಾಯಿಯು ಪಳಗಿಸಲ್ಪಟ್ಟಿತು. ಆನಂತರ ಕುರಿ, ಮೇಕೆ, ಹಸು, ಬೆಕ್ಕು, ಒಂಟೆ, ಮತ್ತು ಕುದುರೆಗಳು ಪಳಗಿಸಲ್ಪಟ್ಟವು. ನಾಯಿಗಳು ಮಾನವರಿಗೆ ಬೇಟೆಯಲ್ಲಿ ಸಹಾಯ ಮಾಡಲು ಮತ್ತು ಆಶ್ರಯ ತಾಣಗಳನ್ನು ಕಾಯಲು ಆರಂಭಿಸಿದವು. ಪಶುಪಾಲನೆಯು ಮಾನವರನ್ನು ಅಲೆಮಾರಿಗಳನ್ನಾಗಿಸಿತು. ಪಶುಗಳಿಗೆ ಆಹಾರ ಮತ್ತು ನೀರನ್ನು ಅರಸಿ ಬಹುದೂರ ಕ್ರಮಿಸಲಾರಂಭಿಸಿದರು.

ಮಾನವ ವಿಕಾಸದ ಇತಿಹಾಸದಲ್ಲಿ ಕೃಷಿ ಚಟುವಟಿಕೆಯ ಆರಂಭವನ್ನು ಕ್ರಾಂತಿಕಾರಿ ಬದಲಾವಣೆ ಎಂದು ಅಭಿಪ್ರಾಯಪಡಲಾಗಿದೆ. ಇದು ನವಶಿಲಾಯುಗದ ಪ್ರಮುಖ ಅಂಶವಾಗಿದೆ. ಗೋಧಿ, ಅಕ್ಕಿ, ಸಿರಿಧಾನ್ಯಗಳು

ಮುಂತಾದ ಬೆಳೆಗಳನ್ನು ಬೆಳೆಯಲಾರಂಭಿಸಿದರು. ಕೃಷಿಯು 13000 ವರ್ಷಗಳಿಗಿಂತ ಪೂರ್ವದ ಚಟುವಟಿಕೆಯೇನು ಅಲ್ಲ. ಇದು ಮಾನವನನ್ನು ಕೃಷಿ ಭೂಮಿಯ ಬಳಿ ನೆಲೆಸುವಂತೆ ಮಾಡಿತು. ಈ ನೆಲಸುವಿಕೆ ಗ್ರಾಮಗಳ ಉದಯಕ್ಕೆ ಕಾರಣವಾಯಿತು. ಈ ಗ್ರಾಮ ಹಾಗು ನಗರಗಳು ನಾಗರಿಕತೆಗಳ ತಳಪಾಯಗಳಾದವು.

8. ಕಲೆ

ಕುದುರೆ (ಸಾಶಪೂ 15000–10000.)
ಫಾನ್ಸ್‌ನ ಲಾಸ್ಕಾಕ್ಸ್

ಭಾರತದ ಬಿಂಬೇಟ್ಕ ಬಂಡೆ ಮೇಲಿನ ಚಿತ್ರ
(ವಿಶ್ವ ಪಾರಂಪರಿಕ ತಾಣ) ಮಧ್ಯಪ್ರದೇಶ

ಮೂರ್ತಿಗಳನ್ನು ಮಾಡುವ ಕಲೆ, ಚಿತ್ರಕಲೆ, ಮುಂತಾದವು ಮಾನವ ವಿಕಾಸದ ಕೊನೆಯ ಹಂತದಲ್ಲಾಯಿತು. ಏಷ್ಯ, ಯುರೋಪ್ ಹಾಗು ಆಫ್ರಿಕಾದ ಅನೇಕ ಸ್ಥಳಗಳಲ್ಲಿ ಕಲಾಕೃತಿಗಳು ದೊರೆತಿವೆ. ಆದರೆ ಅವುಗಳು 40,000 ವರ್ಷಗಳಿಗಿಂತ ಹಳೆಯವಲ್ಲ. ಚಿಕ್ಕ ಆಕೃತಿಗಳು ಹಾಗು ಅಲಂಕಾರಿಕ ವಸ್ತುಗಳನ್ನು ಕಲ್ಲು, ಮೂಳೆ ಅಥವಾ ಸಾರಂಗದ ಕೊಂಬುಗಳಿಂದ ಕೊರೆದು ಮಾಡಲಾಗುತ್ತಿತ್ತು. ಗುಹೆಗಳಲ್ಲಿ ಸಾಮಾನ್ಯವಾಗಿ ಪ್ರಾಣಿಗಳ ಅಥವಾ ಬೇಟೆಯಾಡುತ್ತಿರುವ ಚಿತ್ರಗಳನ್ನು ರಚಿಸಲಾಗಿವೆ. ನೀರಿನಲ್ಲಿ ಇದ್ದಿಲನ್ನು ಕರಗಿಸಿದ ಮಿಶ್ರಣ, ರಕ್ತ, ಪ್ರಾಣಿಗಳ ಕೊಬ್ಬು, ಮುಂತಾದವುಗಳನ್ನು ಚಿತ್ರರಚನೆಯಲ್ಲಿ ಬಣ್ಣಗಳಾಗಿ ಬಳಸಲಾಗುತ್ತಿತ್ತು. ಕಲೆಯು ಅಂದಿನ ಮಾನವರಿಗೆ ಮನರಂಜನೆ, ಶಾಸ್ತ್ರವಿಧಿ ಅಥವಾ ಮಾಂತ್ರಿಕ ಉದ್ದೇಶಗಳಿಗಾಗಿ ಬಳಕೆಯಾಗುತ್ತಿತ್ತು.

ಮಾನವರ ಉಗಮದ ಸ್ಥಳ.

ಆಧುನಿಕ ಮಾನವ ಅಂದರೆ, ಇಂದಿನ ಮಾನವ ಪ್ರಜಾತಿಯು ಎಲ್ಲಿ ಉದಯಿಸಿತು ಎಂಬುದು ಒಂದು ಚರ್ಚೆಯ ವಿಷಯವಾಗಿದೆ. ಈ ಕುರಿತು ಎರಡು ವಿಭಿನ್ನ ಸಿದ್ಧಾಂತಗಳಿವೆ– 1) ಸ್ಥಳಾಂತರ ಸಿದ್ಧಾಂತ ಅಥವಾ ಆಫ್ರಿಕಾ ಉಗಮ ಸಿದ್ಧಾಂತ (The Replacement or African Origin theory) 2) ಪ್ರಾದೇಶಿಕ ಮುಂದುವರಿಕೆ ಸಿದ್ಧಾಂತ (The Regional Continuity theory)

1) ಸ್ಥಳಾಂತರ ಸಿದ್ಧಾಂತ ಅಥವಾ ಆಫ್ರಿಕಾ ಉಗಮ ಸಿದ್ಧಾಂತ

ಈ ಸಿದ್ಧಾಂತದ ಪ್ರಕಾರ ಆಧುನಿಕ ಮಾನವ ಪ್ರಜಾತಿಯು ಅಂದರೆ ಹೋಮೊ ಸೇಪಿಯನ್ಸ್ ಆಫ್ರಿಕಾದಲ್ಲಿ ಆರಂಭಿಕ (ಆರ್ಕಾಯಿಕ್) ಪ್ರಜಾತಿಗಳಿಂದ ವಿಕಸಿಸಿತು. ಆಫ್ರಿಕಾ ತನ್ನ ಪೋಷಣಾತ್ಮಕ ಉಷ್ಣವಲಯದಿಂದಾಗಿ ಹಾಗು ಹೆಚ್ಚಿನ ಮಳೆ ಮತ್ತು ಪ್ರಬಲ ಬೇಸಿಗೆ ಕಾಲಗಳಿಂದಾಗಿ ಮಾನವ ಪ್ರಜಾತಿಯು ಉಗಮಿಸಲು ಸೂಕ್ತ ವಾತಾವರಣವನ್ನು ಒದಗಿಸಿತು. ಹೀಗೆ ಆಫ್ರಿಕಾದಲ್ಲಿ ಉದಯಿಸಿದ ಆಧುನಿಕ ಮಾನವ ಪ್ರಜಾತಿಯು ಜಗತ್ತಿನ ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ಸಮಯಗಳಲ್ಲಿ ವಲಸೆ ಹೋಯಿತು. ಹಾಗೆ ವಲಸೆ ಹೋದ ಆಧುನಿಕ ಮಾನವ ಪ್ರಜಾತಿಯು ಆ ಸ್ಥಳಗಳಲ್ಲಿದ್ದ ಮಾನವರ ತತ್ ಪೂರ್ವಜ ಪ್ರಜಾತಿಗಳನ್ನು ಪಲ್ಲಟಗೊಳಿಸಿ ಪ್ರವರ್ಧಿಸಿದರು. ಆಧುನಿಕ ಮಾನವ ಪ್ರಜಾತಿಯ ಅತ್ಯಂತ ಆರಂಭಿಕ ಪಳಿಯುಳಿಕೆಗಳು ಆಫ್ರಿಕಾದಲ್ಲಿ ದೊರೆತಿರುವುದು ಮತ್ತು ಜಗತ್ತಿನ ಎಲ್ಲ ಮಾನವರ ಅಂಗವಿನ್ಯಾಸ ಮತ್ತು ಶರೀರ ರಚನೆಯ ಸಮರೂಪತೆ ಇದನ್ನು ಪುಷ್ಟೀಕರಿಸುತ್ತದೆ.

2) ಪ್ರಾದೇಶಿಕ ಮುಂದುವರಿಕೆ ಸಿದ್ಧಾಂತ

ಈ ಸಿದ್ಧಾಂತದ ಪ್ರಕಾರ ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಆಧುನಿಕ ಮಾನವ ಪ್ರಜಾತಿ ಆ ಪ್ರದೇಶಗಳಲ್ಲಿದ್ದ ತತ್ ಪೂರ್ವಜ ಮಾನವ ಪ್ರಜಾತಿಗಳಿಂದ ವಿಕಸನ ಹೊಂದಿದವು. ಇದು ಆಫ್ರಿಕಾದಲ್ಲಾದಂತೆ, ಯುರೋಪ್ ಹಾಗು ಏಷ್ಯಾಗಳಲ್ಲಿಯೂ ನಡೆಯಿತು. ಆದರೆ ವಿಕಾಸದ ಗತಿಯು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಜಗತ್ತಿನ ಮಾನವರಲ್ಲಿನ ವಿವಿಧತೆಯು ಈ ಸಿದ್ಧಾಂತಕ್ಕೆ ಪೂರಕ ಪುರಾವೆಯಾಗಿದೆ.

ನಾಗರಿಕತೆಗೆ ಸ್ಥಿತ್ಯಂತರ

ಸುಮಾರು 13,000 ಸಾವಿರ ವರ್ಷ ಪೂರ್ವದವರೆಗೂ ಮಾನವರು ಬೇಟೆಗಾರ – ಆಹಾರ ಸಂಗ್ರಹಕರಾಗಿದ್ದರು. ಇವರು ಚಿಕ್ಕ ಗುಂಪುಗಳಲ್ಲಿ ಜೀವಿಸುತ್ತಿದ್ದರು. ಕೃಷಿ ಚಟುವಟಿಕೆಯು ನವ ಶಿಲಾಯುಗದ ಕ್ರಾಂತಿಗೆ ಕಾರಣವಾಯಿತು. ಈ ಕೃಷಿಯಾಧಾರಿತ ಹೆಚ್ಚಿನ ಆಹಾರ ಉತ್ಪಾದನೆಯು ಮಾನವನ ಸ್ಥಿರ ನೆಲೆಗಳ ಸ್ಥಾಪನೆಗೆ ಸಹಾಯಕವಾಯಿತು. ಪಶುಪಾಲನೆ ಹಾಗು ಉಪಕರಣಗಳ ಬಳಕೆ ಹೆಚ್ಚಾಯಿತು. ಕೃಷಿಯು ವ್ಯಾಪಾರ ಮತ್ತು ಸಹಕಾರವನ್ನು ಪ್ರೋತ್ಸಾಹಿಸಿ ಸಂಕೀರ್ಣ ಸಮಾಜಗಳು ರೂಪುಗೊಂಡವು. ಗ್ರಾಮೀಣ ಹಾಗು ಪುರಾತನ ಮಾನವ ನೆಲೆಗಳು ಸಂಕೀರ್ಣ ನಗರ ಸಮಾಜಗಳಾಗಿ ಪರಿವರ್ತನೆಗೊಂಡವು. ಇಂತಹ ಸಂಕೀರ್ಣ ಸಮಾಜಗಳು ಈಜಿಪ್ತ, ಮೆಸೊಪೊಟೇಮಿಯಾ, ಚೀನಾ, ಸಿಂಧೂ, ಮುಂತಾದ ನಾಗರಿಕತೆಗಳ ಉದಯಕ್ಕೆ ಕಾರಣವಾದವು. ಈ ನಾಗರಿಕತೆಗಳು ತಮ್ಮದೇ ವಿಶಿಷ್ಟ ಸಂಸ್ಕೃತಿಗಳನ್ನೂ ರೂಪಿಸಿಕೊಂಡವು.

ಪದ ಕೋಶ

1. **ಆರ್ಕಾಯಿಕ್** (Archaic) – ಆರಂಭದ, ಇನ್ನೂ ಪೂರ್ಣವಾಗಿ ವಿಕಸನಗೊಳ್ಳದ
2. **ಮುಷ್ಠಿ ಹಿಡಿತ** (Power grip) – ಯಾವುದೇ ವಸ್ತುವನ್ನು ಬಲವಾಗಿ ಹಿಡಿಯಲು ಕೈಯನ್ನು ಮುಷ್ಠಿ ಮಾಡಿ ಹಿಡಿಯುವುದು. ಉದಾಹರಣೆಗೆ ಕಟ್ಟಿಗೆ ಸೀಳಲು ಕೊಡಲಿಯನ್ನು ಹಿಡಿಯಲು ಅಥವಾ ಬಾಗಿಲು ತೆಗೆಯಲು ಬಾಗಿಲಹಿಡಿಯನ್ನು ಹಿಡಿಯಲು, ಮುಂತಾದವು.
3. **ಸೂಕ್ಷ್ಮ ಹಿಡಿತ** (Precision grip) – ಕೈಗಳ ಬೆರಳುಗಳಿಂದ ವಸ್ತುಗಳನ್ನು ಹಿಡಿಯುವುದು. ಉದಾಹರಣೆಗೆ ನೆಲದ ಮೇಲೆ ಬಿದ್ದಿರುವ ಸೂಜಿಯನ್ನು ಎತ್ತಿಕೊಳ್ಳುವ, ಸೂಜಿಗೆ ದಾರವನ್ನು ಪೋಣಿಸುವ ಹಿಡಿತ, ಮುಂತಾದವು.
4. **ಪ್ರಭೇದ / ಜೀವಜಾತಿ / ಪ್ರಜಾತಿ** (Species) – ಸಮ್ಮಿಲನದಿಂದ ಉತ್ತಮ ಸಂತತಿಯನ್ನು ಅಭಿವೃದ್ಧಿ ಪಡಿಸುವ ಜೀವಿಗಳ ಒಂದು ವರ್ಗ.

ಪ್ರಶ್ನೆಗಳು

ಈ ಕೆಳಗಿನ ಪ್ರಶ್ನೆಗಳನ್ನು ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 1 ಅಂಕ)

1. 'ಹ್ಯೂಮನ್' (human) ಪದವು ಯಾವ ಭಾಷೆಯಿಂದ ಬಂದಿದೆ?
2. 'ಹೋಮೊ' (Homo) ಪದದ ಅರ್ಥವೇನು?
3. ಭೂಮಿಯು ಯಾವಾಗ ಉಗಮಿಸಿತು?
4. ಚಾರ್ಲ್ಸ್ ಡಾರ್ವಿನ್ ರಚಿಸಿದ ಕೃತಿ ಯಾವುದು?
5. ಮಾನವರನ್ನು ಹೋಲುವ ಜೀವಿಗಳು ಭೂಮಿಯ ಮೇಲೆ ಯಾವಾಗ ವಿಕಸಿಸಿದವು?
6. ಮೇಲುಕುಟುಂಬ ಹೋಮಿನಾಯ್ಡೆದಿಂದ ಹೋಮೊ ಕುಲವು ಉತ್ಪತ್ತಿಯಾಗಲು ಎಷ್ಟು ವರ್ಷಗಳು ಬೇಕಾದವು?
7. ಹೋಮೊ ಕುಲ ಯಾವಾಗ ಅಸ್ತಿತ್ವಕ್ಕೆ ಬಂದಿತು?
8. ಶಿಲೆಗಳಿಂದ ಆಯುಧಗಳನ್ನು ತಯಾರಿಸಿದ ಪ್ರಥಮ ಮಾನವ ಪ್ರಜಾತಿ ಯಾವುದು?
9. ದ್ವಿಪಾದಚಲನೆ ಎಂದರೇನು?

ಈ ಕೆಳಗಿನ ಪ್ರಶ್ನೆಗಳನ್ನು ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 2 ಅಂಕಗಳು)

1. ಭೂಮಿಯ ಉಗಮ ಹಾಗು ವಿಕಸನದ ಯವುದೇ ಎರಡು ಸಿದ್ಧಾಂತಗಳನ್ನು ತಿಳಿಸಿರಿ.
2. ಭೂಮಿಯ ಹವಾಗುಣ ಮತ್ತು ವಾತಾವರಣ ನಿರ್ಮಿಸಿದ ಎರಡು ಮುಖ್ಯ ಅಂಶಗಳು ಯಾವುವು?
3. ಜೀವದ ಉದಯಕ್ಕೆ ಕಾರಣವಾದ ಎರಡು ರಸಾಯನಿಕಗಳು ಯಾವವು?
4. ಚಾರ್ಲ್ಸ್ ಡಾರ್ವಿನ್ ಪ್ರಸ್ತಾಪಿಸಿದ ಎರಡು ಸಿದ್ಧಾಂತಗಳು ಯಾವುವು?
5. ಯಾವ ಎರಡು ಪ್ರಾಣಿಗಳು ಮಾನವನ ಹತ್ತಿರದ ಸಂಬಂಧಿಗಳೆಂದು ಪರಿಗಣಿಸಲಾಗಿದೆ?
6. ದೊಡ್ಡ ಪ್ರಾಣಿಗಳ ಯೋಜಿತ ಬೇಟೆ ಹಾಗು ವಧಿಸಲ್ಪಟ್ಟಿರುವ ಆರಂಭಿಕ ಕುರುಹುಗಳು ಎಲ್ಲಿ ದೊರೆತಿವೆ?

ಈ ಕೆಳಗಿನ ಪ್ರಶ್ನೆಗಳನ್ನು 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 5 ಅಂಕಗಳು)

1. ಭೂಮಿಯ ಮೇಲ್ಪೈ (crust) ಹೇಗೆ ರಚನೆಯಾಯಿತು?
2. ಆಹಾರ ಮತ್ತು ಆಶ್ರಯಗಳು ಹೇಗೆ ಮಾನವನ ವಿಕಸನಕ್ಕೆ ಕಾರಣವಾಯಿತು?
3. ಮಾನವನ ವಿಕಸನದಲ್ಲಿ ಪಶುಪಾಲನೆ ಮತ್ತು ಕೃಷಿಯ ಪಾತ್ರವೇನು?
4. ಮಾನವನ ವಿಕಾಸದಲ್ಲಿ ದ್ವಿಪಾದಚಲನೆ ಹಾಗು ಶಿಲಾಯುಧಗಳು ಯಾವ ಪಾತ್ರವಹಿಸಿದವು?
5. ಆಧುನಿಕ ಮಾನವ ಉಗಮಿಸಿದ ಸ್ಥಳವನ್ನು ಕುರಿತು ಚರ್ಚಿಸಿ.

ಈ ಕೆಳಗಿನ ಪ್ರಶ್ನೆಯನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ (10 ಅಂಕಗಳು)

1. ಮಾನವನ ವಿಕಸನಕ್ಕೆ ಕಾರಣವಾದ ಪ್ರಮುಖ ಅಂಶಗಳನ್ನು ಚರ್ಚಿಸಿರಿ.

❖ ❖ ❖ ❖ ❖

ಅಧ್ಯಾಯ–3

ಪ್ರಾಚೀನ ನಾಗರಿಕತೆಗಳ ಇತಿಹಾಸ

3.1 ಪೀಠಿಕೆ:

ಈ ಹಿಂದಿನ ಅಧ್ಯಾಯದಲ್ಲಿ ನಾವು ಮಾನವನ ವಿಕಾಸದ ಬಗ್ಗೆ ಅಭ್ಯಸಿಸಿದ್ದೇವೆ. ಸಾ.ಶ.ಪೂ. 10,000 ದ ಸುಮಾರಿಗೆ ಹೊಸ ಶಿಲಾಯುಗದಲ್ಲಿನ ಮಾನವ ಹಲವು ಮಹತ್ವದ ಸಂಶೋಧನೆಗಳನ್ನು ಮಾಡಿದ. ಬೇಟೆಗಾರ, ಪಶುಪಾಲಕನಾದ, ಪಶುಗಳೊಂದಿಗೆ ಅಲೆಮಾರಿಯಾಗಿದ್ದವನು ಒಂದೇ ಸ್ಥಳದಲ್ಲಿ ವಾಸಿಸಲು ಪ್ರಾರಂಭಿಸಿದ. ಸಂಗ್ರಹಕಾರನಾಗಿದ್ದವನು ಬೆಳೆ– ಬೆಳೆಯ ತೊಡಗಿದ.

ನಾಗರಿಕತೆಗಳ ಬೆಳವಣಿಗೆಗೆ ಸಹಾಯಕವಾದ ಸಂಶೋಧನೆಗಳು

ಹೈನುಗಾರಿಕೆ ಮತ್ತು ಮಾಂಸಕ್ಕಾಗಿ ಪ್ರಾಣಿಗಳ ಸಾಕಣೆ, ಹೊಸ ಶಸ್ತ್ರಗಳು, ಉಪಕರಣಗಳು, ಮಣ್ಣಿನ ಪಾತ್ರೆಗಳು, ಲೋಹದ ಪಾತ್ರೆಗಳು, ಮೀನುಹಿಡಿಯುವ ಬಲೆಗಳು, ಬೆಂಕಿಯ ಉಪಯೋಗ, ಬಟ್ಟೆ ನೇಯುವುದು, ಗುಡಿಸಲು–ಮನೆ ಕಟ್ಟುವುದು, ಹೊಸ ಸಾಗಾಟದ ಸಾಮಾಗ್ರಿಗಳು ವಿಶೇಷವಾಗಿ ಸಾಗಾಟಕ್ಕೆ ಪ್ರಾಣಿ ಮತ್ತು ಚಕ್ಕಡಿಗಳ ಬಳಕೆ ಮುಂತಾದ ಸಂಶೋಧನೆಗಳು ನಾಗರಿಕತೆಗಳ ಬೆಳವಣಿಗೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದವು. ಇವುಗಳಿಂದ ಹೊಸ ಕಸುಬು, ಕಲೆ ಮತ್ತು ವೃತ್ತಿಗಳ ಬೆಳವಣಿಗೆ ಸಾಧ್ಯವಾಯಿತು.

'ತಿರುಗುವ ಚಕ್ರಗಳು ನಾಗರಿಕತೆಯನ್ನು ಬೆಳೆಸಿದವು'–ಎಂಬ ಉಕ್ತಿ ಉಲ್ಲೇಖ ಯೋಗ್ಯವಾಗಿದೆ. ಮನುಷ್ಯನು ಕಂಡುಹಿಡಿದ ತಿರುಗುವ ಚಕ್ರ–ಬಡಿಗ, ಕುಂಬಾರ, ಕಮ್ಮಾರ, ಹಗ್ಗ–ಮಾಡುವವರ ವೃತ್ತಿಯಲ್ಲಿ ಮತ್ತು ಸಾರಿಗೆ ವ್ಯವಸ್ಥೆಯಲ್ಲಿ ತೀವ್ರ ಸ್ವರೂಪದ ಬದಲಾವಣೆಗಳನ್ನು ತರುವುದರೊಂದಿಗೆ ನಾಗರಿಕತೆಯ ಬೆಳವಣಿಗೆಯ ವೇಗವನ್ನು ಹೆಚ್ಚಿಸಿತು.

ಸಾ.ಶ.ಪೂ 6,000 ದ ಸುಮಾರಿಗೆ ಮನುಷ್ಯ ಮಾಡಿದ ಅತ್ಯಂತ ಮಹತ್ವದ ಸಂಶೋಧನೆ–ಉಳುಮೆ. ಇದು ಮನುಷ್ಯನ ಜೀವನ ಶೈಲಿಯಲ್ಲಿ ಬಹುದೊಡ್ಡ ಬದಲಾವಣೆಯನ್ನು ತಂದಿತು. ಕೃಷಿ ಮನುಷ್ಯನನ್ನು ಮಣ್ಣಿನ ಮಗನನ್ನಾಗಿಸಿತು. ಕೃಷಿ ಮಣ್ಣಿನೊಂದಿಗೆ ಮನುಷ್ಯನ ಒಡನಾಟವನ್ನು ಬೆಳೆಸಿತಲ್ಲದೆ, ವರ್ಷವಿಡೀ ಅವನಿಗೆ ಆಹಾರ ಮತ್ತು ಅವನ ಸಾಕು ಪ್ರಾಣಿಗಳಿಗೆ ಮೇವನ್ನು ಒದಗಿಸಿತು.

ನಾಗರಿಕತೆ ಪದದ ಅರ್ಥ

ನಾಗರಿಕತೆ ಎಂಬುದನ್ನು 'ಸಂಸ್ಕೃತಿ'ಗೆ ಸಮಾನ ಅರ್ಥದಲ್ಲಿ ಬಳಸುತ್ತಾರೆ. ನಾಗರಿಕತೆ ಎಂಬುದು ವಿಶಾಲ ಅರ್ಥದಲ್ಲಿ 'ಹೆಚ್ಚು ಸ್ಪಷ್ಟವಾಗಿ ವ್ಯಾಖ್ಯಾನಿಸಿದ' ಮಾನವ ಸಮಾಜವಾಗಿದೆ. ಇಂಗ್ಲೀಷಿನ ಸಿವಿಲಿಜೇಷನ್ ಎಂಬ ಪದವು 'ಸಿವ್ಹಿಲಿಸ್' ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಇದರ ಅರ್ಥ ನಗರ ಅಥವಾ ನಗರ ರಾಜ್ಯವೆಂದಾಗುತ್ತದೆ. ನಾಗರಿಕತೆ ಎಂಬುದು ಹೆಚ್ಚು ಪಕ್ವವಾದ ಮತ್ತು ಸಂಸ್ಕರಿಸಿದ ಜೀವನ ಎಂಬರ್ಥವನ್ನು ಕೊಡುತ್ತದೆ. ನಾಗರಿಕತೆ ಮತ್ತು ಸಂಸ್ಕೃತಿ ಎಂಬ ಪದಗಳು ಎಲ್ಲ ಸಂದರ್ಭಗಳಲ್ಲಿ ಒಂದಕ್ಕೊಂದು ಪರ್ಯಾಯವಾಗಲಾರವು. ನಾವು ಜನಸಮೂಹವೊಂದನ್ನು ಅನಾಗರಿಕರೆಂದು ನಿರ್ಣಯಿಸಿದ್ದರೂ ಅವರು ತಮ್ಮದೇ ಆದ ಸಂಸ್ಕೃತಿಯನ್ನು ಹೊಂದಿರುತ್ತಾರೆ. ನಾವೇನು ಹೊಂದಿದ್ದೇವೆ ಎಂಬುದು ನಾಗರಿಕತೆಯಾದರೆ ನಾವೇನಾಗಿದ್ದೇವೆ ಎಂಬುದು ಸಂಸ್ಕೃತಿ ಎನ್ನಿಸಿಕೊಳ್ಳುತ್ತದೆ.

ನಾಗರಿಕತೆ ಎಂಬುದು ಭೌತಿಕ ಸಾಧನೆಗಳಿಗೆ ಸಂಬಂಧಿಸಿದ್ದಾಗಿದೆ. ಆದರೆ ಸಂಸ್ಕೃತಿ ಎಂಬುದು ವೈಚಾರಿಕ, ಆಧ್ಯಾತ್ಮಿಕ ಮತ್ತು ತತ್ವಜ್ಞಾನ ಕ್ಷೇತ್ರದ ಸಾಧನೆ ಮತ್ತು ಸಿದ್ಧಿಯಾಗಿದೆ. ನಾಗರಿಕತೆ ಎಂಬುದು ನಗರದಲ್ಲಿ ವಾಸ ಎಂದು ಗ್ರಹಿಸಲ್ಪಟ್ಟರೆ ಸಂಸ್ಕೃತಿ ಎಂಬುದು ಜನರ ಜೀವನ ಶೈಲಿ ಎಂದು ಗ್ರಹಿಸಲ್ಪಟ್ಟಿದೆ.

ನಾಗರಿಕತೆ ವಿಶಾಲ ಪದವಾಗಿದ್ದು ಸಂಸ್ಕೃತಿ ಅದರ ಭಾಗವಾಗಿದೆ. ನಾಗರಿಕತೆ ಎಂಬುದು ಭೌಗೋಳಿಕ ಹಿನ್ನೆಲೆಯನ್ನು ಹೊಂದಿದ ಬೃಹತ್ ಜನ ಸಮುದಾಯವಾಗಿದೆ. ಪ್ರತಿಯೊಂದು ನಾಗರಿಕತೆಯೂ ತನ್ನದೇ ಆದ ಸಂಸ್ಕೃತಿಯನ್ನು ಹೊಂದಿರುತ್ತದೆ. ಒಮ್ಮೊಮ್ಮೆ ಒಂದೇ ನಾಗರಿಕತೆಯಲ್ಲಿ ಒಂದಕ್ಕಿಂತ ಹೆಚ್ಚಿನ ಸಂಸ್ಕೃತಿಗಳಿರುವುದುಂಟು. ಆದ್ದರಿಂದ ಸಂಸ್ಕೃತಿ ಎಂಬುದು ನಾಗರಿಕತೆಯಲ್ಲಿಯೇ ಇರುತ್ತದೆ. ಸಾಮಾನ್ಯವಾಗಿ ಸಂಸ್ಕೃತಿ ಇಲ್ಲದೇ ನಾಗರಿಕತೆ ಇರುವುದಿಲ್ಲ. ಸಂಸ್ಕೃತಿಯು ಪ್ರಸರಣ ಮತ್ತು ವರ್ಗಾವಣೆಗೆ ಒಳಪಟ್ಟಿದೆ. ಆದರೆ ನಾಗರಿಕತೆಯು ಇಡಿಯಾಗಿ ಹಸ್ತಾಂತರಗೊಳ್ಳುತ್ತದೆ. ನಾಗರಿಕತೆಗಳು ಬೆಳೆಯುತ್ತವೆ, ವಿಭಜನೆಯಾಗುತ್ತವೆ, ಅವನತಿಯಾಗುತ್ತವೆ ಮತ್ತು ಕೊನೆಗೊಳ್ಳುತ್ತವೆ.

ನಾಗರಿಕತೆ ಮತ್ತು ಸಂಸ್ಕೃತಿಯ ವ್ಯತ್ಯಾಸ ಈ ಕೆಳಗಿನಂತೆ ಇನ್ನು ಹೆಚ್ಚು– ವಿಶದಿಕರಿಸಬಹುದು.

ಸಂಸ್ಕೃತಿ		ನಾಗರಿಕತೆ
• ಬಹಳಷ್ಟು ಭಾಗ ಮಾನವನ ಅಂತರ್ಗತವಾದದ್ದು	:	ಬಾಹ್ಯಸ್ವರೂಪವುಳ್ಳದ್ದು
• ಕಲೆ, ಸಾಹಿತ್ಯ, ಧರ್ಮ, ತತ್ವಜ್ಞಾನ, ಆಹಾರ ಮತ್ತು ಉಡುಗೆ–ತೊಡಿಗೆ, ಆಚಾರ–ವಿಚಾರ, ನಂಬಿಕೆ, ಪದ್ಧತಿ – ಪರಂಪರೆ ಮುಂತಾದಗಳನ್ನು ಒಳಗೊಂಡಿದೆ	:	ಹಳ್ಳಿಗಳು, ಪಟ್ಟಣಗಳು, ನಗರಗಳು, ಕಟ್ಟಡಗಳು, ರಸ್ತೆ ಸೇತುವೆ, ಸಾರಿಗೆ ಸಂಪರ್ಕ, ತಂತ್ರಜ್ಞಾನ, ಮುಂತಾದವುಗಳನ್ನು ಒಳಗೊಂಡಿದೆ.
• ಅಳತೆ ಮಾಡಲಾಗದು	:	ಅಳತೆಗೆ ಒಳಪಟ್ಟಿದೆ.
• ಇದು ನಮ್ಮ ನಂಬಿಕೆ, ನಡತೆ ಮತ್ತು ವಿಚಾರಶೈಲಿಗೆ ಸಂಬಂಧಿಸಿದ್ದಾಗಿದೆ	:	ಇದು ನಾವು ಸಂಪಾದಿಸಿದ ಭೌತಿಕ ವಸ್ತುಗಳು, ಗಳಿಕೆಗಳು ಮತ್ತು ಸೌಲಭ್ಯಗಳನ್ನು ಬಳಸಿಕೊಂಡು ನಮ್ಮ ಜೀವನವನ್ನು ಉತ್ತಮಪಡಿಸುತ್ತದೆ.
• ಇದು ಬೆಳೆಯುತ್ತಿರುತ್ತದೆ ಎಂದು ಖಚಿತವಾಗಿ ಹೇಳಲಾಗದು.	:	ಇದು ಯಾವಾಗಲೂ ಬೆಳೆಯುತ್ತಿರುತ್ತದೆ
• ಸಂಸ್ಕೃತಿ ಮೊದಲು ಬರುತ್ತದೆ		ಇದು ನಂತರ ಬರುತ್ತದೆ.
• ನಾಗರಿಕತೆ ಇಲ್ಲದೇ ಸಂಸ್ಕೃತಿ ಇರಬಹುದು	:	ಸಂಸ್ಕೃತಿ ಇಲ್ಲದೇ ನಾಗರಿಕತೆ ಇರಲಾರದು.

'ನದಿ ಬಯಲುಗಳು ನಾಗರಿಕತೆಯ ತೊಟ್ಟಿಲುಗಳಾಗಿವೆ'

ಜಗತ್ತಿನ ಬಹಳಷ್ಟು ನಾಗರಿಕತೆಗಳು ನದಿಗಳ ದಡದಲ್ಲಿಯೇ ಬೆಳೆದಿವೆ. ವಿಶಾಲ ಮತ್ತು ಸಮತಟ್ಟಾದ ಬಯಲುಗಳು, ಫಲವತ್ತಾದ ಮಣ್ಣು, ನೀರಾವರಿಗೆ ಮತ್ತು ಕುಡಿಯಲು ಸಾಕಷ್ಟು ಪ್ರಮಾಣದಲ್ಲಿ ನೀರು ಮತ್ತು ಬೆಚ್ಚಗಿನ ಹವಾಗುಣ ಇವುಗಳು ಸಾಮಾನ್ಯವಾಗಿ ನದಿ ಬಯಲುಗಳಲ್ಲೇ ದೊರೆಯುವುದರಿಂದ ಮನುಷ್ಯ, ಅಲ್ಲಿಯೇ ಮೊದಲು ವಾಸಿಸಲು ಪ್ರಾರಂಭಿಸಿದನು. 5.6 ಮಿಲಿಯನ್ ವರ್ಷಗಳ ಹಿಂದೆ ಮನುಷ್ಯನ

ವಿಕಾಸವಾಯಿತಾದರೂ ಅವನು ನಾಗರಿಕ ಜೀವನವನ್ನು ಪ್ರಾರಂಭಿಸಿದ್ದು 7,000 ವರ್ಷಗಳ ಹಿಂದೆ ಎಂದು ಅಂದಾಜಿಸಲಾಗಿದೆ. ನಾಗರಿಕತೆಗಳು ಪ್ರಾರಂಭವಾದಂದಿನಿಂದ ಮನುಷ್ಯ ಅತ್ಯಂತ ಕಡಿಮೆ ಅವಧಿಯಲ್ಲಿ ಉಲ್ಲೇಖನೀಯ ಪ್ರಗತಿಯನ್ನು ಸಾಧಿಸಿದ.

ಜಗತ್ತಿನ ಪ್ರಮುಖ ಪ್ರಾಚೀನ ನಾಗರಿಕತೆಗಳಾದ ಈಜಿಪ್ತ್, ಮೆಸೊಪೊಟೇಮಿಯಾ, ಸಿಂಧೂ, ಚೀನಾ ಮುಂತಾದವುಗಳು ಮಾನವನ ವಾಸದ ಮೊದಲ ತಾಣಗಳಾಗಿವೆ. ಈ ಪ್ರದೇಶಗಳಲ್ಲಿ ಮಾನವರು ಮೊದಲು ಗುಂಪುಗಳನ್ನು ರಚಿಸಿಕೊಂಡು ವಾಸಿಸತೊಡಗಿದರು. ಆದ್ದರಿಂದ ನದಿ ತೀರಗಳನ್ನು ನಾಗರಿಕತೆಗಳ ತೊಟ್ಟಿಲುಗಳು ಎಂದು ಕರೆಯುತ್ತೇವೆ. ನೈಲ್ ಕಣಿವೆ , ಯುಫ್ರೆಟಿಸ್ ಮತ್ತು ಟೈಗ್ರಿಸ್ ಬಯಲು, ಸಿಂಧೂ ಬಯಲು, ಹುವಾಂಗ್ ಹೋ ಮತ್ತು ಯಾಂಗ ಸಿಕಿಯಾಂಗ್ ನದಿಬಯಲುಗಳು ಮಹಾನ್ ನಾಗರಿಕತೆಗಳು ವಿಕಸಿಸುವಲ್ಲಿ ಸಹಾಯಕವಾಗಿವೆ.

ನಾಗರಿಕತೆಗಳ ನಿರ್ದಿಷ್ಟ ಕಾಲವನ್ನು ನಿರ್ಧರಿಸುವಲ್ಲಿ ಇತಿಹಾಸಕಾರರು ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಇಂಥದ್ದೇ ನದಿ ಕಣಿವೆಯು ನಾಗರಿಕತೆಯ ಮೊದಲ ತೊಟ್ಟಿಲು ಎಂದು ಖಚಿತವಾಗಿ ಹೇಳಲಾಗದು.

ಪ್ರಾಚೀನ ನಾಗರೀಕತೆಯ ತಾಣಗಳು

ನಾಗರಿಕತೆಯ ಬೆಳವಣಿಗೆಗೆ ಸಹಾಯಕವಾದ ಅಂಶಗಳು

- ಪ್ರವಾಹದ ಸಮಯದಲ್ಲಿ ನದಿಗಳು ತಮ್ಮ ಇಕ್ಕೆಲಗಳಲ್ಲಿ ಸಂಚಯಿಸಿದ ಫಲವತ್ತಾದ ಮಣ್ಣು,
- ಕೃಷಿ ಹಾಗೂ ಗೃಹ ಬಳಕೆಗೆ ತಡೆರಹಿತ ಮತ್ತು ನಿರಂತರ ನೀರಿನ ಸರಬರಾಜು.
- ಸಾಮಾನ್ಯವಾಗಿ ನದಿ ತೀರಗಳಲ್ಲಿ ಕಂಡುಬರುವ ವಾಸಯೋಗ್ಯವಾದ ವಾಯುಗುಣ.
- ಮಾನವನಿಗೆ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಧ ಆಹಾರ– ಧಾನ್ಯಗಳು ಹಣ್ಣು ತರಕಾರಿಗಳು ಮತ್ತು ಅವನ ಪ್ರಾಣಿಗಳಿಗೆ ವಿಫುಲವಾದ ಮೇವಿನ ಲಭ್ಯತೆ.
- ನದಿಗಳು ಮೀನುಗಾರಿಕೆಗೆ ಅನುಕೂಲವಾಗಿವೆ.

- ನದಿಗಳು ಆಂತರಿಕ ಜಲಮಾರ್ಗಗಳನ್ನು ಒದಗಿಸಿ ವ್ಯಾಪಾರ ಮತ್ತು ಸಂಪರ್ಕಕ್ಕೆ ಅನುವು ಮಾಡಿಕೊಟ್ಟವು.

ಮೇಲ್ಕಾಣಿಸಿದ ಅಂಶಗಳು ಮನುಷ್ಯನ ಆಹಾರಕ್ಕಾಗಿ ಅಲೆದಾಟ ಮತ್ತು ಅವನ ಜೀವಕ್ಕಿರುವ ಅಪಾಯವನ್ನು ಕಡಿಮೆ ಮಾಡಿದವು. 'ಮನುಷ್ಯರು ರಚನಾತ್ಮಕ ಕಾರ್ಯ ಮಾಡಲು ಸಿಗುವ ಹೆಚ್ಚಿನ ವಿರಾಮದ ವೇಳೆಯೇ ನಾಗರಿಕತೆಯ ವಿಕಾಸಕ್ಕೆ ಪ್ರಮುಖ ಕಾರಣ' ಎಂಬ ಬಲವಾದ ವಾದವೊಂದಿದೆ. ಈ ಹಿನ್ನಲೆಯಲ್ಲಿ ನದಿಬಯಲಯಗಳು ಸಾಕಷ್ಟು ಆಹಾರ ಮತ್ತು ವಿರಾಮವನ್ನು ಒದಗಿಸಿಕೊಟ್ಟು, ನಾಗರಿಕತೆಗಳ ಬೆಳವಣಿಗೆಗೆ ಸಹಾಯಕವಾದವು. ಮಾನವ ಲೋಹಗಳನ್ನು ಶೋಧಿಸಿದ ಹಾಗು ಉಪಕರಣಗಳನ್ನು ತಯಾರಿಸಿದನು. ಭೂಮಿಯನ್ನು ಉಳುಮೆ ಮಾಡಲು ಪ್ರಾರಂಭಿಸಿದನು. ಕಟ್ಟಿಗೆ ಮತ್ತು ಕಲ್ಲುಗಳನ್ನು ಬಳಸಿ ಗುಡಿಸಲು ಮತ್ತು ಕಟ್ಟಡಗಳನ್ನು ನಿರ್ಮಿಸಿದ. ಆಯುಧಗಳು, ಪಾತ್ರೆಗಳನ್ನು, ದೋಣಿಗಳನ್ನು ನಿರ್ಮಿಸಿದನು. ಬಟ್ಟೆ, ಹೊದಿಕೆ, ಪೀಠೋಪಕರಣ ಮತ್ತು ಆಭರಣ ಮುಂತಾದವುಗಳನ್ನು ತಯಾರಿಸಿದನು.

ನಾಗರಿಕತೆಯ ಲಕ್ಷಣಗಳು

- ನಿರ್ದಿಷ್ಟ ಜೀವನೋಪಾಯವನ್ನು ಮತ್ತು ನಿಶ್ಚಿತವಾದ ವಾಸದ ನೆಲೆಗಳನ್ನು ಹೊಂದಿರುವ ಜನಸಮೂಹ.

- ಆಡಳಿತದ ನಿರ್ದಿಷ್ಟ ವಿಧಾನಗಳನ್ನು ಹೊಂದಿರುವ ಜನಸಮೂಹ.

- ವಿಶಿಷ್ಟ ಸಾಮಾಜಿಕ ಪದ್ಧತಿ ಹಾಗೂ ಸಾಂಸ್ಕೃತಿಕ ಕುರುಹುಗಳನ್ನು ಹೊಂದಿದ ಜನಸಮೂಹ.

- ಮಾನವನು ವಿವಿಧ ಯುಗಗಳಲ್ಲಿ ಹಲವಾರು ಲೋಹಗಳನ್ನು ಶೋಧಿಸಿ ಅವುಗಳ ಬಳಕೆಯನ್ನು ಕಂಡುಕೊಂಡನು.

- ಜನಸಮೂಹವೊಂದು ಸಂಕೀರ್ಣ ಆಡಳಿತ ವ್ಯವಸ್ಥೆಯೊಂದನ್ನು ಹೊಂದಿ, ಅಧಿಕಾರ ವರ್ಗ, ಲೆಕ್ಕ ಪತ್ರದ ಅವಶ್ಯಕತೆ ಹಾಗೂ ತನ್ಮೂಲಕ ಬರವಣಿಗೆಯ ಬೆಳವಣಿಗೆಗೆ ಸಹಾಯವಾಯಿತು.

- ನಾಗರಿಕತೆಗಳು–ಭೂಮಾಲಿಕತ್ವ, ಉತ್ಪಾದನೆಯ ಹಂಚಿಕೆ, ವೈಯಕ್ತಿಕ ಆಸ್ತಿ, ತೆರಿಗೆ, ವಸ್ತುವಿನಿಮಯ, ಹಣ ಮತ್ತು ವ್ಯಾಪಾರ ಮುಂತಾದ ಸಂಕೀರ್ಣ ಅರ್ಥವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಿದವು.

- ಒಂದು ನಾಗರಿಕತೆಯ ಜನರು ಇನ್ನೊಂದು ನಾಗರಿಕತೆಯ ಜನರ ಮೇಲೆ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಭಾವವನ್ನು ಬೀರಿದರು. ಇದು ಸಾಮ್ರಾಜ್ಯವಾದಕ್ಕೆ ಕಾರಣವಾಯಿತು.

- ನಾಗರಿಕತೆಯ ಬೆಳವಣಿಗೆಯು ಆಂತರಿಕ ಮತ್ತು ಬಾಹ್ಯ ರಕ್ಷಣೆಯ ಅವಶ್ಯಕತೆಯನ್ನುಂಟುಮಾಡಿತು.

- ಮಳೆ, ಗಾಳಿ, ಗುಡುಗು–ಸಿಡಿಲು, ಮಹಾಪೂರ, ಬರಗಾಲ, ಋತುಗಳು, ಹುಟ್ಟು–ಸಾವು ಮತ್ತು ಹವಾಮಾನ ಬದಲಾವಣೆ ಮುಂತಾದ ನೈಸರ್ಗಿಕ ವಿದ್ಯಮಾನಗಳು ಧರ್ಮ, ತತ್ವಜ್ಞಾನ ಮತ್ತು ವಿಜ್ಞಾನದ ಬೆಳವಣಿಗೆಗೆ ಪ್ರಚೋದನೆ ನೀಡಿದವು.

- ನಾಗರಿಕತೆಗಳು ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಭೌಗೋಳಿಕ ಮತ್ತು ಪರಿಸರ ಕಾರಣಗಳಿಂದಾಗಿ ಉನ್ನತಿ, ಅವನತಿ ಹೊಂದಿದ್ದನ್ನು ಕಾಣುತ್ತೇವೆ.

3.2 ಈಜಿಪ್ತಿನ ನಾಗರಿಕತೆ

ಪೀಠಿಕೆ:

ಬಹುಶಃ ಜಗತ್ತಿನ ಮೊದಲ ನಾಗರಿಕತೆ ಈಜಿಪ್ತ್ ದೇಶದ ನೈಲ್ ನದಿಯ ತೀರದಲ್ಲಿ ಬೆಳಯಿತು. ಈಜಿಪ್ತ್ ಆಫ್ರಿಕಾ ಖಂಡದಲ್ಲಿದ್ದು, ಏಷ್ಯಾ ಹಾಗೂ ಯುರೋಪ್‌ಗಳೊಂದಿಗೆ ಭೌಗೋಳಿಕ ನಿಕಟತೆಯನ್ನು ಹೊಂದಿದೆ. ಭೇದಿಸಲಸಾಧ್ಯವಾದ ಮರುಭೂಮಿ, ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕಿದ್ದು ಉತ್ತರಕ್ಕೆ ಮೆಡಿಟರೇನಿಯನ್ ಸಮುದ್ರವಿದ್ದು, ಇದು ಈಜಿಪ್ತ್‌ಗೆ ನೈಸರ್ಗಿಕ ಭದ್ರತೆಯನ್ನು ಒದಗಿಸಿದೆ. ಹೀಗಾಗಿ ಈಜಿಪ್ತ್ ಜಗತ್ತಿನ ಇತರೆ ಭಾಗಗಳಿಂದ ಪ್ರತ್ಯೇಕಿಸಲ್ಪಟ್ಟಿದೆ. ಈ ಕಾರಣಕ್ಕಾಗಿಯೇ ಬಾಹ್ಯ ಶತ್ರುಗಳ ದಾಳಿಯಿಂದ ಅಸಾಮಾನ್ಯ ರಕ್ಷಣೆಯ ಲಾಭ ಹೊಂದಿದೆ. ಹೀಗಾಗಿ ಅಲ್ಲಿ ವಿಶಿಷ್ಟ ನಾಗರಿಕತೆಯೊಂದು ಬೆಳೆಯಿತು. ಈಜಿಪ್ತಿನ ನಾಗರಿಕತೆಯು ಜಗತ್ತಿನಲ್ಲಿ ದೀರ್ಘ ಕಾಲ ಬಾಳಿದ ಹಾಗೂ ಶ್ರೀಮಂತ ನಾಗರಿಕತೆಗಳಲ್ಲೊಂದಾಗಿದೆ.

'ಈಜಿಪ್ತ್ ನೈಲ್ ನದಿಯ ವರಪ್ರಸಾದ'

ಈಜಿಪ್ತ್‌ನಲ್ಲಿ ಉತ್ತರಾಭಿಮುಖವಾಗಿ ಹರಿಯುವ ನೈಲ್ ನದಿಯು ತನ್ನ ಇಕ್ಕೆಲಗಳಲ್ಲಿ 15–20 ಕಿ ಮೀ ವರೆಗೆ ಅತ್ಯಂತ ಫಲವತ್ತಾದ ಬಯಲನ್ನು ನಿರ್ಮಿಸಿದೆ. ನೈಲ್ ನದಿಯಿಂದಾಗಿ ಅಲ್ಲಿನ ಜನತೆಗೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಮತ್ತು ಸಾಕು ಪ್ರಾಣಿಗಳಿಗೆ ಮೇವು ಮತ್ತು ನಿರಂತರ ನೀರು ಸರಬರಾಜು ಸಾಧ್ಯವಾಯಿತು. ಮಾನವನಿಗೆ ದೊರೆತ ಆಹಾರದ ಭದ್ರತೆ ತನ್ಮೂಲಕ ಸಿಕ್ಕ ಹೆಚ್ಚಿನ ವಿರಾಮದ ಸಮಯದಿಂದಾಗಿ ನಾಗರಿಕತೆಯ ಬೆಳವಣಿಗೆಗೆ ಸಹಾಯವಾಯಿತು. ನೈಲ್ ನದಿಯು ಆಫ್ರಿಕಾದ ದಟ್ಟವಾದ ಭೂಮಧ್ಯವೃತ್ತದ ಕಾಡುಗಳಲ್ಲಿ ಹುಟ್ಟುತ್ತದೆ. ವರ್ಷವಿಡೀ ತುಂಬಿ ಹರಿಯುತ್ತದೆ. ನೈಲ್ ನದಿಯು ಇಲ್ಲದೇ ಹೋಗಿದ್ದರೆ ಈಜಿಪ್ತಿನ ನಾಗರಿಕತೆಯು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಈಜಿಪ್ತಿನ್ನು ನೈಲ್ ನದಿಯ ವರಪ್ರಸಾದ ಅಥವಾ ಕೊಡುಗೆ ಎಂದು ಕರೆಯುತ್ತೇವೆ.

ನೈಲ್ ನದಿಯ ಕೊಳ್ಳ

ಈಜಿಪ್ತನಲ್ಲಿ ನಾಗರಿಕತೆಯ ಬೆಳವಣಿಗೆಯ ಮೊದಲು ಸಾವಿರಾರು ವರ್ಷಗಳವರೆಗೆ ಆದಿಮಾನವರು ವಾಸಿಸುತ್ತಿದ್ದರು. ಅವರು ಮೂಲತಃ ಬೇಟೆಗಾರರು ಮತ್ತು ಆಹಾರ ಸಂಗ್ರಾಹಕರು ಆಗಿದ್ದರು. ನಿಸರ್ಗದ ಬಹಳಷ್ಟು ಅವಲೋಕನದಿಂದ ಹಸಿ ಮಣ್ಣಿನಲ್ಲಿ ಬೀಜ ಬಿತ್ತಿ, ಬೆಳೆ ಬೆಳಯುವ ಉಪಾಯವನ್ನು ಅವರು ಕಲಿತಿರಬಹುದಾಗಿದೆ. ಇದು ಕೃಷಿಯ ಪ್ರಾರಂಭವಾಗಿದೆ. ಈ ವೃತ್ತಿಯು ಮಣ್ಣಿನೊಂದಿಗೆ ಮನುಷ್ಯನ ಸಂಬಂಧ ಏರ್ಪಡಿಸಿತು. ಇಲ್ಲಿನ ಜನರ ಮೂಲದ ಬಗ್ಗೆ ಇತಿಹಾಸಕಾರರಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ಇವರು ಕಕೇಷಿಯನ್ ಅಥವಾ ಬಿಳಿ ಜನಾಂಗಕ್ಕೆ ಸೇರಿದ ಜನ ಸಮೂಹವೆಂದು ಸಾಮಾನ್ಯವಾಗಿ ನಂಬಲಾಗಿದೆ, ಇವರು ಉತ್ತರ ಯುರೋಪಿನಿಂದ ವಲಸೆ ಬಂದರೆಂದೂ ನಂಬಲಾಗಿದೆ.

ಈಜಿಪ್ತಿನ ನಾಗರಿಕತೆಯ ಮೂಲಾಧಾರಗಳು

ಈ ಮಹಾನ್ ನಾಗರಿಕತೆಯು ಸುಮಾರು 7,000 ವರ್ಷಗಳ ಹಿಂದೆ ಪ್ರಾರಂಭವಾಯಿತು. ಇದು 3,000 ವರ್ಷಗಳಿಗೂ ಹೆಚ್ಚು ಕಾಲ ಮುಂದುವರೆಯಿತು. ಆ ಕಾಲದ ವಿವಿಧ ಪುರಾತತ್ವ ಮತ್ತು ಸಾಹಿತ್ಯಿಕ ಆಧಾರಗಳು ನಮಗೆ ಲಭ್ಯವಾಗಿವೆ. ಅವು ಆ ಕಾಲದ ಇತಿಹಾಸವನ್ನು ಪುನರ್ ರಚಿಸಲು ಸಹಾಯಕವಾಗಿವೆ. ಪಿರಾಮಿಡ್ಡುಗಳು, ದೇವಾಲಯಗಳು, ಪಿರಾಮಿಡ್ಡುಗಳಲ್ಲಿ ಇಟ್ಟಿರುವ ಅಸಂಖ್ಯಾತ ಮೂರ್ತಿಗಳು, ಸ್ಪಿಂಕ್ಸ್ ಮೂರ್ತಿಶಿಲ್ಪ, ಚಿತ್ರ ಕಲಾಕೃತಿಗಳು, ಹಲವು ರೀತಿಯ ಸಾಧನ ಹಾಗೂ ಸಲಕರಣೆಗಳು, ಆಭರಣಗಳು, ಪ್ಯಾಪಿರಸ್ ಎಲೆಯ ಮೇಲೆ ಹೈರೋಗ್ಲಿಫಿಕ್ ಲಿಪಿಯಲ್ಲಿ ಬರೆದ ಗ್ರಂಥಗಳು, ರೊಸೆಟ್ಟಾ ಶಿಲಾಶಾಸನ ಮುಂತಾದವು ಪ್ರಮುಖ ಆಧಾರಗಳಾಗಿವೆ. ಕ್ರಿ ಶ 1798–1802 ರ ಅವಧಿಯಲ್ಲಿ ನೆಪೋಲಿಯನ್ನನು ಈಜಿಪ್ತಿನ ಮೇಲೆ ದಾಳಿ ಮಾಡಿದನು. ಅದಾದನಂತರ ಈಜಿಪ್ತಿನ ಇತಿಹಾಸದ ಅಧ್ಯಯನವು ವೇಗ ಪಡೆದುಕೊಂಡಿತು.



ಆ ಕಾಲದಲ್ಲಿ ಕತ್ತೆಯೊಂದನ್ನು ಮಾರಾಟಮಾಡಿದ ಪತ್ರ.



ಪ್ಯಾಪಿರಸ್. ಮೇಲೆ ಬರೆದ 'ಬುಕ್ ಆಫ್ ದಿ ಡೆಡ್' ಗ್ರಂಥದ ಪುಟ.

ಪ್ರಸ್ತುತ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿರುವ ರೊಸೆಟ್ಟಾ ಶಿಲಾಶಾಸನ

ಜೀನ್ ಫ್ರ್ಯಾಂಕೋಯಿಸ್ ಚಾಂಪೋಲಿಯನ್ ಈತ ಫ್ರಾನ್ಸ್ ದೇಶದ ಇತಿಹಾಸಕಾರನಾಗಿದ್ದು ಈಜಿಪ್ತಿನ ಇತಿಹಾಸವನ್ನು ಕುರಿತಂತೆ ಸಾಕಷ್ಟು ಕೆಲಸ ಮಾಡಿದ್ದಾನೆ. ಮಗುವಿದ್ದಾಗಲೇ ಅಸಾಮಾನ್ಯ ಭಾಷಾ ಪ್ರತಿಭೆಯನ್ನು ತೋರಿದ. ತನ್ನ 16ನೆಯ ವಯಸ್ಸಿಗೆ 12 ಕ್ಕೂ ಹೆಚ್ಚು ಭಾಷೆಗಳ ಮೇಲೆ ಪ್ರಭುತ್ವ ಸಂಪಾದಿಸಿದ್ದ. ತನ್ನ ಮಾತೃ ಭಾಷೆಯಾದ ಫ್ರೆಂಚ್‌ನೊಂದಿಗೆ ಲ್ಯಾಟಿನ್, ಗ್ರೀಕ್, ಹಿಬ್ರೂ, ಸಂಸ್ಕೃತ, ಅವಸ್ತಾನ್, ಪಹ್ಲವಿ, ಅರೇಬಿಕ್, ಸಿರಿಯಾಕ್, ಚಾಲ್ಡಿಯನ್ ಮತ್ತು ಪರ್ಷಿಯನ್ ಭಾಷೆಗಳಲ್ಲೂ ಸಂಭಾಷಿಸಬಲ್ಲವನಾಗಿದ್ದ. 1809 ರಲ್ಲಿ ಗ್ರೆನೊಬಲ್ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸದ ಸಹಾಯಕ ಪ್ರಾಧ್ಯಾಪಕನಾದ. ಇವನ ಭಾಷಾ ಪಾಂಡಿತ್ಯವನ್ನು ನೋಡಿಯೇ ಅದೇ ಆಗ ಅನ್ವೇಷಿಸಲ್ಪಟ್ಟ ರೊಸೆಟ್ಟಾ ಶಿಲಾಶಾಸನದ ಅಧ್ಯಯನವನ್ನು ಇವನಿಗೆ ಒಪ್ಪಿಸಲಾಯಿತು. ಈತ 1822–1824ರ ಅವಧಿಯನ್ನು ಇದಕ್ಕಾಗಿಯೇ ವ್ಯಯಿಸಿದ. 1824ರಲ್ಲಿ ಪ್ರಕಟವಾದ ಇವನ ಕೃತಿ **'ದಿ ಸಿಸ್ಟಮ್ ಹೈರೋಗ್ಲಿಫಿಕ್'** ಈಜಿಪ್ತಾಲಾಜಿ ಕ್ಷೇತ್ರಕ್ಕೆ ಜನ್ಮ ನೀಡಿತು. ಈತನನ್ನು ಮುಂದೆ ಫ್ರಾನ್ಸಿನ ಕಾಲೇಜಿನಲ್ಲಿ ಇತಿಹಾಸದ ಪ್ರಾಧ್ಯಾಪಕ ಹುದ್ದೆಗೇರಿಸಲಾಯಿತು. ನೆಪೋಲಿಯನ್‌ನ ಈಜಿಪ್ತಿನ ಮೇಲಿನ ದಾಳಿಗಳು ಆತನ ಈಜಿಪ್ತಾಲಾಜಿಯ ಮೇಲಿನ ಅಭಿರುಚಿಗೆ ಪ್ರೇರಣೆಯಾದವು.

ರಾಜಕೀಯ ಸ್ಥಿತಿ:

ಆರಂಭಿಕ ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ಮುಂದೆ ಅವುಗಳೇ ನಗರಗಳಾಗಿ ಬೆಳೆದು 'ನಗರ–ರಾಜ್ಯ' ಗಳಾದವು. ಅವು ರಾಜರಿಂದ ಆಳಲ್ಪಡುತ್ತಿದ್ದವು. ಇವನ್ನು ರಾಜಮನೆತನಗಳ ಪೂರ್ವಕಾಲವೆಂದು ಕರೆಯುತ್ತಾರೆ. ನಗರ ರಾಜ್ಯಗಳು ಆಂತರಿಕ ಕಲಹದಲ್ಲಿ ತೊಡಗಿದವು. ಇದು ರಾಜ್ಯಗಳ ಉದಯಕ್ಕೆ ದಾರಿ ಮಾಡಿಕೊಟ್ಟಿತು. ರಾಜ್ಯಗಳನ್ನು ಅನೇಕ ರಾಜ ಮನೆತನಗಳು ಆಳಿದವು. ಈಜಿಪ್ತಿನ ನಾಗರಿಕತೆಯ 3,000 ವರ್ಷಗಳ ಅವಧಿಯಲ್ಲಿ 30 ರಾಜಮನೆತನಗಳು ಆಳಿವೆ. ಇವುಗಳಲ್ಲಿ ಯಾವೊಂದು ರಾಜಮನೆತನವು ಆರರಿಂದ ಏಳು ತಲೆಮಾರುಗಳಿಗೂ ಹೆಚ್ಚಿಗೆ ಬದುಕಲಿಲ್ಲ.

ಫೆರೋಗಳು:

ಈಜಿಪ್ತಿನ ರಾಜರನ್ನು 'ಫೆರೋ'ಗಳೆಂದು ಕರೆಯಲಾಗುತ್ತಿತ್ತು. ಅವರನ್ನು ಭೂಮಿಯ ಮೇಲೆ ದೇವರ ಪ್ರತಿನಿಧಿಗಳೆಂದು ಭಾವಿಸಲಾಗಿತ್ತು. ಆ ಕಾರಣಕ್ಕಾಗಿಯೇ ಅವರು ಅಪರಿಮಿತ ಅಧಿಕಾರವನ್ನು ಅನುಭವಿಸುತ್ತಿದ್ದರು. 'ಫೆರೋ' ಮೀನಸ್‌ನು ಉತ್ತರ ಮತ್ತು ದಕ್ಷಿಣದ ಈಜಿಪ್ತ್‌ಗಳನ್ನು ಸಾ.ಶ.ಪೂ 3000ರಲ್ಲಿ ಒಂದುಗೂಡಿಸಿದನು. ಮತ್ತು ಮೆಂಫಿಸ್‌ನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಫೆರೋ ಸಂಸ್ಥೆಯು ಎಷ್ಟೊಂದು ಬಲಿಷ್ಠವಾಗಿತ್ತೆಂದರೆ, ಅದರಲ್ಲಿ ರಾಜಕೀಯ ಮತ್ತು ಧಾರ್ಮಿಕ ಅಧಿಕಾರಗಳೆರಡೂ ಅಡಕವಾಗಿದ್ದವು. ಬಲಿಷ್ಠವಾದ ಕೇಂದ್ರ ಸರ್ಕಾರ, ಪರಮಾಧಿಕಾರಿ ರಾಜ್ಯ ಸತ್ತೆ, ಸುನಿಯಂತ್ರಿತ ಆಡಳಿತ ಮತ್ತು ಕಟ್ಟುನಿಟ್ಟಿನ ಕಾನೂನು ಪಾಲನೆ ಇವು ಈಜಿಪ್ತಿನ ರಾಜ್ಯ ವ್ಯವಸ್ಥೆಯ ಮೂಲ ಲಕ್ಷಣಗಳಾಗಿದ್ದವು.

ರಾಜ ಮನೆತನಗಳ ಆಳ್ವಿಕೆಯ ಕಾಲವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. 1) ಹಳೆಯ ರಾಜ ಮನೆತನಗಳ ಕಾಲ 2) ಮಧ್ಯ ರಾಜ ಮನೆತನಗಳ ಕಾಲ 3) ಹೊಸ ರಾಜ ಮನೆತನಗಳ ಕಾಲ.

1) **ಹಳೆಯ ರಾಜ ಮನೆತನಗಳ ಕಾಲ:** ಇದನ್ನು ಪಿರಾಮಿಡ್ಡಗಳ ಕಾಲವೆಂದು ಕರೆಯುತ್ತಾರೆ. ಈ ಕಾಲದ ಫೆರೋಗಳು ಅತ್ಯಂತ ಬಲಿಷ್ಠರಾಗಿದ್ದರು. ರಾಜನಿಗೆ ಸಲಹೆ ನೀಡಲು ಹಿರಿಯರ ಸಭೆಯೊಂದಿತ್ತು. ಆದರೆ ಅದರ ಸಲಹೆ ರಾಜನಿಗೆ ಕಡ್ಡಾಯವಾಗಿರಲಿಲ್ಲ. ಫೆರೋ 'ವಿಝೀರ'ನನ್ನು ನೇಮಿಸುತ್ತಿದ್ದ. ಆತ ಪ್ರಧಾನ ಮಂತ್ರಿಯಾಗಿದ್ದು, ಆಡಳಿತ, ನ್ಯಾಯ ಮತ್ತು ಖಜಾನೆಗಳ ಮುಖ್ಯಸ್ಥನಾಗಿದ್ದನು. ವಿಝೀರನಿಗೆ ಸಹಾಯ ಮಾಡಲು ಸ್ಥಳೀಯ ಮತ್ತು ಕೇಂದ್ರಿಯ ಅಧಿಕಾರಿಗಳಿದ್ದರು. ಸ್ಥಳೀಯ ಅಧಿಕಾರಿಗಳು ತೆರಿಗೆ ಸಂಗ್ರಹಿಸುವದರೊಂದಿಗೆ ಕಾನೂನು ಸುವ್ಯವಸ್ಥೆಯ ಪಾಲನೆ ಮಾಡುತ್ತಿದ್ದರು. ಕೇಂದ್ರಿಯ ಅಧಿಕಾರಿಗಳು ದಾಖಲೆ ಮತ್ತು ಲೆಕ್ಕ ಪತ್ರಗಳನ್ನು ಇಡುತ್ತಿದ್ದರು.

2) **ಮಧ್ಯ ರಾಜ ಮನೆತನಗಳ ಕಾಲ:** ಇದನ್ನು ಭೂ ಮಾಲೀಕರ ಕಾಲವೆಂದೂ ಕರೆಯುತ್ತಾರೆ. ಈ ಅವಧಿಯಲ್ಲಿ ಜಮೀನ್ದಾರರು ಮತ್ತು ಸರದಾರರು ಫೆರೋಗಳಿಗಿಂತಲೂ ಹೆಚ್ಚು ಶಕ್ತಿಶಾಲಿಗಳಾದರು. ಇದರಿಂದ ಅನೇಕ ಆಂತರಿಕ ಯುದ್ಧಗಳಾಗಿ ಅರಾಜಕತೆ ಉಂಟಾಯಿತು. 1ನೇ ಅಮೆನ್ ಹೊಟಪ್ ಎಂಬ ಫೆರೋ, ಫೆರೋಗಳ ಪ್ರಭುತ್ವವನ್ನು ಮರು ಸ್ಥಾಪಿಸಿದನು.

3) **ಹೊಸ ರಾಜ್ಯಗಳ ಕಾಲ:** ಈ ಕಾಲದಲ್ಲಿ ರಾಜರು ಬಲಿಷ್ಠವಾದ ಸೈನ್ಯವನ್ನು ಸಂಘಟಿಸಿದರು ಮತ್ತು ಬಲವಾದ ಸಾಮ್ರಾಜ್ಯವನ್ನು ಕಟ್ಟಿದರು. 1ನೇ ಥಟ್‌ಮೋಸನು ಹೊಸ ಪ್ರದೇಶಗಳನ್ನು ಗೆದ್ದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಅವನ ಮಗಳಾದ ಹತ್ಶೆಪ್ಸುಟ್‌ಳು ಅವನ ಉತ್ತರಾಧಿಕಾರಿಯಾದಳು. ಹಾಗೂ 21 ವರ್ಷಗಳ ಕಾಲ ಆಳ್ವಿಕೆ ಮಾಡಿದಳು. ಇವಳನ್ನು ಜಾಗತಿಕ ಇತಿಹಾಸದ ಪ್ರಥಮ ಸಾಮ್ರಾಜ್ಞಿಯೆಂದು ಗುರುತಿಸಲಾಗಿದೆ.

ಸಾಮಾಜಿಕ ಸ್ಥಿತಿ:

ಈಜಿಪ್ತಿಯನ್ನರ ಸಮಾಜ ಸುಸಂಘಟಿತವಾಗಿತ್ತು. ಸಮಾಜದಲ್ಲಿ ಮೇಲ್ವರ್ಗ, ಮಧ್ಯಮ ವರ್ಗ ಮತ್ತು ಗುಲಾಮರೆಂಬ ಮೂರು ವರ್ಗಗಳಿದ್ದವು. ಮೇಲ್ವರ್ಗ–ರಾಜ ಪರಿವಾರ, ಪುರೋಹಿತರು, ಜಮೀನ್ದಾರರು, ಮತ್ತು ಸೈನ್ಯದ ಸರದಾರರನ್ನು ಒಳಗೊಂಡಿತ್ತು. ಮೇಲ್ವರ್ಗದ ಜನರು ಶೃಂಗರಿಸಿದ ಮಹಲುಗಳಲ್ಲಿದ್ದು, ಸುಖ ಸಂಪತ್ತು ಮತ್ತು ವೈಭೋಗದ ಜೀವನವನ್ನು ನಡೆಸುತ್ತಿದ್ದರು. ವೈದ್ಯರು, ಕುಶಲ ಕರ್ಮಿಗಳು, ಲಿಪಿಕರು, ವ್ಯಾಪಾರಿಗಳು ಮತ್ತು ರೈತರು, ಮಧ್ಯಮ ವರ್ಗಕ್ಕೆ ಸೇರಿದ್ದರು. ಕೆಳ ವರ್ಗವು ಗುಲಾಮರಿಂದ ಕೂಡಿತ್ತು. ಈ ವರ್ಗದ ಜನ ಅತ್ಯಂತ ಶ್ರಮದಾಯಕ ಮತ್ತು ಕಷ್ಟದ ಜೀವನವನ್ನು ನಡೆಸುತ್ತಿದ್ದರು.

ಮಹಿಳೆಯರ ಸ್ಥಿತಿ: ಈಜಿಪ್ತಿನ ಮಹಿಳೆಯರು ಸಮಾಜದಲ್ಲಿ ಅತ್ಯಂತ ಉಚ್ಚ ಸ್ಥಾನಮಾನ ಹೊಂದಿದ್ದರು. ಇಂತಹ ಉನ್ನತ ಸ್ಥಾನಮಾನವನ್ನು ಜಗತ್ತಿನ ಬೇರೆ ಯಾವ ನಾಗರಿಕತೆಯ ಮಹಿಳೆಯರು ಹೊಂದಿರಲಿಲ್ಲ. ಅದಕ್ಕಾಗಿಯೇ ಈಜಿಪ್ತಿನ ನಾಗರೀಕತೆಯು ಜಗತ್ತಿನ ಮೊಟ್ಟ ಮೊದಲ ರಾಣಿಯಿಂದ ಆಳಲ್ಪಟ್ಟ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು ಇತ್ತು. ರಾಜ ಮನೆತನಗಳಲ್ಲಿ ಪರಿವಾರದಲ್ಲಿಯೇ ಮದುವೆ ಆಗುತ್ತಿದ್ದರು. ಫೆರೋಗಳು ತಮ್ಮ ಅಕ್ಕ–ತಂಗಿಯರನ್ನು, ಮಕ್ಕಳನ್ನು ಲಗ್ನವಾಗುತ್ತಿದ್ದರು. ಆಸ್ತಿ ಮತ್ತು ಅಧಿಕಾರ ಇನ್ನೊಬ್ಬರ ಕೈಗೆ ಹೋಗುವದನ್ನು ತಪ್ಪಿಸುವದು ಮತ್ತು 'ರಕ್ತ ಪಾವಿತ್ರ್ಯತೆ' ಯನ್ನು ಕಾಪಾಡುವುದು ಇದರ ಹಿಂದಿನ ಉದ್ದೇಶವಾಗಿತ್ತು.

ಆರ್ಥಿಕ ಸ್ಥಿತಿ:

ಕೃಷಿ: ಈಜಿಪ್ತ್ ಕೃಷಿ ಪ್ರಧಾನ ಅರ್ಥವ್ಯವಸ್ಥೆಯಾಗಿತ್ತು. ನೈಲ್ ನದಿಯಿಂದಾಗಿ ಅವರ ಕೃಷಿ ಸಮೃದ್ಧವಾಗಿತ್ತು. ಪ್ರಾರಂಭದಲ್ಲಿ ಬಾಹುಬಲದಿಂದಲೇ ಉಳುಮೆ ಮಾಡಲಾಗುತ್ತಿತ್ತು. ಇದು ನಿಧಾನವೂ, ಶ್ರಮದಾಯಕವೂ ಆಗಿತ್ತು. ಕಾಲಾಂತರದಲ್ಲಿ ಗುದ್ದಲಿಗೆ ಉದ್ದನೆಯ ಕಟ್ಟಿಗೆ ಜೋಡಿಸಿ ನೇಗಿಲದಂತೆ ಬಳಸುವ ಪದ್ಧತಿ ರೂಢಿಗೆ ಬಂತು. ಇದುವೇ ಮುಂದೆ ನೇಗಿಲ ಮೂಲಕ ಉಳುಮೆಗೆ ನಾಂದಿಯಾಯಿತು. ಈಜಿಪ್ತಿಯನ್ನರು ಗೋಧಿ, ಬಾರ್ಲಿ, ಹತ್ತಿ, ಬಟಾಣಿ, ಬೆಳ್ಳುಳ್ಳಿ, ವಿವಿಧ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುತ್ತಿದ್ದರು. ನೀರಾವರಿಗಾಗಿ ಕಾಲುವೆಗಳು ಮತ್ತು ಏತವನ್ನು ಬಳಸುತ್ತಿದ್ದರು.

ಕೈ ಕಸಬುಗಳು ಮತ್ತು ಉತ್ಪಾದಕರು: ಈಜಿಪ್ತಿಯನ್ನರು ಹಲವಾರು ಕೈಕಸಬುಗಳು ಮತ್ತು ಉತ್ಪಾದನೆಗಳನ್ನು ಮಾಡುತ್ತಿದ್ದರು. ವಡ್ಡರು, ಕಲ್ಲು ಕುಟುಕರು, ಬಡಿಗ, ಕಮ್ಮಾರ, ಕುಂಬಾರ, ಚಿನಿವಾರ ಮೊದಲಾದವರು ಈಜಿಪ್ತಿಯನ್ನರ ಜೀವನಕ್ಕೆ ಸಂಪತ್ತು, ಸೌಕರ್ಯಗಳನ್ನು ಹಾಗೂ ಆಯುಷ್ಯಾರಾಮವನ್ನು ಒದಗಿಸಿ ಕೊಟ್ಟರು. ತಾಮ್ರವು ಅವರು ಉಪಯೋಗಿಸಿದ ಮೊದಲ ಲೋಹವಾಗಿತ್ತು. ಹಿತ್ತಾಳೆ, ಕಂಚು, ಕಬ್ಬಿಣ ಮತ್ತು ಬಂಗಾರಗಳನ್ನು ನಂತರದ ಕಾಲದಲ್ಲಿ ಬಳಸಿದರು.

ವ್ಯಾಪಾರ ಮತ್ತು ವಾಣಿಜ್ಯ: ಈಜಿಪ್ತಿಯನ್ನರು ಪೂರ್ವ ಮೆಡಿಟರೇನಿಯನ್ ಮತ್ತು ಕೆಂಪು ಸಮುದ್ರದ ಪ್ರದೇಶಗಳಾದ, ಈಗಿನ ಸಿರಿಯಾ, ಲೆಬನಾನ್ ಮತ್ತು ಯಮನ್‌ಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದರು. ಇವರು ಆಂತರಿಕ ಹಾಗೂ ವಿದೇಶಿ ವ್ಯಾಪಾರಗಳೆರಡನ್ನೂ ಅಭಿವೃದ್ಧಿಗೊಳಿಸಿದ್ದರು ವಸ್ತು ವಿನಿಮಯವು ಬಳಕೆಯಲ್ಲಿತ್ತು. ಇವರು ಮೆಸೊಪೊಟೇಮಿಯಾ ಹಾಗೂ ಏಷ್ಯಾದ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರು. ನದಿಯಲ್ಲಿ ದೋಣಿ, ಸಮುದ್ರದಲ್ಲಿ ಚಿಕ್ಕ ಹಡಗುಗಳು, ರಸ್ತೆಯಲ್ಲಿ ಪ್ರಾಣಿಗಳು, ಸಾಗಾಟದ ಪ್ರಮುಖ ಸಾಧನಗಳಾಗಿದ್ದವು. ವಿವಿಧ ಬಗೆಯ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು. ಕೃಷಿ, ವ್ಯಾಪಾರ ಮತ್ತು ಕಸಬುಗಳ ಮೇಲಿನ ತೆರಿಗೆಯು ಆದಾಯದ ಶೇ.10 ರಿಂದ 20 ರವರೆಗೆ ಸಂಗ್ರಹಿಸಲ್ಪಡುತ್ತಿತ್ತು. ತೆರಿಗೆಗಳನ್ನು ಹಣ ಹಾಗು ವಸ್ತು ರೂಪಗಳೆರಡರಲ್ಲೂ ಸಂಗ್ರಹಿಸುತ್ತಿದ್ದರು.

ಧಾರ್ಮಿಕ ಸ್ಥಿತಿ:

ಧರ್ಮವು ಈಜಿಪ್ತಿಯನ್ನರ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿತ್ತು. ಬಹು ದೇವತಾರಾಧನೆ ಜಾರಿಯಲ್ಲಿತ್ತು. ಇವರು ಪಕ್ಷಿ ಮತ್ತು ಪ್ರಾಣಿಗಳನ್ನು ಪೂಜಿಸುತ್ತಿದ್ದರು ಅಮುನ್‌ರಾ ದೇವರ ದೇವನಾಗಿದ್ದನು. ಇವನನ್ನು ಈಜಿಪ್ತಿನ ನಿರ್ಮಾಪಕನೆಂದು ನಂಬಲಾಗಿತ್ತು. ರಾ ಎಂಬುವನು ಸೂರ್ಯದೇವತೆ. ಓಸಿರಿಸ್ ಪಾತಾಳದ ಮತ್ತು ಮೃತ್ಯು ದೇವತೆ ಆಗಿದ್ದ. ಇಸಿಸ್ ಮಾತೃತ್ವದ ದೇವತೆ ಮತ್ತು ಓಸಿರಸ್‌ನ ಹೆಂಡತಿಯಾಗಿದ್ದಳು. ಹೋರಸ್, ಹ್ಯಾಥರ್ ಮುಂತಾದವರು ಕೆಳ ಶ್ರೇಣಿಯ ದೇವತೆಗಳಾಗಿದ್ದರು. ಈಜಿಪ್ತಿಯನ್ನರು ತಮ್ಮ ದೇವತೆಗಳಿಗೆ ಅನೇಕ

ಗುಡಿಗಳನ್ನು ಕಟ್ಟಿದ್ದರು. ಇವರು ಆತ್ಮಗಳ ಮರು ಆಗಮನದಲ್ಲಿ ನಂಬಿಕೆಯಿಟ್ಟಿದರು ಮತ್ತು ಈ ಕಾರಣಕ್ಕಾಗಿಯೇ ಶವಗಳನ್ನು ಮಮ್ಮಿಗಳಲ್ಲಿ ಸಂರಕ್ಷಿಸಿಡುತ್ತಿದ್ದರು. ಇವರಿಗೆ ಪುನರ್ ಜನ್ಮದಲ್ಲಿಯೂ ವಿಶ್ವಾಸವಿತ್ತು. ಪುರೋಹಿತರು ಉಚ್ಚ ಸ್ಥಾನಮಾನ ಅನುಭವಿಸುತ್ತಿದ್ದರು. ರಾಜ, ಧರ್ಮದ ಮುಖ್ಯಸ್ಥನಾಗಿದ್ದನು. 4ನೇ ಅಮೆನ್ ಹೊಟೆಪ್ ಎಂಬ ದೊರೆ ಏಕ ದೇವತಾರಾಧನೆಯನ್ನು ಜಾರಿಯಲ್ಲಿ ತಂದನು. ಸೂರ್ಯ ಅಥವಾ ರಾ ದೇವತೆಯೊಬ್ಬನನ್ನೇ ಪೂಜಿಸುವಂತೆ ಪ್ರಯತ್ನಿಸಿದನು. ಆದರೆ ನಂತರದ ದೊರೆಗಳು ಇದನ್ನು ಮುಂದುವರೆಸಲಿಲ್ಲ.

ಮಮ್ಮೀಕರಣ: ರಾಜರ ಶವವನ್ನು ಸಂರಕ್ಷಿಸಿಡುವ ಪ್ರಕ್ರಿಯೆಯನ್ನು ಮಮ್ಮೀಕರಣ ಎಂದು ಕರೆಯುತ್ತಾರೆ. ಮಮ್ಮಿಯು ವ್ಯಕ್ತಿಯೊಬ್ಬನ ಆತ್ಮದ ಸತ್ತ ನಂತರದ ಜೀವನಕ್ಕೆ ಮನೆಯಾಗಿತ್ತು. ಈಜಿಪ್ತಿಯನ್ನರು ಸಾವಿನ ನಂತರದ ಜೀವನಕ್ಕೆ ಎಷ್ಟೋ ವರ್ಷ ಮೊದಲು ಸಿದ್ಧತೆಗಳನ್ನು ನಡೆಸುತ್ತಿದ್ದರು. ಈಜಿಪ್ತಿಯನ್ನರು ಶವದ ಶರೀರದಿಂದ ಹೃದಯವನ್ನು ಹೊರತು ಪಡಿಸಿ ಉಳಿದ ಆಂತರಿಕ ಅಂಗಾಂಗಳನ್ನು ಹೊರ ತೆಗೆಯುತ್ತಿದ್ದರು ಮತ್ತು ಶರೀರವನ್ನು 40 ದಿನಗಳ ಕಾಲ ನಾರ್‌ಟಾನ್ ಲವಣದಲ್ಲಿ ಒಣಗಿಸುತ್ತಿದ್ದರು. ನಂತರ ಶರೀರದಲ್ಲಿ ಒಣ ಎಲೆ ಅಥವಾ ಕಟ್ಟಿಗೆಯ ಹೊಟ್ಟನ್ನು ತುಂಬಿ ಬಟ್ಟೆಯಲ್ಲಿ ಸುತ್ತಿಡುತ್ತಿದ್ದರು. ಈ ಮಮ್ಮೀಯನ್ನು ಶವ ಪೆಟ್ಟಿಗೆಯಲ್ಲಿಟ್ಟು ಅದಕ್ಕೆ ಮೇಲು ಹೊದಿಕೆ ಹಾಕುತ್ತಿದ್ದರು. ಮತ್ತು ಇದರ ಮೇಲೆ 'ಸತ್ತವರ ಪುಸ್ತಕ' ವನ್ನು ಇಡುತ್ತಿದ್ದರು. ಈ ಪುಸ್ತಕಗಳಲ್ಲಿರುವ *ಜ್ಞಾನವು* ಮೃತ ವ್ಯಕ್ತಿಯು ಆನಂದ ಪೂರ್ವಕವಾಗಿ ಸ್ವರ್ಗ ಸೇರುವ ಜ್ಞಾನವನ್ನು ಕೊಟ್ಟು ಸಹಕರಿಸುತ್ತದೆ ಎಂದು ನಂಬಿದ್ದರು.

ಸಾಹಿತ್ಯ ಮತ್ತು ಕಲಿಕೆ:

ಈಜಿಪ್ತಿಯನ್ನರು ಚಿತ್ರ ಲಿಪಿಯನ್ನು ಅಭಿವೃದ್ಧಿ ಪಡಿಸಿದ್ದರು. ಇದು ಅತ್ಯಂತ ಆರಂಭದ ಬರವಣಿಗೆಯ ಪ್ರಕಾರಗಳಲ್ಲೊಂದು. ಇವರು ಪೆಪಿರಸ್ ತೊಗಟೆಯನ್ನು ಬರವಣಿಗೆಗೆ ಬಳಸುತ್ತಿದ್ದರು. ಈಜಿಪ್ತಿಯನ್ನರ ಬರವಣಿಗೆಯನ್ನು 'ಹೈರೋಗ್ಲಿಫ್' ಎಂದು ಕರೆಯುತ್ತಾರೆ. ಗ್ಲಿಫ್ ಎಂದರೆ, ಚಿಹ್ನೆ ಎಂದರ್ಥ. ಹೈರೋಗ್ಲಿಫ್ ನೂರಾರು ಚಿಹ್ನೆಗಳನ್ನೊಳಗೊಂಡಿದೆ. ಅದರಲ್ಲಿ ಕೆಲವು ಚಿಹ್ನೆಗಳು ಪೂರ್ಣ ಶಬ್ದಗಳಾಗಿವೆ, ಇನ್ನುಳಿದವು ಧ್ವನಿಗಳನ್ನು ಪ್ರತಿನಿಧಿಸುತ್ತವೆ. 'ದ ಬುಕ್ ಆಫ್ ದಿ ಡೆಡ್', 'ಕಾಫಿನ್ ಟೆಕ್ಸ್ಟ್', 'ದಿ ಸ್ಟೋರಿ ಆಫ್ ದಿ ಶಿಪ್ ರೆಕ್ಡ್ ಸೇಲರ್', 'ದಿ ಟೇಲ್ ಆಫ್ ಅನುಪು ಮತ್ತು ಬಿಟೂ', ಮುಂತಾದ ಪುಸ್ತಕಗಳು ದೊರೆಕಿವೆ.

ಈಜಿಪ್ತಿಯನ್ನರಿಗೆ ರೇಖಾ ಗಣಿತ, ಪಂಚಾಂಗ, ಖಗೋಳ ಶಾಸ್ತ್ರ ಮತ್ತು ಗಣಿತ ಶಾಸ್ತ್ರದ ಉತ್ತಮ ಜ್ಞಾನವಿತ್ತು. ಪ್ರಾಚೀನ ಈಜಿಪ್ತಿನ ಬಹಳಷ್ಟು ಪಂಡಿತರು ಪುರೋಹಿತ ವರ್ಗಕ್ಕೆ ಸೇರಿದವರಾಗಿದ್ದರು. ಬೃಹತ್ತಾದ ಪಿರಾಮಿಡ್ಡುಗಳ ನಿರ್ಮಾಣವು, ರೇಖಾ ಗಣಿತ ಮತ್ತು ಅಂಕ ಗಣಿತದಲ್ಲಿ ಈಜಿಪ್ತಿಯನ್ನರ ಪ್ರಖರ ಜ್ಞಾನವನ್ನು ಸಂದೇಹವಿಲ್ಲದಂತೆ ಸಿದ್ಧಮಾಡುತ್ತದೆ. ಅವರು ತ್ರಿಕೋನ, ಆಯತ, ಚೌಕ, ವೃತ್ತ ಮತ್ತು ಷಟ್ಕೋನಗಳ ವಿಸ್ತೀರ್ಣವನ್ನು ಖಚಿತವಾಗಿ ಅಳೆಯ ಬಲ್ಲವರಾಗಿದ್ದರು. ಈಜಿಪ್ತಿಯನ್ನರಿಗೆ ಸಂಕಲನ, ವ್ಯವಕಲನ ಮತ್ತು ಭಾಗಾಕಾರದ ಸ್ಪಷ್ಟ ಕಲ್ಪನೆಯಿತ್ತು. ಆದರೆ ಅವರಿಗೆ ಗುಣಾಕಾರದ ತಿಳುವಳಿಕೆ ಇರಲಿಲ್ಲ. ಅವರು ದಶಮಾಂಶ ಅಭಿವೃದ್ಧಿ ಪಡಿಸಿದವರಲ್ಲಿ ಮೊದಲಿಗರಾಗಿದ್ದಾರೆ.

ಅವರಿಗೆ ಗ್ರಹ ಮತ್ತು ನಕ್ಷತ್ರಗಳಲ್ಲಿನ ಅಂತರವು ಸ್ಪಷ್ಟವಾಗಿ ತಿಳಿದಿತ್ತು. ಇವರ ಪಂಚಾಂಗವು ಸೂರ್ಯನನ್ನು ಆಧರಿಸಿತ್ತು ಮತ್ತು ಅದನ್ನು ಸೌರ ಪಂಚಾಂಗ ಎನ್ನುತ್ತಾರೆ. ಅವರು 365 ದಿನಗಳ ಪಂಚಾಂಗವನ್ನು ಅಭಿವೃದ್ಧಿ ಪಡಿಸಿದ್ದರು. ಇದರಲ್ಲಿ ವರ್ಷ ಒಂದಕ್ಕೆ 12 ತಿಂಗಳು ಮತ್ತು ಪ್ರತಿ ತಿಂಗಳಲ್ಲಿ 30 ದಿನಗಳಿದ್ದವು. ಈಜಿಪ್ತಿಯನ್ನರು ವರ್ಷವೊಂದನ್ನು 4 ತಿಂಗಳುಗಳ 3 ಕಾಲಗಳಾಗಿ ವಿಂಗಡಿಸಿದ್ದರು. ನೈಲ್ ನದಿಯ ಮಹಾಪೂರದ ಏರಿಕೆ ಮತ್ತು ಇಳಿಕೆ ಮೊದಲ ಕಾಲವಾಗಿತ್ತು. ಭೂ ಉಳಿಮೆ ಮಾಡಿ ಬಿತ್ತಿ ಬೆಳೆಯುವದು 2ನೇ ಕಾಲವಾಗಿತ್ತು.

ಸುಗ್ಗಿಯ ಸಮಯವು 3 ನೇ ಕಾಲವಾಗಿತ್ತು. ಸಾ, ಶ. ಪೂ. 1500 ರ ಸುಮಾರಿಗೆ ಇವರು ನೆರಳಿನ ಗಡಿಯಾರವನ್ನು ಕಂಡುಹಿಡಿದಿದ್ದರು. ಅಂತಹದ್ದೊಂದು ನೆರಳಿನ ಗಡಿಯಾರವನ್ನು ಬರ್ಲಿನ್ ಸಂಗ್ರಹಾಲಯದಲ್ಲಿ ಸಂರಕ್ಷಿಸಿಡಲಾಗಿದೆ. ಪುರೋಹಿತರು ಜನರಿಗೆ ಶಿಕ್ಷಣ ನೀಡುತ್ತಿದ್ದರು. ಮಗುವಿಗೆ 5 ವರ್ಷವಾದಾಗ ಗುರುವಿನ ಬಳಿ ಕಳುಹಿಸುತ್ತಿದ್ದರು ಮತ್ತು 12 ವರ್ಷಗಳ ಶಿಕ್ಷಣವನ್ನು ನೀಡುತ್ತಿದ್ದರು. ದೇವಾಲಯಗಳು ಶಿಕ್ಷಣದ ಕೇಂದ್ರಗಳಾಗಿದ್ದವು. ಸರ್ಕಾರಿ ಅಧಿಕಾರಿಗಳು ಉಚ್ಚ ಶಿಕ್ಷಣವನ್ನು ನೀಡುತ್ತಿದ್ದರು. ಒಟ್ಟಿನಲ್ಲಿ ಅಲ್ಲಿನ ಶಿಕ್ಷಣವು ಸರ್ಕಾರದ ನಿಯಂತ್ರಣದಲ್ಲಿತ್ತು.



ನೆರಳಿನ ಗಡಿಯಾರ

ಕಲೆ ಮತ್ತು ವಾಸ್ತುಶಿಲ್ಪ:

ಈಜಿಪ್ತಿಯನ್ನರು ಮಹಾನ್ ನಿರ್ಮಾಣಕಾರರಾಗಿದ್ದರು. ಅವರು ಸೂಕ್ಷ್ಮ ಕಲೆಗಳನ್ನು ಬೆಳೆಸಿದರು. ಅವರ ಕಲೆ ಮತ್ತು ವಾಸ್ತು ಶಿಲ್ಪವು ಅವರ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಇವರು ತಮ್ಮ ದೇವತೆಗಳಿಗಾಗಿ ಗುಡಿಗಳನ್ನು ಮತ್ತು ರಾಜರನ್ನು ಹೂಳಲು ಪಿರಾಮಿಡ್ಡಗಳನ್ನು ನಿರ್ಮಿಸಿದರು. ಗುಡಿಗಳ ಮತ್ತು ಪಿರಾಮಿಡ್ಡಗಳ ಗೋಡೆಗಳಲ್ಲಿ ಸುಂದರ ಮೂರ್ತಿಗಳನ್ನು ಕೆತ್ತಿದ್ದಾರೆ ಮತ್ತು ಚಿತ್ರ ಕಲೆಗಳಿಂದ ಶೃಂಗರಿಸಿದ್ದಾರೆ. ಅವರು ಮರಳುಗಲ್ಲು ಗ್ರಾನೈಟ್(ಬೆಣಚು ಕಲ್ಲು) ಹಾಗೂ ಮರಗಳಿಂದ ವಿಗ್ರಹಗಳನ್ನು ನಿರ್ಮಿಸಿದ್ದಾರೆ. ಅವರ ಕಲೆ ಮತ್ತು ವಾಸ್ತು ಶಿಲ್ಪವು ನಿಸರ್ಗದ ಹೊಡೆತವನ್ನು ಸಹಿಸಿ ಉಳಿದುಕೊಂಡಿದೆ. ಅವು ಈಜಿಪ್ತಿಯನ್ನರ ಸುಸಂಘಟಿತ, ನುರಿತ, ಕಲಾವಿದರ, ಕುಶಲ ಕರ್ಮಿಗಳ ಮತ್ತು ಕಾರ್ಮಿಕರ ಕೌಶಲ್ಯದ ಕುರುಹುಗಳಾಗಿವೆ.

ಸ್ಪಿಂಕ್ಸ್

ಸ್ಪಿಂಕ್ಸ್: ಇದು ಮನುಷ್ಯನ ಶಿರ ಮತ್ತು ಸಿಂಹದ ಶರೀರ ಹೊಂದಿದೆ. ಇದನ್ನು ಖಾಫ್ರೆ ಎಂಬ ಸಾಮ್ರಾಟ ಕೆತ್ತಿಸಿದ. ಇದು 240 ಅಡಿ ಉದ್ದ ಮತ್ತು 66 ಅಡಿ ಎತ್ತರವಾಗಿದೆ. ಇದನ್ನು ಏಕ ಶಿಲೆಯಲ್ಲಿ ಕೆತ್ತಲಾಗಿದೆ.

ಗೀಝಾ ಪಿರಾಮಿಡ್

ಗೀಝಾ ಪಿರಾಮಿಡ್ ಸಾಮ್ರಾಟ ಖುಫುವಿನ ಗೋರಿಯಾಗಿದೆ. ಇದು ಪ್ರಾಚೀನ ವಿಶ್ವದ ಏಳು ಆಶ್ಚರ್ಯಗಳಲ್ಲಿ ಒಂದಾಗಿದೆ ಹಾಗೂ ಜಗತ್ತಿನಲ್ಲಿಯೇ ಅತ್ಯಂತ ಬೃಹತ್ತಾದ ಕಟ್ಟಡವಾಗಿದೆ. ಇದನ್ನು ಆತನ ಮಗ ಮತ್ತು ಮೊಮ್ಮಗ ಕಟ್ಟಿಸಿದರು. ಇದರ ವಿಸ್ತೀರ್ಣ 746 x 746 x 481 ಅಡಿಗಳು. ಸರಾಸರಿ 2.5 ಟನ್ ಭಾರದ 23 ಲಕ್ಷ ಬಂಡೆಗಳನ್ನು ಬಳಸಿ ಇದನ್ನು ಕಟ್ಟಲಾಗಿದೆ. ಒಟ್ಟು 13 ಎಕರೆ ಪ್ರದೇಶವನ್ನು ವ್ಯಾಪಿಸಿದೆ. ಸುಮಾರು 10 ಲಕ್ಷ ಕೆಲಸಗಾರರು 20 ವರ್ಷಗಳ ಶ್ರಮದಿಂದ ಇದನ್ನು ಕಟ್ಟಿ ಮುಗಿಸಿದ್ದಾರೆ. ನಿರ್ಮಾಣದ ನಾಲ್ಕು ಸಾವಿರ ವರ್ಷಗಳ ನಂತರವೂ ಸುಮಾರು 90 ಪರಾಮಿಡ್ಡುಗಳಿದ್ದು ಇಂದಿಗೂ ಭದ್ರವಾಗಿ ನಿಂತಿವೆ. ಇವು ಅವರ ತಂತ್ರಜ್ಞಾನ ಹಾಗೂ ಸಮರ್ಥ ಆಡಳಿತಕ್ಕೆ ಉತ್ತಮ ಉದಾಹರಣೆಗಳಾಗಿವೆ.

ಲಕ್ಸೂರ್ ದೇವಾಲಯ

ಲಕ್ಸೂರ್ ದೇವಾಲಯ: ಇದು ವೈಭವ ಪೂರಿತವಾದ ಪ್ರವೇಶ ದ್ವಾರವನ್ನು ಹೊಂದಿತ್ತು. ಈ ದೇವಾಲಯದ ಮುಂದಿನ ರಸ್ತೆಯು 365 ಸ್ಪಿಂಕ್ಸ ಮೂರ್ತಿಗಳ ಸಾಲುಗಳನ್ನು ಹೊಂದಿದ್ದು, ಬಾಗಿಲ ಎದುರುಗಡೆಗೆ ಎಡ ಬಲದಲ್ಲಿ 2 ಅತ್ಯಂತ ಎತ್ತರದ ಕೋನಗಳುಳ್ಳ ಕಂಬಗಳನ್ನು ಹೊಂದಿತ್ತು. ಹಬ್ಬದ ದಿನಗಳಲ್ಲಿ ದೇವರ

ಮೂರ್ತಿಗಳನ್ನು ಮೆರವಣಿಗೆ ಮಾಡುತ್ತ ಈ ಮಹಾದ್ವಾರದಿಂದ ದೇವಾಲಯದಲ್ಲಿ ಕೊಂಡೊಯ್ಯಲಾಗುತ್ತಿತ್ತು.

ಈಜಿಪ್ತ್ ನಾಗರಿಕತೆಯ ಅವನತಿ:

"ಎಷ್ಟೇ ಅತ್ಯುಚ್ಚ ಪರಿಪೂರ್ಣತೆಯನ್ನು ಸಾಧಿಸಿದ್ದಾಗ್ಯೂ, ಮನುಷ್ಯನ ಪ್ರತಿಯೊಂದು ನಿರ್ಮಾಣವು ಅವನತಿ ಮತ್ತು ವಿನಾಶದಲ್ಲಿಯೇ ಕೊನೆಗೊಳ್ಳುತ್ತದೆ". ಎಂಬ ಮಾತು ಈಜಿಪ್ತಿನ ನಾಗರಿಕತೆಗೂ ಅನ್ವಯಿಸುತ್ತದೆ. ಅದಕ್ಕಾಗಿ ಅನೇಕ ಕಾರಣಗಳನ್ನು ಪಟ್ಟಿ ಮಾಡಬಹುದು.

1. ಆಡಳಿತಗಾರರು ಒಂದು ಪರಿಪೂರ್ಣ ಮತ್ತು ಕಾರ್ಯ ಸಾಧ್ಯವಾದ ವ್ಯವಸ್ಥೆಯನ್ನು ತರುವಲ್ಲಿ ವಿಫಲರಾದರು.
2. ಅಶಕ್ತ ದೊರೆಗಳು ತಮ್ಮ ಅಧಿಕಾರ ಉಳಿಸಿಕೊಳ್ಳುವಲ್ಲಿ ವಿಫಲರಾದರು. ಆಗ ಸರ್ಕಾರದ ನಿಯಂತ್ರಣವು ಜಮೀನ್ದಾರರ ಮತ್ತು ಸರದಾರರ ಕೈಗೆ ಹೋಗಿ ವಿನಾಶ ಮತ್ತು ಅವ್ಯವಸ್ಥೆಯಲ್ಲಿ ಪರ್ಯಾವಸಾನವಾಯಿತು.
3. ರಾಜರಲ್ಲಿನ ಆಂತರಿಕ ಕಚ್ಚಾಟ, ಒಡಕು ಮತ್ತು ಅವ್ಯವಸ್ಥೆಗೆ ಕಾರಣವಾಯಿತು.
4. ಕೆಳವರ್ಗದ ಕಠೋರ ಶೋಷಣೆ ಮತ್ತು ಧಾರ್ಮಿಕ ಅಸಹಿಷ್ಣುತೆಯು ಸಮಾಜದಲ್ಲಿ ಅಸಾಮರಸ್ಯ ಮತ್ತು ಅನೈಕ್ಯತೆ ಸೃಷ್ಟಿಸಿತ್ತು.
5. ಅಸಮರ್ಥ ರಾಜರ ಆಳ್ವಿಕೆಯ ಕಾಲದಲ್ಲಿ ಆಫ್ರಿಕಾ ಮತ್ತು ಅಸ್ಸೀರಿಯಾಗಳ ಅನಾಗರಿಕ ದಾಳಿಕೋರರು ಈಜಿಪ್ತಿನ ಮೇಲೆ ದಾಳಿ ಮಾಡಿದರು ಮತ್ತು ಅವರ ದೇವಾಲಯಗಳನ್ನು ಮತ್ತು ಪ್ರಗತಿಯನ್ನು ಹಾಳುಗೆಡವಿದರು.
6. ದಾಳಿಕೋರರು ಯುದ್ಧ ಕಲೆಯಲ್ಲಿ ಅವರಿಗಿಂತ ಪರಿಣಿತರಾಗಿದ್ದರು.
7. ಭೌತಿಕ ಅಭಿವೃದ್ಧಿ ಮತ್ತು ಸಂತೃಪ್ತ ಜೀವನವು ಸ್ವತಂತ್ರ ಚಿಂತನೆಯನ್ನು ಬೆಳಸಲಿಲ್ಲ.

3.3 ಮೆಸೊಪೊಟೇಮಿಯಾ ನಾಗರಿಕತೆ

ಪೀಠಿಕೆ:

ಹಿಂದಿನ ಅಧ್ಯಾಯದಲ್ಲಿ ನಾವು ಈಜಿಪ್ತಿನ ನಾಗರಿಕತೆಯ ವಿವರವಾದ ಅಧ್ಯಯನವನ್ನು ಮಾಡಿದ್ದೇವೆ. ಎಲ್ಲ ಆರಂಭಿಕ ನಾಗರಿಕತೆಗಳ ಜನರು ನಿಶ್ಚಿತವಾಗಿಯೂ ಈಜಿಪ್ತಿಯನ್ನರಿಂದ ಅನೇಕ ವಿಷಯಗಳನ್ನು ಕಲಿತರು. ಅದೇ ಸಮಯಕ್ಕೆ ಅವರೂ ಸಹ ಅನೇಕ ಸಂಶೋಧನೆಗಳನ್ನು ಮಾಡಿ ತಮ್ಮ ನಾಗರಿಕತೆಯನ್ನು ಶ್ರೀಮಂತಗೊಳಿಸಿದರು ಈ ಹಿನ್ನಲೆಯಲ್ಲಿ ನಾವು ಮೆಸೊಪೊಟೇಮಿಯನ್ನರು ವಿಶ್ವಕ್ಕೆ ನೀಡಿದ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡೋಣ.

ಮೆಸೊಪೊಟೇಮಿಯಾ ಇದು ಗ್ರೀಕ್ ಶಬ್ದವಾಗಿದ್ದು, ಇದರ ಅರ್ಥ ಎರಡು ನದಿಗಳ ನಡುವಿನ ಪ್ರದೇಶ ಎಂದಾಗುತ್ತದೆ. 'ಯುಫ್ರಟಿಸ್ ಮತ್ತು ಟೈಗ್ರಿಸ್' ನದಿಗಳು ಫಲವತ್ತಾದ ಮೈದಾನವನ್ನು ರೂಪಿಸಿವೆ. ಆರಂಭಿಕ ವ್ಯವಸಾಯಗಾರರು ಹಳ್ಳಿಗಳಲ್ಲಿ ನೆಲೆಸಿದರು. ಜನಸಂಖ್ಯೆ ಬೆಳವಣಿಗೆಯೊಂದಿಗೆ ಈ ಹಳ್ಳಿಗಳೇ ಪಟ್ಟಣಗಳಾಗಿ ನಂತರ ನಗರಗಳಾಗಿ ಅಭಿವೃದ್ಧಿ ಹೊಂದಿದವು. ಈ ಮೈದಾನಗಳು ಹಲವು ನಾಗರಿಕತೆಗಳ ತೊಟ್ಟಿಲಗಳಾಗಿದ್ದವು. ಇಲ್ಲಿ ಸುಮಾರು ಸಾ. ಶ. ಪೂ. 3500 ರಿಂದ 500 ರ ಅವಧಿಯಲ್ಲಿ ಅನೇಕ ನಾಗರಿಕತೆಗಳು ಬೆಳೆದು ಆಳಿದವು. ಆದ್ದರಿಂದ ಮೆಸೊಪೊಟೇಮಿಯಾವನ್ನು **'ನಾಗರಿಕತೆಗಳ ತೊಟ್ಟಿಲು ಮತ್ತು ಸಮಾಧಿ'** ಎಂದು ಕರೆಯುತ್ತಾರೆ.

ಮೆಸೊಪೊಟೋಮಿಯಾ ಇದು ಇಂದಿನ ಪೂರ್ವ ಸಿರಿಯಾ ಮತ್ತು ದಕ್ಷಿಣ ಟರ್ಕಿ ಹಾಗೂ ಇರಾಕಿನ ಬಹುಭಾಗಗಳನ್ನು ಒಳಗೊಂಡಿದೆ. ಇದನ್ನು ಸಿನ್ನಾರ ಪ್ರದೇಶವೆಂದು ಕರೆಯಲಾಗುತ್ತದೆ. ಈ ಪ್ರದೇಶವು ಪ್ರಾಚೀನ

ಸಂಸ್ಕೃತಿ ಮತ್ತು ನಾಗರಿಕತೆಯ ಕೇಂದ್ರವಾಗಿದ್ದು, ಈಜಿಪ್ಟ್ ಮತ್ತು ಭಾರತದವರೆಗೂ ತನ್ನ ಪ್ರಭಾವವನ್ನು ವಿಸ್ತರಿಸಿತ್ತು.

ಮೆಸೊಪೊಟೇಮಿಯಾ ನಕ್ಷೆ

ಈ ನಾಗರಿಕತೆಯ ನಿಶ್ಚಿತವಾದ ಕಾಲವನ್ನು ಊಹಿಸುವದು ಬಹಳ ಕಠಿಣವಾಗಿದೆ. ಇತಿಹಾಸಕಾರರು ಈ ನಾಗರಿಕತೆಯು ಅಂದಾಜು ಸಾ.ಶ.ಪೂ. 4000 ರಿಂದ 3000ಗಳ ಮಧ್ಯದಲ್ಲಿ ಪ್ರಾರಂಭವಾಗಿರಬಹುದೆಂದು ಅಂದಾಜಿಸಿದ್ದಾರೆ. ಮೆಸೊಪೊಟೇಮಿಯಾ ಪ್ರದೇಶವು ಈಜಿಪ್ತಿನಂತಹ ನೈಸರ್ಗಿಕ ರಕ್ಷಣೆ ಇಲ್ಲದೆ, ಮೇಲಿಂದ ಮೇಲೆ ವಿದೇಶಿಯರ ದಾಳಿಗೆ ಒಳಗಾಯಿತು. ಇದರ ಪರಿಣಾಮವಾಗಿ ಅನೇಕ ಸಾಮ್ರಾಜ್ಯಗಳ ಏಳಿಗೆ ಮತ್ತು ಅವನತಿಗೆ ಕಾರಣವಾಯಿತು. ಈ ಕೆಳಗಿನ 5 ಪ್ರಮುಖ ಜನಾಂಗಗಳು ಮೆಸೊಪೊಟೇಮಿಯಾದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ರೂಪಿಸಿದವು.

1). ಸುಮೇರಿಯನ್ನರು 2) ಅಕ್ಕಾಡಿಯನ್ನರು 3) ಅಮೋರಿಯನ್ನರು ಅಥವಾ ಪ್ರಾಚೀನ ಬೆಬಿಲೋನಿಯನ್ನರು 4) ಅಸ್ಸೀರಿಯನ್ನರು 5) ಚಾಲ್ಡಿಯನ್ನರು ಅಥವಾ ಹೊಸ ಬೆಬಿಲೋನಿಯನ್ನರು

1). ಸುಮೇರಿಯನ್ನರು: ಇವರು ಮೆಸೊಪೊಟೇಮಿಯಾ ನಾಗರಿಕತೆಯ ಹರಿಕಾರರು. ಇವರು ಮೊದಲು ಸುಮೇರ ಪ್ರದೇಶದಲ್ಲಿ ವಾಸವಾಗಿದ್ದರಿಂದ ಇವರನ್ನು ಸುಮೇರಿಯನ್ನರೆಂದು ಕರೆಯುತ್ತಾರೆ.

2). ಅಕ್ಕಾಡಿಯನ್ನರು: ಇವರು ಸಿನ್ನಾರದ ವಾಯುವ್ಯಕ್ಕೆ ವಾಸಿಸುತ್ತಿದ್ದರು ಆ ಪ್ರದೇಶಕ್ಕೆ ಅಕ್ಕಾಡ ಎಂದು ಕರೆಯುತ್ತಾರೆ. ಆದ್ದರಿಂದ ಇವರಿಗೆ ಅಕ್ಕಾಡಿಯನ್ನರೆಂಬ ಹೆಸರು ಬಂತು. ಇವರು ಸುಮೇರ ಪ್ರದೇಶವನ್ನು ವಶಪಡಿಸಿಕೊಂಡರು ಮತ್ತು ಆ ಸಂಸ್ಕೃತಿಯ ಅನೇಕ ಅಂಶಗಳನ್ನು ಮುಂದುವರೆಸಿದರು. ಇವರಲ್ಲಿ 1ನೇಯ ಸರ್ಗಾನ್ ಎಂಬುವನು ಅತ್ಯಂತ ಯಶಸ್ವಿ ದೊರೆಯಾಗಿದ್ದನು. ಇವನು ತನ್ನ ರಾಜ್ಯವನ್ನು ಬಲಿಷ್ಠಗೊಳಿಸಿದನು. 'ಅಗಾದೆ' ಅಕ್ಕಾಡಿಯನ್ನರ ರಾಜಧಾನಿಯಾಗಿತ್ತು.

3). ಅಮೋರಿಯನ್ನರು ಅಥವಾ ಪ್ರಾಚೀನ ಬೆಬಿಲೋನಿಯನ್ನರು: ಇವರು ಅಕ್ಕಾಡಿಯನ್ನರನ್ನು ಧ್ವಂಸ ಮಾಡಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಆಗ 250 ವರ್ಷಗಳ ಕಾಲ ಅರಾಜಕತೆಯುಂಟಾಗಿತ್ತು. ಸಾಮ್ರಾಟ

ಹಮ್ಮುರಾಬಿಯು ಈ ಜನಾಂಗದ ಅತ್ಯಂತ ಪ್ರಸಿದ್ಧ ದೊರೆ ಮತ್ತು ಕಾನೂನು ರಚನಾಕಾರನಾಗಿದ್ದನು. ಹಮ್ಮುರಾಬಿಯ ಮರಣಾ ನಂತರ ಅಮೋರಿಯನ್ನರ ಸಂಸ್ಕೃತಿ ಜಡವಾಯಿತು.

4). **ಅಸ್ಸೀರಿಯನ್ನರು:** ಇವರು ಸಮ್ರಾಟ ತಿಲ್‌ಘಾತ್ ಪಿಲ್ಸರ್‌ನ ಕಾಲದಲ್ಲಿ ಮೆಸೊಪೊಟೇಮಿಯಾದ ವೈಭವವನ್ನು ಮರಳಿ ಸ್ಥಾಪಿಸಿದರು. ಇವರು ಬೃಹತ್ ಸಾಮ್ರಾಜ್ಯವನ್ನು ಕಟ್ಟಿದರು. 2ನೇ ಸರ್ಗಾನ್, ಸೆನ್ನಾಚರಿಬ್, ಮತ್ತು ಅಸ್ಸೂರಬಾನಿಪಾಲ್ ಈ ವಂಶದ ಪ್ರಸಿದ್ಧ ದೊರೆಗಳು. 'ನಿನ್‌ವೆಹ' ಇವರ ರಾಜಧಾನಿಯಾಗಿತ್ತು.

5). **ಚಾಲ್ಡಿಯನ್ನರು ಅಥವಾ ಹೊಸ ಬೆಬಿಲೋನಿಯನ್ನರು:** ಅಸ್ಸೂರಬಾನಿಪಾಲನ ಮರಣಾ ನಂತರ ಚಾಲ್ಡಿಯನ್ನರು ಅಧಿಕಾರಕ್ಕೆ ಬಂದರು. ಇವರು ನಿನ್‌ವೆಹ ನಗರವನ್ನು ನಾಶ ಮಾಡಿದರು ಮತ್ತು ಬೆಬಿಲೋನಿಯಾದ ಪುನರ್ ನಿರ್ಮಾಣ ಮಾಡಿ ತಮ್ಮ ರಾಜಧಾನಿಯನ್ನಾಗಿಸಿದರು. ಆದ್ದರಿಂದ ಇವರನ್ನು ಹೊಸ ಬೆಬಿಲೋನಿಯನ್ನರೆಂದು ಕರೆಯಲಾಗುತ್ತದೆ. ನೆಬುಖಡ್ನೆಜರ್ ಎಂಬುವವನು ಈ ಜನಾಂಗದ ಪ್ರಸಿದ್ಧ ದೊರೆ. ಇವನು ಬೆಬಿಲೋನಿಯಾ ನಗರದ ಸುತ್ತ ಇಟ್ಟಿಗೆಯ ಕೋಟೆಯನ್ನು ಕಟ್ಟಿಸಿದನು. ಮತ್ತು **'ತೂಗುವ ಉದ್ಯಾನ'** ನಿರ್ಮಿಸಿದನು. ಪರ್ಶಿಯಾದ ದೊರೆ ಸೈರಸ್‌ನು ಸಾ.ಶ.ಪೂ.538ರಲ್ಲಿ ಬೆಬಿಲೋನಿಯಾವನ್ನು ವಶಪಡಿಸಿಕೊಂಡ ನಂತರ ಚಾಲ್ಡಿಯನ್ನರ ಸಾಮ್ರಾಜ್ಯವು ಕೊನೆಗೊಂಡಿತು.

ಮೆಸೊಪೊಟೇಮಿಯಾ ನಾಗರಿಕತೆಯ ವಿಶಿಷ್ಟ ಲಕ್ಷಣಗಳು:

ರಾಜಕೀಯ ಜೀವನ:

ಪ್ರಾರಂಭದಲ್ಲಿ ಮೆಸೊಪೊಟೇಮಿಯನ್ನರು ನಗರ–ರಾಜ್ಯಗಳನ್ನು ಸ್ಥಾಪಿಸಿದರು. ಇವುಗಳೇ ಮುಂದೆ ರಾಜ್ಯಗಳಾಗಿ ನಂತರ ಸಾಮ್ರಾಜ್ಯವಾಗಿ ಬೆಳೆದವು. ರಾಜನು ಆಡಳಿತ ಮತ್ತು ಧರ್ಮಗಳೆರಡರ ಮುಖ್ಯಸ್ಥನಾಗಿದ್ದನು. ರಾಜನನ್ನು ಭೂಮಿಯ ಮೇಲೆ ದೇವರ ಪ್ರತಿನಿಧಿಯೆಂದು ಪರಿಗಣಿಸಲಾಗಿತ್ತು. ಆತನು ರಾಜ್ಯ ಮತ್ತು ಅಲ್ಲಿನ ಎಲ್ಲ ಸಂಪತ್ತಿನ ಒಡೆಯನಾಗಿದ್ದನು. ಅವನು ದೇವರ ಹೆಸರಿನಲ್ಲಿ ರಾಜ್ಯವನ್ನು ಆಳುತ್ತಿದ್ದನು. ಅನೇಕ ಸಂದರ್ಭಗಳಲ್ಲಿ ರಾಜನ ಅಧಿಕಾರವು ಸೇನಾಧಿಕಾರಿಗಳ ಕೈಗೆ ಸಿಗುತ್ತಿತ್ತು. ಬಲಿಷ್ಠ ರಾಜರು ಮಾತ್ರ ಅಪರಿಮಿತವಾದ ಅಧಿಕಾರವನ್ನು ಚಲಾಯಿಸುತ್ತಿದ್ದರು.

ಪುರೋಹಿತರು ಆಡಳಿತದಲ್ಲಿ ಹೆಚ್ಚಿನ ಪ್ರಭಾವವನ್ನು ಹೊಂದಿದ್ದರು. ಪ್ರಾದೇಶಿಕ ಆಡಳಿತವನ್ನು ನೋಡಿಕೊಳ್ಳಲು ರಾಜ್ಯಪಾಲರನ್ನು ನೇಮಿಸಲಾಗುತ್ತಿತ್ತು. ಮೆಸೊಪೊಟೋಮಿಯನ್ನರು ಕುದುರೆಗಳಿಂದ ಸಾಗಿಸಲ್ಪಡುವ ಅಂಚೆ ವ್ಯವಸ್ಥೆಯನ್ನು ಹೊಂದಿದ್ದರು.

ಹಮ್ಮುರಾಬಿ

ಈತ ಬೆಬಿಲೋನಿಯಾದ ರಾಜನಾಗಿದ್ದನು. ಸುಮೇರನ್ನು ವಶಪಡಿಸಿಕೊಂಡನು ಹಾಗೂ ಸಾ.ಶ.ಪೂ. 2123 ರಿಂದ 2081ರ ಅವಧಿಯಲ್ಲಿ ಆಳಿದನು. ಈತ ಮೆಸೊಪೊಟೋಮಿಯಾದ ಅತ್ಯಂತ ಪ್ರಸಿದ್ಧ ದೊರೆಯಾಗಿದ್ದನು. ಬಹುದೊಡ್ಡ ಸಾವಮ್ರಾಜ್ಯವಾದಿ ಹಾಗೂ ಸಮರ್ಥ ಆಡಳಿತಗಾರನಾಗಿದ್ದನು. ಇವನು ಇಡೀ ಮೆಸೊಪೊಟೇಮಿಯಾವನ್ನು ಆಕ್ರಮಿಸಿಕೊಂಡನು. ಇವನೊಬ್ಬ ಪ್ರಬುದ್ಧ, ಜ್ಞಾನ ಸಂಪನ್ನ ಸರ್ವಾಧಿಕಾರಿಯಾಗಿದ್ದನು. ಈತನು ಸುಮೇರ ಮತ್ತು ಅಕ್ಕಾಡ ಪ್ರದೇಶಗಳನ್ನು ಒಂದುಗೂಡಿಸಿದನು. ತನ್ನ ರಾಜ್ಯವನ್ನು ಜಿಲ್ಲೆಗಳಾಗಿ ವಿಂಗಡಿಸಿದನು. ಖುದ್ದಾಗಿ ಆಡಳಿತದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದನು. ಇವನು ಬೆಬಿಲೋನಿಯಾದಲ್ಲಿ

ಅರಮನೆಗಳನ್ನು, ಕೋಟೆಗಳನ್ನು ಮತ್ತು ದೇವಾಲಯಗಳನ್ನು ಕಟ್ಟಿಸಿದನು. ಕೇಂದ್ರೀಯ ಮತ್ತು ಪ್ರಾಂತೀಯ ಆಡಳಿತವು ರಾಜನ ಆದೇಶದಂತೆ ಸುಗಮವಾಗಿ ನಡೆಯುತ್ತಿತ್ತು.

ಹಮ್ಮುರಾಬಿಯ ಸಂಹಿತೆ:

ಹಮ್ಮುರಾಬಿಯು ತನ್ನ ಶಾಸನಗಳಿಂದ ಮನುಕುಲದ ಇತಿಹಾಸದಲ್ಲಿ ಅಮರನಾಗಿದ್ದಾನೆ. ಈತನು ತನ್ನ ಕಾಲದಲ್ಲಿ ಚಾಲ್ತಿಯಲ್ಲಿದ್ದ ಎಲ್ಲ ಕಾನೂನುಗಳನ್ನು ಸಂಗ್ರಹಿಸಿದನು. ಅವುಗಳನ್ನು ವಿಂಗಡಿಸಿದನು ಮತ್ತು ಇನ್ನಷ್ಟು ಸುಧಾರಿಸಿದನು. ಅಲ್ಲದೇ ಅವುಗಳಿಗೆ ಇನ್ನಷ್ಟು ಕಾನೂನುಗಳನ್ನು ಸೇರಿಸಿದನು. ಹೀಗೆ ಸಂಗ್ರಹಿಸಿ ಸುಧಾರಿಸಿದ ಕಾನೂನುಗಳಿಗೆ ಸಂಖ್ಯೆಗಳನ್ನು ನೀಡಿದನು. ಅವನ ಕಾನೂನು ಸಂಹಿತೆಯಲ್ಲಿ 282 ಕಾನೂನುಗಳಿವೆ. ಈ ಕಾನೂನುಗಳು ವೈಯಕ್ತಿಕ ಆಸ್ತಿ, ವಾಣಿಜ್ಯ–ವ್ಯಾಪಾರ, ಅಪಘಾತಗಳು, ಕಾರ್ಮಿಕರು, ಗುಲಾಮರು, ಮದುವೆ, ವಿವಾಹ ವಿಚ್ಛೇದನ, ಸ್ತ್ರೀ–ಪುರುಷರ ಅಧಿಕಾರಗಳು ಮುಂತಾದ ಜೀವನದ ಎಲ್ಲ ಅಂಶಗಳನ್ನು ಒಳಗೊಂಡಿವೆ.

ಹಮ್ಮುರಾಬಿಯ ಕಾನೂನು ಸಂಹಿತೆಯನ್ನು ಹೊಂದಿದ ಕಲ್ಲಿನ ಶಾಸನ.

ಕಲ್ಲಿನ ಶಾಸನದ ಸಮೀಪ ದೃಶ್ಯ



ಅಕ್ಕಾಡಿಯನ್ ಭಾಷೆಯಲ್ಲಿ ಬರೆದ ಟ್ಯಾಬಲೆಟ್ (ಶಿಲಾ ಫಲಕ)

ಹಮ್ಮುರಾಬಿಯ ಶಾಸನವನ್ನು ಒಂದು ಕಪ್ಪು ಶಿಲೆಯ ಮೇಲೆ ಅಂದವಾಗಿ ಕೆತ್ತಲಾಗಿದೆ. ಇದು ಮಾನವ ಇತಿಹಾಸಕ್ಕೆ ತಿಳಿದಿರುವ ಅತ್ಯಂತ ಪ್ರಾಚೀನ ಲಿಖಿತ ಕಾನೂನುಗಳ ಸಂಗ್ರಹವಾಗಿದೆ. ಈ ಕಲ್ಲಿನ ಮೇಲ್ಭಾಗದಲ್ಲಿ ಸಾಮ್ರಾಟ ಹಮ್ಮುರಾಬಿಯು ಸೂರ್ಯ ದೇವತೆಯಾದ ಶಮಾಸನಿಂದ ಈ ಕಾನೂನುಗಳನ್ನು ಪಡೆಯುತ್ತಿರುವಂತಹ ಚಿತ್ರವನ್ನು ಕೆತ್ತಲಾಗಿದೆ. ಈ ಕಾನೂನಿನ ಸಂಗ್ರಹವು ಪ್ರಬುದ್ಧ ಮತ್ತು ಸುಧಾರಿತ ಕಾನೂನುಗಳು ಮತ್ತು ಅಮಾನವೀಯ ಶಿಕ್ಷೆಗಳ ಮಿಶ್ರಣವಾಗಿದೆ. ಅದರಲ್ಲಿನ ಅನೇಕ ಕಾನೂನುಗಳು **'ಸೇಡಿಗೆ–ಸೇಡು, ಮುಯ್ಯಿಗೆ–ಮುಯ್ಯಿ ಕಣ್ಣಿಗೆ–ಕಣ್ಣು, ಹಲ್ಲಿಗೆ–ಹಲ್ಲು'** ಎಂಬ ತತ್ವವನ್ನು ಆಧರಿಸಿವೆ. ಈ ಕಾನೂನುಗಳು ಹಮ್ಮುರಾಬಿಯ ಸಾಮ್ರಾಜ್ಯದಲ್ಲಿ ಸಾರ್ವತ್ರಿಕವಾಗಿ ಜಾರಿಯಲ್ಲಿದ್ದವು.

ಈ ಕಾನೂನುಗಳು 'ಸಂಪೂರ್ಣ ನ್ಯಾಯ ಒದಗಿಸುವದು ರಾಜ್ಯದ ಜವಾಬ್ದಾರಿ' ಎಂಬ ತತ್ವವನ್ನಾಧರಿಸಿದ್ದವು. ವ್ಯಕ್ತಿಗಳು ಸೇಡು ತೀರಿಸಿಕೊಳ್ಳಲಾಗದು ಆದರೆ ರಾಜ್ಯವು ತನ್ನಿಷ್ಟದಂತೆ ಸೇಡಿನ ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಈ ಕಾನೂನುಗಳು ಜನರು ಅಪರಾಧ ಮಾಡದಂತೆ ಭಯ ಹುಟ್ಟಿಸುವ ಉದ್ದೇಶ ಹೊಂದಿದ್ದವು. ಇವುಗಳಲ್ಲಿ ಜೀವನದ ಎಲ್ಲ ವೃತ್ತಿಗಳು ಹಾಗೂ ಅಂಶಗಳಿಗೂ ಸಂಬಂಧಿಸಿದ ಕಲಮುಗಳಿವೆ. ಈ ಕಾನೂನುಗಳು ಸಮಾನತೆಯನ್ನು ಸ್ಥಾಪಿಸುವ ಉದ್ದೇಶ ಹೊಂದಿದ್ದವು. ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಮತ್ತು ಸ್ವಂತ ಆಸ್ತಿಯನ್ನು ಹೊಂದುವ ಅಧಿಕಾರವನ್ನು ನೀಡಲಾಗಿತ್ತು.

ಗುಲಾಮರೂ ಕೂಡ ಆಸ್ತಿ ಸಂಪಾದಿಸುವ ಅಧಿಕಾರ ಮತ್ತು ನಿಗದಿ ಪಡಿಸಿದ ನಿಬಂಧನೆಗಳನ್ನು ಪಾಲಿಸಿದರೆ ಗುಲಾಮಗಿರಿಯಿಂದ ಸ್ವತಂತ್ರರಾಗುವ ಅವಕಾಶಗಳನ್ನೂ ಸಹ ಈ ಕಾನೂನು ಒದಗಿಸಿತ್ತು. ಶ್ರೀಮಂತರು ಮತ್ತು ಉಚ್ಚ ಅಧಿಕಾರಿಗಳು ಮಾಡುವ ತಪ್ಪಿಗೆ ಕಠೋರ ಶಿಕ್ಷೆಯಾಗುತ್ತಿತ್ತು. ಬಡವರು ಮತ್ತು ಶ್ರೀಮಂತರ ನಡುವಿನ ಭೇದ–ಭಾವವನ್ನು ಕಡಿಮೆ ಮಾಡುವ ಪ್ರಯತ್ನಗಳಿದ್ದವು. ವಾಣಿಜ್ಯ ವ್ಯವಹಾರಗಳಿಗೆ ಸಾಕ್ಷಿಯೊಬ್ಬರ ಸಹಿ ಅವಶ್ಯಕವಾಗಿತ್ತು. ಒಂದು ವೇಳೆ ವೈದ್ಯನು ತನ್ನ ಕರ್ತವ್ಯದಲ್ಲಿ ವಿಫಲನಾದರೆ, ರೋಗಿಗೆ ಪರಿಹಾರವನ್ನು ನೀಡಬೇಕಾಗುತ್ತಿತ್ತು. ಹಮ್ಮುರಾಬಿಯ ಶಾಸನವು ಇಂತಹದೇ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಜಗತ್ತಿನ ಇತರ ರಾಜರ ಮೇಲೆ ಪ್ರಭಾವ ಬೀರಿತ್ತು. ಜೀವನದ ಎಲ್ಲ ಅಂಶಗಳನ್ನು ಒಳಗೊಂಡಿರುವಲ್ಲಿ ಈ ಕಾನೂನಿನ ಮಹತ್ವ ಅಡಗಿದೆ. ಇದೊಂದು ಹಮ್ಮುರಾಬಿಯ ಕಾನೂನು ಸಾಧನೆಯಾಗಿದ್ದು, ಅವನನ್ನು ಇತಿಹಾಸದಲ್ಲಿ ಅಮರನನ್ನಾಗಿಸಿದೆ.

ಸಾಮಾಜಿಕ ಸ್ಥಿತಿ:

ಮೆಸೊಪೊಟೇಮಿಯಾದ ಸಮಾಜವು ನಾಲ್ಕು ವರ್ಗ (ಗುಂಪು) ಗಳಲ್ಲಿ ವಿಭಜಿತವಾಗಿತ್ತು. 1.ಅರಸರು–ಆಳುವವರ ವರ್ಗ, 2.ಪುರೋಹಿತರು, 3.ಜಮೀನ್ದಾರರು, ಮತ್ತು ವ್ಯಾಪಾರಸ್ಥರು ಹಾಗೂ 4.ಗುಲಾಮರು.

ಪುರೋಹಿತರು ಮತ್ತು ಲಿಪಿಕರು ಆಡಳಿತದಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು ಮತ್ತು ಸಮಾಜದಲ್ಲಿ ಅವರಿಗೆ ಹೆಚ್ಚಿನ ಸ್ಥಾನಮಾನವಿತ್ತು. ಸರದಾರರು ಅನುವಂಶೀಯವಾಗಿ ಅಧಿಕಾರವನ್ನು ಅನುಭವಿಸುತ್ತಿದ್ದರು. ಅವರು ಆಡಳಿತ ಮತ್ತು ಸೈನ್ಯದಲ್ಲಿ ಹೆಚ್ಚಿನ ಮರ್ಯಾದೆ ಹೊಂದಿ ಅಧಿಕಾರಗಳನ್ನು ಚಲಾಯಿಸುತ್ತಿದ್ದರು. ರೈತರು, ಕಲಾವಿದರು, ಕುಶಲಕರ್ಮಿಗಳು, ಚಿಕ್ಕ ವ್ಯಾಪಾರಸ್ಥರು, 3ನೇ ವರ್ಗದವರಾಗಿದ್ದು, ಗುಲಾಮರು ಅತ್ಯಂತ ಕೆಳವರ್ಗದವರಾಗಿದ್ದರು. ಗುಲಾಮರ ವ್ಯಾಪಾರ ನಡೆಯುತ್ತಿತ್ತು. ಮಹಿಳೆಯರಿಗೆ ಗಮನಾರ್ಹವಾದ ಸ್ವಾತಂತ್ರವಿತ್ತು. ಅವರು ಆಸ್ತಿ ಹೊಂದುವ ಹಕ್ಕು ಹೊಂದಿದ್ದರು, ಅವರಿಗೆ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳು ಇದ್ದವು.

ಧರ್ಮ :

ಮೆಸೊಪೊಟೇಮಿಯನ್ನರು ನಿಸರ್ಗವನ್ನು ಪೂಜಿಸುತ್ತಿದ್ದರು. ಅವರು ಅಸಂಖ್ಯಾತ ದೇವ–ದೇವತೆಗಳನ್ನೂ ಪೂಜಿಸುತ್ತಿದ್ದರು. ಪ್ರತಿಯೊಬ್ಬ ಮನುಷ್ಯನು ಯಾವ ಷರತ್ತು ಇಲ್ಲದೇ ದೇವರಿಗೆ ಸಂಪೂರ್ಣ ಶರಣಾಗಬೇಕೆಂದು ಪ್ರತಿಪಾದಿಸುತ್ತಿದ್ದರು ಮತ್ತು ಕೊನೆಯಲ್ಲಿ ಎಲ್ಲವೂ ಒಳ್ಳೆಯದೇ ಆಗುತ್ತದೆ ಎಂದು ಭಾವಿಸುತ್ತಿದ್ದರು. ಪ್ರತಿಯೊಂದು ಹಳ್ಳಿ ಮತ್ತು ನಗರಕ್ಕೂ ಒಂದು ಸ್ಥಾನಿಕ ದೇವತೆ ಇರುತ್ತಿತ್ತು. ಅವುಗಳಿಗಾಗಿ 'ಜಗ್ಗುರಾತ'ಗಳು ಅಂದರೆ, ಎತ್ತರದ ಶಿಖರಗಳುಳ್ಳ ದೇವಾಲಯಗಳನ್ನು ಕಟ್ಟುತ್ತಿದ್ದರು. ಅವು ಶಿಕ್ಷಣದ ಕೇಂದ್ರಗಳೂ ಆಗಿದ್ದವು. ಮಾರ್ಡುಕ್, ಇಸ್ಥವ್, ಶಮಾಶ್, ಉರುಕ್, ಉರ್, ನನ್ನಾರ್ ಮುಂತಾದ ದೇವ ದೇವತೆಗಳನ್ನು ಪೂಜಿಸುತ್ತಿದ್ದರು. ಅವರಿಗೆ 'ಮಾರ್ಡುಕ್' ಸರ್ವೋಚ್ಚ ದೇವತೆಯಾಗಿದ್ದು, 'ಇಸ್ತಾರ್' ಎಲ್ಲ ದೇವತೆಗಳ ತಾಯಿ ಮತ್ತು 'ಶಮಾಶ್' ಸೂರ್ಯ ದೇವನಾಗಿದ್ದನು. 'ನನ್ನಾರ' ಚಂದ್ರ ದೇವತೆ, 'ಬೆಲ್' ಭೂ ದೇವತೆ ಮತ್ತು ಸಾವಿನ ದೇವತೆಯಾಗಿದ್ದಳು. 'ಅಸ್ಸೂರ್' ಯುದ್ಧ ದೇವನಾಗಿದ್ದ. ಅವರು ಪ್ರಾಣಿ ಬಲಿಯನ್ನು ಆಚರಿಸುತ್ತಿದ್ದರು ಮತ್ತು ಮಾಟ– ಮಂತ್ರ ದೆವ್ವಗಳನ್ನು ನಂಬುತ್ತಿದ್ದರು.

ಆರ್ಥಿಕ ಸ್ಥಿತಿ:

ಕೃಷಿ ಅವರ ಮುಖ್ಯ ಉದ್ಯೋಗವಾಗಿತ್ತು. ಅದರ ಜೊತೆಗೆ ಪ್ರಾಣಿ ಸಾಕಾಣಿಕೆ ಮತ್ತು ಹೈನುಗಾರಿಕೆಯೂ ಮಹತ್ವ ಪಡೆದಿತ್ತು. ಅವರು ಎಮ್ಮೆ, ಆಡು, ಕುರಿ ಕುದುರೆ, ಕತ್ತೆ ಮುಂತಾದ ಪ್ರಾಣಿಗಳನ್ನು ಸಾಕುತ್ತಿದ್ದರು. ಹೊಲಗಳಿಗೆ ಒಡ್ಡು ನಿರ್ಮಿಸಿ ಕೃಷಿಗಾಗಿ ನೀರಾವರಿಯನ್ನು ಅಭಿವೃದ್ಧಿ ಪಡಿಸಿದ್ದರು. ಅವರು ಅತ್ಯಂತ ಜಾಣತನದಿಂದ ನೀರನ್ನು ಬಳಸುತ್ತಿದ್ದರು. ಎರಡೂ ನದಿಗಳಿಂದ ಕೃಷಿಗೆ ನೀರು ಹರಿಯುವಂತೆ ಕಾಲುವೆ ತೋಡಿದ್ದರು. ಮೆಸೊಪೊಟೇಮಿಯನ್ನರು ತಮ್ಮ ಕೃಷಿಗೆ ವರ್ಷವಿಡೀ ನೀರು ಪೂರೈಕೆಯಾಗುವಂತೆ ಕಾಲುವೆಗಳು, ಚಿಕ್ಕ ಆಣೆಕಟ್ಟುಗಳು ಮತ್ತು ನೀರಿನ ಸಂಗ್ರಹಾಗಾರಗಳನ್ನು ನಿರ್ಮಿಸಿದ್ದರು. ನೀರೆತ್ತಲು ಏತವನ್ನು ಮೆಸೊಪೊಟೇಮಿಯನ್ನರೇ ಕಂಡು ಹಿಡಿದಿದ್ದಾರೆಂದು ನಂಬಲಾಗಿದೆ.

ಏತ ನೀರಾವರಿ

ಗೋಧಿ, ಬಾರ್ಲಿ, ಹಣ್ಣುಗಳು, ಮತ್ತು ಖರ್ಜೂರಗಳನ್ನು ಬಹುದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದ್ದರು ಮತ್ತು ಅವುಗಳನ್ನು ರಫ್ತು ಮಾಡುತ್ತಿದ್ದರು. ಅವರ ಪ್ರಾರಂಭದ ವ್ಯಾಪಾರವು ವಸ್ತುವಿನಿಮಯವನ್ನಾಧರಿಸಿತ್ತು. ನಂತರ ಲೋಹದ ನಾಣ್ಯಗಳನ್ನು ಬಳಸುತ್ತಿದ್ದರು. ನೇಕಾರಿಕೆ, ಬಣ್ಣ ಹಾಕುವುದು, ಕಟ್ಟಿಗೆ ಕೆಲಸ, ಪಾತ್ರೆ ಮತ್ತು ಇಟ್ಟಿಗೆ ತಯಾರಿಕೆ, ಆಭರಣ ತಯಾರಿಕೆ, ಗಣಿಗಾರಿಕೆ, ಲೋಹ ತಯಾರಿಕೆ ಅವರ ಮಹತ್ವದ ವೃತ್ತಿಗಳಾಗಿದ್ದವು. ತಾಮ್ರ, ಕಬ್ಬಿಣ, ಬೆಳ್ಳಿ, ಬಂಗಾರ, ಕಂಚು ಮುಂತಾದವುಗಳು ಅವರು ಬಳಸುವ ಲೋಹಗಳಾಗಿದ್ದವು. ಇವರು

ಮರ ಮತ್ತು ನೂಲಿನ ಬಟ್ಟೆ, ಚರ್ಮ ಮತ್ತು ಕರ್ಜೂರಗಳನ್ನು ರಫ್ತು ಮಾಡುತ್ತಿದ್ದರು, ಹಾಗೂ ವಿವಿಧ ಲೋಹಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಇವರು ಭಾರತ ಮತ್ತು ಈಜಿಪ್ತ್‌ಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದರು. ಕುದುರೆ ಮತ್ತು ಕತ್ತೆಗಳು ಸಾಗಾಟದ ಸಾಧನಗಳಾಗಿದ್ದವು.

ಕಲೆ ಮತ್ತು ವಾಸ್ತುಶಿಲ್ಪ:

ಮೆಸೊಪೊಟೇಮಿಯಾದಲ್ಲಿ ಕಲ್ಲಿನ ಲಭ್ಯತೆ ಇರಲಿಲ್ಲವಾದ್ದರಿಂದ ಇಲ್ಲಿ ಈಜಿಪ್ತಿಯನ್ನರಂತಹ ಕಲೆ ಮತ್ತು ವಾಸ್ತುಶಿಲ್ಪದ ಪ್ರಕಾರಗಳು ಕಾಣಿಸುವುದಿಲ್ಲ. ಕಟ್ಟಡಗಳನ್ನು ಇಟ್ಟಿಗೆ ಮತ್ತು ಮಣ್ಣಿನಿಂದ ಕಟ್ಟುತ್ತಿದ್ದರು. ಹೀಗಾಗಿ ಅವುಗಳಲ್ಲಿ ಕೆಲವೇ ಕೆಲವು ಉಳಿದಿವೆ. ಬ್ಯಾಬಿಲೋನಿಯಾದ ದೊರೆ ನೆಬುಖಡ್ನೆಜರನು ಬ್ಯಾಬಿಲೋನಿಯಾದಲ್ಲಿ ಉದ್ಯಾನವುಳ್ಳ ಅರಮನೆಯನ್ನು ಕಟ್ಟಿಸಿದನು. ಇದನ್ನು **'ತೂಗುವ ಉದ್ಯಾನ'** ಎಂದು ಕರೆಯಲಾಗುತಿತ್ತು. ಇದು ಪ್ರಾಚೀನ ವಿಶ್ವದ ಏಳು ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಅದೊಂದು ದೊಡ್ಡ ಅರಮನೆಯಾಗಿದ್ದು ಅದರ ಮೇಲ್ಮಹಡಿಯ ಮೇಲೆ ವೈವಿಧ್ಯ ಪೂರ್ಣ ಹೂದೋಟವನ್ನು ನಿರ್ಮಿಸಲಾಗಿತ್ತು. ಮೆಸೊಪೊಟೇಮಿಯನ್ನರು ಅತ್ಯುತ್ತಮ ಕಲಾವಿದರೂ ಮತ್ತು ಮೂರ್ತಿಕಾರರೂ ಆಗಿದ್ದರು. ಅವರು ಗರುಡ ಹಾಗೂ ಇನ್ನಿತರ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಹಾಗೂ ಮೂರ್ತಿಗಳನ್ನು ಕೆತ್ತಿದ್ದಾರೆ.

ಮಕ್ಕಳ 'ಕಾಪಿ' ಪುಸ್ತಕಗಳು ಮತ್ತು ಜೇಡಿ ಮಣ್ಣಿನ 'ಫಲಕ'ಗಳಲ್ಲಿ ಬರೆದ 4000 ವರ್ಷಗಳಷ್ಟು ಹಳೆಯದಾದ ಗ್ರಂಥಾಲಯವು ಲಭ್ಯವಾಗಿದೆ. ಅವರು ಸಮತಟ್ಟಾದ ಇಟ್ಟಿಗೆಗಳ ಮೇಲೆ ಬರೆಯುತ್ತಿದ್ದರು. ಅವರ ಬರವಣಿಗೆಯನ್ನು 'ಕ್ಯೂನಿಫಾರಂ' ಎಂದು ಕರೆಯಲಾಗಿದೆ. ಅವರು ದಂತಕಥೆಗಳನ್ನು, ಪುರಾಣಗಳನ್ನು, ಕವಿತೆಗಳನ್ನೂ, ರಚಿಸುತ್ತಿದ್ದರು. 'ಗಿಲ್ಗಮೇಶ' ಮಹಾಕಾವ್ಯವು ಅವರ ಅತ್ಯಂತ ಶ್ರೀಮಂತ ಕಾವ್ಯವಾಗಿದೆ.

ಚಟುವಟಿಕೆ: ಪ್ರಾಚೀನ ವಿಶ್ವದ ಏಳು ಅದ್ಭುತಗಳ ಬಗ್ಗೆ ಮಾಹಿತಿ ಸಂಗ್ರಹಿಸಿ.

ಕ್ಯೂನಿಫರಂ ಬರವಣಿಗೆ

ವಿಜ್ಞಾನ ಮತ್ತು ಗಣಿತ:

ಇವರಿಗೆ ಗುರು, ಶುಕ್ರ, ಮಂಗಳ, ಶನಿ ಮತ್ತು ಬುಧ ಗ್ರಹಗಳ ತಿಳುವಳಿಕೆ ಇತ್ತು. ಸೂರ್ಯ–ಚಂದ್ರರು ಮನುಷ್ಯನ ಜೀವನದ ಮೇಲೆ ಪ್ರಭಾವ ಬೀರುತ್ತಾರೆಂದು ನಂಬಿದ್ದರು. ಅವರಿಗೆ ಜೋತಿಷ್ಯ ಶಾಸ್ತ್ರದಲ್ಲಿ ನಂಬಿಕೆ ಇತ್ತು ಮತ್ತು ಅದು ಖಗೋಳಶಾಸ್ತ್ರವನ್ನು ಆಧರಿಸಿತ್ತು. ಅವರು ವರ್ಷವನ್ನು 12 ತಿಂಗಳುಗಳಾಗಿ ವಿಭಜಿಸಿದ್ದರು. ಅದರಲ್ಲಿ 354 ದಿನಗಳಿದ್ದವು. ಅವರು ಚಾಂದ್ರಮಾನ ಕ್ಯಾಲೆಂಡರ್ ಅನುಸರಿಸುತ್ತಿದ್ದರು. ಅವರು ತಾಸೊಂದಕ್ಕೆ

60 ನಿಮಿಷ ಮತ್ತು ನಿಮಿಷವೊಂದಕ್ಕೆ 60 ಸೆಕೆಂಡುಗಳ ಜ್ಞಾನ ಹೊಂದಿದ್ದರು. ಅವರಿಗೆ ವೃತ್ತವೊಂದರಲ್ಲಿ 360 ಡಿಗ್ರಿ ಗಳಿರುತ್ತವೆ ಎಂದು ತಿಳಿದಿತ್ತು. ಅವರು ಜೋತಿಷ್ಯಶಾಸ್ತ್ರದ ಕ್ಷೇತ್ರದಲ್ಲಿ ಬಹಳಷ್ಟು ಪ್ರಗತಿ ಸಾಧಿಸಿದ್ದರು. ಆಗ ರಚಿಸಲ್ಪಟ್ಟ ಅವರ 'ಮೆಟೋರಿಯಾ ಮೆಡಿಕಾ' ಎಂಬ ಗ್ರಂಥವು ಸಸ್ಯ, ಲೋಹ ಮತ್ತು ಪ್ರಾಣಿ ಜನ್ಯ ವಸ್ತುಗಳಿಂದ ತಯಾರಿಸಿದ 550 ಔಷಧಗಳನ್ನು ಉಲ್ಲೇಖಿಸುತ್ತದೆ. ಈ ಗ್ರಂಥವು ಹಲವಾರು ರೋಗಗಳು ಮತ್ತು ಅವುಗಳ ಲಕ್ಷಣಗಳ ಕುರಿತು ವಿವರಗಳನ್ನು ನೀಡುತ್ತದೆ.

ಈ ನಾಗರಿಕತೆಯ ಅವನತಿಗೆ ಕಾರಣಗಳು:

- ಅಶಕ್ತ ಮತ್ತು ಅಸಮರ್ಥ ದೊರೆಗಳು, ಅನೇಕ ಬಾರಿ ಆಡಳಿತದ ಮೇಲಿನ ಹಿಡಿತವನ್ನು ಕಳೆದುಕೊಂಡರು ಇದು ಅರಾಜಕತೆಗೆ ಕಾರಣವಾಯಿತು.
- ರಾಜ ಮತ್ತು ಸರದಾರರಲ್ಲಿ ಉತ್ತರಾಧಿಕಾರಕ್ಕೆ ನಡೆದ ಹೋರಾಟಗಳು ಸಮಾಜದ ಶಾಂತಿ, ಸುವ್ಯವಸ್ಥೆಯನ್ನು ಕದಡಿದವು.
- ಪರ್ಷಿಯನ್ನರ ದಾಳಿಗಳು ಈ ನಾಗರಿಕತೆಯ ಅವಸಾನಕ್ಕೆ ಕಾರಣವಾಯಿತು. ಸಾ.ಶ.ಪೂ. 538ರಲ್ಲಿ ಮೆಸೊಪೊಟೇಮಿಯಾ ಪರ್ಷಿಯನ್ ಸಾಮ್ರಾಜ್ಯದ ಭಾಗವಾಯಿತು.

3.4 ಚೀನಾದ ನಾಗರಿಕತೆ

ಜಗತ್ತಿನ ನಾಗರಿಕತೆಗಳ ಬೆಳವಣಿಗೆಯಲ್ಲಿ ಬಹು ರೋಚಕವಾದದ್ದೇನೆಂದರೆ, ಬದುಕಲು ತುಂಬ ಹೋರಾಟ ಮಾಡಬೇಕಾಗಿಲ್ಲದ ಮತ್ತು ಅತ್ಯಂತ ಸುಲಭವೂ ಅಲ್ಲದ ಪ್ರದೇಶಗಳಲ್ಲಿಯೇ ನಾಗರಿಕತೆಗಳು ಬೆಳೆದಿವೆ. ಒಂದು ವೇಳೆ ನೈಸರ್ಗಿಕ ಪರಿಸ್ಥಿತಿಗಳು ಜೀವನವನ್ನು ಅತ್ಯಂತ ಸುಲಭವಾಗಿಸಿದರೆ, ಮನುಷ್ಯರು ಆಲಸಿಗಳಾಗುತ್ತಾರೆ ಮತ್ತು ಜೀವನವು ಅತ್ಯಂತ ದುಸ್ತರವಾದರೆ ನಾಗರಿಕತೆಯನ್ನು ಬೆಳಸಲು ಬೇಕಾದ ಶಕ್ತಿ ಮತ್ತು ವಿರಾಮವು ಅವರಿಗೆ ದೊರೆಯುವದಿಲ್ಲ. ಮಿತವಾದ ತೊಂದರೆಗಳಿರುವ ಪರಿಸ್ಥಿತಿಗಳು ಮನುಷ್ಯರಲ್ಲಿ ಜಾಣ್ಮೆಯ ಬೆಳವಣಿಗೆಗೆ ಪೂರಕವಾಗುವದರೊಂದಿಗೆ ನಾಗರಿಕತೆಯ ಬೆಳವಣಿಗೆ ಮಾಡುತ್ತವೆ. ಉತ್ತರ ಚೀನಾದ ಹ್ವಾಂಗ್‌ಹೊ, ಮತ್ತು ಯಾಂಗತ್ಸೆ ಹಾಗೂ ದಕ್ಷಿಣ ಚೀನಾದ ಸಿಕಿಯಾಂಗ್ ನದಿ ಬಯಲುಗಳು ನಾಗರಿಕತೆಯ ಬೆಳವಣಿಗೆಗೆ ಬೇಕಾದ ಮಿತವಾದ ಸವಾಲುಗಳನ್ನು ಮತ್ತು ಕನಿಷ್ಠ ಸೌಲಭ್ಯಗಳನ್ನು ಹೊಂದಿವೆ.

ಪ್ರಾರಂಭದಲ್ಲಿ ಚೀನಿಯರು ಜಗತ್ತಿನ ಎಲ್ಲಡೆ ಇರುವಂತೆ ಅಲೆಮಾರಿ ಸಮೂಹಗಳನ್ನು ಹೊಂದಿದ್ದರು. ಅವು ನಿಧಾನವಾಗಿ ಊಳಿಗಮಾನ್ಯ ಸಮಾಜವಾಗಿ ಬೆಳೆದವು. ಮೇಲೆ ಚರ್ಚಿಸಿದ ವಿಷಯಗಳ ಹಿನ್ನೆಲೆಯಲ್ಲಿ ನಾಗರಿಕತೆಯ ಬೆಳವಣಿಗೆಯ ಕಾಲದಲ್ಲಿ ಚೀನಾ ಮತ್ತು ಭಾರತದಲ್ಲಿ ಸಮಾನ ಪರಿಸ್ಥಿತಿಗಳು ಅಸ್ತಿತ್ವದಲ್ಲಿದ್ದವು. ಸಾ.ಶ.ಪೂ 5000ದ ಸುಮಾರಿಗೆ ಚೀನಿಯರು ವಿಶಿಷ್ಟವಾದ ನಾಗರೀಕತೆಯನ್ನು ಬೆಳೆಸಿದರು. ಅದರ ಆರಂಭಿಕ ಕಾಲದ ಬಗ್ಗೆ ಹೆಚ್ಚಿಗೆ ತಿಳಿದುಬಂದಿಲ್ಲ. ನಾವು ಸಾ.ಶ.ಪೂ 1500 ರಿಂದ ಹೆಚ್ಚು ಸ್ಪಷ್ಟವಾದ ಇತಿಹಾಸವನ್ನು ತಿಳಿಯುತ್ತೇವೆ. ಚೀನಾದ ಇತಿಹಾಸವು ಬಹಳಷ್ಟರ ಮಟ್ಟಿಗೆ ಪ್ರತ್ಯೇಕವಾಗಿಯೇ ಬೆಳೆಯಿತೆಂದು ಕಂಡುಬರುತ್ತದೆ. ಚೀನಿಯರು ಎಲ್ಲ ಕಾಲಗಳಲ್ಲಿಯೂ ತಮ್ಮ ನಾಗರೀಕತೆಯ ಬಗ್ಗೆ ಅಭಿಮಾನ ಹೊಂದಿದ್ದಾರೆ. ಚೀನಿಯರ ಅವಿಷ್ಕಾರಗಳು ಮತ್ತು ತಂತ್ರಜ್ಞಾನವು ಮಾನವ ಜೀವನವನ್ನು ಅನೇಕ ವಿಧದಲ್ಲಿ ಪ್ರಭಾವಗೊಳಿಸಿವೆ.

ಚೀನಾ ಭೌಗೋಳಿಕ ವೈವಿಧ್ಯತೆಗಳನ್ನು ಹೊಂದಿದ ದೇಶವಾಗಿದೆ. ಅದು ಪಶ್ಚಿಮಕ್ಕೆ ಹಿಮಾಲಯ, ಪೂರ್ವಕ್ಕೆ ಶಾಂತಸಾಗರ ಮತ್ತು ಉತ್ತರಕ್ಕೆ ಮರುಭೂಮಿಯನ್ನು ಹೊಂದಿದೆ. ಈ ದೇಶವು ವೈವಿಧ್ಯಪೂರ್ಣವಾದ ಸಸ್ಯ ಮತ್ತು ಜೀವಸಂಕುಲವನ್ನು ಹೊಂದಿದೆ. ಮಂಗೋಲ್ ಜನಾಂಗದ ಜನರು ಇಲ್ಲಿ ವಾಸಿಸುತ್ತಾರೆ.

ಚೀನಾದ ನದಿ ಬಯಲುಗಳು

ರಾಜಕೀಯ ಸ್ಥಿತಿ:

ಆರಂಭದಲ್ಲಿ ಚೀನಾವು ಅನೇಕ ರಾಜರಿಂದ ಆಳಲ್ಪಟ್ಟಿತ್ತು. ಅವರು ಒಂದು ಸಡಿಲ ಒಕ್ಕೂಟ ವ್ಯವಸ್ಥೆಯನ್ನು ಹೊಂದಿದ್ದರು. ನಂತರದ ದಿನಗಳಲ್ಲಿ ಕೇಂದ್ರೀಕೃತ ಆಡಳಿತವನ್ನು ಹೊಂದಿದ್ದರು. ಚೀನಾ ದೇಶವು ಸುದೀರ್ಘವಾದ ರಾಜಕೀಯ ಇತಿಹಾಸವನ್ನು ಹೊಂದಿದೆ. ಪೌರಾಣಿಕ ಆಧಾರಗಳು ಚೀನಾದ ಇತಿಹಾಸವನ್ನು 4,000 ವರ್ಷಗಳಷ್ಟು ಹಿಂದಕ್ಕೆ ಕರೆದೊಯ್ಯುತ್ತವೆ. ಸಾ.ಶ.ಪೂ 2100 ರಿಂದ ಸಾ. ಶ. 1911ರ ಅವಧಿಯಲ್ಲಿ 15ಕ್ಕೂ ಹೆಚ್ಚಿನ ರಾಜಮನೆತನಗಳು ಚೀನಾವನ್ನು ಆಳಿವೆ. ಆದರೆ ಸಾ.ಶ.ಪೂ 1500 ರಿಂದ ಸಾ.ಶ. 1911 ರವರೆಗೆ ನಮಗೆ ಸ್ಪಷ್ಟವಾದ ಆಧಾರಗಳು ಲಭ್ಯವಾಗಿವೆ.

ಚೀನಾವನ್ನು ಆಳಿದ ರಾಜ ಮನೆತನಗಳು:

ಪ್ರಾಚೀನ ಯುಗದ ರಾಜ ಮನೆತನಗಳು

1. ಝಿಯಾ ರಾಜ ಮನೆತನ– ಸಾ.ಶ.ಪೂ. 2100–1600
2. ಷಾಂಗ್ ರಾಜ ಮನೆತನ– ಸಾ.ಶ.ಪೂ. 1600–1046
3. ಝೌ ರಾಜ ಮನೆತನ– ಸಾ.ಶ.ಪೂ. 1045–256

ಸಾಮ್ರಾಜ್ಯಶಾಹಿ ಯುಗದ ರಾಜ ಮನೆತನಗಳು

4. ಕಿನ್ ರಾಜ ಮನೆತನ– ಸಾ.ಶ.ಪೂ. 221–206
5. ಹಾನ್ ರಾಜ ಮನೆತನ– ಸಾ.ಶ.ಪೂ. 206–ಸಾಶ220
6. ಮೂರು ರಾಜ್ಯಗಳು– ಸಾ.ಶ. 220–280 (ವ್ಹಿ, ಷು ಮತ್ತು ವು)

7. ಚಿನ್ ರಾಜ ಮನೆತನ– ಸಾ.ಶ. 265–420

8. ದಕ್ಷಿಣ ಮತ್ತು ಉತ್ತರ ರಾಜ ಮನೆತನ– ಸಾ.ಶ. 420–589

9. ಸೂಯಿ ರಾಜ ಮನೆತನ– ಸಾ.ಶ. 581–618

10. ಟಾಂಗ್ ರಾಜ ಮನೆತನ– ಸಾ.ಶ. 618–907

11. ಹತ್ತು ರಾಜ್ಯಗಳ ಯುಗ– ಸಾ.ಶ. 907–960

12. ಸೋಂಗ್ ರಾಜ ಮನೆತನ– ಸಾ.ಶ. 960–1279

13. ಯುವಾನ್ ರಾಜ ಮನೆತನ– ಸಾ.ಶ. 1271–1368

14. ಮಿಂಗ್ ರಾಜ ಮನೆತನ– ಸಾ.ಶ. 1368–1644

15. ಮಂಚು ಅಥವಾ ಕಿಂಗ್ ರಾಜ ಮನೆತನ– ಸಾ.ಶ. 1644–1911

'ಝಿಯಾ' ಪ್ರಾರಂಭದ ರಾಜಮನೆತನವಾಗಿದ್ದು ಸುಮಾರು ಸಾ.ಶಾ.ಪೂ. 2100ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸಾ.ಶ. 1911ರಲ್ಲಿ ಕೊನೆಗೊಂಡ ಮಂಚು ವಂಶ ಕೊನೆಯ ರಾಜಮನೆತನವಾಗಿದೆ. ಚೀನಾದ ರಾಜಕೀಯ ಇತಿಹಾಸವನ್ನು 2 ಯುಗಗಳಲ್ಲಿ ವಿಭಜಿಸಲಾಗಿದೆ. ಅವುಗಳೆಂದರೆ: 1) ಪ್ರಾಚೀನ ಯುಗ 2) ಸಾಮ್ರಾಜ್ಯಗಳ ಯುಗ.

ಚೌ ಅಥವಾ ಝೌ ವಂಶ ಸುದೀರ್ಘವಾಗಿ ಆಳಿದ ರಾಜ ಮನೆತನವಾಗಿದೆ. ಈ ವಂಶದ ಅರಸರು ತಮ್ಮ ಅಧಿಕಾರವನ್ನು ನ್ಯಾಯಬದ್ಧಗೊಳಿಸಲು ದೈವದತ್ತ ಅಧಿಕಾರ ಸಿದ್ಧಾಂತವನ್ನು ಪ್ರತಿಪಾದಿಸಿದರು. ಸಾ. ಶ. ಪೂ. 3 ಮತ್ತು 4 ನೇ ಶತಮಾನಗಳು ಜಮೀನ್ದಾರರ ಉನ್ನತಿಯನ್ನು ಕಂಡವು. ಅವರು ತಮ್ಮ–ತಮ್ಮಲ್ಲಿಯೇ ಯುದ್ಧಗಳಲ್ಲಿ ತೊಡಗಿದರು. ಇವರನ್ನು ಕ್ವಿನ್ ವಂಶದ ದೊರೆಗಳು ಹತ್ತಿಕ್ಕಿದರು ಹಾಗೂ ರಾಜಮನೆತನಗಳ ಆಡಳಿತವನ್ನು ಪುನಃ ಸ್ಥಾಪಿಸಿದರು. ಕ್ವಿನ್ ವಂಶದ ದೊರೆಗಳು ತಮ್ಮ ರಾಜ್ಯವನ್ನು ಸಾಮ್ರಾಜ್ಯವನ್ನಾಗಿಸಿದರು. ಹೀಗೆ ಚೀನಾದಲ್ಲಿ ಸಾಮ್ರಾಜ್ಯಗಳ ಯುಗ ಪ್ರಾರಂಭವಾಯಿತು.

ಚೀನಾದ ಅತ್ಯಂತ ಪ್ರಸಿದ್ಧ ದೊರೆ 'ಷಿ ಹೂವಾಂಗ್ ಟಿ ಯು' ಇದೇ ವಂಶಕ್ಕೆ ಸೇರಿದವನಾಗಿದ್ದಾನೆ. ಆತನು 'ಚೀನ್' ಪ್ರಾಂತ್ಯದಿಂದ ಆಳುತ್ತಿದ್ದನು ಹಾಗೂ 'ಚೀನ್ ಷಿ ಹೂವಾಂಗ್ ಟಿ' ಎಂಬ ಹೆಸರನ್ನು ಹೊಂದಿದ್ದನು. ಚಿನ್ ಎಂಬ ಪದದಿಂದಲೇ ಚೀನಾ ಎಂಬ ಹೆಸರು ಬಂದಿದೆ. ಷಿ ಹೂವಾಂಗ್ ಟಿ ಯು ಅಧಿಕೃತ ಜನಗಣತಿಯನ್ನು ಪ್ರಾರಂಭಿಸಿದ. ಶಾಂತಿ, ಸುವ್ಯವಸ್ಥೆ ಮತ್ತು ಸಮೃದ್ಧಿಯನ್ನು ಕಾಪಾಡಿದ. ಹೂಣರು, ಮಂಗೋಲರು ಮುಂತಾದವರ ದಾಳಿಯಿಂದ ಚೀನಾವನ್ನು ರಕ್ಷಿಸಲು ಚೀನಾದ ಮಹಾ ಗೋಡೆಯ ನಿರ್ಮಾಣವನ್ನು ಪ್ರಾರಂಭಿಸಿದನು. ಮೊದಲ ಬಾರಿಗೆ ಇಡೀ ಚೀನಾವನ್ನು ಅಖಂಡಗೊಳಿಸಿ ಒಂದೇ ಆಡಳಿತದಡಿ ತಂದನು. ತನ್ನ ಸಾಮ್ರಾಜ್ಯದಾದ್ಯಂತ ಸಮಾನ ಕಾನೂನುಗಳನ್ನು ಜಾರಿಯಲ್ಲಿ ತಂದನು. ಸಾಮ್ರಾಜ್ಯವನ್ನು 36 ಪ್ರಾಂತ್ಯಗಳಲ್ಲಿ ವಿಂಗಡಿಸಿ, ಪ್ರತಿ ಪ್ರಾಂತ್ಯಕ್ಕೂ ನಾಗರಿಕ ಹಾಗೂ ಸೈನಿಕ ಅಧಿಕಾರಿಗಳನ್ನು ನೇಮಿಸಿದ. ರಾಜ್ಯದಲ್ಲಿನ ಅವ್ಯವಸ್ಥೆ, ಅನಾನೂಕೂಲತೆ ಮತ್ತು ತೊಂದರೆಗಳನ್ನು ತಿಳಿಯಲು ವೇಷ ಮರೆಯಿಸಿಕೊಂಡು ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದ್ದ. ತನ್ನ ಸಾಮ್ರಾಜ್ಯದ ದೂರ–ದೂರದ ಪ್ರದೇಶಗಳನ್ನು ಜೋಡಿಸುವ ಸಲುವಾಗಿ ರಸ್ತೆಗಳನ್ನು ನಿರ್ಮಿಸಿದನು ಮತ್ತು ಕಾಲುವೆಗಳನ್ನು ತೋಡಿಸಿದನು.

ಷಿ ಹೂವಾಂಗ್ ಟಿ ಯು ಜನರು ಸ್ವಭಾವತ: ಅಶಿಸ್ತಿನಿಂದ ಕೂಡಿರುತ್ತಾರೆ ಎಂದು ನಂಬಿದ್ದ. ಆದ್ದರಿಂದ ಕಠಿಣ ಕಾನೂನು ಹಾಗೂ ಕಠೋರ ಶಿಕ್ಷೆಗಳನ್ನು ಜಾರಿಯಲ್ಲಿ ತಂದ. ಈತನು ಹಳೆಯ ವ್ಯವಸ್ಥೆಯ ವಿರೋಧಿಯಾಗಿದ್ದನು ಮತ್ತು ಸದಾ ಬದಲಾವಣೆಗಳನ್ನು ಬಯಸುತ್ತಿದನು. ಇವನು ಜ್ಞಾನವನ್ನು ನಿಯಂತ್ರಿಸಲು ಬಯಸಿ ಅನೇಕ ಗ್ರಂಥಗಳನ್ನು ಸುಟ್ಟು ಹಾಕಿದ. ಈತ ವಿಜ್ಞಾನಿಗಳನ್ನು ಪೋಷಿಸಿದನು ಆದರೆ ಇತಿಹಾಸಕಾರರನ್ನು ವಿರೋಧಿಸಿದನು. ತನ್ನನ್ನು ತೀವ್ರವಾಗಿ ವಿರೋಧಿಸಿದ ಪಂಡಿತರನ್ನು ಚೀನಾದ ಮಹಾಗೋಡೆಯಲ್ಲಿ ಜೀವಂತವಾಗಿ ಹೂಳಿಸಿದನು.

ಹಾನ್ ವಂಶವು ಕ್ವಿನ್ ವಂಶದ ಸ್ಥಾನವನ್ನು ಆಕ್ರಮಿಸಿತು. ವೂ ಟಿ ಯು ಈ ವಂಶದ ಪ್ರಸಿದ್ಧ ದೊರೆ. ಈತನು ಸಾಮ್ರಾಜ್ಯವನ್ನು 13 ಪ್ರಾಂತ್ಯಗಳನ್ನಾಗಿ ವಿಂಗಡಿಸಿದನು. ಆಡಳಿತವನ್ನು ಕೇಂದ್ರೀಕೃತಗೊಳಿಸಿದನು. ಕಲೆ, ಸಾಹಿತ್ಯ ಮತ್ತು ತತ್ವ ಜ್ಞಾನದ ಮಹಾ ಪೋಷಕನಾಗಿದ್ದ ಇವನ ಆಡಳಿತದ ಅವಧಿಯಲ್ಲಿ ಕಾವ್ಯ, ಗದ್ಯ, ತತ್ವಜ್ಞಾನ, ಗಣಿತ ಹಾಗೂ ಔಷಧ ಕ್ಷೇತ್ರಗಳಿಗೆ ಸಂಬಂಧಿಸಿದ ಸಾವಿರಾರು ಕೃತಿಗಳ ರಚನೆಯಾಯಿತು. ಈ ಕಾಲವನ್ನು ಚೀನಾದ ಇತಿಹಾಸದ 'ಸುವರ್ಣಯುಗ' ಎಂದು ಕರೆಯುತ್ತಾರೆ.

ಹಾನ್ ವಂಶದ ನಂತರ ವೂಜಿನ್ ವಂಶವು ಆಡಳಿತ ಪ್ರಾರಂಭಿಸಿತು. ಆಡಳಿತಗಾರರು ಅಧಿಕಾರದ ವಿಕೇಂದ್ರೀಕರಣ ಮಾಡಿದರು. ಹೀಗಾಗಿ ನಂತರದ ಚೀನಾ 400 ವರ್ಷಗಳ ಕಾಲ ರಾಜಕೀಯ ವಿಘಟನೆಗೆ ಒಳಗಾಯಿತು. ಮುಂದೆ 'ಶೂ' ವಂಶದವರು ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಿದರು. ಶೂ ವಂಶದ ನಂತರ 'ಟಾಂಗ್' ವಂಶದವರು ಆಡಳಿತಕ್ಕೆ ಬಂದರು. ಇವರು ಪ್ರಮಾಣಿಕೃತ ನಾಣ್ಯ ವ್ಯವಸ್ಥೆಯನ್ನು ಜಾರಿಗೆ ತಂದರು. ಮತ್ತು ಆಡಳಿತದಲ್ಲಿ ಸುಧಾರಣೆಗಳನ್ನು ಮಾಡಿದರು. ಆಡಳಿತ ವ್ಯವಸ್ಥೆಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿತ್ತು. ಮೊದಲನೆಯದು ಕರಡು ತಯಾರಿಸುವುದು, ಎರಡನೆಯದು ಕರಡು ಪರಾಮರ್ಶಿಸುವುದು ಹಾಗೂ ಮೂರನೆಯದು ಅವುಗಳನ್ನು ಜಾರಿಯಲ್ಲಿ ತರವುದಕ್ಕಾಗಿ. ಸರ್ಕಾರದ ಅಧಿಕಾರಿಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾಗುತ್ತಿತ್ತು. ಈ ಅವಧಿಯಲ್ಲಿ ಕಲೆ, ಸಾಹಿತ್ಯ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಮಹತ್ವದ ಪ್ರಗತಿಯಾಯಿತು. ಆದ್ದರಿಂದ ಈ ಕಾಲವನ್ನು ಚೀನಾ ಇತಿಹಾಸದ ಇನ್ನೊಂದು **'ಸುವರ್ಣಯುಗ'** ವೆಂದು ಕರೆಯುತ್ತಾರೆ.

ಸಾಮಾಜಿಕ ಸ್ಥಿತಿ:

ಚೀನಿಯರ ಸಮಾಜವು ಒಂದು ಪರಂಪರಾಗತ ಸಮಾಜವಾಗಿದೆ. ಅದೊಂದು ಪುರುಷ ಪ್ರಧಾನ ಸಮಾಜವಾಗಿತ್ತು. ಕುಟುಂಬವು ಸಮಾಜದ ಅಡಿಪಾಯವಾಗಿತ್ತು. ಪಾಲಕರು ವಿಶೇಷವಾಗಿ ತಾಯಿ ತನ್ನ ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳಸುತ್ತಿದ್ದಳು. ಹೆಣ್ಣು ಮಗುವನ್ನು ಕುಟುಂಬದ ಹೊರೆಯೆಂದು ತಿಳಿಯಲಾಗಿತ್ತು. ಮಹಿಳೆಯ ಸ್ಥಾನಮಾನವು ಅಷ್ಟೊಂದು ಉತ್ತಮವಾಗಿರಲಿಲ್ಲ. ಆದರೂ ಮಹಿಳೆಯರು ತಮ್ಮಲಿರುವ ಮಕ್ಕಳನ್ನು ಹೆರುವ ಸಾಮರ್ಥ್ಯ, ಕೆಲಸದಲ್ಲಿನ ಕುಶಲತೆ ಮತ್ತು ವಿಧೇಯತೆಯಿಂದ ಹೆಚ್ಚಿನ ಗೌರವನ್ನು ಪಡೆಯುತ್ತಿದ್ದರು.

ಚೀನಾದ ಸಮಾಜವು ಜನರು ಮಾಡುವ ಕೆಲಸವನ್ನಾಧರಿಸಿ 4 ವರ್ಗಗಳಾಗಿ ವಿಂಗಡಿಸಲ್ಪಟ್ಟಿತ್ತು. ಉಚ್ಚ ವರ್ಗವು ಅಧಿಕಾರಿಗಳು, ಪಂಡಿತರು ಮತ್ತು ಶಿಕ್ಷಕರಿಂದ ಕೂಡಿತ್ತು. 2ನೇ ವರ್ಗದಲ್ಲಿ ರೈತರು, 3ನೇ ವರ್ಗದಲ್ಲಿ ಕುಶಲಕರ್ಮಿಗಳು ಹಾಗೂ 4 ನೇ ವರ್ಗ ವ್ಯಾಪಾರಸ್ಥರದ್ದಾಗಿತ್ತು. 'ಮೆಂಡಾರಿನ್' ರೆಂಬ ಸಣ್ಣ ವರ್ಗವೂಂದರ ಜನರು ಚೀನಾದ ಭಾಷೆಯನ್ನು ಓದಿ ಬರೆಯ ಬಲ್ಲವರಾಗಿದ್ದರು. ಅವರಿಗೆ ಸಮಾಜ ಮತ್ತು ಸರ್ಕಾರದಲ್ಲಿ ಹೆಚ್ಚಿನ ಗೌರವವಿತ್ತು.

ಆರ್ಥಿಕ ಸ್ಥಿತಿ:

ಅದೊಂದು ಕೃಷಿ ಆಧಾರಿತ ಸಮಾಜವಾಗಿತ್ತು. ಚೀನಿಯರು ಕಾಲುವೆ ಆಧಾರಿತ ನೀರಾವರಿಯನ್ನು ವ್ಯವಸ್ಥಿತವಾಗಿ ಅಭಿವೃದ್ಧಿಗೊಳಿಸಿದ್ದರು. ಕಾಲುವೆಗಳನ್ನು ಒಳಚರಂಡಿ ಮತ್ತು ನೌಕಯಾನಕ್ಕಾಗಿ ಬಳಸುತ್ತಿದ್ದರು ಕಬ್ಬಿಣ ಮತ್ತು ಕಟ್ಟಿಗೆಗಳಿಂದ ನಿರ್ಮಿಸಿದ ಕೃಷಿ ಉಪಕರಣಗಳನ್ನು ಬಳಸುತ್ತಿದ್ದರು. ಗೋಧಿ, ಭತ್ತ, ಸೋಯಾಬಿನ್

ಮತ್ತು ಸಿರಿಧಾನ್ಯಗಳು ಅವರ ಪ್ರಮುಖ ಬೆಳೆಗಳಾಗಿದ್ದವು. ಚಹಾ ಮತ್ತು ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದರು. ಹಂದಿ ಮತ್ತು ಕುರಿಗಳು ಅವರ ಪ್ರಮುಖ ಸಾಕು ಪ್ರಾಣಿಗಳಾಗಿದ್ದವು. ಕೋಳಿ ಸಾಕಣೆಯನ್ನೂ ಕೈಗೊಳ್ಳುತ್ತಿದ್ದರು.

ಬಡಿಗ, ಕಮ್ಮಾರ, ಕಟ್ಟಿಗೆ ಕಡಿಯುವವ, ಕುಂಬಾರ, ನೇಕಾರ, ಮುಂತಾದವರು ಪ್ರಮುಖ ಕೈಕಸಬುದಾರರಾಗಿದ್ದರು. ರೇಷ್ಮೆ ಚೀನಾದ ಒಂದು ಪ್ರಮುಖ ಕೊಡುಗೆಯಾಗಿದೆ. ಅದು ಚೀನಾದಿಂದ ರಫ್ತಾಗುತ್ತಿದ್ದ ಪ್ರಮುಖ ಐಷಾರಾಮಿ ವಸ್ತುವಾಗಿತ್ತು. ಚೀನಿಯರು ಅಪಘಾನಿಸ್ತಾನ ಹಾಗೂ ಪರ್ಷಿಯಾದ ಮುಖಾಂತರ ಭೂ ಮಾರ್ಗವಾಗಿ ನಂತರ ಹಿಂದೂ ಮಹಾಸಾಗರದ ಜಲಮಾರ್ಗವಾಗಿ ಪಾಶ್ಚಿಮಾತ್ಯರೊಂದಿಗೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರು. ಇದನ್ನು 'ರೇಷ್ಮೆಮಾರ್ಗ'ವೆಂದು ಕರೆಯುತ್ತಾರೆ. ಚೀನಿಯರು ಭಾರತೀಯರಿಂದ ಹತ್ತಿ ಬೆಳೆಯುವುದನ್ನು ಕಲಿತರು.

ರೇಷ್ಮೆ, ಕಬ್ಬಿಣ, ಚಹಾ, ಉಪ್ಪು ಮತ್ತು ಹತ್ತಿ ಬಟ್ಟೆಗಳು ಚೀನಿಯರ ಪ್ರಮುಖ ರಫ್ತುಗಳಾಗಿದ್ದವು. 10ನೇ ಶತಮಾನದ ನಂತರ ಚೀನಾದ ವಸ್ತುಗಳು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಾಬಲ್ಯವನ್ನು ಹೊಂದಿದ್ದವು. ನಂತರದ ದಿನಗಳಲ್ಲಿ ಅಫೀಮು ಅವರ ಪ್ರಮುಖ ಆಮದಾಯಿತು. ಆರಂಭದ ದಿನಗಳಲ್ಲಿ ವಸ್ತು ವಿನಿಮಯ, ನಂತರದ ದಿನಗಳಲ್ಲಿ ಲೋಹಗಳನ್ನು ವಿನಿಮಯದ ಮಾಧ್ಯಮವಾಗಿ ಬಳಸುತ್ತಿದ್ದರು. ಸಾ.ಶ.ಪೂ. 5ನೇ ಶತಮಾನದಿಂದೀಚೆಗೆ ಮುದ್ರಿತ ಹಣದ ಉಪಯೋಗ ಪ್ರಾರಂಭವಾಯಿತು. ಇದೇ ಅವಧಿಯಲ್ಲಿ ಲೇವಾದೇವಿ ಮತ್ತು ಬ್ಯಾಂಕಿಂಗ್ ವ್ಯವಸ್ಥೆ ಪ್ರಾರಂಭವಾಯಿತು.

ಶಿಕ್ಷಣ ಮತ್ತು ಸಾಹಿತ್ಯ:

ಶಾಂಗ್ ವಂಶದ ಆಡಳಿತ ಕಾಲದಲ್ಲಿ ಚೀನಿಯರು ಬರವಣಿಗೆಯನ್ನು ಬೆಳೆಸಿ ಕೊಂಡರು. ಚೀನಿಯರ ಬರವಣಿಗೆ ಚಿನ್ ವಂಶದ ಆಡಳಿತ ಕಾಲದಲ್ಲಿ ನಿಬಂಧನೆಗೆ ಒಳಪಟ್ಟಿತು. ಅವರ ಲಿಪಿಯಲ್ಲಿ ಮೂಲಾಕ್ಷರಗಳಾಗಲಿ, ನಾಮ, ಗುಣ, ಕ್ರಿಯಾ, ವಾಚಕಗಳಾಗಲಿ ಇಲ್ಲ. ಈ ಭಾಷೆಯು 40 ಸಾವಿರಕ್ಕಿಂತಲೂ ಹೆಚ್ಚಿನ ಗುರುತು ಅಥವಾ

ಚೀನಾದ ಲಿಪಿ

ಚಿಹ್ನೆಗಳನ್ನು ಒಳಗೊಂಡಿದೆ. ಚೀನಾದ ಬರವಣಿಗೆಯು ಚಿತ್ರ ಲಿಪಿಯಾಗಿ ಪ್ರಾರಂಭವಾಯಿತು. ನಂತರಚಿಹ್ನೆ ಮತ್ತು ವಿಶಿಷ್ಟ ಗುರುತುಗಳನ್ನು ಅಭಿವೃದ್ಧಿ ಪಡಿಸಿದರು. ಚೀನಿಯರ ಲಿಪಿ ಚಿಹ್ನೆಗಳು ಜಗತ್ತಿನ ಅತ್ಯಂತ ಪ್ರಾಚೀನ ಮತ್ತು ನಿರಂತರವಾಗಿ ಉಪಯೋಗಿಸಲ್ಪಟ್ಟ ಬರವಣಿಗೆಯ ರೂಪಗಳಾಗಿವೆ. ಅವರ ಬರವಣಿಗೆಯು ಚೀನಾದ ಸಾಂಸ್ಕೃತಿಕ ವಿಕೀಕರಣದಲ್ಲಿ ಮಹತ್ವದ ಪಾತ್ರವಹಿಸಿದೆ. ಚೀನಾದ ಲಿಪಿಯು ಜಪಾನ್, ಕೊರಿಯಾ ಮತ್ತು ವಿಯಟ್ನಾಂ ಲಿಪಿಗಳ ಬೆಳವಣಿಗೆಯ ಮೇಲೂ ಪ್ರಭಾವ ಬೀರಿದೆ. ಇದನ್ನು ಮೇಲಿಂದ ಕೆಳಗೆ ಬರೆಯುತ್ತಾರೆ. ಕಾಗದ, ರೇಷ್ಮೆ ಮತ್ತು ಶಾಯಿ ಶೋಧವು ಲಿಪಿಯ ಬೆಳವಣಿಗೆ ಮತ್ತು ಸಾಹಿತ್ಯದ ವಿಕಾಸಕ್ಕೆ ಸಹಾಯ ಮಾಡಿತು. ಚೀನಾದಲ್ಲಿ ಇತಿಹಾಸ ಬರವಣಿಗೆಯು ಜನಪ್ರಿಯವಾಗಿತ್ತು. ಆಡಳಿತಗಾರರು ತಮ್ಮ ಇತಿಹಾಸವನ್ನು ಬರೆಯಿಸಿಕೊಂಡರು. ಚೀನಿಯರ ಸಾಹಿತ್ಯವು ಗದ್ಯ, ಪದ್ಯ, ತತ್ವಜ್ಞಾನ ಮತ್ತು ಇತಿಹಾಸವನ್ನು ಒಳಗೊಂಡಿತ್ತು. ಹಾನ್ ಮತ್ತು ಟಾಂಗ್ ಮನೆತನಗಳ ಕಾಲದಲ್ಲಿ ಚೀನಾದ ಕಾವ್ಯವು ತನ್ನ ಉತ್ತುಂಗವನ್ನು ತಲುಪಿತ್ತು. ಹಾನ್ ಮನೆತನದ ಕಾಲದಲ್ಲಿ ಸಾಮ್ರಾಟರ ಗ್ರಂಥಾಲಯವು 3123 ಸಂಪುಟಗಳಷ್ಟು ಶಾಸ್ತ್ರೀಯ ಗ್ರಂಥಗಳು, 2705 ಸಂಪುಟಗಳಷ್ಟು ತತ್ವಜ್ಞಾನದ, 868 ಸಂಪುಟಗಳಷ್ಟು ಔಷಧ ವಿಜ್ಞಾನದ ಗ್ರಂಥಗಳು, 1318 ಸಂಪುಟಗಳಷ್ಟು ಕಾವ್ಯ ಗ್ರಂಥಗಳು. 2568 ಸಂಪುಟಗಳಷ್ಟು ಗಣಿತದ ಮತ್ತು 790 ಸಂಪುಟಗಳಷ್ಟು ಯುದ್ಧ ಸಂಬಂಧಿ ಗ್ರಂಥಗಳನ್ನು ಹೊಂದಿತ್ತು. 'ತೈ ಲೀ ಪೋ' ಎಂಬ ಚೀನಾದ ಕವಿಯು 30 ಸಂಪುಟಗಳಷ್ಟು ಕವಿತೆಗಳನ್ನು ಬರೆದಿದ್ದಾನೆ. 'ತು ಫೂ' ಇನ್ನೊಬ್ಬ ಮಹಾನ್ ಕವಿ. ಚೀನಿಯರು ಭೂಗೋಳ, ರೇಖಾ ಗಣಿತ, ಅಂಕ ಗಣಿತ, ಪಂಚಾಂಗ, ಖಗೋಳ ಶಾಸ್ತ್ರ ಮುಂತಾದ ಜ್ಞಾನದ ಶಾಖೆಗಳನ್ನು ಅಭಿವೃದ್ಧಿಪಡಿಸಿದರು. ಅವರು ಗ್ರಹಣಗಳ ಆಗುವಿಕೆ ಊಹಿಸಬಲ್ಲವರಾಗಿದ್ದರು.

ಚೀನಿಯರ ಮಹತ್ವ ಪೂರ್ಣ ಸಂಶೋಧನೆಗಳು:

ರೇಷ್ಮೆ, ಚಹಾ, ಶಾಯಿ, ಕಾಗದ, ಬರೆಯುವ ಮತ್ತು ಚಿತ್ರ ಬಿಡಿಸುವ ಕುಂಚ, ಲೆಕ್ಕದಮಣಿ ಚೌಕು (ಅಬಾಕಸ್) ಸೂಜಿ–ಚಿಕಿತ್ಸೆ (ಆಕ್ಯೂಪಂಕ್ಚರ್) ದೋಣಿಯ ಚುಕ್ಕಾಣಿ, ಸಿಡಿ ಮದ್ದು, ಗಾಜು, ಪಿಂಗಾಣಿ ಪಾತ್ರೆ, ರಾಕೇಟಗಳು, ಚಮಚ–ಫೋರ್ಕ್‌ಗಳು, ಛತ್ರಿ, ನಾವಿಕರ ದಿಕ್ಸೂಚಿ, ಭೂಕಂಪ ಮಾಪಕ, ಮುಂತಾದವು ವಿಶ್ವಕ್ಕೆ ಚೀನಿಯರ ಪ್ರಮುಖ ಕೊಡುಗೆಗಳಾಗಿವೆ.

ಕಲೆ ಮತ್ತು ವಾಸ್ತು ಶಿಲ್ಪ:

ಚಿತ್ರಕಲೆ:

ಚೀನಿಯರು ಅದ್ಭುತವಾದ ಚಿತ್ರಕಲೆಯನ್ನು ಅಭಿವೃದ್ಧಿ ಪಡಿಸಿದರು. ಅವರು ರೇಷ್ಮೆ ಬಟ್ಟೆಗಳು, ಗೋರಿಯ ಗೋಡೆಗಳು, ಮಡಕೆಗಳು ಮತ್ತು ಕಾಗದಗಳ ಮೇಲೆ ಚಿತ್ರ ಬಿಡಿಸುತ್ತಿದ್ದರು. ಗೋರಿಗಳ ಮೇಲಿನ ಚಿತ್ರಗಳು ಸತ್ತವರ ಆತ್ಮಗಳನ್ನು ರಕ್ಷಿಸುತ್ತವೆ ಮತ್ತು ಅವರಿಗೆ ಸ್ವರ್ಗಕ್ಕೆ ಮಾರ್ಗದರ್ಶನ ಮಾಡುತ್ತವೆ ಎಂದು ನಂಬಿದ್ದರು.

ಮೂರ್ತಿಕಲೆ:

ಚೀನಿಯರು ಕಂಚಿನಲ್ಲಿ ಪ್ರಾಣಿಗಳ ಮತ್ತು ರಾಕ್ಷಸರ ಪ್ರತಿಮೆ ನಿರ್ಮಿಸುವ ಕಲೆಯನ್ನು ಅಭಿವೃದ್ಧಿ ಪಡಿಸಿದ್ದರು. ಈ ಕಲೆಯು 'ಶಾಂಗ್' ಮತ್ತು 'ಝೌ' ವಂಶಗಳ ಕಾಲಕ್ಕೆ ಇನ್ನಷ್ಟು ಅಭಿವೃದ್ಧಿಯಾಯಿತು. ಬೌದ್ಧ ಧರ್ಮವು ಮೂರ್ತಿಕಲೆಯನ್ನು ಪ್ರಭಾವಗೊಳಿಸಿತು. ಕಲ್ಲಿನಲ್ಲಿ ನಿರ್ಮಿಸಿದ ಬೋಧಿಸತ್ವನ ಮೂರ್ತಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ.

ಮಣ್ಣು ಹಾಗೂ ಗಾರೆಯ ಮೂರ್ತಿಗಳು:

ಮೊದಲನೆಯ 'ಕಿನ್' ದೊರೆಯ ಗೋರಿಯಲ್ಲಿ ಜೋಡಿಸಿಡಲಾದ ಸುಮಾರು 8,000 ಗಾರೆ ಮೂರ್ತಿಗಳ ಸೈನ್ಯವು ಮನುಷ್ಯರು ಮತ್ತು ಕುದುರೆಗಳ ಮೂರ್ತಿಗಳ ಜೀವಂತ ಆಕೃತಿಗಳನ್ನು ಹೋಲುತ್ತಿದ್ದು ಬಹಳಷ್ಟು ಆಕರ್ಷಕವಾಗಿವೆ.

ಟೆರ್ರಾಕೋಟಾ ಸೈನಿಕರು

ವಾಸ್ತುಶಿಲ್ಪ:

ಚೀನಾದ ಮಹಾಗೋಡೆಯ ದೃಶ್ಯಗಳು

ಚೀನಿಯರು ಮಹಾನ್ ನಿರ್ಮಾಣಕಾರರು. ಚೀನಾದ ಮಹಾ ಗೋಡೆಯು ಒಂದು ಅತ್ಯಂತ ಮಹತ್ವದ ಮತ್ತು ಶಾಶ್ವತವಾಗಿ ಉಳಿಯುವ ವಾಸ್ತು ಶಿಲ್ಪ ಸಾಧನೆಯಾಗಿದೆ. ಇದನ್ನು ಹೂಣರು, ಮಂಗೋಲಿಯನ್ನರು ಮತ್ತಿತರರ ದಾಳಿಯಿಂದ ರಕ್ಷಿಸುವ ಉಪಯುಕ್ತ ಉದ್ದೇಶಕ್ಕಾಗಿಯೇ ನಿರ್ಮಿಸಿದ್ದಾರೆ. ಇದು 2380 ಕಿ. ಮೀ. ಉದ್ದ 22 ಅಡಿ ಎತ್ತರ ಮತ್ತು 20 ಅಡಿ ಅಗಲವಿದೆ. ಪ್ರತಿ 300 ಅಡಿಗಳಿಗೊಂದರಂತೆ, 400 ಅಡಿ ಎತ್ತರದ ವೀಕ್ಷಣಾ ಗೋಪುರವನ್ನು ನಿರ್ಮಿಸಿದ್ದಾರೆ. ಇದು ಪ್ರಾಚೀನ ವಿಶ್ವದ ಅದ್ಭುತಗಳಲ್ಲೊಂದಾಗಿದೆ. ಆದರೆ ಚೀನಿಯರಲ್ಲಿ ಅದು ಅಷ್ಟೊಂದು ಜನಪ್ರೀಯವಾಗಿಲ್ಲ ಏಕೆಂದರೆ, ಇದನ್ನು ನಿರ್ಮಿಸುವಾಗ ಒತ್ತಾಯದಿಂದ ಕಾರ್ಮಿಕರನ್ನು ಬಳಸಲಾಗಿತ್ತು. ಕಾಲಾಂತರದಲ್ಲಿ ಬರುವ ರಾಜರು ಗೋಡೆಯ ಭಾಗಗಳನ್ನು ಪುನರ್ ನಿರ್ಮಾಣ ಮಾಡುವುದರೊಂದಿಗೆ ಹೊಸ ರೂಪ ಕೊಟ್ಟಿರುವದರಿಂದ ಅದು ಇನ್ನೂ ಭದ್ರವಾಗಿ ನಿಂತಿದೆ.

ಚೀನಿಯರು ಅನೇಕ ಮಹಲುಗಳನ್ನು ಕಟ್ಟಿದರು. ಆದರೆ ಅವು ಮಣ್ಣು ಮತ್ತು ಕಟ್ಟಿಗೆಗಳ ನಿರ್ಮಾಣಗಳಾಗಿದ್ದರಿಂದ ಇಂದು ಉಳಿದಿಲ್ಲ. ಅವರು 'ಪಗೋಡಾಗಳೆಂಬ' ಬೌದ್ಧ ದೇವಾಲಯಗಳನ್ನು ನಿರ್ಮಿಸಿದ್ದಾರೆ. 'ಜೈಂಟ್ ವೈಲ್ಡ್ ಗೂಸ್–ಪಗೋಡಾ', 'ಜೇಡ್ ಪಗೋಡಾ', 'ಫ್ಲಾಸ್ಕ್ ಪಗೋಡಾ', ಅವುಗಳಲ್ಲಿ ಪ್ರಮುಖವಾಗಿವೆ. ಪೀಕಿಂಗ್‌ನ (ಪ್ರಸ್ತುತ ಬೀಜಿಂಗ್) ಹೊರಭಾಗದಲ್ಲಿರುವ ಮಲಗಿದ ಬುದ್ಧನ ಪಗೋಡಾ ಉಲ್ಲೇಖನಿಯವಾಗಿದೆ.

ತತ್ವಜ್ಞಾನ ಮತ್ತು ಧರ್ಮ :

ಚೀನಾದ ಮೂವರು ತತ್ವಜ್ಞಾನಿಗಳಾದ 'ಲಾವೋತ್ಸೆ' 'ಕನ್‌ಫ್ಯೂಸಿಯಸ್' ಮತ್ತು 'ಮೆನ್ಸಿಯಸ್'ರ ತತ್ವಗಳು ಚೀನಿಯರ ಧಾರ್ಮಿಕ ವಿಚಾರಗಳನ್ನು ಬಹಳಷ್ಟು ಪ್ರಭಾವಗೊಳಿಸಿವೆ.

ಲಾವೋತ್ಸೆ : ಇವನೊಬ್ಬ ಮಹಾನ್ ತತ್ವಜ್ಞಾನಿ. ಈತ ಕನ್‌ಫ್ಯೂಸಿಯಸ್‌ನಿಗೂ ಮೊದಲು ಅಂದರೆ ಸಾ.ಶ.ಪೂ. 600 ಸುಮಾರಿಗೆ ಬದುಕಿದ್ದ. ಆತ ಚೌ ದೊರೆಗಳ ರಾಜ ಗ್ರಂಥಾಲಯದಲ್ಲಿ ಮೇಲ್ವಿಚಾರಕನಾಗಿ ಕೆಲಸ ಮಾಡುತ್ತಿದ್ದ. ಅಂದಿನ ಭ್ರಷ್ಟ ರಾಜಕೀಯ ವ್ಯವಸ್ಥೆಯ ಬಗ್ಗೆ ಅಸಹ್ಯ ಪಟ್ಟುಕೊಂಡಿದ್ದ. ಹೀಗಾಗಿ ಚೀನಾದ ದೂರದ ಪ್ರದೇಶವೊಂದಕ್ಕೆ ಹೋದ ಅಲ್ಲಿ 'ತಾವೊತೆ ಚಿಂಗ್' (ಜೀವನ ಮಾರ್ಗ) ಎಂಬ ಪುಸ್ತಕವನ್ನು ಬರೆದ ಅವನ ತತ್ವಜ್ಞಾನವನ್ನು 'ತಾವೋ ಸಿದ್ಧಾಂತ' ಎಂದು ಕರೆಯುತ್ತಾರೆ. ತಾವೋ ಅಹಿಂಸೆಯನ್ನು ಬೋಧಿಸಿದ, ಸಮಾಜ ಜಾಣರನ್ನು ಗೌರವಿಸಬೇಕು, ಮತ್ತು ಹೊಸತನವನ್ನು ವಿರೋಧಿಸಬಾರದು, ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಣೆ ಮಾಡಬೇಕು ಎಂದು ಬೋಧಿಸಿದ.

ಅವನ ಮಹತ್ವದ ಹೇಳಿಕೆಗಳು

- ಹಿಂಸೆಯು ತನ್ನ ಗುರಿಯನ್ನು ಸೋಲಿಸುತ್ತದೆ.
- ಅರಿವನ್ನು ಶಬ್ದಗಳಿಂದ ಸಂವಹಿಸಲು ಸಾಧ್ಯವಿಲ್ಲ.
- ಮನುಷ್ಯ ಒಳ್ಳೆಯವರಿಗೆ ಒಳ್ಳೆಯವನಾಗಿರಬೇಕು ಮತ್ತು ಕೆಟ್ಟವರಿಗೂ ಒಳ್ಳೆಯವನಾಗಿರಬೇಕು.
- ನಿಸರ್ಗದ ವಸ್ತುಗಳು ಮೌನವಾಗಿ ಕೆಲಸಮಾಡುತ್ತವೆ.
- ನೀವು ಜಗಳವಾಡದಿದ್ದರೆ ನಿಮ್ಮೊಂದಿಗೆ ಯಾರೂ ಜಗಳವಾಡಲಾರರು.



ಕನ್‌ಫ್ಯೂಸಿಯಸ್: ಈತ ಚೀನಾದ ಬಹು ದೊಡ್ಡ ತತ್ವಜ್ಞಾನಿ. ಸಾ.ಶ.ಪೂ 571 ರಲ್ಲಿ 'ಲೂ' ಪ್ರಾಂತ್ಯದಲ್ಲಿ ಹುಟ್ಟಿದನು. ಮೂರನೇ ವರ್ಷಕ್ಕೆ ತಂದೆಯನ್ನು ಕಳೆದುಕೊಂಡ. ಬಿಲ್ಲು ವಿದ್ಯೆ ಮತ್ತು ಸಂಗೀತವನ್ನು ಕಲಿತನು. 19ನೇ ವರ್ಷಕ್ಕೆ ಮದುವೆಯಾಗಿ 23ನೇ ವರ್ಷಕ್ಕೆ ವೈವಾಹಿಕ ಜೀವನವನ್ನು ತೊರೆದನು. ಈತ ಭಾಷಾ ಶಿಕ್ಷಕ, ಸಂಪಾದಕ, ನ್ಯಾಯಾಧೀಶ ಮತ್ತು ಮಂತ್ರಿ ಮುಂತಾದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿದ. ಈತ ಮಹಾನ್ ತತ್ವಜ್ಞಾನಿ ಮತ್ತು ಶಿಕ್ಷಕನೆಂಬುದನ್ನು ಸಾಬೀತು ಪಡಿಸಿದ.

ಕನ್‌ಫ್ಯೂಸಿಯಸ್‌ನ ತತ್ವಜ್ಞಾನವನ್ನು ಕನ್‌ಫ್ಯೂಸಿಯನಿಸಂ ಎಂದು ಕರೆಯುತ್ತಾರೆ. ಕನ್‌ಫ್ಯೂಸಿಯಸ್‌ನ ತತ್ವಗಳ ಅಡಿಪಾಯವು ಚೀನಿಯರ ರೂಢಿ ಪರಂಪರೆ ಮತ್ತು ನಂಬಿಕೆಗಳಲ್ಲಿದೆ. ಆತ ಕುಟುಂಬ ನಿಷ್ಠೆ, ಪೂರ್ವಜರ ಪೂಜೆ, ಹಿರಿಯರಲ್ಲಿ ಗೌರವ ಮತ್ತು ಚೀನಿಯರಲ್ಲಿ ಏಕತೆಯನ್ನು ಬೋಧಿಸಿದ.

ಇವನ ನುಡಿಮುತ್ತುಗಳು:

- ನೀವು ಇನ್ನೊಬ್ಬರು ನಿಮಗೇನು ಮಾಡಬಾರದೆಂದು ಬಯಸುತ್ತಿರೋ ಅದನ್ನು ಇನ್ನೊಬ್ಬರಿಗೆ ಮಾಡಬೇಡಿ. ಇದು ಕನ್‌ಫ್ಯೂಸಿಯಸ್‌ನ ಸುವರ್ಣ ನಿಯಮವೆಂದು ಪರಿಗಣಿಸಲ್ಪಟ್ಟಿದೆ.
- ಚಾರಿತ್ರ್ಯವು ಸಮಾಜದ ಬುನಾದಿ,
- ಅರಿವು ಮನೆಯಿಂದಲೇ ಪ್ರಾರಂಭವಾಗುತ್ತದೆ.
- ಶ್ರೇಷ್ಠ ಮನುಷ್ಯ ಮೊದಲು ಕಾರ್ಯ ಮಾಡುತ್ತಾನೆ ಮತ್ತು ಅದರಂತೆ ನುಡಿಯುತ್ತಾನೆ.
- ಸಮಾಜದ ಒಳಿತು, ತಂದೆ–ತಾಯಂದಿರಿಗೆ ಮಕ್ಕಳ, ಗಂಡನಿಗೆ ಹೆಂಡತಿಯ ವಿಧೇಯತೆ ಮತ್ತು ಗುರುಗಳಿಗೆ ಶಿಷ್ಯರ ವಿಧೇಯತೆಯನ್ನು ಅವಲಂಬಿಸಿದೆ.
- ಅತಿಯಾದ ತೆರಿಗೆಗಳನ್ನು ಮತ್ತು ಕಠೋರ ಶಿಕ್ಷೆಗಳನ್ನು ತೊಡೆದು ಹಾಕಬೇಕು.
- ಒಳ್ಳೆಯದು ಯಾವುದೆಂದು ತಿಳಿದೂ ಆಚರಿಸದಿರುವುದಕ್ಕೆ ತತ್ವದ ಮತ್ತು ಧೈರ್ಯದ ಕೊರತೆಯೇ ಕಾರಣ.
- ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡಬೇಕು,
- ಸರಕಾರವು ಅನಾಥರನ್ನು, ಮುದುಕರನ್ನು, ವಿಧವೆಯರನ್ನು, ರೋಗಿ ಮತ್ತು ಅಂಗವಿಕಲರನ್ನು ರಕ್ಷಿಸಬೇಕು.

ಮೆನ್ಸಿಯಸ್: ಈತ ಚೀನಾದ ಮತ್ತೊಬ್ಬ ಪ್ರಸಿದ್ಧ ತತ್ವಜ್ಞಾನಿ ಸಾ.ಶ.ಪೂ. 372 ರಿಂದ 289ರ ಅವಧಿಯಲ್ಲಿ ಜೀವಿಸಿದ್ದನು. ಇವನ ಮೊದಲ ಹೆಸರು ಮೆಂಗ್ ತ್ಸೆ ಆಗಿತ್ತು. ಈತ ಕನ್‌ಫ್ಯೂಸಿಯಸ್‌ನ ತತ್ವಜ್ಞಾನದಿಂದ ಪ್ರಭಾವಿತನಾಗಿದ್ದ. ಪ್ರತಿಯೊಬ್ಬ ವ್ಯಕ್ತಿಯು ಸಮಾನ ಹಕ್ಕುಗಳನ್ನು ಹೊಂದಿರಬೇಕೆಂದು ಬೋಧಿಸಿದ. ಅವನ ವಿಚಾರದಲ್ಲಿ ವ್ಯಕ್ತಿಗಳೆಲ್ಲರೂ ಒಳ್ಳೆಯವರೇ ಆಗಿರುತ್ತಾರೆ. ಎಲ್ಲ ಸಾಮಾಜಿಕ ಕೆಡುಕುಗಳು ಅನಕ್ಷರತೆ ಮತ್ತು ಅಜ್ಞಾನ ಬಡತನದಲ್ಲಿ ಹುಟ್ಟುತ್ತವೆ ಮೆನ್ಸಿಯಸ್‌ನ ಬೋಧನೆಗಳು ಹೆಚ್ಚಾಗಿ ಕನ್‌ಫ್ಯೂಸಿಯಸ್‌ನ ಬೋಧನೆಗಳನ್ನು ಹೋಲುವುದರಿಂದ ಅಷ್ಟೊಂದು ಜನಪ್ರಿಯವಾಗಲಿಲ್ಲ.

ಬೌದ್ಧ ಧರ್ಮ:

ಪ್ರಾಚೀನ ಚೀನಿಯರು ಯಾವೊಂದು ವಿಶೇಷ ಧರ್ಮವನ್ನು ಅನುಸರಿಸಲಿಲ್ಲ. ಅವರು ಮುಖ್ಯವಾಗಿ ತಮ್ಮ ಹಿರಿಯರ ಮತ್ತು ಪೂರ್ವಜರ ಆತ್ಮಗಳನ್ನು ಪೂಜಿಸುತ್ತಿದ್ದರು. ಕಾಲಾಂತರದಲ್ಲಿ ಬೌದ್ಧಧರ್ಮವೂ ಕೂಡ ಚೀನಿಯರ ಜೀವನ ಮತ್ತು ತತ್ವಜ್ಞಾನದ ಮೇಲೆ ಛಾಪು ಮೂಡಿಸಿದೆ. ಭಾರತದ ಬೌದ್ಧಧರ್ಮವು ಒಂದನೇ ಶತಮಾನದಲ್ಲಿ ಕಾನಿಷ್ಕನ ಅವಧಿಯಲ್ಲಿ ಚೀನಾ ದೇಶದಲ್ಲಿ ಹರಡಿತು. ಭಾರತದ ಬೌದ್ಧ ಭಿಕ್ಷುಗಳು ಮತ್ತು ವ್ಯಾಪಾರಸ್ಥರು ಬೌದ್ಧಧರ್ಮವನ್ನು ಚೀನಾದಲ್ಲಿ ಜನಪ್ರಿಯಗೊಳಿಸಿದರು. ಆದರೂ 'ಹಾನ್' ವಂಶ ಪತನವಾಗುವವರೆಗೆ ಅದು ಹೆಚ್ಚಿಗೆ ಬೆಳೆಯಲಿಲ್ಲ. ಏಕೆಂದರೆ, ಹಾನ್ ದೊರೆಗಳು ಕನ್‌ಫ್ಯೂಸಿಯಸ್‌ನ ವಿಚಾರ ಧಾರೆಯನ್ನು ಅನುಸರಿಸುತ್ತಿದ್ದರು. ಕಾಲಾಂತರದಲ್ಲಿ ಚೀನಾವನ್ನು ಆಳಿದ ವಿದೇಶಿ ರಾಜಮನೆತನಗಳಾದ 'ಯೂ ಆನ್' ಮತ್ತು 'ಮಂಚು'ಗಳು ತಮ್ಮ ಆಡಳಿತವನ್ನು ಪುಷ್ಟೀಕರಿಸುವಲ್ಲಿ ಬೌದ್ಧಧರ್ಮವನ್ನು ಬಳಸಿಕೊಂಡವು. ಈ ಮನೆತನಗಳ ಕಾಲದಲ್ಲಿ ಬೌದ್ಧಧರ್ಮವು ರಾಷ್ಟ್ರ ಧರ್ಮವಾಯಿತು. ಇಂದಿಗೂ ಕೂಡ ಬೌದ್ಧಧರ್ಮವು ಚೀನಾದಲ್ಲಿ ಜನಪ್ರಿಯವಾಗಿದ್ದು ಚೀನಿಯರ ಸಮಾಜದ ಪ್ರತಿಯೊಂದೂ ಆಯಾಮಗಳ ಮೇಲೆ ಪ್ರಭಾವ ಬೀರಿದೆ.

ಪ್ರಶ್ನೆಗಳು

ಕೆಳಗಿನವುಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಒಂದು ಅಂಕ)

1. ಯಾವ ನದಿಯ ದಂಡೆಯ ಮೇಲೆ ಈಜಿಪ್ಟ್ ನಾಗರಿಕತೆ ಬೆಳವಣಿಗೆಯಾಯಿತು?
2. ಈಜಿಪ್ತಿಯನ್ನರ ಲಿಪಿಯನ್ನು ಏನೆಂದು ಕರೆಯುತ್ತಾರೆ?
3. ವಿಶ್ವದ ಪ್ರಥಮ ಸಾಮ್ರಾಜ್ಞಿ ಯಾರು?
4. ಈಜಿಪ್ತಿಯನ್ನರು ತಮ್ಮ ರಾಜರ ಮೃತ ದೇಹಗಳನ್ನು ಏಕೆ ಸಂರಕ್ಷಿಸಿಡುತ್ತಿದ್ದರು?
5. ವಿಶ್ವದ ಬೃಹತ್ ಪಿರಮಿಡ್ ಯಾವುದು?
6. ಮೆಸೊಪೊಟೇಮಿಯಾದ ಅರ್ಥವೇನು?
7. ತೂಗುವ ಉದ್ಯಾನವನ ನಿರ್ಮಿಸಿದವರು ಯಾರು?
8. ಜಿಗ್ಗುರಾತ್ ಎಂದರೇನು?
9. ಚೀನಾದ ಪ್ರಸಿದ್ಧ ದೊರೆ ಯಾರು?
10. ತಾವೋ ಸಿದ್ಧಾಂತವನ್ನು ಯಾರು ಪ್ರತಿಪಾದಿಸಿದರು?
11. ಬೌದ್ಧಧರ್ಮವನ್ನು ಚೀನಾದಲ್ಲಿ ಜನಪ್ರಿಯಗೊಳಿಸಿದವರು ಯಾರು?

ಕೆಳಗಿನವುಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಎರಡು ಅಂಕ)

1. ನಾಗರಿಕತೆಗಳ ಬೆಳವಣಿಗೆಗೆ ಸಹಾಯಕವಾದ ಯಾವುದಾದರೂ ಎರಡು ಶೋಧನೆಗಳನ್ನು ತಿಳಿಸಿ.
2. ನಾಗರಿಕತೆಯನ್ನು ವ್ಯಾಖ್ಯಾನಿಸಿ.
3. ಯಾವುದಾದರೂ ಎರಡು ಪ್ರಾಚೀನ ನಾಗರಿಕತೆಗಳನ್ನು ಹೆಸರಿಸಿ.
4. ನದಿ ಕಣಿವೆಗಳನ್ನು ನಾಗರಿಕತೆಗಳ ತೊಟ್ಟಿಲು ಎಂದು ಏಕೆ ಕರೆಯಲಾಗಿದೆ?
5. ಈಜಿಪ್ತ್‌ನ್ನು ನೈಲ್ ನದಿಯ ವರಪ್ರಸಾದ ಎಂದು ಏಕೆ ಕರೆಯಲಾಗಿದೆ?
6. ಈಜಿಪ್ತ್‌ನ ಯಾವುದಾದರೂ ಎರಡು ದೇವಾನುದೇವತೆಗಳನ್ನು ಹೆಸರಿಸಿ.
7. ಮೆಸೊಪೊಟೇಮಿಯಾವನ್ನು 'ನಾಗರಿಕತೆಗಳ ತೊಟ್ಟಿಲು ಮತ್ತು ಸಮಾಧಿ' ಎಂದು ಏಕೆ ಕರೆಯಲಾಗಿದೆ?
8. ಮೆಸೊಪೊಟೇಮಿಯಾ ನಾಗರಿಕತೆಯ ಅವನತಿಗೆ ಯಾವುದಾದರೂ ಎರಡು ಕಾರಣಗಳನ್ನು ಬರೆಯಿರಿ.
9. ಚೀನಾ ನಾಗರಿಕತೆ ಬೆಳವಣಿಗೆಯಾದ ನದಿಕಣಿವೆಗಳನ್ನು ಹೆಸರಿಸಿ.
10. ಚೀನಾದ ಮಹಾಗೋಡೆಯನ್ನು ನಿರ್ಮಿಸಿದವರು ಯಾರು? ಏಕೆ?
11. ಚೀನಿಯರ ಯಾವುದಾದರೂ ಎರಡು ಪ್ರಮುಖ ವೈಜ್ಞಾನಿಕ ಶೋಧನೆಗಳನ್ನು ತಿಳಿಸಿ.
12. ಪ್ರಾಚೀನ ಚೀನಾದ ಯಾರಾದರೂ ಇಬ್ಬರು ತತ್ವಜ್ಞಾನಿಗಳನ್ನು ಹೆಸರಿಸಿ.

ಕೆಳಗಿನವುಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 5 ಅಂಕಗಳು)

1. ನಾಗರಿಕತೆಯನ್ನು ವ್ಯಾಖ್ಯಾನಿಸಿ. ಮತ್ತು ನಾಗರಿಕತೆ ಮತ್ತು ಸಂಸ್ಕೃತಿ ನಡುವಿನ ವ್ಯತ್ಯಾಸ ತಿಳಿಸಿ.
2. ನಾಗರಿಕತೆಗಳ ಬೆಳವಣಿಗೆಗೆ ಸಹಾಯಕವಾದ ಅಂಶಗಳನ್ನು ಚರ್ಚಿಸಿ.
3. ಈಜಿಪ್ಟ್ ನಾಗರಿಕತೆಯ ರಾಜಕೀಯ ಸ್ಥಿತಿಯನ್ನು ವಿವರಿಸಿ.
4. ಈಜಿಪ್ಟ್ ನಾಗರಿಕತೆಯ ಶಿಕ್ಷಣ ಮತ್ತು ಸಾಹಿತ್ಯದ ಬಗ್ಗೆ ಟಿಪ್ಪಣಿ ಬರೆಯಿರಿ.
5. ಈಜಿಪ್ಟ್ ನಾಗರಿಕತೆಯ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ವಿವರಣೆ ಬರೆಯಿರಿ.
6. ಹಮ್ಮುರಾಬಿಯ ಕಾನೂನು ಸಂಹಿತೆಯ ಕುರಿತು ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.
7. ಮೆಸೊಪೊಟೇಮಿಯಾದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಕುರಿತು ಬರೆಯಿರಿ.
8. ಕನ್‌ಫ್ಯೂಸಿಯಸ್ ಮತ್ತು ಅವನ ತತ್ವಶಾಸ್ತ್ರದ ಬಗ್ಗೆ ಒಂದು ವಿವರಣೆ ಬರೆಯಿರಿ.
9. ಚೀನಿಯರ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ಒಂದು ವಿವರಣೆ ಬರೆಯಿರಿ.
10. ಚೀನಿಯರ ಬರವಣಿಗೆ ಮತ್ತು ಸಾಹಿತ್ಯವನ್ನು ಕುರಿತು ಒಂದು ವಿವರಣೆ ನೀಡಿ.

ಕೆಳಗಿನವುಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 10 ಅಂಕಗಳು)

1. ಈಜಿಪ್ಟ್ ನಾಗರಿಕತೆಯ ಕೊಡುಗೆಗಳನ್ನು ವಿವರಿಸಿ.
2. ಮೆಸೊಪೊಟೇಮಿಯಾದ ನಾಗರಿಕತೆಯ ಕೊಡುಗೆಗಳನ್ನು ವಿವರಿಸಿ.
3. ಚೀನಾದ ನಾಗರಿಕತೆಯ ಕೊಡುಗೆಗಳನ್ನು ವಿವರಿಸಿ.

❖ ❖ ❖ ❖

ಅಧ್ಯಾಯ 4

ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳ ಸ್ಥಾಪನೆ – ಕೊಡುಗೆಗಳು

4.1 ಗ್ರೀಕ್ ನಗರ ರಾಜ್ಯಗಳು – ಸಾಂಸ್ಕೃತಿಕ ಕೊಡುಗೆಗಳು :

ಪೀಠಿಕೆ: ಯೂರೋಪಿನ ಎಲ್ಲಾ ನಾಗರಿಕತೆಗಳ ಉಗಮಕ್ಕೆ ಗ್ರೀಕ್ ನಾಗರಿಕತೆಯೇ ತಳಪಾಯವಾಗಿದೆ. ಪ್ರಸಿದ್ಧ ಇತಿಹಾಸಕಾರನಾದ ಆರ್ನಾಲ್ಡ್ ಟಾಯ್ನ್‌ಬಿ ಹೇಳಿದ ಹಾಗೆ, "ತಾಯಿಯ ಗರ್ಭದಲ್ಲಿ ಮಗು ಬೆಳೆದ ಹಾಗೆ ಗ್ರೀಕ್ ಸಮಾಜದ ಒಡಲಲ್ಲಿ ಯೂರೋಪಿನ ನಾಗರಿಕತೆಗಳು ಬೆಳೆದವು". ಪ್ರಪಂಚದ ಸಂಸ್ಕೃತಿಗೆ ಗ್ರೀಕರ ಕಾಣಿಕೆ ಅಪಾರವಾಗಿದೆ.



ಪ್ರಾಚೀನ ಗ್ರೀಕ್ ದೇಶ

ಗ್ರೀಕ್‌ನ ಭೌಗೋಳಿಕ ರಚನೆ:

ಗ್ರೀಕರು ಕರೆಯುತ್ತಿದ್ದ ಗ್ರೀಸ್ ಅಥವಾ ಹೆಲ್ಲಾಸ್ ಒಂದು ಪರ್ಯಾಯ ದ್ವೀಪ. ಇದರ ವಿಸ್ತೀರ್ಣ 25,000 ಚದರ ಮೈಲಿ, ಹಾಗೂ ಇದು ಯೂರೋಪಿನ ಮುಖ್ಯ ಭೂಮಿಯಿಂದ ಮೆಡಿಟರೇನಿಯನ್ ಸಮುದ್ರದವರೆಗೆ ವಿಸ್ತರಿಸಿತ್ತು. ಇದು ಏಜಿಯನ್, ಏಡ್ರಿಯಾಟಿಕ್ ಹಾಗೂ ಆಯೋನಿಯನ್ ಸಮುದ್ರಗಳ ನಡುವೆ ಇದ್ದಿತು. ಗ್ರೀಕ್ ನಾಗರಿಕತೆಯ ಮೇಲೆ ಭೌಗೋಳಿಕ ಅಂಶಗಳ ಪ್ರಭಾವ ಅಪಾರವಾದುದು. ಗ್ರೀಕ್‌ನ ಮುಖ್ಯ ಭಾಗವು ಹಳ್ಳ, ದಿಣ್ಣೆ, ಪರ್ವತ ಸಾಲಿನಿಂದ ಕೂಡಿತ್ತು. ಇಲ್ಲಿಯ ಮಣ್ಣು ಕೃಷಿಗೆ ಯೋಗ್ಯವಾಗಿರಲಿಲ್ಲ. ಭೂಮಿ ಅಸ್ತವ್ಯಸ್ತ ಪರ್ವತ ಸಾಲುಗಳನ್ನು ಹೊಂದಿದ್ದು, ಇದು ಚಿಕ್ಕ ಪುಟ್ಟ ರಾಜ್ಯಗಳಾಗಿ ವಿಭಜನೆಯಾಗಲು ಕಾರಣವಾಯಿತು. ಗ್ರೀಕ್‌ನ ನದಿಗಳು ಚಿಕ್ಕವಾಗಿದ್ದು ಸಾರಿಗೆಗೆ ಅನುಕೂಲವಾಗಿರಲಿಲ್ಲ. ಪರ್ವತ ಸಾಲು ಗ್ರೀಕ್ ಭೂಭಾಗವನ್ನು ವಿಭಾಗಗಳಾಗಿ ಮಾಡಲು ಕಾರಣವಾಗಿದ್ದರೆ, ಇಲ್ಲಿಯ ಸಮುದ್ರಗಳು ಗ್ರೀಕನ್ನು ಒಂದುಗೂಡಿಸಲು ಕಾರಣವಾಗಿವೆ. ಗ್ರೀಕ್‌ನ ಯಾವುದೇ ಸ್ಥಳ ಸಮುದ್ರ ತೀರದಿಂದ 40 ಮೈಲುಗಳ ಅಂತರಕ್ಕಿಂತ ಹೆಚ್ಚು ದೂರದಲ್ಲಿಲ್ಲ. ಏಜಿಯನ್ ಸಮುದ್ರ

'ಗ್ರೀಕ್ ಕೊಳ'ವಾದರೆ ಹಾಗು ದ್ವೀಪಗಳು ಈಜಿಪ್ಟ್ ಮತ್ತು ಏಷಿಯಾ–ಮೈನರ್‌ಗೆ ಮೆಟ್ಟಿಲುಗಳಾದವು. ಹಾಗಾಗಿ ಗ್ರೀಕರ ಜೀವನ ಹಾಗೂ ಸಂಸ್ಕೃತಿಯ ಮೇಲೆ ಸಮುದ್ರಗಳು ಪ್ರಮುಖಪಾತ್ರ ವಹಿಸಿವೆ.

ಹೆಲೆನೆಸ್: ಗ್ರೀಕರನ್ನು ಮೂಲತಃ ಹೆಲೆನೆಸ್ ಎಂದು ಕರೆಯಲಾಗುತ್ತಿತ್ತು. ಏಕೆಂದರೆ ಅವರು ಪೂರ್ವಜನಾದ ಹೆಲೆನೆಸ್‌ನಿಂದ ಬಂದವರೆಂದು ಪರಿಭಾವಿಸಿದ್ದರು. ಹೆಲೆನೆಸ್‌ರನ್ನು ನಂತರದಲ್ಲಿ ಇಟಾಲಿಯನ್ನರು, 'ಗ್ರೀಕ್'ರೆಂದು ಕರೆದರು.

ಶಾಸ್ತ್ರೀಯ ನಾಗರೀಕತೆ: ಪ್ರಾಚೀನ ನಾಗರೀಕತೆಗಳಲ್ಲಿ ಉಚ್ಚ್ರಾಯ ಬೆಳವಣಿಗೆಯನ್ನು ಗುರ್ತಿಸಲು ಶಾಸ್ತ್ರೀಯ ಎಂಬ ಪದ ಬಳಸಲಾಗಿದೆ.

ಆರಂಭಿಕ ಗ್ರೀಕರು:

ಗ್ರೀಕರು ಉತ್ತರದ ಕಡೆಯಿಂದ ಬಂದವರಾಗಿದ್ದು ಬಹುಶಃ ಡ್ಯಾನುಬ್ ನದಿ ಕೊಳ್ಳದಿಂದ ಬಂದವರು. ಇವರು ಇಂಡೋ–ಯೂರೋಪಿಯನ್ ಭಾಷೆ ಮಾತನಾಡುತ್ತಿದ್ದರು. ಏಜಿಯನ್ ಭಾಗದಲ್ಲಿ ಬಂದ ಪ್ರತಿ ಪಂಗಡಕ್ಕೆ ತಮ್ಮದೇ ಆದ ಹೆಸರಿದ್ದವು. ಅವುಗಳೆಂದರೆ ಏಜಿಯನ್ಸ್, ಅಯೋನಿಯನ್ಸ್ ಹಾಗೂ ಡೋರಿಯನ್ಸ್. ಆನಂತರ ಅವರೆಲ್ಲರೂ ತಮ್ಮನ್ನು ಹೆಲೆನೆಸ್ ಎಂದು ಕರೆದುಕೊಂಡರು. ಹೆಲೆನೆಸ್ ಎಂದರೆ 'ಗ್ರೀಕ್' ಎಂದರ್ಥ. ಆರಂಭದಲ್ಲಿ ಗ್ರೀಸ್‌ನ್ನು ಯಾವುದೇ ಪಂಗಡವು ಸಂಪೂರ್ಣವಾಗಿ ಆಕ್ರಮಿಸಿಕೊಂಡಿರಲಿಲ್ಲ. ಈ ಆಕ್ರಮಣ ಅನೇಕ ಶತಮಾನಗಳವರೆಗೆ ಮುಂದುವರೆಯಿತು. ದೊರೆತ ದಾಖಲೆಯಂತೆ ಆರಂಭದ ಗ್ರೀಕರು ಸಾ.ಶ.ಪೂ.1400ರಲ್ಲಿ ವಲಸೆ ಹೋದರು. ಭಾರತದ ಆರ್ಯರಂತೆ ಇವರು ಬುಡಕಟ್ಟು ಕುಟುಂಬಗಳಲ್ಲಿ ನೆಲೆಸಿದ್ದರು. ಪ್ರತಿಯೊಂದು ಪಂಗಡಕ್ಕೂ ಒಬ್ಬೊಬ್ಬ ನಾಯಕನಿದ್ದನು. ಸಾ.ಶ.ಪೂ.1200ರ ಸುಮಾರಿಗೆ ಅವರು 'ಟ್ರಾಯ್' ನಗರವನ್ನು ಹತ್ತು ವರ್ಷಗಳ ಮುತ್ತಿಗೆ ನಂತರ ವಶಪಡಿಸಿಕೊಂಡರು. ಹೋಮರ್ ತನ್ನ 'ಇಲಿಯಡ್' ಕಾವ್ಯದಲ್ಲಿ ಆ ನಗರದ ಅವನತಿ ಕುರಿತಾಗಿ ವಿವರಿಸಿದ್ದಾನೆ. ಸ್ಥಳೀಯರೊಂದಿಗೆ ಆಕ್ರಮಣಕಾರರು ಅಂತರ್–ವಿವಾಹವಾದುದರಿಂದ ಮಿಶ್ರ ಪಂಗಡ ಬೆಳವಣಿಗೆಯಾಯಿತು.

ನಗರ–ರಾಜ್ಯಗಳು (ಪಾಲಿಸ್):

ಪ್ರಾಚೀನ ಗ್ರೀಕರ ಶ್ರೇಷ್ಠ ರಾಜಕೀಯ ಸಾಧನೆಯೆಂದರೆ ನಗರ–ರಾಜ್ಯಗಳು. ಬುಡಕಟ್ಟು ಜನಾಂಗದ (ಪಂಗಡದ) ಲಕ್ಷಣಗಳು ಹಾಗೂ ಭೌಗೋಳಿಕ ಲಕ್ಷಣಗಳು ನಗರ ರಾಜ್ಯಗಳ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿವೆ. ಇದು ಮೂಲತಃ ಕೋಟೆಯಿಂದ ಆವೃತವಾದ ಸ್ಥಳ, ನಂತರದಲ್ಲಿ ಸಾರ್ವಭೌಮ ರಾಜ್ಯ ಎಂದು ಕರೆಯಲ್ಪಡುತಿತ್ತು. ಇವುಗಳು ಕೋಟೆ, ನಗರ ಹಾಗೂ ಸುತ್ತಲಿನ ಹಳ್ಳಿಗಳನ್ನು ಒಳಗೊಂಡಿದ್ದವು. ಸಾ.ಶ.ಪೂ.800 ವೇಳೆಗೆ ಗ್ರೀಕ್ ಹಳ್ಳಿಗಳು ದೊಡ್ಡದಾದ ನಗರ ರಾಜ್ಯಗಳಲ್ಲಿ ಸೇರ ತೊಡಗಿದವು. ನಗರ ರಾಜ್ಯದ ಉನ್ನತ ಭಾಗದಲ್ಲಿ ರಕ್ಷಣೆಗಾಗಿ 'ಪುರದುರ್ಗ' (ಅಕ್ರೋಪೋಲಿಸ್) ಅಥವಾ 'ಸಿಟಾಡೆಲ್' ಎಂಬ ರಕ್ಷಣಾ ಕೇಂದ್ರವನ್ನು ನಿರ್ಮಿಸಿದರು. ಈ ಕೇಂದ್ರದ ಸುತ್ತ ನಗರ ಬೆಳೆಯುತ್ತಿತ್ತು. ಸ್ಪಾರ್ಟಾ, ಅಥೆನ್ಸ್, ಮ್ಯಾಸಿಡೊನಿಯಾ, ಕೊರಿಯಂತ್ ಮತ್ತು ತಿಬ್ಸ್‌ಗಳು ಮುಖ್ಯ ನಗರ–ರಾಜ್ಯಗಳಾಗಿದ್ದವು. ಗ್ರೀಕ್ ನಗರ–ರಾಜ್ಯಗಳು ಸ್ವತಂತ್ರ್ಯವಾಗಿದ್ದು, ಪರಸ್ಪರ ಅಸೂಯೆ, ಹಾಗೂ ಅಂತಃಕಲಹಗಳಲ್ಲಿ ತೊಡಗಿದ್ದರೂ ತಾವೆಲ್ಲ ಹೆಲೆನೆಸರೆಂದು ಬಲವಾಗಿ ನಂಬಿದ್ದರು. ಗ್ರೀಕ್‌ರ ಒಗ್ಗಟ್ಟಿಗೆ ಮತ್ತೊಂದು ಕಾರಣ, ಸಾಮಾನ್ಯ ಭಾಷೆ ಹಾಗೂ ಸಾಹಿತ್ಯ. ಇವಲ್ಲದೆ, ಇವರು ಪೂಜಿಸುತ್ತಿದ್ದ ದೇವರುಗಳಾದ ಝ್ಯೂಸ್ (ಜೀಯಸ್), ಅಪೊಲೋ ಹಾಗೂ ಅಥೆನಾ ಮತ್ತೊಂದು ಬಲವಾದ ಕಾರಣವಾಗಿತ್ತು.

ಅಥೆನ್ಸ್‌ನ ಪುರದುರ್ಗ

ಸರ್ಕಾರದ ವಿಧಗಳು:

ನಗರ ರಾಜ್ಯಗಳು ಆರಂಭದಲ್ಲಿ ರಾಜರಿಂದ ಆಳಲ್ಪಡುತ್ತಿದ್ದವು. ಇವರಿಗೆ ಆಡಳಿತದಲ್ಲಿ ಸಹಾಯಮಾಡಲು ಸರದಾರರ(ನೋಬಲ್)ನ್ನು ಒಳಗೊಂಡ ಮಂಡಳಿಯಿತ್ತು. ನಂತರ ಶ್ರೀಮಂತ ಭೂಮಾಲೀಕರು ರಾಜಕೀಯ ಅಧಿಕಾರವನ್ನು ಕಿತ್ತುಕೊಂಡು, ರಾಜತ್ವವನ್ನು ಕೊನೆಗಾಣಿಸಿದರು. ನಗರಗಳಲ್ಲಿ ಜನಸಂಖ್ಯೆ ಬೆಳೆದಂತೆ ವ್ಯಾಪಾರ–ವಾಣಿಜ್ಯ ಬೆಳೆಯಿತು, ಕೈಗಾರಿಕೆ ವಿಸ್ತರಿಸಿತು ಮತ್ತು ಮಧ್ಯಮ ವರ್ಗದ ಬೆಳವಣಿಗೆ ಆಯಿತು. ಈ ಮಧ್ಯಮ ವರ್ಗದ ಜನತೆ ಭೂಒಡೆಯರ ಅಧಿಕಾರ ಕಡಿಮೆಮಾಡಲು ಬಡ ರೈತರೊಂದಿಗೆ ಸೇರಿದರು. ಈ ವರ್ಗಸಂಘರ್ಷದ ಪರಿಣಾಮ ನಿರಂಕುಶ ಪ್ರಭುಗಳ ಅಥವಾ ಗ್ರೀಕ್‌ರೇ ಕರೆದ ಹಾಗೆ ಪ್ರಜಾಪೀಡಕರ ಉಗಮವಾಯಿತು. ಅದರೆ ಸ್ಪಾರ್ಟಾ ಮತ್ತು ಅಥೆನ್ಸ್‌ನಲ್ಲಿ ಕೆಲವು ಬದಲಾವಣೆಗಳಾದವು. ಸಾರ್ಟಾ ಸೈನಿಕಾಡಳಿತವಾಗಿ ಮಾರ್ಪಟ್ಟಿತು. ಈ ಸರ್ಕಾರವನ್ನು ಕೆಲವು ಸರದಾರರು ಆಳತೊಡಗಿದರು. ಇವರಲ್ಲಿ ಇಬ್ಬರು ಸರದಾರರು ರಾಜರಾದರು.

ಚಟುವಟಿಕೆ: ನಗರ ರಾಜ್ಯಗಳಲ್ಲಿ ಕಾರ್ಯ ನಿರ್ವಾಹಿಸುತ್ತಿದ್ದ ವಿವಿಧ ರೀತಿಯ ಸರ್ಕಾರಗಳ ಬಗ್ಗೆ ಚರ್ಚಿಸಿ.

ಅಥೆನ್ಸ್‌ನ ಪ್ರಜಾಪ್ರಭುತ್ವ: ಅಥೆನ್ಸ್‌ನಲ್ಲಿ ರಾಜಕೀಯ, ಕಾನೂನು, ಸಾಹಿತ್ಯ, ಕಲೆ, ವಿಜ್ಞಾನ ಹಾಗೂ ತತ್ವಶಾಸ್ತ್ರದಲ್ಲಿ ಮಹತ್ತರ ಪ್ರಗತಿಯಾಯಿತು. ಆಥೆನ್ಸರು ರಾಜಕೀಯ ಪ್ರಯೋಗ ಪ್ರಿಯರಾಗಿದ್ದರು. ರಾಜಪ್ರಭುತ್ವ ಹಾಗೂ ಕುಲೀನ (ಆಲಿಗಾರ್ಕಿ) ಪದ್ಧತಿಗಳು ಇವರ ಮನಃಸ್ಥಿತಿಗೆ ಹೊಂದಿಕೊಳ್ಳಲಿಲ್ಲ. ಹಾಗಾಗಿ ಇವುಗಳನ್ನು ತಿರಸ್ಕರಿಸಿದರು. ಅಂತಿಮವಾಗಿ ಇವರ ಪ್ರಬುದ್ಧ ಶಾಸನ ಕರ್ತೃಗಳಾದ ಡ್ರಾಕೋ, ಸೊಲೋನ್ ಹಾಗೂ ಕ್ಲೈಸ್ತನಿಸ್‌ರ ಕೊಡುಗೆಗಳಿಂದಾಗಿ ಪ್ರಜಾಪ್ರಭುತ್ವ ಅಥೆನ್ಸ್‌ನಲ್ಲಿ ಜನ್ಮ ತಾಳಿತು.

ಡ್ರಾಕೋ: ಡ್ರಾಕೋ ಒಬ್ಬ ಸರದಾರನಾಗಿದ್ದು, ಆಥೆನ್ಸ್‌ನಲ್ಲಿ ಲಿಖಿತ ಕಾನೂನು ಸಂಹಿತೆಯನ್ನು ನೀಡಿದನು. ಈ ಕಾನೂನುಗಳು ಅಪ್ರಾಮಾಣಿಕ ಮತ್ತು ಭ್ರಷ್ಟ ನ್ಯಾಯಾಧೀಶರುಗಳಿಂದ ಜನರಿಗೆ ರಕ್ಷಣೆಯನ್ನು ನೀಡಿತು. ಆದರೆ ಡ್ರಾಕೋನ ಸಂಹಿತೆ ಶ್ರೀಮಂತ ಸರದಾರರ ಅಧೀನದಲ್ಲಿದ್ದ ಬಡ ರೈತರಿಗೆ ಯಾವುದೇ ಸಹಾಯವನ್ನೂ ಮಾಡಲಿಲ್ಲ. (ಡ್ರಾಕೋನಿಯನ್ ಕಾನೂನು ಎಂಬ ಪದವನ್ನು ಈ ಸಂದರ್ಭದಲ್ಲಿ ಪಡೆದುದ್ದಾಗಿದೆ.)

ಸೊಲಾನ್: ಜ್ಞಾನಿ ಎನಿಸಿಕೊಂಡಿರುವ ಸೋಲಾನ್ ಪ್ರಜಾಪ್ರಭುತ್ವ ತಳಹದಿಯಡಿ ಸಂವಿಧಾನಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದನು. ಈತನ ಕಾನೂನುಗಳು ರೈತರನ್ನು ಮುಕ್ತಿಗೊಳಿಸಿತು. ಅಲ್ಲದೇ ಋಣಭಾರದ–

ಜೀತಪದ್ಧತಿಯೂ ಕಾನೂನು ಬಾಹಿರ ಎಂದು ಘೋಷಿಸಿದನು, ಹಾಗೂ ಎಲ್ಲಾ ಭೂಮಿಯನ್ನು ಒತ್ತೆಯಿಂದ ಮುಕ್ತ ಮಾಡಿದನು. ನಾಣ್ಯಗಳನ್ನು ಜಾರಿಗೆ ತರುವ ಮೂಲಕ ವರ್ತಕರಿಗೆ ಸಹಾಯ ಮಾಡಿದನು. ವಿದೇಶಿ ಕುಶಲಕರ್ಮಿಗಳನ್ನು ಅಥೆನ್ಸ್‌ನಲ್ಲಿ ನೆಲೆಸಲು ಪ್ರೋತ್ಸಾಹಿಸಿದನು. ನ್ಯಾಯಾಧೀಶರನ್ನು ಜನರೇ ಆಯ್ಕೆ ಮಾಡುವ ಹಾಗೂ ಅವರ ಕಾರ್ಯ ಪರಿಶೀಲಿಸುವ ನೀತಿ ಜಾರಿಗೆ ತಂದನು. ಒಟ್ಟಾರೆಯಾಗಿ ಈತನ ಸುಧಾರಣೆಗಳು ಮಧ್ಯಮ ಹಾಗೂ ಬಡವರ್ಗದ ಜನತೆಗೆ ತುಂಬಾ ಪ್ರಯೋಜನಕಾರಿಯಾದವು.

ಕ್ಲೈಸ್ತನಿಸ್:

ಪೌರತ್ವದ ಹಕ್ಕು ಹಾಗೂ ಪುರುಷ ವಯಸ್ಕರಿಗೆ ಮತದಾನದ ಹಕ್ಕು ನೀಡುವುದರ ಮೂಲಕ ಪ್ರಭಾವಿ ಕುಟುಂಬದ ಸದಸ್ಯನಾದ ಕ್ಲೈಸ್ತನಿಸ್ ಆಳುವಕೂಟಗಳ(ಕ್ಲಾನ್ಸ್) ಅಧಿಕಾರವನ್ನು ಮೊಟಕು ಮಾಡಿದನು. ಇದರಿಂದ ಬಡವರೂ ಮತ ಚಲಾಯಿಸುವ ಹಕ್ಕನ್ನು ಪಡೆದರು. ಈತನು ಪ್ರಜಾಪ್ರಭುತ್ವದ ತಳಹದಿಯಲ್ಲಿ ರಾಜ್ಯವನ್ನು ಪುನರ್‌ರಚಿಸಿದನು. ಬುಡಕಟ್ಟು ಸ್ವರೂಪದ ಸರ್ಕಾರ ಕೊನೆಗಾಣಿಸಿ, ಸಂವಿಧಾನವನ್ನು ವಿಸ್ತರಿಸಿದನು. ಶಾಸನಸಭೆಯಲ್ಲಿ ಸರದಾರರ ಅಧಿಕಾರವನ್ನು ಮೊಟಕು ಮಾಡಲು ಸಾಕಷ್ಟು ಯತ್ನಿಸಿದನು.

ಪೆರಿಕ್ಲಿಸ್‌ನ ಸುವರ್ಣ ಯುಗ–ಸಾ.ಶ.ಪೂ 469–429:

ಅಥೆನ್ಸ್‌ನ ಪ್ರಜಾಪ್ರಭುತ್ವ ಪೆರಿಕ್ಲಿಸ್‌ನ ನಾಯಕತ್ವದಲ್ಲಿ ಉಚ್ಛ್ರಾಯ ಸ್ಥಿತಿಗೇರಿತು. ರಾಜಕೀಯದಲ್ಲಿ ತೀವ್ರ ಸುಧಾರಣೆ ಹಾಗೂ ಬದಲಾವಣೆ ತರುವಲ್ಲಿ ಅಗ್ರಗಣ್ಯನಾಗಿದ್ದನು. ಈತನು ಕ್ಲೈಸ್ತನಿಸ್‌ನ ಮರಿಮಗ. ಈತ ಅಥೆನ್ಸ್‌ನಲ್ಲಿ ಪ್ರಜಾಪ್ರಭುತ್ವದ ಅಡಿಪಾಯ ಹಾಕುವ ಕಾರ್ಯವನ್ನು ಪೂರ್ಣಗೊಳಿಸಿದನು. ಆರ್ಕೊಪೆಗಸ್ (ಶಾಸನಸಭೆಯ) ರಾಜಕೀಯ ಅಧಿಕಾರವನ್ನು ಕಿತ್ತುಕೊಂಡು ಅದನ್ನು 500 ಜನರ ಮಂಡಳಿಗೆ ರಾಜಕೀಯ ಅಧಿಕಾರ ವರ್ಗಾಯಿಸುವ ಮೂಲಕ ಶಾಸನಸಭೆಯ ಸುಧಾರಣೆಗೆ ಮುಂದಾದನು. ಈ ಶಾಸನಸಭೆಯಲ್ಲಿ ಅಥೆನ್ಸ್‌ನ ಎಲ್ಲಾ ಜನತೆ ಸೇರಿ ಚರ್ಚಿಸುವ ಮೂಲಕ ಕಾನೂನುಗಳನ್ನು ಜಾರಿಗೆ ತರುತ್ತಿದ್ದರು. ಶಾಸನಸಭೆಯಿಂದ 10 ಜನರ ಮಂಡಳಿಯ (ಈಗಿನ ಕ್ಯಾಬಿನೆಟ್‌ನಂತೆ) ಜನರಲ್‌ಗಳು ಆಯ್ಕೆಯಾಗುತ್ತಿದ್ದರು. ಈ ಮಂಡಳಿಗೆ 15 ವರ್ಷಗಳ ಕಾಲ ಪೆರಿಕ್ಲಿಸ್ ಅಧ್ಯಕ್ಷನಾಗಿದ್ದನು. ಈ ಜನರಲ್‌ಗಳು ಶಾಸನಸಭೆಗೆ ಜವಾಬ್ದಾರರಾಗಿದ್ದರು ಆದುದರಿಂದ ಅವರು ನಿರಂಕುಶ ಪ್ರಭುಗಳಾಗಲು ಸಾಧ್ಯವಾಗುತ್ತಿರಲಿಲ್ಲ.

ಪೆರಿಕ್ಲಿಸ್‌ನ ಇನ್ನೊಂದು ಮುಖ್ಯ ಸುಧಾರಣೆ ಎಂದರೆ ಜ್ಯೂರಿ ಪದ್ಧತಿ. ಪ್ರತಿ ವರ್ಷವು ಸುಮಾರು 5000 ನ್ಯಾಯದರ್ಶಿಗಳನ್ನು ಒಂದು ವರ್ಷದ ಅವಧಿಗಾಗಿ ಚುನಾಯಿಸಲಾಗುತ್ತಿತ್ತು. ಪ್ರಜಾಪ್ರಭುತ್ವ ಪ್ರೇಮಿಯಾಗಿದ್ದ ಈತ ಪ್ರತಿ ಬಡ ಪ್ರಜೆಯೂ ರಾಜಕೀಯ ವಿಚಾರಗಳಲ್ಲಿ ಪಾಲ್ಗೊಳ್ಳಬೇಕೆಂದು ಬಯಸಿದನು. ಇದನ್ನು ಇಂದು 'ಪ್ರತ್ಯಕ್ಷ ಪ್ರಜಾಪ್ರಭುತ್ವ' ಎಂದು ಕರೆಯುತ್ತೇವೆ.

ಪರ್ಷಿಯನ್ ಯುದ್ಧದಲ್ಲಿ ನಾಶವಾಗಿದ್ದ ಅಥೆನ್ಸ್ ಅನ್ನು ಪೆರಿಕ್ಲಿಸ್ ಪುನರ್ ನಿರ್ಮಿಸಿದನು. ಅಥೆನ್ಸ್ ಕಲೆ ಹಾಗೂ ವಾಸ್ತುಶಿಲ್ಪದ ಪ್ರಗತಿಯ ಕೇಂದ್ರವಾಯಿತು. ಸುಂದರವಾದ, ಬೃಹತ್ ಕಟ್ಟಡಗಳು ನಿರ್ಮಾಣದಿಂದ ಅಥೆನ್ಸ್‌ನ್ನು ಸುಂದರ ನಗರವನ್ನಾಗಿಸಿದನು. ಪಾರ್ಥೇನಾನ್ ಅಥವಾ ವರ್ಜಿನ್ ದೇವಾಲಯವನ್ನು ಅತಿ ಎತ್ತರದ ಸ್ಥಳದಲ್ಲಿ ಬಣ್ಣದ ಅಮೃತಶಿಲೆಗಳಿಂದ ನಿರ್ಮಿಸಿದನು. ಇದೊಂದು ಅತಿ ಸುಂದರವಾದ ದೇವಾಲಯ. ಇದಲ್ಲದೆ ಪೆರಿಕ್ಲಿಸ್ ಸಂಗೀತಕ್ಕೂ ಪ್ರೋತ್ಸಾಹ ನೀಡಿದನು. ವಿದೇಶಿ ದಾಳಿ ತಡೆಯಲು 'ಉದ್ದನೆಯ ಗೋಡೆ' ನಿರ್ಮಿಸಿ ಪೈರಿಯಸ್ ಬಂದರಿಗೆ ಸಂಪರ್ಕಿಸಿದನು.

ಪಾರ್ಥೆನಾನ್ ದೇವಾಲಯ, ಅಥೆನ್ಸ್

ಪೆರಿಕ್ಲಿಸ್ ಅವಧಿಯಲ್ಲಿ ಖ್ಯಾತ ತತ್ವಜ್ಞಾನಿಗಳಾದ ಸಾಕ್ರೆಟೀಸ್, ಹಾಗೂ ಆತನ ಶಿಷ್ಯ ಪ್ಲೇಟೋ ಪ್ರಮುಖ ಸ್ಥಾನ ಪಡೆದಿದ್ದರು. ಇದು ಗ್ರೀಕ್ ನಾಟಕಗಳ ಸುವರ್ಣಯುಗವಾಗಿತ್ತು. ಮುಖ್ಯವಾಗಿ ಈಸ್ಕಿಲಸ್, ಸೋಫೊಕ್ಲಿಸ್. ಯೂರಿಪಿಡಿಸ್‌ರಂತಹ ನಾಟಕಕಾರರು ದುರಂತ ನಾಟಕಗಳನ್ನು ರಚನೆ ಮಾಡಿದರು. ಇತಿಹಾಸ ಪಿತಾಮಹಾ ಎನಿಸಿಕೊಂಡಿರುವ ಹೆರೊಡೊಟಸ್ (ಸಾ.ಶ.ಪೂ 484–424) ಇತಿಹಾಸದ ಸ್ಥಾನವನ್ನು ಉನ್ನತೀಕರಿಸಿದ. ಥುಸಿಡೈಡ್ಸ್ (ಸಾ.ಶ.ಪೂ 471–400) ಪೆರಿಕ್ಲಿಸ್ ಕಾಲದ ಮತ್ತೊಬ್ಬ ಪ್ರಸಿದ್ಧ ಇತಿಹಾಸಕಾರನಾಗಿದ್ದನು. ಕವಿಗಳಾದ ಸ್ಯಾಪ್ಫೊ ಮತ್ತು ಪಿಂಡರ್ ಈ ಸಮಯದಲ್ಲಿದ್ದರು. ವೈದ್ಯಕೀಯಶಾಸ್ತ್ರದ ಪಿತಾಮಹ ಹಿಪೋಕ್ರೆಟಸ್ ಈ ಅವಧಿಯಲ್ಲಿದ್ದನು. ಹಾಗಾಗಿ ಅಥೆನ್ಸ್‌ನಲ್ಲಿ ಪೆರಿಕ್ಲಿಸ್‌ನ ಕಾಲವನ್ನು 'ಸ್ಕೂಲ್ ಆಫ್ ಹೆಲ್ಲಾಸ್' ಮತ್ತು 'ಸುವರ್ಣ ಯುಗ'ವೆಂದು ಪರಿಗಣಿಸಲಾಗಿದೆ.

ಪರ್ಷಿಯಾ ಹಾಗೂ ಪೆಲೊಪೊನೇಷಿಯನ್ ಯುದ್ಧಗಳು :

ಸಾ.ಶ.ಪೂ 5ನೇ ಶತಮಾನದಲ್ಲಿ ಅಥೆನ್ಸ್ ಎರಡು ಯುದ್ಧಗಳನ್ನು ಮಾಡಬೇಕಾಗಿ ಬಂದಿದ್ದರಿಂದ ಅದರ ಮಹತ್ವ ಕೊನೆಗೊಂಡಿತು. ಮೊದಲನೆಯದಾಗಿ ಇರಾನ್ ಅಥವಾ ಪರ್ಷಿಯಾದ ರಾಜ ಡೇರಿಯಸ್‌ನ ದಾಳಿ. ಎಲ್ಲಾ ಗ್ರೀಕರು ಒಗ್ಗಟ್ಟಿನಿಂದ ಈ ಹೋರಾಟದಲ್ಲಿ ಪಾಲ್ಗೊಂಡಿದ್ದರೂ ಹಾಗೂ ಸುದೀರ್ಘವಾದ 'ಮೆರಥಾನ್' ಯುದ್ಧ ಗ್ರೀಕರ ಸೋಲಿನೊಂದಿಗೆ ಕೊನೆಗೊಂಡಿತು. ಅಥೆನ್ಸ್ ನಗರವನ್ನು ಪರ್ಷಿಯನ್ನರು ಸುಟ್ಟರು. ಕೊನೆಗೆ ಇವರ ಒತ್ತಾಯದಿಂದಾಗಿ ಹಿಂದೆ ಸರಿದರು. ಎರಡನೆಯದಾಗಿ, ಪೆಲೊಪೊನೇಷಿಯಾ ಯುದ್ಧ (ಸಾ.ಶ.ಪೂ 431–404). ಅಥೆನ್ಸ್ ಹಾಗೂ ಸ್ಪಾರ್ಟಾದ ನಡುವೆ ನಡೆಯಿತು. ಈ ಯುದ್ಧದಲ್ಲಿ ಸ್ಪಾರ್ಟಾ ಜಯ ಸಾಧಿಸಿತು. ಇದರಿಂದಾಗಿ ಅಥೆನ್ಸಿನ ಪ್ರಜಾಪ್ರಭುತ್ವ ಅಂತ್ಯವಾಯಿತು. ಪೆಲೊಪೊನೇಷಿಯಾ ಯುದ್ಧದಿಂದ 'ಗ್ರೀಸ್ ಎಂಬ ವೈಭವ'ದ ಅಂತ್ಯದ ಆರಂಭವಾಯಿತು.

ಮ್ಯಾಸಿಡೊನಿಯ ಸಾಮ್ರಾಜ್ಯ:

ಗ್ರೀಕ್ ನಗರ ರಾಜ್ಯಗಳು ತಮ್ಮತಮ್ಮಲ್ಲಿ ಜಗಳವಾಡತೊಡಗಿದಾಗ ಗ್ರೀಸ್‌ನ ಈಶಾನ್ಯದಲ್ಲಿ 2ನೇ ಫಿಲಿಪ್‌ನ (ಸಾ.ಶ.ಪೂ 359–336) ನೇತೃತ್ವದಲ್ಲಿ ಮುಖ್ಯ ಸಾಮ್ರಾಜ್ಯವಾಗಿ ಹೊರಹೊಮ್ಮಿತ್ತು. ಈತ ಸಮರ್ಥ ರಾಜತಾಂತ್ರಿಕ ಹಾಗೂ ಪ್ರಸಿದ್ಧ ಸೈನಿಕನಾಗಿದ್ದನು. ಇವನು ಗ್ರೀಸ್‌ನ್ನು ಒಂದುಗೂಡಿಸಿ ಶತ್ರುಗಳಾದ ಪರ್ಷಿಯನ್ನರೊಡನೆ ಹೋರಾಡಲು ಯೋಜನೆ ರೂಪಿಸಿದನು. ಈ ಯೋಜನೆ ಜಾರಿಗೆ ತರುವ ಮುನ್ನವೇ ತನ್ನ ಮಗಳ ವಿವಾಹದ ಸಮಯದಲ್ಲಿ ಹತ್ಯೆಗೀಡಾದನು.

ಅಲೆಗ್ಸಾಂಡರ್ ಮಹಾಶಯ (ಸಾ.ಶ.ಪೂ 336–323) :


ಅಲೆಕ್ಸಾಂಡರ್ ಮಹಾಶಯ

ಅಲೆಗ್ಸಾಂಡರ್‌ನು ಪ್ರಪಂಚದ ಇತಿಹಾಸದಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದಾನೆ. ತನ್ನ ತಂದೆಯಾದ 2ನೇ ಫಿಲಿಪ್‌ನಿಗೆ ಹೆಚ್ಚು ಋಣಿಯಾಗಿದ್ದರೂ, ತಂದೆಗಿಂತ ಸುಪ್ರಸಿದ್ದನಾದನು. ಈತನಿಗೆ ಪ್ರಪಂಚವನ್ನು ಗೆಲ್ಲುವ ಬಯಕೆ ಇತ್ತು. ತನ್ನ ತಂದೆಯ ನಂತರ 20ನೇ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದನು. ಅತ್ಯಂತ ಶ್ರೇಷ್ಠ ತತ್ವಜ್ಞಾನಿ ಅರಿಸ್ಟಾಟಲ್ ಈತನ ಗುರುವಾಗಿದ್ದನು. ಇವನು ತನ್ನ ಚಾಕಚಕ್ಯತೆ ಮತ್ತು ಉದ್ಯಮ ಶೀಲತೆಯಿಂದ ಇಡೀ ಗ್ರೀಸ್ ತನ್ನ ನಾಯಕತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿ, 35,000 ಸೈನಿಕರ ಪಡೆಯೊಂದಿಗೆ ಪರ್ಷಿಯಾ ಸಾಮ್ರಾಜ್ಯದ ಮೇಲೆ ಧಾಳಿ ಮಾಡಿದನು. ಗ್ರಾನಿಕಸ್, ಐಸಸ್ ಮತ್ತು ಅರಬೆಲ್ ಯುದ್ಧಗಳಲ್ಲಿ ಅವರನ್ನು ಸೋಲಿಸಿದನು. ಮುಂದುವರೆದು ಈಜಿಪ್ಟನ್ನು ಸೋಲಿಸಿ ನೈಲ್‌ನದಿಯ ಮುಖಜ ಭೂಮಿಯಲ್ಲಿ 'ಅಲೆಕ್ಸಾಂಡ್ರಿಯಾ' ಎಂಬ ನಗರವನ್ನು ನಿರ್ಮಿಸಿದನು. ಈ ಎಲ್ಲಾ ಯಶಸ್ಸುಗಳಿಂದ ಪ್ರೇರಿತನಾಗಿ ಭಾರತದ ಮೇಲೆ ದಾಳಿ ಮಾಡಲು ಕಾರಾಕೋರಂ ಪರ್ವತಗಳ ಮೂಲಕ ಸಾಗಿದನು. ಪುರೂರವನನ್ನು 'ಹೈಡಸ್‌ಪೆಸ್' ಅಥವಾ ಜೇಲಂ (ಸಾ.ಶ.ಪೂ 326) ಕದನದಲ್ಲಿ ಸೋಲಿಸಿದನು. ಸಿಂಧೂ ನದಿಯನ್ನು ದಾಟಿ ಬಂದನಾದರೂ, ಭಾರತದ ದಾಳಿಯನ್ನು ದಿಗ್ವಿಜಯವಾಗಿ ಪರಿವರ್ತಿಸಲಾಗಲಿಲ್ಲ. ಸೈನಿಕರು ತ್ರೀವ್ರವಾಗಿ ಬಳಲಿದ್ದರಿಂದ ಮುಂದೆ ಯುದ್ಧ ಮಾಡಲು ನಿರಾಕರಿಸಿದರು ಹಾಗೂ ಬಲಿಷ್ಠವಾದ ನಂದರ ಸೈನ್ಯಕ್ಕೆ ಹೆದರಿದರು. ದಂಡಯಾತ್ರೆಯನ್ನು ಮುಂದುವರೆಸುವುದಕ್ಕಾಗಿ ಸೈನಿಕರನ್ನು ಪ್ರೇರೆಪಿಸಲು ಅವನು ಮಾಡಿದ ಪ್ರಯತ್ನಗಳು ವ್ಯರ್ಥವಾದವು. ಆದರೆ ಅಧಿಕಾರದ ಉಚ್ಚ್ರಾಯ ಸ್ಥಿತಿಯಲ್ಲಿ ಇದ್ದಾಗ ಜ್ವರದಿಂದ ಬಳಲಿ ತನ್ನ 33ನೇ ವಯಸ್ಸಿನಲ್ಲಿ (ಸಾ.ಶ.ಪೂ 323) ಬ್ಯಾಬಿಲೋನಿಯಾದಲ್ಲಿ ಮರಣ ಹೊಂದಿದನು. ಇವನ ಮರಣದ ನಂತರ 40 ವರ್ಷಗಳ ಕಾಲ ಆಂತರಿಕ ಯುದ್ಧ ನಡೆದು ಈತನ ಸಾಮ್ರಾಜ್ಯ ಸೆಲ್ಯೂಕಸ್, ಟಾಲೆಮಿ ಮತ್ತು ಆಂಟಿಗೊನಸ್ ನೇತೃತ್ವದಲ್ಲಿ ಮೂರು ಭಾಗಗಳಾಗಿ ವಿಭಜನೆಗೊಂಡಿತು.

ಚಟುವಟಿಕೆ: ಭಾರತದ ಮೇಲೆ ದಾಳಿ ಮಾಡಲು ಅಲೆಕ್ಸಾಂಡರನು ಬಂದ ಮಾರ್ಗ ಹಾಗೂ ದಾಳಿನಂತರದ ಪರಿಣಾಮಗಳನ್ನು ತಿಳಿಸಿರಿ.

1. **ಜನರಲ್ ಸೆಲ್ಯೂಕಸ್:** ಪರ್ಷಿಯಾವನ್ನು ವಶಪಡಿಸಿಕೊಂಡನು. ಭಾರತದ ಮೇಲೆ ದಾಳಿ ಮಾಡಿದನು. ಆದರೆ ಚಂದ್ರಗುಪ್ತ ಮೌರ್ಯನಿಂದ ಸೋಲಿಸಲ್ಪಟ್ಟನು.

2. **ಟಾಲೆಮಿ :** ಈಜಿಪ್ತ್ ಮತ್ತು ಫಿನೇಷಿಯಾಗಳನ್ನು ಆಳಿದ ಟಾಲೆಮಿಯು ಅಲೆಗ್ಸಾಂಡ್ರಿಯಾ ಬಳಿ ದೇವಸ್ಥಾನ ನಿರ್ಮಿಸಿ ಅದನ್ನು ಗ್ರೀಕ್ ಕಲಾ – ಸಾಹಿತ್ಯ ದೇವತೆಗೆ ಅರ್ಪಿಸಿದನು. ಇದನ್ನು 'ಮ್ಯೂಸಿಯಂ' ಎಂದು ಕರೆಯಲಾಗಿದೆ.

3. **ಆಂಟಿಗೊನಸ್ :** ಇವನ ನಿಯಂತ್ರಣಕ್ಕೆ ಮ್ಯಾಸಿಡೇನಿಯಾ ಮತ್ತು ಗ್ರೀಸ್ ಬಂದವು.

ಅಲೆಕ್ಸಾಂಡರನ ವಿಶ್ವಚಕ್ರಾಧಿಪತ್ಯದ ಕಲ್ಪನೆ ಕಾಲದ ಪರೀಕ್ಷೆಯಲ್ಲಿ ನಿಲ್ಲಲಾಗಲಿಲ್ಲ, ಏಕೆಂದರೆ ಇದಕ್ಕೆ ಸರಿಯಾದ ರಾಜಕೀಯ ಅಥವಾ ಆರ್ಥಿಕ ಬುನಾದಿ ಇರಲಿಲ್ಲ, ಆದರೂ ಎಲ್ಲರೂ ಮೆಚ್ಚುವ ಹೆಲೆನಿಕ್ ನಾಗರಿಕತೆ ಹರಡುವಲ್ಲಿ ಸಹಾಯಕನಾದನು. ಅವನು ಸುಮಾರು ಎಪ್ಪತ್ತು ನಗರಗಳನ್ನು ಸ್ಥಾಪಿಸಿದನು. ಈತ ಮತ್ತು

ಈತನ ಸೈನಿಕರು ಪರ್ಷಿಯಾದ ಸ್ತ್ರೀಯರನ್ನು ವಿವಾಹವಾದರು ಹಾಗೂ ಪರ್ಷಿಯನ್ ದೇವರುಗಳನ್ನು ಆರಾಧಿಸಿದರು. ಈತನು ಗ್ರೀಕ್ ವರ್ತಕರನ್ನು ಏಷಿಯಾದೊಂದಿಗೆ ವ್ಯಾಪಾರ ಮಾಡಲು ಪ್ರೋತ್ಸಾಹಿಸಿದನು. ಇದರಿಂದ ಪೂರ್ವ ಮತ್ತು ಪಶ್ಚಿಮ ಸಂಗಮವಾಗಿ ಒಂದು ಉತ್ತಮ ಗ್ರೀಕೋ– ಪೌರಾತ್ಯ ಸಂಸ್ಕೃತಿ ಬೆಳೆಯಿತು.

ಚಟುವಟಿಕೆ: ಗ್ರೀಕ್ ನಾಗರಿಕತೆಯ ಅವನತಿಗೆ ವಿವಿಧ ಕಾರಣಗಳನ್ನು ತಿಳಿಯಿರಿ.

ಸಾಂಸ್ಕೃತಿಕ ಕೊಡುಗೆಗಳು

ಮನುಕುಲಕ್ಕೆ ಗ್ರೀಕರ ಕೊಡುಗೆ ಅಪಾರವಾದುದು. ಇವರು 'ಸದೃಢ ದೇಹದಲ್ಲಿ ಸದೃಢ ಮನಸ್ಸು' ಎಂಬ ತತ್ವದಲ್ಲಿ ನಂಬಿಕೆ ಹೊಂದಿದ್ದರು. ಮಾನವನ ದೇಹ ಸುಂದರವಾದುದು ಎಂದು ಭಾವಿಸಿದ ಅವರು ಹೆಚ್ಚು ಕುತೂಹಲ ಹಾಗೂ ಜ್ಞಾನದಾಹದಿಂದ ಕೂಡಿದ್ದರು. ಇವರು ಸಾಹಿತ್ಯ, ಕ್ರೀಡೆ, ತತ್ವಜ್ಞಾನ, ರಾಜಕೀಯ, ನೀತಿಶಾಸ್ತ್ರ, ವಿಜ್ಞಾನ, ಸಂಗೀತ, ನಾಟಕ, ಧರ್ಮ, ಕಲೆ ಹಾಗೂ ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಯೂರೋಪಿಯನ್ನರ ಸಾಂಸ್ಕೃತಿಕ ಬೆಳವಣಿಗೆಯ ಮೇಲೆ ಗ್ರೀಸ್ ಸಂಪೂರ್ಣ ಪ್ರಭುತ್ವ ಸಾಧಿಸಿತ್ತು. ಗ್ರೀಕ್ ಆದರ್ಶವಾದವು ಐರೋಪ್ಯ ಸಂಸ್ಕೃತಿಯ ಮೇಲೆ ಎಷ್ಟೊಂದು ಪ್ರಭಾವ ಬೀರಿತ್ತೆಂದರೆ ಇಂದಿನ ಪಾಶ್ಚಿಮಾತ್ಯ ಸಂಸ್ಕೃತಿಯು ಆದರ್ಶ ಹಾಗೂ ಪ್ರೇರಣೆಗಳಿಂದ ಪ್ರಮುಖವಾಗಿ ಹೆಲೆನಿಕ್ ಆಗಿತ್ತು. ಹಾಗಾಗಿ ಗ್ರೀಕರ ಕೊಡುಗೆ ಮಹತ್ವಪೂರ್ಣವೂ ಹಾಗೂ ಸಾರ್ವತ್ರಿಕವಾಗಿದೆ.

ಸಾಹಿತ್ಯ:

ಸಾಹಿತ್ಯ ಕ್ಷೇತ್ರದಲ್ಲಿ ಗ್ರೀಕರು ಮಹಾಕಾವ್ಯಗಳು, ಪದ್ಯ, ನಾಟಕ ಹಾಗೂ ಇತಿಹಾಸಗಳಿಗೆ ತಮ್ಮ ಕೊಡುಗೆ ಕೊಟ್ಟಿದ್ದಾರೆ. ಪ್ರಸಿದ್ಧ ಕವಿ ಹೋಮರ್ 'ಇಲಿಯಡ್' ಹಾಗೂ 'ಒಡೆಸ್ಸಿ', ಎಂಬ ಎರಡು ಮಹಾಕಾವ್ಯಗಳನ್ನು ರಚಿಸಿದನು. ಈ ಮಹಾಕಾವ್ಯಗಳು ಆರಂಭಿಕ ಗ್ರೀಕರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳ ಕುರಿತಂತೆ ನಂಬಲರ್ಹವಾದ ವಿವರಣೆ ಒದಗಿಸುತ್ತವೆ. ಸಣ್ಣ ಕವಿತೆಗಳನ್ನು ಲಿರಿಕ್ಸ್ ಅಥವಾ ಭಾವಗೀತೆ ಎಂದು ಕರೆಯುತ್ತಿದ್ದರು. ಇದನ್ನು ಲೈರ್ ಎಂಬ ಸಂಗೀತ ವಾದ್ಯದೊಂದಿಗೆ ಹಾಡುತ್ತಿದ್ದರು. ಇದನ್ನು ಮನುಷ್ಯನ ಭಾವನೆಗಳನ್ನು ವ್ಯಕ್ತಪಡಿಸಲು ರಚಿಸುತ್ತಿದ್ದರು. ಪಿಂಡರ್ ಹಾಗೂ ಸ್ಯಾಪ್ಫೊ ಪ್ರಸಿದ್ಧ ಭಾವಗೀತೆಗಳ ಕವಿಗಳು. ಸ್ಯಾಪ್ಫೊ ಪ್ರಸಿದ್ಧ ಕವಯಿತ್ರಿಯಾಗಿದ್ದಳು.

ಹೋಮರ್

ಹೋಮರ್: ಅಂಧ ಸಾಹಿತಿಯಾದ ಇವನು ಪಟ್ಟಣದಿಂದ ಪಟ್ಟಣಕ್ಕೆ ಸಂಚರಿಸಿ ಇಲಿಯಡ್ ಹಾಗೂ ಒಡಿಸ್ಸಿ ಎಂಬ ತನ್ನ ಮಹಾಕಾವ್ಯಗಳನ್ನು ಹಾಡುತ್ತಿದ್ದನು. ಈ ಮಹಾಕಾವ್ಯಗಳು ಆರಂಭಿಕ ಗ್ರೀಕರ ದಾಳಿ ಹಾಗೂ ಟ್ರಾಯ್‌ನ ವಿನಾಶವನ್ನು ತಿಳಿಸುತ್ತವೆ. ಗ್ರೀಕ್ ಶ್ರೇಷ್ಠ ನಾಯಕರಲ್ಲಿ ಒಬ್ಬನಾದ ಒಡಿಸಿಯಸ್‌ನ ಸಾಹಸಗಳೂ ಇದರಲ್ಲಿ ಇವೆ.

ಗ್ರೀಕ್ ಸಾಹಿತ್ಯದಲ್ಲಿ ನಾಟಕ ರಚನೆ ಚಿರಪರಿಚಿತವಾದದ್ದು. ಈಗಲೂ ಏಜಿಯಾನ್ ಭಾಗದಲ್ಲಿ ಅಳಿದುಳಿದ ನಾಟಕ ರಂಗಮಂದಿರಗಳನ್ನು ಕಾಣಬಹುದು. ಗ್ರೀಕ್ ದುರಂತ ನಾಟಕದ ಮೂಲ ಪುರುಷನಾದ ಈಸ್ಕಿಲಸ್‌ನು 'ಪ್ರೊಮೇಥೆಸ್ ಬೌಂಡ್' ಮತ್ತು 'ಅಗಾಮೆಮ್ನನ್'ಗಳನ್ನು ರಚಿಸಿದನು. ಸೋಫೊಕ್ಲಿಸನು ದುರಂತ ನಾಟಕಕಾರರಲ್ಲಿ ಶ್ರೇಷ್ಠನಾಗಿದ್ದು, 'ಈಡಿಪಸ್ ರೆಕ್ಸ್', 'ಆಂಟಿಗೋನ್' ಮತ್ತು 'ಎಲೆಕ್ಟ್ರಾ'ಗಳನ್ನು ರಚಿಸಿದ್ದಾನೆ. ಈ ಕೃತಿಗಳು ಈಗಲೂ ವಿಶ್ವದಾದ್ಯಂತ ಮೆಚ್ಚುಗೆಗೆ ಪಾತ್ರವಾಗಿವೆ. ಮೂರನೇ ಶ್ರೇಷ್ಠ ದುರಂತ ನಾಟಕಕಾರನಾದ ಯೂರಿಪಿಡಿಸನು ಜೀವನದಲ್ಲಿ ದೇವರಿಗಿಂತಲೂ ಜನರೇ ಮುಖ್ಯ ಎಂದಿದ್ದಾನೆ. ಆದ್ದರಿಂದ ಅವನು ಮಾನವನ ಭಾವೋದ್ರೇಕ ಹಾಗೂ ಮನೋಭಾವಗಳ ಬಗ್ಗೆ ಆಲೋಚಿಸುತ್ತಿದ್ದನು. 'ಟ್ರೋಜನ್ ವಿಮನ್' ಈತನ ಅತ್ಯಂತ ಪ್ರಸಿದ್ಧ ನಾಟಕಗಳಲ್ಲಿ ಒಂದಾಗಿದೆ. ಈ ಕಾಲದ ಅತ್ಯಂತ ಪ್ರಸಿದ್ಧ ಹಾಸ್ಯ ಕವಿ ಅರಿಸ್ಟೊಫೆನೆಸ್.

'ಇತಿಹಾಸದ ಪಿತಾಮಹಾ'ನೆಂದು ಕರೆಯಲ್ಪಟ್ಟಿರುವ ಗ್ರೀಸ್ ದೇಶದ ಹೆರೊಡೋಟಸನು ಪ್ರಪಂಚ ಕಂಡ ಮೊದಲ ಇತಿಹಾಸಕಾರನಾಗಿದ್ದಾನೆ. ಮತ್ತೊಬ್ಬ ಇತಿಹಾಸಕಾರನಾದ ಥುಸಿಡೈಡಿಸ್. ತನ್ನ ಪ್ರಸಿದ್ಧ ಕೃತಿ ಫೆಲೋ ಫೆನೀಷಿಯನ್ ವಾರ್ಸ್‌ನಲ್ಲಿ ಸ್ಪಾರ್ಟಾ ಹಾಗೂ ಅಥೆನ್ಸ್ ಮಧ್ಯದ ಯುದ್ಧಗಳ ವರ್ಣನೆ ನೀಡಿದ್ದಾನೆ. 'ಪ್ಲೂಟಾರ್ಕ್' ನಂತರ ಬಂದ ಮತ್ತೊಬ್ಬ ಇತಿಹಾಸಕಾರ. ಈತನು ಆತ್ಮಚರಿತ್ರೆಗಳಿಗೆ ಹೆಸರುವಾಸಿಯಾಗಿದ್ದಾನೆ. 'ಲೈವ್ಸ್ ಆಫ್ ಇಲ್ಲಸ್ಟ್ರಿಯಸ್ ಮೆನ್' ಇವನ ಪ್ರಸಿದ್ಧ ಕೃತಿ.

ವಾಕ್‌ಚಾತುರ್ಯ ಎಂದರೆ ಸಾರ್ವಜನಿಕವಾಗಿ ಮಾತನಾಡುವ ಒಂದು ಕಲೆ. ಬಹಳ ಪ್ರಮುಖ ವಾಗ್ಮಿಯೆಂದರೆ ಡೆಮಾಸ್ತನೀಸ್.

ವಿಜ್ಞಾನ: ವಿಜ್ಞಾನದ ಅಧ್ಯಯನ ಆರಂಭಕ್ಕೆ ಗ್ರೀಕ್ ತತ್ವಜ್ಞಾನಿಗಳು ಉತ್ತೇಜನ ನೀಡಿದರು. ನೈಸರ್ಗಿಕ ವಿಜ್ಞಾನದ ಅಧ್ಯಯನಕ್ಕೆ ಅಡಿಗಲ್ಲು ಹಾಕಿದವನೆಂದರೆ ಅರಿಸ್ಟಾಟಲ್. ಅರಿಸ್ಟಾಟಲ್‌ನ ವಿದ್ಯಾರ್ಥಿಯಾದ ಥಿಯೋಫ್ರೆಸ್ಟಾಸ್ ಸಸ್ಯಶಾಸ್ತ್ರವನ್ನು ಗುರುತಿಸಲ್ಪಟ್ಟ ವಿಜ್ಞಾನವಾಗಿ ನೆಲೆಗೊಳಿಸಿದನು. ಪೆರಿಕ್ಲಿಯನ್ ಯುಗ ಮಹಾ ಪುರುಷರ ಉಗಮಕ್ಕೆ ಸಾಕ್ಷಿಯಾಯಿತು. ಹಿಪೊಕ್ರೇಟಸ್ ಆಧುನಿಕ ವೈದ್ಯಶಾಸ್ತ್ರಕ್ಕೆ ಅಡಿಪಾಯ ಹಾಕಿದನು. ಅವನು ಕಾಯಿಲೆಗಳು ಸ್ವಾಭಾವಿಕವಾಗಿ ಬರುತ್ತವೆಯೇ ಹೊರತು, ಅಂದಿನ ದಿನಗಳಲ್ಲಿ ಜನರು ನಂಬಿದಂತೆ ದೆವ್ವಭೂತಗಳಿಂದಲ್ಲ ಎಂದು ತಿಳಿಸಿದನು. ಈತನು 'ವೈದ್ಯಶಾಸ್ತ್ರದ ಪಿತಾಮಹ'ನೆಂದು ಕರೆಯಲ್ಪಟ್ಟಿದ್ದಾನೆ. ಹೆರೊಫಿಲಸ್‌ನನ್ನು 'ಅಂಗ ರಚನಾಶಾಸ್ತ್ರದ ಪಿತಾಮಹಾ' ಎಂದು ಕರೆಯಲಾಗಿದೆ.

ಟಾಲೆಮಿ ಸೌರಮಂಡಲಕ್ಕೆ ಭೂಮಿಯೇ ಕೇಂದ್ರ ಎಂದು ನಂಬಿದ್ದ. ಆದರೆ ಭೂಮಿ ಮತ್ತು ಇತರೆ ಗ್ರಹಗಳು ಸೂರ್ಯನ ಸುತ್ತ ಸುತ್ತುತ್ತವೆ ಎಂಬ ಸಿದ್ಧಾಂತವನ್ನು ಅರಿಸ್ಟಾರ್ಕಸ್ ಮಂಡಿಸಿದ. ಇರಾಟೋಸ್ತನೀಸ್ ಭೂಮಿಯ ಸುತ್ತಳತೆಯನ್ನು ಅಂದಾಜಿಸಿದ್ದು, ಅವನ ಲೆಕ್ಕಾಚಾರದಲ್ಲಿ ಕೇವಲ 320 ಕಿ ಮೀ ನಷ್ಟು ಮಾತ್ರ ವ್ಯತ್ಯಾಸವಿತ್ತು. ಇವನು ಪ್ರಪಂಚದ ಭೂಪಟವನ್ನು ಸರಿಸುಮಾರು ನಿಖರವಾಗಿ ತಯಾರಿಸಿದ ಹಾಗೂ ಯೂರೋಪಿನಿಂದ ಭಾರತವನ್ನು ತಲುಪಲು ಪಶ್ಚಿಮದೆಡೆಯಿಂದ ಸಮುದ್ರಯಾನ ಮಾಡಬಹುದೆಂದು ತಿಳಿಸಿದವರಲ್ಲಿ ಮೊದಲಿಗ. ಗಣಿತಶಾಸ್ತ್ರಕ್ಕೆ, ಅದರಲ್ಲೂ ಪ್ರಮುಖವಾಗಿ ರೇಖಾಗಣಿತಕ್ಕೆ ಪೈಥೋಗೋರಸ್ ಮತ್ತು ಯುಕ್ಲಿಡರು ಹಲವಾರು ಕೊಡುಗೆ ನೀಡಿದ್ದಾರೆ. ಆರ್ಕಿಮಿಡಿಸನು ಸಹ ಒಬ್ಬ ಪ್ರಸಿದ್ಧ ಗ್ರೀಕ್ ವಿಜ್ಞಾನಿಯಾಗಿದ್ದನು.

ಕಲೆ ಹಾಗೂ ವಾಸ್ತುಶಿಲ್ಪ:

ಆರಂಭದಲ್ಲಿ ಗ್ರೀಕರು ದೇವಾಲಯಗಳನ್ನು ಮರವನ್ನು ಬಳಸಿ ನಿರ್ಮಿಸುತ್ತಿದ್ದರು. ಅನಂತರದಲ್ಲಿ ಸುಟ್ಟ ಇಟ್ಟಿಗೆ ಮತ್ತು ಅಮೃತಶಿಲೆಗಳನ್ನು ಬಳಸಿ ಕಟ್ಟಲಾರಂಭಿಸಿದರು. ಗ್ರೀಕ್ ವಾಸ್ತುಶಿಲ್ಪದಲ್ಲಿ ಮೂರು ಶೈಲಿಗಳಿದ್ದವು– ಡೊರಿಕ್, ಅಯೋನಿಕ್ ಹಾಗೂ ಕೋರಿಂತಿಯನ್. ಬಣ್ಣದ ಅಮೃತಶಿಲೆಯಿಂದ ಕಟ್ಟಿದ ಪಾರ್ಥೆನಾನ್ ದೇವಾಲಯವು ಹಿಂದೆಂದೂ ನಿರ್ಮಿಸಿರದ ಅತ್ಯಂತ ಸುಂದರ ದೇವಾಲಯವೆಂದು ಹೇಳಲಾಗಿದೆ. ಈ ದೇವಾಲಯದ ಒಳಗೆ ಫೀಡಿಯಾಸ್ ಕೆತ್ತಿರುವ ಅಮೃತಶಿಲೆಯ ಎತ್ತರವಾದ ಅಥೇನಾ ದೇವತೆಯ ವಿಗ್ರಹವಿದೆ. ಈ ದೇವಾಲಯವು 46 ಡೋರಿಕ್ ಕಂಬಗಳನ್ನು ಹೊಂದಿದ್ದು ಪ್ರತಿ ಕಂಬ 34 ಅಡಿ ಎತ್ತರದ್ದಾಗಿದೆ. ಆಕ್ಟಿನಸ್ ಎಂಬ ಪ್ರಸಿದ್ಧ ಶಿಲ್ಪಿ ಡೋರಿಕ್, ಅಯೋನಿಯನ್ ಮತ್ತು ಕೋರಿಂತಿಯನ್ ಶೈಲಿಗಳನ್ನು ಒಟ್ಟುಗೂಡಿಸಿ ಪ್ರಪಂಚದ ಅತ್ಯಂತ ಅದ್ಭುತವಾದ ಈ ಪಾರ್ಥೇನಾನ್ ದೇವಾಲಯವನ್ನು ನಿರ್ಮಿಸಿದ್ದಾನೆ. ಇದನ್ನು ಕಟ್ಟಿಸಿದ ದೊರೆ ಪೆರಿಕ್ಲಿಸ್. ಭವ್ಯ ಹಾಗೂ ಸುಂದರವಾದ ದೇವಾಲಯ ಈಗ ಅವಶೇಷದ ರೂಪದಲ್ಲಿದೆ.



ಗ್ರೀಕರ ವಾಸ್ತುಶಿಲ್ಪ ಶೈಲಿಗಳು

ಅಲೆಕ್ಸಾಂಡರ್‌ನ ದಾಳಿ ಗ್ರೀಕ್ ಮತ್ತು ಮಧ್ಯಏಷ್ಯಾದೊಂದಿಗೆ ಅನೇಕ ಶತಮಾನಗಳ ಸಾಂಸ್ಕೃತಿಕ ವಿನಿಮಯಕ್ಕೆ ದಾರಿಮಾಡಿಕೊಟ್ಟಿತು. ಪ್ರಾಚೀನ ಭಾರತದಲ್ಲಿ 'ಗಾಂಧಾರ' ಕಲೆ ಗ್ರೀಕರ ಪ್ರಭಾವದಿಂದ ಉದಯಿಸಿತು. ಗ್ರೀಕರು ಶಿಲ್ಪಕಲೆಯಲ್ಲಿ ಮಾನವ ಮೌಲ್ಯಗಳಾದ ಸೌಂದರ್ಯ, ಶೌರ್ಯ ಮುಂತಾದವನ್ನು ಅಭಿವ್ಯಕ್ತಿಪಡಿಸಿದರು. ಅವರು ನಗ್ನ, ಪೌರುಷವುಳ್ಳ ಹಾಗೂ ಕಟ್ಟುಮಸ್ತಾದ ಮೈಕಟ್ಟುಳ್ಳ ವ್ಯಕ್ತಿಗಳನ್ನು ಪ್ರತಿಬಿಂಬಿಸಿದರು. ದೇವರುಗಳನ್ನು ಸಹ ಮಾನವರಂತೆ ಬಿಂಬಿಸಿದರು. ಮೈರಾನ್ ಹಾಗೂ ಫಿಡಿಯಾಸ್ ಪ್ರಸಿದ್ಧ ಶಿಲ್ಪಿಗಳಾಗಿದ್ದರು. ಮೈರಾನ್‌ನ ಚಕ್ರ (Discuss) ಎಸೆಯುವ ಮೂರ್ತಿ ಪ್ರಸಿದ್ಧವಾಗಿದೆ. ಗ್ರೀಕರು ಹೂದಾನಿಗಳ ಮೇಲೆ ಚಿತ್ರ ಬಿಡಿಸಿ ಬಣ್ಣ ಹಾಕುವುದರಲ್ಲಿ ನಿಪುಣರಾಗಿದ್ದರು.

ಪಾರ್ಥೆನಾನ್: ಸಾ.ಶ. 5ನೇ ಶತಮಾನದಲ್ಲಿ ಪಾರ್ಥೆನಾನ್‌ನನ್ನು ಚರ್ಚಾಗಿ ಉಪಯೋಗಿಸಿಕೊಳ್ಳಲಾಗಿತ್ತು ಮತ್ತು ವರ್ಜಿನ್ ಮೇರಿಗೆ ಸಮರ್ಪಿಸಲಾಗಿತ್ತು. ಸಾ.ಶ 1640 ರಿಂದ ಇದನ್ನು ಮಸೀದಿಯಾಗಿ ಬಳಸಲಾಯಿತು. ಸಾ.ಶ 1687ರಲ್ಲಿ ಟರ್ಕರು ಇದನ್ನು ಉಗ್ರಾಣವನ್ನಾಗಿ ಬಳಸಿದರು. ಅನಂತರ ಅದು ಸ್ಫೋಟದಿಂದ ನಾಶವಾಯಿತು. ಸಾ.ಶ 1801 ರಲ್ಲಿ ಇದರ ಹಲವು ಅವಶೇಷಗಳನ್ನು ಇಂಗ್ಲೆಂಡ್‌ಗೆ ಲಾರ್ಡ್ ಎಲ್ಜಿನ್ ಸಾಗಿಸಿದ.

ತತ್ವಶಾಸ್ತ್ರ :

'ಫಿಲಾಸಾಫಿಯಾ' ಎಂಬ ಗ್ರೀಕ್ ಪದದಿಂದ ಆಂಗ್ಲ ಪದ 'ಫಿಲಾಸಫಿ' (ತತ್ವಶಾಸ್ತ್ರ) ಬಂದಿದೆ. ಇದರ ಅರ್ಥ 'ಅರಿವಿನ ಬಗ್ಗೆ ಪ್ರೀತಿ' (Love of Wisdom) ಎಂದಾಗಿದೆ. ತತ್ವಶಾಸ್ತ್ರವು ವಿಶ್ವದ ಅಧ್ಯಯನವನ್ನೊಳಗೊಂಡಿದೆ ಎಂದು ಗ್ರೀಕರು ತಿಳಿದಿದ್ದರು ಹಾಗೂ ವಿಶ್ವದ ಉಗಮ ಮತ್ತು ರಚನೆಯನ್ನು ವಿವರಿಸುವ ಪ್ರಯತ್ನಗಳನ್ನು ಮಾಡಿದರು. ಗ್ರೀಸ್‌ನಲ್ಲಿ ತತ್ವಶಾಸ್ತ್ರದ ಅನೇಕ ಪರಂಪರೆಗಳಿದ್ದವು. ಪ್ರಾಚೀನ ತತ್ವಜ್ಞಾನಿಗಳಲ್ಲೊಬ್ಬರಾದ ಡೆಮಾಕ್ರಿಟಸ್ ಆಧ್ಯಾತ್ಮಿಕ ಪ್ರಪಂಚ ಅಥವಾ ಆತ್ಮವನ್ನು ಅಲ್ಲಗೆಳೆದ. ಸೋಫಿಸ್ಟ್‌ರು ಪ್ರಪಂಚದಲ್ಲಿ ಪರಮ ಸತ್ಯವಿಲ್ಲ ಮತ್ತು ಸತ್ಯವೆಂಬುದು ಇದ್ದರೆ ಮಾನವನ ಮೇಲೆ ಬೀರುವ ಪ್ರಭಾವದ ಆಧಾರಕ್ಕೆ ಸಂಬಂಧಿಸಿದೆ ಎಂದು ನಂಬಿದ್ದರು. ಗ್ರೀಕರ ಅತ್ಯಂತ ಪ್ರಸಿದ್ಧ ತತ್ವಜ್ಞಾನಿಗಳೆಂದರೆ ಸಾಕ್ರೆಟಿಸ್, ಪ್ಲೇಟೋ ಹಾಗೂ ಅರಿಸ್ಟಾಟಲ್.

ಸೋಫಿಸ್ಟರು: ಸೋಫಿಸ್ಟರುಗಳೆಂದರೆ ವಿವೇಕಿಗಳೆಂದರ್ಥ. ಇವರು ಬೋಧಕ ವರ್ಗದವರಾಗಿದ್ದರು. "ಎಲ್ಲಕ್ಕೂ ಮಾಪನ ಮನುಷ್ಯನೇ" ಎಂದು ಹೇಳಿದರು. ಸೋಫಿಸ್ಟರುಗಳು ಪರಿಣಾಮಕಾರಿ ಮಾತುಗಾರಿಕೆ, ಬರಹಗಾರಿಕೆ, ಭಾಷಣಕಲೆ, ಅಲಂಕಾರಶಾಸ್ತ್ರ (Rhetoric), ರೇಖಾಗಣಿತ, ಅಂಕಗಣಿತ ಮತ್ತು ಖಗೋಳಶಾಸ್ತ್ರದ ತಂತ್ರಗಳನ್ನು ಬೋಧಿಸಿದ್ದಾರೆ. ಇವರು ಸ್ವರ್ಗದಲ್ಲಿದ್ದ ತಮ್ಮ ತತ್ವಜ್ಞಾನವನ್ನು ಮಾನವನ ತಾಣಗಳಿಗೆ ತಂದವರು. ಗಾರ್ಗಿಯಸ್ ಹಾಗೂ ಪ್ರೊಟೊಗೊರಸರು ಪ್ರಮುಖ ಸೋಫಿಸ್ಟರುಗಳು.

ಸಾಕ್ರೆಟಿಸ್ (ಸಾ.ಶ.ಪೂ. 469–399):

ಜ್ಞಾನವು ಉತ್ತಮ ನಡತೆ ಮತ್ತು ಸಂತೋಷಕ್ಕೆ ಕಾರಣ ಎಂದೂ ಹಾಗೂ ಅಜ್ಞಾನ ಕೆಟ್ಟದ್ದನ್ನು ಉತ್ಪಾದಿಸುತ್ತದೆ ಎಂದೂ ಸಾಕ್ರೆಟಿಸ್ ನಂಬಿದ್ದ. ಅವನೊಬ್ಬ ಶ್ರೇಷ್ಠ ತತ್ವಜ್ಞಾನಿ ಮತ್ತು ಬುದ್ಧಿವಂತರಲ್ಲಿ ಬುದ್ಧಿವಂತ. ಚರ್ಚೆ ಮತ್ತು ಪ್ರಶ್ನೆ ಕೇಳುವ ಮೂಲಕ ಅವನ ಶಿಷ್ಯರಲ್ಲಿದ್ದ ಪೂರ್ವಾಗ್ರಹಗಳನ್ನು ಹೊಗಲಾಡಿಸಲು ಪ್ರಯತ್ನಿಸಿದ. ಆದರೆ ಯುವಕರಲ್ಲಿ ಹೊಸ ವಿಚಾರಧಾರೆ ಹಾಗೂ ಹೊಸ ದೇವತೆಗಳನ್ನು ಸೃಷ್ಟಿಸಿ ಭ್ರಷ್ಟರನ್ನಾಗಿ ಮಾಡಿದ ಎಂಬ ದೋಷಾರೋಪಣೆಯನ್ನು ಹೊರೆಸಿ 'ಹ್ಯಾಮ್‌ಲಾಕ್' ಎಂಬ ವಿಷವನ್ನು ನೀಡಿ ಅವನನ್ನು ಕೊಲ್ಲಲಾಯಿತು.

ಪ್ಲೇಟೋ–(ಸಾ.ಶ.ಪೂ 427–347):

ಸಾಕ್ರೆಟಿಸನ ಪ್ರಮುಖ ಶಿಷ್ಯನಾಗಿದ್ದ ಪ್ಲೇಟೋ ಅಥೆನ್ಸ್‌ನಲ್ಲಿ 'ಅಕಾಡೆಮಿ' ಸ್ಥಾಪಿಸಿದ. ಅವನ 'ಡಯಲಾಗ್ಸ್' ಕೃತಿಯು ಅವನ ಗುರುವಿನ ಉಪದೇಶಗಳನ್ನೊಳಗೊಂಡಿದೆ. 'ರಿಪಬ್ಲಿಕ್' ಎಂಬ ಶ್ರೇಷ್ಠ ಕೃತಿಯಲ್ಲಿ ಸಮಾಜವನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದಾನೆ. ಸಮಾಜದ ಕೆಳವರ್ಗವು, ರೈತರು, ಕುಶಲ ಕರ್ಮಿಗಳು ಹಾಗೂ ವ್ಯಾಪಾರಿಗಳನ್ನು ಒಳಗೊಂಡಿತ್ತು. ಎರಡನೇ ವರ್ಗದಲ್ಲಿ ಸೈನಿಕರು ಇದ್ದರು. ಉನ್ನತ ವರ್ಗದಲ್ಲಿ ತತ್ವಜ್ಞಾನಿಗಳು ಹಾಗೂ ಬುದ್ಧಿವಂತರು ಇದ್ದರು. ಉನ್ನತ ವರ್ಗದವರಿಗೆ ಎಲ್ಲಾ ರಾಜಕೀಯ ಅಧಿಕಾರವಿತ್ತು. ಈತ 'ಆದರ್ಶ ರಾಜ್ಯ' ನಿರ್ಮಾಣವನ್ನು ಬಯಸಿದ. ಈತನ ಇನ್ನೊಂದು ಕೃತಿ 'ದ ಲಾಸ್'.

ಅರಿಸ್ಟಾಟಲ್–(ಸಾ.ಶ.ಪೂ 384–322):

ಅರಿಸ್ಟಾಟಲ್ ಗ್ರೀಸ್‌ನ ಬಹು ಪ್ರಖ್ಯಾತ ತತ್ವಜ್ಞಾನಿಯಾಗಿದ್ದ. ಅಕಾಡೆಮಿಯಲ್ಲಿ ಪ್ಲೇಟೋವಿನ ಶಿಷ್ಯನಾಗಿದ್ದ ಮತ್ತು ಅಲೆಕ್ಸಾಂಡರ್ ಮಹಾಶಯನ ಗುರುವಾಗಿದ್ದನು. ಅರಿಸ್ಟಾಟಲ್ ತತ್ವಜ್ಞಾನಿ ಅಲ್ಲದೇ ವಿಜ್ಞಾನಿಯೂ ಕೂಡ ಆಗಿದ್ದ. ಈತನು ಅನೇಕ ವಿಷಯಗಳ ಮೇಲೆ ಕೃತಿಗಳನ್ನು ರಚಿಸಿದ್ದಾನೆ. ಹಾಗಾಗಿ ಇವನನ್ನು 'ನಡೆದಾಡುವ ವಿಶ್ವವಿದ್ಯಾಲಯ' ಎಂದು ಕರೆಯಲಾಗಿದೆ. ಇವನು ತತ್ವಶಾಸ್ತ್ರ, ಜೀವಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಈ ಮೂರು ವಿಷಯಗಳ ಪಿತಾಮಹನೆನಿಸಿದ್ದಾನೆ. ಮಾನವ 'ಸಮಾಜ ಜೀವಿ' ಎಂದು ಹೇಳಿದ್ದಾನೆ. ಇವನು ಸಂವಿಧಾನಾತ್ಮಕ ಸರ್ಕಾರಗಳನ್ನು ಪ್ರೋತ್ಸಾಹಿಸಿದ. ಭೌತಶಾಸ್ತ್ರ, ಅನುಭಾವವಿದ್ಯೆ (Metaphysics) ತರ್ಕಶಾಸ್ತ್ರ ಹಾಗೂ ನೀತಿಶಾಸ್ತ್ರಗಳನ್ನು

ವಿಂಗಡಿಸಿ ಕ್ರಮಬದ್ಧಗೊಳಿಸಿದನು. ಈತನ ಪ್ರಸಿದ್ಧ ಕೃತಿಗಳೆಂದರೆ : 'ದ ಪೊಲಿಟಿಕ್ಸ್' ಮತ್ತು 'ಹಿಸ್ಟರಿ ಆಫ್ ಅನಿಮಲ್ಸ್'.

ಚಟುವಟಿಕೆ :ಸಾಕ್ರೆಟೀಸ್, ಪ್ಲೇಟೋ ಮತ್ತು ಅರಿಸ್ಟಾಟಲ್ಲರ ಜೀವನ ಚರಿತ್ರೆಯನ್ನು ಸಿದ್ಧಪಡಿಸಿ

ಧರ್ಮ:

ವಿಶ್ವದ ಬೇರೆ ಜನರಿಗಿಂತ ಇವರ ಧಾರ್ಮಿಕ ನಂಬಿಕೆ, ಸಂಪ್ರದಾಯ ವಿಭಿನ್ನವಾಗಿತ್ತು. ದೇವರಲ್ಲಿ ಇವರಿಗೆ ನಂಬಿಕೆ ಇರಲಿಲ್ಲ. ಆದರೆ ಶಕ್ತಿಶಾಲಿ ಮತ್ತು ಸ್ಫುರದ್ರೂಪಿ ಪುರುಷರನ್ನು ವೈಭವೀಕರಿಸುತ್ತಿದ್ದರು. 12 ಒಲಿಂಪಿಯನ್‌ಗಳು ಗ್ರೀಕ್‌ರ ದೇವರುಗಳು. ಇವರಲ್ಲಿ ಮೂವರು ಪ್ರಮುಖರಾಗಿದ್ದರು. ಅವರೆಂದರೆ ಜಿಯಸ್, ಅಪೊಲೋ ಹಾಗೂ ಅಥೆನಾ. ಜಿಯಸ್ ದೇವತೆಗಳ ಒಡೆಯ ಹಾಗೂ ಮಾನವರ ಜನಕ. ಅಪೊಲೋ ಜಿಯಸ್‌ನ ಮಗ. ಅಥೆನಾ ನಗರಗಳ ರಕ್ಷಕಿಯಾಗಿದ್ದಳು. ಒಲಂಪಸ್ ಪರ್ವತ ಇವರ ಆವಾಸ ಸ್ಥಾನವಾಗಿತ್ತು. ಇವರು ಭೂಮಿಗೆ ಆಗಾಗ ಬರುತ್ತಿದ್ದರೆಂಬ ನಂಬಿಕೆ ಗ್ರೀಕರಲ್ಲಿತ್ತು. ಗ್ರೀಕರಿಗೆ ಅನ್ಯ ಧರ್ಮೀಯರಂತೆ ಯಾವುದೇ ಚರ್ಚ್‌ಗಳಾಗಲಿ, ಪವಿತ್ರ ಗ್ರಂಥವಾಗಲಿ ಇರಲಿಲ್ಲ.

ಸಾ.ಶ.ಪೂ 776 ರಲ್ಲಿಯೇ ಪ್ರಸಿದ್ಧ ಒಲಂಪಿಯಾ ಹಬ್ಬದಾಚಾರಣೆ ಇವರಲ್ಲಿ ರೂಢಿಯಲ್ಲಿತ್ತು. ದಿವ್ಯವಾಣಿ ಭೋಧಕರನ್ನು ಗ್ರೀಕರು ವಿಶೇಷವಾಗಿ ಭವಿಷ್ಯವನ್ನು ತಿಳಿಯಲು, ತೀರ್ಮಾನಗಳನ್ನು ಪಡೆಯಲು ಒರೆಕಲ್‌ರ ಸಹಾಯವನ್ನು ಪಡೆಯುತ್ತಿದ್ದರು. ಡೆಲ್ಫಿಯ ಅಪೊಲೋ ಒಬ್ಬ ಪ್ರಸಿದ್ಧನಾದ ಒರೆಕಲ್.

ಹನ್ನೆರಡು ಒಲಂಪಿಯಾಗಳು : ಜಿಯಸ್, ಹಿರಾ, ಪೊಸಿಡನ್, ಆರೇಸ್, ಹರ್ಮಿಸ್, ಹೆಫಾಸ್ಟಸ್ ಅಪೊಡೈಟ್, ಅಥೆನಾ, ಅಪೊಲೊ, ಆರ್ಟೆಮಿಸ್, ಡೆಮೆಟರ್ ಮತ್ತು ಹೇಡಿಸ್.

ಒಲಂಪಿಯಾ: ಇಲ್ಲಿ ಜಿಯಸ್ ದೇವಾಲಯವಿದ್ದು, ಸಾ.ಶ 6ನೇ ಶತಮಾನದಲ್ಲಿ ಉಂಟಾದ ಭೂಕಂಪದಿಂದಾಗಿ ಹೂತು ಹೋಗಿದೆ. ಇದು ಅತ್ಯಂತ ಪ್ರಸಿದ್ಧ ಶಾಸ್ತ್ರೀಯ ಕಲೆ ಹಾಗೂ ವಾಸ್ತುಶಿಲ್ಪ ಕೃತಿಗಳನ್ನು ಒಳಗೊಂಡಿತ್ತು. ದೇವಸ್ಥಾನದಲ್ಲಿ ಬೃಹದಾಕಾರದ ಜಿಯಸ್‌ನ ವಿಗ್ರಹವಿತ್ತು. ಇದನ್ನು ಪ್ರಾಚೀನ ವಿಶ್ವದ ಏಳು ಅದ್ಭುತಗಳಲ್ಲೊಂದು ಎಂದು ಪರಿಗಣಿಸಲಾಗಿದೆ.

ಡಿಸ್ಕಸ್ ಎಸೆತಗಾರ

ಒಲಂಪಿಕ್ಸ್: ಮೊದಲ ಒಲಂಪಿಕ್ಸ್ ಸಾ.ಶ.ಪೂ 776 ರಲ್ಲಿ ಒಲಂಪಿಯಾದಲ್ಲಿ ಜಿಯಸ್ ದೇವರ ಗೌರವಾರ್ಥವಾಗಿ ನಡೆಯಿತು. ನಂತರದಲ್ಲಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತಿತ್ತು. ಗ್ರೀಕ್‌ನ ವಿವಿಧ ಭಾಗಗಳಿಂದ ಬಂದ ಜನತೆ, ತೆರೆದ ಬಯಲಿನಲ್ಲಿ ನಡೆಯುತ್ತಿದ್ದ ಕವನ ವಾಚನ ಮತ್ತು ಕ್ರೀಡಾ ಚಟುವಟಿಕೆಗಳಿಂದ ಸಂತೋಷಪಡುತ್ತಿದ್ದರು. ವಿಜೇತರಾದವರು ದೇವರ ಕೃಪೆಗೆ ಒಳಗಾದವರೆಂದು ಪರಿಗಣಿಸಲಾಗುತ್ತಿತ್ತು. ಕ್ರೀಡಾಕೂಟದಲ್ಲಿ ಉದ್ದಜಿಗಿತ, ಓಟ, ಚಕ್ರ ಎಸೆತ, ಭರ್ಜಿಎಸೆತ, ಮತ್ತು ಕುಸ್ತಿ ಮುಖ್ಯವಾಗಿದ್ದವು. ಕ್ರೀಡೆಗಳಲ್ಲಿ ಗೆದ್ದವರಿಗೆ 'ಆಲಿವ್ ಕಿರೀಟ'ಗಳಿಂದ ಗೌರವಿಸಲಾಗುತ್ತಿತ್ತು.

ಮ್ಯಾರಾಥಾನ್: ಮ್ಯಾರಾಥಾನ್ ಕದನದಲ್ಲಿ ಅಥೆನ್ಸ್ ಪರ್ಷಿಯನ್ನರ ವಿರುದ್ಧ ಗೆಲುವು ಸಾಧಿಸಿತು. ಈ

ವಿಜಯದ ಸಮಾಚಾರ ತಿಳಿಸಲು ಫಿಲಿಪ್ಪೈಡ್ಸ್ ಎಂಬ ಸೈನಿಕನನ್ನು ಅಥೆನ್ಸ್‌ಗೆ ಕಳುಹಿಸಿದರು. ಈತನು 26 ಮೈಲಿ 385 ಗಜ (42.2 ಕಿ.ಮೀ) ದೂರವನ್ನು ವಿಶ್ರಾಂತಿ ಇಲ್ಲದೇ ಓಡಿ ಗೆಲುವಿನ ವಿಷಯ ತಿಳಿಸಿ, ಕುಸಿದು ಮರಣ ಹೊಂದಿದನು. ಈ ಘಟನೆಯ ಸ್ಮರಣಾರ್ಥವಾಗಿ ಮ್ಯಾರಾಥಾನ್ ಓಟವನ್ನು ಒಲಂಪಿಕ್ಸ್ ಕ್ರೀಡೆಗಳಲ್ಲಿ ಸೇರಿಸಲಾಗಿದೆ.

ಪ್ರಶ್ನೆಗಳು

ಕೆಳಗಿನವುಗಳನ್ನು ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 1 ಅಂಕ)

1. ಯುರೋಪಿನ ಅತ್ಯಂತ ಪ್ರಾಚೀನ ನಾಗರಿಕತೆ ಯಾವುದು?
2. ಹೆಲೆನೆಸ್ ಎನ್ನುವ ಪದದ ಅರ್ಥವೇನು?
3. ನಗರ–ರಾಜ್ಯಗಳು ಯಾವ ನಾಗರಿಕತೆಯಲ್ಲಿ ಕಂಡು ಬರುತ್ತವೆ?
4. ಗ್ರೀಸಿನ ಯಾವ ನಗರ– ರಾಜ್ಯದಲ್ಲಿ ಪ್ರಜಾಪ್ರಭುತ್ವ ಅಭಿವೃದ್ಧಿಯಾಗಿತ್ತು.?
5. ಯಾರ ಕಾಲವನ್ನು ಅಥೆನ್ಸ್‌ನ ಸುವರ್ಣಯುಗವೆಂದು ಕರೆಯಲಾಗಿದೆ.?
6. 'ವೈದ್ಯ ವಿಜ್ಞಾನದ ಪಿತಾಮಹಾ' ಎಂದು ಯಾರನ್ನು ಕರೆಯಲಾಗಿದೆ?
7. ಪೆಲೊಪೋನಿಷಿಯಾದ ಯುದ್ದಗಳು ಯಾರ್ಯಾರ ನಡವೆ ನಡೆದವು?
8. ಪೂರರವನನ್ನು ಅಲೆಗ್ಸಾಂಡರ್ ಯಾವ ಕದನದಲ್ಲಿ ಸೋಲಿಸಿದನು?
9. ಸೆಲ್ಯೂಕಸ್‌ನನ್ನು ಸೋಲಿಸಿದ ಭಾರತದ ದೊರೆ ಯಾರು?
10. ಯೂರಿಪಿಡಿಸ್ ಯಾರು?
11. 'ಪೆಲೊಪೊನಿಷಿಯನ್ ವಾರ್ಸ್' ಎಂಬ ಗ್ರಂಥದ ಕರ್ತೃ ಯಾರು?
12. 'ದ ರಿಪಬ್ಲಿಕ್' ಗ್ರಂಥವನ್ನು ಯಾರು ರಚಿಸಿದರು?
13. ಒಲಂಪಿಕ್ ಪಂದ್ಯಗಳು ಯಾವ ವರ್ಷದಲ್ಲಿ ಆರಂಭವಾದವು?

ಕೆಳಗಿನವುಗಳಿಗೆ 2ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 2 ಅಂಕಗಳು)

1. ಪ್ರಾಚೀನ ಗ್ರೀಸಿನ ಯಾವುದಾದರೂ ಎರಡು ನಗರ–ರಾಜ್ಯಗಳನ್ನು ಹೆಸರಿಸಿ.
2. ಸೊಲಾನ್ ಪರಿಚಯಿಸಿದ ಯಾವುದಾದರೂ ಎರಡು ಸುಧಾರಣೆಗಳನ್ನು ಹೆಸರಿಸಿ.
3. ಕ್ಲೈಸ್ತನೀಸ್‌ನ ಎರಡು ಸುಧಾರಣೆಗಳನ್ನು ತಿಳಿಸಿ.
4. ಪಾರ್ಥೆನಾನ್ ದೇವಾಲಯ ಎಲ್ಲಿದೆ? ಅದನ್ನು ಯಾರು ನಿರ್ಮಿಸಿದರು?
5. ಪೆರಿಕ್ಲಿಸ್ ಕಾಲದ ಯಾವುದಾದರೂ ಇಬ್ಬರು ಶ್ರೇಷ್ಠ ನಾಟಕಕಾರರನ್ನು ಹೆಸರಿಸಿ.
6. ಪೆರಿಕ್ಲಿಸ್ ಕಾಲದ ಯಾರಾದರೂ ಇಬ್ಬರು ಪ್ರಮುಖ ಇತಿಹಾಸಕಾರರನ್ನು ತಿಳಿಸಿ.
7. ಪರ್ಷಿಯನ್‌ರನ್ನು ಅಲೆಗ್ಸಾಂಡರ್ ಸೋಲಿಸಿದ ಯಾವುದಾದರೂ ಎರಡು ಕದನಗಳನ್ನು ಹೆಸರಿಸಿ.

8. ಹೋಮರ್‌ನ ಎರಡು ಕೃತಿಗಳು ಯಾವುವು?
9. ಗ್ರೀಕ್ ನಾಗರಿಕತೆಯ ಇಬ್ಬರು ಭಾವಗೀತೆ ಕವಿಗಳನ್ನು ಹೆಸರಿಸಿ.
10. ಇಸ್ಕಿಲಸ್‌ನ ಎರಡು ಕೃತಿಗಳನ್ನು ತಿಳಿಸಿ.
11. ಸೊಫೊಕ್ಲಿಸ್‌ನ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿ.
12. ಪ್ರಾಚೀನ ಗ್ರೀಸ್‌ನ ಪ್ರಸಿದ್ಧ ಗಣಿತಶಾಸ್ತ್ರಜ್ಞರು ಯಾರು?
13. ಪ್ರಾಚೀನ ಗ್ರೀಸ್‌ನ ಯಾವುದಾದರೂ ಎರಡು ವಾಸ್ತು ಶಿಲ್ಪ ಶೈಲಿಗಳನ್ನು ತಿಳಿಸಿ.
14. ಪ್ರಾಚೀನ ಗ್ರೀಸ್‌ನ ಯಾರಾದರೂ ಇಬ್ಬರು ಪ್ರಮುಖ ದಾರ್ಶನಿಕರನ್ನು ತಿಳಿಸಿ.
15. ಪ್ಲೇಟೊನ ಎರಡು ಕೃತಿಗಳನ್ನು ತಿಳಿಸಿ.
16. ಅರಿಸ್ಟಾಟಲ್‌ನ ಎರಡು ಕೃತಿಗಳನ್ನು ತಿಳಿಸಿ.

ಕೆಳಗಿನವುಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 5 ಅಂಕಗಳು)

1. ಪ್ರಾಚೀನ ಗ್ರೀಸ್ ನಗರ–ರಾಜ್ಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.
2. ಅಥೆನ್ಸ್‌ನಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.
3. ಪೆರಿಕ್ಲಿಸ್‌ನ ಯುಗವನ್ನು ಸುವರ್ಣಯುಗವೆಂದು ಕರೆಯಲು ಕಾರಣವೇನು?
4. ಸಾಹಿತ್ಯಕ್ಕೆ ಗ್ರೀಕರ ಕೊಡುಗೆಗಳೇನು?
5. ವಿಜ್ಞಾನಕ್ಕೆ ಗ್ರೀಕರ ಕೊಡುಗೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.
6. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಗ್ರೀಕರ ಕೊಡುಗೆಗಳೇನು?

ಕೆಳಗಿನವುಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 10 ಅಂಕಗಳು)

1. ಗ್ರೀಕ್‌ರ ಕೊಡುಗೆಗಳನ್ನು ಕುರಿತು ಚರ್ಚಿಸಿ.

❖ ❖ ❖ ❖ ❖

4.2 ರೋಮನ್ ಗಣರಾಜ್ಯಗಳು – ರೋಮನ್ನರ ಕೊಡುಗೆಗಳು

ಪೀಠಿಕೆ:

ಪ್ರಾಚೀನ ವಿಶ್ವದ ಅತ್ಯಂತ ಮುಂದುವರೆದ ಐರೋಪ್ಯ ನಾಗರಿಕತೆಯನ್ನು ರೋಮನ್ನರು ನಿರ್ಮಿಸಿದರು. ಅವರು ಗ್ರೀಕರಿಂದ ಅಪಾರವಾದ ಜ್ಞಾನ ಮತ್ತು ಪ್ರಪಂಚದ ಬಗೆಗಿನ ಅರಿವನ್ನು ಪಡೆದುಕೊಂಡರು. ಅವರು ಪ್ರಾಚೀನ ಜಗತ್ತಿನ ಅತ್ಯಂತ ಪ್ರಬಲ ಸಾಮ್ರಾಜ್ಯಗಳಲ್ಲಿ ಒಂದನ್ನು ಸ್ಥಾಪಿಸಿದರು. ರೋಮನ್ನರು ಸಾಮ್ರಾಜ್ಯ ನಿರ್ಮಾಪಕರು. ಸರ್ಕಾರ, ಕಾನೂನು, ರಾಜಕೀಯ, ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪ ಹಾಗೂ ತಂತ್ರಜ್ಞಾನಕ್ಕೆ ಅವರು ಅಪಾರ ಕೊಡುಗೆಯನ್ನು ನೀಡಿದರು.

ಭೌಗೋಳಿಕ ರಚನೆ: ಗ್ರೀಕ್ ನಾಗರಿಕತೆಯಂತೆ ರೋಮನ್ ನಾಗರಿಕತೆಯ ಮೇಲೂ ಭೌಗೋಳಿಕ ಅಂಶಗಳು ಅಗಾಧವಾದ ಪ್ರಭಾವ ಬೀರಿವೆ. ಟೈಬರ್ ನದಿಯು ಇಟಲಿಯ ಪರ್ಯಾಯ ದ್ವೀಪದ ಕೇಂದ್ರಭಾಗದಲ್ಲಿ ಹರಿಯುತ್ತದೆ. ರೋಮ್ ನಗರವು ಈ ನದಿಯ ದಡದ ಮೇಲಿದೆ. ಉತ್ತರದಲ್ಲಿ ಆಲ್ಪ್ಸ್ ಪರ್ವತ ಶ್ರೇಣಿಗಳು ಮತ್ತು ಮೂರು ಕಡೆ ಸುತ್ತುವರೆದ ಸಮುದ್ರಗಳಿಂದ ಇಟಲಿಗೆ ನೈಸರ್ಗಿಕ ರಕ್ಷಣೆ ದೊರೆತಿದೆ. ಇಟಲಿಯ ಪರ್ಯಾಯ ದ್ವೀಪವು ಮುಂದಿನ ಹಲವಾರು ಶತಮಾನಗಳವರೆಗೆ ವೈಭವಯುತ ಸಾಂಸ್ಕೃತಿಕ ಬೆಳವಣಿಗೆಯ ಕೇಂದ್ರವಾಯಿತು.

ಆರಂಭಿಕ ಇತಿಹಾಸ: ಇಟಲಿಯ ಮೊದಲ ಮೂಲ ವಾಸಿಗಳು ಉತ್ತರ ಆಫ್ರಿಕ, ಸ್ಪೇನ್ ಮತ್ತು ಫ್ರಾನ್ಸ್‌ನಿಂದ ಬಂದರು. ಸುಮಾರು ಸಾ.ಶ.ಪೂ 2000 ದಲ್ಲಿ ಇಟಾಲಿಕರೆಂದು ಕರೆಯಲ್ಪಡುವ ಇಂಡೋ–ಯೂರೋಪಿಯನ್ನರ ಒಂದು ಗುಂಪು ಆಲ್ಪೆನ್ ಕಣಿವೆಯ ಮೂಲಕ ಇಟಲಿಗೆ ಬಂದಿತು. ಆ ಜನಾಂಗಗಳಲ್ಲಿ ಒಬ್ಬರು, ಲ್ಯಾಟಿನ್ನರು. ಇವರು ಇಟಲಿಯ ಮಧ್ಯ ಬಯಲಿನ ಟೈಬರ್ ನದಿ ದಡದ 'ಲ್ಯಾಟಿಯಂ' ಎಂಬಲ್ಲಿ ನೆಲೆಸಿದರು. ಮುಂದೆ ಗ್ರೀಕರು ದಕ್ಷಿಣ ಇಟಲಿಯಲ್ಲಿ ನೆಲೆಸಿದರು. ಎಟ್ರುಸ್ಕ್ಯಾನ್ ಎಂಬ ಗುಂಪಿನ ಜನರು ಕೂಡ ಇಟಲಿಯಲ್ಲಿ ನೆಲೆಸಿದರು. ಇಟಲಿಯ ಜನರು ಈ ಎಲ್ಲಾ ಜನಾಂಗಗಳ ಸಂತತಿಯವರಾಗಿದ್ದಾರೆ.

ರೋಮನ್ ಇತಿಹಾಸ: ಸಾ.ಶ.ಪೂ 753 ರಲ್ಲಿ ಪೆಲಾಟಿನ್ ಬೆಟ್ಟದ ಮೇಲೆ ರೋಮುಲಸ್ ಮತ್ತು ರೇಮಸ್ ಎಂಬ ಅವಳಿ ಸಹೋದರರು ರೋಮ್ ನಗರವನ್ನು ಸ್ಥಾಪಿಸಿದರು. ಪುರಾತನ ರೋಮನರ ಭಾಷೆ 'ಲ್ಯಾಟಿನ್'. ಇದು 'ಲ್ಯಾಟಿಯಮ್' ಎಂಬ ಹೆಸರಿನಿಂದ ಬಂದಿದೆ. ರೋಮ್ ನಗರದ ಹೆಸರು ಬಂದಿದ್ದು ರೋಮುಲಸ್‌ನಿಂದ. ಆರಂಭಿಕ ಇತಿಹಾಸದಲ್ಲಿ ಆಕ್ವಿಯನ್ಸ್, ಎಟ್ರುಸ್ಕ್ಯಾನ್ಸ್ ಮತ್ತು ವೋಲ್ಸಿಯನ್ಸ್‌ನ್ನರ ದಾಳಿಯನ್ನು ರೋಮ್ ಎದುರಿಸಿತು. ಆದರೆ ರೊಮುಲಸ್ ನಾಯಕತ್ವದಲ್ಲಿ ಈ ಶತ್ರುಗಳ ದಾಳಿಯನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಲಾಯಿತು. ಆದರೆ ಗಾಲರು ನಂತರ ರೋಮ್ ನಗರವನ್ನು ಆಕ್ರಮಿಸಿ ಸುಟ್ಟು ಹಾಕಿದರು.

ಹೆಣ್ಣು ತೋಳ ಮತ್ತು ರೊಮುಲಸ್ ಮತ್ತು ರೇಮಸ್

ಗಣರಾಜ್ಯ ಅಥವಾ ರಾಜಪ್ರಭುತ್ವ ರೋಮಿನ ಸಾಮಾನ್ಯ ಮಾದರಿಯ ಸರ್ಕಾರಗಳಾಗಿದ್ದವು. ಒಂದು ಐತಿಹ್ಯದಂತೆ ಮತ್ತು ಲಿವಿಯ ಬರವಣಿಗೆಯ ಪ್ರಕಾರ ರೋಮ್ ಗಣರಾಜ್ಯವನ್ನು ಸುಮಾರು ಸಾ.ಶ.ಪೂ 509ರಲ್ಲಿ ಸ್ಥಾಪಿಸಲಾಯಿತು. 'ರಿಪಬ್ಲಿಕ್' ಎನ್ನುವ ಪದವು ಲ್ಯಾಟಿನ್ನಿನ 'ರೆಸ್‌ಪಬ್ಲಿಕಾ'ಯಿಂದ ಬಂದಿದೆ. 'ರೆಸ್‌ಪಬ್ಲಿಕಾ' ಎಂದರೆ 'ಜನರ ವಸ್ತು' ಎಂದರ್ಥ. ಅದು ಗಣರಾಜ್ಯವಾಗಿದ್ದರೂ ನಿಜವಾದ ಅಧಿಕಾರವನ್ನು ಪೆಟ್ರೀಷಿಯನ್ನರೆಂಬ ಶ್ರೀಮಂತರು ಅನುಭವಿಸುತ್ತಿದ್ದರು. ಕಾರ್ಮಿಕರು, ಸಣ್ಣ ವ್ಯವಸಾಯಗಾರರು, ಕರಕುಶಲಕರ್ಮಿಗಳು, ಸಣ್ಣ ವ್ಯಾಪಾರಸ್ಥರು ಮತ್ತು ಸೈನಿಕರಾಗಿದ್ದ ಸಾಮಾನ್ಯ ವರ್ಗದವರನ್ನು ಪ್ಲೆಬಿಯನ್ನರು ಎಂದು ಕರೆಯುತ್ತಿದ್ದರು. ಈ ಎರಡೂ ವರ್ಗಗಳ ಜನರ ಮಧ್ಯೆ ಯಾವಾಗಲೂ ಸಂಘರ್ಷ ನಡೆಯುತ್ತಿತ್ತು. ಈ ವ್ಯವಸ್ಥೆಯಲ್ಲಿ ಸೆನೆಟ್ ಪ್ರಮುಖ ಸ್ಥಾನವನ್ನು ಪಡೆದಿತ್ತು.

ಎಟ್ರೊಸ್ಕ್ಯಾನರು :

ಇವರ ಮೂಲ ಅಸ್ಪಷ್ಟವಾಗಿದ್ದು, ಸುಮಾರು ಸಾ.ಶ.ಪೂ 1000 ರಲ್ಲಿ ಟೈಬರ್ ನದಿಯ ದಡದ ಮೇಲೆ ನೆಲೆಸಿದರು. ಇವರು ನುರಿತ ವಾಸ್ತುಶಿಲ್ಪಿಗಳು ಮತ್ತು ತಂತ್ರಜ್ಞರು. ರೋಮನ್ನರು ಅನೇಕ ವಿಷಯಗಳನ್ನು ಇವರಿಂದ ಕಲಿತರು. ಇವರಿಂದ ಕೊಳಚೆಯನ್ನು ಇಂಗಿಸಿ ಚರಂಡಿ ವ್ಯವಸ್ಥೆ ಹಾಗೂ ರಸ್ತೆಗಳನ್ನು ನಿರ್ಮಾಣ ಮಾಡುವುದನ್ನು ಸಹ ಕಲಿತರು.

ರೊಮುಲಸ್ ಮತ್ತು ರೇಮಸ್

ರೋಮ್‌ನ ಪುರಾಣದ ಪ್ರಕಾರ ಇವರು ರೋಮನ್ನರ ರಣದೇವತೆಯಾದ ಮಾರ್ಸ್‌ನ ಮಕ್ಕಳು. ಅಮುಲಿಯಸ್ ಎಂಬುವವನು ಸಿಂಹಾಸನವನ್ನು ಬಲವಂತವಾಗಿ ವಶಪಡಿಸಿಕೊಂಡು ಈ ಶಿಶುಗಳನ್ನು ಟೈಬರ್ ನದಿಯಲ್ಲಿ ಮುಳುಗಿಸಿ ಸಾಯಿಸಿ ಎಂದು ಆಜ್ಞಾಪಿಸಿದ. ಅವರನ್ನು ಒಂದು ತೋಳ ಹಾಲನ್ನು ನೀಡಿ ಸಂರಕ್ಷಿಸಿತು. ಫೌಸ್‌ಟೂಲಸ್ ಎಂಬ ಒಬ್ಬ ಕುರಿಕಾಯುವವನಿಂದ ಸಾಕಲ್ಪಟ್ಟರು. ಅವರು ತಾವು ರಕ್ಷಿಸಲ್ಪಟ್ಟ ಸ್ಥಳದಲ್ಲಿ ಒಂದು ನಗರವನ್ನು ಕಟ್ಟಿದರು, ಅದೇ ರೋಮ್. ರೊಮುಲಸ್ ರೇಮಸ್‌ನನ್ನು ಜಗಳವೊಂದರಲ್ಲಿ ಕೊಂದನು.

ರೋಮನ್ ನಗರವನ್ನು ಈ ಕೆಳಗಿನ ಏಳು ಪರ್ವತಗಳ ಮೇಲೆ ಕಟ್ಟಲಾಗಿದೆ:

1. ಪ್ಯಾಲಟಿನ್ 2. ಕ್ಯಾಪಿಟೋಲಿನ್ 3. ಕೇಲಿಯನ್ 4. ಯಸ್‌ಕೂಲಿನ್ 5. ಅವನ್‌ಟಿನ್
6. ವಿಮಿನಲ್ 7. ಕ್ವಿರಿನಲ್

ಕಾರ್ಥೆಜ್‌ನೊಂದಿಗೆ ಯುದ್ಧಗಳು:

ಪಶ್ಚಿಮ ಮೆಡಿಟರೇನಿಯನ್ ಪ್ರದೇಶದ ಮೇಲೆ ಹತೋಟಿ ಸಾಧಿಸಲು ರೋಮ್ ಗಣರಾಜ್ಯ ಮತ್ತು ಕಾರ್ಥೇಜ್ (ಆಧುನಿಕ ಟುನೀಸ್) ನಡುವೆ ಪ್ಯೂನಿಕ್ ಯುದ್ಧಗಳು (ಸಾ.ಶ.ಪೂ 264–146) ನಡೆದವು. ಇದು ದೀರ್ಘಕಾಲದ ಹೋರಾಟವಾಗಿತ್ತು.

ಮೊದಲನೆ 'ಪ್ಯೂನಿಕ್‌ಯುದ್ಧ' ಮೂಲತಃ ನೌಕಾ ಯುದ್ಧವಾಗಿದ್ದು, ರೋಮ್ ಇದರಲ್ಲಿ ಜಯಶಾಲಿಯಾಯಿತು. 2ನೇ ಪ್ಯೂನಿಕ್ ಯುದ್ಧದಲ್ಲಿ ಕಾರ್ಥೆಜಿಯನ್ನರ ಮೇಧಾವಿ ಸೇನಾಧಿಪತಿಯಾದ 'ಹ್ಯಾನಿಬಲ್' ನಾಯಕತ್ವ ವಹಿಸಿದ್ದನು. ಅವನು ಅದ್ಭುತ ವಿಜಯವನ್ನು ಸಾಧಿಸಿದನು. ಆದರೂ ರೋಮ್ ನಗರವನ್ನು ಸ್ವಾಧೀನ ಪಡಿಸಿಕೊಳ್ಳಲಾಗಲಿಲ್ಲ. ರೋಮನ್ನರು ಗೆರಿಲ್ಲಾ ಮತ್ತು ಕಾದು ನೋಡುವ ಯುದ್ಧ ತಂತ್ರವನ್ನು ಬಳಸಿದರು. ಕಡೆಗೆ ಕಾರ್ಥೇಜಿಯನ್ನರನ್ನು ನಿರ್ಣಾಯಕವಾಗಿ ಸೋಲಿಸಲಾಯಿತು. ಈ ಸೋಲಿನಿಂದಾಗಿ ಹ್ಯಾನಿಬಲ್ ಆತ್ಮಹತ್ಯೆ ಮಾಡಿಕೊಂಡನು.

ಮೂರನೇ ಪ್ಯೂನಿಕ್ ಯುದ್ಧದಲ್ಲಿ ರೋಮ್ ಕಾರ್ಥೇಜ್ ಮೇಲೆ ದಾಳಿ ನಡೆಸಿ ಅವರನ್ನು ಸಂಪೂರ್ಣವಾಗಿ ನಾಶಗೊಳಿಸಿತು. ಮೆಡಿಟರೇನಿಯನ್ ವಲಯದಲ್ಲಿ ರೋಮನ್ನರು ವಿವಾದಾತೀತ ಮಾಲಿಕರಾದರು.

ರೋಮ್‌ನಲ್ಲಿ ನಿರಂಕುಶ ಪ್ರಭುತ್ವದ ಉದಯ:

ರೋಮ್ ನಗರವು ದೊಡ್ಡ ಸಾಮ್ರಾಜ್ಯವಾಗಿ ವಿಸ್ತರಿಸಿತು. ಆದರೂ ಈ ಸಾಮ್ರಾಜ್ಯ ರೋಮ್ ಹೆಸರಿನಲ್ಲಿಯೇ ಉಳಿಯಿತು. ಸೆನೆಟ್‌ನಲ್ಲಿ ಕುಲೀನರು ಪ್ರಭಾವಶಾಲಿಗಳಾಗಿದ್ದರು. ಸಾಮ್ರಾಜ್ಯದ ಕೆಲವು ಭಾಗಗಳಲ್ಲಿ ಅವ್ಯವಸ್ಥೆ ಮತ್ತು ನಿರಂಕುಶಪ್ರಭುತ್ವ ಸಾಮಾನ್ಯ ಲಕ್ಷಣವಾಗಿತ್ತು. ಈ ವೇಳೆಗೆ ವೃತ್ತಿಪರರಾಗಿದ್ದ ರೋಮ್ ಸೈನ್ಯ ಮಾರಿಯಸ್, ಸುಲ್ಲಾ, ಪಾಂಪೆ ಮತ್ತು ಸೀಸರ್‌ರಂತಹ ಮಹಾನ್ ಸೇನಾಪತಿಗಳನ್ನು ಸೃಷ್ಟಿಸಿತು. ಇವರಲ್ಲಿ ಮ್ಯಾರಿಯಸ್, ರೋಮ್ ನಗರದ ಹೊಸ ನಾಯಕರಲ್ಲಿ ಮೊದಲಿಗನಾಗಿದ್ದ. ಇವನು ರೋಮ್‌ನ ಸರ್ವಾಧಿಕಾರಿಯಾಗಿದ್ದು, ಏಕ ವ್ಯಕ್ತಿಯ ಆಳ್ವಿಕೆ ಇವನಿಂದ ಬೇರೂರಿತು. ಮಾರಿಸ್‌ನ ನಂತರ ಬಂದ ಸುಲ್ಲಾ ರಾಜನಂತೆ ವರ್ತಿಸಿದನು. ಆಮೇಲೆ ಬಂದವರೇ ಆಡಳಿತದ 'ಮೊದಲ ತ್ರಿಮೂರ್ತಿಗಳು (The Triumvirate) –ಕ್ರಾಸಸ್, ಪಾಂಪೆ ಮತ್ತು ಸೀಜರ್.

ಗೇಯಸ್ ಜ್ಯೂಲಿಯಸ್ ಸೀಜರ್: ಸಾ.ಶ.ಪೂ 48–44

ಜ್ಯೂಲಿಯಸ್ ಸೀಜರ್ ಒಬ್ಬ ಶ್ರೇಷ್ಠ ಸೇನಾನಿ, ಸರ್ವಾಧಿಕಾರಿ, ಸುಧಾರಕ ಹಾಗೂ ಪ್ರಾಚೀನ ರೋಮಿನ ಪ್ರತೀಕ. ಅವನು ಧೈರ್ಯಶಾಲಿಯೂ ಮತ್ತು ಶಕ್ತಿಶಾಲಿಯೂ ಆಗಿದ್ದನು. ಈ ವೇಳೆಗೆ 'ಮೊದಲ ತ್ರಿಮೂರ್ತಿ' (The First Triumvirate)ಗಳಾದ–ಪಾಂಪೆ, ಜ್ಯೂಲಿಯಸ್ ಸೀಜರ್ ಮತ್ತು ಕ್ರಾಸಸ್ ಉದಯಿಸಿದರು. ಪಾಂಪೆಯು ಒಬ್ಬ ತರಬೇತಿ ಪಡೆದ ಸೈನಿಕ ಮತ್ತು ಸೆನೆಟ್‌ನ ಸದಸ್ಯ (Consul). ಜೂಲಿಯಸ್ ಸೀಜರ್ ದಂಡನಾಯಕ ಮತ್ತು ಸೆನೆಟ್‌ನ ಸದಸ್ಯ, ಕ್ರಾಸಸ್ ಒಬ್ಬ ಕುಲೀನ ಸರದಾರ. ಈ ಮೂವರು ರೋಮ್ ಸಾಮ್ರಾಜ್ಯವನ್ನು 3 ಭಾಗವಾಗಿ ವಿಂಗಡಿಸಿ ಆಳ್ವಿಕೆ ನಡೆಸುತ್ತಿದ್ದರು. ಜೂಲಿಯಸ್ ಸೀಜರ್ ಗಾಲ್ ಪ್ರದೇಶವನ್ನು, ಕ್ರಾಸಸ್ ಪಾರ್ಥಿಯ (ಇರಾನ್) ವನ್ನು ಮತ್ತು ಪಾಂಪೆ ಸ್ಪೇನ್‌ನನ್ನು ಆಳ್ವಿಕೆ ಮಾಡುತ್ತಿದ್ದರು. ಆದರೆ ಈ ಮೂವರ ಗುಂಪು ಕ್ರಾಸಸ್‌ನ ಸಾವಿನ ನಂತರ ಒಡೆಯಿತು. ಕ್ರಾಸಸ್‌ನು ಸೀಜರ್ ಮತ್ತು ಪಾಂಪೆ ನಡುವೆ ಮಧ್ಯವರ್ತಿಯಾಗಿದ್ದನು. ಕ್ರಾಸಸ್ ಇಲ್ಲದೆ ಇಬ್ಬರು ದಂಡನಾಯಕರು ಅಧಿಕಾರಕ್ಕಾಗಿ ಕಚ್ಚಾಟ ಪ್ರಾರಂಭಿಸಿದರು. ಗಾಲ್ (ಆಧುನಿಕ ಫ್ರಾನ್ಸ್ ಮತ್ತು ಬೆಲ್ಜಿಯಂ) ಮತ್ತು ಬ್ರಿಟನ್‌ಗಳಲ್ಲಿ ನಡೆದ ಅನೇಕ ಕದನಗಳಲ್ಲಿ ಜಯಗಳಿಸಿದ ಸೀಜರ್ ರೋಮ್‌ಗೆ ತನ್ನ ವಿಜಯಗಳ ಬಗ್ಗೆ ಆಗಾಗ್ಗೆ ವರದಿಯನ್ನು ಕಳುಹಿಸುತ್ತಿದ್ದ. ಅಲ್ಲಿಂದ ಪೂರ್ವದ ಕಡೆಗೆ ಮುಂದುವರೆದು, ಏಷ್ಯಾ ಮೈನರ್‌ನಲ್ಲಿ ತನ್ನ ಎದುರಾಳಿಗಳನ್ನು ಹಿಮ್ಮೆಟ್ಟಿಸಿದನು. ಈ ಸಂದರ್ಭದಲ್ಲಿಯೇ ಅವನು ಸೆನೆಟ್‌ಗೆ ಕಳುಹಿಸಿದ ಪ್ರಸಿದ್ಧ ಸಂದೇಶ 'ವಿನಿ, ವಿಡಿ, ವಿಸಿ' –'ನಾನು ಬಂದೆ, ನಾನು ನೋಡಿದೆ, ನಾನು ಗೆದ್ದೆ'.

ಸೀಜರ್‌ನ ಅಭ್ಯುದಯವನ್ನು ಪಾಂಪೆ ಸಂಶಯ ಮತ್ತು ಈರ್ಷೆಯಿಂದ ಕಂಡನು. ಸೈನ್ಯವನ್ನು ಬಿಟ್ಟು

ತಾಯ್ನಾಡಿಗೆ ಹಿಂದಿರುಗುವಂತೆ ಸೀಜರನಿಗೆ ಪಾಂಪೆ ಕೇಳಿದನು. ಆದರೆ ಸೀಜರ್ ಮುಂದಾಲೋಚನೆಯಿಂದ ರೋಮ್ ನಗರವನ್ನು ತಲುಪಿ ಪಾಂಪೆಯನ್ನು 'ಫಾರ್ಸಲಸ್' ನಲ್ಲಿ ಸೋಲಿಸಿದನು. ಸೀಜರನು ಪಾಂಪೆಯನ್ನು ಈಜಿಪ್ಟ್‌ವರೆಗೂ ಬೆನ್ನಟ್ಟಿ ಹತ್ಯೆಗೈದನು. ರಾಣಿ 'ಕ್ಲಿಯೊಪಾತ್ರ'ಳ ಆಳ್ವಿಕೆಯು ಈಜಿಪ್ಟ್ ರೋಮ್‌ನೊಂದಿಗೆ ಮೈತ್ರಿಯನ್ನು ಬೆಳೆಸಿತು (ಸೀಜರನು ತಾತ್ಕಾಲಿಕವಾಗಿ ಕ್ಲಿಯೊಪಾತ್ರಳಿಂದ ಆಕರ್ಷಿತನಾಗಿದ್ದ). ಮುಂದೆ ಸೀಜರ್ ರೋಮ್ ಸಾಮ್ರಾಜ್ಯದ ನಿರಂಕುಶ ಪ್ರಭುವಾಗಿ ಆಳ್ವಿಕೆ ನಡೆಸಿದನು. ಆದರೆ ಸಾ.ಶ.ಪೂ 44 ರಲ್ಲಿ ಅವನು ಲಿಬರೇಟರ್ಸ್ ಎಂದು ಕರೆದುಕೊಳ್ಳುತ್ತಿದ್ದ ಗುಂಪಿನ ಮುಖಂಡ ಬ್ರೂಟಸ್‌ನಿಂದ ಸೆನೆಟಿನ ಸಭೆಯಲ್ಲಿ ಹತನಾದನು.

ಸೀಜರನು ಆಡಳಿತದಲ್ಲಿ ಅನೇಕ ಬದಲಾವಣೆಗಳನ್ನು, ನಾಗರೀಕ ಸುಧಾರಣೆಗಳನ್ನೂ ಜಾರಿಗೆ ತಂದನು. ಅನೇಕ ಪ್ರಧಾನ ಅಧಿಕಾರಗಳನ್ನು ತನ್ನಲ್ಲಿಯೇ ಒಟ್ಟುಗೂಡಿಸಿಕೊಂಡು ಸೆನೆಟಿನ ಸಂಖ್ಯಾಬಲವನ್ನು ಹೆಚ್ಚಿಸಿದನು ಮತ್ತು ಅದರ ಅಧಿಕಾರವನ್ನು ಮೊಟಕುಗೊಳಿಸಿದನು. ಬಡವರಿಗೆ ಭೂಮಿ ಮತ್ತು ಉದ್ಯೋಗ ಅವಕಾಶಗಳನ್ನು ಕಲ್ಪಿಸಿದನು. ಪ್ರಾಂತೀಯ ಜನರಿಗೆ ಪೌರತ್ವದ ಹಕ್ಕುಗಳನ್ನು ನೀಡಿದನು. ಇಟಲಿಯ ಪಟ್ಟಣಗಳನ್ನು ರೋಮ್ ಮಾದರಿಯಲ್ಲಿ ಪುನರ್‌ನಿರ್ಮಿಸಿದನು.

ಸೀಜರನು ವ್ಯವಸಾಯ ಕ್ಷೇತ್ರದ ಅಭಿವೃದ್ಧಿ, ತೆರಿಗೆಗಳ ಕಡಿತ ಮತ್ತು ನಾಣ್ಯ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಿದನು ಹಾಗೂ ಭ್ರಷ್ಟ ಮತ್ತು ದಬ್ಬಾಳಿಕೆಯ ಪ್ರಾಂತ್ಯಾಧಿಕಾರಿಗಳನ್ನು ತೆಗೆದು ಹಾಕಿದನು. ಅವನು ಜ್ಯೂಲಿಯನ್ ಕ್ಯಾಲೆಂಡರ್‌ನ್ನು ಪರಿಚಯಿಸಿದನು. ಅಲ್ಲದೆ, ಉತ್ತಮ ಲೇಖಕ ಮತ್ತು ವಾಗ್ಮಿಯೂಗಿದ್ದನು. ಆನಂತರದ ಬಿರುದುಗಳಾದ 'ಕೈಸರ್' ಮತ್ತು 'ಜ಼ಾರ್'ಗಳಿಗೆ ಅವನ ಹೆಸರೇ ಮಾದರಿಯಾಯಿತು.

ಚಟುವಟಿಕೆ: ಜ್ಯೂಲಿಯಸ್ ಸೀಜರನ ಸಾವು ಹಾಗೂ ಅದರಲ್ಲಿ ಬ್ರೂಟಸ್ ಮತ್ತು ಇತರರ ಪಾತ್ರ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿ.

ಅಗಸ್ಟಸ್ ಸೀಜರ್ (ಸಾ.ಶ.ಪೂ 29– ಸಾ.ಶ15)

ಅಗಸ್ಟಸ್ ಸೀಜರ್ ಶ್ರೇಷ್ಠ ಮತ್ತು ವಿವೇಕಯುತ ಅರಸನಾಗಿದ್ದನು. ಹಲವಾರು ವರ್ಷಗಳ ರಾಜಕೀಯ ಗೊಂದಲಗಳ ನಂತರ, ರೋಮ್ ಮೂರು ದಶಕಗಳಿಗೂ ಹೆಚ್ಚು ಕಾಲ ಶಾಂತಿಯನ್ನು ಅನುಭವಿಸಿತು. ಇವನು ಸಾಮ್ರಾಜ್ಯವನ್ನು ಕಟ್ಟಿದನಲ್ಲದೆ, ಕಲೆ ಮತ್ತು ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದನು. ರೋಮ್‌ನ ಇತಿಹಾಸದಲ್ಲಿ ಅವನ ಕಾಲವನ್ನು 'ಸುವರ್ಣ ಯುಗ'ವೆಂದು ಕರೆಯಲಾಗಿದೆ.

ಆಗಸ್ಟಸ್ ಸೀಜರ್

ಜೂಲಿಯಸ್ ಸೀಜರ್‌ನ ಹತ್ಯೆಯು ರೋಮ್‌ನಲ್ಲಿ ಬಹು ದೊಡ್ಡ ರಾಜಕೀಯ ಹಾಗೂ ಸಾಮಾಜಿಕ ಗೊಂದಲವನ್ನು ಉಂಟುಮಾಡಿತು. ಅಧಿಕಾರವು ಮಾರ್ಕ್ ಆಂಟೋನಿ (ಸೀಜರ್‌ನ ಸ್ನೇಹಿತ ಮತ್ತು ಸಹೊದ್ಯೋಗಿ), ಲೆಪಿಡಸ್ (ಸೀಜರನ ಸಹಾಯಕ) ಹಾಗೂ ಆಕ್ಟೇವಿಯನ್ (ಸೀಜರ್‌ನ ಸೋದರಳಿಯ)ರ ಕೈಸೇರಿತು. ಈ ಮೂವರು ಕಾನೂನು ಬದ್ಧವಾಗಿ 'ದ್ವಿತೀಯ ತ್ರಿಮೂರ್ತಿ ಆಡಳಿತ' (Second Triumvirate)ನ್ನು ಸ್ಥಾಪಿಸಿದರು. ಇವರು ಜೂಲಿಯಸ್ ಸೀಜರನ ವಿರುದ್ಧ ಸಂಚು ಮಾಡಿದ್ದವರೆಲ್ಲರನ್ನೂ ದಮನ ಮಾಡಲು ಪ್ರಯತ್ನಿಸಿದರು. ಸಂಚುಕೋರರಾದ ಬ್ರೂಟಸ್ ಮತ್ತು ಕ್ಯಾಸಿಯಸ್ ರೋಮ್ ನಗರದಿಂದ ಪಲಾಯನ ಮಾಡಿ ಒಂದು ದೊಡ್ಡ ಸೈನ್ಯವನ್ನು ಕಟ್ಟಿದರು. ಆದರೆ ಕೊನೆಗೆ ಅವರನ್ನು 'ಫಿಲಿಪಿ' ಕದನದಲ್ಲಿ ಸೋಲಿಸಿ ಹತ್ಯೆಗೈಯಲಾಯಿತು. ಸಂಚುಕೋರರಿಗೆ ಬೆಂಬಲ ನೀಡಿದ್ದರಿಂದ

ಅನೇಕ ಸೆನೇಟರುಗಳಿಗೆ ಮರಣ ದಂಡನೆಯನ್ನು ವಿಧಿಸಿಲಾಯಿತು. ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ದ್ವಿತೀಯ ತ್ರಿಮೂರ್ತಿಗಳು ಸಾಮ್ರಾಜ್ಯವನ್ನು ತಮ್ಮೊಳಗೆ ಹಂಚಿಕೊಂಡರು– ಆಫ್ರಿಕಾವನ್ನು ಲೆಪಿಡಸ್, ಪೂರ್ವ ಪ್ರಾಂತ್ಯಗಳನ್ನು ಆಂಟೋನಿ ಮತ್ತು ಇಟಲಿಯಲ್ಲುಳಿಯುವುದರೊಂದಿಗೆ ಗಾಲ್ (ಫ್ರಾನ್ಸ್ ಮತ್ತು ಬೆಲ್ಜಿಯಂ) ಪ್ರದೇಶವನ್ನು ಆಕ್ಟೇವಿಯನ್‌ರು ಹಿಡಿತಕ್ಕೆ ತೆಗೆದುಕೊಂಡರು. ಆದರೆ ಆಕ್ಟೇವಿಯನ್ ಮತ್ತು ಆಂಟೋನಿಯ ನಡುವಿನ ಸಂಬಂಧ ಕ್ಷೀಣಿಸಿತು. ಲೆಪಿಡಿಸ್‌ನನ್ನು ಅಧಿಕಾರದಿಂದ ಒತ್ತಾಯಪೂರ್ವಕವಾಗಿ ನಿವೃತ್ತಿಗೊಳಿಸಲಾಯಿತು (ಸಿಸಿಲಿಯಲ್ಲಿ ಅಕ್ಟೇವಿಯನ್‌ಗೆ ಮೋಸಮಾಡಿದ್ದರಿಂದ). ಆಂಟೋನಿ ಈಜಿಪ್ಟಿನ ರಾಣಿ ಕ್ಲಿಯೋಪಾತ್ರಳೊಂದಿಗೆ ವಾಸಿಸುತ್ತಿದ್ದ. ಕ್ಲಿಯೋಪಾತ್ರ ಅನ್ಯದೇಶದ ರಾಣಿಯಾದ್ದರಿಂದ ಅವಳೊಂದಿಗಿನ ಸಂಬಂಧವು ದೇಶದ್ರೋಹದ ಕೃತ್ಯವೆಂದು ಪರಿಗಣಿಸಲಾಯಿತು. ಆಕ್ಟೇವಿಯನ್ ಮತ್ತು ಆಂಟೋನಿಯ ನಡುವೆ ಯುದ್ಧವು ಆರಂಭವಾಯಿತು. 'ಆಕ್ಟಿಯಮ್' (ಸಾ.ಶ.ಪೂ 31) ಕದನದಲ್ಲಿ ಆಂಟೋನಿಯು ಸೋತನು. ಆಂಟೋನಿ ಮತ್ತು ಕ್ಲಿಯೋಪಾತ್ರರು ಆತ್ಮಹತ್ಯೆ ಮಾಡಿಕೊಂಡರು. ಈಜಿಪ್ಟಿನ ಆಕ್ರಮಣದೊಂದಿಗೆ ರೋಮ್‌ನ ಹೊಸ ಯುಗವು ಆರಂಭವಾಯಿತು. ಸಾ.ಶ.ಪೂ 27 ನಲ್ಲಿ ರೋಮ್‌ಗೆ ಆಕ್ಟೇವಿಯನ್ ಏಕೈಕನಾಯಕನಾದನು. ಇದು ರೋಮನ್ ಯುಗದ ಆರಂಭ. ರೋಮ್ ಇವನ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ಇದು ಎರಡು ಶತಮಾನಗಳಿಗೂ ಹೆಚ್ಚು ಕಾಲ ಮುಂದುವರೆಯಿತು. ಅಗಸ್ಟಸ್, ('ಪವಿತ್ರ' ಅಥವಾ 'ಗೌರವ') 'ಇಂಪರೇಟರ್', ('ದಿಗ್ವಿಜಯ ಸೇನಾಧಿಪತಿ') ಮತ್ತು 'ಪ್ರಿನ್ಸೆಪ್ಸ್', ('ರಾಜ್ಯದ ಪ್ರಥಮ ಪ್ರಜೆ') ಎಂಬ ಬಿರುದುಗಳೊಂದಿಗೆ ಅವನು 44 ವರ್ಷಗಳ ಕಾಲ ರೋಮ್ ಸಾಮ್ರಾಜ್ಯವನ್ನು ಆಳಿದನು. ಅವನಿಂದ ಸ್ಥಾಪಿಸಲ್ಪಟ್ಟ ಸರ್ಕಾರವೇ 'ಪ್ರಿನ್ಸಿಪೇಟ್' 'ಪ್ರಥಮ ಪ್ರಜೆಯ ಸರ್ಕಾರ'.

ಅಗಸ್ಟಸ್‌ನು ಸೆನೆಟಿನ ಅಧಿಕಾರಕ್ಕೆ ಅಡ್ಡಿ ಬರಲಿಲ್ಲ ಆದರೆ ವಾಸ್ತವವಾಗಿ ಅವನು ಸಾಮ್ರಾಟನಾಗುವವರೆಗೂ ಅವನ ಅಧಿಕಾರವನ್ನು ಅದು ಯಾವಾಗಲೂ ಎತ್ತಿಹಿಡಿಯಿತು. ಅಗಸ್ಟಸ್‌ನು ಜಾರಿಗೊಳಿಸಿದ ಸುಧಾರಣೆಗಳು ಅತ್ಯಂತ ದೂರಗಾಮಿ ಪರಿಣಾಮಗಳನ್ನು ಬೀರಿದವು. ಅವನು 'ವ್ಯವಸ್ಥೆಗೆ ಕೇಂದ್ರವನ್ನು, ನಾಗರೀಕ ಸೇವೆಗೆ ಮುಖ್ಯಸ್ಥನನ್ನು, ಸೈನ್ಯಕ್ಕೆ ನಾಯಕನನ್ನು, ಪ್ರಜೆಗಳಿಗೆ ಸಾರ್ವಭೌಮನನ್ನು, ಪ್ರಾಂತ್ಯಗಳಿಗೆ ರಕ್ಷಕನನ್ನು ಹಾಗೂ ಸಾಮ್ರಾಜ್ಯಕ್ಕೆ ಶಾಂತಿ' ಯನ್ನು ಕೊಟ್ಟನು.

ಇವನು ಆಕ್ರಮಿತ ಪ್ರದೇಶಗಳ ಸರ್ಕಾರಗಳಿಗೆ ಮಾನ್ಯತೆ ನೀಡಿದನು. ಭ್ರಷ್ಟಾಚಾರ, ಲೂಟಿಗಳನ್ನು ತಡೆಗಟ್ಟಿ ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಿದನು. ಹೊಸ ನ್ಯಾಯಾಲಯಗಳು ಹಾಗೂ ಅಂಚೆ ಕಛೇರಿಗಳು ಸ್ಥಾಪಿಸಲ್ಪಟ್ಟವು. ಜೂಲಿಯಸ್ ಸೀಜರ್ ಪರಿಚಯಿಸಿದ ಕ್ಯಾಲೆಂಡರನ್ನು ಆಗಸ್ಟಸ್ ಸೀಜರ್ ಮುಂದುವರಿಸಿದ. 'ಆಗಸ್ಟ್' ಎಂಬ ತಿಂಗಳು ಅಗಸ್ಟಸ್‌ನ ಹೆಸರಿನಿಂದಲೇ ಬಂದಿದೆ. ಸಾಮ್ರಾಟನು ಬಡಜನರಿಗೆ ಆಹಾರ ಧಾನ್ಯಗಳನ್ನು ಪೂರೈಸಿ ಅವರನ್ನು ಸಂತೋಷವಾಗಿಟ್ಟನು. ಸಾರ್ವಜನಿಕ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಕಾರಂಜಿಗಳ ನಿರ್ಮಾಣಕ್ಕೆ ಧಾರಾಳವಾಗಿ ಧನವನ್ನು ವಿನಿಯೋಗಿಸಿದನು. ರಸ್ತೆಗಳ ನಿರ್ಮಾಣದಿಂದಾಗಿ ರೋಮ್ ನಗರವು ಮೆಡಿಟರೇನಿಯನ್‌ನ ವ್ಯಾಪಾರ ಮತ್ತು ವಾಣಿಜ್ಯದ ಕೇಂದ್ರವಾಯಿತು.

ಆಗಸ್ಟಸ್‌ನು ಭಾರತ ಮತ್ತು ಚೀನಾ ಸೇರಿದಂತೆ ಅನೇಕ ರಾಷ್ಟ್ರಗಳೊಂದಿಗೆ ರಾಜಕೀಯ ಮತ್ತು ವಾಣಿಜ್ಯ ಸಂಬಂಧವನ್ನಿಟ್ಟು ಕೊಂಡಿದ್ದನು. ಇಟ್ಟಿಗೆಗಳಿಂದ ಕೂಡಿದ ರೋಮ್ ನಗರವನ್ನು ಅಮೃತಶಿಲೆಯ ನಗರ'ವನ್ನಾಗಿ ಮಾರ್ಪಡಿಸಿದನು. ಮಹಾನ್ ದಂಡನಾಯಕರುಗಳಾದ ಅಗ್ರಿಪ್ಪ ಮತ್ತು ಮ್ಯಾಸಿನಾಸ್, ಹಾಗೂ ಲೇಖಕರು, ಕವಿಗಳು ಮತ್ತು ಇತಿಹಾಸಕಾರರಾದ ಲಿವಿ, ಹೊರೇಸ್, ವರ್ಜಿಲ್, ಓವಿಡ್, ಪ್ಲಿನಿ ಮತ್ತು ಟಾಸಿಟಸ್ ಅವನ ಕಾಲವನ್ನು ಪ್ರಜ್ವಲಿಸುವಂತೆ ಮಾಡಿದರು. ಏಸುಕ್ರಿಸ್ತನು ಅವನ ಆಡಳಿತ ಕಾಲದಲ್ಲಿಯೇ ಜನಿಸಿದನು ಎಂಬುದು ಗಮನಾರ್ಹವಾಗಿದೆ.

ಅಗಸ್ಟಸ್‌ನ ಕಾಲವನ್ನು ರೋಮನ್ ಸಾಮ್ರಾಜ್ಯದ 'ಸುವರ್ಣಯುಗ'ವೆಂದು ಕರೆಯಲಾಗಿದೆ. ಅದು ಶಾಂತಿ ಮತ್ತು ಸಮೃದ್ಧಿಗೆ ಹೆಸರಾಗಿತ್ತು. ಈ ಯುಗವನ್ನು 'ಪ್ಯಾಕ್ಸ್ ರೊಮನಾ' ಅಥವಾ 'ರೋಮನ್ ಶಾಂತಿ' ಎಂದೇ ಕರೆಯಲಾಗಿದೆ. ಅವನು 'ವಿಶ್ವ ರಾಜ್ಯ'ದ ಕಲ್ಪನೆಯನ್ನು ಕೊಟ್ಟನು. ಅವನ ಚಕ್ರಾಧಿಪತ್ಯದ ವ್ಯವಸ್ಥೆ ಸುಮಾರು 500 ವರ್ಷಗಳವರೆಗೆ ಮುಂದುವರೆಯಿತು ಮತ್ತು ಗ್ರೀಕೊ–ರೋಮನ್ ನಾಗರಿಕತೆಯ ಶ್ರೇಷ್ಠ ಸಂಪತ್ತುಗಳನ್ನು ರಕ್ಷಿಸಿತ್ತು.

ಪೂರ್ವ ರೋಮನ್ ಸಾಮ್ರಾಜ್ಯದ ಉದಯ:

ಕಾನ್‌ಸ್ಟಂಟೈನ್

ಅಗಸ್ಟಸ್‌ನ ತಕ್ಷಣದ ಉತ್ತರಾಧಿಕಾರಿಗಳಲ್ಲಿ ಅನೇಕರು ದುರ್ಬಲರು ಮತ್ತು ನಿರಂಕುಶ ಆಡಳಿತಗಾರರಾಗಿದ್ದರು. ಮಾರ್ಕಸ್ ಅರೇಲಿಯಸ್ (ಸಾ.ಶ 161–180) ಅವರಲ್ಲಿ ಒಬ್ಬ ದಕ್ಷ ಆಡಳಿತಗಾರನಾಗಿದ್ದನು. ಆದರೆ ಅವನ ಉತ್ತರಾಧಿಕಾರಿಗಳು ಅಸಮರ್ಥರಾಗಿದ್ದರು. ಇವರಲ್ಲಿ ಕ್ಯಾಲಿಗುಲ ಮತ್ತು ನೀರೋ ಕೆಟ್ಟ ಸಾಮ್ರಾಟರಾಗಿದ್ದರು. ನೀರೋ ತನ್ನ ಹೆಂಡತಿ ಮತ್ತು ತಾಯಿ ಸೇರಿದಂತೆ ಅನೇಕ ಜನರನ್ನು ಕೊಲೆಮಾಡಿದನು. ಡಯೋಕ್ಲೀಷಿಯನ್ ಹಾಗೂ ಅವನ ಉತ್ತರಾಧಿಕಾರಿಗಳು ರೋಮನ್ ನಾಗರಿಕತೆಯ ಅವನತಿಯನ್ನು ಸ್ವಲ್ಪ ಮಟ್ಟಿಗೆ ತಡೆದರು. ಕಾನ್‌ಸ್ಟಂಟೈನ್ (ಸಾ.ಶ 306–337) ತನ್ನ ರಾಜಧಾನಿಯನ್ನು ಕಾನ್‌ಸ್ಟಾಂಟಿನೋಪಲ್‌ಗೆ ಸ್ಥಳಾಂತರಿಸಿದನು. ಇದಕ್ಕೆ ಅವನ ಹೆಸರನ್ನೇ ಇಡಲಾಗಿದೆ. ಈ ನಗರವನ್ನು ಪ್ರಾಚೀನ 'ಬೈಜಾಂಟಿಯನ್' ನಗರವಿದ್ದ ಸ್ಥಳದಲ್ಲಿಯೇ ನಿರ್ಮಿಸಲಾಯಿತು. ಈಗ ಇದನ್ನು 'ಇಸ್ತಾನ್‌ಬುಲ್' ಎಂದು ಕರೆಯುತ್ತಾರೆ. ಇದು ಟರ್ಕಿ ದೇಶದಲ್ಲಿದೆ. ಮಿಲಾನಿನ ರಾಜಾಜ್ಞೆಯಲ್ಲಿ ಕ್ರೈಸ್ತರಿಗೆ ತಮ್ಮ ಮತವನ್ನು ಅನುಸರಿಸಲು ಸ್ವಾತಂತ್ರ್ಯವನ್ನು ಕೊಟ್ಟನು. ಹೀಗೆ ತನ್ನ ಸಾಮ್ರಾಜ್ಯದಲ್ಲಿ ಕ್ರೈಸ್ತೀಕರಣ ಪ್ರಾರಂಭಿಸಿದನು.

ಕೊನೆಯ ಪ್ರಸಿದ್ಧ ರಾಜನಾದ ಜಸ್ಟೀನಿಯನ್ (ಸಾ.ಶ 527–565) ಪೂರ್ವ ಮತ್ತು ಪಶ್ಚಿಮಾರ್ಧ ಭಾಗಗಳ ಮೇಲೆ ನಿಯಂತ್ರಣವನ್ನು ಇಟ್ಟುಕೊಂಡಿದ್ದನು. ಅವನ ಆಳ್ವಿಕೆಯ ನೆನಪನ್ನು ದೀರ್ಘಕಾಲ ಉಳಿಯುವಂತಹ ಮಾಡಿದ ಸಾಧನೆಗಳೆಂದರೆ 'ಜಸ್ಟೀನಿಯನ್‌ನ ಕಾನೂನು ಸಂಹಿತೆ' (Justinian Code)ಯ ರಚನೆ ಹಾಗೂ ಕಾನ್‌ಸ್ಟಾಂಟಿನೋಪಲ್‌ನಲ್ಲಿ ನಿರ್ಮಿಸಿರುವ ಕಟ್ಟಡಗಳು. ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿಯಾಗಿ ಕಾನ್‌ಸ್ಟಾಂಟಿನೋಪಲನ್ನು ಸಾ.ಶ.1453ರಲ್ಲಿ ಟರ್ಕರು ವಶಪಡಿಸಿಕೊಳ್ಳುವವರೆಗೆ ಮುಂದುವರೆಯಿತು.

ಪವಿತ್ರ ರೋಮನ್ ಸಾಮ್ರಾಜ್ಯ: ರೋಮ್ ಸಾಮ್ರಾಜ್ಯದ ಅವನತಿ ಪಶ್ಚಿಮ ಯುರೋಪ್‌ನಲ್ಲಿ ಒಂದು ಗೊಂದಲಕ್ಕೆ ಕಾರಣವಾಯಿತು. ಇದರ ಪರಿಣಾಮವಾಗಿ ಸಣ್ಣ ಸಣ್ಣ ರಾಜ್ಯಗಳು ಉದಯಿಸಿದವು. ಸಾ.ಶ 800ರ ಸುಮಾರಿನಲ್ಲಿ 'ಚಾರ್ಲೆಮನ್' ಫ್ರಾನ್ಸ್, ಜರ್ಮನಿ, ಹಾಗೂ ಇಟಲಿಯ ಒಂದು ಭಾಗವು ಸೇರಿದಂತೆ ಸಾಮ್ರಾಜ್ಯವನ್ನು ಸ್ಥಾಪಿಸಿದನು. ರೋಮ್‌ನಲ್ಲಿ ಜರ್ಮನಿಯ ಅರಸ 'ಒಂದನೆ ಒಟ್ಟೊ'ವಿನ ಕಿರೀಟಧಾರಣೆಯೊಂದಿಗೆ ಪವಿತ್ರ ರೋಮನ್ ಸಾಮ್ರಾಜ್ಯವು ಸ್ಥಾಪನೆಗೊಂಡಿತು. ಆದರೆ ಕೆಲವು ಇತಿಹಾಸಕಾರರು ಈ ಸ್ಥಾಪನೆ ಚಾರ್ಲೆಮನ್ ನಿಂದ ಆರಂಭವಾಯಿತು ಎಂದು ಅಭಿಪ್ರಾಯ ಪಡುತ್ತಾರೆ. ಅಲ್ಲದೇ ಈತನು ಪೋಪನ ಸಹಕಾರದೊಂದಿಗೆ ಕ್ರೈಸ್ತ ಧಾರ್ಮಿಕ ಸಾರ್ವಭೌಮತ್ವವನ್ನು ಹೊಂದಿದ್ದಾನೆ ಎಂದು ಭಾವಿಸಲಾಗಿದೆ. ಕೊನೆಗೆ ನೆಪೋಲಿಯನ್ನನು 1806 ರಲ್ಲಿ ಪವಿತ್ರ ರೋಮನ್ ಸಾಮ್ರಾಜ್ಯವನ್ನು ರದ್ದುಪಡಿಸಿದನು.

ರೋಮನ್ನರ ಕೊಡುಗೆಗಳು

ರೋಮನ್ನರಿಲ್ಲದೆ ಗ್ರೀಕ್ ಸಂಸ್ಕೃತಿಯು ಪಾಶ್ಚಿಮಾತ್ಯ ಪ್ರಪಂಚಕ್ಕೆ ಹಬ್ಬಲು ಸಾಧ್ಯವಾಗುತ್ತಿರಲಿಲ್ಲ ಎಂಬ ಹೇಳಿಕೆ ಉತ್ಪ್ರೇಕ್ಷೆಯಾಗಲಾರದು. ರೋಮ್ ಸಾಮ್ರಾಜ್ಯವು ಗ್ರೀಸ್ ದೇಶವನ್ನು ಸೈನ್ಯ ಬಲದಿಂದ ವಶಪಡಿಸಿಕೊಂಡರೆ ಗ್ರೀಕರು ರೋಮನ್ನರನ್ನು ಬೌದ್ಧಿಕವಾಗಿ ವಶಪಡಿಸಿಕೊಂಡರು ಎಂದು ಹೇಳಲಾಗಿದೆ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರೋಮನ್ನರು ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸಿದರು. ಗಣರಾಜ್ಯ ಮತ್ತು ಸರ್ಕಾರಗಳ ರಚನೆ, ಕಾನೂನು, ತೆರಿಗೆ ನೀತಿಗಳು, ಪೌರತ್ವ ಹಕ್ಕುಗಳು, ಆಸ್ಪತ್ರೆಗಳು, ಸ್ವಚ್ಛತಾ ವ್ಯವಸ್ಥೆ ಮತ್ತು ಸಾರ್ವಜನಿಕ ಕಟ್ಟಡಗಳ ನಿರ್ಮಾಣ ಮುಂತಾದ ವಿಭಿನ್ನ ಕೊಡುಗೆಗಳನ್ನು ರೋಮ್ ನೀಡಿತು.

'ಪ್ಯಾಕ್ಸ್ ರೊಮನ' (ರೋಮನ್ ಶಾಂತಿ)

ರೋಮನ್ ಸಾಮ್ರಾಜ್ಯ ಅತ್ಯಂತ ವಿಸ್ತಾರವಾಗಿದ್ದು, ಯುರೋಪ್, ಏಷ್ಯಾ ಹಾಗೂ ಆಫ್ರಿಕಾ ಖಂಡಗಳವರೆಗೆ ತಲುಪಿತ್ತು. ಮಹಾನ್ ರೋಮನ್ ಸಾಮ್ರಾಜ್ಯದ ಸ್ಥಾಪನೆಯು ಪ್ಯಾಕ್ಸ್ ರೋಮನ ಎಂದು ಕರೆಯಲಾಗಿರುವ ಶಾಂತಿಯನ್ನು ಸ್ಥಾಪಿಸಿತು ಹಾಗೂ ಇದು ರೋಮನ್ ನಾಗರಿಕತೆ ಬೆಳೆಯಲು ಸಹಾಯಕವಾಯಿತು. ರೋಮ್ ತನ್ನ ಸೈನ್ಯ ಬಲದಿಂದ ಇಡೀ ಮೆಡಿಟರೇನಿಯನ್ ಪ್ರಪಂಚಕ್ಕೆ ಶಾಂತಿ ಒದಗಿಸಿತು. ಈ ಸಾಮ್ರಾಜ್ಯ ಸ್ಥಾಪನೆಗೊಳ್ಳುವ ಮುನ್ನ ಮೇಲ್ಕಾಣಿಸಿದ ಪ್ರದೇಶಗಳು ಸಣ್ಣ ಪುಟ್ಟ ಆಡಳಿತಗಾರರ ನಡುವೆ ಯುದ್ಧಗಳ ತಾಣವಾಗಿತ್ತು.

ಅಗಸ್ಟಸ್‌ನ ಕಾಲದಿಂದ ಮಾರ್ಕಸ್ ಅರೇಲಿಯಸ್ (ಸಾ.ಶ.ಪೂ 29 ರಿಂದ ಸಾ.ಶ. 180)ನ ಕಾಲದವರೆಗೆ ಸುಮಾರು ಎರಡು ಶತಮಾನಗಳ ಕಾಲ ಸಾಮ್ರಾಜ್ಯ ಶಾಂತಿಯನ್ನು ಅನುಭವಿಸಿತು. ಇದರ ಪರಿಣಾಮವಾಗಿ ವಾಣಿಜ್ಯ ಹಾಗೂ ವ್ಯಾಪಾರಗಳು ಅಭಿವೃದ್ಧಿಗೊಂಡವು. ಪ್ರಜೆಗಳು ಶಾಂತಿ ಹಾಗೂ ಸಮೃದ್ಧಿಯ ಜೀವನವನ್ನು ನಡೆಸಿದರು. ನಗರಗಳ ನಿರ್ಮಾಣವಾಯಿತು, ದೇವಾಲಯಗಳನ್ನು ಕಟ್ಟಲಾಯಿತು ಮತ್ತು ಗಮನಾರ್ಹ ಅಭಿವೃದ್ಧಿಯಾಯಿತು. ರೋಮ್‌ನ ಆಳ್ವಿಕೆಗೆ ಒಳಪಟ್ಟವರೆಲ್ಲರಿಗೂ ರೋಮನ್ ಪೌರತ್ವ ನೀಡಲಾಯಿತು. ಪೌರತ್ವ ಪಡೆದವರಿಗೆ ಇತರರೊಂದಿಗೆ ಸಮಾನತೆಯನ್ನು ಪಡೆಯುವ ಖಾತ್ರಿಯಾಯಿತು.

ವಿಶ್ವ ರಾಜ್ಯ: ಅಲೆಗ್ಸಾಂಡರ್ ಮಹಾಶಯನಿಂದ ಬಹುಶಃ 'ವಿಶ್ವರಾಜ್ಯ' ಕಲ್ಪನೆ ಆರಂಭಗೊಂಡಿರಬಹುದಾಗಿದೆ. ಆದರೆ ವಿಶ್ವ ರಾಜ್ಯದ ಪ್ರಾಯೋಗಿಕ ಪ್ರಾತ್ಯಕ್ಷಿಕೆಯನ್ನು ಮೊದಲು ನೀಡಿದವರು ರೋಮನ್ನರು. ಅವರು ಏಕರೂಪ ಆಡಳಿತ ವ್ಯವಸ್ಥೆ ಮತ್ತು ಸಾರ್ವತ್ರಿಕ ಕಾನೂನುಗಳನ್ನು ಪರಿಚಯಿಸಿದರು. ಪ್ರಾಚೀನ ರೋಮ್‌ನ ಅಧಿಪತ್ಯಕ್ಕೆ ಒಳಪಟ್ಟಿದ್ದ ಜನರು ಪ್ರಸ್ತುತ 30 ಕ್ಕೂ ಹೆಚ್ಚಿನ ದೇಶಗಳಲ್ಲಿ ವಾಸಿಸುತ್ತಿದ್ದಾರೆ.

ರೋಮನ್ನರ ಕಾನೂನು

ರೋಮನ್ನರ ಅಪರಿಮಿತ ಬೌದ್ಧಿಕ ಕೊಡುಗೆಗಳಲ್ಲಿ ಕಾನೂನು ವ್ಯವಸ್ಥೆಯ ರಚನೆ ಅಗ್ರಮಾನ್ಯವಾಗಿದೆ. ಅವರ ಕಾನೂನುಗಳು ಇಂದಿನ ವಿಶ್ವದ ನಾಗರಿಕ ದೇಶಗಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿವೆ. ರೋಮನ್ನರ ಕಾನೂನು ಮತ್ತು ಆಡಳಿತ ವ್ಯವಸ್ಥೆಯು ವಿಶಾಲ ಸಾಮ್ರಾಜ್ಯದ ಮೇಲೆ ವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಸಮರ್ಥರನ್ನಾಗಿಸಿತು. ಇದು ಗ್ರೀಕರಿಗೆ ಅಸಾಧ್ಯವಾಗಿತ್ತು. ಕಾನೂನುಗಳು ವ್ಯಾಪಾರ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೊಳ್ಳಲು ಪ್ರೋತ್ಸಾಹಿಸಿದವು. ಆಂಗ್ಲ ಪದಗಳಾದ 'ಕಾನೂನು' (Law), 'ಕಾಯಿದೆ' (Legislation), 'ನ್ಯಾಯ' (Justice), 'ಸಮಾನತೆ' (Equality) ಮತ್ತು 'ತೀರ್ಪು' (Judgement) ಮೂಲತಃ ಲ್ಯಾಟಿನ್ ಭಾಷೆಯಿಂದ ಬಂದಿವೆ. ಬಹುತೇಕ ಆರಂಭಿಕ ಕಾನೂನುಗಳನ್ನು ಪುರೋಹಿತರು ಅರ್ಥೈಸುತ್ತಿದ್ದರು. ಮೊದಲನೇ ಲಿಖಿತ ಸಂಹಿತೆ 'ಹನ್ನೆರಡು ಕೋಷ್ಠಕಗಳು' (Twelve Tables) ರೂಪದಲ್ಲಿ ಜಾರಿಗೆ ಬಂದಿತು. ಬದಲಾಗುತ್ತಿರುವ

ಆರ್ಥಿಕ ಸ್ಥಿತಿಗಳಿಗನುಗುಣವಾಗಿ ವಾಣಿಜ್ಯ ವಹಿವಾಟುಗಳನ್ನು ಕಾನೂನು ಬದ್ಧಗೊಳಿಸಲಾಯಿತು. ಇದು ರೋಮ್ ನಾಗರಿಕರೆಲ್ಲರೂ ಕಾನೂನಿನ ಮುಂದೆ ಸಮಾನರೆಂದು ಪ್ರತಿಪಾದಿಸಿತು. ರೋಮ್‌ನ ಕಾಯ್ದೆಯನ್ನು 2 ಭಾಗವಾಗಿ ವಿಂಗಡಿಸಬಹುದು.

(ಎ) 'ದ ಜಸ್ ಸಿವಿಲಿ' (Jus-civili) ಇದು ನಾಗರಿಕ ಕಾನೂನಾಗಿದ್ದು, ರೋಮ್ ನಾಗರೀಕರಿಗೆ ಮಾತ್ರ ಅನ್ವಯವಾಗುತ್ತಿತ್ತು.

(ಬಿ) 'ಜಸ್–ಜೆಂಟಿಯಮ್' (Jus-Gentium) ಮೂಲತ: ಇದು ರೋಮ್‌ನಲ್ಲಿದ್ದ ವಿದೇಶಿಯರಿಗೆ ಹಾಗೂ ರೋಮ್ ಪೌರತ್ವವಿಲ್ಲದೆ ರೋಮ್ ಸಾಮ್ರಾಜ್ಯದಲ್ಲಿ ವಾಸಿಸುವವರಿಗೆ ಈ ಕಾನೂನು ಅನ್ವಯವಾಗಿತ್ತು. ಜಸ್ಟೀನಿಯನ್ (ಸಾ.ಶ 527–565) ಎಂಬ ಪೂರ್ವ ರೋಮಿನ ಸಾಮ್ರಾಟ ರೋಮ್‌ನ ಕಾನೂನುಗಳನ್ನು ಸಂಪೂರ್ಣವಾಗಿ ವಿಂಗಡಿಸಿ ಕ್ರೋಢೀಕರಿಸಿದನು. ಹೀಗೆ ರೋಮ್ ಸಾಮ್ರಾಜ್ಯವು ಕಾನೂನು ಸುಧಾರಣೆಗಳ ಸರಣಿಯನ್ನೇ ಕಂಡಿತು ಮತ್ತು ನ್ಯಾಯಶಾಸ್ತ್ರ ವಿಜ್ಞಾನದ ಸೃಷ್ಟಿಯಾಯಿತು. ವಾಸ್ತವವಾಗಿ ಕಾಲಾಂತರದಲ್ಲಿ ಇಂಗ್ಲೆಂಡಿನ ಸಾರ್ವತ್ರಿಕ ಕಾನೂನಿನಿಂದ ಹಿಡಿದು ನೆಪೋಲಿಯನ್ ಕಾನೂನು ಸಂಹಿತೆಯವರೆಗೂ ಎಲ್ಲಾ ನ್ಯಾಯಾಂಗ ಪದ್ಧತಿಗಳು ರೋಮ್ ನ್ಯಾಯಾಂಗ ವ್ಯವಸ್ಥೆಗೆ ಋಣಿಯಾಗಿವೆ.

ಕಾರ್ಪಸ್ ಜ್ಯೂರಿಸ್ ಸಿವಿಲಿಸ್: ಜಸ್ಟಿನೀಯನ್ ಕೋಡ್‌ಗಳನ್ನು 'ಕಾರ್ಪಸ್ ಜ್ಯೂರಿಸ್ ಸಿವಿಲಿಸ್' ಎಂದು ಕರೆಯಲಾಗಿದೆ. ಹತ್ತು ನುರಿತ ನ್ಯಾಯಾಧೀಶರು ಹಾಗೂ ವಕೀಲರನ್ನು ಒಳಗೊಂಡ ಆಯೋಗ ಅರಸನಿಗೆ ಈ ಕಾರ್ಯವನ್ನು ನೆರವೇರಿಸಿಕೊಟ್ಟಿತು. ಈ ಕೋಡ್‌ನಲ್ಲಿ 4 ಭಾಗಗಳಿದ್ದವು. ಅವು ಯಾವುವೆಂದರೆ:

ಎ) ಕೋಡ್–ರಾಜಾಜ್ಞೆಗಳು ಅಥವಾ ಅಂದು ರೂಢಿಯಲ್ಲಿದ್ದ ಕಾನೂನುಗಳನ್ನು ಒಳಗೊಂಡಿತ್ತು.

ಬಿ) ಡೈಜಸ್ಟ್–ನ್ಯಾಯಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಒಳಗೊಂಡಿದ್ದು, ಇದು ರೋಮನ್ ಕಾನೂನು ಅಭಿಪ್ರಾಯದ ಶುದ್ಧಸತ್ವವನ್ನು ಒಳಗೊಂಡಿತ್ತು.

ಸಿ) ಇನ್‌ಸ್ಟಿಟ್ಯೂಟ್–ಇದು ಕಾನೂನಿನ ವಿಮರ್ಶಾತ್ಮಕ ವಿಶ್ಲೇಷಣೆಯಾಗಿದ್ದು, ಕಾನೂನು ವಿದ್ಯಾರ್ಥಿಗಳಿಗಾಗಿ ರಚಿಸಿದ ಪಠ್ಯಪುಸ್ತಕವಾಗಿತ್ತು.

ಡಿ) ನಾವೆಲ್–ನ್ಯಾಯ ಸಂಹಿತೆಗೆ ಮಾರ್ಪಾಡು ಮತ್ತು ಹೊಸ ಸೇರ್ಪಡೆಗಳಿಗೆ ಅವಕಾಶ ಒದಗಿಸಿತ್ತು. ಪುರುಷ ಮತ್ತು ಮಹಿಳೆಯರ ಮಧ್ಯೆ ಭೇದಭಾವ ಮಾಡಿರಲಿಲ್ಲ. ಹೀಗೆ ಕಾನೂನಿನ ದೃಷ್ಟಿಯಲ್ಲಿ ಸಮಾನತೆಯನ್ನು ಒತ್ತಿಹೇಳಲಾಯಿತು. ರೋಮನ್ ಕ್ಯಾಥೋಲಿಕ್ ಚರ್ಚಿನ 'ಕ್ಯಾನನ್ ಲಾ' ಬಹುಮಟ್ಟಿಗೆ ಕಾರ್ಪಸ್ ಜ್ಯೂರಿಸ್ ಸಿವಿಲಿಸ್‌ನಿಂದ ಪ್ರಭಾವಿತವಾಗಿತ್ತು.

ಭಾಷೆ ಮತ್ತು ಸಾಹಿತ್ಯ

ಲ್ಯಾಟಿನ್ ಪ್ರಾಚೀನ ರೋಮನ್ ಸಾಮ್ರಾಜ್ಯದ ಭಾಷೆಯಾಗಿತ್ತು. ಇದು ಇಂಡೋ–ಯೂರೋಪಿಯನ್ ಭಾಷೆಗಳ ಕುಟುಂಬಕ್ಕೆ ಸೇರಿತ್ತು. ಲ್ಯಾಟಿಯಮ್ ಮೂಲ ನಿವಾಸಿಗಳು ಗ್ರೀಕ್ ಭಾಷೆಯ ಶ್ರೇಷ್ಠತೆಯನ್ನು ಅನುಕರಿಸಿ ತಮ್ಮದೇ ಭಾಷೆಯ ಶೈಲಿಯನ್ನು ರೂಪಿಸಿಕೊಂಡರು. ರೋಮ್‌ನ ಪತನಕ್ಕೆ ಮುಂಚೆ ಲ್ಯಾಟಿನ್ ಭಾಷೆಯು ಬಹುತೇಕ ನಾಗರಿಕ ಪ್ರಪಂಚದ ಅಂಗೀಕೃತ ಭಾಷೆಯಾಗಿದ್ದಿತು. ಚರ್ಚ್, ವಿಜ್ಞಾನ, ವೈದ್ಯಕೀಯ, ಕಾನೂನು ಹಾಗೂ ಶಿಕ್ಷಣದ ಭಾಷೆಯಾಗಿ ಲ್ಯಾಟಿನ್ ಉಳಿಯಿತು. ಮಧ್ಯಕಾಲೀನ ಯುಗದುದ್ದಕ್ಕೂ ಯೂರೋಪಿನ ಹೆಚ್ಚಿನ ಲಿಖಿತ ವ್ಯವಹಾರಗಳಲ್ಲಿ ಇದನ್ನು ಬಳಸಲಾಗುತ್ತಿತ್ತು.

ಸಾಹಿತ್ಯ ರಂಗದಲ್ಲಿ ರೋಮನ್ನರು ಗ್ರೀಕರನ್ನು ಅನುಕರಿಸಲು ಪ್ರಯತ್ನಿಸಿದರು. ಸಿಸಿರೋವಿನ ಗದ್ಯ ಕೃತಿಗಳು ಮತ್ತು ಕ್ಯಾಟುಲಸ್ ಹಾಗೂ ಲುಕ್ರೆಟಿಸ್‌ನ ಕಾವ್ಯಗಳು ಲ್ಯಾಟಿನ್ ಸಾಹಿತ್ಯದ ಸುವರ್ಣ ಯುಗದ ಸಂದೇಶ ವಾಹಕಗಳಾಗಿವೆ. ಜ್ಯೂಲಿಯಸ್ ಸೀಸರ್ 'ಗಾಲಿಕ್ ವಾರ್ಸ್' ಮತ್ತು 'ಸಿವಿಲ್ ವಾರ್ಸ್' ಎಂಬ ಎರಡು ಕೃತಿಗಳನ್ನು ರಚಿಸಿದನು. ಅಗಸ್ಟೀನಿಯನ್ ಯುಗದ ಉದಯವು ಹೆಸರಾಂತ ಸಾಹಿತಿಗಳಾದ ವರ್ಜಿಲ್, ಹೊರೇಸ್, ಲಿವಿ ಮತ್ತು ಓವಿಡ್ ಅವರ ಬರವಣಿಗೆಯನ್ನು ಕಂಡಿತು. ವರ್ಜಿಲ್ ಎಂಬ ಶ್ರೇಷ್ಠ ಸಾಹಿತಿಗೆ 'ರೋಮ್‌ನ ದಿವ್ಯಧ್ವನಿ' (Voice of Rome) ಬಿರುದನ್ನು ನೀಡಲಾಗಿತ್ತು. ಇವನು 'ಏನಿಯಾಡ್' ಎಂಬ ಗ್ರಂಥವನ್ನು ರಚಿಸಿದನು. ಅಗಸ್ಟಸನ ಯುಗ ಹೊರೇಸ್‌ನ ಕಾವ್ಯಗಳು ಮತ್ತು ಲಿವಿಯ 'ನ್ಯಾಚುರಲ್ ಹಿಸ್ಟ್ರಿ' ಕೃತಿಗಳನ್ನು ಕಂಡಿತು. ಲಿವಿಯ ಇನ್ನೊಂದು ಶ್ರೇಷ್ಠ ಕೃತಿ 'ರೋಮನ್ ಹಿಸ್ಟ್ರಿ'. ರಜತ ಯುಗದಲ್ಲಿ (ಸಾ.ಶ.ಪೂ 182–ಸಾ.ಶ 138) ಸೆನಕನ ದುರಂತ ನಾಟಕಗಳು, ಜುವೆನಲ್ ವಿಡಂಬನ ಕಾವ್ಯ (Satire) ಮತ್ತು ಟಾಸಿಟಸ್‌ನ 'ಸ್ಥಿತಿಪ್ರಜ್ಞೆ ಚರಿತ್ರೆಗಳು' (Skeptical Histories) ರಚಿತಗೊಂಡವು. ಟಾಸಿಟಸ್‌ನ ಇತರೆ ಕೃತಿಗಳೆಂದರೆ, ಅನಲ್ಸ್ ಮತ್ತು ಹಿಸ್ಟೋರಿಸ್. ಹಿರಿಯ ಪ್ಲಿನಿ 'ಸ್ವಾಭಾವಿಕ ಚರಿತ್ರೆ' (Natural History) ರಚಿಸಿದನು. ಇತರ ಹೆಸರಾಂತ ಇತಿಹಾಸಕಾರರೆಂದರೆ ಸಲ್ಲೂಸ್ಟ್ ಮತ್ತು ಪ್ಲೂಟಾರ್ಕ್. ಮಾರ್ಕಸ್ ಅರೇಲಿಯಸ್ 'ಮೆಡಿಟೇಷನ್' ಎಂಬ ಕೃತಿಯನ್ನು ರಚಿಸಿದನು. ಅವನು ತತ್ವಶಾಸ್ತ್ರದ ಉತ್ತಮ ವಾಗ್ಮಿಯಾಗಿದ್ದನು.

ವರ್ಜಿಲ್ (ಸಾ.ಶ.ಪೂ 70–19):

ಅವನ ಮಹಾನ್ ಗ್ರಂಥ 'ಏನಿಯಾಡ್' ಅವನು ಪ್ರಪಂಚ ಮೆಚ್ಚುವ ಅತ್ಯುನ್ನತ ಮಹಾಕಾವ್ಯವನ್ನು ರಚಿಸಿದನು. ಟ್ರಾಯ್ ಯುದ್ಧದ ನಂತರ ಏನಿಯಾಸ್‌ನ ಸಾಹಸಗಳು ಮತ್ತು ರೋಮ್ ನಗರದ ಸ್ಥಾಪನೆಯನ್ನು ವಿವರಿಸುತ್ತದೆ. ಬುಕೊಲಿಕ್ಸ್ ಮತ್ತು ಜಿಯಾರ್ಜಿಕ್ಸ್ ಅವನ ಇತರ ಕಾವ್ಯ ರಚನೆಗಳಾಗಿವೆ.

ವಿಜ್ಞಾನ

ವಿಜ್ಞಾನದಲ್ಲಿ ರೋಮನ್ನರ ಕೊಡುಗೆಗಳು ಸೀಮಿತವಾಗಿವೆ. ರೋಮನ್ ವಿಜ್ಞಾನಿಗಳ ಹೆಚ್ಚಿನ ತೀರ್ಮಾನಗಳು ತಾತ್ವಿಕವಾಗಿದ್ದವೇ ಹೊರತು ಜಾಗರೂಕ ಪ್ರಯೋಗಳಿಂದ ಕೂಡಿರಲಿಲ್ಲ. ಬಡ ರೋಗಿಗಳಿಗೆ ಉಚಿತ ಔಷಧಿಗಳನ್ನು ಒದಗಿಸುವಲ್ಲಿ ಅವರೇ ಮೊದಲಿಗರಾಗಿದ್ದಾರೆ. ವೈಯಕ್ತಿಕ ಶುಚಿತ್ವವನ್ನು ಕಾಪಾಡಿಕೊಂಡಿದ್ದರು ಮತ್ತು ಅದಕ್ಕಾಗಿ ಅವರು ಸಾರ್ವಜನಿಕ ಸ್ನಾನ ಗೃಹಗಳ ನಿರ್ಮಾಣ ಮಾಡಿದರು. ಅವರು ಆಸ್ಪತ್ರೆಗಳನ್ನು ಕಟ್ಟಿಸಿದರು ಮತ್ತು ಪರಿಣಿತ ವೈದ್ಯರು ರೋಗಿಗಳ ಚಿಕಿತ್ಸೆ ಮಾಡುತ್ತಿದ್ದರು. ಗೇಲನ್ (ಸಾ.ಶ 130–200) ಎನ್ನುವ ಶ್ರೇಷ್ಠ ವೈದ್ಯ ಶರೀರ ರಚನಾಶಾಸ್ತ್ರ ಮತ್ತು ಅಂಗ ರಚನಾಶಾಸ್ತ್ರಗಳ ಬಗ್ಗೆ ಬರೆದನು. ದೇಹ ರಚನೆಯ ಜ್ಞಾನದಿಂದಾಗಿ ಅವರಿಗೆ ಗಳಗಂಡ ಮತ್ತು ಗಂಟಲಿನ ಗಡ್ಡೆಗಳನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆದು ಹಾಕಲು ಸಾಧ್ಯವಾಗುತ್ತಿತ್ತು. ರಕ್ತ ಪರಿಚಲನೆಯನ್ನು ಕಂಡು ಹಿಡಿದ ಮೊದಲಿಗರಲ್ಲಿ 'ಗೇಲನ್' ಒಬ್ಬನು. ಹಿರಿಯ ಪ್ಲಿನಿಯ 'ನ್ಯಾಚ್ಯೂರಲ್ ಹಿಸ್ಟ್ರಿ' ಯನ್ನು ತಿಳಿದಿರುವ ಎಲ್ಲಾ ವಿಜ್ಞಾನಗಳ ಸಂಹಿತೆ

ರೋಮನ್ನರ ಸಾರ್ವಜನಿಕ ಸ್ನಾನದ ಗೃಹಗಳು

(Compendium of all known science) ಎಂದೇ ಕರೆಯಲಾಗಿದೆ. ಅರಟೆಕಸನು ಮೊಟ್ಟ ಮೊದಲ ಬಾರಿಗೆ ಮಧುಮೇಹ ಮತ್ತು ಗಂಟಲ ಮಾರಿ ರೋಗಗಳನ್ನು ವಿವರಿಸಿದನು. ರೋಮನ್ನರು ಎಟ್ರುಸ್ಕ್ಯಾನ್ ರಿಂದ ಪಾಳಿ ಪದ್ಧತಿ (ರೊಟೇಶನ್ ಸಿಸ್ಟಮ್) ಅನ್ನು ಎರವಲು ಪಡೆದರು. ಆದರೆ ಈ ವ್ಯವಸ್ಥೆಯನ್ನು ಅಂಕಗಣಿತಕ್ಕಿಂತ ಹೆಚ್ಚಿಗೆ ಅಭಿವೃದ್ಧಿ ಪಡಿಸಲಾಗಲಿಲ್ಲ. ರೋಮನ್ನರ ಸಂಖ್ಯಾ ಪದ್ಧತಿಯಾದ I-X ಸಂಖ್ಯೆಗಳು ಈಗಲೂ ಪ್ರಚಲಿತವಾಗಿವೆ. ಪ್ರಾಚೀನ ರೋಮನ್ನರು ಸಂಖ್ಯೆಗಳನ್ನು ವಾಣಿಜ್ಯ ಗಣಿತದಲ್ಲಿ ಉಪಯೋಗಿಸುತ್ತಿದ್ದರು.

'ಗೇಲನ್' : ಈತ ವೈದ್ಯಕೀಯ ಕ್ಷೇತ್ರದ ಶ್ರೇಷ್ಠ ತಜ್ಞನಾಗಿದ್ದನು. ದೇಹದ ಭಾಗಗಳಾದ ಹೃದಯ ಮತ್ತು ಬೆನ್ನೆಲುಬುಗಳನ್ನು ವೈಜ್ಞಾನಿಕವಾಗಿ ಇವನು ಅಭ್ಯಸಿಸಿದನು. ದೇಹದ ರಚನೆ ಮತ್ತು ಅಂಗ ರಚನೆಗಳ ಬಗ್ಗೆ 500 ಕೃತಿಗಳನ್ನು ರಚಿಸಿದನು. ವೈದಕೀಯ ಅಧ್ಯಯನವಲ್ಲದೆ ತರ್ಕಶಾಸ್ತ್ರ, ವ್ಯಾಕರಣ ಮತ್ತು ನೀತಿಶಾಸ್ತ್ರಗಳ ಬಗ್ಗೆ ಕೃತಿಗಳನ್ನು ರಚಿಸಿದನು.

ಕಲೆ ಮತ್ತು ವಾಸ್ತುಶಿಲ್ಪ:

ರೋಮನ್ನರು ಅದ್ಭುತ ಕಟ್ಟಡಗಳ ನಿರ್ಮಾಣದಲ್ಲಿ ಸುಪ್ರಸಿದ್ಧರು. ಅವರ ಕಾಲದಲ್ಲಿ ದೇವಾಲಯಗಳು, ರಂಗಮಂದಿರಗಳು, ಸಾರ್ವಜನಿಕ ಕಟ್ಟಡಗಳು, ಸ್ನಾನ ಗೃಹಗಳು ಮತ್ತು ಮನೆಗಳು ಬಹು ಸಂಖ್ಯೆಯಲ್ಲಿ ನಿರ್ಮಾಣವಾದವು. ಪಾಂಪೆಯ ರಂಗಮಂದಿರ (ಸಾ.ಶ.ಪೂ 55) ಅದ್ಭುತ ಶೈಲಿಯಲ್ಲಿ ನಿರ್ಮಾಣಗೊಂಡ ಕಟ್ಟಡ. ರೋಮ್ ನಗರದ ಸಪ್ತ ಬೆಟ್ಟಗಳಲ್ಲಿ ಒಂದಾದ 'ಪ್ಯಾಲೆಟಿನ್' ಮೇಲೆ ಅಗಸ್ಟಸ್ ಬೃಹತ್ ಅರಮನೆಯನ್ನು ನಿರ್ಮಿಸಿದನು.



ಕಲೋಸಿಯಂ

ಕಲೋಸಿಯಂ: ಇದು ರೋಮ್‌ನ ರಂಗ ಮಂದಿರ. ಇದನ್ನು ಸಾ.ಶ 80ರಲ್ಲಿ ವೆಸ್‌ಪ್ಯಾಸಿಯನ್ ಎಂಬ ಸಾಮ್ರಾಟನು ನಿರ್ಮಿಸಿದನು. ಈ ರಂಗ ಮಂದಿರ ಸುಮಾರು 50,000 ಜನರಿಗೆ ಸ್ಥಳಾವಕಾಶ ಒದಗಿಸುವಂತಿತ್ತು. ರೋಮ್‌ನ ಪ್ರಜೆಗಳು ಖಡ್ಗ ಮಲ್ಲರ ಯುದ್ಧ ಅಥವಾ ಹಸಿದ ಸಿಂಹಗಳಿಂದ ಕ್ರಿಶ್ಚಿಯನ್ನರ ವಧೆಯನ್ನು ವೀಕ್ಷಿಸಲು ಬರುತ್ತಿದ್ದರು.

'ವೆಸ್‌ಪ್ಯಾಸಿಯನ್' ಎನ್ನುವವನು 'ಕಲೋಸಿಯಂ' ಎಂಬ ಬೃಹತ್ ರಂಗಮಂದಿರವನ್ನು ಕಟ್ಟಿಸಿದನು. ಇಲ್ಲಿ ಖಡ್ಗಮಲ್ಲರ (Gladiators) ಸ್ಪರ್ಧೆಗಳು ನಡೆಯುತ್ತಿದ್ದವು. ಪ್ಯಾಂತಿಯಾನ್ ಬಹುಶಃ ಈ ಎಲ್ಲಾ ಕಟ್ಟಡಗಳಿಗಿಂತ ಹೆಚ್ಚು ಹೆಸರುವಾಸಿಯಾದ ಹಾಗೂ ಬಹಳ ಚೆನ್ನಾಗಿ ಸಂರಕ್ಷಿಸಲಾದ ರೋಮನ್ನರ ಕಟ್ಟಡವಾಗಿದೆ. ಮೂಲತಃ ಈ ಕಟ್ಟಡವನ್ನು ಅಗಸ್ಟಸ್‌ನ ಕಾಲದಲ್ಲಿ ಕಟ್ಟಲಾಯಿತು ಮತ್ತು ಹ್ಯಾಡ್ರಿಯನ್ ಕಾಲದಲ್ಲಿ ಇದನ್ನು ಸಂಪೂರ್ಣವಾಗಿ ಪುನರ್ ನಿರ್ಮಾಣ ಮಾಡಲಾಯಿತು. ಪೂರ್ವಾಂತರ ರಾಷ್ಟ್ರಗಳಲ್ಲಿ ಕಾನ್‌ಸ್ಟಾಂಟಿನೋಪಲಿನ ಜಸ್ಟೀನಿಯನ್‌ನ ಚರ್ಚ್ ಆಫ್ ಸೈಂಟ್ ಸೋಫಿಯ ಈಗಲೂ ಮಹೋನ್ನತ ಕಟ್ಟಡವೆಂದು ಪರಿಗಣಿಸಲ್ಪಟ್ಟಿದೆ.

ರೋಮನ್ನರು ಕಾಂಕ್ರೀಟನ್ನು (ಗಾರೆ ಗಚ್ಚು) ಕಂಡು ಹಿಡಿದರು. ಅವರು ಎರಡು ವಾಸ್ತುಶಿಲ್ಪ ಶೈಲಿಯನ್ನು ಪರಿಚಯಿಸಿದರು. 1. ಕಮಾನುಗಳು 2. ಗೋಲಾಕಾರದ ಗುಮ್ಮಟಗಳು. ಉತ್ತಮ ರಸ್ತೆಗಳು ಮತ್ತು ನೀರು ಸರಬರಾಜು ವ್ಯವಸ್ಥೆ ಅವರ ತಾಂತ್ರಿಕ ಕೌಶಲ್ಯಕ್ಕೆ ಉದಾಹರಣೆಗಳಾಗಿವೆ. ಫ್ರಾಂಟಿನಸ್‌ನು ತಾಂತ್ರಿಕತೆಯ ಬಗ್ಗೆ ಆದಿ ಗ್ರಂಥವನ್ನು ಬರೆದನು.

ಗ್ರೀಕ್ ಮಾದರಿಯಲ್ಲಿ ರೋಮನ್ನರು ಶಿಲ್ಪಕಲೆಗಳನ್ನು ಅಭಿವೃದ್ಧಿ ಪಡಿಸಿದರು. ಕಟ್ಟಡಗಳನ್ನು ಶಿಲ್ಪಕಲೆಗಳಿಂದ ಮತ್ತು ಉಬ್ಬು ಚಿತ್ರಗಳಿಂದ ಸಿಂಗರಿಸುತ್ತಿದ್ದರು. ಆದರೆ ಹೆಚ್ಚು ಶಿಲ್ಪಕಲೆಗಳು ಸಾಮ್ರಾಟನ ಪ್ರತಿಮೆಗಳಲ್ಲಿ ಕಾಣುತ್ತವೆ ಹಾಗೂ ಈ ಪ್ರತಿಮೆಗಳು ನಗರದ ಚೌಕಗಳಲ್ಲಿ ಅವರ ಅಧಿಕಾರ ಮತ್ತು ಶಕ್ತಿಯ ಸಂಕೇತಗಳಾಗಿದ್ದವು. 'ಅನಾಮಿಕ ರೋಮನ್' ಅವರ ಶಿಲ್ಪಕಲೆಗೆ ಉತ್ತಮ ಉದಾಹರಣೆಯಾಗಿದೆ.

ರೋಮನ್ನರ ಹೆಚ್ಚಿನ ಚಿತ್ರಕಲೆಗಳು ಕಣ್ಮರೆಯಾಗಿವೆ. ಅಳಿದುಳಿದ ಗೋಡೆಯ ಚಿತ್ರಕಲಾಕೃತಿಗಳು ಪಾಂಪಿಯಲ್ಲಿ ಲಭಿಸಿವೆ. ಚಿತ್ರಕಲೆ ಕ್ರೈಸ್ತರ ಪ್ರಭಾವದಿಂದ ಚರ್ಚಿನ ಚಿತ್ರಲೇಖನಗಳಿಂದ ಪುನಶ್ಚೇತನಗೊಂಡಿತು.

ರಸ್ತೆಗಳ ನಿರ್ಮಾಣ : ರೋಮನ್ನರು 12,000 ಮೈಲಿಯ ಉದ್ದಗಲ ಕಲ್ಲು ಹಾಸಿನ ಹೆದ್ದಾರಿಗಳನ್ನು ನಿರ್ಮಿಸಿದರು. ಇದರಲ್ಲಿ ಮುಖ್ಯವಾದ ಮಾರ್ಗಗಳೆಂದರೆ, ಆ್ಯಪಿಯ ಮಾರ್ಗ, ಲ್ಯಾಟಿನಾ ಮಾರ್ಗ, ವ್ಯಾಲೆರಿಯ ಮಾರ್ಗ. ಈ ಮಾರ್ಗಗಳನ್ನು ಸೇನಾಪಡೆಗಳ ಸಂಚಲನಗಳಿಗೆ ನಿರ್ಮಿಸಲಾಗಿತ್ತು. ಭಾರತ ಮತ್ತು ಚೀನಾ ಸೇರಿದಂತೆ ಪ್ರಪಂಚದ ಬೇರೆದೇಶಗಳೊಡನೆ ವಾಣಿಜ್ಯ ವಹಿವಾಟುಗಳಿಗೆ ಈ ಮಾರ್ಗವನ್ನು ಉಪಯೋಗಿಸುತ್ತಿದ್ದರು. ರೋಮನರ ಸಾಮ್ರಾಜ್ಯದ ಎಲ್ಲಾ ಭಾಗಗಳನ್ನು ಸೇರಿಸುವ ರಸ್ತೆ ವ್ಯವಸ್ಥೆ ಎಷ್ಟೊಂದು ಪರಿಪೂರ್ಣವಾಗಿತ್ತೆಂದರೆ "ಎಲ್ಲಾ ರಸ್ತೆಗಳು ರೋಮ್‌ನೆಡೆಗೇ ಸಾಗುತ್ತವೆ" ಎಂದು ಜನರು ಹೇಳುತ್ತಿದ್ದರು.

ಶಬ್ದಾರ್ಥ ಕೋಶ

ಗ್ಲಾಡಿಯೇಟರ್ (gladiator): ಪ್ರಾಚೀನ ರೋಮ್‌ನಲ್ಲಿ ವೀಕ್ಷಕರ ಸಂತೋಷಕ್ಕೋಸ್ಕರ ಪುರುಷರು ಅಥವಾ ಮೃಗಗಳ ಜೊತೆ ಹೋರಾಡಲು ತರಬೇತಿ ನೀಡಿದ ಗುಲಾಮರಿಗೆ ಈ ಪದವನ್ನು ಉಪಯೋಗಿಸಲಾಗುತ್ತಿತ್ತು.

ಪ್ರಶ್ನೆಗಳು

ಈ ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ : (ಪ್ರತಿಯೊಂದಕ್ಕೂ 1 ಅಂಕ)

1) ಯಾವ ನದಿಯ ದಡದ ಮೇಲೆ ಪ್ರಾಚೀನ ರೋಮಿನ ನಾಗರಿಕತೆ ಬೆಳೆಯಿತು?
2) ರೋಮಿನಲ್ಲಿ ಗಣರಾಜ್ಯ ಸ್ಥಾಪನೆಯಾದದ್ದು ಯಾವಾಗ?
3) ರೋಮ್ ಎನ್ನುವ ಪದ ಯಾವ ಪದದಿಂದ ಬಂದಿದೆ?
4) ರಿಪಬ್ಲಿಕ್ ಎನ್ನುವ ಪದ ಯಾವ ಲ್ಯಾಟೀನ್ ಶಬ್ದದಿಂದ ಬಂದಿದೆ?
5) ಹ್ಯಾನಿಬಾಲ್ ಯಾರು?
6) ರೋಮಿನ ಪ್ರಥಮ ನಿರಂಕುಶ ಪ್ರಭು ಯಾರು?
7) ಜ್ಯೂಲಿಯಸ್ ಸೀಸರ್ ಮತ್ತು ಪಾಂಪೆಯ ನಡುವೆ ಮಧ್ಯವರ್ತಿಯಾಗಿದ್ದವನು ಯಾರು?
8) 'ವಿನಿ–ವಿಡಿ–ವಿಸಿ' ಇದು ಯಾರ ಪ್ರಸಿದ್ಧ ಮಾತುಗಳು?
9) ಪಾಂಪೆಯನ್ನು ಜೂಲಿಯಸ್ ಸೀಸರ್ ಯಾವ ಕದನದಲ್ಲಿ ಸೋಲಿಸಿದ?
10) ಕ್ಲಿಯೋಪಾತ್ರ ಯಾರು?
11) ಜ್ಯೂಲಿಯಸ್ ಸೀಸರ್‌ನನ್ನು ಕೊಲೆಗೈದ ಪ್ರಮುಖ ವ್ಯಕ್ತಿ ಯಾರು?
12) ರೋಮಿನ ಅತ್ಯಂತ ಶ್ರೇಷ್ಠ ಸಾಮ್ರಾಟನನ್ನು ಹೆಸರಿಸಿ?
13) ಅಗಸ್ಟಸ್ ಸೀಸರ್‌ನ ಮೂಲ ಹೆಸರೇನು?
14) 'ಅಗಸ್ಟಸ್' ಪದದ ಅರ್ಥವೇನು?
15) ಯೇಸು ಕ್ರಿಸ್ತ ಹುಟ್ಟಿದಾಗ ರೋಮನ್ನು ಆಳುತ್ತಿದ್ದ ಸಾಮ್ರಾಟ ಯಾರು?
16) ಕಾನ್‌ಸ್ಟಂಟಿನೋಪಲ್‌ಗೆ ರೋಮ್ ಸಾಮ್ರಾಜ್ಯದ ರಾಜಧಾನಿಯನ್ನು ವರ್ಗಾಯಿಸಿದವನು ಯಾರು?
17) ಕಾನ್‌ಸ್ಟಂಟಿನೋಪಲ್‌ಗೆ ಇರುವ ಆಧುನಿಕ ಹೆಸರೇನು?
18) ಜಸ್ಟಿನೀಯನ್ ಏತಕ್ಕಾಗಿ ಪ್ರಸಿದ್ಧಿಯಾಗಿದ್ದಾನೆ?
19) ಪ್ರಾಚೀನ ರೋಮಿನ ಅತ್ಯಂತ ಶ್ರೇಷ್ಠ ವೈದ್ಯ ಯಾರು?
20) ಮಧುಮೇಹ ಮತ್ತು ಗಂಟಲುಮಾರಿ ರೋಗಗಳನ್ನು ಮೊದಲು ವಿವರಿಸಿದವನು ಯಾರು?
21) ಕಾನ್‌ಸ್ಟಾಂಟಿನೋಪಲ್ನ ಸಂತ ಸೋಫಿಯಾ ಚರ್ಚ್‌ನ್ನು ಕಟ್ಟಿಸಿದವನು ಯಾರು?

ಕೆಳಗಿನವುಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ ಎರಡು ಅಂಕಗಳು)

1) ರೋಮ್ ನಗರದ ಸ್ಥಾಪಕರು ಯಾರು?
2) ಪ್ರಾಚೀನ ರೋಮಿನ 'ಮೊದಲ ತ್ರಿಮೂರ್ತಿ'ಗಳನ್ನು ಹೆಸರಿಸಿ.
3) ಜ್ಯೂಲಿಯಸ್ ಸೀಸರ್ ಬರೆದ ಗ್ರಂಥಗಳನ್ನು ಹೆಸರಿಸಿ.

4) ಜ್ಯೂಲಿಯಸ್ ಸೀಸರ್‌ನ ಯಾವುದಾದರು ಎರಡು ಸುಧಾರಣೆಗಳನ್ನು ತಿಳಿಸಿ.

5) 'ದ್ವಿತೀಯ ತ್ರಿಮೂರ್ತಿ'ಗಳು ಎಂದು ಯಾರನ್ನು ಕರೆಯಲಾಗಿದೆ?

6) 'ಕಲೋಸಿಯಂ' ಎಂದರೇನು?

7) ಅಗಸ್ಟಸ್ ಸೀಸರ್‌ನ ಇಬ್ಬರು ಮುಖ್ಯ ದಂಡನಾಯಕರನ್ನು ತಿಳಿಸಿ.

8) ಅಗಸ್ಟಸ್‌ನ ಆಸ್ಥಾನವನ್ನು ಅಲಂಕರಿಸಿದ 4 ಕವಿಗಳು ಅಥವಾ ಬರಹಗಾರರನ್ನು ಹೆಸರಿಸಿ.

9) 'ಪ್ಯಾಕ್ಸ್ – ರೊಮನಾ' ಎಂದರೇನು?

10) ಹನ್ನೆರಡು ಕೋಸ್ಟಕಗಳು ಎಂದರೇನು?

11) 'ಜಸ್–ಜಂಟಿಯಮ್' ಎಂದರೇನು?

12) ಪ್ರಾಚೀನ ರೋಮಿನ ಯಾರಾದರು ಇಬ್ಬರು ಇತಿಹಾಸಕಾರರನ್ನು ಹೆಸರಿಸಿ.

ಈ ಕೆಳಗಿನವುಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ : (ಪ್ರತಿಯೊಂದಕ್ಕೂ 5–ಅಂಕಗಳು)

1) ರೋಮನರು ಮತ್ತು ಕಾರ್ಥೇಜರ ನಡುವೆ ನಡೆದ ಯುದ್ಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

2) ಜ್ಯೂಲಿಯಸ್ ಸೀಸರ್‌ನ ಬಗ್ಗೆ ಒಂದು ಟಿಪ್ಪಣಿಯನ್ನು ಬರೆಯಿಸಿ.

3) ಪೂರ್ವ ರೋಮನ್ ಸಾಮ್ರಾಜ್ಯದ ಏಳಿಗೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

4) ಪ್ಯಾಕ್ಸ್–ರೊಮನಾ ಎಂದರೇನು? ವಿವರಿಸಿ.

5) ರೋಮನ್ ಕಾನೂನಿನ ಬಗ್ಗೆ ಒಂದು ಟಿಪ್ಪಣಿಯನ್ನು ಬರೆಯಿರಿ.

6) ಭಾಷೆ ಮತ್ತು ಸಾಹಿತ್ಯಕ್ಕೆ ರೋಮನ್ನರ ಕೊಡುಗೆಗಳೇನು?

7) ವಿಜ್ಞಾನಕ್ಕೆ ರೋಮನ್ನರ ಕೊಡುಗೆಗಳೇನು ಸಂಕ್ಷಿಪ್ತವಾಗಿ ವಿವರಿಸಿ.

8) ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಪ್ರಾಚೀನ ರೋಮನ್ನರ ಕೊಡುಗೆಗಳೇನು?

ಕೆಳಗಿನವುಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 10 ಅಂಕಗಳು)

1) ಅಗಸ್ಟಸ್ ಸೀಸರ್‌ನ ಜೀವನ ಮತ್ತು ಸಾಧನೆಗಳನ್ನು ವಿವರಿಸಿ.

2) ರೋಮನ್ ನಾಗರಿಕತೆಯ ಕೊಡುಗೆಗಳನ್ನು ವಿವರಿಸಿ.

❖ ❖ ❖ ❖ ❖

-

ಅಧ್ಯಾಯ 5

ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳ ಉದಯ ಮತ್ತು ಪ್ರಸಾರ

5.1 ಕ್ರೈಸ್ತ ಧರ್ಮ

ಹಿನ್ನೆಲೆ: ಪ್ರಪಂಚದಲ್ಲಿ ಕ್ರೈಸ್ತ ಧರ್ಮವು ಒಂದು ಪ್ರಮುಖ ಧರ್ಮವಾಗಿದೆ. ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ 33% ರಷ್ಟು ಅನುಯಾಯಿಗಳನ್ನು ಹೊಂದಿದೆ. ಆದ್ದರಿಂದ ಜನರು ಇದನ್ನು ಪ್ರಪಂಚದ ಧರ್ಮವೆಂದು ಕರೆಯುತ್ತಾರೆ. ಯೇಸು ಕ್ರಿಸ್ತ ಇದರ ಸ್ಥಾಪಕ. ಈತನ ಅನುಯಾಯಿಗಳನ್ನು ಕ್ರೈಸ್ತರೆಂದು ಕರೆಯಲಾಗುತ್ತದೆ. **'ಶಿಲುಬೆ'** ಈ ಧರ್ಮದ ಚಿಹ್ನೆ. ಇದು ಜುಡಾಯಿಸಂ ಧರ್ಮದ ಮೂಲದಿಂದ ಬಂದಿದ್ದು, ಯಹೂದಿಗಳ ಧರ್ಮವು ರೋಮನ್ನರು ಆಳುತ್ತಿದ್ದ ಇಸ್ರೇಲ್‌ನಲ್ಲಿ ಕಂಡುಬಂದಿತು. ಅಲ್ಲಿನ ಯಹೂದಿಗಳು ರೋಮನ್ನರ ಗುಲಾಮರಾಗಿದ್ದರು. ಇವರು ರೋಮನ್ ದೇವತೆಗಳನ್ನು ಪೂಜಿಸುತ್ತಿದ್ದರು ಮತ್ತು ಅವರದೇ ಆದ ಯಾವುದೇ ಧಾರ್ಮಿಕ ತಳಹದಿ ಇರಲಿಲ್ಲ.

ಕ್ರೈಸ್ತ ಧರ್ಮದ ಚಿಹ್ನೆ

ಯಹೂದಿಗಳ ಹಳೇ ಒಡಂಬಡಿಕೆ ಅಥವಾ ಹೀಬ್ರು ಬೈಬಲ್‌ನ್ನು ಕ್ರೈಸ್ತ ಧರ್ಮ ಒಪ್ಪಿಕೊಂಡಿದೆ. ಇಸ್ರೇಲ್‌ನಲ್ಲಿ ಯಹೂದಿಗಳನ್ನು ಹೀಬ್ರೂಗಳೆಂತಲೂ ಕರೆಯಲಾಗುತ್ತದೆ. ಇವರು **'ಜಹೋವ'** ಎಂಬ ಏಕ ದೇವರನ್ನು ಪೂಜಿಸುತ್ತಿದ್ದರು. ಅವರು ವಿಗ್ರಹಾರಧನೆಯನ್ನು ವಿರೋಧಿಸುತ್ತಿದ್ದರು. **'ಜರುಸಲೇಂ'** ಅವರ ಧಾರ್ಮಿಕ ಕೇಂದ್ರವಾಗಿತ್ತು. **ಹಳೇ ಒಡಂಬಡಿಕೆ** ಯಹೂದಿಗಳ ಉಪದೇಶಗಳನ್ನು, ತತ್ವಗಳನ್ನು ಮತ್ತು ಧಾರ್ಮಿಕ ಅನುಭವಗಳನ್ನು ಒಳಗೊಂಡಿದೆ. ಇದರಲ್ಲಿ ಯಹೂದಿಗಳ ಪ್ರವಾದಿ **'ಮೋಸಸ್'** ದೇವರಿಂದ ಪಡೆದುಕೊಂಡ 10 ದೈವಾಜ್ಞೆಗಳಿವೆ. ಅವುಗಳನ್ನೇ ನಂತರ ಕ್ರೈಸ್ತ ಧರ್ಮದಲ್ಲಿ ಸೇರಿಸಲಾಯಿತು.

ಮೋಸಸ್‌ನ 10 ದೈವಾಜ್ಞೆಗಳೆಂದರೆ–ಪ್ರೀತಿ, ಸೇವೆ, ತ್ಯಾಗ, ಸಮಾನತೆ, ನ್ಯಾಯ, ಕರುಣೆ, ಕ್ಷಮಾಗುಣ, ನಿಷ್ಠೆ, ಮಾನವೀಯತೆ ಮತ್ತು ಭ್ರಾತೃತ್ವ.

ಯೇಸು ಕ್ರಿಸ್ತನ ಜೀವನ (ಸಾ.ಶ.ಪೂ.4–ಸಾ.ಶ. 30)

ಕ್ರೈಸ್ತ ಧರ್ಮದ ಸ್ಥಾಪಕ ಯೇಸು ಕ್ರಿಸ್ತ. ಈತ ಸಾ.ಶ.ಪೂ.4 ಡಿಸೆಂಬರ್ 25 ರಂದು ಜುಡಿಯಾದಲ್ಲಿರುವ (ಪ್ಯಾಲಿಸ್ಟೈನ್) **'ಬೆತ್ಲೆಹೆಮ್'** ಎಂಬಲ್ಲಿ ಜನಿಸಿದನು. **ಜೋಸೆಫ್** ಮತ್ತು **ಮೇರಿ** ಈತನ ತಂದೆ ತಾಯಿಗಳು. ಜೋಸೆಫ್‌ನು ನಜರೇತ್ ಎಂಬ ಹಳ್ಳಿಯಲ್ಲಿ ಬಡಗಿಯಾಗಿದ್ದನು. ಬೈಬಲ್‌ನ ಹೊಸ ಒಡಂಬಡಿಕೆ ಪ್ರಕಾರ ಯೇಸು ಜನಿಸಿದಾಗ ಪೂರ್ವದಲ್ಲಿ ನಕ್ಷತ್ರವೊಂದು ಮಿನುಗಿತು. ಅದನ್ನು 'ಪೂರ್ವದ ನಕ್ಷತ್ರ' (Star of East) ಎಂದು ಕರೆಯುತ್ತಾರೆ. ಯೇಸುವಿನ ಜನನ ಹಾಗೂ ಅದೇ ಸಮಯದಲ್ಲಿ ಕಂಡ 'ಪೂರ್ವದ ನಕ್ಷತ್ರ' ಪುರೋಹಿತರಿಗೆ ಅವನು ದೈವಾಂಶ ಸಂಭೂತನೆಂಬ ನಂಬಿಕೆಯನ್ನಂಟುಮಾಡಿತು. ಆದ್ದರಿಂದ ಅವನನ್ನು ಪೂಜಿಸಲು ಆರಂಭಿಸಿದರು. ಅವನು ತನ್ನ ಜೀವನದ ಸುಮಾರು 25 ವರ್ಷಗಳನ್ನು ಗೆಲಾಲಿ ಪ್ರಾಂತ್ಯದ ನಜರತ್‌ನಲ್ಲಿ ಕಳೆದನು. ಆದ್ದರಿಂದ ಅವನನ್ನು ನಜರತ್‌ನ ಜೀಸಸ್ ಎಂದೇ ಕರೆಯಲಾಗಿದೆ.

ಯೇಸು ಬೆಳೆದಂತೆ ತನ್ನ ತಂದೆಯ ವೃತ್ತಿಯನ್ನು ಕಲಿತನು ಮತ್ತು ಕುರಿಗಳನ್ನು ಮೇಯಿಸುತ್ತಿದ್ದನು. ಈತನು ಸರಳ ಜೀವನವನ್ನು ನಡೆಸುತ್ತಿದ್ದನು ಮತ್ತು ಬಡವರೊಡನೆ ಬೆರೆಯುತ್ತಿದ್ದನು. ಜೀಸಸ್‌ನು ತನ್ನ 12ನೆಯ ವಯಸ್ಸಿನಲ್ಲಿ ಅನಿರೀಕ್ಷಿತವಾಗಿ ಯಹೂದಿಗಳ ಸೈನಗಾಗ್‌ಗೆ ಭೇಟಿನೀಡಿದನು ಮತ್ತು ಜನರಿಗೆ ಅರ್ಥವಾಗದ ಧರ್ಮ ಗ್ರಂಥಗಳ ಅರ್ಥವಿವರಣೆ ನೀಡಿ ಅವರನ್ನು ಚಕಿತಗೊಳಿಸಿದನು. ಜೀಸಸ್ **'ಜಾನ್‌ಬ್ಯಾಪ್ಟಿಸ್ಟ್'ನ** ಪ್ರಭಾವಕ್ಕೊಳಗಾಗಿದ್ದನು. ಜಾನ್‌ಬ್ಯಾಪ್ಟಿಸ್ಟ್‌ನು ತಮ್ಮ ಪಾಪ ಜೀವನಗಳಿಂದ ಮುಕ್ತಗೊಳಿಸಲು ಒಬ್ಬ ಉದ್ಧಾರಕ ಬರುತ್ತಾನೆಂದು ಜನರಿಗೆ ಹೇಳಿದ್ದನು. ಜೀಸಸ್ ತನ್ನ 30ನೇ ವಯಸ್ಸಿನಲ್ಲಿ ಜಾನ್‌ಬ್ಯಾಪ್ಟಿಸ್ಟನಿಂದ ದೀಕ್ಷೆಯನ್ನು ಸ್ವೀಕರಿಸಿದನು. ನಂತರ ಜೀಸಸ್ ಹೊಸ ಜೀವನ ಪ್ರಾರಂಭಿಸಿ, ಸಂಚಾರಿ ಪ್ರಚಾರಕನಾದನು.

ತನ್ನ ಉಳಿದ ಸಮಯವನ್ನು ದೇವರ ಪಿತೃತ್ವವನ್ನು ಸಾರುತ್ತಾ, ಅದರಲ್ಲಿ ಜನರು ನ್ಯಾಯ, ಪ್ರೀತಿ ಮತ್ತು ಕರುಣೆಯನ್ನು ಪಡೆಯುವರೆಂದು ಹೇಳಿದನು. ಇವನ ಸರಳ ಬೋಧನೆಗಳಿಂದ ಜನರು ಇವನೆಡೆಗೆ ಆಕರ್ಷಿತರಾದರು. ಅವನು ಜುಡಿಯಾ ಮತ್ತು ಅದರ ಸುತ್ತ ಮುತ್ತ ತನ್ನ 12 ಜನ ಶಿಷ್ಯರೊಡನೆ ಪ್ರಯಾಣಿಸಿ, ತನ್ನ ಸಂದೇಶಗಳನ್ನು ದೃಷ್ಟಾಂತಗಳ ರೂಪದಲ್ಲಿ ತಿಳಿಸಿದನು. ಸರಳ ಜೀವನ ನಡೆಸುತ್ತಾ ಬಡವರೊಡನೆ ಮುಕ್ತವಾಗಿ ಬೆರೆತನು. ಆತ ಯಾವಾಗಲೂ ರೋಗಿಗಳಿಗೆ ಮತ್ತು ತುಳಿತಕ್ಕೊಳಗಾದವರಿಗೆ ಸಹಾಯ ಮಾಡುತ್ತಿದ್ದನು. ಈತನ ಅನುಯಾಯಿಗಳು ಇವನನ್ನು ದೇವದೂತನೆಂದು ಪರಿಗಣಿಸಿದರು. ಅವನ ಕೆಲವು ಬೋಧನೆಗಳು ಯಹೂದಿಗಳ ಕಾನೂನುಗಳನ್ನು ಪ್ರಶ್ನಿಸಿದವು. ಈತ ಮಾತನಾಡುತ್ತಿದ್ದ ಸ್ವರ್ಗ ಸಾಮ್ರಾಜ್ಯದ ಪರಿಶುದ್ಧ ಕಲ್ಪನೆಯನ್ನು ಅನೇಕರು ಪ್ರಾಪಂಚಿಕ ಸಾಮ್ರಾಜ್ಯವೆಂದು ತಪ್ಪಾಗಿ ಗ್ರಹಿಸಿಕೊಂಡರು. ಯೇಸು ತನ್ನನ್ನು ತಾನು ದೇವರ ಮಗನೆಂದು ಕರೆದುಕೊಂಡದ್ದು ಸಂಪ್ರದಾಯಸ್ಥ ಯಹೂದಿಗಳಿಗೆ ಕೋಪವನ್ನುಂಟುಮಾಡಿತು.

ತನ್ನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳಿಂದ ಜೀಸಸ್ **'ಕ್ರಿಸ್ತ'** ನಾದನು. ಕ್ರಿಸ್ತನೆಂದರೆ **'ಉದ್ಧಾರಕ'** ಅಥವಾ **'ದೀಕ್ಷಾವಂತ'** ಎಂದರ್ಥ. ಯೇಸುವಿನ ಜನಪ್ರಿಯತೆ ಸಂಪ್ರದಾಯಸ್ಥ ಯಹೂದಿಗಳಲ್ಲಿ ಎಚ್ಚರಿಕೆ ಮತ್ತು ಅನುಮಾನವನ್ನು ಉಂಟುಮಾಡಿತು. ಹೀಬ್ರುಗಳ ಅಂಧ ನಂಬಿಕೆಗಳನ್ನು ಖಂಡಿಸಿದನು. ನ್ಯಾಯಕ್ಕಾಗಿ ಪ್ರೀತಿ, ಮಾನವೀಯತೆ ಮತ್ತು ದೇವರ ಇಚ್ಛೆಗೆ ಶರಣಾಗುವವರಿಗೆ ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂದು ಹೇಳಿದನು. ಹಾಗೆಯೇ ಯಹೂದಿಗಳ ಧರ್ಮಗುರುಗಳನ್ನು ಅವರ ಐಹಿಕ ಜೀವನವನ್ನು ಟೀಕಿಸಲು ಹೆದರಲಿಲ್ಲ. ಆದ್ದರಿಂದ ಅವರು ಈತನ ಶತ್ರುಗಳಾದರು. ರಾಜನಾದ ಹೆರಾಡ್ ಅಥವಾ ಪಾಂಟಿಯಸ್ ಪಿಲೇಟ್ ಈತನನ್ನು ಸುಳ್ಳು ಪ್ರವಾದಿಯೆಂದು ಖಂಡಿಸಿದನು. ದುರಾದೃಷ್ಟವೆಂದರೆ ಈತನ ಜನಪ್ರಿಯತೆ ಮತ್ತು ಬೆಳವಣಿಗೆಯನ್ನು ರೋಮನ್ನರು ಸಾರ್ವಜನಿಕ ಶಾಂತಿಗೆ ಭಂಗವೆಂದು ಭಾವಿಸಿದರು. ಈತನನ್ನು ಪಿಲೇಟ್‌ನ ಮುಂದೆ ಕರೆತರಲಾಯಿತು. ರೋಮನ್ ಗೌರ್ನರ್ ಆಗಿದ್ದ, ಪಾಂಟಿಯಾಸ್ ಪಿಲೇಟ್ ಕ್ರಿಸ್ತನನ್ನು ಧರ್ಮನಿಂಧಕ ಮತ್ತು ದೇಶದ್ರೋಹಿ ಎಂದು ಆರೋಪಿಸಿ ಮರಣದಂಡನೆಗೊಳಪಡಿಸಿದನು.

ಯೇಸುವನ್ನು ಶಿಲುಬೆಗೇರಿಸಿದ್ದು:

ಜೀಸಸ್ ಭಗವಂತನ ಪಿತೃತ್ವ ಮತ್ತು ಮಾನವರ ಭ್ರಾತೃತ್ವವನ್ನು ಬೋಧಿಸಿದನು. ತಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಟ್ಟವರಿಗೆ ದೀಕ್ಷೆ ನೀಡಿದನು. ಜಹೋವ ದೇವರ ಪೂಜೆಯನ್ನು ಟೀಕಿಸಿದನು. ಸಾ.ಶ.30ರಲ್ಲಿ ಯೇಸುವು ಯಹೂದಿಗಳು ಜರುಸಲೇಂಗೆ ಭೇಟಿನೀಡುವ ಸಂದರ್ಭದಲ್ಲಿಯೇ ಅಲ್ಲಿಗೆ ಹೋದನು. ಇದು ವಿರೋಧಿಗಳಿಗೆ ಅವನ ವಿರುದ್ಧ ಪಿತೂರಿ ನಡೆಸಲು ಅವಕಾಶ ನೀಡಿತು. ಯೇಸು ಶಿಷ್ಯರೊಡನೆ ತನ್ನ ಕೊನೆಯ ಭೋಜನವನ್ನು ಮಾಡಿದನು. ಯೇಸುವು ಗೆತ್ಸೆಮನ್ ದೇವಾಲಯದ ಉದ್ಯಾನದಲ್ಲಿ ಪ್ರಾರ್ಥನೆ ಮಾಡುತ್ತಿದ್ದಾಗ ದೇವಾಲಯದ ಕಾವಲುಗಾರ ಅವನನ್ನು ಬಂಧಿಸಿದನು.

ಯೇಸುವಿನ ಮರಣ

ಜರುಸಲೇಂನ ಹೊರವಲಯದಲ್ಲಿರುವ ಗೋಲ್ಗೋಥಾ ಗುಡ್ಡದ **ಮೌಂಟ್ ಕ್ಯಾಲ್ವರಿ** ಎಂಬಲ್ಲಿಗೆ ಎಳೆತಂದನು. ಇಬ್ಬರು ಕಳ್ಳರೊಡನೆ ಶಿಲುಬೆಗೇರಿಸಿ, ಕೈಕಾಲುಗಳಿಗೆ ಮೊಳೆ ಹೊಡೆದು ಕೊಲ್ಲಲಾಯಿತು. ಇದನ್ನು ಯೇಸುವನ್ನು ಶಿಲುಬೆಗೇರಿಸಿದ್ದೆಂದು ಕರೆಯಲಾಗುತ್ತದೆ. ಬೈಬಲ್ ಪ್ರಕಾರ ಇಂತಹ ಕಠಿಣ ಪರಿಸ್ಥಿತಿ ಎದುರಾದರೂ ಯೇಸು ಸಿಟ್ಟಿಗೇಳಲಿಲ್ಲ. **'ತಂದೆಯೇ ಅವರನ್ನು ಕ್ಷಮಿಸು ತಾವೇನು ಮಾಡುತ್ತಿದ್ದೇವೆಂದು ಅರಿಯರು'** ಎಂದು ಹೇಳಿದನು. ಯೇಸುವಿನ ಈ ನುಡಿಯು ಎಲ್ಲಾ ಧರ್ಮೀಯರ ಮನಕಲಕುತ್ತದೆ. ಇಂತಹ ಉದಾತ್ತ ಗುಣಗಳಿಂದಲೇ ಯೇಸು ಅಜರಾಮರವಾಗಿರುವುದು.

ಯೇಸುವಿನ ಪುನರುತ್ಥಾನ

ಸಾ.ಶ. 30 ಏಪ್ರಿಲ್ 3 ಶುಕ್ರವಾರದಂದು ಯೇಸುವನ್ನು ಶಿಲುಬೆಗೇರಿಸಲಾಯಿತು. ಇದನ್ನು ಪ್ರತಿ ವರ್ಷ **'ಗುಡ್‌ಫ್ರೈಡೆ'** ಎಂದು ಆಚರಿಸಲಾಗುತ್ತದೆ. ಆತನ ಅನುಯಾಯಿಗಳು ಯೇಸುವಿನ ಸಮಾಧಿಯ ಬಳಿ ಶೋಕಪಡುತ್ತಿದ್ದರು. ಯೇಸುವಿನ ಮರಣದ ಮೂರು ದಿನಗಳ ನಂತರ (ಭಾನುವಾರ), ಯೇಸು ಜೀವಂತವಾಗಿ ಕಾಣಿಸಿಕೊಂಡನೆಂದು ನಂಬಿಕೆಯಿದೆ. ಈ ದಿನವನ್ನು 'ಈಸ್ಟರ್ ಭಾನುವಾರವೆ'ಂದು ಆಚರಿಸುತ್ತಾರೆ. ಇದನ್ನು ಯೇಸುವಿನ **ಪುನರುತ್ಥಾನ** (Resurrection) ಎಂದು ಕರೆಯಲಾಗುತ್ತದೆ. ಪುನರುತ್ಥಾನದ ನಂತರ ಯೇಸುವು ತನ್ನ ಶಿಷ್ಯರೊಡನೆ 40 ದಿನ ಉಳಿದು ನಂತರ ಸ್ವರ್ಗಸ್ಥನಾದನು. ಈ ಮೂಲಕ ತಾನು ದೇವರ ಮಗನೆಂದು ಸಾಬೀತುಪಡಿಸಿದನು. ಪುನರುತ್ಥಾನದ ದಿನವು ಪ್ರತಿಯೊಬ್ಬ ಕ್ರಿಶ್ಚಿಯನ್ನರ ಪಾಲಿಗೆ ಪ್ರಮುಖ ದಿನಗಳಲ್ಲೊಂದಾಗಿದೆ.

ಯೇಸು ಕ್ರಿಸ್ತನ ಬೋಧನೆಗಳು:

ಯೇಸು ಕ್ರಿಸ್ತನ ಬೋಧನೆಗಳು ಕ್ರೈಸ್ತ ಧರ್ಮದ ಪವಿತ್ರ ಗ್ರಂಥ **'ಬೈಬಲ್'** ನಲ್ಲಿವೆ. ಬೈಬಲ್‌ನಲ್ಲಿ ಎರಡು ಪ್ರಧಾನ ಭಾಗಗಳಿವೆ. ಅವುಗಳೆಂದರೆ,

1. ಹಳೆಯ ಒಡಂಬಡಿಕೆ 2. ಹೊಸ ಒಡಂಬಡಿಕೆ.

ಹಳೆಯ ಒಡಂಬಡಿಕೆಯು ಯಹೂದಿಗಳಿಗೆ ಪವಿತ್ರ ಗ್ರಂಥವಾಗಿದೆ. ಹೊಸ ಒಡಂಬಡಿಕೆಯಲ್ಲಿ ಯೇಸುವಿನ ನಾಲ್ಕು ಜನ ಶಿಷ್ಯರು ಸಂಗ್ರಹಿಸಿರುವ ದೈವವಾಣಿಗಳಿವೆ. ಅವರುಗಳೆಂದರೆ: ಸಂತ ಮಾರ್ಕ್, ಸಂತ ಲ್ಯೂಕ್, ಸಂತ ಮ್ಯಾಥ್ಯೂ ಮತ್ತು ಸಂತ ಜಾನ್. ಈ ಭಾಗದಲ್ಲಿ ಯೇಸುವಿನ ಜೀವನ ಮತ್ತು ವಾಣಿಗಳಿವೆ. ಅವುಗಳಲ್ಲಿ ಪ್ರಮುಖವಾದವು ಈ ರೀತಿ ಇವೆ:

1. ಯೇಸುವು ಏಕ ದೇವರ ಅಸ್ತಿತವನ್ನು ಬೋಧಿಸಿದನು. ನಾವೆಲ್ಲರು ಆತನ ಮಕ್ಕಳು, ದೇವರು ಸರ್ವವ್ಯಾಪಿ, ಸ್ವರ್ಗರಾಜ್ಯದ ಒಡೆಯ, ಆತ ದಯಾಮಯಿ.
2. ಯೇಸುವು ದೇವರ ಪಿತೃತ್ವ ಮತ್ತು ಮಾನವರ ಭ್ರಾತೃತ್ವ ಸಾರಿದನು. ಮಾನವರೆಲ್ಲರು ಸಹೋದರರಂತೆ ಬದುಕಬೇಕು ಮತ್ತು ದೇವರ ಬಗ್ಗೆ ದೃಢ ಭಕ್ತಿಯನ್ನು ಹೊಂದಿರಬೇಕು ಎಂದು ಹೇಳಿದನು.
3. ಯೇಸು ಕ್ಷಮಾಗುಣದಲ್ಲಿ ನಂಬಿಕೆಯನ್ನಿಟ್ಟಿದ್ದನು. ಮಾನವ ಕುಲದೆಡೆಗಿನ ಪ್ರೀತಿಯನ್ನು ಒತ್ತಿ ಹೇಳಿದನು. ನ್ಯಾಯ, ನಮ್ರತೆ ಮತ್ತು ಕರ್ತವ್ಯಕ್ಕೆ ಒತ್ತು ನೀಡಿದನು. ನಿನ್ನ ನೆರೆಹೊರೆಯವರನ್ನು ಪ್ರೀತಿಸು, ನಿನ್ನ ಶತ್ರುಗಳನ್ನೂ ಪ್ರೀತಿಸು. ನಿನಗೆ ಕೇಡು ಬಯಸುವವನಿಗೂ ಒಳ್ಳೆಯದನ್ನು ಮಾಡು. ನಿನ್ನನ್ನು ಹಿಂಸಿಸುವವರ ಬಗ್ಗೆ ದೇವರಲ್ಲಿ ಮೊರೆಯಿಡು. ನಿನ್ನನ್ನು ದ್ವೇಷಿಸುವವರಿಗೆ ಒಳಿತನ್ನು ಮಾಡುವಂತೆ ಭಗವಂತನಲ್ಲಿ ಪ್ರಾರ್ಥಿಸು ಎಂದು ಹೇಳಿದನು.
4. ಯೇಸುವಿನ ಪ್ರಕಾರ ದಯೆ, ಪರಿಶುದ್ಧ ಆತ್ಮ, ಪ್ರಾಮಾಣಿಕತೆ ಮತ್ತು ಕರ್ತವ್ಯದಲ್ಲಿ ಬದ್ಧತೆಗಳು ಸ್ವರ್ಗಕ್ಕೆ ದಾರಿ.
5. ಒಬ್ಬ ವ್ಯಕ್ತಿ ಪರಿಪೂರ್ಣನಾಗಲು ಪ್ರಾಪಂಚಿಕ ಶ್ರೀಮಂತಿಕೆಯನ್ನು ತ್ಯಜಿಸಬೇಕು. ಕ್ಷಮಾಗುಣವುಳ್ಳವರು ಸ್ವರ್ಗ ಸಾಮ್ರಾಜ್ಯ ಸೇರುವರು. ಪ್ರತಿಯೊಬ್ಬರು ಈ ಸರಳ ಆಚರಣೆಗಳನ್ನು ಅನುಸರಿಸಬೇಕು.
6. ಯೇಸುವಿನ ಪ್ರಕಾರ 'ಜನಸೇವೆಯೇ ಭಗವಂತನ ಸೇವೆ'. ಅಂತಹ ಸೇವೆ ಆಧ್ಯಾತ್ಮಿಕ ಉನ್ನತಿಗೆ ಸಾಧನ ಎಂದಿದ್ದಾನೆ.
7. ಯೇಸು ತನ್ನ ಪ್ರಸಿದ್ಧವಾದ ಉಪದೇಶ 'ಪರ್ವತ ಪ್ರವಚನ'ದಲ್ಲಿ (Sermon on the mount) ತನ್ನ ಅನುಯಾಯಿಗಳಿಗೆ ಈ ರೀತಿ ಹೇಳಿದ್ದಾನೆ:
    1. ಬಡವರು ಮತ್ತು ನಿರ್ಗತಿಕರಿಗೆ ಈ ರೀತಿ ಉಪದೇಶಿಸುತ್ತಾನೆ. ದರಿದ್ರರೇ ಭಾಗ್ಯಶಾಲಿಗಳು, ದೇವರ ರಾಜ್ಯವು ಅವರದೇ ಆಗಿರುತ್ತದೆ.
    2. ದುಃಖಿಗಳೇ ಭಾಗ್ಯಶಾಲಿಗಳು ಅವರು ಭಗವಂತನಿಂದ ಸಂತೈಸಲ್ಪಡುತ್ತಾರೆ.
8. ಪ್ರೀತಿ, ಕರುಣೆಯ ಸಂದೇಶ ನೀಡಿದ ಯೇಸು ವ್ಯಭಿಚಾರ ಮಾಡದಿರುವುದು, ಕದಿಯದಿರುವುದು, ಹಿರಿಯರನ್ನು ಗೌರವಿಸುವುದು ಸದ್ಗತಿಗೆ ಸರಳ ಮಾರ್ಗಗಳು ಎಂದು ತಿಳಿಸಿದ್ದಾನೆ.
9. ಯೇಸುವು ಸ್ವರ್ಗ ರಾಜ್ಯದಲ್ಲಿ ನಂಬಿಕೆ ಹೊಂದಿದ್ದನು. ದೇವರ ರಾಜ್ಯದಲ್ಲಿ ಯಾವುದೇ ತಾರತಮ್ಯವಿಲ್ಲ. ಅಂದರೆ, ಬಡವ –ಶ್ರೀಮಂತ, ಗುಲಾಮ–ಅಸಹಾಯಕ, ಉಚ್ಚ–ನೀಚ, ಅನಾಥ–ಅಸ್ಪೃಶ್ಯರ ನಡುವೆ ಯಾವುದೇ ತಾರತಮ್ಯವಿರುವುದಿಲ್ಲ ಎಂದಿದ್ದಾನೆ.
10. ಮನುಷ್ಯನಿಗೆ ಕ್ಷಮಾಗುಣ ಬಹಳ ಮುಖ್ಯವಾದುದು. ಕ್ಷಮಾಗುಣವಿದ್ದವನು ಸದಾ ಭಗವಂತನಿಗೆ ಹತ್ತಿರವಾಗಿರುತ್ತಾನೆ.

ಹೀಗೆ ಯೇಸು ಸರಳವಾದ ತತ್ವಗಳನ್ನು ಉಪದೇಶಿಸಿದನು. ಅವು ಮೋಕ್ಷ ಸಾಧಿಸಲು ಸಹಾಯಕವಾಗಿವೆ.

ಕ್ರೈಸ್ತ ಧರ್ಮದ ಪ್ರಚಾರ:

ಈ ಧರ್ಮ ತನ್ನ ಸರಳತೆಯಿಂದ ಜಗತ್ತಿನಾದ್ಯಂತ ಜನಪ್ರಿಯಗೊಂಡಿದೆ. ಯೇಸುವಿನ ಮರಣದ ನಂತರ ಆತನ ಶಿಷ್ಯರು ಈ ಧರ್ಮ ಪ್ರಚಾರ ಕೈಗೊಂಡರು.

1. **ಯೇಸುವಿನ ವ್ಯಕ್ತಿತ್ವ:** ಯೇಸು ತನ್ನ ಸರಳತೆಯಿಂದ ಜನಸಾಮಾನ್ಯರನ್ನು ಆಕರ್ಷಿಸಿದನು. ಬಡವರು. ಪಾಪಿಗಳು ಮತ್ತು ನೊಂದವರ ಬಗ್ಗೆ ಇದ್ದ ಕಳಕಳಿ ಮತ್ತು ಆತನ ಆಧ್ಯಾತ್ಮಿಕ ಶಕ್ತಿಯು ಈ ಧರ್ಮ ಪ್ರಚಾರಕ್ಕೆ ಸಹಾಯಕವಾಯಿತು.

2. **ಸರಳ ತತ್ವಗಳು:** ಜೀಸಸ್‌ನ ತತ್ವಗಳಾದ ಸಹೋದರತ್ವ, ಅನುಕಂಪ, ಕ್ಷಮಾಗುಣ ಮತ್ತು ಸ್ವರ್ಗರಾಜ್ಯದಲ್ಲಿ ನಂಬಿಕೆ ಇವು ಯೇಸುವನ್ನು ಬಡವರು ಮತ್ತು ಗುಲಾಮರಲ್ಲಿ ಜನಪ್ರಿಯನನ್ನಾಗಿಸಿದವು.

3. **ಯೇಸುವಿನ ಶಿಷ್ಯರ ಪಾತ್ರ:** ಯೇಸುವಿನ ತತ್ವ್ವಗಳನ್ನು ಜನಪ್ರಿಯಗೊಳಿಸಿ, ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡುವಲ್ಲಿ ಈತನ 12 ಜನ ಶಿಷ್ಯರು ಪ್ರಮುಖ ಪಾತ್ರವಹಿಸಿದರು. ಅವರಲ್ಲಿ ಬಹಳ ಪ್ರಮುಖರೆಂದರೆ **ಸಂತ ಪೀಟರ್** ಮತ್ತು **ಸಂತ ಪಾಲ್**. **ಸಂತಪೀಟರ್‌ನು** ರೋಮ್‌ನಲ್ಲಿ ಚರ್ಚ್ ನಿರ್ಮಿಸಿದನು ಮತ್ತು ಪ್ರಥಮ ಪೋಪ್‌ನಾದ ಈತನು ರೋಮ್ ಮತ್ತು ಏಷ್ಯಾ ಮೈನರ್‌ನಲ್ಲಿ ಕ್ರೈಸ್ತ ಧರ್ಮವನ್ನು ಹರಡಿದನು. ಈತನು ರೋಮ್‌ನ ಚಕ್ರವರ್ತಿ ನಿರೋನಿಂದ ಕೊಲ್ಲಲ್ಪಟ್ಟನು. ಹೀಗೆ ಇವನು ಧರ್ಮಕ್ಕಾಗಿ ಹುತಾತ್ಮನಾದನು. ನಂತರ ಸಂತ ಪಾಲ್‌ನು ಎರಡನೇ ಪೋಪ್ ಆದನು. ಇವನು ಕ್ರೈಸ್ತ ಧರ್ಮವನ್ನು ಗ್ರೀಕ್, ರೋಮ್, ಮ್ಯಾಸಿಡೋನಿಯಾ, ಅಥೆನ್ಸ್, ಫಿಲಿಪಿ ಮತ್ತು ಡೆಮಾಸ್ಕಸ್‌ಗಳಲ್ಲಿ ಪ್ರಚಾರಮಾಡಿದನು. ಕ್ರಿಸ್ತನ ತತ್ವ್ವಗಳನ್ನು ಪ್ರಚಾರ ಮಾಡಲು ಚರ್ಚುಗಳನ್ನು ಸ್ಥಾಪಿಸಿದನು. ಆದ್ದರಿಂದ ಈತನನ್ನು **'ದ್ವಿತೀಯ ಯೇಸು'** ಎಂದು ಕರೆಯಲಾಗಿದೆ. ಪ್ರಥಮ ಪೋಪ್ ಹುತಾತ್ಮನಾದದ್ದು, ಸಂತ ಮ್ಯಾಥ್ಯೂ, ಸಂತ ಮಾರ್ಕ್, ಸಂತ ಲ್ಯೂಕ್ ಮತ್ತು ಸಂತ ಜಾನ್‌ಗೆ ಪ್ರೇರಣೆಯನ್ನು ನೀಡಿತು. ಇವರು ಕ್ರಿಸ್ತನ ಸುವಾರ್ತೆಗಳನ್ನು ಸಂಗ್ರಹಿಸಿದರು. ಇಂಗ್ಲೆಂಡ್‌ನಲ್ಲಿ ಸಂತ ಅಗಸ್ಟಿನ್, ಐರ್ಲೆಂಡ್‌ನಲ್ಲಿ ಸಂತ ಪ್ಯಾಟ್ರಿಕ್ ಮತ್ತು ಜರ್ಮನಿಯಲ್ಲಿ ಸಂತ ಬೋನಿಫೇಸ್‌ರ ಶ್ರಮದಿಂದಾಗಿ ಕ್ರೈಸ್ರ ಧರ್ಮ ಪ್ರಚಾರವಾಯಿತು.

12 ಜನ ಶಿಷ್ಯರು : ಪೀಟರ್, ಪಾಲ್, ಆಂಡ್ರ್ಯೂ, ಜಾನ್, ಥಾಮಸ್, ಮ್ಯಾಥ್ಯು, ಮಾರ್ಕ್, ಲ್ಯೂಕ್, ಜುಡಾ, ಜೇಮ್ಸ್, ಸೈಮನ್ ಮತ್ತು ಭಾರ್ಥಲೋಮಿಯೋ.

4. **ಕ್ರೈಸ್ತರ ದೃಢ ನಿರ್ಧಾರ:** ರೋಮನ್ ಚಕ್ರವರ್ತಿಯನ್ನು ದೇವರೆಂದು ಆರಾಧಿಸುವುದನ್ನು ಕ್ರೈಸ್ತರು ನಿರಾಕರಿಸಿದರು. ಅವರು ಸಾಮ್ರಾಟನ ದೈವತ್ವವನ್ನು ನಂಬಲಿಲ್ಲ. ನೀರೋ, ಟ್ರೊಜನ್, ಮಾರ್ಕಸ್, ಅರೀಲಿಯಾಸ್, ಡೇಸಿಯಸ್ ಮತ್ತು ಡಿಯೋಕ್ಲೀಷಿಯನ್‌ರ ಕಾಲದಲ್ಲಿ ಕ್ರೈಸ್ತರನ್ನು ನಿರ್ದಯವಾಗಿ ಕೊಲ್ಲಲಾಯಿತು. ಸಾ.ಶ 64ರಲ್ಲಿ ರೋಮಿನಲ್ಲಿ ಅಗ್ನಿ ದುರಂತ ಸಂಭವಿಸಿತು. ಈ ಘಟನೆಗೆ ಕ್ರೈಸ್ತರು ಕಾರಣರೆಂದು ನೀರೋ ಆಪಾದಿಸಿದನು. ಅನೇಕ ಕ್ರೈಸ್ತರ ಹತ್ಯಾಕಾಂಡವೇ ನಡೆಯಿತು. ನೀರೋ ಮತ್ತು ಡಿಯೋಕ್ಲೀಷಿಯನ್ ಕಾಲದಲ್ಲಿ ಸಾವಿರಾರು ಕ್ರೈಸ್ತರನ್ನು ಹಸಿದ ಸಿಂಹಗಳಿಗೆ ಆಹಾರವಾಗಿ ಎಸೆದರು. ಆದರೂ ಕ್ರೈಸ್ತ ಧರ್ಮಕ್ಕೆ ಧಕ್ಕೆಯಾಗಲಿಲ್ಲ. ಕ್ರೈಸ್ತ ಧರ್ಮವು ಕ್ರೌರ್ಯಕ್ಕೆ ಪ್ರೀತಿ, ನಿರ್ದಯೆಗೆ ದಯೆಯನ್ನು ಬೋಧಿಸುತ್ತದೆ. ರೋಮ್ ಸಾಮ್ರಾಜ್ಯ ಈ ಧರ್ಮವನ್ನು ನಾಶಪಡಿಸಲಾಗದೆ ಅದನ್ನೆ ರಾಜಧರ್ಮವಾಗಿ ಸ್ವೀಕರಿಸಿತು.

5. **ಚರ್ಚ್‌ನ ಪಾತ್ರ:** ಕ್ರೈಸ್ತಧರ್ಮದ ಪ್ರಚಾರ ಮತ್ತು ಸಂರಕ್ಷಣೆಯಲ್ಲಿ ಚರ್ಚ್ ಮುಖ್ಯವಾದ ಸಂಸ್ಥೆಯಾಯಿತು. ಜನರು ಚರ್ಚ್‌ನ್ನು ಸ್ವರ್ಗಕ್ಕೆ ದಾರಿ ಮತ್ತು ಪೋಪ್‌ನನ್ನು ದೇವರ ಪ್ರತಿನಿಧಿ ಎಂದು ನಂಬಿದರು. ಹೀಗಾಗಿ ಹಿಂಸೆಗಳ ನಡುವೆಯೂ ಕ್ರೈಸ್ತ ಧರ್ಮ ಜನಪ್ರಿಯತೆ ಪಡೆಯಿತು.

6. **ಕಾನ್‌ಸ್ಟಾಂಟೈನ್‌ನ ಪಾತ್ರ:** ಕಾನ್‌ಸ್ಟಾಂಟೈನ್ ರೋಮಿನ ಚಕ್ರವರ್ತಿಯಾದ ಮೇಲೆ ಕ್ರಿಶ್ಚಿಯನ್ನರಿಗೆ ನೀಡುತ್ತಿದ್ದ ಕಿರುಕುಳ ಕಡಿಮೆಯಾಯಿತು. ಈತ ಕ್ರೈಸ್ತಧರ್ಮವನ್ನು ಮಾನ್ಯಮಾಡಿದನು. ಅವನು ಕಾನ್ಸ್‌ಸ್ಟಾಂಟಿನೋಪಲ್

ಎಂಬ ಹೊಸ ನಗರವನ್ನು ನಿರ್ಮಿಸಿ ಅದನ್ನು ವರ್ಜಿನ್ ಮೇರಿಗೆ ಅರ್ಪಿಸಿದನು. ಪೂರ್ವದಲ್ಲಿ ಕ್ರೈಸ್ತ ಧರ್ಮ ಪ್ರಚಾರಕ್ಕೆ ಪಾದ್ರಿಗಳಿಗೆ ಅನುಮತಿ ನೀಡಿದನು. ರೋಮಿನ ಸೆಂಟ್ ಪೀಟರ್ ಸಮಾಧಿಯ ಮೇಲೆ ಪೀಟರ್ ಚರ್ಚ್ ನಿರ್ಮಿಸಿದನು. ಸ್ಯಾ.ಶ 313 ರಲ್ಲಿ **ಮಿಲಾನ್ ಶಾಸನ** (Edict of Milan) ಹೊರಡಿಸಿ ಕ್ರೈಸ್ತ ಧರ್ಮವನ್ನು ರೋಮನ್ ಸಾಮ್ರಾಜ್ಯದ ಶಾಸನಬದ್ಧ ಧರ್ಮವೆಂದು ಸಾರಿದನು. ಬಹಿರಂಗವಾಗಿ ಕ್ರೈಸ್ತಧರ್ಮ ಸ್ವೀಕರಿಸಿದನು. 4ನೇ ಶತಮಾನದಲ್ಲಿ ಅಧಿಕಾರಕ್ಕೆ ಬಂದ ಥಿಯೋಡಿಸಿಯಸ್‌ನ (Theodosias) ಕಾಲದಲ್ಲಿ ಕ್ರೈಸ್ತ ಧರ್ಮ ರೋಮನ್ ಸಾಮ್ರಾಜ್ಯದಲ್ಲಿ ರಾಜ್ಯ ಧರ್ಮವಾಯಿತು. ಈತ ರೋಮನ್ ದೇವತೆಗಳ ಪೂಜೆಯನ್ನು ನಿಷೇಧಿಸಿದನು.

ಸಾ.ಶ. 5ನೇಶತಮಾನದ ವೇಳೆಗೆ ಇಡೀ ಯೂರೋಪ್ ಕ್ರೈಸ್ತೀಕರಣಗೊಂಡಿತು. ರೋಮ್ ಪೋಪ್‌ನ ಕೇಂದ್ರವಾಯಿತು. ಪೋಪ್ ಅದರ ಆಧ್ಯಾತ್ಮಿಕ ಮುಖ್ಯಸ್ಥನಾದನು.

ಭಾರತದಲ್ಲಿ ಕ್ರೈಸ್ತ ಧರ್ಮ: ಕ್ರೈಸ್ತಧರ್ಮ ಸುಮಾರು 2000 ವರ್ಷಗಳಷ್ಟು ಹಿಂದೆಯೇ ಭಾರತಕ್ಕೆ ಬಂದಿತು. ಯೇಸುವಿನ 12 ಶಿಷ್ಯರಲ್ಲಿ ಒಬ್ಬನಾದ ಸಂತ ಥಾಮಸ್‌ನು ಸಾ.ಶ. 78 ರಲ್ಲಿ ಯೇಸುವಿನ ಬೋಧನೆಗಳ ಪ್ರಚಾರಕ್ಕಾಗಿ ಭಾರತಕ್ಕೆ ಬಂದನು ಮತ್ತು ಮಲಬಾರ್ ತೀರದಲ್ಲಿ ತನ್ನ ಕಾರ್ಯ ನಿರ್ವಹಿಸಿದನು. ನಂತರ ಆಧುನಿಕ ಕಾಲದಲ್ಲಿ ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಯೂರೋಪಿಯನ್ ನಾವಿಕರೊಡನೆ ಯಾವಾಗಲೂ ಕ್ರೈಸ್ತ ಮಿಷನರಿಗಳು ಜೊತೆಗೂಡಿದರು. 16ನೇ ಶತಮಾನದಲ್ಲಿ ಕೇರಳ, ಗೋವಾ, ತಮಿಳುನಾಡುಗಳಲ್ಲಿ ಕ್ರೈಸ್ತ ಧರ್ಮ ಪ್ರಚಾರ ಮಾಡಿದ ಸಂತ ಫ್ರಾನ್ಸಿಸ್ ಕ್ಸೇವಿಯರ್ ಉಲ್ಲೇಖನೀಯನಾಗಿದ್ದಾನೆ. ಈತನು ಭಾರತದಲ್ಲಿ ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡಲು ಗೋವಾದಲ್ಲಿ ಸೈಂಟ್ ಕ್ಸೇವಿಯರ್ ಚರ್ಚ್‌ನ್ನು ನಿರ್ಮಿಸಿದನು.

ಕ್ರೈಸ್ತಧರ್ಮದ ಪಂಥಗಳು: ನಂತರ ಕ್ರೈಸ್ತ ಧರ್ಮದ ಇತಿಹಾಸದಲ್ಲಿ ಕಾಲಾಂತರದಲ್ಲಿ ಒಂದು ಮುಖ್ಯ ಬೆಳವಣಿಗೆ ಉಂಟಾಯಿತು. ಇದನ್ನು ಧರ್ಮ ಸುಧಾರಣಾ ಚಳುವಳಿ ಎಂದು ಕರೆಯುತ್ತಾರೆ. ಇದೊಂದು ರೋಮನ್ ಕ್ಯಾಥೋಲಿಕ್ ಚರ್ಚ್‌ನಲ್ಲಿದ್ದ ಹಲವು ದೋಷಗಳನ್ನು ನಿವಾರಿಸಲು ರೋಮಿನ ಚರ್ಚಿನ ಒಳಗೆ ನಡೆದ ಧಾರ್ಮಿಕ ಚಳುವಳಿ. ಈ ಚಳವಳಿಯು ಜರ್ಮನಿಯಲ್ಲಿ ಮಾರ್ಟಿನ್‌ಲೂಥರ್‌ನಿಂದ ಪ್ರಾರಂಭವಾಯಿತು. ಇದರಿಂದ ಕ್ರೈಸ್ತ ಧರ್ಮ 2 ಪಂಥಗಳಾಗಿ ಒಡೆದು ಹೋಯಿತು. ಅವುಗಳೆಂದರೆ:

1. ರೋಮನ್ ಕ್ಯಾಥೋಲಿಕ್‌ರು 2. ಪ್ರೊಟೆಸ್ಟಂಟರು.

1. **ರೋಮನ್ ಕ್ಯಾಥೋಲಿಕ್‌ರು** ಪೋಪ್‌ಗಳಲ್ಲಿ ನಂಬಿಕೆ ಇಡುತ್ತಾರೆ ಮತ್ತು ಅವರು ಚರ್ಚ್‌ನ್ನು ಸ್ವರ್ಗಕ್ಕೆ ದಾರಿ ಮತ್ತು ಪೋಪ್‌ನನ್ನು ದೇವರ ಪ್ರತಿನಿಧಿ ಎಂದೂ ನಂಬುತ್ತಾರೆ.
2. ರೋಮನ್ ಕ್ಯಾಥೋಲಿಕ್ ಚರ್ಚಿನ ದೋಷಗಳನ್ನು ವಿರೋಧಿಸಿದ ಕ್ರೈಸ್ತರು ಮತ್ತು ಮಾರ್ಟಿನ್ ಲೂಥರ್‌ನ ಅನುಯಾಯಿಗಳನ್ನು **ಪ್ರೊಟೆಸ್ಟಂಟರು** ಎಂದು ಕರೆಯಲಾಗುತ್ತದೆ.

ಹಬ್ಬಗಳು:

ಮೂರು ದಿನಗಳನ್ನು ಕ್ರಿಶ್ಚಿಯನ್‌ರು ಹಬ್ಬದ ದಿನಗಳಾಗಿ ಆಚರಿಸುತ್ತಾರೆ. ಅವುಗಳೆಂದರೆ,

1. ಯೇಸು ಜನಿಸಿದ ದಿನ– ಕ್ರಿಸ್‌ಮಸ್

2. ಕ್ರಿಸ್ತನನ್ನು ಶಿಲುಬೆಗೇರಿಸಿದ ದಿನ–ಗುಡ್ ಫ್ರೈಡೆ

3. ಕ್ರಿಸ್ತನು ಸಮಾಧಿಯಿಂದ ಎದ್ದು ತನ್ನವರಿಗೆ ದರ್ಶನ ನೀಡಿ ಸಾಂತ್ವನ ಹೇಳಿದ ದಿನ–ಈಸ್ಟರ್ ಸಂಡೆ.

ಕ್ರೈಸ್ತ ಧರ್ಮದ ಪ್ರಭಾವ : ಈ ಧರ್ಮ ಯಹೂದಿಗಳಿಗೆ ಸಾಂಸ್ಕೃತಿಕ ಮತ್ತು ಧಾರ್ಮಿಕ ನೆಲೆಗಟ್ಟನ್ನು ನೀಡಿತು. ಇದರ ಪ್ರಭಾವವನ್ನು ಜೀವನದ ಎಲ್ಲಾ ಆಯಾಮಗಳಲ್ಲಿಯೂ ಕಾಣಬಹುದು. ಕ್ರೈಸ್ತ ಧರ್ಮ ಜನರನ್ನು ಹೆಚ್ಚು ನಾಗರೀಕರನ್ನಾಗಿಸಿತು. ಇದು ಅವರಲ್ಲಿ ದಯೆ, ಮಾನವೀಯತೆ ಮತ್ತು ಮೃದುತ್ವದ ಮಹಾನ್ ಗುಣಗಳನ್ನು ಬೋಧಿಸಿತು. ಇದು ವಿಶ್ವ ಶಾಂತಿ ಮತ್ತು ಸಹಬಾಳ್ವೆಗೆ ಸಹಕಾರಿಯಾಯಿತು. ಭಾನುವಾರ ಮತ್ತು ವಿಶೇಷ ಹಬ್ಬಗಳನ್ನು ರಜಾದಿನಗಳನ್ನಾಗಿ ಪರಿಗಣಿಸಲಾಗಿದೆ. ಶ್ರಮಗೌರವ ಸಂಸ್ಕೃತಿ ಬೆಳೆಸಿತು. ಬಡವರು, ರೋಗಿಗಳು ಮತ್ತು ಅಸಹಾಯಕರ ಬಗ್ಗೆ ಅಪಾರ ಕಳಕಳಿಯು ಮೂಡಿತು. ಅಪಾರ ಸಂಖ್ಯೆಯಲ್ಲಿ ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳು ನಿರ್ಮಾಣವಾದವು. ಕ್ರಿಸ್ತನ ಹೆಸರಿನಲ್ಲಿ ಸಾ.ಶ 1ರಿಂದ ಶಕ ವರ್ಷ ಪ್ರಾರಂಭವಾಯಿತು. ಗ್ರೀಕೋ ರೋಮನ್ ಶೈಲಿಯಲ್ಲಿ ಸುಂದರವಾದ ಚರ್ಚುಗಳು ಮತ್ತು ಕೆಥೆಡ್ರಲ್‌ಗಳು ನಿರ್ಮಾಣವಾದವು. ಈ ಧರ್ಮವು ಸ್ತ್ರೀಯರ ಸ್ಥಾನಮಾನಗಳನ್ನೂ ಹೆಚ್ಚಿಸಿತು.

ಪದಕೋಶ

1) **ಪೇಗನ್ ದೇವರುಗಳು:** ಯಹೂದಿಗಳು ಆರಾಧಿಸುತ್ತಿದ್ದ ರೋಮನ್ ದೇವಾನುದೇವತೆಗಳೇ ಪೇಗನ್‌ಗಳು, ಅವುಗಳೆಂದರೆ ಜುಪಿಟರ್–ಆಕಾಶದೇವರು ಮತ್ತು ಮುಖ್ಯವಾದ ಪುರುಷದೇವರು, ಜುನೊ–ಮಾತೃದೇವತೆ, 'ಮಾರ್ಸ್–ಯುದ್ಧ ದೇವತೆ, ವೀನಸ್–ಪ್ರೀತಿದೇವತೆ, ನೆಪ್ಚೂನ್–ಸಮುದ್ರದೇವತೆ.

2) **ಗಾಸ್ಪೆಲ್:** ಸುವಾರ್ತೆಗಳು, ಹೊಸ ಒಡಂಬಡಿಕೆಯಲ್ಲಿರುವ ಯೇಸುವಿನ ಉಪದೇಶಗಳು.

3) **ಬ್ಯಾಪ್‌ಟೈಸಡ್:** ಜೀಸಸ್ ಆಧ್ಯಾತ್ಮ ಸ್ವೀಕರಿಸಿದ ಪ್ರಕ್ರಿಯೆ.

ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಒಂದು ಅಂಕ)

1) ಪ್ರಪಂಚದ ಅತಿ ದೊಡ್ಡ ಧರ್ಮ ಯಾವುದು?

2) ಕ್ರೈಸ್ತ ಧರ್ಮದ ಸ್ಥಾಪಕ ಯಾರು?

3) ಕ್ರೈಸ್ತ ಧರ್ಮದ ಚಿಹ್ನೆ ಯಾವುದು?

4) ಯಹೂದಿಗಳ ಧಾರ್ಮಿಕ ಕೇಂದ್ರ ಯಾವುದಾಗಿತ್ತು?

5) ಯಹೂದಿಗಳು ಪೂಜಿಸುತ್ತಿದ್ದ ದೇವರು ಯಾವುದು?

6) ಯಹೂದಿಗಳ ಧಾರ್ಮಿಕ ಗ್ರಂಥ ಯಾವುದು?

7) ಯಹೂದಿಗಳ ಧಾರ್ಮಿಕ ಪ್ರವಾದಿ ಯಾರು?

8) ಯೇಸು ಕ್ರಿಸ್ತ ಯಾವಾಗ ಜನಿಸಿದನು?

9) ಯೇಸು ಎಲ್ಲಿ ಜನಿಸಿದನು?

10) ಕ್ರಿಸ್ತ ಎಂದರೇನು?

11) ಯೇಸುವನ್ನು ಯಾವ ಬೆಟ್ಟದ ಮೇಲೆ ಶಿಲುಬೆಗೇರಿಸಲಾಯಿತು?

12) ಈಸ್ಟರ್ ಭಾನುವಾರ ಎಂದರೇನು?

13) ಯೇಸುವಿನ ಭೋಧನೆಗಳು ಬೈಬಲ್‌ನ ಯಾವ ಭಾಗದಲ್ಲಿದೆ?

14) ಮಿಲಾನ್ ಶಾಸನ ಎಂದರೇನು?

15) ಕ್ರೈಸ್ತ ಧರ್ಮ ಸ್ವೀಕರಿಸಿದ ಮೊದಲ ರೋಮನ್ ಚಕ್ರವರ್ತಿ ಯಾರು?

16) ಕ್ರೈಸ್ತ ಧರ್ಮವನ್ನು ರಾಷ್ಟ್ರೀಯ ಧರ್ಮವೆಂದು ಘೋಷಿಸಿದ ರೋಮನ್ ಚಕ್ರವರ್ತಿ ಯಾರು?

17) ಭಾರತಕ್ಕೆ ಕ್ರೈಸ್ತ ಧರ್ಮ ಪ್ರಚಾರ ಮಾಡಲು ಬಂದ ಪ್ರಥಮ ಕ್ರೈಸ್ತ ಪಾದ್ರಿ ಯಾರು?

ಕೆಳಗಿನವುಗಳಿಗೆ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಎರಡು ಅಂಕಗಳು)

1) ಯೇಸುವಿನ ತಂದೆ ತಾಯಿಗಳು ಯಾರು?

2) ಬೈಬಲ್‌ನ ಎರಡು ಭಾಗಗಳಾವುವು?

3) ಯೇಸುವನ್ನು ಯಾವಾಗ ಶಿಲುಬೆಗೇರಿಸಲಾಯಿತು? ಆಗಿನ ರೋಮನ್ ಗೌರ್ನರ್ ಯಾರು?

4) ಯೇಸುವಿನ ಪುನರುತ್ಥಾನ ಎಂದರೇನು?

5) ಯೇಸುವಿನ ಇಬ್ಬರು ಪ್ರಮುಖ ಶಿಷ್ಯರನ್ನು ಹೆಸರಿಸಿ

6) ಕ್ರಿಶ್ಚಿಯನ್ನರನ್ನು ಹಿಂಸೆಗೊಳಪಡಿಸಿದ ಇಬ್ಬರು ರೋಮನ್ ಚಕ್ರವರ್ತಿಗಳು ಯಾರು?

7) ಮಿಲಾನ್ ಶಾಸನವನ್ನು ಯಾರು ಹೊರಡಿಸಿದರು ಮತ್ತು ಯಾವಾಗ?

8) ಕ್ರೈಸ್ತ ಧರ್ಮಕ್ಕೆ ರಾಜಾಶ್ರಯ ನೀಡಿದ ಇಬ್ಬರು ರೋಮನ್ ಚಕ್ರವರ್ತಿಗಳು ಯಾರು?

9) ಕ್ರಿಶ್ಚಿಯನ್ನರ ಪ್ರಮುಖ ಹಬ್ಬಗಳಾವುವು?

10) ಕ್ರೈಸ್ತ ಧರ್ಮದ ಎರಡು ಪಂಗಡಗಳಾವುವು?

ಕೆಳಗಿನವುಗಳಿಗೆ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಐದು ಅಂಕಗಳು)

1) ಕ್ರಿಸ್ತನ ಜೀವನ ಚರಿತ್ರೆ ಬಗ್ಗೆ ಬರೆಯಿರಿ

2) ಯೇಸು ಕ್ರಿಸ್ತನ ಬೋಧನೆಗಳನ್ನು ವಿವರಿಸಿ

3) ಕ್ರೈಸ್ತ ಧರ್ಮದ ಪ್ರಚಾರಕ್ಕೆ ಕಾರಣಗಳಾವುವು?

5.2 ಇಸ್ಲಾಂ ಧರ್ಮ



ಕಾಬಾ ಶಿಲೆ

ಹಿನ್ನೆಲೆ: ಇಸ್ಲಾಂ, ಜಗತ್ತಿನ ಪ್ರಮುಖ ಧರ್ಮಗಳಲ್ಲಿ ಒಂದು. ಈ ಧರ್ಮ ಏಷ್ಯಾ ಖಂಡದ ನೈರುತ್ಯ ಭಾಗದಲ್ಲಿರುವ ಅರೇಬಿಯಾದಲ್ಲಿ ಉದಯಿಸಿತು. ಅರಬ್ಬರು ಈ ನೆಲದ ಮೂಲ ನಿವಾಸಿಗಳು. ಇದು ಮರುಭೂಮಿಯಾಗಿದೆ. ಮೆಕ್ಕಾ ಮತ್ತು ಮದೀನ ಮಾತ್ರ ಇಲ್ಲಿನ ಎರಡು ಮುಖ್ಯ ನಗರಗಳಾಗಿದ್ದವು. ಮಳೆ ಬೀಳುವುದು ಕಡಿಮೆಯಾದ್ದರಿಂದ ವ್ಯವಸಾಯ ಸಾಧ್ಯವಿರಲಿಲ್ಲ. ಹಾಗಾಗಿ 80% ರಷ್ಟು ಅರಬ್ಬರು ಅಲೆಮಾರಿಗಳಾಗಿದ್ದರು. ಅವರು ಒಂಟೆಗಳನ್ನು ಸಾಕುತ್ತಿದ್ದರು. ಅವು ಹಾಲು ಮತ್ತು ಮಾಂಸವನ್ನು ಕೊಡುತ್ತಿದ್ದವು. ಖರ್ಜೂರ, ಜಲ್ದರು, ದಾಳಿಂಬೆ, ನಿಂಬೆ, ಕಿತ್ತಳೆ ಮತ್ತು ಬಾಳೆಯನ್ನು ಬೆಳೆಯುತ್ತಿದ್ದರು. ಒಂಟೆ ಮತ್ತು ಕುದುರೆಗಳೇ ಸಾರಿಗೆ ಸಂಪರ್ಕಗಳು. ಅವರು ಅತ್ಯಂತ ಕಷ್ಟಕರ ಜೀವನ ನಡೆಸುತ್ತಿದ್ದರು. ಓಯಸಿಸ್‌ಗಳಿಗಾಗಿ ಮತ್ತು ಹುಲ್ಲುಗಾವಲುಗಳಿಗಾಗಿ ಪರಸ್ಪರ ಹೊಡೆದಾಡುತ್ತಿದ್ದು ಸಾಮಾನ್ಯವಾಗಿತ್ತು. ಉತ್ತರ ಸಿರಿಯಾ ಮತ್ತು ಇರಾಕ್ ನಿಂದ ಅರೇಬಿಯಾದ ದಕ್ಷಿಣ ಕರಾವಳಿಗೆ ಸರಕುಗಳನ್ನು ಒಂಟೆಗಳ ಮೇಲೆ ಸಾಗಿಸುತ್ತಿದ್ದರು. ಅಲ್ಲಿ ಜನರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದರು. ಇಂತಹ ಕಷ್ಟಕರ ಜೀವನ ನಡೆಸುತ್ತಿದ್ದ ಅರಬ್ಬರಲ್ಲಿ ನಿರಂತರವಾಗಿ ವಾಣಿಜ್ಯ ಒಂಟೆಗಳ ಕಳವು, ನಗರಗಳ ಲೂಟಿ, ಜೂಜು ಮತ್ತು ಕಳ್ಳತನ ಸಾಮಾನ್ಯವಾಗಿದ್ದವು.

ಇಸ್ಲಾಂ ಧರ್ಮದ ಚಿಹ್ನೆ

ಅವರು 360ಕ್ಕೂ ಹೆಚ್ಚು ವಿಗ್ರಹಗಳನ್ನು ಪೂಜಿಸುತ್ತಿದ್ದರು. ಪ್ರಾಣಿಬಲಿ ಮತ್ತು ಕುರುಡು ನಂಬಿಕೆಗಳು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದವು. ಇಂತಹ ಅನಿಷ್ಟಗಳ ನಡುವೆಯೂ ಅರಬ್ಬರನ್ನು ಒಂದುಗೂಡಿಸಿದ್ದು ಮೆಕ್ಕಾದ ಕಾಬಾ ಶಿಲೆಯಲ್ಲಿದ್ದ ಅವರ ಸಾಮೂಹಿಕ ನಂಬಿಕೆ. ಮೆಕ್ಕಾದಲ್ಲಿ ಅಬ್ರಹಾಂನು ಸಾ.ಶ.6ನೇ ಶತಮಾನದಲ್ಲಿ ದೇವದೂತ ಗೇಬ್ರಿಯಲ್‌ನಿಂದ ಪಡೆದುಕೊಂಡ ಶಿಲೆಯನ್ನು ಪೂಜಿಸಲು ಕಾಬಾ ದೇವಾಲಯ ನಿರ್ಮಿಸಿದನು. ಅರಬ್ಬರಿಗೆ ನಿರ್ದಿಷ್ಟವಾದ ಸಾಮಾಜಿಕ, ನೈತಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚೌಕಟ್ಟುಗಳಿರಲಿಲ್ಲ. ಇಂತಹ ಸಂದರ್ಭದಲ್ಲಿ ಮಹಮದನು ಇಸ್ಲಾಂ ಧರ್ಮ ಸ್ಥಾಪಿಸಿದನು. ಇಸ್ಲಾಂ ಧರ್ಮ ಸ್ಥಾಪನೆಯ ಮೂಲಕ ಮುಸ್ಲಿಂರನ್ನು ಒಂದು ಧಾರ್ಮಿಕ ಚೌಕಟ್ಟಿನಲ್ಲಿ ಒಂದುಗೂಡಿಸಿದನು.

"ಅರ್ಧಚಂದ್ರ ಮತ್ತು ನಕ್ಷತ್ರ" ಈ ಧರ್ಮದ ಚಿಹ್ನೆ. ಮಸೀದಿ ಇವರ ಧಾರ್ಮಿಕ ಕೇಂದ್ರ. ಜಗತ್ತಿನ ಜನಸಂಖ್ಯೆಯ 18% ರಷ್ಟು ಜನ ಈ ಧರ್ಮದ ಅನುಯಾಯಿಗಳಿದ್ದಾರೆ. 'ಖುರಾನ್'ಇದರ ಪವಿತ್ರ ಗ್ರಂಥ. ಇಸ್ಲಾಂ ಪ್ರಪಂಚದ ಎರಡನೇ ಅತೀ ದೊಡ್ಡ ಧರ್ಮವಾಗಿದೆ.

ಪ್ರವಾದಿ ಮಹಮದ್‌ನ ಜೀವನ (ಸಾ.ಶ. 570ರಿಂದ 632)

ಮಹಮದ್ ಪೈಗಂಬರ್ ಸಾ.ಶ.570 ರಲ್ಲಿ ಅರೇಬಿಯಾದ **ಮೆಕ್ಕಾ** ನಗರದಲ್ಲಿ ಜನಿಸಿದನು. **ಅಬ್ದುಲ್ಲಾ** ಮತ್ತು **ಅಮೀನಾ** ಈತನ ತಂದೆ ತಾಯಿಗಳು. ಇವನು ಮೆಕ್ಕಾದ ಖುರೇಷಿ ಮನೆತನಕ್ಕೆ ಸೇರಿದವನು. ಬಾಲ್ಯದಲ್ಲೆ ತಂದೆ ತಾಯಿಗಳನ್ನು ಕಳೆದುಕೊಂಡು, ತನ್ನ ಚಿಕ್ಕಪ್ಪ **ಅಬುತಾಲಿಬ್**ನ ಪಾಲನೆಯಲ್ಲಿ ಬೆಳೆದನು. ಬಡತನದ ಕಾರಣದಿಂದ

ಶಿಕ್ಷಣ ಪಡೆಯಲಾಗಲಿಲ್ಲ. ಪೈಗಂಬರ್ ಕುರಿ ಮತ್ತು ಒಂಟೆಗಳನ್ನು ಮೇಯಿಸುವುದರಲ್ಲಿ ತರಬೇತಿ ಪಡೆದನು. ತನ್ನ ಪ್ರಾಮಾಣಿಕತೆ ಮತ್ತು ನಿಷ್ಠೆಗಳಿಂದ ಅನೇಕರಿಗೆ ಚಿರಪರಿಚಿತನಾಗಿದ್ದನು. ಯುವಕನಾಗಿದ್ದಾಗ ತನ್ನ ಹೆಚ್ಚಿನ ಸಮಯವನ್ನು ವರ್ತಕರ ತಂಡಗಳೊಂದಿಗೆ ಪ್ರಯಾಣಿಸುತ್ತಾ ಕಳೆದನು. ಈತನ ಸಹ ವರ್ತಕರು ಈತನನ್ನು 'ಅಮೀನ್' ಎಂದು ಕರೆಯುತ್ತಿದ್ದರು. ಅಂದರೆ, ವಿಶ್ವಾಸಾರ್ಹ ವ್ಯಕ್ತಿ ಎಂದರ್ಥ.

ಪೈಗಂಬರ್ ತನ್ನ 25ನೇ ವಯಸ್ಸಿನಲ್ಲಿ 'ಖದೀಜ' ಎಂಬ ಶ್ರೀಮಂತ ಮಹಿಳೆಯ ಬಳಿ ಸೇವೆಗೆ ಸೇರಿಕೊಂಡನು. ಆಕೆಯ ಒಂಟೆಗಳನ್ನು ಸಿರಿಯಾ ಮತ್ತು ಪ್ಯಾಲಿಸ್ಟೀನ್‌ಗಳಲ್ಲಿ ಮಾರಾಟ ಮಾಡುತ್ತಿದ್ದನು. ಅಲ್ಲಿ ಯಹೂದಿಗಳು ಮತ್ತು ಕ್ರಿಶ್ಚಿಯನ್ನರೊಡನೆ ಬೆರೆಯುತ್ತಿದ್ದನು. ಹಾಗಾಗಿ ಏಕ ದೇವರ ಬಗ್ಗೆ ಆತನ ನಂಬಿಕೆ ಆಳವಾಯಿತು. ನಂತರ ತನಗಿಂತಲೂ 15 ವರ್ಷ ಹಿರಿಯಳಾದ ವಿಧವೆ ಖದೀಜಾಳನ್ನು ವಿವಾಹವಾದನು. ಇವರಿಗೆ ಇಬ್ಬರು ಹೆಣ್ಣು ಇಬ್ಬರು ಗಂಡು ಮಕ್ಕಳು ಜನಿಸಿದರು. ಅವರಲ್ಲಿ 'ಫಾತೀಮಾ'ಎಂಬ ಒಬ್ಬಳೇ ಮಗಳು ಉಳಿದು, ಉಳಿದವರು ತೀರಿಕೊಂಡರು. ಆಕೆಯನ್ನು 'ಆಲಿ' ಎಂಬುವವನಿಗೆ ಕೊಟ್ಟು ವಿವಾಹ ಮಾಡಿದನು. ತನ್ನ 40ನೇ ವಯಸ್ಸಿನವರೆಗೆ ಸಾಮಾನ್ಯರಂತೆ ಸಾಂಸಾರಿಕ ಬದುಕು ನಡೆಸಿದನು. ತನ್ನ ಬಹುಪಾಲು ಸಮಯವನ್ನು ಧ್ಯಾನ, ಉಪವಾಸಗಳಲ್ಲಿ ಕಳೆಯುತ್ತಿದ್ದನು. ಹಾಗೆ ಅರಬ್ಬರ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ಮನೆಮಾಡಿದ್ದ ನ್ಯೂನತೆಗಳನ್ನು ಕುರಿತು ಚಿಂತಿಸುತ್ತಿದ್ದನು. ಈತನು **ಹಿರಾ** ಎಂಬ ಬೆಟ್ಟದ ಗುಹೆಯಲ್ಲಿ ಅನೇಕ ದಿನ ರಾತ್ರಿ ಧ್ಯಾನದಲ್ಲಿ ಕಳೆಯುತ್ತಿದ್ದನು. ಹೀಗೆ ಸಮಾಧಿಸ್ಥಿತಿಯಲ್ಲಿದ್ದಾಗ ಭಗವಂತನ ವಾಣಿಗಳನ್ನು (Gospels) 'ಗೇಬ್ರಿಯಲ್' ಎಂಬ ದೇವದೂತ ಪೈಗಂಬರನಿಗೆ ಉಪದೇಶಿಸಿದನು. ನಂತರ ಆತನ ಶಿಷ್ಯರು ಅವುಗಳನ್ನು ಕುರಾನ್‌ನಲ್ಲಿ ದಾಖಲಿಸಿದರು

ಮಹಮದನು ದೇವರ ಪವಿತ್ರ ಸಂದೇಶಗಳ ಪರಿಣಾಮವನ್ನು ಅರಿತುಕೊಂಡನು. ಭಗವಂತ ತನ್ನ ಸಂದೇಶಗಳನ್ನು ಜನರಿಗೆ ಸಾರಲು ತನ್ನನ್ನು ಆಯ್ಕೆ ಮಾಡಿಕೊಂಡಂತೆ ಭಾವಿಸಿದನು. ದೇವದೂತ ಗೇಬ್ರಿಯಲ್ ದೇವರ ಸಂದೇಶಗಳನ್ನು ಪ್ರಚಾರ ಮಾಡಲು ಈತನಿಗೆ ವಾಣಿಗಳನ್ನು ನೀಡಿದನು. ಬಹುಬೇಗನೆ ಅನೇಕ ಶಿಷ್ಯರು ಒಟ್ಟು ಗೂಡಿದರು. ಅವರಲ್ಲಿ ಮೊದಲಿಗರೆಂದರೆ, ಅವನ ಹೆಂಡತಿ, ಅಳಿಯ, ಮಗಳು, ಸ್ನೇಹಿತ ಅಬುಬೆಕರ್ ಮತ್ತು ಸೇವಕ ಸೈಯದ್ ಮಹಮದ್. **'ಅಲ್ಲಾ ಒಬ್ಬನೇ ದೇವರು, ಮಹಮದ್ ಆತನ ಪ್ರವಾದಿ'** ಎಂದು ಘೋಷಿಸಿದನು.

ಮೆಕ್ಕಾದ ಜನರಿಗೆ ತನ್ನ ಹೊಸ ಧರ್ಮದ ತತ್ವಗಳನ್ನು ಬೋಧಿಸಲಾರಂಭಿಸಿದನು. ಅರಬ್ಬರ ಮೂರ್ತಿಪೂಜೆ ಅರ್ಥಹೀನ ಆಚರಣೆಗಳಾದ ಬಹುದೇವತಾರಾಧನೆ, ಮೂಢನಂಬಿಕೆಗಳನ್ನು ಟೀಕಿಸಿದನು. ಈತ ಅಲ್ಲಾನಲ್ಲಿ ನಂಬಿಕೆ, ಸತ್ಯ ಮತ್ತು ಪರಿಶುದ್ಧ ಜೀವನವನ್ನು ಪ್ರತಿಪಾದಿಸಿದನು. ಅಲ್ಲಾ, ವಿಶ್ವವ್ಯಾಪಿ ಮತ್ತು ದಯಾಮಯಿ ಎಂದು ಹೇಳಿದನು. ಅಲ್ಲಾನು ಶಿಷ್ಟ ರಕ್ಷಣ, ದುಷ್ಟ ನಿಗ್ರಹನೆಂದು ಹೇಳಿದನು. ದೇವರ ಇಚ್ಛೆಗೆ ಶರಣಾಗುವವರೆಲ್ಲಾ ಮುಸ್ಲಿಂರು ಎಂದನು. ಈತನ ಅನುಯಾಯಿಗಳು ಈತನನ್ನು ಪ್ರವಾದಿ ಎಂದು ಕರೆದರು. ಅಲ್ಲಾನ ಸಂದೇಶಗಳನ್ನು ಮನುಕುಲಕ್ಕೆ ಸಾರಲು ದೇವರು ತನ್ನನ್ನು ಆಯ್ಕೆ ಮಾಡಿಕೊಂಡಿದ್ದಾನೆಂದು ಸಾರಿದನು. **'ಅಲ್ಲಾ ದಯಾಮಯಿ, ಜ್ಞಾನಿ ಮತ್ತು ಸರ್ವಶಕ್ತನೆಂದು'** ಹೇಳಿದನು.

ಹಿಜಿರಾ ಶಕೆ (ಸಾ.ಶ–622)

ಪ್ರವಾದಿ ಮಹಮದ್‌ನು ಆರಾಧನೆ ಮತ್ತು ಮೂಢನಂಬಿಕೆಗಳನ್ನು ಪ್ರಬಲವಾಗಿ ಖಂಡಿಸಿದನು. ಅವನ ಜನಾಂಗದ ಜನರು 'ಕಾಬಾ'ದಲ್ಲಿರುವ 363 ಮೂರ್ತಿಗಳ ಉಸ್ತುವಾರಿ ಹೊಂದಿದ್ದರು ಮತ್ತು ಅವುಗಳ ಪೂಜೆಯಿಂದ ಬರುವ ಆದಾಯದ ಮೇಲೆ ಬದುಕುತ್ತಿದ್ದರು. ಆದ್ದರಿಂದ ಅವರು ಮಹಮದ್‌ನ ವಿರೋಧಿಗಳಾದರು. ಅವನನ್ನು ನಿಂದಿಸಿದರು ಮತ್ತು ಕೊಲ್ಲಲು ಪ್ರಯತ್ನಿಸಿದರು. ವಿಗ್ರಹಾರಾಧಕರು ಈತನನ್ನು ದ್ವೇಷಿಸಲಾರಂಭಿಸಿದರು.

ಮಹಮದ್ ಅರಬ್ಬರಲ್ಲಿ ಅನಾವಶ್ಯಕವಾಗಿ ಧಾರ್ಮಿಕ ಅಶಾಂತಿಯನ್ನು ಸೃಷ್ಟಿಸುತ್ತಿದ್ದಾನೆಂದು ಹೇಳಿದರು. ಈತನನ್ನು ಕೊಲ್ಲಲು ಸಂಚು ಹೂಡಿದರು. ಜನರ ಈ ನಡವಳಿಕೆಗಳಿಂದ ನಿರಾಸೆಗೊಂಡು ತತ್ತರಿಸಿದ ಮಹಮದ್ ತನ್ನ ಜನ್ಮ ಸ್ಥಳ ಮೆಕ್ಕಾವನ್ನು ಬಿಡಲು ತೀರ್ಮಾನಿಸಿದನು. 'ಪೈಗಂಬರ್ ತನ್ನ 200 ಜನ ಅನುಯಾಯಿಗಳೊಡನೆ ಸಾ.ಶ.622 ರಲ್ಲಿ ಮಕ್ಕಾದಿಂದ ಮದೀನಾಕ್ಕೆ ಮಾಡಿದ ಗುಪ್ತ ಪ್ರಯಾಣವನ್ನು ಪೈಗಂಬರರ ಪ್ರಯಾಣ ಅಥವಾ **ಹಿಜಿರಾ ಶಕೆ'** ಎಂದು ಕರೆಯಲಾಗುತ್ತದೆ. ಇದರೊಡನೆ ಇಸ್ಲಾಂ ಕ್ಯಾಲೆಂಡರ್ ಪ್ರಾರಂಭವಾಯಿತು.

ಮೆಕ್ಕಾದಿಂದ ಮದೀನಕ್ಕೆ ಬಂದ ಪೈಗಂಬರ್‌ನನ್ನು ಹಾಗೂ ಅವನ ಅನುಯಾಯಿಗಳನ್ನು ಮದೀನಾದ ಜನರು ಸ್ವಾಗತಿಸಿ, ಆತನ ತತ್ವಗಳನ್ನು ಒಪ್ಪಿಕೊಂಡು ಸಾವಿರಾರು ಜನರು ಆತನ ಅನುಯಾಯಿಗಳಾದರು. ಸಾ.ಶ 630 ರಲ್ಲಿ ಮಹಮದ್‌ನು ಮೆಕ್ಕಾಕ್ಕೆ ಹಿಂದಿರುಗಿದನು. ಮೂರ್ತಿ ಪೂಜೆಯನ್ನು ಖಂಡಿಸಿದಾಗ ಮೆಕ್ಕಾದ ಸಂಪ್ರದಾಯಸ್ತರಿಗೂ ಮತ್ತು ಪೈಗಂಬರನಿಗೂ ನಡೆದ ಧಾರ್ಮಿಕ ಸಂಘರ್ಷದಲ್ಲಿ ಪ್ರವಾದಿ ಮಹಮದ್ ಮತ್ತು ಅವನ ಅನುಯಾಯಿಗಳು ಜಯಗಳಿಸಿದರು. ಅರಬ್ಬರಲ್ಲಿ ಧಾರ್ಮಿಕ ಮತ್ತು ರಾಜಕೀಯ ಏಕತೆ ಬೆಳೆಸಿದನು. ಕ್ರಮೇಣ ಆಂತರಿಕ ಜಗಳಗಳು ಕೊನೆಗೊಂಡವು. ಅರಬ್ಬರು ಪ್ರವಾದಿ ಮಹಮದನ ತತ್ವಗಳನ್ನು ಸ್ವೀಕರಿಸಿದರು.

ಸಾ.ಶ.632 ರಲ್ಲಿ ಪೈಗಂಬರ್ ತೀರಿಕೊಂಡನು. ನಂತರ ಖಲೀಫರು ಈ ಧರ್ಮದ ಗುರುಗಳಾಗಿ ಪೈಗಂಬರನ ಉತ್ತರಾಧಿಕಾರಿಗಳಂತೆ ಇಸ್ಲಾಂ ಧರ್ಮವನ್ನು ಮುನ್ನಡೆಸಿದರು. ಇದು ಅರಬ್ಬರಲ್ಲಿ ಆಧ್ಯಾತ್ಮಿಕ ಮತ್ತು ಸೈನಿಕ ಏಕತೆ ಬೆಳೆಸಿತು.

ಇಸ್ಲಾಂ ಪಂಚಾಂಗ: ಹಿಜಿರ ಶಕೆ ಸಾ.ಶ.622 ರಲ್ಲಿ ಉಮರ್ ಕಲೀಫ್ ನಿಂದ ಪ್ರಾರಂಭವಾಯಿತು. ಇದರ ಪ್ರಕಾರ ಒಂದು ವರ್ಷಕ್ಕೆ 354 ದಿನಗಳು, 12 ತಿಂಗಳು, ಇದರಲ್ಲಿ ಸೌರಮಾನ ಪಂಚಾಂಗಕ್ಕಿಂತ 11 ದಿನ ಕಡಿಮೆ ಇದೆ. ಈ ಕ್ಯಾಲೆಂಡರ್ ಪ್ರಕಾರ ಪ್ರತಿದಿನ ಸೂರ್ಯಾಸ್ತದೊಡನೆ ಮತ್ತು ತಿಂಗಳು ಚಂದ್ರಕಾಣಿಸುವಿಕೆಯೊಂದಿಗೆ (Cresent Moon) ಪ್ರಾರಂಭವಾಗುತ್ತದೆ. ಹಾಗಾಗಿ ಇಸ್ಲಾಂ ಧಾರ್ಮಿಕ ಹಬ್ಬಗಳಾದ ರಂಜಾನ್, ಈದ್, ಬಕ್ರೀದ್, ಮತ್ತು ಮೊಹರಂಗಳು ಸೂರ್ಯಾಸ್ತ ಮತ್ತು ಚಂದ್ರನ ಕಾಣಿಸುವಿಕೆಯೊಡನೆ ಲೆಕ್ಕಹಾಕುವುದರಿಂದ, ಅರೇಬಿಯಾದಲ್ಲಿ ಚಂದ್ರ ಕಾಣಿಸುವವರೆಗೆ ಹಬ್ಬಗಳನ್ನು ಆಚರಿಸುವುದಿಲ್ಲ.

ಪ್ರವಾದಿ ಮಹಮದ್‌ನ ಬೋಧನೆಗಳು: ಪೈಗಂಬರನಿಂದ ಪ್ರತಿಪಾದಿಸಲ್ಪಟ್ಟ ಹೊಸಮತಕ್ಕೆ **ಇಸ್ಲಾಂ** ಎಂದು ಕರೆಯಲಾಗುತ್ತದೆ. 'ಇಸ್ಲಾಂ' ಎಂದರೆ 'ದೇವರಾದ ಅಲ್ಲಾಗೆ ಶರಣಾಗು' ಎಂದರ್ಥ. 'ಇಸ್ಲಾಂ' ಶಬ್ದಕ್ಕೆ ವ್ಯಾಪಕ ಅರ್ಥವಿದೆ–ಸತ್ಯವಂತನಾಗಿರುವುದು, ನಂಬಿಕೆಗೆ ಅರ್ಹನಾಗಿರುವುದು, ಸದ್ಗುಣಿಯಾಗಿರು ಎಂಬ ಅರ್ಥವಿದೆ. ಇಸ್ಲಾಂ ಶಬ್ದದ ಇನ್ನೊಂದು ಅರ್ಥ ಶಾಂತಿ. ಇಸ್ಲಾಂ ಶಾಂತಿಯ ಜೊತೆಗೆ ಸಮಾನತೆಯನ್ನು ಸಾರುತ್ತದೆ ಗುಲಾಮಗಿರಿಯನ್ನಲ್ಲ. ಹೊಸ ಧರ್ಮ ಇಸ್ಲಾಂನ ಸಾರಾಂಶಗಳು ಪವಿತ್ರ ಗ್ರಂಥ ಕುರಾನ್‌ನಲ್ಲಿವೆ. ಅರಬಿಕ್ ಭಾಷೆಯಲ್ಲಿ ಕುರಾನ್ ಎಂದರೆ ಪ್ರವಚನ ಎಂದರ್ಥ.

ಕುರಾನ್‌ಎಂದರೆ ಪ್ರವಚನ, ಮೊಹಮದ್ ಪೈಗಂಬರ್ ಅಲ್ಲಾಹುವಿನಿಂದ ಪಡೆದುಕೊಂಡ ದೈವವಾಣಿಗಳ ಸಂಗ್ರಹ.

ಇಸ್ಲಾಂ ನಂಬುವ ಶ್ರದ್ಧಾವಂತ ಮುಸ್ಲಿಂನಿಗೆ ಐದು ಮುಖ್ಯ ಕರ್ತವ್ಯಗಳಿವೆ. ಅವುಗಳನ್ನು ಇಸ್ಲಾಂ ಧರ್ಮದ ಆಧಾರ ಸ್ತಂಭಗಳೆಂದು ಅಥವಾ ತತ್ವಗಳೆಂದು ಕರೆಯುತ್ತಾರೆ. ಅವುಗಳೆಂದರೆ,

1) ಕಲೀಮಾ 2) ನಮಾಜ್ 3)ಜಕಾತ್ 4) ರೋಜಾ 5) ಹಜ್

1) **ಕಲೀಮಾ**: ಕಲೀಮಾ ಎಂದರೆ ನಂಬಿಕೆ. ದೇವರು ಒಬ್ಬನೆ, ಅವನೇ ಅಲ್ಲಾಹು, ಈತನನ್ನು ಪ್ರತಿಯೊಬ್ಬರು ನಂಬಬೇಕು. ಮೊಹಮದನು ಅಲ್ಲಾಹನ ಪ್ರತಿನಿಧಿ. ಆತನಲ್ಲಿ ಪ್ರತಿಯೊಬ್ಬ ಮುಸ್ಲಿಂನು ಅಚಲವಾದ ಶ್ರದ್ಧೆ ಮತ್ತು ನಂಬಿಕೆಯನ್ನಿಡುವುದು. ಅಲ್ಲಾನನ್ನು ಬಿಟ್ಟರೆ ಬೇರೆ ದೇವರಿಲ್ಲ, ಮತ್ತು ಆತನಿಗೆ ಶರಣಾಗುವುದು ಹಾಗೂ ಆತನನ್ನು ಗೌರವಿಸುವುದು ಇದು ಕುರಾನಿನ ಒಂದು ಮುಖ್ಯ ಸಂದೇಶ.

2) **ನಮಾಜ್**: ನಮಾಜ್ ಎಂದರೆ ಪ್ರಾರ್ಥನೆ, ಪ್ರತಿಯೊಬ್ಬ ಮುಸಲ್ಮಾನನು ದಿನಕ್ಕೆ ಐದು ಬಾರಿ ಪ್ರಾರ್ಥನೆ ಮಾಡುಬೇಕು. ತನ್ನನ್ನು ಪರಿಶುದ್ಧಗೊಳಿಸಿಕೊಂಡು ಪ್ರತಿದಿನ ಸೂರ್ಯೋದಯಕ್ಕೆ ಮುಂಚೆ, ಮಧ್ಯಾಹ್ನ, ಸಂಜೆ, ಸೂರ್ಯಾಸ್ತದ ವೇಳೆಗೆ ಹಾಗೂ ರಾತ್ರಿ ಮಲಗುವ ಮುನ್ನ ಮೆಕ್ಕಾದ ಕಡೆ ಮುಖಮಾಡಿ ಪ್ರಾರ್ಥಿಸಬೇಕು. ಪ್ರತೀ ಶುಕ್ರವಾರ ಮಸೀದಿಗೆ ಹೋಗಿ ಪ್ರಾರ್ಥನೆ ಮಾಡಿ, ಕುರಾನ್‌ನ ಚರ್ಚೆಯಲ್ಲಿ ಭಾಗವಹಿಸಬೇಕು. ಪಾಪಮುಕ್ತನಾಗಲು ಮತ್ತು ದೇವರನ್ನು ಒಲಿಸಿಕೊಳ್ಳಲು ಪ್ರಾರ್ಥನೆ ಸರಿಯಾದ ಮಾರ್ಗ.

3) **ಜಕಾತ್**: ಜಕಾತ್ ಎಂದರೆ ಬಡವರಿಗೆ ದಾನ ಮಾಡುವುದು. ದಾನಮಾಡುವುದು ಮುಸ್ಲಿಂರ ಮತ್ತೊಂದು ಕರ್ತವ್ಯ. ಪ್ರತಿಯೊಬ್ಬನೂ ನಿಷ್ಠಾವಂತ ಹಾಗೂ ಪ್ರಮಾಣಿಕನಾಗಿರಬೇಕು. ಅವನು ತನ್ನ ಗಳಿಕೆಯ 2.5 % ರಷ್ಟನ್ನು ಧಾರ್ಮಿಕ ಉನ್ನತಿಗಾಗಿ ಮತ್ತು ಬಡವರಿಗೆ ಸಹಾಯ ನೀಡಬೇಕು. ಜಕಾತ್‌ನ ಉದ್ದೇಶ ಬಡವ ಮತ್ತು ಶ್ರೀಮಂತರ ನಡುವೆ ಆರ್ಥಿಕ ಸಮಾನತೆ ತರುವುದು. ದಾನ ನೀಡದೆ ಸತ್ತರೆ ಅದು ಆತನ ಮೇಲೆ ಸಾಮಾಜಿಕ ಋಣವಾಗಿ ಉಳಿಯುತ್ತದೆ. ಇಸ್ಲಾಂ ಭಿಕ್ಷಾಟನೆಯ ವೃತ್ತಿಯನ್ನು ನಿಷೇಧಿಸುತ್ತದೆ.

4) **ರೋಜ಼ಾ**: ಎಂದರೆ ಉಪವಾಸ. ಪ್ರತಿಯೊಬ್ಬ ಮುಸ್ಲಿಂನು ತನ್ನ ಆತ್ಮಶುದ್ಧಿಗೋಸ್ಕರ ರಂಜ಼ಾನ್ ತಿಂಗಳಿನಲ್ಲಿ 29 ರಿಂದ 30 ದಿನಗಳ ಕಾಲ ಪ್ರಾತಃಕಾಲದಿಂದ ಸೂರ್ಯಾಸ್ತದವರೆಗೆ ಉಪವಾಸ ಆಚರಿಸಬೇಕು. ಉಪವಾಸ ಹೃದಯವನ್ನು ಶುದ್ಧಗೊಳಿಸುತ್ತದೆ. ಇದು ನಮ್ಮ ಆಸೆಗಳನ್ನು ಸಮತೋಲನಗೊಳಿಸುತ್ತದೆ. ವ್ಯಕ್ತಿಯ ಹವ್ಯಾಸಗಳನ್ನು ನಿಯಂತ್ರಿಸಿ ಮುಕ್ತಿಯ ಬಗ್ಗೆ ವಿಶ್ವಾಸವನ್ನು ಮೂಡಿಸುತ್ತದೆ. ಇದು ನಾವು ಹವ್ಯಾಸಗಳ ದಾಸರಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಇದು ಉತ್ತಮ ನಡತೆ ಹೊಂದಲು ಸರಿಯಾದ ತರಬೇತಿ. ಮಕ್ಕಳು, ಮಗುವಿನ ತಾಯಿಯರು, ವೃದ್ಧರು, ಪ್ರಯಾಣಿಕರು, ರೋಗಿಗಳಿಗೆ ವಿನಾಯಿತಿ ಇದೆ. ಹೆಚ್ಚಿನ ಧರ್ಮಶ್ರದ್ಧೆಯುಳ್ಳವರು ಕೊನೆಯ ಹತ್ತು ದಿನ ಮಸೀದಿಯಲ್ಲಿ ಕಾಲಕಳೆಯುತ್ತಾರೆ. ನಂಬಿಕೆಗಳ ಪ್ರಕಾರ ಅಲ್ಲಾ ರಂಜಾನ್ ಸಮಯದ ಒಂದು ರಾತ್ರಿ ಕುರಾನ್ ತಿಳಿಸಿದನೆಂಬ ನಂಬಿಕೆ ಇದೆ. ಉಪವಾಸ ಕೊನೆಗೊಳ್ಳುವ ದಿನವನ್ನು ಈದ್–ಉಲ್ –ಫಿತರ್ ಎಂದು ಆಚರಿಸಲಾಗುತ್ತದೆ. ಆ ದಿನ ಅವರು ಹೊಸ ವಸ್ತ್ರ ಧರಿಸಿ ಪರಸ್ಪರ ಅಭಿನಂದಿಸುತ್ತಾರೆ, ಮತ್ತು ದಾನ ನೀಡುತ್ತಾರೆ. **"ಉಪವಾಸ ಅಲ್ಲಾನ ಅರಮನೆಯ ಬಾಗಿಲಿಗೆ ಕೊಂಡೊಯ್ಯುತ್ತದೆ ಮತ್ತು ದಾನ ನಮ್ಮನ್ನು ಒಳಗೆ ಬಿಡುತ್ತದೆ"**.

ಮೆಕ್ಕಾದ ಕಾಬಾ ಮಂದಿರ

5) **ಹಜ್:** ಎಂದರೆ ಪವಿತ್ರ ಮೆಕ್ಕಾ ಯಾತ್ರೆ, ನಿಜವಾದ ಮುಸ್ಲಿಂನು ತನ್ನ ಜೀವಿತಾವಧಿಯಲ್ಲಿ ಒಮ್ಮೆಯಾದರೂ ಪುಣ್ಯ ಸ್ಥಳ ಮೆಕ್ಕಾಗೆ ಯಾತ್ರೆ ಕೈಗೊಳ್ಳಬೇಕು. ಅಂತಹವರಿಗೆ ಸ್ವರ್ಗದ ಬಾಗಿಲು ತೆರೆಯುತ್ತದೆ ಎಂಬ ನಂಬಿಕೆ ಇದೆ. ಅಲ್ಲಾನಿಗೆ ಶರಣಾಗತಿಯ ನವೀಕರಣಕ್ಕಾಗಿ ಕೈಗೊಳ್ಳುವ ಯಾತ್ರೆ. ಹಿಂದುಗಳಿಗೆ ಕಾಶಿ, ಕ್ರೈಸ್ತರಿಗೆ ವ್ಯಾಟಿಕನ್ ಇದ್ದಂತೆ ಮುಸ್ಲಿಂರಿಗೆ ಮೆಕ್ಕಾ ಯಾತ್ರೆ ಜೀವನದ ಪರಿಪೂರ್ಣತೆಯ ಸಂಕೇತ. ಪ್ರತಿವರ್ಷ ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಮೆಕ್ಕಾದ ಬಾಗಿಲು ತೆರೆದಿರುತ್ತದೆ. ವಿಶ್ವದ ವಿವಿಧ ಭಾಗಗಳಿಂದ ಲಕ್ಷಾಂತರ ಸಂಖ್ಯೆಯ ಯಾತ್ರಿಕರು ಆಗಮಿಸುತ್ತಾರೆ. ಮಹಮದ್ ಪೈಗಂಬರ್ ಕಾಬಾದಲ್ಲಿ ಮೂರ್ತಿ ಪೂಜೆ ನಿಷೇಧಿಸಿದ ನಂತರ ಕಾಬಾ ಮುಸ್ಲಿಂರ ಪವಿತ್ರ ಪ್ರಾರ್ಥನಾ ಮಂದಿರವಾಯಿತು. ಹಜ್ ಯಾತ್ರೆ ಕೈಗೊಂಡ ಮುಸ್ಲಿಂನು ತನ್ನ ತಪ್ಪುಗಳಿಗೆ ಪಶ್ಚಾತ್ತಾಪ ಪಡಬೇಕು, ಪ್ರವಾದಿ ಮಹಮದನ ಉಪದೇಶಗಳನ್ನು ಅನುಸರಿಸುವುದಾಗಿ ಪ್ರಮಾಣ ಮಾಡಬೇಕು. ಯಾತ್ರಿಕರು 7 ಸಲ ಕಾಬಾಶಿಲೆಯನ್ನು ಪ್ರದಕ್ಷಿಣೆ ಹಾಕಿ ನಮಸ್ಕರಿಸಬೇಕು. ಈ ಐದು ಆಧಾರ ಸ್ತಂಭಗಳ ಜೊತೆಗೆ ಇನ್ನೂ ಅನೇಕ ನೈತಿಕ ತತ್ವಗಳನ್ನು ಪೈಗಂಬರ್ ಉಪದೇಶಿಸಿದ್ದಾನೆ. ಅವುಗಳೆಂದರೆ,

1. ಜಗತ್ತಿನಲ್ಲಿ ಯಾರು ಪಾಪಿಗಳಲ್ಲ, ನಾನು ಜಗತ್ತಿಗೆ ಒಳ್ಳಯದು ಮತ್ತು ಕೆಟ್ಟದೆರಡನ್ನು ತೋರಿಸಿದ್ದೇನೆ. ಯಾರು ಜೀವನದಲ್ಲಿ ಒಳ್ಳೆಯದು ಅಂದರೆ ಕುಟುಂಬ, ಸಮಾಜ, ಸ್ನೇಹಿತರು, ಇಸ್ಲಾಂಧರ್ಮಕ್ಕೆ ಯಾರು ಒಳ್ಳೆಯದನ್ನು ಮಾಡುತ್ತಾನೋ ಅವನಿಗೆ ದೇವರಾದ ಅಲ್ಲಾಹ್ ಸ್ವರ್ಗದಲ್ಲಿ ಸ್ಥಳವನ್ನು ಕಾಯ್ದಿರಿಸುತ್ತಾನೆ. ಕೆಟ್ಟದನ್ನು ಮಾಡಿದವರನ್ನು ಅಲ್ಲಾಹ್ ನರಕಕ್ಕೆ ಕಳಹಿಸಿ, ಶಿಕ್ಷಿಸುತ್ತಾನೆ ಎಂದು ಪ್ರತಿಪಾದಿಸಿದ್ದಾನೆ.
2. ಪೈಗಂಬರ್ ಮದ್ಯಪಾನ, ಜೂಜಾಡುವುದು ಮತ್ತು ವ್ಯಭಿಚಾರವನ್ನು ವರ್ಜಿಸಬೇಕೆಂದು, ಹಂದಿ ಮಾಂಸವನ್ನು ಸೇವಿಸಬಾರದೆಂದು ತಿಳಿಸಿದನು.
3. ಇಸ್ಲಾಂ ಧರ್ಮ ಸಮಾನತೆ ಮತ್ತು ವಿಶ್ವ ಭ್ರಾತೃತ್ವದಂತಹ ಪ್ರಜಾಪ್ರಭುತ್ವ ತತ್ವಗಳನ್ನೊಳಗೊಂಡಿದೆ.
4. ಮಹಿಳೆಯರನ್ನು ಮತ್ತು ತಂದೆ–ತಾಯಿಯರನ್ನು ಗೌರವಿಸುವುದು, ಸೇವಕರಲ್ಲಿ ಕರುಣೆ ಹಾಗು ಪ್ರಾಣಿದಯೆಗಳನ್ನು ಕುರಾನ್ ಪ್ರತಿಪಾದಿಸಿದೆ.
5. ಗುರುಹಿರಿಯರಲ್ಲಿ ಗೌರವ ಮತ್ತು ಅನಾಥ ರಕ್ಷಣೆಗಳನ್ನು ಬೋಧಿಸಿದೆ. ವಿವಾಹ ವಿಚ್ಛೇದನ, ಬಹು ಪತ್ನಿತ್ವ ಮತ್ತು ವಿಧವಾ ವಿವಾಹಕ್ಕೆ ಕುರಾನ್ ಅವಕಾಶ ಕಲ್ಪಿಸಿದೆ.

ಇಸ್ಲಾಂ ಧರ್ಮದ ಪಂಗಡಗಳು:

ಉತ್ತರಾಧಿಕಾರತ್ವದ ಕಲಹಗಳು ಮತ್ತು ಆಂತರಿಕ ಕಚ್ಚಾಟಗಳು ಮುಸಲ್ಮಾನರನ್ನು ಎರಡು ಪಂಗಡಗಳಾಗಿ ವಿಭಾಗಿಸಿತು. ಅವುಗಳೆಂದರೆ ಸುನ್ನಿಗಳು ಮತ್ತು ಷಿಯಾಗಳು.

1. ಅಬುಬಕರ್, ಒಮರ್ ಮತ್ತು ಊತಮನ್‌ರನ್ನು ಪೈಗಂಬರರ ಅಧಿಕೃತ ಉತ್ತರಾಧಿಕಾರಿಗಳೆಂದು ಸುನ್ನಿಗಳು ನಂಬುತ್ತಾರೆ.
2. ಷಿಯಾಗಳು ಪೈಗಂಬರ್‌ನ ಅಳಿಯ ಆಲಿಯನ್ನು ಮಹಮದನ ಅಧಿಕೃತ ಉತ್ತರಾಧಿಕಾರಿ ಎಂದು ನಂಬುವವರು.

ಪ್ರಶ್ನೆಗಳು

ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಒಂದು ಅಂಕ)

1. ಇಸ್ಲಾಂ ಧರ್ಮದ ಸ್ಥಾಪಕ ಯಾರು?
2. ಮುಸ್ಲಿಂರ ಪವಿತ್ರ ಧಾರ್ಮಿಕ ಸ್ಥಳ ಯಾವುದು?
3. ಪೈಗಂಬರನ ಚಿಕ್ಕಪ್ಪ ಯಾರು?
4. ಪೈಗಂಬರನ ಪತ್ನಿ ಯಾರು?
5. ಮಹಮದನು ಯಾವ ಬೆಟ್ಟದ ಗುಹೆಯಲ್ಲಿ ಧ್ಯಾನ ಮಾಡುತ್ತಿದ್ದನು?
6. ಪೈಗಂಬರರಿಗೆ ದೈವವಾಣಿಗಳನ್ನು ಉಪದೇಶಿಸಿದ ದೇವದೂತ ಯಾರು?
7. ಮೆಕ್ಕಾದಲ್ಲಿ ಮುಸ್ಲಿಂರು ಪೂಜಿಸುತ್ತಿದ್ದ ಶಿಲೆಯ ಹೆಸರೇನು?
8. ಪೈಗಂಬರ್ ಯಾವಾಗ ತೀರಿಕೊಂಡರು?
9. ಇಸ್ಲಾಂ ಧರ್ಮದ ಪವಿತ್ರ ಗ್ರಂಥಯಾವುದು?
10. ಕಲೀಮಾ ಎಂದರೇನು?
11. ನಮಾಜ್ ಎಂದರೇನು?
12. ಜಕಾತ್ ಎಂದರೇನು?
13. ರೋಜಾ ಎಂದರೇನು?
14. ಹಜ್ ಎಂದರೇನು?

ಕೆಳಗಿನವುಗಳಿಗೆ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ ಎರಡು ಅಂಕಗಳು)

1) ಇಸ್ಲಾಂ ಧರ್ಮದ ಚಿಹ್ನೆ ಯಾವುದು ಮತ್ತು ಮುಸ್ಲಿಂರ ಧಾರ್ಮಿಕ ಸ್ಥಳ ಯಾವುದು?
2) ಪೈಗಂಬರ್ ಯಾವಾಗ ಮತ್ತು ಎಲ್ಲಿ ಜನಿಸಿದನು?
3) ಮಹಮದನ ತಂದೆ ತಾಯಿಗಳು ಯಾರು?
4) ಮಹಮದನ ಮಗಳು ಮತ್ತು ಅಳಿಯನನ್ನು ಹೆಸರಿಸಿ.
5) ಇಸ್ಲಾಂನ ಅರ್ಥವೇನು?
6) ಇಸ್ಲಾಂ ಧರ್ಮದ ಎರಡು ಪ್ರಮುಖ ಪಂಗಡಗಳಾವುವು?

ಕೆಳಗಿನವುಗಳಿಗೆ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಐದು ಅಂಕಗಳು)

1) ಮಹಮದನ ಜೀವನ ಚರಿತ್ರೆಯ ಬಗ್ಗೆ ಬರೆಯಿರಿ.
2) ಪ್ರವಾದಿ ಮಹಮದನ ಬೋಧನೆಗಳನ್ನು ವಿವರಿಸಿ.

❖ ❖ ❖ ❖

ಅಧ್ಯಾಯ –6
ಮಧ್ಯಯುಗ

ಬದಲಾವಣೆಯತ್ತ–ಚರ್ಚ್, ಸಮಾಜ, ರಾಜ್ಯ ಮತ್ತು ಊಳಿಗಮಾನ್ಯ ಪದ್ಧತಿ.

ಪೀಠಿಕೆ: ಮಧ್ಯಕಾಲೀನ ಯುರೋಪಿನ ಇತಿಹಾಸವು ಸಾ.ಶ. 476ರಲ್ಲಿ ಉಂಟಾದ ರೋಮ್ ಸಾಮ್ರಾಜ್ಯದ ಪತನದಿಂದ ಸಾ.ಶ. 1453ರ ಪೂರ್ವ ರೋಮನ್ ಸಾಮ್ರಾಜ್ಯ ಹಾಗೂ ಕಾನ್‌ಸ್ಟಾಂಟಿನೋಪಲ್‌ನ ಪತನದವರೆಗೂ ಗುರುತಿಸಲ್ಪಟ್ಟಿದೆ. ಇದು ಸಾವಿರ ವರ್ಷಗಳ ಅವಧಿಯನ್ನು ಒಳಗೊಂಡಿದೆ. ಈ ಅವಧಿಯಲ್ಲಿ ಗ್ರೀಕ್ ಮತ್ತು ರೋಮನ್ನರ ಸಾಧನೆಗಳನ್ನು ನಿರ್ಲಕ್ಷಿಸಲಾಯಿತು. ಪಶ್ಚಿಮ ಮತ್ತು ಮಧ್ಯಯುರೋಪಿನ ಮೇಲೆ ಹಲವಾರು ಜರ್ಮನ್ ಬುಡಕಟ್ಟುಗಳು ದಾಳಿನಡೆಸಿದವು. ಮಧ್ಯಯುಗವು ಬೈಜಾಂಟಿಯನ್ ಸಾಮ್ರಾಜ್ಯ ಮತ್ತು ಇಸ್ಲಾಂ ಹಾಗೂ ಪಾಶ್ಚಿಮಾತ್ಯ ನಾಗರಿಕತೆಗಳ ಏಳಿಗೆಗೆ ಸಾಕ್ಷಿಯಾಯಿತು.

ಬೈಜಾಂಟಿಯನ್ ಸಾಮ್ರಾಜ್ಯ : ರೋಮಿನ ಸಾಮ್ರಾಜ್ಯದ ಪೂರ್ವಾರ್ಧಕ್ಕೆ ಕಾನ್‌ಸ್ಟಾಂಟಿನೋಪಲ್ ಕೇಂದ್ರವಾಗಿದ್ದು, ರೋಮಿನ ಪತನದ ನಂತರ ಸುಮಾರು ಸಾವಿರ ವರ್ಷಗಳ ಕಾಲ ಬೈಜಾಂಟಿಯನ್ ಸಾಮ್ರಾಜ್ಯವಾಗಿ ಉಳಿಯಿತು. ಮೂಲತಃ ಕಾನ್‌ಸ್ಟಾಂಟಿನೋಪಲನ್ನು ಬೈಜಾಂಟಿಯಂ ಎಂದು ಕರೆಯಲಾಗಿದ್ದು, ಅದು ಸಾ.ಶ.ಪೂ. 7ನೇ ಶತಮಾನದಲ್ಲಿ ಗ್ರೀಕ್ ದೊರೆ ಬೈಜಾಸ್ ನಿಂದ ಸ್ಥಾಪಿಸಲ್ಪಟ್ಟಿತು.

ಮಧ್ಯ ಯುಗವನ್ನು ಮೂರು ಘಟ್ಟಗಳಾಗಿ ವಿಂಗಡಿಸಬಹುದು–

1. **ಆರಂಭಿಕ ಮಧ್ಯಯುಗ:** ಇದು ಸುಮಾರು ಸಾ.ಶ. 500ರಲ್ಲಿ ಆರಂಭವಾಗಿ ಸುಮಾರು ಸಾ.ಶ 1050ರಲ್ಲಿ ಕೊನೆಗೊಂಡಿತು. ಇದನ್ನು 'ಕತ್ತಲೆ ಯುಗ' ಎಂದು ಕರೆಯಲಾಗಿದೆ. ಏಕೆಂದರೆ ಈ ಕಾಲದ ಯುರೋಪಿನಲ್ಲಿ ಗೊಂದಲ ಮತ್ತು ಪ್ರಕ್ಷುಬ್ಧ ಪರಿಸ್ಥಿತಿಯಿತ್ತು.

2. **ಉನ್ನತ ಮಧ್ಯಯುಗ:** ಇದು ಸಾ.ಶ. 1050 ರಿಂದ ಸಾ.ಶ. 1300ರ ವರೆಗಿನ ಅವಧಿ. ಈ ಅವಧಿಯು ರಾಜಕೀಯ ಸ್ಥಿರತೆಯೊಂದಿಗೆ ಕೃಷಿ, ಜೀವನ ಮಟ್ಟದಲ್ಲಿ ಸುಧಾರಣೆ ಮತ್ತು ಶಿಕ್ಷಣದ ಪ್ರಗತಿಗೆ ಸಾಕ್ಷಿಯಾಗಿದೆ. ನಗರಗಳು ಮತ್ತು ವಿಶ್ವವಿದ್ಯಾಲಯಗಳು ಉಗಮಗೊಂಡವು. ಪೋಪನ ಅಧಿಕಾರ ಹೆಚ್ಚಿತು.

3. **ನಂತರದ ಮಧ್ಯಯುಗ:** ಇದು ಸಾ.ಶ 1300 ರಿಂದ 1453ರ ವರೆಗಿನ ಅವಧಿ. ಈ ಅವಧಿಯು ಪಟ್ಟಣ ಮತ್ತು ನಗರಗಳ ಮುಂದುವರೆದ ಬೆಳವಣಿಗೆ, ಊಳಿಗಮಾನ್ಯ ವ್ಯವಸ್ಥೆ ಮತ್ತು ಚರ್ಚಿನ ಅಧಿಕಾರಗಳ ಅವನತಿಗೆ ಸಾಕ್ಷಿಯಾಗಿದೆ. ಹೊಸ ಬುದ್ಧಿಜೀವಿ ವರ್ಗ ಮತ್ತು ಉದ್ಯಮ ವರ್ಗ ಉದಯಿಸಿ, ಅವುಗಳು ಚರ್ಚ್ ಮತ್ತು ರಾಜ್ಯಕ್ಕೆ ಸವಾಲನ್ನು ಒಡ್ಡಿದವು. ಮಧ್ಯಯುಗದ ಪ್ರಮುಖ ಸಂಸ್ಥೆಗಳಾದ ಚರ್ಚ್, ಸಮಾಜ ಮತ್ತು ರಾಜ್ಯ ಹಾಗೂ ಊಳಿಗಮಾನ್ಯ ವ್ಯವಸ್ಥೆಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

ಮಧ್ಯಕಾಲೀನ ಚರ್ಚ್: ರೋಮನ್ ಸಾಮ್ರಾಜ್ಯದ ಪತನದಿಂದಾಗಿ ಯುರೋಪಿನಲ್ಲಿ ರಾಜಕೀಯ ಹಾಗೂ ಸಾಮಾಜಿಕ ಅಸ್ಥಿರತೆ ಉಂಟಾಯಿತು. ಚರ್ಚ್ ಈ ಕಂದಕವನ್ನು ತುಂಬುವುದರೊಂದಿಗೆ ಶಕ್ತಿಯುತವಾದ ಪ್ರಭುತ್ವವಾಗಿ ಹೊರಹೊಮ್ಮಿತು. ಚರ್ಚ್ ಆ ಕಾಲಕ್ಕೆ ಅಗತ್ಯವಾದ ಸ್ಥಿರತೆ ಹಾಗೂ ಸುವ್ಯವಸ್ಥೆಯನ್ನು ತಂದಿತು. ಚರ್ಚ್ ಅನೇಕ ವಿದ್ವಾಂಸರನ್ನು ಪ್ರೋತ್ಸಾಹಿಸಿತು. ಇದು ಕ್ರೈಸ್ತ ಮಿಷನರಿ ಚಟುವಟಿಕೆಗಳನ್ನು ಉತ್ತೇಜಿಸಿತು.

ಯುರೋಪಿನಾದ್ಯಂತ ಅನೇಕ ಚರ್ಚ್‌ಗಳು ಸ್ಥಾಪನೆಗೊಂಡು, ಅವುಗಳು ಸಮಾಜ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ತಮ್ಮ ಪಾತ್ರವನ್ನು ಹೆಚ್ಚಿಸಿಕೊಂಡವು.

ಪೋಪನ ಅಧಿಕಾರದ ಉದಯ: ಪೂರ್ವ ಮಧ್ಯಯುಗದಲ್ಲಿ ಚರ್ಚಿಗೆ ಸಂಬಂಧಿಸಿದ ವ್ಯವಸ್ಥೆಯು (Ecclesiastical system) ಸ್ಥಾಪನೆಗೊಂಡಿತು. ಪ್ರತಿಯೊಂದು ಪ್ರಾಂತ್ಯವು ಬಿಷಪ್‌ನಿಂದ ಆಳಲ್ಪಡುತ್ತಿತ್ತು. ಯುರೋಪಿನಾದ್ಯಂತ ಇರುವ ಎಲ್ಲಾ ಪ್ರಾಂತ್ಯಗಳ ಬಿಷಪ್‌ರಿಗೂ ಸಮಾನ ಸ್ಥಾನಮಾನವಿತ್ತು. ಕಾಲಾಂತರದಲ್ಲಿ ರೋಮಿನ ಬಿಷಪ್‌ನು ಎಲ್ಲರಿಗಿಂತಲೂ ಸಶಕ್ತನಾಗಿ ಹೊರ ಹೊಮ್ಮಿದನು. ಅವನನ್ನು 'ಪೋಪ್' ಎಂದು ಕರೆಯಲಾಯಿತು. ಸಂತ ಪೀಟರ್ ಮೊದಲ ಪೋಪ್. ಗ್ರೆಗೋರಿ ಮಹಾಶಯನು ಪೋಪನಾದ ಕಾಲದಲ್ಲಿ (ಸಾ.ಶ.590–604) ಪೋಪ್ ಹುದ್ದೆಯು ಅತ್ಯಂತ ಪ್ರಭಾವಶಾಲಿಯಾಯಿತು. ಅವನು ಪೇಪಸಿಯನ್ನು (ಪೋಪ್‌ನ ಪ್ರಭುತ್ವ) ಸ್ಥಾಪಿಸಿದನು ಮತ್ತು ಲೊಂಬಾರ್ಡರ ಆಕ್ರಮಣದಿಂದ ರೋಮನ್ನು ರಕ್ಷಿಸಿದನು. ಅವನು ಆಡಳಿತಾತ್ಮಕ ಮತ್ತು ರಾಜನೀತಿ ಕೌಶಲ್ಯವನ್ನು ಹೊಂದಿದ್ದನು ಮತ್ತು ಸ್ಥಿರತೆಯನ್ನು ತಂದನು. ಆ ಕಾಲಕ್ಕೆ ಲ್ಯಾಟಿನ್ ಕ್ರೈಸ್ತ ಧರ್ಮದ 'ದೈವಿಕ ಭಾಷೆ'ಯಾಯಿತು.

ಚರ್ಚ್ ಮತ್ತು ರಾಜನ ನಡುವಣ ಸಂಘರ್ಷ: ಪೋಪ್ 7ನೇ ಗ್ರೆಗೋರಿ ಮತ್ತು ಪವಿತ್ರ ರೋಮನ್ ಸಾಮ್ರಾಟನಾದ 4ನೇ ಹೆನ್ರಿಯ ನಡುವೆ ಸಂಘರ್ಷ ಉದ್ಭವಿಸಿತು. ರಾಜನು ಪೋಪನ ಒಪ್ಪಿಗೆ ಕೇಳದೆ ಮಿಲಾನ್ ನಗರದ ಬಿಷಪ್‌ನನ್ನು ನೇಮಕ ಮಾಡಿದನು. ಪೋಪನು ರಾಜನ ಪ್ರಭಾವದಿಂದ ಚರ್ಚ್‌ನ್ನು ಮುಕ್ತಗೊಳಿಸಲು ಬಯಸಿದನು. ಅವನು 4ನೇ ಹೆನ್ರಿಯ ವಿರೋಧಿಗಳಾಗಿದ್ದ ಅನೇಕ ಜರ್ಮನ್ ರಾಜಕುಮಾರರೊಂದಿಗೆ ಒಕ್ಕೂಟ ರಚಿಸಿಕೊಂಡನು. ಅವರೆಲ್ಲರೂ ಒಟ್ಟಾಗಿ ರಾಜನನ್ನು ಪದಚ್ಯುತಿಗೊಳಿಸಿದರು. ಆದ್ದರಿಂದ ಅವನು ಪೋಪನ ಕ್ಷಮೆಯಾಚಿಸುವಂತಾಯಿತು. ಅದಕ್ಕಾಗಿ ರಾಜನು ಬರಿಗಾಲಿನಲ್ಲಿ ಮತ್ತು ಸಾಧಾರಣ ಬಟ್ಟೆತೊಟ್ಟು ಮೂರು ದಿವಸ ಪೋಪನ ಕೋಟೆಯ ಬಾಗಿಲಲ್ಲಿ ಕಾಯಬೇಕಾಯಿತು. ಕೊನೆಗೆ ರಾಜನು ಕ್ಷಮಾದಾನ ಮತ್ತು ಅಧಿಕಾರವನ್ನು ಪಡೆದನು. ಆನಂತರದ ನಾಟಕೀಯ ಪ್ರಸಂಗವೊಂದರಲ್ಲಿ ರಾಜ 4ನೇ ಹೆನ್ರಿಯು ಪೋಪ್ 7ನೇ ಗ್ರೆಗೋರಿಯನ್ನು ಬೆನ್ನಟ್ಟಿ ರೋಮಿನಿಂದ ಹೊರಗಟ್ಟಿದನು. 14ನೇ ಶತಮಾನದಲ್ಲಿ ಈ ಕೆಳಗಿನ ಕಾರಣಗಳಿಂದ ಪೋಪನ ಪರಮಾಧಿಕಾರ ಪತನ ಹೊಂದಿತು.

ನಾಲ್ಕನೇ ಹೆನ್ರಿ

ಪೋಪ್ 7ನೇ ಗ್ರೆಗೋರಿ

ಪೋಪ್‌ನ ಬಳಿ ಹೆನ್ರಿಯು ಕ್ಷಮೆ ಯಾಚಿಸುತ್ತಿರುವ ದೃಶ್ಯ

1. ಕ್ರೈಸ್ತ ಧರ್ಮದೊಳಗಿನ ವ್ಯವಸ್ಥೆ ಮತ್ತು ಪೋಪನ ಅಧಿಕಾರಿಗಳಿಗೆ ಸಂಬಂಧಿಸಿದ ವ್ಯವಸ್ಥೆಯೊಳಗಿನ ವೈರುಧ್ಯ.
2. ಅನೈತಿಕ ಉತ್ತರಾಧಿಕಾರಿಗಳು.

3. ರಾಷ್ಟ್ರೀಯ ರಾಜಪ್ರಭುತ್ವಗಳ ಏಳಿಗೆ.

ಪೋಪನ ಪೀಠದಲ್ಲಿ ಒಡಕು: 14ನೇ ಶತಮಾನದಲ್ಲಿ ಫ್ರಾನ್ಸಿನ ರಾಜನಾದ 4ನೇ ಫಿಲಿಪ್ ಮತ್ತು ರೋಮಿನ ಪೋಪನಾದ 8ನೇ ಬೋನಿಫೇಸ್ ನಡುವೆ ಸಂಘರ್ಷ ಆರಂಭವಾಯಿತು. ಇದು 4ನೇ ಫಿಲಿಪ್‌ನು ಚರ್ಚಿನ ಮೇಲೆ ಹೇರಿದ ತೆರಿಗೆಯ ಪರಿಣಾಮವಾಗಿತ್ತು. ಬೊನಿಫೇಸ್ ಇದನ್ನು ವಿರೋಧಿಸಿದನಲ್ಲದೆ ಚರ್ಚಿನ ಮೇಲೆ ತೆರಿಗೆಯನ್ನು ವಿಧಿಸಬೇಕಾದರೆ ಪೋಪನ ಅನುಮತಿಯನ್ನು ಪಡೆಯಬೇಕೆಂದು ತಿಳಿಸಿದನು. ಈ ಸಂಘರ್ಷವು ಎಷ್ಟು ತೀವ್ರ ಸ್ವರೂಪ ಪಡೆಯಿತೆಂದರೆ, ಬೊನಿಫೇಸ್ ಹಲ್ಲೆಗೀಡಾಗಿ ಸತ್ತನು. ಆನಂತರ ಫ್ರಾನ್ಸಿನ 5ನೇ ಕ್ಲೆಮೆಂಟ್‌ನು ಪೋಪನಾದನು. ಅವನು ರೋಮಿಗೆ ಹೋಗದೇ, ಪೋಪನ ಆಸ್ಥಾನವನ್ನು ಅವಿಗ್ನಾನ್ ನಗರಕ್ಕೆ ವರ್ಗಾಯಿಸಿದನು. ಅದು 67 ವರ್ಷಗಳ ಕಾಲ 'ಅವಿಗ್ನಾನ್' ನಗರದಲ್ಲಿಯೇ ಮುಂದುವರೆಯಿತು. ಈ ಅವಧಿಯ ಎಲ್ಲಾ ಏಳು ಜನ ಪೋಪರು ಫ್ರೆಂಚರಾಗಿದ್ದು, ಅವಿಗ್ನಾನ್‌ನಲ್ಲಿಯೇ ನೆಲೆಸಿದರು. ನಂತರ 11ನೇ ಗ್ರೆಗೋರಿಯು ಪೋಪನ ಆಸ್ಥಾನವನ್ನು ಮತ್ತೆ ರೋಮಿಗೆ ವರ್ಗಾಯಿಸಿದನು.

ಅವಿಗ್ನಾನ್ ನಗರದಲ್ಲಿ ಪೋಪನ ಅರಮನೆ

ರೋಮಿನ ಚರ್ಚ್

ಪೋಪ್ 6ನೇ ಅರ್ಬನ್‌ನ ಅವಧಿಯಲ್ಲಿ ಅವನಿಗೂ ಮತ್ತು ಕಾರ್ಡಿನಲ್‌ಗಳಿಗೂ ಭಿನ್ನಾಭಿಪ್ರಾಯ ಮೂಡಿತು. ಅದು ಪೋಪನ ಪೀಠದಲ್ಲಿನ ಒಡಕಿಗೆ ಕಾರಣವಾಯಿತು. ಕಾರ್ಡಿನಲ್‌ಗಳು 7ನೇ ಕ್ಲಮೆಂಟ್‌ನನ್ನು ಪ್ರತಿ ಪೋಪನನ್ನಾಗಿ ಆಯ್ಕೆ ಮಾಡಿದರು ಮತ್ತು ಅವನು ಪೋಪನ ಆಸ್ಥಾನವನ್ನು ಮತ್ತೆ ಅವಿಗ್ನಾನ್ ನಗರಕ್ಕೆ ವರ್ಗಾಯಿಸಿದನು. 6ನೇ ಅರ್ಬನ್ ರೋಮಿನಲ್ಲಿಯೇ ಪೋಪನಾಗಿ ಮುಂದುವರಿದನು. ಇದರ ಪರಿಣಾಮವಾಗಿ ಪೋಪನ ಅಧಿಕಾರವು ಎರಡು ಗುಂಪುಗಳಾಗಿ ವಿಭಜಿನೆಗೊಂಡಿತು. ಈ ಸಮಸ್ಯೆಯನ್ನು ಬಗೆಹರಿಸಲು ಕಾರ್ಡಿನಲ್‌ಗಳು 5ನೇ ಅಲೆಕ್ಸಾಂಡರ್‌ನನ್ನು ಮತ್ತೊಬ್ಬ ಪ್ರತಿ ಪೋಪನನ್ನಾಗಿ ಆಯ್ಕೆ ಮಾಡಿದರು. ಇತರ ಇಬ್ಬರು ಪೋಪರು ರಾಜೀನಾಮೆಯನ್ನು ನೀಡುವಂತೆ ಕೇಳಿದರು. ಇದಕ್ಕೆ ನಿರಾಕರಿಸಿದಾಗ ಅವರನ್ನು ಧರ್ಮದಿಂದ ಹೊರಹಾಕಲಾಯಿತು. ಹೀಗೆ ಸಾ.ಶ. 1414ರಲ್ಲಿ ಪೋಪನ ಪ್ರಭುತ್ವದಲ್ಲಿನ ಒಡಕು ಕೊನೆಗೊಂಡಿತು. ಅದು ಪೋಪನ ಶಕ್ತಿ ಮತ್ತು ಪ್ರತಿಷ್ಠೆಯನ್ನು ಕುಂದಿಸಿತು.

ಮಧ್ಯಕಾಲೀನ ಸಮಾಜ: ನಗರ ಮತ್ತು ವಾಣಿಜ್ಯ ಕೇಂದ್ರಿತ ಮೆಡಿಟರೇನಿಯನ್ ನಾಗರಿಕತೆಯು ಕೃಷಿ ಪ್ರಧಾನ ಉತ್ತರ ಅಟ್ಲಾಂಟಿಕ್ ಪ್ರದೇಶಕ್ಕೆ ಸ್ಥಳಾಂತರಗೊಂಡಿತು ಈ ವೇಳೆಗೆ ಚರ್ಚ್ ಬಲಿಷ್ಠವಾಗಿತ್ತು. ಅದು ಆಳುವ ವರ್ಗಗಳು ಹಾಗೂ ಸಾಮಾನ್ಯ ಜನರ ಮೇಲೂ ಪ್ರಭಾವ ಬೀರಿತು. ಜನರ ವರ್ತನೆ ಮತ್ತು ಆಲೋಚನಾ ಕ್ರಮಗಳ ಮೇಲೆ ಚರ್ಚ್, ಪಾಶ್ಚಿಮಾತ್ಯ ಮಾದರಿಯಲ್ಲಿ ಅಪಾರ ಪ್ರಭಾವವನ್ನು ಹೊಂದಿತ್ತು.

ಮಧ್ಯಕಾಲೀನ ಸಮಾಜದ ಬೆಳವಣಿಗೆಗಳು ಆರ್ಥಿಕತೆ, ಶಿಕ್ಷಣ, ಸಾಹಿತ್ಯ ಮತ್ತು ಪುನರುತ್ಥಾನದ ಮೇಲೆ ಪ್ರಭಾವ ಬೀರಿದವು ಅವುಗಳನ್ನು ಈ ಕೆಳಗೆ ಚರ್ಚಿಸಿದೆ.

ಕೃಷಿ: ಮಧ್ಯಯುಗದ ನಾಗರಿಕತೆಯ ಬೆಳವಣಿಗೆಯಲ್ಲಿ ಕೃಷಿಯು ಮಹತ್ವದ ಅಂಶವಾಗಿದೆ. ಅನಾಗರಿಕ ಜರ್ಮನ್ ಬುಡಕಟ್ಟುಗಳಿಂದಾದ ಆಕ್ರಮಣ ಮತ್ತು ಪದೇ ಪದೇ ನಡೆಯುತ್ತಿದ್ದ ಯುದ್ಧಗಳಿಂದ ರಾಜಕೀಯ ಅಸ್ಥಿರತೆ ಉಂಟಾಗಿ ಕೃಷಿಯು ಹಿನ್ನಡೆಯಾಯಿತು. ನಂತರ ಹೊಸ ಭೂಮಿಗಳನ್ನು ಉಳುಮೆಗೆ ಒಳಪಡಿಸಲಾಯಿತು. ಇದರಿಂದಾಗಿ ಕೃಷಿ ಕ್ರಾಂತಿಯಾಯಿತು. ಹೊಸ ತಂತ್ರಜ್ಞಾನ ಮತ್ತು ಸಲಕರಣೆಗಳಾದ–ಭಾರವಾದ ನೇಗಿಲು, ಭೂಮಿಗಳಲ್ಲಿ ಆವರ್ತಿತ ಬೆಳೆವಿಧಾನ, ನೀರಿನ ಬಳಕೆ, ಗಾಳಿಯಂತ್ರ, ಕಬ್ಬಿಣದ ಕೃಷಿ ಸಲಕರಣೆಗಳು, ನೇಗಿಲು ಎಳೆಯಲು ಕುದುರೆಗಳ ಬಳಕೆ ಮುಂತಾದ ತಂತ್ರಗಳು ಮತ್ತು ಸಲಕರಣೆಗಳು ಬಳಕೆಗೆ ಬಂದವು. ಅದು ಕೃಷಿ ಉತ್ಪಾದನೆಯ ಅಪಾರ ಹೆಚ್ಚಳಕ್ಕೆ ಸಹಾಯ ನೀಡಿತು. ಇದು ಜನಸಂಖ್ಯೆ ಹೆಚ್ಚಳ ಮತ್ತು ಸಾಕು ಪ್ರಾಣಿಗಳ ಸಂಖ್ಯೆ ವೃದ್ಧಿಗೊಳ್ಳಲು ಕಾರಣವಾಯಿತು. ಇವುಗಳ ಪರಿಣಾಮವಾಗಿ ಮಾನವ ನೆಲೆಗಳು ಪಟ್ಟಣಗಳಾಗಿ ಬೆಳೆದವು ನಂತರ ವ್ಯಾಪಾರ– ವಾಣಿಜ್ಯ ಗಳಲ್ಲಿನ ವೃದ್ಧಿಯು ನಗರಗಳ ಬೆಳವಣಿಗೆಗೆ ಸಹಾಯವಾಯಿತು.

ಮೆನೋರಿಯಲ್ ವ್ಯವಸ್ಥೆ: ಇದು ಉನ್ನತ ಮಧ್ಯಯುಗದ ಪ್ರಮುಖ ಸಂಸ್ಥೆಯಾಗಿದೆ. ಈ ವ್ಯವಸ್ಥೆಯಡಿಯಲ್ಲಿ ಜೀತದಾಳುಗಳು ಭೂಮಾಲೀಕರ ಒಡೆತನದ ಜಾಗೀರಿನ (ಮೇನರ್) ಸುತ್ತಮುತ್ತಲಿನ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದರು. ಜೀತದಾಳುಗಳು ಗುಲಾಮರಾಗಿರಲಿಲ್ಲ. ಅವರೂ ತುಂಡು ಭೂಮಿಯನ್ನು ಹೊಂದಿದ್ದರು, ಆದರೆ ಒಬ್ಬ ಸರದಾರನ ನಿಯಂತ್ರಣ ಮತ್ತು ವ್ಯಾಪ್ತಿಗೆ ಒಳಪಟ್ಟಿದ್ದರು. ಅವರು ಸರದಾರನ ಮತ್ತು ತಮ್ಮ ಭೂಮಿಗಳಲ್ಲೂ ಕೆಲಸ ಮಾಡಿ, ಒಡೆಯನಿಗೆ ಗೇಣಿ ನೀಡುತ್ತಿದ್ದರು. ಜೀತದಾಳುಗಳು ಸಾಮಾನ್ಯವಾಗಿ ದನ ಮೇಯಿಸುವುದು, ಕಟ್ಟಿಗೆ ಸಂಗ್ರಹ, ಮೀನು ಹಿಡಿಯುವುದು ಮತ್ತು ಬೇಸಾಯವನ್ನು ಒಟ್ಟಾಗಿ ಮಾಡುತ್ತಿದ್ದರು. ಅದು ಒಂದು ರೀತಿಯಲ್ಲಿ ಆಪ್ತ ಸಾಮುದಾಯಿಕ ಜೀವನವಾಗಿತ್ತು. ನಂತರದ ಮಧ್ಯಯುಗದಲ್ಲಿ ಜೀತದಾಳುಗಳ ಸ್ಥಿತಿಯಲ್ಲಿ ಸುಧಾರಣೆಯಾಯಿತು. ಸರದಾರನಿಗೆ ಸುಂಕ ಅಥವಾ ಸೇವೆಗೆ ಬದಲಾಗಿ ಬಾಡಿಗೆಯನ್ನು ಕೊಡುತ್ತಿದ್ದರು.

ಸಾಮಾಜಿಕ–ಆರ್ಥಿಕ ಬದಲಾವಣೆಗಳು: ಈ ಕಾಲದಲ್ಲಿ ಒಂದು ಶ್ರೀಮಂತವರ್ಗ ಉದಯಿಸಿತು. ಅವರು ಸಾಂಸ್ಕೃತಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸ್ಥಳೀಯ ಕಾದಾಟಗಳನ್ನೂ, ಕದನಗಳನ್ನೂ ಚರ್ಚ್ ನಿಯಂತ್ರಿಸುತ್ತಿತ್ತು. ಇದರಿಂದ ಸರದಾರರು ವೀರ–ಯೋಧರ (Knights) ಆದರ್ಶವನ್ನು ಬೆಳೆಸಿಕೊಳ್ಳಲು, ಶಿಷ್ಟಾಚಾರದ ಬೆಳವಣಿಗೆಗೂ ಕಾರಣವಾಯಿತು. ಮಹಿಳೆಯರ ಬಗೆಗಿನ ಮನೋಭಾವವು ಬದಲಾಯಿತು.

ಮೆನೋರಿಯಲ್ ಪದ್ಧತಿಯಲ್ಲಿ ಜೀತದಾಳುಗಳು ಗೇಣಿಯನ್ನು ನೀಡಲು ಆರಂಭಿಸಿದರು. ಇದರಿಂದ ನಾಣ್ಯ ಅಥವಾ ಹಣ ವಸ್ತು ವಿನಿಮಯ ಪದ್ಧತಿಯ ಸ್ಥಾನವನ್ನು ಆಕ್ರಮಿಸಿತು. ಹಣದ ಚಲಾವಣೆಯು ವ್ಯಾಪಾರ ಮತ್ತು ವಾಣಿಜ್ಯದ ಪುನಶ್ಚೇತನಕ್ಕೆ ಸಹಾಯಕವಾಯಿತು. ಇದು ರಸ್ತೆ ಜಾಲ ಮತ್ತು ನದಿ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಗೆ ಕಾರಣವಾಯಿತು. ಪೀಸಾ, ವೆನಿಸ್ ಮತ್ತು ಜಿನೋವಾದಂತಹ ನಗರ ರಾಜ್ಯಗಳು ವ್ಯಾಪಾರಿ ಕೇಂದ್ರಗಳಾಗಿ ಪ್ರವರ್ಧಮಾನಕ್ಕೆ ಬಂದವು. ಪ್ಯಾರಿಸ್, ಲಂಡನ್ ಮತ್ತು ಕೊಲೋನ್‌ಗಳಂತಹ ನಗರಗಳ ಜನಸಂಖ್ಯೆ ದ್ವಿಗುಣಗೊಂಡಿತು. ಗ್ರಾಮೀಣ ವಸ್ತುಗಳ ಬೇಡಿಕೆ ಹೆಚ್ಚಾಗಿ ಜನರ ಆರ್ಥಿಕ ಜೀವನ ಸದೃಢವಾಯಿತು. ಸುಶಿಕ್ಷಿತ ರೀತಿಯ ನಗರ ಜೀವನವು ಈ ಕಾಲದ ಒಂದು ಪ್ರಮುಖ ಲಕ್ಷಣವಾಗಿತ್ತು. ಅಲ್ಲಿ ವ್ಯಾಪಾರಿವರ್ಗವೊಂದು ಬೆಳೆಯಿತು. ಈ ವರ್ಗವು ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ವ್ಯಾಪಾರಿ ಸಂಘಗಳನ್ನು ಸ್ಥಾಪಿಸಿತು. ವಾಣಿಜ್ಯ ವ್ಯವಹಾರಗಳಿಗಾಗಿ ಅನೇಕ ನಿಯಮಗಳನ್ನು ಮಾಡಿತು. ಪುರೋಹಿತರಲ್ಲಿ ಎರಡು ವರ್ಗಗಳಿದ್ದವು– ಉನ್ನತ ವರ್ಗ ಮತ್ತು ಕೆಳವರ್ಗ. ಉನ್ನತ ವರ್ಗದ ಪುರೋಹಿತರು ವೈಭವಯುತ ಜೀವನವನ್ನು ನಡೆಸಿದರೆ,

ಕೆಳವರ್ಗದ ಪುರೋಹಿತರು ಸೀಮಿತ ಅವಶ್ಯಕತೆಗಳೊಂದಿಗೆ ದೈನ್ಯತೆಯ ಜೀವನವನ್ನು ನಡೆಸುತ್ತಿದ್ದರು. ಇದರಿಂದ ಮೇಲ್ವರ್ಗದ ಪುರೋಹಿತರ ಬಗ್ಗೆ ತಾತ್ಸಾರ ಬೆಳೆಯಿತು.

ಶಿಕ್ಷಣ: ಆರಂಭದಲ್ಲಿ ಶಿಕ್ಷಣದ ಮೇಲೆ ಚರ್ಚ್ ಸಂಪೂರ್ಣ ನಿಯಂತ್ರಣ ಹೊಂದಿತ್ತು. ಅಲ್ಲಿ ಕಾನೂನು, ಲ್ಯಾಟಿನ್, ವ್ಯಾಕರಣ ಮತ್ತು ಪುರಾತನ ರೋಮನ್ ಸಾಹಿತ್ಯವನ್ನು ಕಲಿಸಲಾಗುತ್ತಿತ್ತು. ಶ್ರೀಮಂತರಾದ ವ್ಯಾಪಾರಿಗಳು ಮತ್ತು ಸರದಾರರು ತಮ್ಮ ಮಕ್ಕಳಿಗೆ ವ್ಯವಹಾರಿಕ ಶಿಕ್ಷಣ ನೀಡುವ ಶಾಲೆಗಳನ್ನು ಅಭಿವೃದ್ಧಿ ಪಡಿಸಿದರು. ಅವರು ಚರ್ಚ್‌ನ ಹಿಡಿತದಿಂದ ಮುಕ್ತರಾಗಿದ್ದರು. ಸಾ.ಶ 1050ರಲ್ಲಿ ಪಶ್ಚಿಮ ಯೂರೋಪಿನ ಜನಸಂಖ್ಯೆಯಲ್ಲಿ ಸಾಕ್ಷರತೆ ಶೇಕಡಾ ಒಂದರಷ್ಟಿದ್ದರೆ, 1340ಕ್ಕೆ ಶೇಕಡಾ 40 ಕ್ಕೆ ಏರಿತು. ದೇಶೀಯ ಭಾಷೆಗಳಲ್ಲಿ ಶಿಕ್ಷಣ ಆರಂಭವಾಯಿತು. ಅದು ಬುದ್ಧಿಜೀವಿಗಳ ಭಾಷೆಯಾದ ಲ್ಯಾಟಿನ್‌ಗೆ ಸವಾಲೊಡ್ಡಿತು.

ವಿಶ್ವವಿದ್ಯಾಲಯಗಳ ಉಗಮ: ವಿಶ್ವವಿದ್ಯಾಲಯಗಳ ಬೆಳವಣಿಗೆ ಈ ಕಾಲದ ಮತ್ತೊಂದು ಪ್ರಮುಖ ಬೆಳವಣಿಗೆಯಗಿತ್ತು. ಈ ಕಾಲದಲ್ಲಿ ಸ್ಥಾಪನೆಯಾದ ಪ್ರಮುಖ ವಿಶ್ವವಿದ್ಯಾಲಯಗಳೆಂದರೆ: ಇಟಲಿಯ ಸಲೇರ್ನೊ, ಬೊಲೊಗ್ನಾ ಮತ್ತು ನೇಪಲ್ಸ್, ಫ್ರಾನ್ಸಿನ ಪ್ಯಾರಿಸ್ ಮತ್ತು ಮಾಂಟ್‌ಪೆಲ್ಲಿಯರ್, ಇಂಗ್ಲೆಂಡಿನ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ಹಾಗೂ ಸ್ಪೈನಿನ ಸಾಲಮಾಂಕ. ವಿಶ್ವವಿದ್ಯಾಲಯಗಳ ಸ್ಥಾಪನೆ 'ವಿದ್ವತ್ ವರ್ಗ'ದ ಬೆಳವಣಿಗೆಗೆ ಕಾರಣವಾಯಿತು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ

ಕೇಂಬ್ರಿಡ್ಜ್ ವಿಶ್ವವಿದ್ಯಾಲಯ

ಬುದ್ಧಿಜೀವಿಗಳ ಪುನರುತ್ಥಾನ: ರಾಜಕೀಯ ಅಸ್ಥಿರತೆ, ಬದುಕಿನ ಅಭದ್ರತೆ ಮತ್ತು ಜೀವನಾಧಾರಗಳ ಕೊರತೆಯಿಂದ ಆರಂಭಿಕ ಮಧ್ಯಯುಗದಲ್ಲಿ ಬೌದ್ಧಿಕ ಜೀವನವೆಂಬುದೇ ಇರಲಿಲ್ಲ. ಉನ್ನತ ಮಧ್ಯಯುಗದಲ್ಲಿ ವ್ಯವಸಾಯೋತ್ಪನ್ನದಲ್ಲಿಯ ಹೆಚ್ಚಳ, ಆಡಳಿತಾಭಿವೃದ್ಧಿ ಮತ್ತು ನಗರಗಳು ಮತ್ತು ಪಟ್ಟಣಗಳ ಬೆಳವಣಿಗೆಯೊಂದಿಗೆ ಬೌದ್ಧಿಕ ಜೀವನದ ಅಡಿಪಾಯವನ್ನು ಹಾಕಲಾಯಿತು. ತೆರಿಗೆ ವಸೂಲಾತಿಯ ಹೊಸ ಪದ್ಧತಿ, ದಾಖಲೆ ನಿರ್ವಹಣೆ, ಕಾನೂನು ಮತ್ತು ಆಡಳಿತಗಳು ಶಿಕ್ಷಣದ ಅಗತ್ಯತೆ ಹೆಚ್ಚಿಸಿದವು. ಗ್ರೀಕ್, ಲ್ಯಾಟಿನ್ ಮತ್ತು ಇಸ್ಲಾಂನ ಜ್ಞಾನ ಹಾಗೂ ವೃತ್ತಿಪರ ವಿಷಯಗಳ ಬೆಳವಣಿಗೆಯಿಂದ ಬುದ್ಧಿಜೀವಿಗಳ ಪುನರುತ್ಥಾನಕ್ಕೆ ಕಾರಣವಾಯಿತು. ಈ ಕಾಲದ ಪ್ರಮುಖ ಬುದ್ಧಿಜೀವಿಗಳೆಂದರೆ–ರಾಬರ್ಟ್ ಗ್ರಾಸ್‌ಟೆಸ್ಟ್, ರೋಜರ್ ಬೇಕನ್, ಪೀಟರ್ ಅಬೆಲಾರ್ಡ್ ಮತ್ತು ಸೈಂಟ್ ಥಾಮಸ್ ಅಕ್ವಿನಾಸ್.

ಸಾಹಿತ್ಯ: ಈ ಕಾಲದಲ್ಲಿ ಸಾಹಿತ್ಯ, ಕಲೆ ಮತ್ತು ವಾಸ್ತು ಶಿಲ್ಪ ಕ್ಷೇತ್ರಗಳಲ್ಲಿ ಬೆಳವಣಿಗೆ ಆಯಿತು. ಫ್ರೆಂಚ್, ಜರ್ಮನ್, ಸ್ಪಾನಿಷ್ ಮತ್ತು ಇಟಾಲಿಯನ್‌ನಂತಹ ದೇಶೀ ಭಾಷೆಗಳ ಸಾಹಿತ್ಯಗಳು ಜನಪ್ರಿಯವಾದವು. ರಮ್ಯ ಕಾವ್ಯಗಳು (ರೊಮ್ಯಾನ್ಸಸ್) ಮತ್ತು 'ಫ್ಯಾಬ್ಲಿಯಾಕ್ಸ್' ಸಾಹಿತ್ಯ ಕ್ಷೇತ್ರಕ್ಕೆ ಪ್ರಮುಖ ಕೊಡುಗೆಗಳಾಗಿದ್ದವು. ಡಾಂಟೆ

ಅಲಿಗೆರಿಯ 'ಡಿವೈನ್ ಕಾಮಿಡಿ' ಮತ್ತು ಜೆಫರಿ ಛಾಸರ್ (ಇಂಗ್ಲಿಷ್ ಸಾಹಿತ್ಯದ ಪಿತಾಮಹ)ನ 'ಕ್ಯಾಂಟರ್‌ಬರಿ ಟೇಲ್ಸ್' ಈ ಕಾಲದ ಪ್ರಮುಖ ಕೃತಿಗಳಾಗಿದ್ದವು.

ಫ್ಯಾಬ್ಲಿಯಾಕ್ಸ್ (Fabliaux): ಮಧ್ಯ ಕಾಲೀನ ಕಾವ್ಯ ಶೈಲಿಯಾದ ಇದು ಚಿತ್ರಕಥಾ ಪುಸ್ತಕವಾಗಿದ್ದು, ವಿಶೇಷವಾಗಿ ಮಕ್ಕಳ ಕೃತಿಯಾಗಿದ್ದು, 12–13ನೇ ಶತಮಾನದ ಫ್ರಾನ್ಸಿನಲ್ಲಿ ಜನಪ್ರಿಯವಾಗಿತ್ತು.

ಡಾಂಟೆಯ ಡಿವೈನ್ ಕಾಮಿಡಿ: ಇದೊಂದು ಪರಿಣಾಮಕಾರಿ ಪ್ರಾಸಗಳಿಂದ ಕೂಡಿದ ಗುರುತರವಾದ ನಿರೂಪಣೆಯಲ್ಲಿರುವ ಇಟಾಲಿಯನ್ ಕಾವ್ಯವಾಗಿದೆ. ಕವಿಯ ನರಕ, ಮೋಕ್ಷ ತಾಣ ಮತ್ತು ಸ್ವರ್ಗದ ಪ್ರಯಾಣವನ್ನು ವಿವರಿಸುತ್ತದೆ. ಈ ಕೃತಿಯು ಪೋಪನ ದೈವಿಕ ಅಧಿಕಾರವನ್ನು ಟೀಕಿಸುತ್ತದೆ.

ವಾಸ್ತುಶಿಲ್ಪ: ಮಧ್ಯಯುಗವು ರೋಮನ್ ಹಾಗೂ ಗೋಥಿಕ್ ಶೈಲಿಯ ಕಟ್ಟಡಗಳು ಮತ್ತು ಸ್ಮಾರಕಗಳನ್ನು ಹೊಂದಿದೆ. ರೋಮನ್ ಶೈಲಿಯ ಪ್ರಮುಖ ಲಕ್ಷಣಗಳೆಂದರೆ– ವೃತ್ತಾಕಾರದ ಕಮಾನು, ಕಿರಿದಾದ ಕಿಟಕಿಗಳು, ಕಲ್ಲಿನ ಬೃಹತ್ ಗೋಡೆಗಳು ಮತ್ತು ಪ್ರಮುಖವಾದ ಅಡ್ಡ ಪಟ್ಟಿಕೆಗಳು (ಉದಾ: 11ನೆಯ ಶತಮಾನದ ವರ್ಮ್ಸ್ ಕೆಥೆಡ್ರಲ್). ಗೋಥಿಕ್ ಶೈಲಿ ಕಟ್ಟಡ ಶೈಲಿಗಳಲ್ಲಿ ಬಹಳ ಆಕರ್ಷವಾದ ಶೈಲಿಗಳಲ್ಲೊಂದಾಗಿತ್ತು. ಅದರ ಮುಖ್ಯ ಲಕ್ಷಣಗಳೆಂದರೆ– ಮೊನಚಾದ ಕಮಾನು, ಛಾವಣಿ ಕಮಾನುಗಳ ಕೂಡಂಚು ಮತ್ತು ಊರೆಗೋಡೆ (ಉದಾ: ರ್ಹೇಮ್ಸ್ ಕೆಥೆಡ್ರಲ್ ಮತ್ತು ಪ್ಯಾರಿಸ್‌ನ ಲಾ ಸೈಂಟ್ ಛಾಪೆಲ್).

ವರ್ಮ್ಸ್ ಕೆಥೆಡ್ರಲ್

ರ್ಹೇಮ್ಸ್ ಕೆಥೆಡ್ರಲ್

ಮಧ್ಯ ಯುಗೀನ ರಾಜ್ಯ: ರೋಮನ್ ಸಾಮ್ರಾಜ್ಯದ ಅವನತಿಯೊಂದಿಗೆ ಜರ್ಮನ್ ಬುಡಕಟ್ಟು ದಾಳಿ ಆರಂಭವಾಯಿತು. ಇದರಿಂದ ಅರಾಜಕತೆ ಹಾಗೂ ಅಸ್ಥಿರತೆ ಉಂಟಾಗಿ ಅದು ಊಳಿಗಮಾನ್ಯ ಪದ್ಧತಿಗೆ ದಾರಿ ಮಾಡಿಕೊಟ್ಟಿತು. ಊಳಿಗಮಾನ್ಯ ಪದ್ಧತಿಯು ಮಧ್ಯಯುಗದಲ್ಲಿ ಅನೇಕ ಪ್ರಾದೇಶಿಕ ಭಿನ್ನತೆಗಳೊಂದಿಗೆ ವಿಶಾಲವಾಗಿ ಹರಡಿದ ರಾಜಕೀಯ ವ್ಯವಸ್ಥೆಯಾಗಿತ್ತು. ಇದೊಂದು ಪಿರಾಮಿಡ್ ಆಕೃತಿಯ ರಚನೆಯಾಗಿದ್ದು ಅದರ ತುದಿಯಲ್ಲಿ ರಾಜನಿದ್ದನು. ಕೆಳಸ್ಥರವು ರೈತರು ಜೀತದಾಳುಗಳಿಂದ ರಚಿತವಾಗಿತ್ತು. ಚರ್ಚ್ ಕೂಡಾ ರಾಜ್ಯಕ್ಕೆ ಪ್ರಬಲವಾದ ಮತ್ತು ಸ್ಪರ್ಧಾತ್ಮಕ ಪಾಲುದಾರನಾಗಿತ್ತು. ಚರ್ಚ್ ಕೂಡ ರಾಜರಂತೆ ಭೂಮಿ, ಹಿಡುವಳಿ ದಾರರು ಮತ್ತು

ಜೀತದಾಳುಗಳ ಮಾಲೀಕತ್ವ ಹೊಂದಿತ್ತು, ಮತ್ತು ಅಲ್ಲಿನ ಆಡಳಿತ ಮಾಡುವುದರೊಂದಿಗೆ ಅವುಗಳ ರಕ್ಷಣೆಗೂ ಹೋರಾಡುತ್ತಿತ್ತು. ರಾಜರೂ ಮತ್ತು ಪೋಪರಿಬ್ಬರು 'ದೈವ ದತ್ತ' ಅಧಿಕಾರದಲ್ಲಿ ಹಕ್ಕು ಸ್ಥಾಪನೆ ಮಾಡುತ್ತಿದ್ದರು. ಇದು ಪರಸ್ಪರ ಅಧಿಕಾರ ಮತ್ತು ನಿಯಂತ್ರಣಕ್ಕಾಗಿ ಹೋರಾಟಗಳಿಗೆ ಕಾರಣವಾಯಿತು. ಚರ್ಚ್ ಹಾಗೂ ರಾಜರಿಬ್ಬರು ಆಡಳಿತ ನಡೆಸಲು ಜನರಿಂದ ವಿಧೇಯತೆಯನ್ನು ಬಯಸಿದರು. ಈ ಹೋರಾಟದಲ್ಲಿ ಒಮ್ಮೊಮ್ಮೆ ಚರ್ಚ್ ಮೇಲುಗೈ ಸಾಧಿಸಿದರೆ, ಮತ್ತೊಮ್ಮೆ ರಾಜನ ಮೇಲುಗೈ ಆಗುತ್ತಿತ್ತು. ಅಂತಿಮವಾಗಿ ಚರ್ಚ್‌ನ್ನು ನಿಗ್ರಹಿಸುವಲ್ಲಿ ರಾಜರದೇ ಮೇಲುಗೈ ಆಗಿತ್ತು.

ಮಧ್ಯಕಾಲೀನ ಯುಗದಲ್ಲಿ ಊಳಿಗಮಾನ್ಯ ಪದ್ಧತಿ

ಊಳಿಗಮಾನ್ಯ ಪದ್ಧತಿ ಪಶ್ಚಿಮ ಯೂರೋಪ್‌ನಲ್ಲಿ ಬೆಳೆಯಿತು. ಇದು ಸಾ.ಶ. 5 ರಿಂದ 12ನೆಯ ಶತಮಾನಕ್ಕೆ ಸೀಮಿತವಾಗಿತ್ತು. 5ನೆಯ ಶತಮಾನ ರೋಮನ್ ಸಾಮ್ರಾಜ್ಯದ ಅವನತಿಯನ್ನೂ 12ನೆಯ ಶತಮಾನ ರಾಷ್ಟ್ರೀಯ ರಾಜ್ಯಗಳ ಉದಯವನ್ನೂ ಸೂಚಿಸುತ್ತವೆ. ಒಂದು ಕೇಂದ್ರೀಕೃತ ರಾಜಕೀಯ ಪ್ರಭುತ್ವ ಇಲ್ಲದಿದ್ದುದರಿಂದ, ಈ ಎರಡೂ ಘಟನೆಗಳ ನಡುವಿನ 700 ವರ್ಷಕ್ಕೆ ಒಂದು ಪರ್ಯಾಯ ಆಡಳಿತ ಮತ್ತು ರಾಜಕೀಯ ವ್ಯವಸ್ಥೆಯ ಅವಶ್ಯಕತೆ ಇತ್ತು. ಹಾಗಾಗಿ ಒಂದು ಸಾಂಪ್ರದಾಯಿಕ ವ್ಯವಸ್ಥೆ ಪಶ್ಚಿಮ ಯುರೋಪ್‌ನಲ್ಲಿ ಆರಂಭವಾಯಿತು. ಇದು ಜನರ ಕಾನೂನು, ಸೈನಿಕ ಆಡಳಿತ ಮತ್ತು ಸಾಮಾಜಿಕ–ಆರ್ಥಿಕ ವ್ಯವಸ್ಥೆಯನ್ನು ಒಳಗೊಂಡಿತ್ತು. ಈ ವ್ಯವಸ್ಥೆಯಡಿಯಲ್ಲಿ, ಸೇವೆ ಹಾಗೂ ಶ್ರಮವನ್ನು ನಿರ್ಬಂಧಕಾರವಾದ ಸಾಮೂಹಿಕ ರಕ್ಷಣೆಗೆ ಬದಲಾಗಿ ನೀಡಬೇಕಾಗಿತ್ತು.

ಯುರೋಪಿನ ಊಳಿಗಮಾನ್ಯ ಪದ್ಧತಿ



ಊಳಿಗಮಾನ್ಯ ಪದ್ಧತಿಯು ಸಾಮಾನ್ಯ ಅರ್ಥದಲ್ಲಿ ವಿಕೇಂದ್ರೀಕೃತ ಆಡಳಿತ ಮತ್ತು ಭೂಆಧಾರಿತ ಅರ್ಥವ್ಯವಸ್ಥೆಯಾಗಿತ್ತು. ಫ್ಯೂಡಲಿಸಂ ಎಂಬ ಆಂಗ್ಲ ಪದ ಜರ್ಮನ್ ಭಾಷೆಯ 'ಫ್ಯೂಡ್'ನಿಂದ ಬಂದಿದೆ. ಅದರ ಅರ್ಥ 'ಭೂಮಿಯ ಒಂದು ತುಂಡು'. ಆದ್ದರಿಂದ ಊಳಿಗಮಾನ್ಯ ಪದ್ಧತಿಯು ಮಾಲೀಕತ್ವ ಮತ್ತು ಉಳುಮೆ ಆಧಾರಿತ ಶ್ರೇಣೀಕೃತ ವ್ಯವಸ್ಥೆಯಾಗಿತ್ತು. ಇದು ಪಿರಮಿಡ್ ಆಕೃತಿಯ ರಚನೆಯಾಗಿತ್ತು. ಅತ್ಯಂತ ಮೇಲ್ಭಾಗದಲ್ಲಿ ರಾಜನಿರುತ್ತಿದ್ದ. ಅವನ ಕೆಳಗೆ ಕುಲೀನರು (Nobles) ಮತ್ತು ಅನಂತರ ಸರದಾರು (Knights), ಹಿಡುವಳಿದಾರರು (Vassal) ಇರುತ್ತಿದ್ದರು. ಪಿರಮಿಡ್‌ನ ಅಡಿಯಲ್ಲಿ ಜೀತದಾಳುಗಳು (Serfs) ಇರುತ್ತಿದ್ದರು. ರಾಜನು ಭೂಮಿಯನ್ನು ಕುಲೀನರಿಗೂ ಮತ್ತು ಸರದಾರರಿಗೂ ಹಂಚುತ್ತಿದ್ದನು. ಪ್ರತಿಯಾಗಿ ಅವರು ಹಿಡುವಳಿದಾರರಿಗೂ ಹಂಚುತ್ತಿದ್ದರು ಮತ್ತು ಜೀತದಾಳುಗಳಿಂದ ಉಳುಮೆ ಮಾಡಿಸುತ್ತಿದ್ದರು. ಜೀತದಾಳುಗಳಲ್ಲಿ ಕೆಲವರು ಸ್ವತಂತ್ರ್ಯ, ಕೆಲವರು ನಿಗ್ರಹಿತರೈತರು ಹಾಗೂ ಕಾರ್ಮಿಕರು ಆಗಿರುತ್ತಿದ್ದರು.

ಹಿಡುವಳಿದಾರಿಕೆ: ರಾಜ ಅಥವಾ ಮಹಾ ಒಡೆಯನು (Greater lord) ಕೆಲವೊಬ್ಬರಿಗೆ ಭೂಮಿಯನ್ನು ಕೊಡುಗೆಯಾಗಿ ನೀಡುತ್ತಿದ್ದನು. ಅದನ್ನು 'ಜಾಗೀರು' (Fief) ಎನ್ನುತ್ತಿದ್ದರು. ಮತ್ತು ಯಾವ ವ್ಯಕ್ತಿಯು ಇದನ್ನು ಸ್ವೀಕರಿಸುತ್ತಾನೆಯೋ ಅವನನ್ನು ಆ ರಾಜನ 'ಹಿಡುವಳಿದಾರ' (Vassal) ಎನ್ನುತ್ತಿದ್ದರು. ಇದಕ್ಕಾಗಿ ಸಮಾರಂಭವೊಂದನ್ನು ಏರ್ಪಡಿಸಲಾಗುತ್ತಿತ್ತು ಇದರಲ್ಲಿ ಹಿಡುವಳಿದಾರನು ಸ್ವಾಮಿ ಭಕ್ತಿ ಮತ್ತು ನಿಷ್ಠೆಯ ಪ್ರತಿಜ್ಞೆಯನ್ನು ಕೈಗೊಳ್ಳುತ್ತಿದ್ದನು.

ಹಿಡುವಳಿದಾರನು ರಾಜನ ಆಸ್ಥಾನಕ್ಕೆ ಹಾಜರಾಗಿ ನ್ಯಾಯಾಂಗ, ರಾಜಕೀಯ ಮತ್ತು ಆಡಳಿತ ವಿಷಯಗಳಲ್ಲಿ ರಾಜನಿಗೆ ಸಲಹೆಯನ್ನು ನೀಡಬೇಕಿತ್ತು ಮತ್ತು ಸೈನಿಕ ಸೇವೆಯನ್ನೂ ಒದಗಿಸಬೇಕಿತ್ತು. ಹಿಡುವಳಿದಾರನು ರಾಜನ ಹಿರಿಯ ಮಗನಿಗೆ ಸರದಾರ ಸ್ಥಾನವನ್ನು ನೀಡುವ ಸಮಯದಲ್ಲಿ ಹಾಗೂ ರಾಜನ ಹಿರಿಯ ಮಗಳ ವರದಕ್ಷಿಣೆಗಾಗಿ ಉಡುಗೊರೆಗಳನ್ನು ನೀಡಬೇಕಿತ್ತು. ಶತ್ರುವಿನಿಂದ ರಾಜನನ್ನು ವಿಮುಕ್ತಿಗೊಳಿಸಲು ಒತ್ತೆ ಹಣವನ್ನು ನೀಡಲು ಹಣವನ್ನು ಸಂಗ್ರಹಿಸಬೇಕಿತ್ತು. ಹಿಡುವಳಿದಾರನು ಜಾಗೀರಿನ ಕಿರಿಯ ಒಡೆಯನಾಗಿದ್ದನು. ಜಾಗೀರನ್ನು ಉಪಜಾಗೀರನ್ನಾಗಿ ವಿಭಾಗಿಸಿ 'ಉಪ ಹಿಡುವಳಿದಾರರಿಗೆ' ನೀಡಲಾಗುತ್ತಿತ್ತು. ಮಹಾ ಒಡೆಯ ಅಥವಾ ಮಹಾ ಹಿಡುವಳಿದಾರ ತನ್ನ ಜನರನ್ನು ರಕ್ಷಿಸಬೇಕಾಗಿತ್ತಲ್ಲದೆ, ಕಾನೂನು, ಆಡಳಿತಾತ್ಮಕ ಹಾಗೂ ನ್ಯಾಯಾಂಗ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದನು.

ಅಂತಿಮವಾಗಿ ಜೀತದಾಳುಗಳೇ ಭೂಮಿಯನ್ನು ಉಳುಮೆ ಮಾಡುತ್ತಿದ್ದರು. 10ನೆಯ ಶತಮಾನದ ಹೊತ್ತಿಗೆ ಜಾಗೀರು, ವಂಶ ಪಾರಂಪರ್ಯವಾಯಿತಾದರೂ, ಷರತ್ತು ಹಾಗೂ ನಿಬಂಧನೆಗಳು ಬದಲಾದ್ದರಿಂದ, ಹಿಡುವಳಿದಾರರು ಮತ್ತು ಮಾಲಿಕನ ಮಧ್ಯೆ ವಿವಾದಗಳು ಆರಂಭವಾದವು.

ಊಳಿಗಮಾನ್ಯ ಪದ್ಧತಿಯ ಬೆಳವಣಿಗೆಗೆ ಕಾರಣಗಳು: ಪೀಠಿಕೆಯಲ್ಲಿ ಉಲ್ಲೇಖಿಸಿರುವ ಕಾರಣಗಳಲ್ಲದೇ ಇತರ ಕಾರಣಗಳೂ ಊಳಿಗಮಾನ್ಯ ಪದ್ಧತಿಯ ಬೆಳವಣಿಗೆಗೆ ದಾರಿಮಾಡಿಕೊಟ್ಟವು. ಕಾರಣಗಳು ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಕಾಲದಿಂದ ಕಾಲಕ್ಕೆ ಬದಲಾಗುತ್ತಿದ್ದವು. ಅವುಗಳನ್ನು ಈ ಕೆಳಗಿನಂತೆ ಸಂಕ್ಷೇಪಿಸಲಾಗಿದೆ.

1. ದುರ್ಬಲ ರಾಜರ ಆಳ್ವಿಕೆಯ ಕಾಲದಲ್ಲಿ ಪ್ರಾಂತೀಯ ಅಧಿಕಾರಿಗಳು ಸ್ವತಂತ್ರ್ಯ ಅಧಿಕಾರ ಪಡೆದರು. ಊಳಿಗಮಾನ್ಯ ಆಳ್ವಿಕೆಗೆ ಹೊಂದುವಂತೆ ರಾಜಕೀಯ ಆಳ್ವಿಕೆ ಹೆಚ್ಚು ವಿಕೇಂದ್ರೀಕೃತವಾಯಿತು.

2. ಜರ್ಮನ್ ಬುಡಕಟ್ಟುಗಳ ಅನಾಗರೀಕ ದಾಳಿಕೋರರಿಂದ ತಪ್ಪಿಸಿಕೊಳ್ಳಲು ಸಣ್ಣ ಭೂಒಡೆಯರು ಭೂಮಿಯ ಮೇಲಿನ ತಮ್ಮ ಹಕ್ಕನ್ನು ಸ್ಥಳೀಯ ಮಾಲೀಕನಿಗೆ ಒಪ್ಪಿಸಿದರು. ಇದು ಜೀವದ ಹಾಗೂ ಆಸ್ತಿಯ ಭದ್ರತೆಯ ಭಾವನೆಯನ್ನು ಮೂಡಿಸಿ ಊಳಿಗಮಾನ್ಯ ಪದ್ಧತಿಯ ಬೆಳವಣಿಗೆಗೆ ಸಹಾಯಕವಾಯಿತು.

3. ಹಿಡುವಳಿದಾರನ ಮೇಲೆ ರಾಜನ ನಿಯಂತ್ರಣ ದುರ್ಬಲಗೊಂಡಿದ್ದು, ಜನರ ಮೇಲೂ ಅವನ ಹಿಡಿತ ಕಡಿಮೆಯಾಯಿತು. ಜನರು ಮಾಲೀಕನಿಗೆ ಹೆಚ್ಚು ಬದ್ಧರಾಗಿದ್ದರಿಂದ ಊಳಿಗಮಾನ್ಯ ಪದ್ಧತಿ ಬಲಗೊಂಡಿತು.

4. ರಾಜನು ತನ್ನ ರಾಜ್ಯವನ್ನು ಕಾಪಾಡಿಕೊಳ್ಳಲು ಹಿಡುವಳಿದಾರರನ್ನು ಅತಿಯಾಗಿ ಅವಲಂಬಿಸಿದ್ದನು. ಅದೇ ರೀತಿ ಹಿಡುವಳಿದಾರರಿಗೆ ತಮ್ಮ ಭೂಮಿಗಾಗಿ ರಾಜನ ಕಾನೂನುಬದ್ಧ ಅನುಮೋದನೆಯ ಅವಶ್ಯಕತೆ ಇತ್ತು. ಈ ಪರಸ್ಪರ ಅವಲಂಬನೆಯು ಊಳಿಗಮಾನ್ಯ ವ್ಯವಸ್ಥೆಯನ್ನು ಬಲಗೊಳಿಸಿತು.

5. ವಿಶಾಲವಾದ ಭೂ ಪ್ರದೇಶವನ್ನು ನಿಯಂತ್ರಿಸುವುದು ರಾಜರಿಗೆ ಸಾಧ್ಯವಿರಲಿಲ್ಲ. ಕಾರಣ ಸೂಕ್ತವಾದ ರಸ್ತೆಗಳು ಮತ್ತು ಸಾರಿಗೆ ವ್ಯವಸ್ಥೆ ಇರಲಿಲ್ಲ. ಅಲ್ಲದೆ ವಿಶಾಲವಾದ ಸಾಮ್ರಾಜ್ಯವನ್ನು ಆಳಲು ಬೇಕಾದ ಹಣಕಾಸಿನ ಹೊರೆಯಿಂದ ಏಕೀಕೃತ ಆಳ್ವಿಕೆ ಅಸಾಧ್ಯವನ್ನಾಗಿಸಿತ್ತು.

6. ಬಲಿಷ್ಠ ರಾಜಕೀಯ ವ್ಯವಸ್ಥೆಯ ಅನುಪಸ್ಥಿತಿ, ಜೀವ ಮತ್ತು ಆಸ್ತಿಯ ಅಭದ್ರತೆ ಊಳಿಗಮಾನ್ಯ ಒಡೆಯರನ್ನು ಅನಿವಾರ್ಯಗೊಳಿಸಿತು. ಜನರ ಆಸ್ತಿಯನ್ನು ಕಳ್ಳಕಾಕರು, ದರೋಡೆಕೋರರು, ದಾಳಿಕೋರರು, ಮುಂತಾದವರಿಂದ ರಕ್ಷಿಸುವ ಜವಾಬ್ದಾರಿಯನ್ನು ಅವರು ತೆಗೆದು ಕೊಂಡರು.

7. ಇದು ಭೂಮಿಯಾಧಾರಿತ ಕೃಷಿ ಸಮಾಜವಾಗಿತ್ತು. ರಾಜನು ಸಂಪೂರ್ಣ ಭೂಮಾಲೀಕನಾಗಿದ್ದು, ಅವನು ಭೂಮಿಯನ್ನು 'ಜಾಗೀರು'ಗಳಾಗಿ ಒಡೆಯರಿಗೆ ಅವರ ಸೇವೆಗೆ ಪ್ರತಿಯಾಗಿ ನೀಡುತ್ತಿದ್ದನು. ಇದೇ ಪದ್ಧತಿಯನ್ನು ಕೆಳಹಂತದಲ್ಲೂ ಅನುಸರಿಸಲಾಗುತ್ತಿತ್ತು. ಕೈಗಾರಿಕೆಗಳಿಲ್ಲದಿದ್ದುದೂ ಊಳಿಗಮಾನ್ಯ ಪದ್ಧತಿಯ ಅನಿವಾರ್ಯತೆಗೆ ಕಾರಣವಾಯಿತು ಮತ್ತು ಜೀತದಾಳುಗಳು ಭೂಮಿಗೆ ಬದ್ಧರಾಗಿದ್ದರು.

ಊಳಿಗಮಾನ್ಯ ಪದ್ಧತಿಯ ಗುಣಗಳು:

ಊಳಿಗಮಾನ್ಯ ಪದ್ಧತಿಯು ಅವಶ್ಯಕತೆಯಾಧಾರಿತ ಮತ್ತು ಸಮಯ ಪರೀಕ್ಷೆಗೊಳಗಾದ ವ್ಯವಸ್ಥೆಯಾಗಿತ್ತು. ಇದು ಈ ಕೆಳಕಂಡ ಗುಣಗಳನ್ನು ಹೊಂದಿತ್ತು.

1. ಇದು ವಿಕೇಂದ್ರೀಕೃತ ರಾಜಕೀಯ ಆಡಳಿತದ ಬೆಳವಣಿಗೆಗೆ ಸಹಾಯಕವಾಯಿತು. ಭೂಹಿಡುವಳಿದಾರರು ರಾಜನಿಗೆ ಸಲಹೆಗಳನ್ನು ನೀಡುತ್ತಿದ್ದುದಲ್ಲದೆ ಅನೇಕ ಸಂದರ್ಭಗಳಲ್ಲಿ ಅವನನ್ನು ಅವರ ನಿಯಮ ನಿಬಂಧನೆಗಳನ್ನು ಒಪ್ಪಿಕೊಳ್ಳುವಂತೆ ಒತ್ತಾಯಿಸಲಾಗುತ್ತಿತ್ತು. ಇದು ನಿರಂಕುಶ ಪ್ರಭುತ್ವದ ಬೆಳವಣಿಗೆಯನ್ನು ತಡೆಯಿತು.

2. ರಾಜತ್ವವನ್ನು ಉಳಿಸುವಲ್ಲಿ ಊಳಿಗಮಾನ್ಯ ಪದ್ಧತಿ ಸಹಾಯಮಾಡಿತು. ರಾಜನು ಹಿಡುವಳಿದಾರನಿಗೆ ಜಾಗೀರನ್ನು ನೀಡಿದನು. ಇದಕ್ಕೆ ಪ್ರತಿಯಾಗಿ ಹಿಡುವಳಿದಾರನು ವಿಧೇಯತೆ ಹಾಗೂ ಅವನಿಗಾಗಿ ಹೋರಾಡಲು ಸಹಕಾರವನ್ನು ನೀಡುವುದಾಗಿ ವಚನವನ್ನು ನೀಡುತ್ತಿದ್ದನು.

3. ಮುಂದೆ ಊಳಿಗಮಾನ್ಯ ಒಡೆಯರು ರಾಜನ ಆಸ್ಥಾನಿಕರಾದ್ದರಿಂದ 'ಬಲಿಷ್ಠ ಪ್ರಭುತ್ವ'ಗಳು ಬೆಳೆಯಲು ಸಹಾಯಕವಾಯಿತು.

4. ರಾಜರು ಹಾಗೂ ಸಾಮಂತರಿಗೆ ಸ್ವಹಿತಾಸಕ್ತಿಗಳಿದ್ದರೂ ನಿಸ್ಸಂದೇಹವಾಗಿ ಆಕ್ರಮಣಗಳ ವಿರುದ್ಧ ಅವರು ಒಗ್ಗೂಡುತ್ತಿದ್ದರು. ಇದು ರಾಷ್ಟ್ರದ ರಕ್ಷಣೆ ಹಾಗೂ ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾಯಿತು.

5. ನಿರಂತರ ಹೋರಾಟಗಳಿಂದ ಉತ್ತಮ ಶಸ್ತ್ರಾಸ್ತ್ರಗಳು, ತರಬೇತಿ ಮತ್ತು ಸಂಘಟನೆಯಂತಹ ಸೈನಿಕ ತಂತ್ರಗಳ ಬೆಳವಣಿಗೆಗೆ ಸಹಾಯಕವಾಯಿತು. ಇದು ಶೌರ್ಯದ ಪರಿಕಲ್ಪನೆಯನ್ನು ಪ್ರೋತ್ಸಾಹಿಸಿತು. ಕುಲೀನರು ಮತ್ತು ಸರದಾರರು, ಬಡವರ ಮತ್ತು ನಿರ್ಗತಿಕರ ಬಗ್ಗೆ ಹೆಚ್ಚು ಯೋಚಿಸಲಾರಂಭಿಸಿದರು. ಶೌರ್ಯವು ಸ್ತ್ರೀಯರ ಬಗೆಗಿನ ಗೌರವದ ಬೆಳವಣಿಗೆಗೂ ಕಾರಣವಾಯಿತು.

6. ಊಳಿಗಮಾನ್ಯ ಪದ್ಧತಿಯು ಸಮಾಜದಲ್ಲಿ ಸ್ಥಿರತೆ ಮತ್ತು ವ್ಯವಸ್ಥೆಯನ್ನು ತಂದಿತು. ಊಳಿಗಮಾನ್ಯ ನೆಲೆಯೊಳಗೆ ವ್ಯವಸ್ಥೆಯಲ್ಲಿನ ಸಾಮೂಹಿಕ ಭದ್ರತೆ ಹಾಗೂ ಕಾನೂನು ಪಾಲನೆಯು ಜನರಿಗೆ ನ್ಯಾಯ ಮತ್ತು ರಕ್ಷಣೆಯನ್ನು ಖಚಿತಪಡಿಸಿತು.

7. ಊಳಿಗಮಾನ್ಯ ಪದ್ಧತಿ ಕರ್ತವ್ಯ ಮತ್ತು ಕ್ರಮಬದ್ಧತೆಯ ಅರಿವನ್ನು ಬೆಳೆಸಿತು. ಹಿಡುವಳಿದಾರನ ಭೂಮಿಯ ಮೇಲಿನ ಹಕ್ಕನ್ನು ರಕ್ಷಿಸುವ ಹೊಣೆ ರಾಜನದ್ದಾಗಿದ್ದರೆ, ಹಿಡುವಳಿದಾರನು ತನ್ನ ಜೀತದಾಳುಗಳನ್ನು ರಕ್ಷಿಸುವ ಹೊಣೆ ಹೊತ್ತಿದ್ದನು. ಜೀತದಾಳುಗಳು ಸಹ ಹಿಡುವಳಿದಾರರಿಗಾಗಿ ಕೆಲವು ಕರ್ತವ್ಯಗಳನ್ನು ಮಾಡಬೇಕಾಗಿತ್ತು.

ಊಳಿಗಮಾನ್ಯ ಪದ್ಧತಿಯ ದೋಷಗಳು:

1. ಹಿಡುವಳಿದಾರರ ನಡುವೆ ಅಥವಾ ಹಿಡುವಳಿದಾರರು ಮತ್ತು ರಾಜರ ನಡುವೆ ಆಗಾಗ ಕಲಹಗಳು ಹಾಗೂ ಕದನಗಳು ನಡೆಯುತ್ತಿದ್ದವು. ಹೀಗಾಗಿ ಸ್ಥಿರತೆ, ಶಾಂತಿ ಅಥವಾ ವ್ಯವಸ್ಥೆಗಳಿರಲಿಲ್ಲ. ಇದು ಸಮಾಜ ಹಾಗೂ ಅರ್ಥ ವ್ಯವಸ್ಥೆಯ ಮೇಲು ತನ್ನದೇ ಆದ ಪ್ರಭಾವವನ್ನು ಬೀರಿತ್ತು.
2. ಹಿಡುವಳಿದಾರರು ನಾಮಮಾತ್ರದ ರಾಜತ್ವವನ್ನು ಬೆಂಬಲಿಸಿದರು ಮತ್ತು ರಾಷ್ಟ್ರೀಯ ಸರ್ಕಾರ ಮತ್ತು ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗಿದ್ದರು.
3. ಕುಲೀನರಿಗೆ ಸ್ವಹಿತಾಸಕ್ತಿಯಿತ್ತು. ಅವರ ದಬ್ಬಾಳಿಕೆಯಿಂದ ಸಾಮಾನ್ಯ ಜನರು ಮತ್ತು ಜೀತದಾಳುಗಳು ನರಳಿದರು. ಜೀತದಾಳುಗಳು ಹಿಂಸಾಚಾರದ ಬಲಿಪಶುಗಳಾಗಿದ್ದರು. ಹಲವು ಬಾರಿ ಕುಲೀನರ ಯುದ್ಧಗಳು ಮತ್ತು ಯುದ್ಧಗಳಲ್ಲಿನ ಖರ್ಚು ಸಾಮಾನ್ಯ ಜನರ ಮೇಲೆ ತೆರಿಗೆಯನ್ನು ಹೆಚ್ಚಿಸಲು ಕಾರಣವಾಯಿತು.
4. ಜನರ ನಿಷ್ಠೆ ಭೂಮಾಲಿಕರಿಗೆ ಸೀಮಿತವಾಗಿತ್ತೇ ಹೊರತು ರಾಷ್ಟ್ರಕ್ಕಾಗಲೀ ಅಥವಾ ರಾಜನಿಗಾಗಲೀ ಅಲ್ಲವಾದ್ದರಿಂದ ರಾಷ್ಟ್ರೀಯತೆಯ ಬೆಳವಣಿಗೆಗೆ ಅದು ಅಡ್ಡಿಯಾಗಿತ್ತು.
5. ಊಳಿಗಮಾನ್ಯ ಪದ್ಧತಿ ಶ್ರೀಮಂತರು ಮತ್ತು ಬಡವರ ನಡುವಿನ ಅಂತರವನ್ನು ಹೆಚ್ಚಿಸಿತು. ಬಡವರು ಕನಿಷ್ಠ ಜೀವನವನ್ನು ನಡೆಸುತ್ತಿದ್ದರೆ, ಶ್ರೀಮಂತರು ಆರಾಮ ಮತ್ತು ಆಲಸ್ಯದ ಜೀವನವನ್ನು ನಡೆಸುತ್ತಿದ್ದರು. ಸಂಪತ್ತು, ಪ್ರತಿಷ್ಠೆ, ನಡತೆ ಮತ್ತು ಸಂಪ್ರದಾಯಗಳು ರೈತರಿಗೆ ಹೊರೆಯಾಗಿದ್ದವು. ಅದು ವರ್ಗಪದ್ಧತಿಯನ್ನೂ ಪ್ರೋತ್ಸಾಹಿಸಿತು.
6. ಊಳಿಗಮಾನ್ಯ ಪದ್ಧತಿಯಲ್ಲಿ ಚರ್ಚ್ ಕೂಡಾ ಭಾಗವಹಿಸಿತು. ಅದು ವಿಸ್ತಾರವಾದ ಭೂಮಿಯನ್ನು ಹೊಂದಿದ್ದು ಜಮೀನುದಾರರಂತೆ ಕಾರ್ಯನಿರ್ವಹಿಸುತ್ತಿತ್ತು. ಬಿಷಪರು, ರಾಜ ಮತ್ತು ಅವನ ಹಿಡುವಳಿದಾರರ ನಡುವೆಯೂ ಸಂಘರ್ಷಗಳು ನಡೆಯುತ್ತಿದ್ದವು.

ಊಳಿಗಮಾನ್ಯ ಪದ್ಧತಿಯ ಪತನಕ್ಕೆ ಕಾರಣಗಳು:

1. **ಪ್ರಬಲ ಪ್ರಭುತ್ವಗಳ ಉದಯ:** ಯೂರೋಪಿನ ಹಲವು ದೇಶಗಳಲ್ಲಿ ಪ್ರಬಲ ಪ್ರಭುತ್ವಗಳು ಬೆಳೆದವು. ರಾಜ ಊಳಿಗಮಾನ್ಯ ಒಡೆಯರನ್ನು ದಮನ ಮಾಡಲಾಗಿ, ಅದು ಊಳಿಗಮಾನ್ಯ ವ್ಯವಸ್ಥೆಯ ಪತನಕ್ಕೆ ಕಾರಣವಾಯಿತು.

2. **ಬದಲಾದ ನಿಷ್ಠೆ:** ಹೆಚ್ಚಿನ ತೆರಿಗೆಯನ್ನು ಕಟ್ಟಬೇಕಾದುದರಿಂದ ಮತ್ತು ನಿರ್ಲಕ್ಷ್ಯಕ್ಕೆ ಒಳಗಾಗಿದ್ದರಿಂದ ಸಾಮಾನ್ಯ ಜನರು ಹಾಗೂ ಜೀತದಾಳುಗಳು ಅಸಂತುಷ್ಟರಾಗಿದ್ದರು. ಅದರಿಂದ ಅವರು ತಮ್ಮ ನಿಷ್ಠೆಯನ್ನು ರಾಜನೆಡೆಗೆ ಬದಲಾಯಿಸಿದರು. ಇದು ಭೂಮಾಲಿಕರನ್ನು ದುರ್ಬಲಗೊಳಿಸಿತು. ಹೀಗಾಗಿ ವ್ಯವಸ್ಥೆಯು ಕಳಚಿಬಿತ್ತು.

3. **ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆ:** ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಯೊಂದಿಗೆ ಜನರು ಜೀವನೋಪಾಯದ ಹೊಸ ಮಾರ್ಗವನ್ನು ಕಂಡುಕೊಂಡರು ಮತ್ತು ತಮ್ಮ ಭೂಮಿಗಳನ್ನು ಬಿಟ್ಟು ಹೊರಟರು. ಇದು ಮಧ್ಯಮವರ್ಗದ ಬೆಳವಣಿಗೆಗೆ ಕಾರಣವಾಯಿತು. ಇದು ಊಳಿಗಮಾನ್ಯ ವ್ಯವಸ್ಥೆಗೆ ಹೊಡೆತವನ್ನು ನೀಡಿತು.

4. **ಹಣ ಆಧಾರಿತ ಅರ್ಥವ್ಯವಸ್ಥೆಯ ಪ್ರಾಬಲ್ಯ:** ಸೇವಾ ರೂಪದ ಪಾವತಿಯ ಬದಲಿಗೆ ಹಣವು ಚಾಲ್ತಿಗೆ ಬಂದಿತು. ಸಾಮಾನ್ಯರು ಮತ್ತು ಜೀತದಾರರು ಒಡೆಯನಿಗೆ ಸಲ್ಲಿಸುತ್ತಿದ್ದ ಸೈನಿಕ ಸೇವೆಯನ್ನು ನಿಲ್ಲಿಸಿದರು. ಇದು ಊಳಿಗಮಾನ್ಯ ಒಡೆಯರ ಶಕ್ತಿ ಕುಸಿಯಲು ದಾರಿಮಾಡಿಕೊಟ್ಟಿತ್ತು.

5. **ರಾಜರಿಂದ ಬಲಿಷ್ಠ ಸೇನೆಗಳ ನಿರ್ಮಾಣ:** ಸಿಡಿಮದ್ದಿನ ಉಪಯೋಗ ಮತ್ತು ಸುಸಂಘಟಿತ ಸೇನೆ ಊಳಿಗಮಾನ್ಯ ಪದ್ಧತಿಯ ಅವನತಿಗೆ ಕಾರಣವಾಯಿತು. ಸಾಮಾನ್ಯ ಜನರು ಹಾಗೂ ಜೀತದಾಳುಗಳನ್ನು ಊಳಿಗಮಾನ್ಯ ಒಡೆಯರ ಬದಲಾಗಿ ರಾಜರ ಸೈನ್ಯ ರಕ್ಷಿಸುತ್ತಿತ್ತು.

6. **ಕಾರ್ಮಿಕರ ಕೊರತೆ:** ಕಾರ್ಮಿಕರ ಕೊರತೆ ಉಂಟಾಗಲು ಎರಡು ಪ್ರಮುಖ ಅಂಶಗಳಿದ್ದವು. ಮೊದಲನೆಯದಾಗಿ, ಕೈಗಾರಿಕೆ ಮತ್ತು ವಾಣಿಜ್ಯದ ಬೆಳವಣಿಗೆಯು ಪರ್ಯಾಯ ಉದ್ಯೋಗಾವಕಾಶವನ್ನು ಕಲ್ಪಿಸಿತು. ಎರಡನೆಯದಾಗಿ, ಸಾಂಕ್ರಾಮಿಕ ರೋಗವಾದ ಪ್ಲೇಗ್‌ನಿಂದಾಗಿ ಕಾರ್ಮಿಕರ ಸಂಖ್ಯೆಯು ಕುಸಿಯಿತು. ಇದರಿಂದಾಗಿ ಕಾರ್ಮಿಕರ ಬೇಡಿಕೆ ಮತ್ತು ವೇತನ ಹೆಚ್ಚಿತು ಮತ್ತು ಊಳಿಗಮಾನ್ಯ ಒಡೆಯರ ಮಹತ್ವವನ್ನು ಕುಗ್ಗಿಸಿತು.

7. **ಭೂಮಾಲಿಕರ ನಡುವೆ ಸಂಘರ್ಷ:** ಊಳಿಗಮಾನ್ಯ ಒಡೆಯರು, ಜೀತದಾಳುಗಳು ಹಾಗೂ ಸಾಮಾನ್ಯರಿಗೆ ತೊಂದರೆಯನ್ನುಂಟುಮಾಡುತ್ತಿದ್ದರು. ಈ ಯುದ್ಧಗಳಿಂದಾಗಿ ಭೂಮಾಲಿಕರ ಸಂಖ್ಯೆಯಲ್ಲಿ ಇಳಿಮುಖವಾಯಿತು. ಚರ್ಚ್ ಕೂಡಾ ಊಳಿಗಮಾನ್ಯ ಒಡೆಯರ ಮೇಲೆ ಅನೇಕ ನಿರ್ಬಂಧಗಳನ್ನು ಹೇರಿತು.

ಪ್ರಶ್ನೆಗಳು

ಕೆಳಕಂಡವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 1 ಅಂಕ)

1. ಮಧ್ಯಕಾಲೀನ ಕ್ರೈಸ್ತ ಧರ್ಮದ 'ದೈವಿಕ ಭಾಷೆ' ಯಾವುದು?
2. ಪೋಪನ ಆಸ್ಥಾನವನ್ನು ರೋಮಿನಿಂದ ಎಲ್ಲಿಗೆ ವರ್ಗಾಯಿಸಲಾಯಿತು?
3. 'ಡಿವೈನ್ ಕಾಮಿಡಿ' ಕೃತಿಯನ್ನು ಬರೆದವನು ಯಾರು?
4. 'ಜಾಗೀರು' ಎಂದರೇನು?
5. ಅವಿಗ್ನಾನನ್ನು ಕೇಂದ್ರವಾಗಿಸಿಕೊಂಡ ಮೊದಲ ಪೋಪ್ ಯಾರು?
6. ಆರಂಭಿಕ ಮಧ್ಯಯುಗವನ್ನು 'ಕತ್ತಲೆ ಯುಗ'ವೆಂದು ಏಕೆ ಕರೆಯುತ್ತಾರೆ?
7. ನಾಲ್ಕನೇ ಹೆನ್ರಿಯನ್ನು ಪದಚ್ಯುತಗೊಳಿಸಿದ ಪೋಪ್ ಯಾರು?
8. ಹಿಡುವಳಿದಾರ ಎಂದರೆ ಯಾರು?
9. ಪೋಪ್ ಪೀಠದಲ್ಲಿನ ಒಡಕು ಯಾವಾಗ ಅಂತ್ಯಗೊಂಡಿತು?
10. 'ಕ್ಯಾಂಟರ್‌ಬರಿ ಟೆಲ್ಸ್' ಬರೆದವನು ಯಾರು?

ಕೆಳಕಂಡ ಪ್ರಶ್ನೆಗಳಿಗೆ 2ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 2 ಅಂಕಗಳು)

1. 14ನೆಯ ಶತಮಾನದಲ್ಲಿ ಪೋಪನ ಪರಮಾಧಿಕರ ಪತನ ಹೊಂದಲು ಯವುದಾದರೂ ಎರಡು ಕಾರಣಗಳನ್ನು ತಿಳಿಸಿ.

2. ಮಧ್ಯಕಾಲೀನ ಯೂರೋಪಿನ ಯಾವುದಾದರೂ ಎರಡು ಪ್ರಮುಖ ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿ.
3. ಮಧ್ಯಕಾಲೀನ ಯೂರೋಪಿನಲ್ಲಿ ಅಸ್ತಿತ್ವಕ್ಕೆ ಬಂದ ಯಾವುದಾದರೂ ಎರಡು ವಿಶ್ವವಿದ್ಯಾಲಯಗಳನ್ನು ಹೆಸರಿಸಿ.
4. ಮಧ್ಯಕಾಲೀನ ಯೂರೋಪಿನ ಯಾರಾದರೂ ಇಬ್ಬರು ಬುದ್ಧಿಜೀವಿಗಳನ್ನು ಹೆಸರಿಸಿ.
5. ಮಧ್ಯಕಾಲೀನ ಯೂರೋಪಿನ ಎರಡು ಯಾವುದಾದರೂ ಸಾಹಿತ್ಯ ಶೈಲಿಗಳನ್ನು ಹೆಸರಿಸಿ.
6. ಮಧ್ಯಕಾಲೀನ ಯೂರೋಪಿನಲ್ಲಿ ಕಂಡುಬರುವ ಎರಡು ವಾಸ್ತುಶೈಲಿಗಳು ಯಾವುವು?
7. 'ಫ್ಯೂಡಲಿಸಂ' ಎಂಬುದು ಯಾವ ಪದದಿಂದ ಬಂದಿದೆ? ಮತ್ತು ಅದರ ಅರ್ಥವೇನು?
8. ಊಳಿಗಮಾನ್ಯ ವ್ಯವಸ್ಥೆಯ ಪಿರಮಿಡ್ಡಿನಾಕೃತಿಯ ರಚನೆಯಲ್ಲಿನ ಏಣಿ ಶ್ರೇಣಿಗಳನ್ನು ತಿಳಿಸಿ.
9. ರೊಮಾನಿಕ್ ಶೈಲಿಯ ಎರಡು ಲಕ್ಷಣಗಳನ್ನು ಬರೆಯಿರಿ.
10. ಗೋಥಿಕ್ ಶೈಲಿಯ ಎರಡು ಲಕ್ಷಣಗಳನ್ನು ಬರೆಯಿರಿ.
11. ಮಧ್ಯಕಾಲೀನ ಯೂರೋಪಿನ ಕೃಷಿಯ ಉತ್ಪಾದನೆಯು ತೀವ್ರಗೊಳ್ಳಲು ಕಾರಣವಾದ ಎರಡು ಅಂಶಗಳನ್ನು ಹೆಸರಿಸಿ.

ಕೆಳಕಂಡ ಪ್ರಶ್ನೆಗಳಿಗೆ 15 – 20 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 5 ಅಂಕಗಳು)

1. ಮೆನೋರಿಯಲ್ ವ್ಯವಸ್ಥೆಯನ್ನು ಕುರಿತು ಬರೆಯಿರಿ.
2. ಮಧ್ಯಕಾಲೀನ ಯೂರೋಪಿನಲ್ಲಿ ಉಂಟಾದ ಸಾಮಾಜಿಕ – ಆರ್ಥಿಕ ಬದಲಾವಣೆಗಳನ್ನು ಗುರುತಿಸಿ.
3. ಮಧ್ಯಕಾಲೀನ ಯೂರೋಪಿನಲ್ಲಿ ಪೋಪ್ ಮತ್ತು ರಾಜನ ನಡುವೆ ನಡೆದ ಸಂಘರ್ಷವನ್ನು ವರ್ಣಿಸಿ.
4. ಊಳಿಗಮಾನ್ಯ ವ್ಯವಸ್ಥೆಯ ಗುಣ ಮತ್ತು ದೋಷಗಳನ್ನು ಚರ್ಚಿಸಿ.
5. ಊಳಿಗಮಾನ್ಯ ವ್ಯವಸ್ಥೆಯ ಪತನಕ್ಕೆ ಕಾರಣಗಳು ಯಾವುವು?

❖ ❖ ❖ ❖ ❖

ಅಧ್ಯಾಯ 7

ಆಧುನಿಕ ಯುಗದ ಆರಂಭ.

ಮಧ್ಯಯುಗದಿಂದ ಆಧುನಿಕ ಯುಗದತ್ತ ಬದಲಾವಣೆ.

14 ನೇ ಶತಮಾನದಿಂದ 17 ನೇ ಶತಮಾನದವರೆಗೆ ಯೂರೋಪಿನಲ್ಲಿ ಸ್ಪಷ್ಟವಾಗಿ ನಗರ ಸಂಸ್ಕೃತಿ ಬೆಳವಣಿಗೆಯಾಯಿತು. ನಗರ ಪ್ರದೇಶದ ಜನರು ಗ್ರಾಮೀಣ ಜನರಿಗಿಂತ ತಾವು ಹೆಚ್ಚು ನಾಗರಿಕರೆಂದು ತಿಳಿದುಕೊಳ್ಳಲಾರಂಭಿಸಿದರು. ಪ್ರಮುಖ ನಗರಗಳಾದ ಫ್ಲಾರೆನ್ಸ್, ವೆನಿಸ್ ಮತ್ತು ರೋಮ್‌ಗಳು ಕಲೆ ಮತ್ತು ಶಿಕ್ಷಣ ಕೇಂದ್ರಗಳಾಗಿ ರೂಪುಗೊಂಡವು. ಕಲಾವಿದರು ಹಾಗೂ ಬರಹಗಾರರು ಶ್ರೀಮಂತರು ಮತ್ತು ಕಲಾಪೋಷಕರಿಂದ ಆಶ್ರಯ ಪಡೆದರು. ಮುದ್ರಣ ಯಂತ್ರದ ಸಂಶೋಧನೆಯಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಜನರಿಗೆ ಸಾಕಷ್ಟು ಪುಸ್ತಕಗಳು ದೊರೆತವು. ಇದು ಯೂರೋಪಿನ ಜನರಿಗೆ ಪ್ರಾಚೀನ ಗ್ರೀಕ್ ಮತ್ತು ರೋಮನ್ನರೊಂದಿಗೆ ತಮ್ಮನ್ನು ಹೋಲಿಕೆ ಮಾಡಿಕೊಳ್ಳಲು ಅನುಕೂಲಮಾಡಿಕೊಟ್ಟಿತು.

ಧರ್ಮವು ಕೆಲವು ವೈಯಕ್ತಿಕ ನಿರ್ಧಾರಗಳನ್ನು ಆಯ್ಕೆ ಮಾಡಿಕೊಳ್ಳಲು ಜನರಿಗೆ ಅವಕಾಶ ಕಲ್ಪಿಸಿತು. ವಿಜ್ಞಾನಿಗಳು ಯೂರೋಪಿಯನ್ನರು ನಂಬಿದ್ದ ಭೂಕೇಂದ್ರಿತ ಸಿದ್ಧಾಂತದ ಬದಲಾಗಿ ಸೌರಕೇಂದ್ರಿತ ಸಿದ್ಧಾಂತವನ್ನು ಸಾದರಪಡಿಸಿದರು. ಹೊಸ ಭೌಗೋಳಿಕ ತಿಳುವಳಿಕೆಯು ಮೆಡಿಟರೇನಿಯನ್ ಸಮುದ್ರವು ವಿಶ್ವದ ಕೇಂದ್ರವೆಂಬ ಯುರೋಪ್ ಕೇಂದ್ರಿತ ಸಿದ್ಧಾಂತವನ್ನು ಬದಲಾಯಿಸಿತು. ಈ ಕುರಿತಾದ ಕೆಲವು ದಾಖಲೆಗಳು, ಪುಸ್ತಕಗಳು, ಚಿತ್ರಕಲೆಗಳು, ಶಿಲ್ಪಕಲೆಗಳು, ಕಟ್ಟಡಗಳು, ನೇಯ್ಗೆಬಟ್ಟೆಗಳು ಯುರೋಪ್ ಮತ್ತು ಅಮೇರಿಕಾದ ಸಂಗ್ರಹಾಲಯಗಳಲ್ಲಿ ಸಂರಕ್ಷಿಸಲ್ಪಟ್ಟಿವೆ.

ಆಧುನಿಕ ಜಗತ್ತಿನ ಇತಿಹಾಸವು 14ನೇ ಶತಮಾನದ ಯುರೋಪಿನಲ್ಲಿ ಆರಂಭವಾದ ಸರಣಿ ಬೆಳವಣಿಗೆಗಳಾದ ಪುನರಜ್ಜೀವನ, ಧಾರ್ಮಿಕ ಸುಧಾರಣೆ ಮತ್ತು ಭೌಗೋಳಿಕ ಅನ್ವೇಷಣೆಗಳಿಗೆ ಕಾರಣವಾಯಿತು. 15ನೇ ಶತಮಾನ ಭೌಗೋಳಿಕ ಅನ್ವೇಷಣೆಗಳೊಂದಿಗೆ ಪ್ರಾರಂಭವಾಗುತ್ತದೆ. ಭೌಗೋಳಿಕ ಅನ್ವೇಷಣೆಗಳಿಂದಾಗಿ ಕೆಲವು ಹೊಸ ಭೂಪ್ರದೇಶಗಳು, ಹೊಸ ಜನರು, ಅವರ ಭಾಷೆಗಳು ಮತ್ತು ಸಂಸ್ಕೃತಿಗಳು ಬೆಳಕಿಗೆ ಬರಲಾಗಿ ಯೂರೋಪಿನ ಜನರ ಜ್ಞಾನಾಭಿವೃದ್ಧಿಯಾಯಿತು. ಇದು ಯೂರೋಪಿನಲ್ಲಿ ಪುನರುಜ್ಜೀವನ ಹಾಗೂ ಧಾರ್ಮಿಕ ಸುಧಾರಣಾ ಚಳುವಳಿ ಜರುಗಲೂ ಸಹ ಮಾರ್ಗವಾಯಿತು.

ಪುನರುಜ್ಜೀವನವು ವೈಜ್ಞಾನಿಕ ದೃಷ್ಟಿಕೋನ ಹಾಗೂ ಮಾನವೀಯ ಗುಣಗಳ ಬೆಳವಣಿಗೆಗೆ ಅವಕಾಶ ಕಲ್ಪಿಸಿತು. ಇದು ಜನರ ಮೂಢನಂಬಿಕೆಗಳು ಹಾಗೂ ಅಂಧಾನುಕರಣೆಗಳನ್ನು ಖಂಡಿಸಿತು. ಅಲ್ಲದೆ ಜನರನ್ನು ಕುರುಡು ಧಾರ್ಮಿಕ ನಂಬಿಕೆಗಳಲ್ಲಿ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದ ಚರ್ಚ್‌ನ ನೀತಿಯನ್ನು ಟೀಕಿಸಿತು. ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯಗಳು ಪೋಪನ ನಿಯಂತ್ರಣದಿಂದ ಮುಕ್ತವಾದವು. ಆಧುನಿಕ ಯುಗದಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆಗಳಿಂದಾಗಿ ಕ್ರಾಂತಿಕಾರಕ ಬದಲಾವಣೆಗಳು ಸಂಭವಿಸಿದವು. ಈ ಬದಲಾವಣೆಗಳು ಪ್ರಪಂಚದ ಎಲ್ಲಾ ಭಾಗಗಳಿಗೂ ಯೂರೋಪಿಯನ್ನರ ಮೂಲಕ ಪ್ರಸಾರವಾದವು.

ಸಾಮಾಜಿಕ, ಶೈಕ್ಷಣಿಕ ಹಾಗೂ ಮಾನವೀಯ ಸೇವೆಗಳ ಹೆಸರಿನಲ್ಲಿ ಯೂರೋಪಿನ ಕ್ರೈಸ್ತ ಮಿಷನರಿಗಳು ಪ್ರಪಂಚದಾದ್ಯಂತ ಕ್ರೈಸ್ತಧರ್ಮವನ್ನು ಪ್ರಸಾರ ಮಾಡಿದವು. ಯೂರೋಪಿಯನ್ನರು ಏಷಿಯಾ, ಆಫ್ರಿಕಾ, ದಕ್ಷಿಣ ಅಮೇರಿಕಾ, ಆಸ್ಟ್ರೇಲಿಯಾ ಮೊದಲಾದ ಕಡೆ ವಸಾಹತು ಸಾಮ್ರಾಜ್ಯಗಳನ್ನು ಸ್ಥಾಪಿಸಿದರಲ್ಲದೆ ಅಲ್ಲಿನ ಜನರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಂಡರು. ಇವರು ಇಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಹಾಗೂ ಮಾನವ ಸಂಪನ್ಮೂಲಗಳನ್ನು ಕ್ರಮಬದ್ಧವಾಗಿ ಶೋಷಣೆ ಮಾಡಿದರು.

7.1 ಭೌಗೋಳಿಕ ಅನ್ವೇಷಣೆಗಳು.

ಪುನರುಜ್ಜೀವನ, ಧಾರ್ಮಿಕ ಸುಧಾರಣಾ ಚಳುವಳಿ ಹಾಗೂ ಭೌಗೋಳಿಕ ಅನ್ವೇಷಣೆಗಳು ಪ್ರಪಂಚದ ಮೇಲೆ ಪ್ರಮುಖ ಪರಿಣಾಮಗಳನ್ನುಂಟುಮಾಡಿವೆ. ಪಾಶ್ಚಿಮಾತ್ಯ ರಾಷ್ಟ್ರಗಳು ಪೌರ್ವಾತ್ಯ ರಾಷ್ಟ್ರಗಳನ್ನು ಭೂಮಾರ್ಗದ ಮೂಲಕ ಸಂಪರ್ಕಿಸುತ್ತಿದ್ದವು. ಈ ಮಾರ್ಗವು ಅರಣ್ಯಗಳು, ಪರ್ವತಗಳು ಹಾಗೂ ಮರುಭೂಮಿಗಳಿಂದ ಕೂಡಿದ್ದು, ದೂರದ ಪ್ರಯಾಣವಾಗಿದ್ದರಿಂದ ಕಷ್ಟವಾಗುತ್ತಿತ್ತು. ಪ್ರವಾಸಿಗರು ತಾವು ಹೋಗಬೇಕಾದ ಸ್ಥಳವನ್ನು ತಲುಪಲು ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದರು.

ಮಧ್ಯಯುಗದ ಅಂತ್ಯದಲ್ಲಿ ಯೂರೋಪಿನ ಕೆಲವು ಧೈರ್ಯವಂತ ಹಾಗೂ ಉದ್ಯಮಶೀಲ ಜನರು ಅಪರಿಚಿತ ಸಮುದ್ರಗಳಲ್ಲಿ ಪ್ರಯಾಣಮಾಡಿ ಹೊಸ ಜಲಮಾರ್ಗಗಳು ಹಾಗೂ ಹೊಸ ಭೂಖಂಡಗಳನ್ನು ಸಂಶೋಧಿಸಿದರು. ಇದನ್ನು **'ಭೌಗೋಳಿಕ ಅನ್ವೇಷಣೆಗಳು'** ಎಂದು ಕರೆಯಲಾಗಿದೆ. ಮಧ್ಯಯುಗವನ್ನು ಆಧುನಿಕ ಯುಗದತ್ತ ಕೊಂಡೊಯ್ಯುವಲ್ಲಿ ಈ ಅನ್ವೇಷಣೆಗಳು ಸಹಕಾರಿಯಾದವು.

ಕಾರಣಗಳು:

1. **ಟರ್ಕರಿಂದ ಕಾನ್‌ಸ್ಟಾಂಟಿನೋಪಲ್ ವಶ:–** ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳ ನಡುವೆ ಕಾನ್‌ಸ್ಟಾಂಟಿನೋಪಲ್ ಮೂಲಕ ವ್ಯಾಪಾರ ನಡೆಯುತ್ತಿತ್ತು. ಆಟೋಮನ್ ಟರ್ಕರು 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ಅನ್ನು ವಶಪಡಿಸಿಕೊಂಡರು. ಇವರು ಅರಬ್ಬರಂತೆ ಉದಾರ ಮನಸ್ಸು ಉಳ್ಳವರಾಗಿರಲಿಲ್ಲ. ಇವರು ಇದುವರೆಗೆ ಇದ್ದ ಏಕೈಕ ಭೂಮಾರ್ಗವನ್ನು ಮುಚ್ಚಿದರು. ಅಲ್ಲದೆ ವ್ಯಾಪಾರಿಗಳನ್ನು ಲೂಟಿ ಮಾಡುತ್ತಿದ್ದರು ಹಾಗೂ ಕೆಲವೊಮ್ಮೆ ದೌರ್ಜನ್ಯ ಎಸಗುತ್ತಿದ್ದರು. ಈ ಬೆಳವಣಿಗೆಗಳು ಯೂರೋಪಿಯನ್ನರು ಪೂರ್ವ ರಾಷ್ಟ್ರಗಳಿಗೆ ಹೊಸ ವ್ಯಾಪಾರ ಮಾರ್ಗಗಳನ್ನು ಕಂಡುಹಿಡಿಯಲು ಪ್ರೇರೇಪಿಸಿದವು. ಅಂತಹ ಸಾಧ್ಯತೆ ಇದ್ದ ಒಂದೇ ಮಾರ್ಗವೆಂದರೆ ಜಲಮಾರ್ಗವೇ ಆಗಿತ್ತು.

2. **ಸರಕುಗಳಿಗಿದ್ದ ಬೇಡಿಕೆ:** ಏಷ್ಯಾದ ಸರಕುಗಳಿಗೆ, ಅದರಲ್ಲೂ ಸಾಂಬಾರ ಪದಾರ್ಥಗಳಾದ–ಮೆಣಸು, ಶುಂಠಿ, ಲವಂಗ, ಏಲಕ್ಕಿ ಮೊದಲಾದವುಗಳಿಗೆ ಯೂರೋಪಿನಲ್ಲಿ ತುಂಬಾ ಬೇಡಿಕೆಯಿತ್ತು. ಮಸ್ಲಿನ್, ರೇಷ್ಮೆ ಬಟ್ಟೆಗಳು, ಮುತ್ತುಗಳು, ದಂತ ಮತ್ತು ಅಮೂಲ್ಯ ಹರಳುಗಳು ಸಹ ಬೇಡಿಕೆಯುಳ್ಳ ವಸ್ತುಗಳಾಗಿದ್ದವು. ಇದು ಲಾಭದಾಯಕ ವ್ಯಾಪಾರವಾಗಿತ್ತು. ಯೂರೋಪಿಯನ್ನರು ಹೆಚ್ಚು ಲಾಭಗಳಿಸುವ ಮೂಲಕ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಇಚ್ಛೆಪಟ್ಟರು. ಪೌರ್ವಾತ್ಯ ದೇಶಗಳೊಂದಿಗೆ ವಾಣಿಜ್ಯ ಸಂಬಂಧಗಳನ್ನು ವಿಸ್ತರಿಸುವುದರಿಂದ

ಮಾತ್ರ ಇದು ಸಾಧ್ಯವಿತ್ತು. ಹೊಸ ಭೂಪ್ರದೇಶಗಳು ಮತ್ತು ಹೊಸ ಜಲಮಾರ್ಗಗಳ ಸಂಶೋಧನೆಯು ಹೆಚ್ಚು ಲಾಭ ತಂದು ಕೊಡುತ್ತಿತ್ತು. ಕೆಲವು ಸಾಹಸಿ ನಾವಿಕರು ಹಾಗೂ ವ್ಯಾಪಾರಿಗಳು ತಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹೊಸ ಮಾರ್ಗಗಳನ್ನು ಕಂಡುಹಿಡಿಯಲು ತಮ್ಮ ಜೀವವನ್ನು ಪಣಕ್ಕಿಟ್ಟರು.

3. **ಪ್ರವಾಸಿಗರ ವಿವರಣೆಗಳು:** ಭೌಗೋಳಿಕ ಅನ್ವೇಷಣೆಗಳಿಗೆ ಪ್ರವಾಸಿಗರ ವಿವರಣೆಗಳೂ ಸಹ ಒಂದು ಪ್ರಮುಖ ಕಾರಣವಾಗಿದೆ. ಏಷ್ಯಾ ರಾಷ್ಟ್ರಗಳು ಹೆಚ್ಚು ಶ್ರೀಮಂತವಾಗಿದ್ದರಿಂದ, ಯುರೋಪ್ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿದ್ದು, ಇವರು ಇಲ್ಲಿನ ವಿಪುಲ ಸಂಪತ್ತಿನ ಬಗ್ಗೆ ವರ್ಣನಾತ್ಮಕ ಮಾಹಿತಿಗಳನ್ನು ನೀಡಿದರು. ಐರೋಪ್ಯ ಪ್ರವಾಸಿ ಹಾಗೂ ವೆನಿಸ್‌ನ ಆಭರಣ ವ್ಯಾಪಾರಿ ಮಾರ್ಕೋಪೋಲೋನು ನಿಕೊಲೋ ಪೋಲೋನೊಂದಿಗೆ ಪೂರ್ವ ರಾಷ್ಟ್ರಗಳಾದ್ಯಂತ ಪ್ರಯಾಣಿಸಿದರು. ಇವರು ಮಂಗೋಲಿಯಾ, ಭಾರತ ಮತ್ತು ಚೀನಾದೇಶಗಳಿಗೆ ಭೇಟಿ ನೀಡಿದರು. ಮಾರ್ಕೋಪೋಲೋನು ಸುಮಾರು 24 ವರ್ಷಗಳ ಕಾಲ ಇಲ್ಲಿಯೇ ಕಾಲಕಳೆದು, ಇಲ್ಲಿನ ಭೌಗೋಳಿಕ ಹಿನ್ನೆಲೆ, ಜನರು, ಸಂಪತ್ತು ಹಾಗೂ ವ್ಯಾಪಾರ ಮಾರ್ಗಗಳ ಬಗ್ಗೆ ವಿವರವಾದ ಮಾಹಿತಿ ನೀಡಿದ್ದಾನೆ. ಈ ಮಾಹಿತಿಗಳು ಯೂರೋಪಿನ ವ್ಯಾಪಾರಿಗಳು ಪೂರ್ವ ರಾಷ್ಟ್ರಗಳಿಗೆ ಭೇಟಿ ನೀಡಲು, ಅವರ ಆಸೆಗಳಿಗೆ ಪ್ರೇರೇಪಣೆ ನೀಡಿದವು.

4. **ಭೌಗೋಳಿಕ ಜ್ಞಾನ:** ಯೂರೋಪಿಯನ್ನರಲ್ಲುಂಟಾದ ಭೌಗೋಳಿಕ ಜ್ಞಾನದ ಹೆಚ್ಚಳವೂ ಸಹ ಹೊಸ ಜಲಮಾರ್ಗಗಳು ಹಾಗೂ ಭೂ ಮಾರ್ಗಗಳ ಅನ್ವೇಷಣೆಗಳಿಗೆ ಕಾರಣವಾಯಿತು. 14 ನೇ ಶತಮಾನದಲ್ಲಿ ಪ್ರವಾಸಿಗರು ಹಾಗೂ ನಾವಿಕರುಗಳಿಗೆ ಪ್ರವಾಸದ ಬಗೆಗಿನ ಹಲವಾರು ಪುಸ್ತಕಗಳು ಲಭ್ಯವಾದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ – ಫ್ರಾನ್ಸೆಸ್ಕೋ ಬಾಲ್ಡುಸ್ಸಿ ಪೆಗೊಲೊಟ್ಟಿ ಬರೆದಿರುವ **'ಎ ಮರ್ಚೆಂಟ್ಸ್ ಹ್ಯಾಂಡ್ ಬುಕ್'** ಹಾಗೂ ಮರಿನೋ ಸಾನುಡೋ ಬರೆದಿರುವ **'ಸೀಕ್ರೇಟ್ಸ್ ಆಫ್ ದಿ ಫೇಯ್ತ್‌ಫುಲ್ ಕ್ರೂಸೇಡರ್'**. ಭೂಮಿ ಚಪ್ಪಟೆಯಾಗಿದೆಯೆಂದೂ, ಸಮುದ್ರಗಳು ಭಯಂಕರ ಹಾಗೂ ವಿಕಾರ ರೂಪದ ರಾಕ್ಷಸರಿಂದ ಆವೃತವಾಗಿದೆಯೆಂದೂ, ಆಫ್ರಿಕಾದ ಉಷ್ಣವಲಯ ಪ್ರದೇಶವು ಜ್ವಾಲೆಗಳಿಂದ ಹಾಗೂ ಕುದಿಯುವ ನೀರಿನಿಂದ ಕೂಡಿದೆ ಎಂಬ ತಿಳುವಳಿಕೆಗಳು ತಪ್ಪು ಎಂದು ಭೌಗೋಳಿಕ ಜ್ಞಾನ ಸಾಬೀತುಪಡಿಸಿತು.

5. **ಕ್ರೈಸ್ತ ಧರ್ಮದ ಪ್ರಸಾರ:**– ಯೂರೋಪಿನ ರಾಜರು, ಪಾದ್ರಿಗಳು ಹಾಗೂ ಕ್ರೈಸ್ತ ಮಿಷನರಿಗಳು ಹೊಸ ಭೂಪ್ರದೇಶಗಳಲ್ಲಿ ಕ್ರೈಸ್ತ ಧರ್ಮವನ್ನು ಪ್ರಸಾರ ಮಾಡಲು ಉತ್ಸುಕರಾಗಿದ್ದರು. ಆದ್ದರಿಂದ ಸ್ಪೇನ್ ಮತ್ತು ಪೋರ್ಚುಗಲ್‌ನ ದೊರೆಗಳು ಭೌಗೋಳಿಕ ಅನ್ವೇಷಣೆಗಳಿಗೆ ಪ್ರೋತ್ಸಾಹ ನೀಡಿದರು. ಮಿಷನರಿಗಳು ಕ್ರೈಸ್ತ ಧರ್ಮವನ್ನು ಪ್ರಸಾರ ಮಾಡಲು ಈ ಅವಕಾಶವನ್ನು ಬಳಸಿಕೊಂಡರು.

6. **ರಾಜಕುಮಾರ ಹೆನ್ರಿಯ ಪರಿಶ್ರಮ:**– ಪೋರ್ಚುಗಲ್ ರಾಜಕುಮಾರ ಹೆನ್ರಿಯು ಸ್ಥಾಪಿಸಿದ **'ನೌಕಾಯಾನ ತರಬೇತಿ ಶಾಲೆ'**ಯು ನಾವಿಕರು, ಭೂಗೋಳಶಾಸ್ತ್ರಜ್ಞರು, ಭೂಪಟ ತಯಾರಕರು ಹಾಗೂ ಹಡಗು ತಯಾರಕರಿಗೆ ಸೂಕ್ತ ತರಬೇತಿ ನೀಡಿದುದು ಭೌಗೋಳಿಕ ಸಂಶೋಧನೆಗೆ ಸಹಕಾರಿಯಾಯಿತು.

7. **ಇತರೆ ಕಾರಣಗಳು:** ಮುದ್ರಣಯಂತ್ರದ ಸಂಶೋಧನೆ, ನಾವಿಕರ ದಿಕ್ಸೂಚಿ, ಹೊಸ ಭೂಪಟಗಳ ರಚನೆ ಮತ್ತು ಬ್ಯಾಂಕುಗಳು ಹಾಗೂ ಕೂಡು ಬಂಡವಾಳ ಸಂಸ್ಥೆಗಳು (Joint stock companies) ನಾವಿಕರಿಗೆ ಪ್ರೋತ್ಸಾಹ ನೀಡಿದವು. ಭೌಗೋಳಿಕ ಸಂಶೋಧನೆ ನಡೆಸಲು ರಾಜರುಗಳು ಪ್ರೋತ್ಸಾಹ ನೀಡಿದರು.



ನಾವಿಕರ ದಿಕ್ಸೂಚಿ

ಪ್ರಮುಖ ಅನ್ವೇಷಕರ ಅನ್ವೇಷಣೆಗಳು:

1. **ರಾಜಕುಮಾರ ಹೆನ್ರಿ ದಿ ನ್ಯಾವಿಗೇಟರ್:** ಪೋರ್ಚುಗಲ್ ರಾಜಕುಮಾರ ಹೆನ್ರಿಯು ಹಡಗು ನಿರ್ಮಾಣ ಹಾಗೂ ನೌಕಾಯಾನದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದನು. ಈತನು ಸ್ವತಃ ಅನ್ವೇಷಣಕಾರನಾಗಿರದಿದ್ದರೂ, ಸಾಹಸಿ ನಾವಿಕರ ಹಿಂದಿನ ಪ್ರೇರಕ ಶಕ್ತಿಯಾಗಿದ್ದನು. ಈತನು ಹೊಸ ಭೂಪ್ರದೇಶಗಳನ್ನು ಕಂಡಹಿಡಿಯಲು ಮುಂದಾದ ನಾವಿಕರುಗಳಿಗೆ ಸೂಕ್ತ ತರಬೇತಿ ನೀಡಲು **'ನೌಕಾ ತರಬೇತಿ ಶಾಲೆ'**ಯನ್ನು ಸ್ಥಾಪಿಸಿದನು. ಈತನು ಸಾಹಸಯುತ ಇಟಲಿಯ ನಾವಿಕರುಗಳು, ಭೂಗೋಳಶಾಸ್ತ್ರಜ್ಞರು, ಭೂಪಟ ತಯಾರಕರು ಮತ್ತು ಹಡಗು ತಯಾರಕರನ್ನು ಪ್ರೋತ್ಸಾಹಿಸಿದನು. ಈತನ ಜೀವಿತಾವಧಿಯಲ್ಲಿ ಪೋರ್ಚುಗೀಸ್ ನಾವಿಕರು ಆಫ್ರಿಕಾದ ತೀರ ಪ್ರದೇಶವನ್ನು ಪತ್ತೆ ಹಚ್ಚಿದರು. ಈ ಎಲ್ಲಾ ಬೆಳವಣಿಗೆಗಳಿಂದಾಗಿ ರಾಜಕುಮಾರ ಹೆನ್ರಿಯನ್ನು **'ದಿ ನ್ಯಾವಿಗೇಟರ್'** ಎಂದು ಕರೆಯಲಾಗಿದೆ.

2. **ಬಾರ್ತಲೋಮಿಯೋ ಡಯಾಜ್:** ಪೋರ್ಚುಗೀಸ್ ನಾವಿಕ ಬಾರ್ತಲೋಮಿಯೋ ಡಯಾಜ್‌ನು ಆಫ್ರಿಕಾದ ಪಶ್ಚಿಮ ತೀರದ ಮೂಲಕ ಪ್ರಯಾಣ ಆರಂಭಿಸಿ, ಆಫ್ರಿಕಾದ ದಕ್ಷಿಣ ತೀರ ಪ್ರದೇಶವನ್ನು 1488ರಲ್ಲಿ ತಲುಪಿದನು. ಈತನು ದಕ್ಷಿಣ ತುದಿ ತಲುಪಿದಾಗ ಭೀಕರ ಬಿರುಗಾಳಿ ಎದ್ದು, ಅವುಗಳ ಒತ್ತಡದಿಂದಾಗಿ ಈತ ಮತ್ತು ಈತನ ಸಹ ನಾವಿಕರು ಪ್ರಯಾಣ ಮುಂದುವರಿಸಲಾಗದೆ ವಾಪಸ್ಸಾದರು. ಆದ್ದರಿಂದ ಈ ಭಾಗಕ್ಕೆ ಡಯಾಜ್‌ನು **'ಬಿರುಗಾಳಿಗಳ ಭೂಶಿರ' (ಕೇಪ್ ಆಫ್ ಸ್ಟಾರ್ಮ್ಸ್)** ಎಂದು ನಾಮಕರಣ ಮಾಡಿದನು.

2. **ಕ್ರಿಸ್ಟೋಫರ್ ಕೊಲಂಬಸ್:** ಇಟಲಿಯ ಜಿನೋವಾದ ನಾವಿಕನಾದ ಕೊಲಂಬಸ್‌ನು ಭೂಮಿ ದುಂಡಾಗಿದೆ ಎಂದು ನಂಬಿದ್ದನು ಹಾಗೂ ಅಟ್ಲಾಂಟಿಕ್ ಸಾಗರದ ಮೂಲಕ ಭಾರತವನ್ನು ತಲುಪಬೇಕೆಂಬ ಯೋಚನೆ ಮಾಡಿದನು. ಈತನು ಸ್ಪೇನ್ ಅರಸ ಫರ್ಡಿನೆಂಡ್ ಮತ್ತು ರಾಣಿ ಇಸಬೆಲ್ಲರ ಸಹಾಯ ಪಡೆದನು. ಇವರು ಕೊಲಂಬಸ್‌ನಿಗೆ ಹಡಗುಗಳು, ಸಾಹಸಿ ಯುವಕರನ್ನು ನೀಡಿದ್ದಲ್ಲದೆ ಅಪಾರ ಧನ ಸಹಾಯ ಮಾಡಿದರು. ಕೊಲಂಬಸ್ ಮತ್ತು ಅವನ ಸಂಗಡಿಗರು 1492 ರಲ್ಲಿ ವೆಸ್ಟ್ ಇಂಡೀಸ್‌ನ ಬಹಮಾಸ್ ದ್ವೀಪಗಳಲ್ಲಿ ಒಂದಾದ ಸಾನ್‌ಸಾಲ್ವೆಡಾರ್ ತಲುಪಿದರು. ಕೊಲಂಬಸ್ ತಾನು ಭಾರತವನ್ನು ತಲುಪಿದೆನೆಂದು ನಂಬಿದನು. ಇಲ್ಲಿನ ಸ್ಥಳೀಯರು ಕೆಂಪು ಬಣ್ಣವುಳ್ಳವರಾಗಿದ್ದರಿಂದ ಅವರನ್ನು **'ರೆಡ್ ಇಂಡಿಯನ್ನರು'** ಎಂದು ಕರೆದನು. ಕೊಲಂಬಸ್ ಯಾನಗಳನ್ನು ಕೈಗೊಳ್ಳುವುದರ ಮೂಲಕ ದಕ್ಷಿಣ ಅಮೇರಿಕ,

ಕ್ಯೂಬಾ, ಮತ್ತು ಹೈಟಿ ಭೂಪ್ರದೇಶಗಳನ್ನು ಕಂಡು ಹಿಡಿದನು. ಕೊಲಂಬಸ್ ಅಮೇರಿಕಾದ ಪ್ರಮುಖ ಭೂಭಾಗವನ್ನು ಪತ್ತೆ ಮಾಡಲಿಲ್ಲ ಎಂಬುದು ಪ್ರಮುಖ ಅಂಶವಾಗಿದೆ.

ವಾಸ್ಕೋಡಗಾಮ
1469–1524:

4. **ವಾಸ್ಕೋಡಗಾಮ:** ಪೋರ್ಚುಗೀಸ್ ನಾವಿಕ ವಾಸ್ಕೋಡಗಾಮನು ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದನು. ಈತನು ಪೋರ್ಚುಗೀಸ್ ದೊರೆ ಎರಡನೇ ಇಮ್ಯಾನ್ಯುಯಲ್‌ನ ಆಶ್ರಯ ಪಡೆದಿದ್ದನು. ಈತನು ಆಫ್ರಿಕಾದ ಪಶ್ಚಿಮ ತೀರದ ಮೂಲಕ ಪ್ರಯಾಣಿಸಿ 'ಬಿರುಗಾಳಿಗಳ ಭೂಶಿರ'ವನ್ನು ತಲುಪಿದನು. ಇದು ಪ್ರಯಾಣಕ್ಕೆ ಶಾಂತ ಹಾಗೂ ಆಹ್ಲಾದಕರವಾಗಿತ್ತು. ಇದು ಪೂರ್ವರಾಷ್ಟ್ರಗಳಿಗೆ ಜಲಮಾರ್ಗ ಕಂಡುಹಿಡಿಯಲು ಸ್ಪಷ್ಟ ಆಶಾಭಾವನೆಯುಂಟುಮಾಡಿದ್ದರಿಂದ, ಇದನ್ನು **'ಕೇಪ್ ಆಫ್ ಗುಡ್ ಹೋಪ್'** ಎಂದು ಮರು ನಾಮಕರಣ ಮಾಡಿದನು. ನಂತರ ಈತನು ಹಿಂದೂ ಮಹಾಸಾಗರದ ಮೂಲಕ ಪ್ರಯಾಣ ಮುಂದುವರಿಸಿ 1498ರಲ್ಲಿ ಭಾರತದ ಪಶ್ಚಿಮ ಕರಾವಳಿಯ ಮಲಬಾರ್ ತೀರದ ಕಲ್ಲಿಕೋಟೆಯನ್ನು ತಲುಪಿದನು. ಇಲ್ಲಿನ ದೊರೆ ಜಾಮೋರಿನ್‌ನು ವಾಸ್ಕೋಡಗಾಮನಿಗೆ ಸ್ವಾಗತ ನೀಡಿದನು. ಈತನ ಸಮುದ್ರಯಾನವು ಭಾರತವನ್ನು ಪ್ರವೇಶಿಸಲು ಯೂರೋಪಿಯನ್ನರಿಗೆ ಬಾಗಿಲು ತೆರೆದಂತಾಯಿತು.

ವಾಸ್ಕೋಡಗಾಮ ಪೋರ್ಚುಗಲ್ ರಾಜಧಾನಿ ಲಿಸ್ಬನ್ ಬಳಿಯ ಸೈನಸ್ ಎಂಬಲ್ಲಿ 1469ರಲ್ಲಿ ಜನಿಸಿದನು. ಈತನು 4 ಹಡಗುಗಳು,150 ನಾವಿಕರೊಂದಿಗೆ ಲಿಸ್ಬನ್‌ನಿಂದ ಜುಲೈ 8, 1497ರಲ್ಲಿ ಪ್ರಯಾಣ ಆರಂಭಿಸಿ, ಆಫ್ರಿಕಾದ ದಕ್ಷಿಣ ತುದಿ ಗುಡ್ ಹೋಪ್ ಭೂಶಿರದ ಮೂಲಕ ಪೂರ್ವದತ್ತ ಪ್ರಯಾಣಿಸಿ ಮಲಿಂದಿ ದ್ವೀಪವನ್ನು ತಲುಪಿದನು. ಇಲ್ಲಿ ಭಾರತೀಯ ವರ್ತಕನೊಬ್ಬನನ್ನು ಭೇಟಿಯಾಗಲಾಗಿ, ವರ್ತಕನು ಅರಬ್ ಪೈಲಟ್ ಅಹ್ಮದ್ ಇಬನ್ ಮಜಿದ್ ಎಂಬುವನನ್ನು ವಾಸ್ಕೋಡಗಾಮನೊಂದಿಗೆ ಕಳುಹಿಸಿದನು. ನಂತರ ಹಿಂದೂಮಹಾಸಾಗರದ ಮೂಲಕ ಪ್ರಯಾಣಿಸಿ ಭಾರತದ ಪಶ್ಚಿಮತೀರದಲ್ಲಿರುವ ಕೇರಳದ ಕಲ್ಲಿಕೋಟೆಯನ್ನು ಮೇ 20, 1498ರಲ್ಲಿ ತಲುಪಿದನು. ಇದರಿಂದಾಗಿ ವಾಸ್ಕೋಡಗಾಮನು **'ಅಡ್ಮಿರಲ್ ಆಫ್ ದಿ ಇಂಡಿಯನ್ ಓಷನ್'** ಎಂಬ ಬಿರುದು ಗಳಿಸಿದನು. ವಾಸ್ಕೋಡಗಾಮನು 1499ರಲ್ಲಿ ಭಾರತದಿಂದ ಲಿಸ್ಬನ್‌ಗೆ ಅಮೂಲ್ಯ ಸಾಂಬಾರ ಪದಾರ್ಥಗಳೊಂದಿಗೆ ವಾಪಸಾದನು. 1502ರಲ್ಲಿ ಮತ್ತೆ ಭಾರತಕ್ಕೆ ಬಂದ ಈತನು ಸ್ಥಳೀಯ ಕೊಚ್ಚಿನ್, ಕಣ್ಣನೂರ್, ಮತ್ತು ಕ್ಯಾಲಿಕಟ್ ರಾಜರುಗಳ ನಡುವಿನ ಯುದ್ಧಗಳಲ್ಲಿ ಹಸ್ತಕ್ಷೇಪ ಮಾಡಿದನು. ಮತ್ತೆ ಲಿಸ್ಬನ್‌ಗೆ ವಾಪಸಾದ ಈತನು ಮೂರನೇ ಬಾರಿಗೆ 1524ರಲ್ಲಿ **'ಗೋವಾದ ವೈಸ್‌ರಾಯ್'** ಆಗಿ ಭಾರತಕ್ಕೆ ಬಂದನು. ಈತನು 1524 ಡಿಸಂಬರ್‌ನಲ್ಲಿ ಕೊಚ್ಚಿನ್‌ನಲ್ಲಿ ಮರಣ ಹೊಂದಿದನು.

5, **ಅಮೆರಿಗೋ ವೆಸ್‌ಪುಸ್ಸಿ:** ಇಟಲಿಯ ನಾವಿಕನಾದ ಅಮೆರಿಗೋ ವೆಸ್‌ಪುಸ್ಸಿಯು ಅಮೇರಿಕಾದ ಮುಖ್ಯ ಭೂಭಾಗವನ್ನು ಕಂಡುಹಿಡಿದನು. ಈ ಹೊಸ ಪ್ರಪಂಚದ ಭೌಗೋಳಿಕ ವಿವರಗಳನ್ನು ತನ್ನ ಪ್ರಯಾಣದ ವರ್ಣನೆಗಳಲ್ಲಿ ದಾಖಲಿಸಿದ್ದಾನೆ. ಹಿಂದೆ ಕೊಲಂಬಸ್‌ನಿಂದ ಕಂಡುಹಿಡಿಯಲ್ಪಟ್ಟ ಹಾಗೂ ತಾನು ಸ್ವತ: ಅನ್ವೇಷಿಸಿದ ಭೂಭಾಗವು ಹೊಸ ಖಂಡ ವೆಂದು ಗುರುತಿಸಿದನು. ಈತನು ಪತ್ತೆ ಹಚ್ಚಿದ ಹೊಸ ಭೂಭಾಗಕ್ಕೆ ಈತನ ನೆನಪಿಗಾಗಿ **'ಅಮೇರಿಕಾ'** ಎಂದು ನಾಮಕರಣ ಮಾಡಲಾಗಿದೆ.

6. **ಫರ್ಡಿನೆಂಡ್ ಮೆಗಲಾನ್:** ಪೋರ್ಚುಗೀಸ್ ನಾವಿಕನಾದ ಈತನು ನೌಕಾಯಾನ ಇತಿಹಾಸದಲ್ಲಿ ಹೊಸ ದಾಖಲೆಯನ್ನು ನಿರ್ಮಿಸಿದ್ದಾನೆ. ಈತನು ಭೂಮಿಯು ದುಂಡಾಗಿದೆ ಹಾಗೂ ಇದನ್ನು ನೌಕಾಯಾನದ ಮೂಲಕ ಪ್ರದಕ್ಷಿಣೆ ಮಾಡಬಹುದೆಂದು ನಂಬಿದ್ದನು. 1519 ರಲ್ಲಿ ಸ್ಪೇನ್ ಅರಸ ಮೊದಲನೇ ಚಾರ್ಲ್ಸ್‌ನು ಮೆಗಲಾನನಿಗೆ ವಿಕ್ಟೋರಿಯಾ, ಸಾನ್ ಆಂಟೋನಿಯೋ, ಟ್ರಿನಿಡಾಡ್, ಕನ್ಸೆಪ್ಷನ್, ಮತ್ತು ಸ್ಯಾಂಟಿಯಾಗೋ ಎಂಬ 5 ಹಡಗುಗಳನ್ನು ನೀಡುವುದರ ಮೂಲಕ ನೌಕಾಯಾನಕ್ಕೆ ಎಲ್ಲಾ ರೀತಿಯ ಸಹಾಯ ಮಾಡಿದನು.

ಮೆಗಲಾನ್‌ನು ದಕ್ಷಿಣ ಅಮೇರಿಕಾದ ದಕ್ಷಿಣತುದಿಯನ್ನು ಸುತ್ತುವರಿದು ಜಲಸಂಧಿಯ ಮೂಲಕ ಪ್ರಯಾಣಿಸಿ ಮತ್ತೊಂದು ಸಾಗರವನ್ನು ಪ್ರವೇಶಿಸಿದನು. ಈ ಸಾಗರವು ಅಟ್ಲಾಂಟಿಕ್‌ಗೆ ಹೋಲಿಸಿದರೆ ನಿಶಬ್ದವೂ ಹಾಗೂ ಪ್ರಶಾಂತವೂ ಆಗಿತ್ತು. ಆದ್ದರಿಂದ ಈ ಸಾಗರಕ್ಕೆ ಈತನು **'ಪೆಸಿಫಿಕ್ ಸಾಗರ'** (ಶಾಂತ ಸಾಗರ) ಎಂದು ನಾಮಕರಣ ಮಾಡಿದನು. ಪೆಸಿಫಿಕ್ ಸಾಗರ ದಾಟಿ ಫಿಲಿಪೈನ್ಸ್ ದ್ವೀಪಸಮೂಹವನ್ನು ತಲುಪಿದನು. ಈ ದ್ವೀಪಗಳ ಜನರೊಂದಿಗಿನ ಹೋರಾಟದಲ್ಲಿ ಮೆಗಲಾನನು 1521ರಲ್ಲಿ ತನ್ನ ಪ್ರಾಣವನ್ನು ಕಳೆದುಕೊಂಡನು. ಆದರೆ ಈತನ ಹಡಗುಗಳಲ್ಲಿ ಒಂದಾದ 'ವಿಕ್ಟೋರಿಯ'ವು ಜಾನ್ ಸೆಬಾಸ್ಟಿಯನ್ ಎಲ್ಕಾನೋ ನಾಯಕತ್ವದಲ್ಲಿ ಪಶ್ಚಿಮಾಭಿಮುಖವಾಗಿ ಪ್ರಯಾಣ ಮುಂದುವರೆಸಿ, ಮೂರು ವರ್ಷಗಳ ನಂತರ ಸ್ಪೇನ್ ತಲುಪಿತು. ಪ್ರಪಂಚವನ್ನು ನೌಕಾಯಾನದ ಮೂಲಕ ಮೊದಲ ಬಾರಿಗೆ ಪ್ರದಕ್ಷಿಣೆ ಹಾಕಿದ ಕೀರ್ತಿಗೆ **'ವಿಕ್ಟೋರಿಯಾ'** ಹಡಗು ಪಾತ್ರವಾಗಿದೆ. ಇದು ಜಗತ್ತು ದುಂಡಾಗಿದೆ ಎಂದು ಸಾಬೀತು ಪಡಿಸಿತು.

ವಿಕ್ಟೋರಿಯಾ ಹಡಗು. ವಿಕ್ಟೋರಿಯಾ ಹಡಗು ಮೊದಲಬಾರಿಗೆ ಯಶಸ್ವಿಯಾಗಿ ಇಡೀ ವಿಶ್ವವನ್ನು ಪ್ರದಕ್ಷಿಣೆ ಹಾಕಿತು. ಪೋರ್ಚುಗೀಸ್ ನಾವಿಕ ಫರ್ಡಿನೆಂಡ್ ಮೆಗಲಾನ್ ನಾಯಕತ್ವದಲ್ಲಿ ಪ್ರಯಾಣ ಆರಂಭಿಸಿದ ಈ ಹಡಗು ಆತನ ಮರಣದ ನಂತರ ಜಾನ್ ಸೆಬಾಸ್ಟಿಯನ್ ಎಲ್ಕಾನೋ ನಾಯಕತ್ವದಲ್ಲಿ ಪ್ರಯಾಣ ಮುಂದುವರೆಸಿತು ಇದು 85 ಟನ್ ತೂಕವಿದ್ದು, 42 ಮಂದಿ ನಾವಿಕರನ್ನು ಕೊಂಡೊಯ್ಯುವ ಸಾಮರ್ಥ್ಯ ಹೊಂದಿತ್ತು.ಇದರ ಉದ್ದ 60–70 ಅಡಿಗಳಷ್ಟಿತ್ತು.

ಇತರೆ ಭೌಗೋಳಿಕ ಅನ್ವೇಷಣಾಕಾರರ ಹೆಸರು, ದೇಶ ಹಾಗೂ ಅವರು ಪತ್ತೆ ಹಚ್ಚಿದ ಸ್ಥಳಗಳು:

1. ಜಾನ್ ಕೆಬೋಟ್ (ಇಟಲಿ) – ನ್ಯೂಫೌಂಡ್ ಲ್ಯಾಂಡ್. (1497)
2. ಬಲ್ಬೋವ (ಸ್ಪೇನ್) – ಪೆಸಿಫಿಕ್ ಓಷನ್,ಪನಾಮಾ ಭೂಶಿರ (1499)
3. ಹರ್ನಾಂಡೊ ಕಾರ್ಟೇಜ್ (ಸ್ಪೇನ್) – ಮೆಕ್ಸಿಕೋ (1519)
4. ಕೆಬ್ರಾಲ್ (ಪೋರ್ಚುಗಲ್) – ಬ್ರೆಜಿಲ್ (1520)
5. ಫ್ರಾನ್ಸಿಸ್ಕೋ ಪಿಜಾರೋ (ಸ್ಪೇನ್) – ಪೆರು (1532)
6. ಜಾಕಿಸ್ ಕಾರ್ಟಿಯರ್ (ಫ್ರಾನ್ಸ್) – ಸೇಂಟ್ ಲಾರೆನ್ಸ್ ನದಿ (1534)
7. ಹಡ್ಸನ್ (ಇಂಗ್ಲೆಂಡ್) – ಕೆನಡಾ (1610)
8. ಟಾಸ್ಮನ್ (ಡೆನ್ಮಾರ್ಕ್) – ಟಾಸ್ಮೇನಿಯಾ (1611)
9. ಜೇಮ್ಸ್ ಬ್ರೂಸ್ (ಇಂಗ್ಲೆಂಡ್) – ಬ್ಲೂ ನೈಲ್ (ಉತ್ತರ ಆಫ್ರಿಕಾ–1770)
10. ಜೇಮ್ಸ್ ಕುಕ್ (ಇಂಗ್ಲೆಂಡ್) – ಆಸ್ಟ್ರೇಲಿಯಾ (1772)
11. ಮುಂಗೋ ಪಾರ್ಕ್ (ಇಂಗ್ಲೆಂಡ್) – ಸಹರಾ (ಉತ್ತರ ಆಫ್ರಿಕಾ–1795)
12. ಮೆಕೆಂಜಿ (ಇಂಗ್ಲೆಂಡ್) – ರಾಖಿ ಪರ್ವತಗಳು (ಉತ್ತರ ಅಮೇರಿಕಾ–1820)
13. ಅಮುಂಡ್‌ಸನ್ (ಡೆನ್ಮಾರ್ಕ್) – ದಕ್ಷಿಣ ಧ್ರುವ (1912)
14. ರಾಬರ್ಟ್ ಪೆರಿ(ನಾರ್ವೆ) – ಉತ್ತರ ಧ್ರುವ (1928)

ಪರಿಣಾಮಗಳು: ಭೌಗೋಳಿಕ ಸಂಶೋಧನೆಗಳು ಪ್ರಪಂಚದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸದ ಮೇಲೆ ಮಹತ್ತರ ಪ್ರಭಾವವನ್ನು ಬೀರಿವೆ.

1. ಹೊಸ ಭೂಪ್ರದೇಶಗಳಾದ ಉತ್ತರ ಅಮೇರಿಕಾ ಹಾಗೂ ದಕ್ಷಿಣ ಅಮೇರಿಕಾಗಳ ಶೋಧನೆಯಿಂದಾಗಿ ವಿಫುಲ ಅವಕಾಶಗಳು ಲಭಿಸಿದವು. ಈ ಅನ್ವೇಷಣೆಗಳಿಂದಾಗಿ ಪ್ರಪಂಚವು ವಿಶಾಲವಾಗಿದೆ ಎಂದು ಪರಿಗಣಿತವಾಯಿತು.

2. ಮೆಗೆಲನ್ನನ ಭೂಪ್ರದಕ್ಷಿಣೆಯಿಂದಾಗಿ ಭೂಮಿಯು ದುಂಡಾಗಿದೆಯೆಂಬುದು ಸಾಬೀತಾಯಿತು.

3. ಭೌಗೋಳಿಕ ಅನ್ವೇಷಣೆಯಿಂದಾಗಿ ಯೂರೋಪಿಯನ್ನರು ಪೂರ್ವ ರಾಷ್ಟ್ರಗಳೊಂದಿಗೆ ಹೆಚ್ಚು ಸಂಪರ್ಕವನ್ನು ಹೊಂದಿದರು. ಅಪಾರ ಸಂಖ್ಯೆಯ ಯೂರೋಪಿಯನ್ನರು ವ್ಯಾಪಾರ, ಕ್ರೈಸ್ತ ಧರ್ಮ ಪ್ರಸಾರ, ವಸಾಹತುಗಳ ಸ್ಥಾಪನೆ ಮೊದಲಾದ ಕಾರಣಕ್ಕಾಗಿ ಪೂರ್ವ ರಾಷ್ಟ್ರಗಳಿಗೆ ಬಂದರು. ಇದು ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳೆರಡರ ಮೇಲೂ ಸಾಕಷ್ಟು ಪ್ರಭಾವ ಬೀರಿತು.

4. ಹಿಂದೆ ಯೂರೋಪಿನಲ್ಲಿ ಪ್ರಾಮುಖ್ಯತೆ ಹೊಂದಿದ್ದ ವ್ಯಾಪಾರ ಕೇಂದ್ರಗಳಾದ ವೆನಿಸ್, ಜಿನೋವಾ, ಫ್ಲಾರೆನ್ಸ್ ಮೊದಲಾದವು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡವು. ಬದಲಾಗಿ ಲಂಡನ್, ಲಿಸ್ಬನ್, ಅಮ್‌ಸ್ಟರ್‌ಡ್ಯಾಮ್

ಮುಂತಾದ ನಗರಗಳು ಹೊಸದಾಗಿ ಪತ್ತೆ ಹಚ್ಚಲ್ಪಟ್ಟ ಜಲಮಾರ್ಗಗಳ ಪರಿಣಾಮವಾಗಿ ಪ್ರಾಮುಖ್ಯತೆ ಪಡೆದು ಕೊಂಡವು.

5. ಹೊಸದಾಗಿ ಪತ್ತೆ ಹಚ್ಚಲ್ಪಟ್ಟ ಭೂಪ್ರದೇಶಗಳಿಗೆ ಯೂರೋಪಿನ ರಾಜರುಗಳು ಕ್ರೈಸ್ತಮಿಷನರಿಗಳನ್ನು ಕಳುಹಿಸುವುದರ ಮೂಲಕ ಕ್ರೈಸ್ತ ಧರ್ಮದ ಪ್ರಸಾರ ಕಾರ್ಯ ಕೈಗೊಂಡರು. ಇದರಿಂದಾಗಿ ಕ್ರೈಸ್ತಧರ್ಮ ಏಷ್ಯಾ, ಆಫ್ರಿಕಾ ಮತ್ತು ಅಮೇರಿಕಾಗಳನ್ನು ಪ್ರವೇಶಿಸಿತು. ಭೌಗೋಳಿಕ ಸಂಶೋಧನೆಗಳು ಇಲ್ಲಿನ ಜನರನ್ನು ಕ್ರೈಸ್ತಧರ್ಮಕ್ಕೆ ಮತಾಂತರಿಸಲು ಹೆಚ್ಚು ಅವಕಾಶ ಕಲ್ಪಿಸಿದವು.

6. ಶ್ರೀಮಂತ ವ್ಯಾಪಾರಿಗಳು ಹಾಗೂ ಮಧ್ಯಮ ವರ್ಗದವರು ಭೌಗೋಳಿಕ ಅನ್ವೇಷಣೆಯಿಂದಾಗಿ ರಾಜಪ್ರಭುತ್ವಕ್ಕೆ ಬೆಂಬಲ ನೀಡಿದರು. ಈ ಬೆಂಬಲದಿಂದಾಗಿ ಇಂಗ್ಲೆಂಡ್, ಸ್ಪೇನ್, ಫ್ರಾನ್ಸ್ ಮೊದಲಾದ ರಾಷ್ಟ್ರಗಳಲ್ಲಿ ರಾಜಪ್ರಭುತ್ವಗಳು ಸ್ಥಿರವಾದವು.

7. ಭೌಗೋಳಿಕ ಅನ್ವೇಷಣೆಗಳಿಂದಾಗಿ ಐರೋಪ್ಯ ರಾಷ್ಟ್ರಗಳಲ್ಲಿ ಪೈಪೋಟಿ ಉಂಟಾಯಿತು. ಈ ಪೈಪೋಟಿಯು ಪ್ರಮುಖವಾಗಿ ಹೊಸದಾಗಿ ಅನ್ವೇಷಿಸಲ್ಪಟ್ಟ ಭೂಪ್ರದೇಶಗಳೊಂದಿಗೆ ವ್ಯಾಪಾರ ಸಂಬಂಧಗಳಿಗಾಗಿ, ತದನಂತರ ವ್ಯಾಪಾರದ ಏಕಸ್ವಾಮ್ಯತ್ವಕ್ಕಾಗಿ ನಡೆದವು. ಅವರು ತಮ್ಮ ಗುರಿ ಸಾಧಿಸಲು ಆಕ್ರಮಣಕಾರಿ ಹಾಗೂ ನಿರ್ದಯಿಗಳಾದರು.

8. ಹೊಸ ಭೂಪ್ರದೇಶಗಳ ಶೋಧನೆಯು ಗುಲಾಮರ ವ್ಯಾಪಾರ, ಹಡಗು ಉದ್ಯಮ ಕೈಗಾರಿಕೆ, ಬ್ಯಾಂಕುಗಳು, ಹಾಗೂ ವಾಣಿಜ್ಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿತು. ಅಲ್ಲದೆ ಪುನರುಜ್ಜೀವನ ಹಾಗೂ ಧಾರ್ಮಿಕ ಸುಧಾರಣಾ ಚಳುವಳಿಗೂ ಪ್ರೇರೇಪಣೆ ನೀಡಿತು.



7.2– ಪುನರುಜ್ಜೀವನ

ಯೂರೋಪಿನ ಇತಿಹಾಸದಲ್ಲಿ 15 ರಿಂದ 16ನೇ ಶತಮಾನಗಳ ಅವಧಿಯನ್ನು **'ಪುನರುಜ್ಜೀವನ ಕಾಲ'** ಎಂದು ಕರೆಯಲಾಗಿದೆ. ಪುನರುಜ್ಜೀವನದ ಇಂಗ್ಲೀಷ್ ಪದವಾದ ರೆನೈಸ್ಸಾನ್ಸ್ ಎಂಬುದು **'ರೆನಾಸರೀ'** ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಇದರ ಅರ್ಥ **'ಪುನರ್ಜನ್ಮ' ಅಥವಾ 'ಪುನರಾವಲೋಕನ'** ಎಂಬುದಾಗಿದೆ. ಅಂದರೆ ಇದು ಪ್ರಾಚೀನ ಗ್ರೀಕ್ ಮತ್ತು ರೋಮ್‌ನ ಶ್ರೇಷ್ಠ ಸಂಸ್ಕೃತಿಗಳ ಪುನರ್ ಅಧ್ಯಯನ ಮಾಡುವುದಾಗಿದೆ. ಈ ಚಳುವಳಿಯು ತನ್ನ ಮತ್ತೆರಡು ಸಮಕಾಲೀನ ಘಟನಾವಳಿಗಳಾದ ಭೌಗೋಳಿಕ ಅನ್ವೇಷಣೆಗಳು ಹಾಗೂ ಧಾರ್ಮಿಕ ಸುಧಾರಣೆಗಳ ಮೇಲೆ ಪ್ರಭಾವ ಬೀರಿದೆ. ಇದು ಯೂರೋಪ್ ಜನತೆಯನ್ನು ಮಧ್ಯಯುಗದಿಂದ ಆಧುನಿಕ ಯುಗದತ್ತ ಕೊಂಡೊಯ್ದಿತು.

ಆಟ್ಟೋಮನ್ ಟರ್ಕರಿಗೆ ಕಾನ್‌ಸ್ಟಾಂಟಿನೋಪಲ್ ವಶವಾದುದರಿಂದ ವಿದ್ವಾಂಸರು ಇಟಲಿಗೆ ಪಲಾಯನಗೈದರು. ಇಟಲಿಯ ವಿದ್ವಾಂಸರು, ಹೊಸ ವಿಚಾರಗಳು ಮತ್ತು ಜ್ಞಾನವನ್ನು ಸ್ವಾಗತಿಸಿದರು. ಇವು ಯೂರೋಪಿನ ಇತರೆ ರಾಷ್ಟ್ರಗಳಿಗೆ ಪಸರಿಸಿದವು. ಆದ್ದರಿಂದ ಇಟಲಿಯನ್ನು **'ಪುನರುಜ್ಜೀವನದ ಶಾಲೆ'** ಅಥವಾ **'ಪುನರುಜ್ಜೀವನದ ತಾಯ್ನಾಡು'** ಎಂದು ಕರೆಯಾಲಾಗಿದೆ.

ಕಾರಣಗಳು:

1. **ಕಾನ್‌ಸ್ಟಾಂಟಿನೋಪಲ್‌ನ ವಶ 1453:** ಆಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ಅನ್ನು ವಶಪಡಿಸಿಕೊಳ್ಳಲಾಗಿ, ಇಲ್ಲಿನ ವಿದ್ವಾಂಸರು ಇಟಲಿಗೆ ಪಲಾಯನ ಮಾಡಿದರು. ಇವರಿಗೆ ಇಟಲಿಯ ಪೋಪ್, ಪಾದ್ರಿಗಳು, ರಾಜಕುಮಾರರು ಹಾಗೂ ವ್ಯಾಪಾರಿಗಳು ಆಶ್ರಯ ನೀಡಿದರು. ಇದು ಪ್ರಾಚೀನ ಶ್ರೇಷ್ಠ ಸಾಹಿತ್ಯದ ಅಧ್ಯಯನಕ್ಕೆ ಪ್ರೋತ್ಸಾಹದಾಯಕ ವಾತಾವರಣ ನಿರ್ಮಿಸಿತು. ಆದ್ದರಿಂದ ಪುನರುಜ್ಜೀವನವು ಯೂರೋಪ್‌ನಲ್ಲಿ ಪ್ರಾರಂಭವಾಯಿತು.

2. **ಶಿಕ್ಷಣದ ಪ್ರಸಾರ:** ಯೂರೋಪ್‌ನ ವಿವಿಧ ಸ್ಥಳಗಳಲ್ಲಿ, ಅದರಲ್ಲೂ ಪ್ಯಾರಿಸ್, ಪಡುವಾ, ನೇಪಲ್ಸ್, ಆಕ್ಸ್‌ಫರ್ಡ್, ಬೋಲಾಗ್ನ ಮೊದಲಾದ ಕಡೆ ಕ್ಯಾಥೋಲಿಕರು ಸ್ಥಾಪಿಸಿದ ಮಿಷನರಿ ಶಾಲೆಗಳು ಹಾಗೂ ವಿಶ್ವವಿದ್ಯಾನಿಲಯಗಳು ಶಿಕ್ಷಣದ ಪ್ರಸಾರಕ್ಕೆ ಅವಕಾಶ ಮಾಡಿಕೊಟ್ಟವು. ಇವು ಹೊಸ ಚಿಂತನೆ ಹಾಗೂ ಕಲಿಕೆಗೆ ಮಹತ್ವ ನೀಡಿದವು. 14ನೇ ಶತಮಾನದಲ್ಲಿ ಪ್ರಾರಂಭವಾದ ಶಿಕ್ಷಣದ ಪ್ರಸಾರವು ಜನರ ದೃಷ್ಟಿಕೋನವನ್ನೇ ಬದಲಾಯಿಸಿತು.

3. **ಭೌಗೋಳಿಕ ಸಂಶೋಧನೆಗಳು:** 15 ಮತ್ತು 16ನೇ ಶತಮಾನಗಳಲ್ಲಿ ಯೂರೋಪಿಯನ್ನರು ಕಂಡುಹಿಡಿದ ಹೊಸ ಪ್ರದೇಶಗಳಿಂದಾಗಿ ಇವರಿಗೆ ಹೊಸ ಆದರ್ಶಗಳು, ವಿಚಾರಗಳು ಮತ್ತು ಜ್ಞಾನದ ಸಂಪರ್ಕ ದೊರೆಯಿತು. ಇದು ಚಿಂತನಾಕಾರರಿಗೆ ಕಾರಣ, ಅವಲೋಕನ ಮತ್ತು ಪ್ರಯೋಗಶೀಲತೆಗೆ ಮಹತ್ವ ನೀಡಲು ಪ್ರೋತ್ಸಾಹಿಸಿತು. ಇದು ಬೌದ್ಧಿಕ ದಿಗಂತವನ್ನು ವಿಸ್ತರಿಸಿತು.

4. **ಊಳಿಗಮಾನ್ಯ ಪದ್ಧತಿಯ ಅವನತಿ:** ಯೂರೋಪಿನಲ್ಲಿ ಅಧಿಕಾರಕ್ಕೆ ಬಂದ ಕೇಂದ್ರೀಕೃತ ರಾಜಪ್ರಭುತ್ವಗಳಿಂದ ಮಧ್ಯಯುಗದ ಅಂತ್ಯದಲ್ಲಿ ಊಳಿಗಮಾನ್ಯಪದ್ಧತಿಯು ಅವನತಿಯಾಯಿತು. ರಾಜರುಗಳು ಪ್ರಜಾ ಕಲ್ಯಾಣ ಮತ್ತು ಶ್ರೇಷ್ಠ ಸಾಹಿತ್ಯವನ್ನು ಪ್ರೋತ್ಸಾಹಿಸಲು ಆಸಕ್ತಿ ತಳೆದಿದ್ದರು. ಆದ್ದರಿಂದ ಇವರು ಶಿಕ್ಷಣಕ್ಷೇತ್ರಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದರು.

5. **ಕಲೆ ಮತ್ತು ಶಿಕ್ಷಣಕ್ಕೆ ನೀಡಿದ ಪ್ರೋತ್ಸಾಹ:** ಯೂರೋಪಿನ ಜನತೆ ಪ್ರಾಚೀನ ಕಲೆ, ವಾಸ್ತುಶಿಲ್ಪ ಮತ್ತು ಕಲಿಕೆಯಲ್ಲಿ ಹೆಚ್ಚು ಆಸಕ್ತಿ ತೋರಿದರು. ಇವರಿಗೆ ರಾಜರುಗಳು ಹಾಗೂ ಪಾದ್ರಿಗಳು ಹೆಚ್ಚು ಪ್ರೋತ್ಸಾಹ

ನೀಡಿದರು. ಶ್ರೀಮಂತ ವರ್ತಕರು ಹಾಗೂ ಬ್ಯಾಂಕರ್‌ಗಳೂ ಪ್ರಮುಖ ಪಾತ್ರ ವಹಿಸಿದ್ದು ಪುನರುಜ್ಜೀವನಕ್ಕೆ ಒಂದು ಕಾರಣವಾಯಿತು.

6. **ಮುದ್ರಣ ಯಂತ್ರದ ಪಾತ್ರ:** ಹೊಸ ವಿಚಾರಗಳನ್ನು ಪ್ರಸಾರ ಮಾಡುವಲ್ಲಿ ಮುದ್ರಣಯಂತ್ರದ ಸಂಶೋಧನೆಯು ಪ್ರಮುಖ ಅಂಶವಾಗಿದೆ. ಅಪಾರ ಸಂಖ್ಯೆಯಲ್ಲಿ ಮುದ್ರಿತವಾದ ಪುಸ್ತಕಗಳು ಯೂರೋಪಿನ ಎಲ್ಲಾ ಮೂಲೆಗಳನ್ನು ತಲುಪಿದವು. ಉದಾಹರಣೆಗೆ ಎರಾಸ್ಮಸ್‌ನ ಕೃತಿಯಾದ **'ಪ್ರೈಸ್ ಅಂಡ್ ಫಾಲಿ'**ಯ 24000 ಪ್ರತಿಗಳು ಒಂದೇ ವರ್ಷದಲ್ಲಿ ಮುದ್ರಿತವಾದವು. ಹೀಗೆ ಮುದ್ರಣ ಯಂತ್ರವು ಚಿಂತನೆಗಳನ್ನು ಪ್ರಸಾರ ಮಾಡುವಲ್ಲಿ ಎಷ್ಟು ಕ್ರಾಂತಿಕಾರಿಯಾಗಿದೆ ಎಂಬುದನ್ನು ತೋರಿಸುತ್ತದೆ.

ಲಕ್ಷಣಗಳು:

1. **ಮಾನವತಾವಾದ:** ಇಟಲಿಯ ಬುದ್ಧಿಜೀವಿಗಳ ಒಂದು ಗುಂಪು ಮಾನವತಾ ಚಳುವಳಿಯನ್ನು ಪ್ರಾರಂಭಿಸಿದರು. ಇವರು ಮಾನವನ ಬಗ್ಗೆ ಸಹಾನುಭೂತಿಯುಳ್ಳ ಅಧ್ಯಯನಕ್ಕೆ ಮುಂದಾಗುವುದರ ಮೂಲಕ ಮಾನವತಾವಾದವನ್ನು ಬೆಳೆಸಿದರು. ನಂತರದಲ್ಲಿ ಇದು ಯೂರೋಪ್‌ನಾದ್ಯಂತ ಹರಡಿತು. ಇವರು ವೈಚಾರಿಕ ಹಾಗೂ ಮಾನವಿಕ ಉದ್ದೇಶವುಳ್ಳವರಾಗಿದ್ದರು. ಮಾನವತಾವಾದಿಗಳು ಜನತೆಯಲ್ಲಿ ವಿಶಾಲ ಮತ್ತು ಮುಕ್ತ ಮನಸ್ಸು ಹಾಗೂ ವಿಮರ್ಶಾತ್ಮಕ ದೃಷ್ಟಿಕೋನಗಳನ್ನು ಬೆಳೆಸಿದರು. ಇವರು ಮೂಲತಃ ಶಾಸ್ತ್ರೀಯ ಸಾಹಿತ್ಯದ ಬಗ್ಗೆ ಆಸಕ್ತಿ ಹೊಂದಿದ್ದರು. ಈ ಚಳುವಳಿಯು ಮಹಾನ್ ಮಾನವತಾವಾದಿ ಪೆಟ್ರಾರ್ಕ್‌ನ ನೇತೃತ್ವದಲ್ಲಿ ಪ್ರಾರಂಭವಾಯಿತು. ಈತನನ್ನು **'ಮಾನವತಾವಾದದ ಪಿತಾಮಹ'** ಎಂದು ಕರೆಯಲಾಗಿದೆ ಹಾಗೂ **'ಪುನರುಜ್ಜೀವನದ ಪಿತಾಮಹ'** ಎಂದೂ ಸಹ ಪರಿಗಣಿಸಲಾಗಿದೆ. ಡಾಂಟೆ, ಸಿಸಿರೋ, ಬೊಕಾಷಿಯೋ, ಸರ್ವಾಂಟ್ಸ್ ಮೊದಲಾದವರು ಇತರೆ ಪ್ರಮುಖ ಮಾನವತಾವಾದಿಗಳಾಗಿದ್ದಾರೆ.

ಪೆಟ್ರಾರ್ಕ್

2. **ಶಾಸ್ತ್ರೀಯ ಶೈಲಿಯ ಅನುಕರಣೆ [Classicism]**: ಯೂರೋಪಿನ ಪುನರುಜ್ಜೀವನ ಕಾಲದ ಮತ್ತೊಂದು ಪ್ರಮುಖ ಲಕ್ಷಣ ಎಂದರೆ ಶಾಸ್ತ್ರೀಯ ಶೈಲಿಯ ಅನುಕರಣೆ. ಈ ಚಳುವಳಿಯು ಪ್ರಾಚೀನ ಗ್ರೀಕ್ ಮತ್ತು ರೋಮನ್ ಶೈಲಿಗಳ ಬಗೆಗಿನ ಸ್ಫೂರ್ತಿಯನ್ನು ಹೆಚ್ಚಿಸಲು ಜನತೆಯಲ್ಲಿ ಆಸಕ್ತಿ ಮೂಡಿಸಿತು. ಇದು ಕಲೆ,ವಾಸ್ತುಶಿಲ್ಪ ಮತ್ತು ಸಾಹಿತ್ಯದಲ್ಲಿ ಹೊಸ ಶೈಲಿಯ ಭಾವನೆಗಳನ್ನು ವ್ಯಕ್ತಪಡಿಸಲು ಅನುಕೂಲವಾಯಿತು. ಒಟ್ಟಾರೆ ಇದು ಯೂರೋಪ್‌ನಲ್ಲಿ ಹೊಸ ಶೈಲಿಯ ಸಂಸ್ಕೃತಿಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿತು.

3. **ಪ್ರಾದೇಶಿಕ ಭಾಷೆಗಳ ಬೆಳವಣಿಗೆ :** ಯೂರೋಪಿನಲ್ಲುಂಟಾದ ಪುನರುಜ್ಜೀವನದ ಪರಿಣಾಮವಾಗಿ ಪ್ರಾದೇಶಿಕ ಭಾಷೆಗಳಾದ, ಇಂಗ್ಲೀಷ್, ಜರ್ಮನ್, ಇಟಾಲಿಯನ್, ಸ್ಪ್ಯಾನಿಷ್ ಮೊದಲಾದವುಗಳು ಅಭಿವೃದ್ಧಿಗೊಂಡವು. ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಶ್ರೇಷ್ಠ ಸಾಹಿತ್ಯವು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರವಾಯಿತು ಅಥವಾ ಬರೆಯಲ್ಪಟ್ಟಿತು. ಈ ಪ್ರಯತ್ನಗಳಿಂದಾಗಿ ಶಾಸ್ತ್ರೀಯ ಸಾಹಿತ್ಯ ಜನಪ್ರಿಯವಾಯಿತಲ್ಲದೆ ಪ್ರಾದೇಶಿಕ ಭಾಷೆಗಳು ಅಭಿವೃದ್ಧಿಗೊಂಡವು.

ಕೊಡುಗೆಗಳು:

ಸಾಹಿತ್ಯ

ಪುನರುಜ್ಜೀವನ ಚಳುವಳಿಯು ಸಾಹಿತ್ಯ ಕ್ಷೇತ್ರಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದೆ. ಮಾನವತಾವಾದ ಮತ್ತು ಶಾಸ್ತ್ರೀಯ ಶೈಲಿಗಳ ಅನುಸರಣೆ ಸಾಹಿತ್ಯದ ಪ್ರಮುಖ ಅಂಶವಾಗಿವೆ. ಇಟಲಿಯ ಬರಹಗಾರರು ಇಂಗ್ಲೀಷ್, ಸ್ಪಾನಿಷ್, ಡಚ್, ಫ್ರೆಂಚ್, ಮೊದಲಾದ ಬರಹಗಾರರಿಗೆ ಅಪಾರ ಸಾಹಿತ್ಯ ಸೃಷ್ಟಿಸಲು ಹೆಚ್ಚಿನ ಬೆಂಬಲ ಹಾಗೂ

ಪ್ರೋತ್ಸಾಹ ನೀಡಿದರು. ಪೆಟ್ರಾರ್ಕ್, ಡಾಂಟೆ ಹಾಗೂ ಬೊಕಾಷಿಯೋ ಪುನರುಜ್ಜೀವನ ಕಾಲದ ಆರಂಭಿಕ ಬರಹಗಾರರಾಗಿದ್ದಾರೆ. ಪೆಟ್ರಾರ್ಕ್‌ನು ಸುಮಾರು 200 ಲ್ಯಾಟಿನ್ ಮತ್ತು ಗ್ರೀಕ್ ಹಸ್ತ ಪ್ರತಿಗಳನ್ನು ಸಂಗ್ರಹಿಸಿದನು. ಇವನನ್ನು **'ಪುನರುಜ್ಜೀವನ ಚಳುವಳಿಯ ಉಷ: ತಾರೆ'** ಎಂದು ಕರೆಯಲಾಗಿದೆ.

ಪುನರುಜ್ಜೀವನ ಕಾಲದ ಪ್ರಮುಖ ಬರಹಗಾರರು ಹಾಗೂ ಅವರ ಪ್ರಮುಖ ಕೃತಿಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ	ಲೇಖಕ,	ರಾಷ್ಟ್ರ,	ಕೃತಿಗಳು
1	ಡಾಂಟೆ	ಇಟಲಿ	ಡಿವೈನ್ ಕಾಮಿಡಿ, ದಿ ಮೊನಾರ್ಕಿ
2	ಪೆಟ್ರಾರ್ಕ್	ಇಟಲಿ	ಲಾರಾ, ಆಫ್ರಿಕಾ
3	ಮೆಕಿಯಾವೆಲ್ಲಿ	ಇಟಲಿ	ದಿ ಪ್ರಿನ್ಸ್, ದಿ ಹಿಸ್ಟರಿ ಆಫ್ ಫ್ಲಾರೆನ್ಸ್
4	ಬೊಕಾಷಿಯೋ	ಇಟಲಿ	ದಿ ಟೇಲ್ಸ್ ಆಫ್ ಡೆಕಾಮೆರಾನ್ ಹಾಗೂ ಲೈಫ್ ಆಫ್ ಡಾಂಟೆ
5	ಸರ್ ಥಾಮಸ್ ಮೋರ್	ಇಂಗ್ಲೆಂಡ್	ಉಥೋಪಿಯಾ
6	ಎಡ್ಮಂಡ್ ಸ್ಪೆನ್ಸರ್	ಇಂಗ್ಲೆಂಡ್	–ಫೇರೀ ಕ್ವೀನ್
7	ಜಾನ್ ಮಿಲ್ಟನ್	ಇಂಗ್ಲೆಂಡ್	ಪ್ಯಾರಡೈಸ್ ಲಾಸ್ಟ್, ಪ್ಯಾರಡೈಸ್ ರಿಗೇನ್ಡ್.
8	ವಿಲಿಯಂ ಷೇಕ್‌ಸ್ಪಿಯರ್	ಇಂಗ್ಲೆಂಡ್	ಜ್ಯೂಲಿಯಸ್ ಸೀಜರ್, ಹ್ಯಾಮ್ಲೆಟ್, ರೋಮಿಯೋ ಮತ್ತು ಜೂಲಿಯಟ್, ಒಥೆಲೋ, ಮ್ಯಾಕ್‌ಬೆತ್, ಕಿಂಗ್‌ಲಿಯರ್, ಕಾಮಿಡಿ ಆಫ್ ಎರರ್ಸ್, ಆಸ್ ಯು ಲೈಕ್ ಇಟ್, ದಿ ಟೆಂಪೆಸ್ಟ್, ದಿ ಟ್ವೆಲ್ಫ್ತ್ ನೈಟ್, ದಿ ವಿಂಟರ್ಸ್ ಟೇಲ್, ಮೊದಲಾದವು.
9	ಮಿಗ್ಯುಯೆಲ್ ಸರ್ವಾಂಟ್ಸ್	ಸ್ಪೇನ್	ಡಾನ್ ಕಿಜೋಟ್,
10	ಡೆಸಿಡೇರಿಯಸ್ ಎರಾಸ್ಮಸ್	ಹಾಲೆಂಡ್	ಪ್ರೈಸ್ ಅಂಡ್ ಫಾಲಿ, ಫೆಮಿಲಿಯರ್ ಕೊಲೊಕ್ವೀಸ್
11	ಲಿಯೋನಾರ್ಡೋ ಬ್ರೂನಿ	ಫ್ರಾನ್ಸ್	ಇಟಾಲಿಯನ್ ಭಾಷೆಗೆ ಅರಿಸ್ಟಾಟಲ್, ಪ್ಲೇಟೋ ಸಾಕ್ರೆಟಿಸ್‌ರ ಕೃತಿಗಳ ಭಾಷಾಂತರ

ವಿಲಿಯಂಷೇಕ್‌ಸ್ಪಿಯರ್‌ನ ನಾಟಕಗಳು:

ಹಾಸ್ಯ ನಾಟಕಗಳು: ಆಲ್ ಈಸ್ ವೆಲ್ ದಟ್ ಎಂಡ್ಸ್ ವೆಲ್, ಆಸ್‌ಯು ಲೈಕ್ ಇಟ್, ದಿ ಕಾಮಿಡಿ ಆಫ್ ಎರರ್ಸ್, ಲವ್‌ಸ್ ಲೇಬರ್‌ಸ್ ಲಾಸ್ಟ್, ಮೆಶರ್ ಫಾರ್ ಮೆಶರ್, ದಿ ಮರ್ಚೆಂಟ್ ಆಫ್ ವೆನಿಸ್, ದಿ ಮೆರ್ರಿ ವೈವ್ಸ್ ಆಫ್ ವಿಂಡ್ಸರ್, ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್, ಪೆರಿಕ್ಲಿಸ್, ಪ್ರಿನ್ಸ್ ಆಫ್ ಟೈರ್, ದಿ ಟೆಂಪೆಸ್ಟ್, ಟ್ವೆಲ್ಫ್ತ್ ನೈಟ್, ದಿ ಟು ಜಂಟಲ್ ಮೆನ್ ಆಫ್ ವೆರೋನಾ, ದಿ ವಿಂಟರ್ಸ್ ಟೇಲ್,

ದುರಂತ ನಾಟಕಗಳು: ರೋಮಿಯೋ ಅಂಡ್ ಜ್ಯೂಲಿಯಟ್, ಜೂಲಿಯಸ್ ಸೀಜರ್, ಹ್ಯಾಮ್ಲೇಟ್, ಒಥೆಲೋ, ಕಿಂಗ್ ಲಿಯರ್, ಮ್ಯಾಕ್‌ಬೆತ್, ಆಂಟೋನಿ ಅಂಡ್ ಕ್ಲಿಯೋಪಾತ್ರ, ದಿ ಡೈರಿ ಆಫ್ ಯಂಗ್ ಗರ್ಲ್, ಆಂಟಿಗೋನ್, ಡೆತ್ ಆಫ್ ಸೇಲ್ಸ್ ಮ್ಯಾನ್, ದಿ ಬುಕ್ ಆಫ್ ಥೀಫ್.

ಕಲೆ ಮತ್ತು ವಾಸ್ತುಶಿಲ್ಪ:

ಪುನರುಜ್ಜೀವನ ಕಾಲದ ಕಲೆ ಮತ್ತು ವಾಸ್ತುಶಿಲ್ಪವು ಸರಳ ಹಾಗೂ ನೈಜತೆಯಿಂದ ಕೂಡಿತ್ತು. ಇದು ನವ್ಯ ಮತ್ತು ಸ್ವತಂತ್ರ ದೃಷ್ಟಿಕೋನವನ್ನು ಹೊಂದಿದೆ. ಅಲ್ಲದೆ ಇದು ಚರ್ಚ್ ಹಿಡಿತದಿಂದ ಹೊರಬಂದು ಜಾತ್ಯಾತೀತವಾಯಿತು. ವಿಶೇಷವಾಗಿ ಕಲೆಯು ಮಾನವನಿಗೆ ಹತ್ತಿರವಾಯಿತು. ಪುನರುಜ್ಜೀವನ ಕಾಲದಲ್ಲಿ 'ಗೋಥಿಕ್ ವಾಸ್ತುಶಿಲ್ಪ' ಪದ್ದತಿ ಬೆಳವಣಿಗೆಯಾಯಿತು. ಇದು ಗ್ರೀಕ್, ರೋಮನ್, ಡೋರಿಕ್, ಅಯೋನಿಕ್ ಮತ್ತು ಕೊರಿಂಥಿಯನ್ ಶೈಲಿಗಳ ಸಮ್ಮಿಶ್ರಣವಾಗಿತ್ತು. ಈ ಶೈಲಿಯು ಅಪಾರ ಪ್ರಮಾಣದ ಕಮಾನುಗಳು, ಗುಮ್ಮಟಗಳು, ಎತ್ತರವಾದ ಸ್ತಂಭಗಳು ಹಾಗೂ ಸುಂದರವಾದ ಅಲಂಕಾರಗಳನ್ನು ಒಳಗೊಂಡಿದೆ. ಈ ಕಾಲದ ವಾಸ್ತುಶಿಲ್ಪ ಕೃತಿಗಳು ಸಾಮಾನ್ಯವಾಗಿ ಕಲ್ಲಿನಿಂದ ನಿರ್ಮಾಣವಾಗಿವೆ. ಈ ಕಾಲದಲ್ಲಿ ದೊಡ್ಡ ಗಾತ್ರದ ಅರಮನೆಗಳು, ಚರ್ಚುಗಳು, ವಿಹಾರಗಳು ಮತ್ತು ಸಾರ್ವಜನಿಕ ಕಟ್ಟಡಗಳು ನಿರ್ಮಾಣವಾಗಿವೆ. ಆಲ್ಬರ್ಟಿ, ಮಾನೆಟ್ಟಿ, ಬ್ರೂಮ್‌ಲೆಶ್ಚಿ, ಬ್ರುಮಾಂಟೆ, ಮೈಕಲ್ ಏಂಜಲೋ ಮೊದಲಾದವರು ಈ ಕಾಲದ ಪ್ರಮುಖ ವಾಸ್ತುಶಿಲ್ಪಿಗಳಾಗಿದ್ದರು.

ಪುನರುಜ್ಜೀವನ ಕಾಲದಲ್ಲಿ ನಿರ್ಮಾಣವಾದ ಕೆಲವು ಪ್ರಮುಖ ವಾಸ್ತುಶಿಲ್ಪ ಹಾಗೂ ಕಲಾಕೃತಿಗಳು ಈ ಕೆಳಗಿನಂತಿವೆ.

1. ರೋಮ್ – ಮೆಡಿಸ್ಸಿ ಮತ್ತು ಫಾರ್ನೇಸ್ ಅರಮನೆಗಳು,
2. ಲಂಡನ್ – ಮೂರನೇ ಪೋಪ್ ಜೂಲಿಯಸ್‌ನ ಅರಮನೆ,
3. ಫ್ಲಾರೆನ್ಸ್ – ಪಿಟ್ಟಿ ಅರಮನೆ,
4. ಲಂಡನ್ – ಬ್ಯಾಂಕ್ವೆಟ್ ಹೌಸ್ (ವೈಟ್ ಹಾಲ್),
5. ಲಂಡನ್ – ಸೇಂಟ್ ಪಾಲ್‌ನ ಕೆಥಡ್ರಾಲ್,
6. ರೋಮ್ – ಸೇಂಟ್ ಪೀಟರ್‌ನ ಕೆಥಡ್ರಾಲ್,
7. ವೆನಿಸ್ – ಸೇಂಟ್ ಮಾರ್ಕ್‌ನ ಕೆಥಡ್ರಾಲ್,
8. ಸ್ಪೇನ್ – ಪಿಕೊಲೊಮಿನಿ ಅರಮನೆ,
9. ವೆನಿಸ್ – ಡೊಯಜ್ ಅರಮನೆ,
10. ವ್ಯಾಟಿಕ್‌ನ್ – ಸಿಸ್ಟನ್ ಚಾಪೆಲ್,

ರೋಮ್‌ನ ಸೆಂಟ್ ಪೀಂಟರ್ಸ್ ಚರ್ಚ್ ಪುನರುಜ್ಜೀವನ ವಾಸ್ತುಶಿಲ್ಪದ ಪ್ರಮುಖ ಉದಾಹರಣೆಯಾಗಿದೆ. ಇದರ ನೆಲಹಾಸು ಯೋಜನೆಯು ಲ್ಯಾಟಿನ್ ಕ್ರಾಸ್ ಆಕಾರ ಹೊಂದಿದೆ. ಇದು ಬೃಹತ್ ಹಾಗೂ ಭವ್ಯವಾದ ಗುಮ್ಮಟಗಳನ್ನು ಒಳಗೊಂಡಿದೆ. ಈ ಚರ್ಚ್ ಮೈಕೇಲ್ ಏಂಜಲೋನ ಯೋಜನೆಯ ಪ್ರಕಾರ ನಿರ್ಮಾಣವಾಗಿದೆ. ಈ ಕಟ್ಟಡದ ಒಳಾಂಗಣವು ವರ್ಣರಂಜಿತ ಅಮೃತಶಿಲೆ ಹಾಗೂ ನಯವಾದ ಗಾರೆಗಳಿಂದ ಅಲಂಕೃತಗೊಂಡಿದೆ. ಈ ಕಟ್ಟಡದ ಉದ್ದ 600 ಅಡಿಗಳು, ಅಗಲ 450 ಅಡಿಗಳು, ಇದರ ಬೃಹತ್ ಗುಮ್ಮಟದ ವ್ಯಾಸವು 137 ಅಡಿಗಳಾಗಿದ್ದು, ಇದು ನೆಲಮಟ್ಟದಿಂದ 450 ಅಡಿಗಳಷ್ಟು ಎತ್ತರದಲ್ಲಿದೆ.

ಶಿಲ್ಪಕಲೆ:

ಪುನರುಜ್ಜೀವನ ಕಾಲದಲ್ಲಿ ಶಿಲ್ಪಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಲೊರೆಂಜೋ ಗಿಲ್ಬರ್ಟಿ, ಡೊನಾಟೆಲ್ಲೊ, ಮೈಕೇಲ್ ಏಂಜಲೋ ಮತ್ತು ಆಲ್‌ಬ್ರೆಕ್ಟ್ ಡ್ಯೂರರ್ ಪುನರುಜ್ಜೀವನ ಕಾಲದ ಪ್ರಮುಖ ಶಿಲ್ಪಕಾರರಾಗಿದ್ದಾರೆ. ಈ ಕಾಲದಲ್ಲಿ ರಚನೆಯಾದ ಪ್ರಮುಖ ಶಿಲ್ಪಕಲಾ ಕೃತಿಗಳು ಈ ಕೆಳಗಿನಂತಿವೆ.

1. ಲೊರೆಂಜೋ ಗಿಲ್ಬರ್ಟಿ – ಫ್ಲಾರೆನ್ಸ್‌ನ ಬ್ಯಾಪ್ಟಿಸ್ಟ್ರಿ ಕಟ್ಟಡದ ಬಾಗಿಲುಗಳ ಕೆತ್ತನೆ,
2. ಡೊನಾಟೆಲ್ಲೋ – ಫ್ಲಾರೆನ್ಸ್‌ನ ಸೇಂಟ್ ಜಾರ್ಜ್‌ನ ಮೂರ್ತಿ, ವೆನಿಸ್‌ನ ಸೇಂಟ್ ಮಾರ್ಕ್‌ನ ಮೂರ್ತಿ,
3. ಮೈಕೇಲ್ ಏಂಜಲೋ – ಫ್ಲಾರೆನ್ಸ್‌ನ ಸಿಸ್ಟಿನ್ ಚಾಪೆಲ್‌ನ ಒಳಮೇಲ್ಛಾವಣಿ, ಡೇವಿಡ್, ಮೋಸಸ್, ಪೀಟಾ ಮತ್ತು ದಿ ಬೌಂಡೆಡ್ ಸ್ಲೇವ್‌ನ ಮೂರ್ತಿಗಳು, ರೋಮ್‌ನ ಸೆಂಟ್ ಪೀಟರ್ಸ್ ಚರ್ಚ್‌ನ ಗುಮ್ಮಟ,

4. ಆಲ್ಬರ್ಟ ಡ್ಯೂರರ್ – 'ದಿ ನೈಟ್ ಅಂಡ್ ಡೆತ್' ಮತ್ತು 'ಸೇಂಟ್ ಜೆರೋಮ್ ಇನ್ ಹಿಸ್ ಸ್ಟಡಿ' ಮೂರ್ತಿಗಳ ಕೆತ್ತನೆ,



ಚಿತ್ರಕಲೆ:

ಪುನರುಜ್ಜೀವನ ಕಾಲದ ಪ್ರಮುಖ ಭವ್ಯತೆ ಎಂದರೆ ಚಿತ್ರಕಲೆ. ಈ ಕಾಲದ ಚಿತ್ರಕಲೆಯು ದಪ್ಪನಾದ ಬಟ್ಟೆ, ಗಾಜು, ಮರ ಹಾಗೂ ಇನ್ನಿತರ ಸಾಮಗ್ರಿಗಳ ಮೇಲೆ ಮೂಡಿಬಂದಿದೆ. ಇಲ್ಲಿ ತೈಲವರ್ಣಗಳ ತಂತ್ರಜ್ಞಾನದ ಮೇಲೆ ಪ್ರಭುತ್ವ ಸ್ಥಾಪಿಸಲಾಯಿತು ಚಿತ್ರಗಳಲ್ಲಿ ಗಾಢವಾದ ಬಣ್ಣಗಳ ಬಳಕೆಗೆ ಟಿಟಿಯಾನ್ ಪ್ರಖ್ಯಾತಿಯಾಗಿದ್ದನು. ಪೋಪ್‌ರು, ರಾಜರು, ವರ್ತಕರು ಚಿತ್ರಕಲೆಗೆ ಹೆಚ್ಚು ಪ್ರೋತ್ಸಾಹ ನೀಡಿದರು. ಫ್ಲಾರೆನ್ಸ್ ಶಾಲೆಯು ಪ್ರಮುಖ ಚಿತ್ರಕಾರರಾದ ಲಿಯೋನಾರ್ಡೋ ಡಾ ವಿಂಚಿ, ಮೈಕಲ್ ಏಂಜಲೋ, ರಾಫೆಲ್ ಮೊದಲಾದವರನ್ನು ಚಿತ್ರಕಲಾ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದೆ. ಇವರು ತಮ್ಮ ಅಸಾಧಾರಣ ಬುದ್ಧಿಶಕ್ತಿಯಿಂದ ಚರ್ಚ್‌ನ ಕಠಿಣ ನಿಯಮಗಳ ನಿರ್ಬಂಧ ಅಥವಾ ನಿಯಂತ್ರಣಗಳಿಂದ ಚಿತ್ರಕಲೆಯನ್ನು ಮುಕ್ತಗೊಳಿಸಿ ಅಭಿವೃದ್ಧಿ ಪಡಿಸಿದರು. ಮಾನವೀಯ ಹಾಗೂ ಜಾತ್ಯಾತೀತ ದೃಷ್ಟಿಕೋನ ಹೊಂದಿದ್ದ ಇವರು ಹೆಚ್ಚು ಕಲಾತ್ಮಕ ಹಾಗೂ ಜೀವಂತ ಚಿತ್ರಗಳನ್ನು ರಚಿಸಿದರು. ಪುನರುಜ್ಜೀವನ ಕಾಲದ ಪ್ರಮುಖ ಚಿತ್ರಕಾರರು ಹಾಗೂ ಅವರ ಚಿತ್ರಕೃತಿಗಳನ್ನು ಈ ಕೆಳಗೆ ನೀಡಲಾಗಿದೆ.

ಚಿತ್ರಕಾರರು	ಚಿತ್ರಕೃತಿಗಳು
1. ಲಿಯೋನಾರ್ಡೋ ಡಾವಿಂಚಿ	– ದಿ ಲಾಸ್ಟ್ ಸಪ್ಪರ್, ದಿ ಮೊನಾಲಿಸಾ, ವರ್ಜಿನ್ ಆಫ್ ದಿ ರಾಕ್ಸ್, ದಿ ವರ್ಜಿನ್ ಅಂಡ್ ಚೈಲ್ಡ್, ಹೆಡ್ ಆಫ್ ಎ ವುಮೆನ್, ಮಡೊನ್ನಾ ಲಿಟ್ಟಾ ಇತ್ಯಾದಿ.
2. ಮೈಕೇಲ್ ಏಂಜಲೋ	– ದಿ ಲಾಸ್ಟ್ ಜಡ್ಜ್‌ಮೆಂಟ್, ದಿ ಕ್ರಿಯೇಷನ್ ಆಫ್ ಆಡಮ್, ಡೇ ಅಂಡ್ ನೈಟ್, ಡಾನ್ ಅಂಡ ಸನ್ ಸೆಟ್, ಇತ್ಯಾದಿ.
3. ಸ್ಯಾಂಜಿಯೋ ರಾಫೆಲ್	– ಸಿಸ್ಟಿನ್ ಮಡೋನ್ನಾ
4. ಟಿಟಿಯಾನ್	– ದಿ ಅಸುಮ್ಪ್ಷನ್ ಆಫ್ ದಿ ವರ್ಜಿನ್.

ಲಿಯೋನಾರ್ಡೋ – ಡ –ವಿಂಚಿಯ ಚಿತ್ರ ಕಲಾಕೃತಿಗಳು

ದಿ ಲಾಸ್ಟ್ ಸಪ್ಪರ್

ವರ್ಜಿನ್ ಆಫ್ ದಿ ರಾಕ್ಸ್

ದಿ ವರ್ಜಿನ್ ಅಂಡ್ ಚೈಲ್ಡ್

ಮೈಕೇಲ್ ಏಂಜಲೋನ ಚಿತ್ರ ಕಲಾಕೃತಿಗಳು

ದಿ ಕ್ರಿಯೇಷನ್ ಆಫ್ ಆಡಮ್

ದಿ ಲಾಸ್ಟ್ ಜಡ್ಜ್‌ಮೆಂಟ್

ಸ್ಯಾಂಜಿಯೋ ರಾಫೆಲ್

ಸಿಸ್ಟಿನ್ ಮಡೋನ್ನಾ

ವಿಜ್ಞಾನ:

ಪುನರುಜ್ಜೀವನವು ವೈಜ್ಞಾನಿಕ ಕ್ಷೇತ್ರಕ್ಕೆ ಮಹತ್ವಪೂರಿತ ಪ್ರೋತ್ಸಾಹ ನೀಡಿದೆ. ವಿಶೇಷವಾಗಿ ವಿಜ್ಞಾನದಲ್ಲಿ ಪರಿಶೀಲನೆ ಹಾಗೂ ಪ್ರಯೋಗಶೀಲ ತತ್ವಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಕಾಲದಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಅದರಲ್ಲೂ ಭೌತಶಾಸ್ತ್ರ, ಗಣಿತ, ಖಗೋಳಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ರಸಾಯನಶಾಸ್ತ್ರಗಳಲ್ಲಿ ಗಣನೀಯ ಪ್ರಗತಿಯುಂಟಾಯಿತು. 1500ರಲ್ಲಿ **ಜಾಕೊಟ್ ನ್ಯೂಫರ್** (ಸಿಡ್ಜರ್‌ಲ್ಯಾಂಡ್) ಎಂಬುವನು ಮಹಿಳೆಯೊಬ್ಬರಿಗೆ ಮೊದಲ ಬಾರಿಗೆ ಯಶಸ್ವಿ **'ಸಿಜೇರಿಯನ್ ಶಸ್ತ್ರಚಿಕಿತ್ಸೆ'** ನಡೆಸಿದನು. **ರೋಜರ್ ಬೇಕನ್** ಎಂಬುವನು ಮದ್ದಿನ ಪುಡಿಯ ಉಪಯೋಗ ಹಾಗೂ ಭೂತಗನ್ನಡಿಯನ್ನು ಅಭಿವೃದ್ಧಿಪಡಿಸಿದನು. **ಲಿಯೋನಾರ್ಡೋ ಡಾ ವಿಂಚಿಯು** 1480ರಲ್ಲಿ **'ಪ್ಯಾರಾಚೂಟ್'** ಕಂಡುಹಿಡಿದನು. **'ಹಾರುವ**

ಯಂತ್ರದ ನಕಾಶೆ'ಯನ್ನು ತಯಾರಿಸಿದನು. ಇದು ಮುಂದೆ ವಿಮಾನಗಳನ್ನು ಕಂಡುಹಿಡಿಯಲು ಸ್ಫೂರ್ತಿಯಾಯಿತು. **ನಿಕೋಲಾಸ್ ಕೊಪರ್‌ನಿಕಸ್** (ಪೋಲೆಂಡ್)ನು ಖಗೋಳಶಾಸ್ತ್ರದ ಅಧ್ಯಯನದಲ್ಲಿ ಅಪಾರ ಸಾಧನೆ ಮಾಡಿದ್ದಾನೆ. ಈತನು ಪ್ರತಿಪಾದಿಸಿದ **'ಸೌರಕೇಂದ್ರಿತ ಸಿದ್ಧಾಂತ'**ವು ಯೂರೋಪಿಯನ್ನರು ನಂಬಿದ್ದ **'ಭೂಕೇಂದ್ರಿತ ಸಿದ್ಧಾಂತ'ವ**ನ್ನು ವಿರೋಧಿಸಿತು. ಈತನು **"ಸೂರ್ಯನು ವಿಶ್ವದ ಕೇಂದ್ರಬಿಂದುವೆಂದೂ, ಭೂಮಿ ಹಾಗೂ ಇತರ ಗ್ರಹಗಳು ಸೂರ್ಯನ ಸುತ್ತ ಸುತ್ತುತ್ತವೆ"**. ಎಂದು ತಿಳಿಸಿದನು. **ಜಾನ್‌ಕೆಪ್ಲರ್** (ಜರ್ಮನಿ)ನು ಕೋಪರ್‌ನಿಕಸ್‌ನ ಸಿದ್ಧಾಂತವನ್ನು ಅಭಿವೃದ್ಧಿಪಡಿಸಿದನು. ಈತನು "ಭೂಮಿ ಸೇರಿದಂತೆ ಇತರೆ ಗ್ರಹಗಳು ಸೂರ್ಯನ ಸುತ್ತ ಅಂಡಾಕಾರದಲ್ಲಿ (Elliptical)ದಲ್ಲಿ ಸುತ್ತುತ್ತವೆಂದು, ಕೋಪರ್‌ನಿಕಸ್‌ನು ಪ್ರತಿಪಾದಿಸಿದಂತೆ ಇವು ದುಂಡಾಗಿ ಸುತ್ತುವುದಿಲ್ಲ"ವೆಂದು ಪ್ರತಿಪಾದಿಸಿದನು. ಜರ್ಮನಿಯ **ಹಾನ್ಸ್ ಲಿಪ್ಪರಿ** ಎಂಬುವನು 1608ರಲ್ಲಿ **'ದೂರದರ್ಶಕ ಯಂತ್ರ'**ವನ್ನು ಕಂಡು ಹಿಡಿದನು. ಇಟಲಿಯ **ಗೆಲಿಲಿಯೋ** ಎಂಬುವನು ದೂರದರ್ಶಕವನ್ನು ಅಭಿವೃದ್ಧಿಪಡಿಸಿ, ಇದರ ಮೂಲಕ ಚಂದ್ರನ ಮೇಲಿನ ಪರ್ವತಗಳು ಹಾಗೂ ಶನಿಗ್ರಹವನ್ನು ಸುತ್ತುವರಿದಿರುವ ಬಳೆಯನ್ನು ವೀಕ್ಷಿಸಿದನು. ಸೌರವ್ಯೂಹವನ್ನು ಅಧ್ಯಯನ ಮಾಡಿದ ಈತನು ಕೋಪರ್‌ನಿಕಸ್ ಸಿದ್ಧಾಂತವನ್ನು ವಿವರಿಸಿದನು. ದೂರದರ್ಶಕ ಯಂತ್ರದ ಮೂಲಕ ಪ್ರಪಂಚವು ನೈಸರ್ಗಿಕ ನಿಯಮಗಳ ನಿಯಂತ್ರಣಕ್ಕೆ ಒಳಪಟ್ಟಿದೆ ಎಂಬುದನ್ನು ದೃಢಪಡಿಸಿದನು. ಈತನು **'ಉಷ್ಣಮಾಪಕ' 'ವಾಯುಭಾರಮಾಪಕ'** ಹಾಗೂ **'ಗಡಿಯಾರದ ಲೋಲಕ'**(ಲಂಬಕ)ವನ್ನು ಕಂಡು ಹಿಡಿದನು. **ಸರ್ ಐಸಾಕ್ ನ್ಯೂಟನ್** (ಇಂಗ್ಲೆಂಡ್) ನು **'ಗುರುತ್ವಾಕರ್ಷಣ ನಿಯಮ'**ಗಳನ್ನು ಪ್ರತಿಪಾದಿಸಿದನು. ಈತನು ಸೌರವ್ಯೂಹದ ಗ್ರಹಗಳು ಸೂರ್ಯನ ಸುತ್ತ ಹಾಗೂ ಚಂದ್ರನು ಭೂಮಿಯ ಸುತ್ತ ಗುರುತ್ವಾಕರ್ಷಣ ಶಕ್ತಿಯ ಆಧಾರದ ಮೇಲೆ ನಿರ್ದಿಷ್ಟ ಪಥದಲ್ಲಿ ಚಲಿಸುತ್ತವೆ ಎಂದು ತಿಳಿಸಿದನು. **ವಿಲಿಯಂ ಹಾರ್ವೆ**(ಇಂಗ್ಲೆಂಡ್)ಯು **'ರಕ್ತದ ಪರಿಚಲನೆ'**ಯನ್ನು ವಿವರಿಸಿದನು. ಈತನು ರಕ್ತವು ಹೃದಯದಿಂದ ರಕ್ತನಾಳಗಳ ಮೂಲಕ ದೇಹದ ವಿವಿಧ ಅಂಗಗಳಿಗೆ ಹೇಗೆ ಹರಿದು ಬರುತ್ತದೆ ಹಾಗೂ ಹೇಗೆ ಪುನಃ ನರಗಳ ಮೂಲಕ ಹೃದಯ ತಲುಪುತ್ತದೆಂದು ತಿಳಿಸಿದನು. **ಜಾನ್ ಗುಟನ್ ಬರ್ಗ್**(ಜರ್ಮನಿ) ಎಂಬುವನು 1454 ಸಾ.ಶ. ರಲ್ಲಿ ಮೊದಲ ಬಾರಿಗೆ **'ಮುದ್ರಣ ಯಂತ್ರ'**ವನ್ನು ಕಂಡು ಹಿಡಿದನು,

ಪುನರುಜ್ಜೀವನ ಕಾಲದ ವಿಜ್ಞಾನಿಗಳು




ಗೆಲಿಲಿಯೋ **ನಿಕೋಲಾಸ್ ಕೊಪರ್‌ನಿಕಸ್** **ಸರ್ ಐಸಾಕ್ ನ್ಯೂಟನ್**

ಲಿಯೋನಾರ್ಡೋ–ಡ–ವಿಂಚಿ(1452–1519) : ಈತನು ಫ್ಲಾರೆನ್ಸ್‌ನ ಪ್ರಮುಖ ಚಿತ್ರಕಾರನಾಗಿದ್ದು, ಸಸ್ಯಶಾಸ್ತ್ರ, ಅಂಗಶೋಧನಾಶಾಸ್ತ್ರ ಹಾಗೂ ಗಣಿತ, ಕಲೆ ಮುಂತಾದ ಅನೇಕ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದನು. ಈತನು ಮೊನಾಲಿಸಾ ಹಾಗೂ ದಿ ಲಾಸ್ಟ್ ಸಪ್ಪರ್ ಎಂಬ ಚಿತ್ರಗಳನ್ನು ರಚಿಸಿದ್ದಾನೆ. ಈತನು ಆಕಾಶದಲ್ಲಿ ಹಾರುವ ಕನಸನ್ನು ಕಂಡಿದ್ದನು. ಬಹಳಷ್ಟು ವರ್ಷಗಳ ಕಾಲ ಈತನು ಪಕ್ಷಿಗಳ ಹಾರಾಟವನ್ನು ವೀಕ್ಷಿಸಿದನು. ಇದನ್ನು ವೀಕ್ಷಿಸಿದ ಈತನು ಹಾರಾಡುವ ಯಂತ್ರದ ರೂಪರೇಷೆಯನ್ನು ತಯಾರಿಸಿದನು. ಈತನು **'ಲಿಯೋನಾರ್ಡೋ–ಡ–ವಿಂಚಿ, ಪ್ರಯೋಗಗಳ ಶಿಷ್ಯ'** ಎಂದು ಸಹಿ ಮಾಡುತ್ತಿದ್ದನು. ಈತನು ಹಲವಾರು ಚಿತ್ರಕೃತಿಗಳನ್ನು ರಚಿಸಿದ್ದು, ಅವುಗಳಲ್ಲಿ ಮೊನಾಲಿಸಾ, ದಿ ಲಾಸ್ಟ್‌ಸಪ್ಪರ್, ವರ್ಜಿನ್ ಆಫ್ ದಿ ರಾಕ್ಸ್, ದಿ ಬ್ಯಾಟಲ್ ಆಫ್ ಅಂಘ್ಯೆರಿ, ಲೇಡಿ ವಿತ್ ಆನ್ ಎರ್ಮನ್, ದಿ ವರ್ಜಿನ್ ಅಂಡ್ ಚೈಲ್ಡ್, ಮಡೊನ್ನಾ ಲಿಟ್ಟಾ, ಅಡೋರೇಷನ್ ಆಫ್ ದಿ ಮಾಗಿ, ಹೆಡ್ ಆಫ್ ಎ ವುಮನ್, ಸೇಂಟ್ ಜಾನ್ ದಿ ಬ್ಯಾಪ್ಟಿಸ್ಟ್, ದಿ ಬೆನೋಯಾಸ್ ಮಡೋನ್ನಾ, ಸಾಲ್ವೆಟರ್ ಮುಂಡಿ ಪ್ರಮುಖವಾದವು.

ಮೊನಾಲಿಸಾ : ಇದು ಲಿಯೋನಾರ್ಡೋ ಡಾ ವಿಂಚಿಯ ಒಂದು ಪ್ರಮುಖ ಚಿತ್ರಕೃತಿ ಹಾಗೂ ಪ್ರಪಂಚದ ಪ್ರಮುಖ ಚಿತ್ರಕೃತಿಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ. ಡಾ ವಿಂಚಿಯು ಇದನ್ನು ರಚಿಸಲು 4 ವರ್ಷಗಳನ್ನು (1500–1504) ತೆಗೆದುಕೊಂಡನು. ಮೊನಲಿಸಾಳ ಭಾವಚಿತ್ರವನ್ನು ಫ್ರಾನ್ಸೆಸ್ಕೊ ಡೆಲ್ ಜಿಯೊಕೊಂಡೊನಿಗಾಗಿ ಚಿತ್ರಿಸಿದನು. ಮೊನಾಲಿಸಾ ಟಸ್ಕನಿ ಹಾಗೂ ಫ್ಲಾರೆನ್ಸ್‌ನ ಜಿರಾಂಡಿನಿ ಕುಟುಂಬದ ಸದಸ್ಯಳೂ ಹಾಗೂ ಫ್ಲಾರೆನ್ಸ್‌ನ ಶ್ರೀಮಂತ ರೇಷ್ಮೆ ವ್ಯಾಪಾರಿ ಫ್ರಾನ್ಸೆಸ್ಕೊ ಡೆಲ್ ಜಿಯೊಕೊಂಡೋನ ಪತ್ನಿಯಾಗಿದ್ದಳು. **'ಮೋನಾ'** ಎಂದರೆ ಇಂಗ್ಲೀಷ್‌ನಲ್ಲಿ **'ಮ್ಯಾಮ್, ಮೇಡಂ, ಅಥವಾ ಮೈ ಲೇಡಿ'** ಎಂದರ್ಥ. ಲಿಸಾ ಆಕೆಯ ಹೆಸರು. ಜಿಯೊಕೊಂಡೊ–ಲಿಸಾ ದಂಪತಿಗಳು ತಾವು ನಿರ್ಮಿಸಿದ್ದ ಹೊಸ ಮನೆಯಲ್ಲಿ ತಮ್ಮ ಎರಡನೇ ಮಗ ಆಂಡ್ರಿಯಾನ ಹುಟ್ಟುಹಬ್ಬ ಆಚರಣೆ ನೆನಪಿಗಾಗಿ ಡಾವಿಂಚಿ ಮೂಲಕ ಚಿತ್ರ ರಚಿಸಿದರು. ಇದು ಇಂದು ಪ್ಯಾರಿಸ್‌ನ ಲೌರೆ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಲ್ಪಟ್ಟಿದೆ.

ಪರಿಣಾಮಗಳು:

1. ಪುನರುಜ್ಜೀವನವು ಮಧ್ಯಯುಗದ ಅಂತ್ಯ ಹಾಗೂ ಆಧುನಿಕಯುಗದ ಉದಯಕ್ಕೆ ನಾಂದಿ ಹಾಡಿತು.
2. ಯೂರೋಪ್‌ನಲ್ಲುಂಟಾದ ಬೌದ್ಧಿಕ ಬೆಳವಣಿಗೆಯಿಂದಾಗಿ ರಾಜರು ಮತ್ತು ಜನತೆ ಚರ್ಚ್‌ನ ಬಿಗಿ ಹಿಡಿತದಿಂದ ಹೊರಬಂದು ಸ್ವತಂತ್ರರಾದರು.

3. ಪುನರುಜ್ಜೀವನವು ಮಾನವತಾವಾದದ ಉದಯಕ್ಕೆ ಅವಕಾಶ ಕಲ್ಪಿಸಿತು. ಆಧ್ಯಾತ್ಮಿಕ ಪ್ರಪಂಚದಿಂದ ಹೊರಬಂದ ಮಾನವ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದನು.
4. ಪುನರುಜ್ಜೀವನದಿಂದಾಗಿ ಲ್ಯಾಟಿನ್ ಭಾಷೆಯ ಮಹತ್ವ ಕಡಿಮೆಯಾಗಿ ದೇಶೀಯ ಸಾಹಿತ್ಯ ಪ್ರಾದೇಶಿಕ ಭಾಷೆಗಳಲ್ಲಿ ಸೃಷ್ಟಿಯಾಯಿತು.
5. ಪುನರುಜ್ಜೀವನದಿಂದಾಗಿ ಚರ್ಚ್‌ನ ಬಿಗಿ ಹಿಡಿತದಿಂದ ಹೊರಬಂದ ಕಲೆ ಮತ್ತು ವಾಸ್ತುಶಿಲ್ಪವು ಹೆಚ್ಚು ಪ್ರಗತಿ ಹೊಂದಿತು. ಜಾತ್ಯಾತೀತ ಹಾಗೂ ಮಾನವನಿಗೆ ಸಂಬಂಧಿಸಿದ ಕಲೆಯು ಅಪಾರ ಬೆಳವಣಿಗೆಯಾಯಿತು.
6. ಪುನರುಜ್ಜೀವನವು ಪ್ರಾಚೀನ ಗ್ರೀಕ್ ಮತ್ತು ರೋಮನ್ ಶಾಸ್ತ್ರೀಯ ಅಧ್ಯಯನಕ್ಕೆ ಹೆಚ್ಚು ಮಹತ್ವ ನೀಡಿತು. ವಿವಿಧ ಶಾಲೆ, ಕಾಲೇಜು, ವಿಶ್ವವಿದ್ಯಾನಿಲಯಗಳಲ್ಲಿ ಯೂರೋಪ್ ಜನರು ಪ್ರಾಚೀನ ಸಾಹಿತ್ಯವನ್ನು ಅಧ್ಯಯನ ಮಾಡಿದರು.
7. ಇದು ವೈಜ್ಞಾನಿಕ ಸಂಶೋಧನೆಗೆ ಪ್ರೋತ್ಸಾಹ ನೀಡಿ ಪ್ರಯೋಗಗಳು ಹಾಗೂ ಅನ್ವೇಷಣೆಗಳಿಗೆ ಕಾರಣವಾಯಿತು.
8. ಪುನರುಜ್ಜೀವನದ ಪ್ರಭಾವದಿಂದಾಗಿ ರಾಜಪ್ರಭುತ್ವಗಳು ಬಲಿಷ್ಠಗೊಂಡವು. ಇದು ವಿವಿಧ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಲು ಅವಕಾಶ ಕಲ್ಪಿಸಿತು.

7.3 ಧಾರ್ಮಿಕ ಸುಧಾರಣೆ

ಧಾರ್ಮಿಕ ಸುಧಾರಣಾ ಚಳುವಳಿ ಮಧ್ಯಯುಗದ ಅಂತ್ಯದಲ್ಲಿ ಪ್ರಾರಂಭವಾಗಿ 16ನೇ ಶತಮಾನದಲ್ಲಿ ಅಂತಿಮರೂಪ ಪಡೆಯಿತು. ಈ ಚಳುವಳಿ ಅಥವಾ ಕ್ರಾಂತಿಯು ಚರ್ಚ್‌ನ ವಿವಿಧ ಲೋಪದೋಷಗಳ ವಿರುದ್ಧ ಹಾಗೂ ಪಾದ್ರಿಗಳ ಆಕ್ಷೇಪಾರ್ಹ ಆಚರಣೆಗಳ ವಿರುದ್ಧ ಜರುಗಿತು. ಈ ಚಳುವಳಿಯ ಮುಖ್ಯ ಗುರಿ ಚರ್ಚ್‌ನ ಶ್ರೇಣೀಕೃತ ವ್ಯವಸ್ಥೆಯಲ್ಲಿ ಉನ್ನತಾಧಿಕಾರಿಯಾದ ಪೋಪ್ ಆಗಿದ್ದನು.

ಧಾರ್ಮಿಕ ಸುಧಾರಣೆಯು ಮೊದಲು ಜರ್ಮನಿಯಲ್ಲಿ ಪ್ರಾರಂಭವಾಗಿ ನಂತರ ಯೂರೋಪಿನ ಎಲ್ಲಾ ರಾಷ್ಟ್ರಗಳಲ್ಲಿ,ಅದರಲ್ಲೂ ಇಂಗ್ಲೆಂಡ್, ಫ್ರಾನ್ಸ್, ಸ್ವಿಜ್ಜರ್‌ಲ್ಯಾಂಡ್, ಮತ್ತು ಸ್ಕಾಟ್ಲೆಂಡ್‌ಗಳಲ್ಲಿ ಹರಡಿತು. ಯೂರೋಪಿನ ವಿವಿಧ ಭಾಗಗಳಲ್ಲಿ ಕ್ರಾಂತಿಕಾರಿಗಳ ಗುಂಪು ಪೋಪ್‌ನ ಪರಮಾಧಿಕಾರ ಹಾಗೂ ರೋಮನ್ ಕ್ಯಾಥೋಲಿಕ್ ಚರ್ಚ್‌ಗಳನ್ನು ಪ್ರಶ್ನಿಸಿದವು. ಇದು ವಿವಿಧ ರಾಷ್ಟ್ರಗಳಲ್ಲಿ ಪ್ರಾಟೆಸ್ಟೆಂಟ್ ಚರ್ಚ್‌ಗಳ ಉದಯಕ್ಕೆ ಅವಕಾಶ ಕಲ್ಪಿಸಿತು. ಇದು **'ಧಾರ್ಮಿಕ ಸುಧಾರಣೆ ಚಳುವಳಿ'** ಎಂದು ಕರೆಯಲ್ಪಟ್ಟಿದೆ. ಈ ಚಳುವಳಿಯ ನಾಯಕ ಮಾರ್ಟಿನ್ ಲೂಥರ್. ಈ ಚಳುವಳಿಯು ಯೂರೋಪ್ ಜನತೆಯನ್ನು ಮಧ್ಯಯುಗದಿಂದ ಆಧುನಿಕ ಯುಗಕ್ಕೆ ಸ್ಥಿತ್ಯಂತರಗೊಳಿಸಿತು.

ಕಾರಣಗಳು:

1. **ಧಾರ್ಮಿಕ ಕಾರಣಗಳು:** ರೋಮನ್ ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಅನೇಕ ದುರಾಚಾರಗಳು ನಡೆಯುತ್ತಿದ್ದವು. ಅವುಗಳಲ್ಲಿ ಚರ್ಚ್‌ನ ಪ್ರಮುಖ ಹುದ್ದೆಗಳನ್ನು ಹೆಚ್ಚಿನ ಹಣ ನೀಡಿದವರಿಗೆ ಮಾರುವುದು, ಒಬ್ಬ ವ್ಯಕ್ತಿ ಒಂದಕ್ಕಿಂತ *ಹೆಚ್ಚು ಹುದ್ದೆಗಳನ್ನು ಹೊಂದುವುದು ಮೊದಲಾದವು. ಪಾದ್ರಿಗಳೂ ಸಹ ರಹಸ್ಯ ಹಾಗೂ ಅನೈತಿಕ ಜೀವನವನ್ನು* ನಡೆಸುತ್ತಿದ್ದರು. ಪೋಪ್ ಹಾಗೂ ಪಾದ್ರಿಗಳು ವಿಲಾಸಿ ಜೀವನವನ್ನು ನಡೆಸುತ್ತಿದ್ದರು. ಯೇಸುಕ್ರಿಸ್ತನ ಸರಳತೆ ಮತ್ತು ಕ್ಷಮಾಗುಣ ಮೊದಲಾದ ತತ್ವಗಳನ್ನು ಚರ್ಚುಗಳು ಸಂಪೂರ್ಣವಾಗಿ ಮರೆತುಬಿಟ್ಟಿದ್ದವು. ಇಂತಹ ಅನೀತಿಗಳ ವಿರುದ್ಧದ ಕೋಪ ಧಾರ್ಮಿಕ ಸುಧಾರಣೆಗೆ ಪ್ರಮುಖ ಕಾರಣವಾಯಿತು.

2. **ಪುನರುಜ್ಜೀವನದ ಪ್ರಭಾವ:** ಪುನರುಜ್ಜೀವನವು ಪರೋಕ್ಷವಾಗಿ ಧಾರ್ಮಿಕ ಸುಧಾರಣೆ ಮೇಲೆ ಪ್ರಭಾವ ಬೀರಿದೆ. ಇದು ಜನರಲ್ಲಿ ವಿಮರ್ಶಾತ್ಮಕ ಪ್ರವೃತ್ತಿ, ವ್ಯಕ್ತಿವಾದ, ವಿಚಾರ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವಾದಗಳನ್ನು ಬೆಳೆಸಿತು. ಇದು ವಿಶಾಲವಾದ ಮನಸ್ಸು, ಆತ್ಮ ವಿಶ್ವಾಸ ಹಾಗೂ ಸ್ವಾವಲಂಬನೆಗಳನ್ನು ವೃದ್ಧಿಸಿತು. ಮಾನವತಾವಾದಿಗಳು ಚರ್ಚ್‌ನ ಭ್ರಷ್ಟಾಚಾರವನ್ನು ಖಂಡಿಸಿದರು. ಇವರು ತಮ್ಮ ಬರವಣಿಗೆಗಳ ಮೂಲಕ ಪಾದ್ರಿಗಳನ್ನು ಅಪಹಾಸ್ಯ ಮಾಡಿದರು. ಅದೇ ರೀತಿ ಚರ್ಚ್‌ನ ನಾಚಿಕೆಗೇಡಿನತನವನ್ನು ಬಹಿರಂಗಗೊಳಿಸಿದರು. 14ನೇ ಶತಮಾನದಲ್ಲಿ **'ಧಾರ್ಮಿಕ ಸುಧಾರಣೆಯ ಉಷಾ: ತಾರೆ'** ಎಂದು ಕರೆಯಲ್ಪಡುವ ಇಂಗ್ಲೆಂಡ್‌ನ **ಜಾನ್ ವೈಕ್ಲಿಫ್** ನು ಚರ್ಚಿನ ದುರಾಚಾರಗಳ ವಿರುದ್ಧ ಪ್ರತಿಭಟಿಸಿದ್ದಕ್ಕಾಗಿ ಅವನನ್ನು ನಾಸ್ತಿಕ ಎಂದು ಘೋಷಿಸಿ ಮರಣದಂಡನೆಗೊಳಪಡಿಸಲಾಯಿತು.

3. **ರಾಜಕೀಯ ಕಾರಣಗಳು** : 16ನೇ ಶತಮಾನದಲ್ಲಿ ಯೂರೋಪ್ ರಾಷ್ಟ್ರೀಯತೆಯ ಬೆಳವಣಿಗೆಗೆ ಸಾಕ್ಷಿಯಾಯಿತು. ನಿರಂಕುಶ ಪ್ರಭುತ್ವ ಹೆಚ್ಚಾಗಿತ್ತು. ಚರ್ಚ್‌ಗಳು ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದವು. ಅಲ್ಲದೆ ಜನರ ಮೇಲೆ ತೆರಿಗೆ ವಿಧಿಸುವ ಹಕ್ಕನ್ನು ಹೊಂದಿದ್ದವು. ಜೊತೆಗೆ ಪೋಪ್ ಯೂರೋಪ್‌ನ ಎಲ್ಲಾ ಚರ್ಚ್‌ಗಳ ಪದಾಧಿಕಾರಿಗಳನ್ನು ನೇಮಕ ಮಾಡುತ್ತಿದುದ್ದಲ್ಲದೆ, ನ್ಯಾಯಾಂಗ ಅಧಿಕಾರಗಳನ್ನು ಹೊಂದಿದ್ದನು. ಇದು ರಾಜರು ಹಾಗೂ ಜನತೆಗೆ ಇಷ್ಟವಾಗಲಿಲ್ಲ. ಆದ್ದರಿಂದ ರಾಜರುಗಳು ಚರ್ಚ್‌ಗಳ ಅಧಿಕಾರವು ಧಾರ್ಮಿಕ, ನೈತಿಕ ಹಾಗೂ ಆಧ್ಯಾತ್ಮಿಕ ವ್ಯವಹಾರಗಳಿಗೆ ಮಾತ್ರ ಸೀಮಿತವಾಗಿರಬೇಕೆಂದು ಭಾವಿಸಿದರು. ಪೋಪ್‌ನ ಅಧಿಕಾರಗಳನ್ನು ಹತ್ತಿಕ್ಕಲು ಪ್ರಯತ್ನಿಸಿದರು.

4. **ಆರ್ಥಿಕ ಕಾರಣಗಳು** : ರೋಮನ್ ಕ್ಯಾಥೋಲಿಕ್ ಚರ್ಚ್ ತುಂಬಾ ಶ್ರೀಮಂತವಾಗಿತ್ತು. ಇದು ಹೆಚ್ಚಿನ ಪ್ರಮಾಣದ ಭೂಮಿ, ಹಣ ಮತ್ತು ಇತರೆ ವೈಭವಯುತ ಕಟ್ಟಡಗಳು ಹಾಗೂ ವಸ್ತುಗಳನ್ನು ಹೊಂದಿತ್ತು. ಅಲ್ಲದೆ ಇವರು ತೆರಿಗೆ ಮತ್ತು ದಂಡಗಳನ್ನು ಕೊಡುವಂತೆ ಜನತೆಯನ್ನು ಹಿಂಸಿಸುತ್ತಿದ್ದರು. ಪೋಪ್ ಹಾಗೂ ಪಾದ್ರಿಗಳು ಅಧಿಕ ದುಂಧುಗಾರಿಕೆ ಹಾಗೂ ಭೋಗವಿಲಾಸ ಜೀವನವನ್ನು ನಡೆಸುತ್ತಿದ್ದರು. ಇವರು ಟಿತ್, ಪೀಟರ್‌ಪೆನ್ಸ್ ಮೊದಲಾದ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು. ಅಲ್ಲದೆ ಚರ್ಚ್‌ಗಳೂ ಕೂಡ ಅನೇಕ ಬಗೆಯ ದಂಡಗಳು ಹಾಗೂ ಶುಲ್ಕಗಳನ್ನು ಜನತೆಯ ಮೇಲೆ ವಿಧಿಸುತ್ತಿದ್ದವು. ಉದಾಹರಣೆಗೆ ಪೋಪ್‌ನು ಹೊಸ ಕಟ್ಟಡಗಳನ್ನು ನಿರ್ಮಿಸಲು ಅಥವಾ ಹಳೆಯ ಚರ್ಚ್‌ಗಳನ್ನು ದುರಸ್ತಿ ಮಾಡಲು ಇಷ್ಟಪಟ್ಟಾಗ ಹಣ ಸಂಗ್ರಹಿಸುವಂತೆ ತನ್ನ ಅಧೀನಾಧಿಕಾರಿಗಳಿಗೆ ಆದೇಶಿಸುತ್ತಿದ್ದನು. ಚರ್ಚ್‌ನ ಅಧಿಕ ಆರ್ಥಿಕ ಹೊರೆಯಿಂದಾಗಿ ರಾಜರುಗಳು ಮತ್ತು ಜನತೆ ಕುಗ್ಗಿಹೋಗಿದ್ದರು.

5. **ತಕ್ಷಣದ ಕಾರಣ– ಕ್ಷಮಾಪಣಾ ಪತ್ರಗಳ ಮಾರಾಟ** : ಪೋಪ್‌ನ ಹೆಸರಿನಲ್ಲಿ ತಪ್ಪು ಮಾಡಿದವರನ್ನು ಕ್ಷಮಿಸಲು ವಿತರಿಸಲಾಗುತ್ತಿದ್ದ ಪತ್ರಗಳನ್ನು ಕ್ಷಮಾಪಣಾ ಪತ್ರಗಳು ಎನ್ನುವರು. ಪಾಪಕಾರ್ಯಗಳು ಅಥವಾ ದುಷ್ಕೃತ್ಯಗಳನ್ನು ಮಾಡಿ ಸಿಕ್ಕಿಕೊಂಡ ಜನತೆಯು ತಮ್ಮನ್ನು ರಕ್ಷಿಸಿಕೊಳ್ಳಲು ಹಣ ನೀಡುವುದರ ಮೂಲಕ ಕ್ಷಮಾಪಣಾ ಪತ್ರಗಳನ್ನು ಖರೀದಿಸುತ್ತಿದ್ದರು. ಈ ಹಣವನ್ನು ಕಟ್ಟಡಗಳು, ಚರ್ಚ್‌ಗಳು ಹಾಗೂ ಕ್ಯಾಥಡ್ರಾಲ್‌ಗಳನ್ನು ನಿರ್ಮಿಸಲು ಬಳಸುತ್ತಿದ್ದರು. ಹೀಗೆ ಸಂಗ್ರಹಿಸಿದ ಹಣವನ್ನು ನಿಯಮಾನುಸಾರ ಲೆಕ್ಕ ಇಡುತ್ತಿರಲಿಲ್ಲ. ಈ ಪತ್ರಗಳನ್ನು ಮರಣಾನಂತರ ಸ್ವರ್ಗಕ್ಕೆ ಹೋಗುವ ರಹದಾರಿಗಳೆಂದು ಪಾದ್ರಿಗಳು ಪ್ರತಿಪಾದಿಸಿದರು. ಕ್ಷಮಾಪಣಾ ಪತ್ರಗಳನ್ನು ಖರೀದಿಸಿದ ಪಾಪಿಗಳು ಹಾಗೂ ಅಪರಾಧಿಗಳಿಗೆ ಶಿಕ್ಷೆಯಿಂದ ವಿನಾಯಿತಿ ಇದ್ದಿತು. ಇದರಿಂದ ಜನರು ತೀವ್ರವಾಗಿ ಆಕ್ರೋಶಿತರಾದರು.

ಜಾನ್ ವೈಕ್ಲೀಫ್ (1324–1384) ಈತನು ಧಾರ್ಮಿಕ ಸುಧಾರಣೆಯ ಆರಂಭದ ನಾಯಕನಾಗಿದ್ದನು. ಆಂಗ್ಲ ಪಾದ್ರಿಯಾದ ಈತನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಧರ್ಮಶಾಸ್ತ್ರ ಪ್ರಾಧ್ಯಾಪಕನಾಗಿದ್ದನು. ಚರ್ಚ್ ಅನ್ನು ಬಹಿರಂಗವಾಗಿ ಟೀಕಿಸಿದ ಈತನು ರಾಜ್ಯವು ಚರ್ಚ್‌ಗಿಂತ ಉನ್ನತವಾದುದು ಎಂದು ಹೇಳಿದನು. ವೈಕ್ಲಿಫ್‌ನು ಪೋಪ್‌ನು ಒತ್ತಾಯದಿಂದ ಸಂಗ್ರಹಿಸುತ್ತಿದ್ದ ದೇಣಿಗೆಗಳ ವಿರುದ್ಧ ಕರಪತ್ರಗಳನ್ನು ಬರೆದು ಹಂಚಿದನು. ಪೋಪ್‌ನು ಭೂಮಿ ಮೇಲಿನ ದೇವರ ಪ್ರತಿನಿಧಿ ಆಗಲು ಅನರ್ಹನೆಂದು ಘೋಷಿಸಿದನು. ಈತನು ಚರ್ಚ್‌ನ ದುರಾಚಾರಗಳು, ಸಂಪತ್ತಿನ ಕ್ರೋಢೀಕರಣ ಮತ್ತು ವೈಭವವನ್ನು ಖಂಡಿಸಿದನು. ಚರ್ಚ್‌ನ ವಿರುದ್ಧ ಪ್ರತಿಭಟಿಸಿದ ಪ್ರಮುಖ ನಾಯಕರಲ್ಲಿ ಜಾನ್ ವೈಕ್ಲಿಫ್ ಮೊದಲಿಗನಾದ್ದರಿಂದ, ಈತನನ್ನು **'ಧರ್ಮ ಸುಧಾರಣೆಯ ಉಷಾತಾರೆ'** ಎಂದು ಕರೆಯಲಾಗಿದೆ.

ಧಾರ್ಮಿಕ ಸುಧಾರಣೆಯ ಗತಿ:
ಮಾರ್ಟಿನ್ ಲೂಥರ್ (1483–1546) ಲೂಥರನ್ ವಾದ (ಪ್ರೊಟೆಸ್ಟೆಂಟ್ ಚಳುವಳಿ)

ಧಾರ್ಮಿಕ ಸುಧಾರಣಾ ಚಳುವಳಿಯ ನಾಯಕನಾದ ಮಾರ್ಟಿನ್ ಲೂಥರ್‌ನು 1483ರಲ್ಲಿ ಜರ್ಮನಿಯ ಐಲ್‌ಬೆನ್ ಎಂಬಲ್ಲಿ ಬಡರೈತ ಕುಟುಂಬದಲ್ಲಿ ಜನಿಸಿದನು. ಈತನು ಮಾನ್ಸ್‌ಫೀಲ್ಡ್ ಮತ್ತು ಮಾಗ್ಡೆಬರ್ಗ್‌ಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆದನು. ಏರ್‌ಫರ್ಟ್ ವಿಶ್ವವಿದ್ಯಾನಿಲಯದಿಂದ ಆಧ್ಯಾತ್ಮಿಕಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದನು. ಸೂಕ್ಷ್ಮ ಮನಸ್ಸಿನ ಯುವಕನಾಗಿದ್ದ ಮಾರ್ಟಿನ್‌ನು ಧಾರ್ಮಿಕ ಜೀವನಕ್ಕೆ ಪಾದಾರ್ಪಣೆ ಮಾಡಿ ಸಂತ ಅಗಸ್ಟಿನ್‌ನ ಮಠ ಸೇರಿ ಕ್ರೈಸ್ತ ಪಾದ್ರಿಯಾದನು. ಈತನು ಸಂತ ಅಗಸ್ಟಿನ್ ತತ್ವಗಳಿಂದ ಹೆಚ್ಚು ಪ್ರಭಾವಿತನಾಗಿದ್ದನು. ಜರ್ಮನಿಯ ವಿಟನ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಧರ್ಮಶಾಸ್ತ್ರದ ಪ್ರಾಧ್ಯಾಪಕನಾದನು. 1511ರಲ್ಲಿ ರೋಮ್‌ಗೆ ಭೇಟಿ ನೀಡಿದ ಈತನು ಅಲ್ಲಿನ ಪೋಪ್ ಮತ್ತು ಪಾದ್ರಿಗಳ ಭ್ರಷ್ಟತೆ ಮತ್ತು ಅನೀತಿಯುತ ಜೀವನವನ್ನು ಕಣ್ಣಾರೆ ಕಂಡು ದಿಗ್ಭ್ರಮೆಗೊಂಡನು. ಈ ಪಾಪದ ಕೆಲಸಗಳನ್ನು ಕಂಡು ನೊಂದನು.

ಪೋಪ್ ಹತ್ತನೇ ಲಿಯೋ ರೋಮ್‌ನ ಪ್ರಮುಖ ಸೆಂಟ್ ಪೀಟರ್ ಚರ್ಚ್‌ನ ಪುನರ್‌ನಿರ್ಮಾಣ ಮಾಡಲು ಹಣ ಸಂಗ್ರಹಿಸಲು ಮುಂದಾದನು. ಈ ಕಾರಣಕ್ಕಾಗಿ ಕ್ಷಮಾಪತ್ರಗಳ ಮಾರಾಟದಿಂದ ಸಂಗ್ರಹವಾದ ಹಣವನ್ನು ಬಳಸಲಾಗುವುದೆಂದು ತಿಳಿಸಿದನು. ಈ ಕ್ಷಮಾಪಣಾ ಪತ್ರಗಳು ಅಪ್ರಿಯಗೊಂಡು ಜನರಲ್ಲಿ ಆಕ್ರೋಶ ಉಂಟುಮಾಡಿದವು. 1517ರಲ್ಲಿ ಪೋಪ್‌ನ ಪ್ರತಿನಿಧಿ **ಜಾನ್ ಟೆಟ್ಜೆಲ್**‌ನು ಕ್ಷಮಾ ಪತ್ರಗಳನ್ನು ಮಾರಲು ಜರ್ಮನಿಗೆ ಬಂದನು. ಈತನು ಕ್ಷಮಾಪತ್ರಗಳನ್ನು ಬೇಜವಾಬ್ದಾರಿಯುತವಾಗಿ ಯಾರಿಗೆ ಬೇಕಾದರೂ ಮಾರಾಟ ಮಾಡಿದನು. ಇದನ್ನು ಕಂಡ ಲೂಥರ್‌ನು ಕ್ಷಮಾಪತ್ರಗಳ ಮಾರಾಟವನ್ನು ಖಂಡಿಸಿದನು ಈತನು **'ದಿ ಮ್ಯಾನಿಫೆಸ್ಟೋ ಆಫ್ ರಿಫಾರ್ಮೇಷನ್'** ಕೃತಿಯನ್ನು ರಚಿಸಿದನು. ಅಲ್ಲದೆ ಈತನು ತನ್ನ ಆಕ್ಷೇಪಣೆಗಳನ್ನು **'95 ನಿಬಂಧನೆ'**ಗಳ ರೂಪದಲ್ಲಿ ಸಿದ್ದಪಡಿಸಿ, ಅವುಗಳನ್ನು ವಿಟನ್‌ಬರ್ಗ್ ಚರ್ಚ್‌ನ ಬಾಗಿಲಿನ ಮೇಲೆ ಅಂಟಿಸಿ, ಇವುಗಳ ಬಗ್ಗೆ ಉತ್ತರ ನೀಡುವಂತೆ ಪೋಪ್ ಮತ್ತು ಪಾದ್ರಿಗಳಿಗೆ ಸವಾಲು ಹಾಕಿದನು. ಇದು ಸಾರ್ವಜನಿಕವಾಗಿ ಚರ್ಚೆಗೆ ಅವಕಾಶ ಕಲ್ಪಿಸಿತು. ಈತನು 95 ನಿಬಂಧನೆಗಳನ್ನು ಮುದ್ರಿಸಿ ಹಂಚುವುದರ ಮೂಲಕ ಕ್ಯಾಥೋಲಿಕ್ ಚರ್ಚ್‌ನ ತತ್ವಸಿದ್ಧಾಂತಗಳ ವಿರುದ್ಧ ಸಮರ ಸಾರಿದನು. ಲೂಥರ್ ತನ್ನದೇ ಆದ ಚರ್ಚ್‌ಗಳನ್ನು ಸ್ಥಾಪಿಸಲು ಮುಂದಾದನು. ಪೋಪ್ ಹತ್ತನೇ ಲಿಯೋ ಲೂಥರ್‌ನನ್ನು ನಾಸ್ತಿಕನೆಂದು ಘೋಷಿಸಿ, ಧರ್ಮ ಬಹಿಷ್ಕಾರ ಹಾಕಿದ್ದಲ್ಲದೇ ಕ್ಷಮೆಕೋರುವಂತೆ

ಆದೇಶಿಸಿದನು. ಇದಕ್ಕೆ ಪ್ರತಿಯಾಗಿ ಲೂಥರನು ಪೋಪನ ಆದೇಶದ ಪ್ರತಿಯನ್ನು ಸಾರ್ವಜನಿಕವಾಗಿ ಸುಟ್ಟು ಹಾಕಿದನು. ಇದರಿಂದ ಮತ್ತಷ್ಟು ಕೋಪಗೊಂಡ ಪೋಪ್ ಲೂಥರ್‌ನನ್ನು ಶಿಕ್ಷಿಸುವಂತೆ ಪವಿತ್ರ ರೋಮ್ ಸಾಮ್ರಾಜ್ಯದ ಚಕ್ರವರ್ತಿ ಐದನೇ ಚಾರ್ಲ್ಸ್‌ನಿಗೆ ತಿಳಿಸಿದನು. ಐದನೇ ಚಾರ್ಲ್ಸ್‌ನು ಲೂಥರ್‌ನಿಗೆ ಚರ್ಚ್ ವಿರುದ್ಧ ಮಾಡಿರುವ ಆಪಾದನೆಗಳನ್ನು ವಾಪಸ್ ಪಡೆಯುವಂತೆ ಸೂಚಿಸಿದನು. ಲೂಥರ್ ಇದಕ್ಕೆ ನಿರಾಕರಿಸಿದನು.

ಜೀವಭಯ ಹೊಂದಿದ್ದ ಲೂಥರ್‌ನು ಒಂದು ವರ್ಷಕಾಲ ಅಜ್ಞಾತ ಸ್ಥಳದಲ್ಲಿದ್ದು, ಈ ಅವಧಿಯಲ್ಲಿ ಬೈಬಲ್ ಅನ್ನು ಜರ್ಮನ್ ಭಾಷೆಗೆ ಭಾಷಾಂತರಿಸಿದನು. ಇದು ಹೆಚ್ಚು ಪ್ರಖ್ಯಾತಿಗೆ ಬಂದಿತು. ಲೂಥರ್‌ನ ಬೋಧನೆಗಳು ಕಾಳ್ಗಿಚ್ಚಿನಂತೆ ಜರ್ಮನಿಯ ಎಲ್ಲಾ ಕಡೆ ಹರಡಿದವು. ಜರ್ಮನಿಯ ರಾಜರು, ರೈತರು,ಕೆಲವು ಪಾದ್ರಿಗಳು ಹಾಗೂ ಇತರೆ ವರ್ಗದವರು ಚರ್ಚ್‌ನ ವಿರುದ್ಧ ಸಿಡಿದೆದ್ದು ಚರ್ಚ್‌ನ ಆಸ್ತಿಯನ್ನು ವಶಪಡಿಸಿಕೊಂಡು ಸಂಪ್ರದಾಯಬದ್ಧ ಆರಾಧನೆಯನ್ನು ನಿಷೇಧಿಸಿದರು.

ಮಾರ್ಟಿನ್ ಲೂಥರ್‌ನು ತನ್ನ ಅನುಯಾಯಿಗಳಿಗಾಗಿ ಹೊಸ ಚರ್ಚ್‌ಗಳನ್ನು ಸ್ಥಾಪಿಸಿದನು. ಈ ಚರ್ಚ್‌ಗಳನ್ನು **'ಲೂಥರನ್ ನ್ಯಾಷನಲ್ ಚರ್ಚ್'**ಗಳೆಂದು ಕರೆಯಲಾಗಿದೆ. ಇವು ಪೋಪ್‌ನ ನಾಯಕತ್ವವನ್ನು ತಿರಸ್ಕರಿಸಿದವು. ಪಾದ್ರಿಗಳ ಬ್ರಹ್ಮಚರ್ಯ ಆಚರಣೆಯನ್ನು ತೆಗೆದುಹಾಕಲಾಯಿತು. ಬ್ರಹ್ಮಚರ್ಯವನ್ನು ವಿರೋಧಿಸುವ ಸಲುವಾಗಿಯೇ ಲೂಥರ್‌ನು ಮಾಜಿ ಸನ್ಯಾಸಿನಿಯನ್ನು ವಿವಾಹವಾದನು. ಕ್ಷಮಾಪಣಾಪತ್ರಗಳು ಹಾಗೂ ಸಂತರ ಆರಾಧನೆಯನ್ನು ತಿರಸ್ಕರಿಸಲಾಯಿತು. ಬೈಬಲ್ ಗ್ರಂಥವು ಧರ್ಮದ ಪ್ರಮುಖ ಆಧಾರವಾಯಿತು.

ಲೂಥರನ್ ಸಿದ್ಧಾಂತದ ಏಳಿಗೆಯು ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ಗುಂಪುಗಳ ನಡುವೆ ಸಂಘರ್ಷಕ್ಕೆ ಕಾರಣವಾಯಿತು. ಈ ಎರಡು ಗುಂಪುಗಳ ರಾಷ್ಟ್ರಗಳ ನಡುವೆ ಧಾರ್ಮಿಕ ಯುದ್ಧಗಳು ಪ್ರಾರಂಭವಾದವು. ಈ ಹೋರಾಟಗಳು **'1555ರ ಆಗ್ಸ್‌ಬರ್ಗ್ ಶಾಂತಿ ಒಪ್ಪಂದ'**ದೊಂದಿಗೆ ಅಂತ್ಯವಾದವು. ಈ ಒಪ್ಪಂದದ ಪ್ರಕಾರ ಲೂಥರನ್ ಸಿದ್ಧಾಂತವು ಜರ್ಮನಿಯಲ್ಲಿ ಮಾನ್ಯ ಮಾಡಲ್ಪಟ್ಟಿತು. ರಾಜರುಗಳು ತಾವು ಇಷ್ಟಪಟ್ಟ ಪಂಥವನ್ನು ಆಯ್ಕೆ ಮಾಡಿಕೊಳ್ಳಲು ಸ್ವಾತಂತ್ರ್ಯ ಹೊಂದಿದರು.

ಲೂಥರನ್ ಸಿದ್ಧಾಂತವು ಯೂರೋಪಿನ ಅನೇಕ ರಾಷ್ಟ್ರಗಳಲ್ಲಿ ಪ್ರಸಾರವಾಯಿತು. ಸ್ವೀಡನ್, ಡೆನ್ಮಾರ್ಕ್ ಮತ್ತು ನಾರ್ವೆ ದೇಶದ ರಾಜರುಗಳು ರೋಮನ್ ಕ್ಯಾಥೋಲಿಕ್ ಪಂಥದ ವಿರೋಧಿಗಳಾಗಿದ್ದರು. ಇವರು ಪ್ರೊಟೆಸ್ಟೆಂಟ್ ಚರ್ಚ್‌ಗಳನ್ನು ಸ್ಥಾಪಿಸಲು ಮತ್ತು ಬಲಪಡಿಸಲು ಹಲವಾರು ಕ್ರಮಗಳನ್ನು ಕೈಗೊಂಡರು. ರೋಮನ್ ಕ್ಯಾಥೋಲಿಕ್ ಚರ್ಚುಗಳ ಸ್ಥಾನದಲ್ಲಿ ಪ್ರೊಟೆಸ್ಟೆಂಟ್ ಚರ್ಚುಗಳು ಅಸ್ತಿತ್ವಕ್ಕೆ ಬಂದವು. ಈ ರಾಷ್ಟ್ರಗಳು ರೋಮನ್ ಕ್ಯಾಥೋಲಿಕ ಚರ್ಚ್‌ಗಳು ಹಾಗೂ ಮಿಷನರಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡವು.

ಲೂಥರನ ಸಿದ್ಧಾಂತದಂತೆ ಕ್ಯಾಲ್ವಿನ್ ಸಿದ್ಧಾಂತ ಹಾಗೂ ಆಂಗ್ಲಿಕನ್ ಸಿದ್ಧಾಂತಗಳು ರೋಮನ್ ಕ್ಯಾಥೋಲಿಕ್ ಚರ್ಚ್ ವಿರುದ್ಧ ಸಿಡಿದೆದ್ದು ಸ್ವತಂತ್ರವಾದವು.

ಹುಲ್–ರೀಚ್–ಜ್ವಿಂಗ್ಲಿ (1484–1531): ಸ್ವಿಟ್ಜರ್‌ಲ್ಯಾಂಡ್‌ನ ಪ್ರೋಟೆಸ್ಟೆಂಟ್ ಚಳುವಳಿಯ ನಾಯಕನಾದ ಈತನು ಲೂಥರ್‌ನ ತತ್ವಗಳಿಂದ ಪ್ರಭಾವಿತನಾಗಿದ್ದನು. ಈತನು ಮೂಲ ಚಿಂತಕನಾಗಿದ್ದು, ಇವನು ಬೈಬಲ್ ಅನ್ನು ಮೂಲ ಗ್ರೀಕ್ ಮತ್ತು ಹಿಬ್ರೂ ಭಾಷೆಯಲ್ಲಿ ಅಧ್ಯಯನ ಮಾಡಿದ್ದನು. ಇವನು ಕ್ಯಾಥೋಲಿಕ್ ಚರ್ಚ್‌ನ ನ್ಯೂನತೆಗಳನ್ನು ಬಹಿರಂಗಪಡಿಸಿದನು. ಜ್ವಿಂಗ್ಲಿಯು ಸ್ವಿಜ್ಜರ್‌ಲ್ಯಾಂಡ್‌ನಲ್ಲಿ ಅಪಾರ ಸಂಖ್ಯೆಯ ಅನುಯಾಯಿಗಳನ್ನು ಹೊಂದಿದ್ದನು. ಈತನು ಚರ್ಚ್ ಸಂಪೂರ್ಣವಾಗಿ ರಾಜ್ಯದಲ್ಲಿ ಸ್ವತಂತ್ರವಾಗಿರಬೇಕೆಂದು ಬಯಸಿದನು. ಸ್ವಿಸ್‌ನಾಡಿನಲ್ಲಿ ಧಾರ್ಮಿಕ ಸುಧಾರಣೆಯ ತತ್ವಾದರ್ಶಗಳನ್ನು ಪ್ರಚಾರ ಮಾಡಿದನು. ಈತನು ಕ್ಯಾಥೋಲಿಕ್ ಪಂಗಡದೊಂದಿಗಿನ ಯುದ್ಧದಲ್ಲಿ 1531ರಲ್ಲಿ ಕೊಲೆಯಾದನು.



ಜಾನ್ ಕ್ಯಾಲ್ವಿನ್ (1509–1564):ಮತ್ತು ಕ್ಯಾಲ್ವಿನ್‌ವಾದ: ಮಾರ್ಟಿನ್ ಲೂಥರ್ ಮತ್ತು ಎರಾಸ್ಮಸ್ ತತ್ವಗಳಿಂದ ಪ್ರಭಾವಿತನಾದ ಇವನು ವೃತ್ತಿಯಲ್ಲಿ ವಕೀಲನಾಗಿದ್ದನು. ಫ್ರಾನ್ಸ್ ದೇಶದವನಾಗಿದ್ದರೂ ಸ್ವಿಟ್ಜರ್‌ಲ್ಯಾಂಡ್‌ನ ಜಿನೇವಾದಲ್ಲಿ ನೆಲೆಸಿದನು. ಈತನು ಪ್ರೊಟೆಸ್ಟಂಟರ ಧಾರ್ಮಿಕ ಭಾವನೆಗಳನ್ನು ತನ್ನ ಕೃತಿ **'ದಿ ಇನ್‌ಸ್ಟಿಟ್ಯೂಟ್ಸ್ ಆಫ್ ಕ್ರಿಶ್ಚಿಯನ್ ರಿಲಿಜಿಯನ್'** ನಲ್ಲಿ ವಿವರಿಸಿದ್ದಾನೆ. ಅಲ್ಲದೆ ತನ್ನ ಕೃತಿಯಲ್ಲಿ ರೋಮನ್ ಕ್ಯಾಥೋಲಿಕ್ ಚರ್ಚ್‌ನ ನೀತಿಗಳನ್ನು ಖಂಡಿಸಿದ್ದಾನೆ. ಈತನ ಸಿದ್ಧಾಂತವನ್ನು **'ಕ್ಯಾಲ್ವಿನ್ ಸಿದ್ಧಾಂತ'** ಎಂದು ಕರೆಯಲಾಗಿದೆ. ಇದು ಸ್ವಿಟ್ಜರ್‌ಲ್ಯಾಂಡ್‌ನಿಂದ ಪ್ರಾರಂಭವಾಗಿ ಇತರ ಎಲ್ಲ ಯೂರೋಪಿಯನ್ ರಾಷ್ಟ್ರಗಳಲ್ಲಿ ಅದರಲ್ಲೂ ಫ್ರಾನ್ಸ್, ನೆದರ್‌ಲ್ಯಾಂಡ್, ಜರ್ಮನಿ, ಹಂಗೇರಿ, ಪೋಲೆಂಡ್, ಇಂಗ್ಲೆಂಡ್, ಸ್ಕಾಟ್ಲೆಂಟ್‌ಗಳಲ್ಲಿ ಹೆಚ್ಚಾಗಿ ಪ್ರಸಾರವಾಯಿತು. ಈತನು ಕಲಿಕೆಯಲ್ಲಿ ಕಲೆ ಮತ್ತು ವಿಜ್ಞಾನ ವಿಷಯಗಳೆರಡನ್ನು ಅಧ್ಯಯನ ಮಾಡಲು ಪ್ರೋತ್ಸಾಹಿಸಿದನು.

ಎಂಟನೇ ಹೆನ್ರಿ (1491–1547)ಮತ್ತು ಆಂಗ್ಲಿಕನ್ ಸಿದ್ಧಾಂತ: ಇಂಗ್ಲೆಂಡ್‌ನಲ್ಲಿ ಆಂಗ್ಲಿಕನ್ ಸಿದ್ಧಾಂತವನ್ನು ಪ್ರಚಾರ ಮಾಡಿದ ದೊರೆ ಎಂಟನೇ ಹೆನ್ರಿಯು ಲೂಥರ್‌ನಂತೆ ಮೂಲತಃ ಧಾರ್ಮಿಕ ಸುಧಾರಕನಾಗಿರಲಿಲ್ಲ. ಪ್ರಾರಂಭದಲ್ಲಿ ರೋಮನ್ ಕ್ಯಾಥೋಲಿಕ್ ಪರವಾಗಿದ್ದ ಈತನು ಪೋಪನ ವಿರುದ್ಧ ಲೂಥರನು ತಿರುಗಿ ಬಿದ್ದಾಗ ಕ್ಯಾಥೋಲಿಕ್ ವಿರೋಧಿ ನಿಲುವು ತಳೆದನು. ಕ್ಯಾಥೋಲಿಕ್ ಚರ್ಚ್‌ನ ವಿರುದ್ಧ ಈತನು ಕೆಲವು ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಂಡನು. ಕ್ಯಾಥೋಲಿಕ್ ಕ್ರೈಸ್ತ ಮಿಷನರಿಗಳನ್ನು ಮುಚ್ಚಿದ ಈತನು ಅವುಗಳ ಅಪಾರ ಪ್ರಮಾಣದ ಆಸ್ತಿ, ಸಂಪತ್ತು ಹಾಗೂ ಹಣವನ್ನು ಮುಟ್ಟುಗೋಲು ಹಾಕಿಕೊಂಡನು. ಹೆನ್ರಿಯು ಇಂಗ್ಲೆಂಡ್‌ನಲ್ಲಿ **'ಆಂಗ್ಲಿಕನ್ ಚರ್ಚ್'** ಗಳನ್ನು ಸ್ಥಾಪಿಸಿದ್ದಲ್ಲದೇ ಚರ್ಚ್ ಮತ್ತು ರಾಜ್ಯಗಳೆರಡರ ಮುಖ್ಯಸ್ಥನಾಗಿ ರೂಪುಗೊಂಡನು.

ಪ್ರತಿ ಸುಧಾರಣೆ: (Counter Reformation)

16ನೇ ಶತಮಾನದಲ್ಲುಂಟಾದ ಧಾರ್ಮಿಕ ಕ್ರಾಂತಿಯಿಂದಾಗಿ ಲೂಥರನ್, ಕ್ಯಾಲ್ವಿನ್ ಹಾಗೂ ಆಂಗ್ಲಿಕನ್ ಸಿದ್ಧಾಂತಗಳು ಎಂಬ ಹಲವಾರು ಸೈದ್ಧಾಂತಿಕ ಗುಂಪುಗಳು ಏಳಿಗೆಗೆ ಬಂದವು. ಪ್ರೊಟೆಸ್ಟಂಟ್ ಸಿದ್ಧಾಂತವು ಕ್ಷಿಪ್ರಗತಿಯಲ್ಲಿ ಯೂರೋಪಿನಾದ್ಯಂತ ಪ್ರಚಾರವಾದುದು ಕ್ಯಾಥೋಲಿಕರನ್ನು ಜಾಗೃತಗೊಳಿಸಿತು. ಪ್ರೊಟೆಸ್ಟಂಟ್‌ರಿಂದ ಮತ್ತಷ್ಟು ಆಘಾತಗಳು ನಡೆಯುವುದನ್ನು ಬಹುಬೇಗ ತಡೆಗಟ್ಟಲು ಕ್ಯಾಥೋಲಿಕ್ ಚರ್ಚ್‌ಗಳು ಮುಂದಾದವು. ಇವು ತಮ್ಮೊಳಗೇ ಸುಧಾರಣೆ ಮಾಡಿಕೊಳ್ಳಲು ಕಾರ್ಯಪ್ರವೃತ್ತವಾದವು. ಇದನ್ನು**'ಪ್ರತಿ ಧಾರ್ಮಿಕ ಸುಧಾರಣೆ'** ಎನ್ನಲಾಗಿದೆ. ಪೋಪ್‌ನ ದೃಷ್ಟಿಕೋನದಲ್ಲಿ ಸಾಕಷ್ಟು ಬದಲಾವಣೆಗಳಾದವು. ಪ್ರೊಟೆಸ್ಟಂಟ್ ಸಿದ್ಧಾಂತದ ಪ್ರಸಾರವನ್ನು ತಡೆಗಟ್ಟಲು ಕೆಲವು ದಿಟ್ಟ ಕ್ರಮಕೈಗೊಂಡರು. ಪ್ರೊಟೆಸ್ಟಂಟ್ ಪ್ರಭಾವ ಹೆಚ್ಚಾಗಿರುವ ರಾಷ್ಟ್ರಗಳಲ್ಲಿ ಪುನ: ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ರೋಮನ್ ಕ್ಯಾಥೋಲಿಕ್ ಚರ್ಚ್‌ಗಳು ಹೆಚ್ಚು ಶ್ರಮಿಸಿದವು.

ಪ್ರತಿಧಾರ್ಮಿಕ ಸುಧಾರಣೆಯು ನಾಲ್ಕು ಪ್ರಮುಖ ಉದ್ದೇಶಗಳನ್ನು ಹೊಂದಿತ್ತು. ಅವುಗಳೆಂದರೆ ಶಿಕ್ಷಿಸುವುದು, ಸುಧಾರಿಸುವುದು, ಮತಾಂತರಿಸುವುದು ಹಾಗೂ ಸಾಮಾಜಿಕ ಸೇವೆ ಕೈಗೊಳ್ಳುವುದು. ವಿಚಾರಣಾ ನ್ಯಾಯಾಲಯಗಳು ಶಿಕ್ಷಿಸುವ, ಕೌನ್ಸಿಲ್ ಆಫ್ ಟ್ರೆಂಟ್ ಸುಧಾರಿಸುವ, ಸೊಸೈಟಿ ಆಫ್ ಜೀಸಸ್ ದೇವರ ಮತ್ತು ಸಾಮಾಜಿಕ ಸೇವೆ ಮಾಡುವಲ್ಲಿ ಮುಂದಾದವು.

ಧಾರ್ಮಿಕ ವಿಚಾರಣಾ ನ್ಯಾಯಾಲಯಗಳು: (Inquisition)

ಕ್ಯಾಥೋಲಿಕ್ ಧರ್ಮನಿಂದನೆ, ದೈವನಿಂದನೆ ಮಾಡಿದವರನ್ನು, ತಪ್ಪು ಮಾಡಿದವರನ್ನು ಶಿಕ್ಷಿಸಲು ಇನ್‌ಕ್ವಿಝಿಷನ್ ಎಂಬ ಧಾರ್ಮಿಕ ವಿಚಾರಣಾ ನ್ಯಾಯಾಲಯಗಳನ್ನು ರೋಮನ್ ಕ್ಯಾಥೋಲಿಕ್‌ರು ಸ್ಥಾಪಿಸಿದರು. ತಪ್ಪಿತಸ್ಥರಿಗೆ ಧರ್ಮಬಹಿಷ್ಕಾರ ಹಾಕುವುದು, ಬಂಧಿಸುವುದು, ಹಿಂಸಿಸುವುದು ಹಾಗೂ ಜೀವಂತ ಸುಡುವುದು ಇದರ ಕೆಲಸವಾಗಿತ್ತು. ಇದು ಚರ್ಚ್‌ನ ಅಧಿಕಾರಿಗಳು ಕಠಿಣ ನೀತಿ ಸಂಹಿತೆಗಳನ್ನು ಅನುಸರಿಸುವಂತೆ ಆದೇಶಿಸಿತು. ಈ ನ್ಯಾಯಾಲಯಗಳು ಮೊದಲು ಸ್ಪೇನ್‌ನಲ್ಲಿ ಸ್ಥಾಪನೆಯಾದವು.

ಟ್ರೆಂಟ್ ಕೌನ್ಸಿಲ್(1545–1563):

1545ರಲ್ಲಿ ಟ್ರೆಂಟ್‌ನಲ್ಲಿ ಸಭೆಸೇರಿದ ಧರ್ಮಗುರುಗಳು ಚರ್ಚ್‌ನಲ್ಲಿದ್ದ ಎಲ್ಲಾ ದುರಾಚಾರಗಳನ್ನು ಹೋಗಲಾಡಿಸಲು, ಚರ್ಚ್‌ನಲ್ಲಿ ಸುಧಾರಣೆ ತರಲು ತೀರ್ಮಾನಿಸಿದರು. ಈ ಸಭೆಯು ಕ್ಷಮಾಪಣಾ ಪತ್ರಗಳ ಮಾರಾಟವನ್ನು ನಿಷೇಧಿಸಿತು. ಬಿಷಪ್‌ಗಳು ಹಾಗೂ ಇತರೆ ಧರ್ಮಾಧಿಕಾರಿಗಳಿಗಾಗಿ ಕಠಿಣ ಶಿಸ್ತುಬದ್ಧ ಕಾನೂನುಗಳನ್ನು ಜಾರಿಗೆ ತಂದಿತು. ಚರ್ಚ್‌ನ ಸೇವಾಪುಸ್ತಕವನ್ನು ಪರಿಷ್ಕರಿಸಿದರು. ಕ್ಯಾಥೋಲಿಕರು ಧರ್ಮವಿರೋಧಿ **ಕೃತಿಗಳ ಪಟ್ಟಿ (Index)** ಮಾಡಿ ಅವುಗಳನ್ನು ಓದದಂತೆ ನಿಷೇಧಿಸಿದರು.

ಜೀಸಸ್ ಸೊಸೈಟಿ:

ಪ್ರತಿ ಧಾರ್ಮಿಕ ಸುಧಾರಣಾ ಚಳುವಳಿಯು ಈ ಸೊಸೈಟಿಯಿಂದಾಗಿ ಬಲಿಷ್ಠಗೊಂಡಿತು. ಇದನ್ನು ಇಗ್ನೇಷಿಯಸ್ ಲಯೋಲ (1491–1556) 1534ರಲ್ಲಿ ಸ್ಥಾಪಿಸಿದನು. ಈತನು ದೇವರು ಮತ್ತು ಧರ್ಮಸೇವೆ ಮಾಡುವ ನಿಸ್ವಾರ್ಥ, ವಿದ್ಯಾವಂತ ಹಾಗೂ ಶಿಸ್ತು ಹೊಂದಿರುವ ಪಾದ್ರಿಗಳನ್ನು ಸಂಘಟಿಸಿದನು. ಇವರನ್ನು **'ಜೆಸೂಟ್ಸ್'** ಎಂದು ಕರೆಯಲಾಗಿದೆ. ಲಯೋಲನು **'ದಿ ಸ್ಪಿರಿಚ್ಯುಲ್ ಎಕ್ಸ್‌ರ್‌ಸೈಸಸ್'**(ಆಧ್ಯಾತ್ಮಿಕ ಆಚರಣೆಗಳು) ಎಂಬ ಕೃತಿಯನ್ನು ಬರೆದನು. ಇದು ರೋಮನ್ ಕ್ಯಾಥೋಲಿಕರ ಮೇಲೆ ಅಗಾಧವಾದ ಪರಿಣಾಮ ಬೀರಿತು. ಜೆಸೂಟ್‌ಗಳ ಪ್ರಮುಖ ಉದ್ದೇಶ ಚರ್ಚ್‌ಗಳು ಕಳೆದುಕೊಂಡಿದ್ದ ವೈಭವ ಮತ್ತು ಅಧಿಕಾರಗಳನ್ನು ಪುನರ್ ಸ್ಥಾಪಿಸುವುದಾಗಿತ್ತು. ಇವರು ಸರಳತೆ, ಪರಿಶುದ್ಧತೆ, ವಿಧೇಯತೆ, ಸೇವೆ ಹಾಗೂ ಕ್ಯಾಥೋಲಿಕ್ ಧರ್ಮ ಪ್ರಸಾರಕ್ಕಾಗಿ ಕ್ರಮ ಕೈಗೊಂಡರು. ಜೀಸಸ್ ಸೊಸೈಟಿಯು ಯೂರೋಪ್, ಭಾರತ, ಚೀನಾ, ಬ್ರೆಜಿಲ್ ಮೊದಲಾದ ರಾಷ್ಟ್ರಗಳಲ್ಲಿ ಹಲವಾರು ಶಾಲಾ ಕಾಲೇಜುಗಳನ್ನು ಸ್ಥಾಪಿಸಿತು. ಇದರ ಪರಿಶ್ರಮದಿಂದಾಗಿ ಪ್ರೊಟೆಸ್ಟಂಟ್‌ರ ಏಳಿಗೆಯನ್ನು ತಡೆಗಟ್ಟಲಾಯಿತು ಹಾಗೂ ಸಹಸ್ರಾರು ಪ್ರೊಟೆಸ್ಟಂಟರು ರೋಮನ್ ಕ್ಯಾಥೋಲಿಕ್ ಪಂಥಕ್ಕೆ ವಾಪಸ್ಸಾಗಲು ಮನವೊಲಿಸಿದರು. ಅಲ್ಲದೆ ಇವರು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಕ್ಯಾಥೋಲಿಕ್ ಧರ್ಮ ಪ್ರಸಾರ ಮಾಡುವಲ್ಲಿ ಯಶಸ್ವಿಯಾದರು.

ಪರಿಣಾಮಗಳು

1. ಧಾರ್ಮಿಕ ಸುಧಾರಣೆಯು ಪ್ರತಿಯೊಬ್ಬನನ್ನೂ ಮೂಢನಂಬಿಕೆಗಳಿಂದ ಮುಕ್ತಗೊಳಿಸಿತಲ್ಲದೆ ಆತನಿಗೆ ಬೌದ್ಧಿಕ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟಿತು.

2. ಚಳುವಳಿಯು ಕ್ರೈಸ್ತಧರ್ಮದ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ್ ಪಂಥಗಳನ್ನು ಪುನ:ಶ್ಚೇತನಗೊಳಿಸಿತು, ಅಲ್ಲದೆ ಇದು ಕ್ರೈಸ್ತಧರ್ಮದ ತತ್ವಗಳ ಬಗ್ಗೆ ಇದ್ದ ಅನುಮಾನಗಳನ್ನು ಸ್ಪಷ್ಟಪಡಿಸಿತು. ಯೇಸುವಿನ ಬೋಧನೆಗಳು ಹಾಗೂ ಬೈಬಲ್ ತತ್ವಗಳು ಮತ್ತೊಮ್ಮೆ ಪ್ರಾಮುಖ್ಯತೆ ಗಳಿಸಿದವು.

3. ಚಳುವಳಿಯಿಂದಾಗಿ ಕ್ರೈಸ್ತಧರ್ಮದಲ್ಲಿ ಒಡಕು ಉಂಟಾಗಿ ಎರಡು ಪಂಗಡಗಳು ಉದಯಿಸಿದವು. ಅವುಗಳೆಂದರೆ ಕ್ಯಾಥೋಲಿಕರು ಹಾಗೂ ಪ್ರೊಟೆಸ್ಟೆಂಟರು. ಅಲ್ಲದೆ ಕೆಲವು ಸಮಯದ ನಂತರ ಈ ಪಂಥಗಳಲ್ಲಿ ಹಲವಾರು ಉಪ ಪಂಥಗಳು ಏಳಿಗೆಗೆ ಬಂದವು.

4. ಚಳುವಳಿಯಿಂದಾಗಿ ಪೋಪ್ ಮತ್ತು ಚರ್ಚ್‌ನ ಪ್ರಾಬಲ್ಯ ಕುಸಿತಗೊಂಡಿತು. ಜೊತೆಗೆ ರಾಷ್ಟ್ರೀಯತೆ ಮತ್ತು ರಾಜಪ್ರಭುತ್ವಗಳು ಬಲಶಾಲಿಯಾದವು.

5. ಜೀಸಸ್ ಸಂಘದ ಸದಸ್ಯರು, ಮಿಷನರಿಗಳು ಹಾಗೂ ಶಿಕ್ಷಣ ಸಂಸ್ಥೆಗಳ ಮೂಲಕ ಪ್ರಪಂಚದಾದ್ಯಂತ ಕ್ರೈಸ್ತಧರ್ಮವನ್ನು ಪ್ರಸಾರ ಮಾಡಿದರು.

6. ಧಾರ್ಮಿಕ ಸುಧಾರಣೆಯು ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಿತು. ದೇಶೀಯ ಭಾಷೆಗಳು ಹೆಚ್ಚು ಪ್ರಮುಖ್ಯತೆ ಪಡೆದವು. ಬೈಬಲ್ ಗ್ರಂಥವು ದೇಶೀಯ ಭಾಷೆಗಳಿಗೆ ಭಾಷಾಂತರವಾದುದು ಇತಿಹಾಸದಲ್ಲಿ ಒಂದು ಪ್ರಮುಖ ಹೆಗ್ಗುರುತಾಗಿದೆ.

7. ಚಳುವಳಿಯಿಂದಾಗಿ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ್ ರಾಷ್ಟ್ರಗಳ ನಡುವೆ ಧಾರ್ಮಿಕ ಯುದ್ಧಗಳು ಪ್ರಾರಂಭವಾದವು. ಇವುಗಳಿಂದಾಗಿ ಕ್ರೈಸ್ತ ಸಮುದಾಯಗಳಲ್ಲಿ ರಕ್ತಪಾತ, ಸಾವು ಮತ್ತು ವಿನಾಶಗಳು ಉಂಟಾದವು. ಈ ಯುದ್ಧಗಳಿಂದಾಗಿ ಪೋಪ್‌ನ ಪ್ರಾಬಲ್ಯ ಕುಸಿಯಿತು.

8. ಚಳುವಳಿಯ ಪರಿಣಾಮವಾಗಿ ಚರ್ಚ್‌ಗಳಿಂದ ಮುಟ್ಟುಗೋಲು ಹಾಕಿಕೊಂಡ ಸಂಪತ್ತನ್ನು ಆಯಾ ದೇಶಗಳ ಆರ್ಥಿಕ ಅಭಿವೃದ್ಧಿಗೆ ಬಳಸಿಕೊಳ್ಳಲಾಯಿತು. ಲೇವಾದೇವಿದಾರರು, ಬ್ಯಾಂಕರ್‌ಗಳು ಹಾಗೂ ಹೂಡಿಕೆದಾರರು ಸಮಾಜದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿದರು.

ಪ್ರಶ್ನೆಗಳು

ಕೆಳಗಿನವುಗಳಿಗೆ 1 ಪದ ಅಥವಾ 1 ವಾಕ್ಯದಲ್ಲಿ ಉತ್ತರಿಸಿ: (ತಲಾ ಒಂದು ಅಂಕ)

1. 'ನ್ಯಾವಿಗೇಟರ್' ಎಂದು ಯಾರನ್ನು ಕರೆಯಲಾಗಿದೆ?
2. ದಕ್ಷಿಣ ಅಮೇರಿಕಾದ ಮುಖ್ಯ ಭೂ ಭಾಗವನ್ನು ಅನ್ವೇಷಿಸಿದವರು ಯಾರು?
3. 'ಪುನರುಜ್ಜೀವನ' ಪದದ ಅರ್ಥವೇನು?
4. ಪುನರುಜ್ಜೀವನ ಪದವು ಯಾವ ಶಬ್ದದಿಂದ ಬಂದಿದೆ?
5. 'ಪುನರುಜ್ಜೀವನದ ತಾಯ್ನಾಡು (ತವರುಮನೆ)' ಎಂದು ಯಾವ ದೇಶವನ್ನು ಕರೆಯಲಾಗಿದೆ?
6. ಮುದ್ರಣಯಂತ್ರವನ್ನು ಕಂಡುಹಿಡಿದವರು ಯಾರು?
7. 'ಪುನರುಜ್ಜೀವನದ ಪಿತಾಮಹ' ಎಂದು ಯಾರನ್ನು ಕರೆಯಲಾಗಿದೆ?
8. 'ಮಾನವತಾವಾದದ ಪಿತಾಮಹ' ಎಂದು ಯಾರನ್ನು ಕರೆಯಲಾಗಿದೆ?
9. 'ಡಿವೈನ್ ಕಾಮಿಡಿ' ಯ ಕರ್ತೃ ಯಾರು?
10. 'ಉಟೋಪಿಯಾ' ದ ರಚನಾಕಾರರನ್ನು ಹೆಸರಿಸಿ
11. 'ಪ್ಯಾರಡೈಸ್ ಲಾಸ್ಟ್' ಕೃತಿಯನ್ನು ಯಾರು ರಚಿಸಿದರು?
12. 'ಮೊನಾಲಿಸಾ'ವನ್ನು ಚಿತ್ರಿಸಿದವರು ಯಾರು?
13. 'ಗುರುತ್ವಾರ್ಷಣೆ ನಿಯಮ'ವನ್ನು ಪ್ರತಿಪಾದಿಸಿದವರು ಯಾರು?
14. ಧಾರ್ಮಿಕ ಸುಧಾರಣೆಯ ನಾಯಕ ಯಾರು?
15. ಕ್ಯಾಥೋಲಿಕ್ ಚರ್ಚ್ ವಿರುದ್ದ '95 ನಿಬಂಧನೆ'ಗಳನ್ನು ಪ್ರಕಟಿಸಿದವರು ಯಾರು?
16. ಧಾರ್ಮಿಕ ಸುಧಾರಣೆಯ 'ಉಷಾತಾರೆ' ಎಂದು ಯಾರನ್ನು ಕರೆಯಲಾಗಿದೆ?
17. ಪ್ರತಿಧಾರ್ಮಿಕ ಸುಧಾರಣೆ ಎಂದರೇನು?
18. ಧಾರ್ಮಿಕ ವಿಚಾರಣಾ ನ್ಯಾಯಾಲಯ(ಇನ್‌ಕ್ವಿಝೀಷನ್) ಎಂದರೇನು?
19. 'ಸೊಸೈಟಿ ಆಫ್ ಜೀಸಸ್'ನ ಸ್ಥಾಪಕರು ಯಾರು?
20. ಧಾರ್ಮಿಕ ಸುಧಾರಣಾ ಚಳುವಳಿ ಸಂದರ್ಭದಲ್ಲಿ ಅಧಿಕಾರದಲ್ಲಿದ್ದ ಪೋಪ್ ಯಾರು?
21. 'ಕ್ಷಮಾಪಣಾ ಪತ್ರಗಳು' ಎಂದರೇನು?
22. ಇಗ್ನೇಷಿಯಸ್ ಲಯೋಲನ ಅನುಯಾಯಿಗಳನ್ನು ಏನೆಂದು ಕರೆಯುತ್ತಿದ್ದರು?

ಕೆಳಗಿನವುಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ: (ತಲಾ ಎರಡು ಅಂಕಗಳು)

1. ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ಯಾರು, ಯಾವ ವರ್ಷದಲ್ಲಿ ವಶಪಡಿಸಿಕೊಂಡರು?
2. ರಾಜಕುಮಾರ ಹೆನ್ರಿಯನ್ನು 'ದಿ ನ್ಯಾವಿಗೇಟರ್' ಎಂದು ಏಕೆ ಕರೆಯುತ್ತಾರೆ?

3. ಭಾರತಕ್ಕೆ ಯಾರು ಮತ್ತು ಯಾವ ವರ್ಷದಲ್ಲಿ ಜಲಮಾರ್ಗವನ್ನು ಕಂಡು ಹಿಡಿದರು?
4. ಮೆಗಲಾನನ ಯಾವುದಾದರೂ ಎರಡು ಹಡಗುಗಳನ್ನು ಹೆಸರಿಸಿ.
5. ವಿಶ್ವವನ್ನು ಪ್ರದಕ್ಷಿಣೆ ಹಾಕಿದ ಮೊದಲ ಹಡಗು ಯಾವುದು ಮತ್ತು ಆ ನೌಕಾಯಾನದ ನಾಯಕನಾರು?
6. ಯಾವುದಾದರೂ ಇಬ್ಬರು ಪ್ರಮುಖ ಭೌಗೋಳಿಕ ಅನ್ವೇಷಣಾಕಾರರನ್ನು ಹೆಸರಿಸಿ
7. ಪುನರುಜ್ಜೀವನ ಕಾಲದ ಇಬ್ಬರು ಮಾನವತಾವಾದಿಗಳನ್ನು ಹೆಸರಿಸಿ.
8. ವಿಲಿಯಂ ಷೇಕ್‌ಸ್ಪಿಯರ್‌ನ ಯಾವುದಾದರೂ ಎರಡು ಕೃತಿಗಳನ್ನು ತಿಳಿಸಿ.
9. ಪುನರಜ್ಜೀವನ ಕಾಲದ ಯಾವುದಾದರು ಇಬ್ಬರು ಚಿತ್ರಕಾರರನ್ನು ಹೆಸರಿಸಿ.
10. ಲಿಯೊನಾರ್ಡೋ ಡಾವಿಂಚಿಯ ಯಾವುದಾದರು ಎರಡು ಚಿತ್ರಕೃತಿಗಳನ್ನು ಹೆಸರಿಸಿ.
11. ಮೈಕೆಲ್ ಏಂಜಲೋ ರಚಿಸಿದ ಯಾವುದಾದರು ಎರಡು ಚಿತ್ರಕೃತಿಗಳನ್ನು ಹೆಸರಿಸಿ.
12. ಪುನರಜ್ಜೀವನ ಕಾಲದ ಯಾವುದಾದರು ಇಬ್ಬರು ವಿಜ್ಞಾನಿಗಳನ್ನು ಹೆಸರಿಸಿ
13. ಮಾರ್ಟಿನ್ ಲೂಥರ್ ಎಲ್ಲಿ ಮತ್ತು ಯಾವ ವರ್ಷದಲ್ಲಿ ಜನಿಸಿದನು?
14. ಜಾನ್‌ವೈಕ್ಲಿಫ್ ಯಾರು? ಅವನು ಯಾವ ದೇಶಕ್ಕೆ ಸೇರಿದವನು?
15. ಕ್ರೈಸ್ತ ಧರ್ಮದ ಎರಡು ಪಂಥಗಳನ್ನು ಹೆಸರಿಸಿ?
16. ಪ್ರತಿ ಧಾರ್ಮಿಕ ಸುಧಾರಣೆಯ ನಾಯಕ ಯಾರು? ಈತ ಸ್ಥಾಪಿಸಿದ ಸಂಸ್ಥೆಯ ಹೆಸರೇನು?

ಕೆಳಗಿನವುಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ: (ತಲಾ ಐದು ಅಂಕಗಳು)

1. ಭೌಗೋಳಿಕ ಅನ್ವೇಷಣೆಯಲ್ಲಿ ಕೊಲಂಬಸ್ ಹಾಗೂ ವಾಸ್ಕೋಡಗಾಮರ ಪಾತ್ರವನ್ನು ತಿಳಿಸಿ.
2. ಪುನರುಜ್ಜೀವನಕ್ಕೆ ಕಾರಣಗಳು ಯಾವುವು?
3. ಪುನರುಜ್ಜೀವನವು ಸಾಹಿತ್ಯಕ್ಕೆ ನೀಡಿದ ಕೊಡುಗೆಗಳೇನು?
4. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಪುನರಜ್ಜೀವನದ ಕೊಡುಗೆಗಳೇನು?
5. ಪುನರುಜ್ಜೀವನದ ಕಾಲದಲ್ಲಾದ ವೈಜ್ಞಾನಿಕ ಪ್ರಗತಿಯ ಕುರಿತಂತೆ ವಿವರಣೆ ನೀಡಿ.
6. ಪುನರುಜ್ಜೀವನದ ಪರಿಣಾಮಗಳನ್ನು ವಿವರಿಸಿ.
7. ಪ್ರತಿಧಾರ್ಮಿಕ ಸುಧಾರಣೆಯನ್ನು ಕುರಿತು ಬರೆಯಿರಿ.

ಕೆಳಗಿನವುಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ: (ತಲಾ ಹತ್ತು ಅಂಕಗಳು)

1. ಭೌಗೋಳಿಕ ಅನ್ವೇಷಣೆಯ ಕಾರಣಗಳು ಹಾಗೂ ಪರಿಣಾಮಗಳನ್ನು ಕುರಿತು ವರ್ಣಿಸಿ.
2. ಪುನರುಜ್ಜೀವನ ಕಾಲದ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿ.
3. ಧಾರ್ಮಿಕ ಸುಧಾರಣೆಯ ಕಾರಣಗಳು ಹಾಗೂ ಪರಿಣಾಮಗಳನ್ನು ವಿವರಿಸಿ.
4. ಧಾರ್ಮಿಕ ಸುಧಾರಣಾ ಚಳುವಳಿಯಲ್ಲಿ ಮಾರ್ಟಿನ್ ಲೂಥರ್‌ನ ಪಾತ್ರವನ್ನು ವಿವರಿಸಿ.

❖ ❖ ❖ ❖ ❖

ಅಧ್ಯಾಯ 8

ಪ್ರಪಂಚದ ಕ್ರಾಂತಿಗಳು

ಕ್ರಾಂತಿ ಎಂದರೇನು?

ಆಂಗ್ಲ ರೂಪದ 'ರೆವೊಲೂಷನ್' ಎಂಬ ಪದವನ್ನು ಲ್ಯಾಟಿನ್ ಮೂಲದ 'ರೆವೊಲೂಷಿಯೋ' ಎಂಬ ಪದದಿಂದ ಪಡೆಯಲಾಗಿದೆ. 'ರೆವೊಲೂಷಿಯೋ'ಎಂದರೆ ಸಂಪೂರ್ಣ ಬದಲಾವಣೆ ಎಂದರ್ಥ. ಅತ್ಯಲ್ಪ ಅವಧಿಯಲ್ಲಿ ಆಡಳಿತ ಅಥವಾ ಸಂಘಟನಾತ್ಮಕ ರೂಪರೇಷೆಗಳಲ್ಲಿ ಬರುವ ಮೂಲಭೂತ ಬದಲಾವಣೆಯನ್ನು ಇದು ಒಳಗೊಂಡಿರುತ್ತದೆ. ಮಾನವನ ಇತಿಹಾಸದಲ್ಲಿ ಕ್ರಾಂತಿಗಳು ನಡೆದಿದ್ದು, ಅವುಗಳ ಕ್ರಮ, ಅವಧಿ ಮತ್ತು ಪ್ರೇರೇಪಿಸುವ ವಿಚಾರಗಳು ವಿಸ್ತೃತವಾಗಿ ಭಿನ್ನವಾಗಿವೆ. ಅವುಗಳ ಪರಿಣಾಮ ಸಂಸೃತಿ, ಆರ್ಥಿಕತೆ ಮತ್ತು ಸಾಮಾಜಿಕ – ರಾಜಕೀಯ ಸಂಸ್ಥೆಗಳನ್ನೊಳಗೊಂಡು ಪ್ರಮುಖ ಬದಲಾವಣೆಗಳನ್ನು ತಂದಿವೆ.

1750–1917ರ ಅವಧಿಯಲ್ಲಿ ಅಮೇರಿಕಾ ಹಾಗೂ ಯೂರೋಪ್‌ಗಳು ಹಲವು ಕ್ರಾಂತಿಗಳನ್ನು ಹಾಗೂ ರಾಷ್ಟ್ರೀಯತೆಯ ಉಗಮವನ್ನು ಕಂಡಿವೆ. ಇದರ ಪರಿಣಾಮ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ರಚನೆಯಲ್ಲಿ ಸಂಪೂರ್ಣ ಬದಲಾವಣೆ ಉಂಟಾಯಿತು. ಇವುಗಳ ಪರಿಣಾಮಗಳು ಸಾಂಸ್ಕೃತಿಕ, ಆರ್ಥಿಕ, ಮತ್ತು ಸಾಮಾಜಿಕ ಬದಲಾವಣೆಗಳನ್ನು ಒಳಗೊಂಡಿವೆ. ಮುಂದೆ ಇದು ಪ್ರಪಂಚದ ಇತರ ಭಾಗಗಳಿಗೂ ಹರಡಿತು. ನಿಜಕ್ಕೂ ಈ ಪ್ರಕ್ರಿಯೆಯು ಮಾನವ ಜನಾಂಗದ ಇತಿಹಾಸದಲ್ಲಿ ಒಂದು ಮೈಲಿಗಲ್ಲೇ ಸರಿ. ಇಂದೂ ಕೂಡ ಪ್ರಪಂಚವು ಅನೇಕ ಕ್ಷೇತ್ರಗಳಲ್ಲಿ ಕ್ರಾಂತಿಗಳನ್ನು ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ನಾವು ಈ ಕೆಳಗಿನ ಕ್ರಾಂತಿಗಳನ್ನು ಕುರಿತು ಅಭ್ಯಸಿಸೋಣ.

1. ಕೈಗಾರಿಕಾ ಕ್ರಾಂತಿ

2. ಅಮೇರಿಕಾದ ಸ್ವಾತಂತ್ರ್ಯ ಸಂಗ್ರಾಮ

3. ಫ್ರಾನ್ಸಿನ ಮಹಾಕ್ರಾಂತಿ

4. ರಷ್ಯಾದ ಕ್ರಾಂತಿ

8.1 ಕೈಗಾರಿಕಾ ಕ್ರಾಂತಿ(1750–1850)

ಪೀಠಿಕೆ: ಕೈಗಾರಿಕಾ ಕ್ರಾಂತಿಯು (1750–1850) ಕೃಷಿ, ಉತ್ಪಾದನೆ, ಗಣಿಗಾರಿಕೆ, ಸಾರಿಗೆ ಹಾಗೂ ತಂತ್ರಜ್ಞಾನಗಳಲ್ಲಿ ಬದಲಾವಣೆಗಳನ್ನು ಕಂಡಿತು. ಆ ಕಾಲದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗಳ ಮೇಲೆ ಅಗಾಧ ಪರಿಣಾಮವನ್ನು ಬೀರಿತು. 18ನೇ ಶತಮಾನದ ಉತ್ತರಾರ್ಧದಲ್ಲಿ ಆದ ಈ ಹೊಸ ಕ್ರಾಂತಿಯ ಹಿಡಿತಕ್ಕೆ ಪ್ರಪಂಚವು ಇನ್ನೂ ಸನ್ನದ್ಧವಾಗಿರಲಿಲ್ಲ. ಈ ಕ್ರಾಂತಿ ರಾಜಕೀಯವೂ ಅಲ್ಲದ, ಸಾಮಾಜಿಕ ಅಥವಾ ಸಾಂಸ್ಕೃತಿಕ ಸ್ವರೂಪದ್ದೂ ಆಗಿರಲಿಲ್ಲ. ಆದರೆ ಇದು ಅಸ್ತಿತ್ವದಲ್ಲಿರುವಾಗ ಅನೇಕ ಪರಿಣಾಮಗಳಿಗೆ ಕಾರಣವಾಯಿತು. ಇದು ಆರ್ಥಿಕ ಕ್ರಾಂತಿಯಾಗಿತ್ತು. ಇಂಗ್ಲೆಂಡ್‌ನಲ್ಲಿ ಆರಂಭವಾಗಿ ತದನಂತರ, ಪಶ್ಚಿಮ ಯೂರೋಪ್, ಉತ್ತರ ಅಮೇರಿಕಾ, ಜಪಾನ್, ಮತ್ತು ಕೊನೆಗೆ ಪ್ರಪಂಚದ ಇತರ ಭಾಗಗಳಿಗೂ ಹಬ್ಬಿತು.

ಕೈಗಾರಿಕಾ ಕ್ರಾಂತಿಯು ಇತಿಹಾಸದಲ್ಲಿ ಮಹತ್ತರ ಬದಲಾವಣೆಯ ಬಿಂದುವನ್ನು ಸೂಚಿಸಿತು. ದೈನಂದಿನ ಜೀವನದ ಹೆಚ್ಚೂಕಡಿಮೆ ಎಲ್ಲ ಮಗ್ಗಲುಗಳ ಮೇಲೂ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಪ್ರಭಾವವನ್ನು ಬೀರಿತು. ಅದರಲ್ಲೂ ಪ್ರಮುಖವೆಂದರೆ ಸರಾಸರಿ ಆದಾಯ ಹಾಗೂ ಜನಸಂಖ್ಯೆಯಲ್ಲಿ ಹಿಂದೆಂದೂ ಕಾಣದ ಅಪಾರ ಪ್ರಗತಿ ಮೂಡಿ ಬಂತು. 18ನೇ ಶತಮಾನದ ಮುಂದಿನ ಎರಡು ನೂರು ವರ್ಷಗಳಲ್ಲಿ ಪ್ರಪಂಚದ ಸರಾಸರಿ ತಲಾದಾಯವು ಹತ್ತುಪಟ್ಟು ಮತ್ತು ಜನಸಂಖ್ಯೆಯು ಆರು ಪಟ್ಟು ಹೆಚ್ಚಿತು. ಕೈಗಾರಿಕಾ ಕ್ರಾಂತಿಯು ಜಗತ್ತಿನ ವಸ್ತುಗಳ ಜಾಗತಿಕ ಉತ್ಪಾದನೆಯ ವಿಧಾನದಲ್ಲಿ ಬದಲಾವಣೆ ತಂದಿತು. ಅದು ಪ್ರಮುಖವಾಗಿ ಕೃಷಿಕ ಸಮಾಜವನ್ನು ಕೈಗಾರಿಕಾ ಹಾಗು ಉತ್ಪಾದಕ ಸಮಾಜವನ್ನಾಗಿ ಪರಿವರ್ತಿಸಿತು. ಬಟ್ಟೆಗೆ ಹೆಚ್ಚು ಬೇಡಿಕೆ ಇದ್ದುದರಿಂದ ಜವಳಿ ಕ್ಷೇತ್ರದಲ್ಲಿ ಮೊದಲು ಆರಂಭವಾಯಿತು. ಉದ್ದಿಮೆದಾರರು ಕೈಗಾರಿಕಾ ಕ್ರಾಂತಿಗೆ ನಾಂದಿ ಹಾಡಲು ಗ್ರೇಟ್ ಬ್ರಿಟನ್ ನ್ಯಾಯಯುತ ಹಾಗೂ ಸಾಂಸ್ಕೃತಿಕ ಬುನಾದಿಯನ್ನು ಹಾಕಿಕೊಟ್ಟಿತು.

ಕ್ರಾಂತಿ ಬ್ರಿಟನ್‌ನಲ್ಲೇ ಏಕೆ?

ಕೈಗಾರೀಕೀಕರಣ ಪ್ರಕ್ರಿಯೆ ಪ್ರಾರಂಭಿಸಿದ ಯೂರೋಪಿನ ಪ್ರಥಮ ರಾಷ್ಟ್ರ ಬ್ರಿಟನ್. ಯೂರೋಪಿನ ಇತರೆ ರಾಷ್ಟ್ರಗಳಿಗಿಂತ ಇದು ಮುಂಚೂಣಿಯಲ್ಲಿತ್ತು. ಈ ಕೆಳಗಿನ ಅಂಶಗಳು ಇದಕ್ಕೆ ಪ್ರೇರಣೆ ನೀಡಿವೆ.

- 1688ರ ಭವ್ಯ ಕ್ರಾಂತಿಯ ನಂತರ ದೇಶವು ರಾಜಕೀಯ ಸ್ಥಿರತೆಯನ್ನು ಸಾಧಿಸಿತು.
- ರಾಷ್ಟ್ರೀಯ ಬ್ಯಾಂಕಿಂಗ್ ವ್ಯವಸ್ಥೆಯು ಕಡಿಮೆ ಬಡ್ಡಿದರದಲ್ಲಿ ಹೆಚ್ಚು ಹಣವನ್ನು ತೊಡಗಿಸುವಲ್ಲಿ ಯೂರೋಪ್‌ನಲ್ಲೇ ಪ್ರಥಮವಾಗಿತ್ತು.
- ಕಲ್ಲಿದ್ದಲು ಹಾಗೂ ಕಬ್ಬಿಣದಂತಹ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ.
- ಉತ್ತಮ ಆರೋಗ್ಯ ಸೌಲಭ್ಯ, ಪೌಷ್ಟಿಕ ಆಹಾರ, ಮರಣ ಪ್ರಮಾಣದಲ್ಲಿನ ಇಳಿಕೆ ಮುಂತಾದುವುಗಳಿಂದಾಗಿ ಜನಸಂಖ್ಯೆಯಲ್ಲಿ ಹೆಚ್ಚಳವಾಯಿತು. ಜನಸಂಖ್ಯೆಯಲ್ಲಿನ ಈ ಹೆಚ್ಚಳವು ಕಡಿಮೆ ಕೂಲಿಗಾಗಿ ದುಡಿಯುವ 'ಶ್ರಮಿಕ ಶಕ್ತಿ' ಯನ್ನು ಒದಗಿಸಿತು ಮತ್ತು ಗ್ರಾಹಕರ ಸಂಖ್ಯೆಯಲ್ಲಿಯೂ ಹೆಚ್ಚಳವಾಯಿತು.

ತಾಂತ್ರಿಕ ಅಭಿವೃದ್ಧಿ:

ಜವಳಿ: ರಿಚರ್ಡ್ ಆರ್ಕ್‌ರೈಟ್ 'ವಾಟರ್ ಫ್ರೇಮ್' ಅನ್ನು ಸಂಶೋಧಿಸಿದನು. ಹಾರ್‌ಗ್ರೀವ್ಸ್ 'ಸ್ಪಿನ್ನಿಂಗ್ ಜೆನ್ನಿ'ಯನ್ನು ಸಂಶೋಧಿಸಿದನು. ಸ್ಯಾಮ್ಯುಯಲ್ ಕ್ರಾಂಪ್ಟನ್ ಈ ಎರಡನ್ನೂ ಒಟ್ಟುಗೂಡಿಸಿ ಹೊಸ ಸ್ಪಿನ್ನಿಂಗ್ ಯಂತ್ರವನ್ನು ರೂಪಿಸಿದನು. ಇದರ ಪರಿಣಾಮವಾಗಿ ಅನೇಕ ಹತ್ತಿಗಿರಣಿಗಳು ಸ್ಥಾಪನೆಯಾದವು. ಡರ್ಬಿಯಲ್ಲಿ ಜವಳೀ ಕ್ರಾಂತಿಯಾಯಿತು. ಡರ್ಬಿಯು 'ಪವರ್ ಹೌಸ್ ಆಫ್ ದಿ ನಾರ್ತ್' ಎಂದು ಗುರುತಿಸಲ್ಪಟ್ಟಿದೆ.

ಸ್ಪಿನ್ನಿಂಗ್ ಜನ್ನಿ



ಜೇಮ್ಸ್ ವ್ಯಾಟ್

ಗಣಿಗಾರಿಕೆ: ಬ್ರಿಟನ್‌ನಲ್ಲಿ ಗಣಿಗಾರಿಕೆಯು ಸೌಥ್ ವೇಲ್ಸ್‌ನಲ್ಲಿ ಮೊದಲು ಪ್ರಾರಂಭವಾಯಿತು. ಉಗಿ ಯಂತ್ರದ ಪರಿಚಯವು ಗಣಿಗಳಿಂದ ನೀರನ್ನು ತೆಗೆಯಲು ಸಾಕಷ್ಟು ಸಹಕಾರಿಯಾಯಿತು. ಇದರಿಂದ ಸುರಂಗವನ್ನು ಆಳವಾಗಿ ಕೊರೆಯಲು ಹಾಗೂ ಹೆಚ್ಚು ಕಲ್ಲಿದ್ದಲನ್ನು ತೆಗೆಯಲು ಅನುಕೂಲವಾಯಿತು. ಇವುಗಳ ಬೆಳವಣಿಗೆ ಕೈಗಾರಿಕಾ ಕ್ರಾಂತಿಗಿಂತ ಮೊದಲೇ ಪ್ರಾರಂಭವಾಗಿತ್ತು. ಜೇಮ್ಸ್ ವ್ಯಾಟ್‌ನ ಹೆಚ್ಚು ದಕ್ಷತೆಯಿಂದ ಕೂಡಿದ ಉಗಿಯಂತ್ರವು ಇಂಧನಗಳ ಮೇಲಿನ ವೆಚ್ಚವನ್ನು ಕಡಿಮೆಗೊಳಿಸಿದ್ದಲ್ಲದೆ ಗಣಿ ಕೈಗಾರಿಕೆಯನ್ನು ಲಾಭದಾಯಕವನ್ನಾಗಿ ಮಾಡಿತು. ಗಣಿಗಾರಿಕೆ ಹಾಗೂ ಲೋಹ ಶೋಧನ ಪ್ರಕ್ರಿಯೆ ಬೆಳವಣಿಗೆ ಒಂದಕ್ಕೊಂದು ಪೂರಕವಾಗಿದ್ದವು.

ವಿಲಿಯಂ ಬೆಲ್ ಸ್ಕಾಟ್‌ನ ಉಕ್ಕು ಮತ್ತು ಕಬ್ಬಿಣ 1855–60

ಲೋಹ ಶೋಧನಾ ಪ್ರಕ್ರಿಯೆ: ಲೋಹ ಕೈಗಾರಿಕೆಯಲ್ಲಿನ ಪ್ರಮುಖ ಬದಲಾವಣೆ ಎಂದರೆ ಸಸ್ಯಜನ್ಯ ಕಲ್ಲಿದ್ದಲಿನ ಸ್ಥಾನದಲ್ಲಿ ಸಾವಯವ ಇಂಧನದ ಬಳಕೆ. ಈ ಬದಲಾವಣೆಗಳು ಕಬ್ಬಿಣ, ಉಕ್ಕು, ಮುಂತಾದ ಲೋಹಗಳ ಉತ್ಪಾದನೆಗೆ ದಾರಿ ಮಾಡಿಕೊಟ್ಟಿತು. 1678 ರಿಂದ ಸರ್. ಕ್ಲೆಮೆಂಟ್ ಕ್ಲಾರ್ಕ್ ಮತ್ತು ಇತರ ಸಂಶೋಧನೆಗಳಿಂದ ಕುಲುಮೆಗಳ ಬಗೆಬಗೆಯ ರಚನೆಯಲ್ಲಿ ಕೂಡಾ ಸುಧಾರಣೆ ಕಂಡುಬಂದಿತು.

ಉಗಿ–ಶಕ್ತಿ: ಜೇಮ್ಸ್ ವ್ಯಾಟ್‌ನು ಕಂಡುಹಿಡಿದ ಸುಧಾರಿತ ಉಗಿಯಂತ್ರವನ್ನು ಪ್ರಮುಖವಾಗಿ ಗಣಿಗಳಿಂದ ನೀರೆತ್ತಲು ಬಳಸಲಾಗುತ್ತಿತ್ತು. ನಂತರ ಅದನ್ನು ಬೇರೆ ತರಹದ ಯಂತ್ರಗಳಲ್ಲಿ ಉಪಯೋಗಿಸಲಾಯಿತು. ಸುಮಾರು ನೂರು ವರ್ಷಗಳಿಗೂ ಹೆಚ್ಚು ಕಾಲ ಉಗಿಯಂತ್ರವು ಕೈಗಾರಿಕಾ ಕ್ಷೇತ್ರದ ರಾಜನಾಗಿ ಮೆರೆಯಿತು.

ವ್ಯಾಟ್‌ನ ಉಗಿ–ಯಂತ್ರ

ರಾಸಾಯನಿಕಗಳು: ರಾಸಾಯನಿಕಗಳ ದೊಡ್ಡ ಪ್ರಮಾಣದ ಉತ್ಪಾದನೆಯು ಕೈಗಾರಿಕಾ ಕ್ರಾಂತಿಯ ಸಮಯದ ಪ್ರಮುಖ ಬೆಳವಣಿಗೆಯಾಗಿದೆ. ಸಲ್ಫ್ಯೂರಿಕ್ ಆಸಿಡ್, ಆಲ್ಕಲಿ, (ಆಮ್ಲತೆಯನ್ನು ನಿವಾರಿಸುವ ಕ್ಷಾರ) ಮತ್ತು ಸೋಡಿಯಂ ಕಾರ್ಬೋನೇಟ್‌ನ ತಯಾರಿಕೆಯ ವಿಧಾನ ಇತರ ಶೋಧನೆಗಳಿಗೆ ಕಾರಣವಾಯಿತು. ಈ ಸಂಶೋಧನೆಗಳು ಕಡಿಮೆ ವೆಚ್ಚದಾಯಕವಾಗಿದ್ದವು. ಸೋಡಿಯಂ ಕಾರ್ಬೋನೇಟ್, ಗಾಜು, ಬಟ್ಟೆ, ಸಾಬೂನು ಹಾಗೂ ಕಾಗದದ ಕಾರ್ಖಾನೆಗೆ ಹೆಚ್ಚು ಉಪಯುಕ್ತವಾಗಿತ್ತು. ಸಲ್ಫ್ಯೂರಿಕ್ ಆಸಿಡ್ ಅನ್ನು ಪ್ರಾರಂಭದಲ್ಲಿ ಕಬ್ಬಿಣ ಮತ್ತು ಉಕ್ಕು ತುಕ್ಕು ಹಿಡಿಯದಂತೆ ಮಾಡಲು ಮತ್ತು ಬಟ್ಟೆಯ ಬಿಳುಪನ್ನು ಹೆಚ್ಚಿಸಲು ಬಳಸುತ್ತಿದ್ದರು. 1860ರ ನಂತರ ರಾಸಾಯನಿಕಗಳ ಸಂಶೋಧನೆಯ ಗಮನವು ಬಣ್ಣಗಳ ತಯಾರಿಕೆಯಲ್ಲಿ ಕೇಂದ್ರೀಕೃತವಾಗಿತ್ತು. ಹಾಗೂ ಜರ್ಮನಿಯು ಬಲಿಷ್ಠ ರಾಸಾಯನಿಕ ಉದ್ದಿಮೆಗಳನ್ನು ಸ್ಥಾಪಿಸುವಲ್ಲಿ ವಿಶ್ವದ ಮಂಚೂಣಿಯಲ್ಲಿತ್ತು.

ಯಂತ್ರೋಪಕರಣಗಳು: ಯಂತ್ರೋಪಕರಣಗಳಿಲ್ಲದೆಯೇ ಕೈಗಾರಿಕಾ ಕ್ರಾಂತಿಯಲ್ಲಿ ಪ್ರಗತಿ ಅಸಾಧ್ಯವಾಗಿತ್ತು. ಅವುಗಳಿಂದಲೇ ಯಂತ್ರಗಳ ಉತ್ಪಾದನೆ ಸಾಧ್ಯವಾಯಿತು. ಅದರ ಮೂಲವು 18ನೇ ಶತಮಾನದಲ್ಲಿ ದೊಡ್ಡ ಮಟ್ಟದ ಗಡಿಯಾರಗಳು, ಕೈಗಡಿಯಾರಗಳು ಹಾಗೂ ವೈಜ್ಞಾನಿಕ ಸಲಕರಣೆಗಳ ತಯಾರಕರ ಶ್ರಮದಲ್ಲೇ ಅಡಗಿದೆ. ಬಡಗಿಗಳು ಕಟ್ಟಿಗೆ ಚೌಕಟ್ಟುಗಳನ್ನು, ಕಮ್ಮಾರರು ಹಾಗೂ ಚರಕಿ ಕೆಲಸದವರು (ಟರ್ನರ್) ಲೋಹದ ಭಾಗಗಳನ್ನು– ಹೀಗೆ ಅನೇಕ ಕುಶಲ ಕರ್ಮಿಗಳು ಯಂತ್ರಗಳನ್ನು ಸಿದ್ಧಗೊಳಿಸಿದರು.

ಅನಿಲ–ಬೆಳಕು: ಕೈಗಾರಿಕಾ ಕ್ರಾಂತಿಯ ಉತ್ತರಾರ್ಧದ ಮತ್ತೊಂದು ಪ್ರಮುಖ ಕೈಗಾರಿಕೆ ಎಂದರೆ ಅನಿಲ–ಬೆಳಕು. ಇಂತಹ ನಾವೀನ್ಯತೆಯನ್ನು ಇತರರು ತಂದರಾದರೂ ಬೃಹತ್ ಪ್ರಮಾಣದಲ್ಲಿ ಇದನ್ನು ಪರಿಚಯಿಸಿದ್ದು ವಿಲಿಯಮ್. ಈ ಪ್ರಕ್ರಿಯೆ ಕುಲುಮೆಗಳಲ್ಲಿ ಕಲ್ಲಿದ್ದಲಿನ ಅನಿಲ ರೂಪದ ಪರಿವರ್ತನೆಯನ್ನು ಒಳಗೊಂಡಿತ್ತು. ಪ್ರಥಮ ಅನಿಲ ಬೆಳಕನ್ನು ಲಂಡನ್‌ನಲ್ಲಿ ಪರಿಚಯಿಸಲಾಯಿತು. ಅನಿಲ ಬೆಳಕು ಸಾಮಾಜಿಕ ಹಾಗೂ ಕೈಗಾರಿಕಾ ಸಂಘಟನೆಗಳ ಮೇಲೆ ಪ್ರಭಾವ ಬೀರಿತು. ಇದು ಕಾರ್ಖಾನೆ ಹಾಗೂ ಗೋದಾಮುಗಳಲ್ಲಿ ಬಳಸುತ್ತಿದ್ದ ಕೊಬ್ಬು ಹಾಗೂ ಎಣ್ಣೆ ದೀಪಗಳ ಸ್ಥಾನವನ್ನು ತುಂಬಿ, ಅವುಗಳನ್ನು ಹೆಚ್ಚು ಕಾಲದವರೆಗೆ ತೆರೆದಿಡಲು ಅನುವು ಮಾಡಿಕೊಟ್ಟಿತು. ಇದರ ಪರಿಚಯದಿಂದಾಗಿ ನಗರ ಹಾಗೂ ಪಟ್ಟಣಗಳಲ್ಲಿ ಅಲಂಕಾರಿಕ ದೀಪದ ರಾತ್ರಿಜೀವನಕ್ಕೆ ಅವಕಾಶ ಮಾಡಿಕೊಟ್ಟು, ಹಿಂದೆಂದೂ ಕಾಣದ ಬೆಳಕನ್ನು ಹೆಚ್ಚಿನ ಮಟ್ಟದಲ್ಲಿ ನೀಡಿತು.

ಗಾಜು ತಯಾರಿಕೆ: 19ನೇ ಶತಮಾನದ ಆರಂಭದಲ್ಲಿ ಉರುಳೆ ಅಥವಾ ಕೊಳವೆ ಆಕಾರದ ಹೊಸ ತರಹದ ಗಾಜು ತಯಾರಿಕೆ ಅಭಿವೃದ್ಧಿಗೊಂಡಿತು. ಈ ವಿಧಾನವನ್ನು ಫ್ರಾನ್ಸ್ ಸಹೋದರರು ತೆಳುವಾದ ಗಾಜು ತಯಾರಿಸಲು ಬಳಸುತ್ತಿದ್ದರು. ಅವರು ಕಿಟಕಿ ಹಾಗೂ ತಗಡಿನಾಕಾರದ ಗಾಜಿನ ಹೆಚ್ಚಿನ ಮಟ್ಟದ ಉತ್ಪಾದಕರಾದರು. ಈ ಬೆಳವಣಿಗೆಯು ಯಾವುದೇ ಅಡೆತಡೆಯಿಲ್ಲದೆ ವಿಶಾಲವಾದ ಗಾಜು ಫಲಕಗಳನ್ನು ತಯಾರಿಸುವಲ್ಲಿ ಸಾಕಷ್ಟು ಕಟ್ಟಡಗಳ ಒಳಾಂಗಣ ಮತ್ತು ಒಳಭಾಗಗಳನ್ನು ಅಲಂಕರಿಸುವ ಯೋಜನೆ ಮಾಡಲು ಸಾಧ್ಯವಾಯಿತು. ನೂತನ ಮತ್ತು ನಾವೀನ್ಯತೆಯ ರಚನೆಯಲ್ಲಿ ತಗಡಿನಾಕಾರದ ಗಾಜನ್ನು ಬಳಸಿದ ಉತ್ತಮ ಉದಾಹರಣೆ ಕ್ರಿಸ್ಟಲ್ ಅರಮನೆಯಾಗಿದೆ.

ಕೈಗಾರಿಕಾ ಕ್ರಾಂತಿಯ ಪರಿಣಾಮಗಳು:

ವ್ಯವಸಾಯ: ವ್ಯವಸಾಯದಲ್ಲಿ ಕ್ರಾಂತಿಯು ಕೈಗಾರಿಕಾ ಕ್ರಾಂತಿಗೂ ಶತಮಾನಗಳ ಮೊದಲೇ ಪ್ರಾರಂಭವಾಯಿತು. ಆದರೆ ಯಂತ್ರಗಳ ಸಂಶೋಧನೆಯು ಕೃಷಿ ಕ್ರಾಂತಿಯನ್ನು ಮುಂದುವರೆಸುವಲ್ಲಿ ಪ್ರಮುಖ ಪಾತ್ರ ವಹಿಸಿತು. 18ನೇ ಶತಮಾನದಲ್ಲಿನ ಕ್ರಾಂತಿ ಕೂಲಿಕಾರರನ್ನು ಜಮೀನುಗಳಿಂದ ಬಿಡುಗಡೆಗೊಳಿಸಿ ಕೈಗಾರಿಕಾ ಯಂತ್ರಶಾಲೆಗಳ ಕೆಲಸದಲ್ಲಿ ತೊಡಗಿಕೊಳ್ಳುವಂತೆ ಮಾಡಿತು. ಕೈಗಾರಿಕೆಗಳಲ್ಲಿ ಕ್ರಾಂತಿಯ ಪ್ರಗತಿಯಾದಂತೆ ಯಂತ್ರಗಳ ಸರಣಿಯೇ ಲಭ್ಯವಾಗಿ ಆಹಾರದ ಉತ್ಪಾನೆಯಲ್ಲಿಯೂ ಹೆಚ್ಚಳವಾಯಿತು.

ಸಾರಿಗೆ: ಕೈಗರಿಕಾ ಕ್ರಾಂತಿಯಿಂದ ಬ್ರಿಟನ್ನಿನ ಸಾರಿಗೆಯಲ್ಲಿ ಮೂಲಭೂತ ಸೌಕರ್ಯ ವಾಹನಗಳಿಂದ ಸುಂಕ ಸಂಗ್ರಹಿಸುವ ರಸ್ತೆಗಳ ಜಾಲ, ಕಾಲುವೆಗಳು, ಜಲಮಾರ್ಗಗಳು ಮತ್ತು ರೈಲ್ವೆ ಜಾಲಗಳಲ್ಲಿ ಸುಧಾರಣೆಯಾಯಿತು. ಇದರಿಂದಾಗಿ ಕಚ್ಚಾ ವಸ್ತು ಹಾಗೂ ಸಿದ್ಧ ವಸ್ತುಗಳ ಉತ್ಪಾದನೆಯನ್ನು ತ್ವರಿತವಾಗಿ ಹಾಗೂ ಈ ಮುಂಚೆಗಿಂತಲೂ ಕಡಿಮೆ ದರದಲ್ಲಿ ಸಾಗಿಸುವುದು ಸುಲಭವಾಯಿತು. ಸುಧಾರಿತ ಸಾರಿಗೆಯಿಂದ ಹೊಸ ಮನೋಭಾವನೆಗಳನ್ನು ತ್ವರಿತವಾಗಿ ಪಸರಿಸಲು ಸಾಧ್ಯವಾಯಿತು.

ಕಬ್ಬಿಣದ ಸೇತುವೆ, ಶ್ರಾಪ್‌ಶೈರ್, ಇಂಗ್ಲೆಂಡ್

ಕಾಲುವೆಗಳು: 18ನೇ ಶತಮಾನದಲ್ಲಿ ಉತ್ಪಾದಕ ಕೇಂದ್ರಗಳ ಮಧ್ಯೆ ಸಂಪರ್ಕ ಕಲ್ಪಿಸಲು ಕಾಲುವೆಗಳನ್ನು ನಿರ್ಮಿಸಲಾಯಿತು. ಅಂತಹ ಕಾಲುವೆಗಳಲ್ಲಿ ಯಶಸ್ವಿ ಪ್ರಥಮ ಕಾಲುವೆ ಎಂದರೆ ವಾಯುವ್ಯ ಇಂಗ್ಲೆಂಡಿನ ಬ್ರಿಡ್ಜ್ ವಾಟರ್ ಕಾಲುವೆ. ಈ ಕಾಲುವೆಗಳು ವಾಣಿಜ್ಯ ಚಟುವಟಿಕೆಗಳ ಬೆಳವಣಿಗೆಗೆ ಸಹಾಯಕವಾದವು.

ರಸ್ತೆಗಳು: ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಅನೇಕ ಹೊಸ ರಸ್ತೆಗಳನ್ನು ನಿರ್ಮಿಸಿದರು. ಅವರು ಈ ರಸ್ತೆಗಳನ್ನು ಉಪಯೋಗಿಸುವವರಿಂದ ಸುಂಕವನ್ನು ಸಂಗ್ರಹಿಸುತ್ತಿದ್ದರು. ಈ ರಸ್ತೆಗಳು ಇಂಗ್ಲೆಂಡಿನ ಪ್ರಮುಖ ನಗರಗಳನ್ನು ಜೋಡಿಸಿದವು ಮತ್ತು ದೂರ ದೂರದ ಪ್ರದೇಶಗಳಿಗೆ ಮನುಷ್ಯರ, ಅಂಚೆಯ ಮತ್ತು ವಸ್ತುಗಳ ಸಾಗಾಣಿಕೆಯನ್ನು ತೀವ್ರಗೊಳಿಸಿದವು.

ರೈಲು ಮಾರ್ಗಗಳು: ಕುದುರೆಗಳಿಂದ ಎಳೆಯಲ್ಪಡುವ ವ್ಯಾಗನ್‌ಗಳನ್ನು ಗಣಿಗಳಿಂದ ಕಲ್ಲಿದ್ದಲು ಸಾಗಿಸಲು ಬಳಸಲಾಗುತ್ತಿತ್ತು. ರೈಲು ಮಾರ್ಗಗಳನ್ನು ಪರಿಚಯಿಸಿದ್ದು ಮಾನವ ಹಾಗೂ ವಸ್ತುಗಳ ಸಾಗಣೆ ದೃಷ್ಟಿಯಿಂದ ಅತ್ಯಂತ ಯಶಸ್ವಿಯಾಯಿತು. ಅನೇಕ ಹೊಸ ರೈಲು ಯೋಜನೆಗಳನ್ನು ಕೈಗೊಳ್ಳಲಾಯಿತು. ರೈಲು ಯೋಜನೆಗಳು ಪೂರ್ಣವಾದ ನಂತರದಲ್ಲಿ ಅದರಲ್ಲಿ ತೊಡಗಿಕೊಂಡಿದ್ದ ಕಾರ್ಮಿಕರು ಗ್ರಾಮಿಣ ಬದುಕಿಗೆ ಹಿಂತಿರುಗಲಿಲ್ಲ. ಹೀಗೆ ನಗರಗಳಲ್ಲೇ ಉಳಿದುಕೊಂಡಿದ್ದರಿಂದ ಅಲ್ಲಿನ ಕಾರ್ಖಾನೆಗಳಿಗೆ ಹೆಚ್ಚಿನ ಕಾರ್ಮಿಕರ ಬಲ ಸೇರ್ಪಡೆಯಾಯಿತು.

ಸಮಾಜವಾದದ ಮೇಲೆ ಪ್ರಭಾವ: ಸಮಾಜವಾದ ಹೆಚ್ಚು ಕಡಿಮೆ ನೇರವಾಗಿ ಕೈಗಾರಿಕಾ ಕ್ರಾಂತಿಯಿಂದ ಹೊರಹೊಮ್ಮಿದ ಆರ್ಥಿಕ ಸಿದ್ಧಾಂತ. ಆ ಕಾಲದ ಅನಿಯಂತ್ರಿತ ಬಂಡವಾಳ ಶಾಹಿತ್ವದ ವಿರುದ್ಧದ ಪ್ರಕ್ರಿಯೆ ಇದಾಗಿತ್ತು. ಸಮಾಜವಾದವು ಉತ್ಪಾದನೆಯನ್ನು ಸಂಪೂರ್ಣವಾಗಿ ಸಮಾಜವೇ ನಿಯಂತ್ರಿಸಬೇಕೆಂದೂ, ಆರಂಭಿಕ ಹಂತಗಳ ನಂತರ ಪ್ರಭುತ್ವವು ಕೇವಲ ವೀಕ್ಷಕ ಸ್ಥಾನದಲ್ಲಿರಬೇಕೆಂದೂ, ತದನಂತರ ಸಹಕಾರಿ ತತ್ವದಂತೆ ಪ್ರಜೆಗಳಿಗೆ ಸರಕಾರ ನಡೆಸಲು ಅನುವು ಮಾಡಿಕೊಡಬೇಕೆಂದು ಬಯಸುತ್ತದೆ. ಆದರೆ ಇದು ತಟಸ್ಥ ಸಮಾಜವಾದಿ ಸಿದ್ಧಾಂತಕ್ಕೆ ತದ್ವಿರುದ್ಧವಾದದ್ದು. ಇದರ ಪ್ರಕಾರ ಸಮಾಜದಲ್ಲಿ ಸ್ವಾಭಾವಿಕ ಸ್ಪರ್ಧೆ ಇದ್ದಲ್ಲಿ ಉತ್ತಮ ಫಲಿತಾಂಶ ಕಾಣಬಹುದು. ಈ ಆಂದೋಲನವು ಕೈಗಾರಿಕಾ ಕ್ರಾಂತಿಯು ಸಾಮಾನ್ಯ ಕಾರ್ಮಿಕರಿಗೆ ಒಡ್ಡಿದ ಸವಾಲಿನಿಂದ ಪ್ರಭಾವಿತವಾಗಿತ್ತು. ಕೆಲಸದ ಪರಿಸ್ಥಿತಿ, ದೀರ್ಘ ಕೆಲಸಾವಧಿ ಮತ್ತು ಕಡಿಮೆ ವೇತನ ಇವು ಕಾರ್ಮಿಕರನ್ನು ಒಟ್ಟುಗೂಡಿಸಿ ಸಮಾಜವಾದಿ ವ್ಯವಸ್ಥೆಯನ್ನು ಭಾಗಶ:ವಾಗಿಯಾದರೂ ಸಾಧಿಸುವಂತೆ ಮಾಡಿದವು.

ಬಂಡವಾಳಶಾಹಿಯ ಮೇಲೆ ಪರಿಣಾಮ: ಕೈಗಾರಿಕೀಕರಣವು ಪ್ರಮುಖವಾಗಿ ಬಂಡವಾಳದ ಮೇಲೆ ಅವಲಂಬಿತವಾಗಿದೆ. ಹೂಡಿಕೆಗೆ ಲಭ್ಯವಿರುವ ಬಂಡವಾಳವು ಅಭಿವೃದ್ಧಿಯ ವೇಗವನ್ನು ಮತ್ತು ಸಂಪತ್ತನ್ನು ಹೆಚ್ಚಿಸುತ್ತವೆ. ಇದು ಬ್ರಿಟಿಷ್ ಕೈಗಾರಿಕಾ ಅರ್ಥವ್ಯವಸ್ಥೆಯು ಅಭಿವೃದ್ಧಿಯಾಗಲು ಪ್ರಮುಖ ಕಾರಣವಾಗಿದೆ.

ಕಾರ್ಖಾನೆಗಳು ಹಾಗೂ ನಗರೀಕರಣ: ಕೈಗಾರಿಕೀಕರಣವು ಕಾರ್ಖಾನೆಗಳ ಸ್ಥಾಪನೆಗೆ ಕಾರಣವಾಯಿತು. ಹತ್ತಿಯಿಂದ ನೂಲು ತೆಗೆಯುವ ಕ್ರಿಯೆಯು ಮೊಟ್ಟಮೊದಲು ಯಾಂತ್ರೀಕರಣಗೊಂಡಿತು. ನಂತರ ಕಾರ್ಖಾನೆ ವ್ಯವಸ್ಥೆಯು ಅಭಿವೃದ್ಧಿಗೊಂಡಿತು. ಬಹು ಸಂಖ್ಯೆಯ ಕೆಲಸಗಾರರು ಉದ್ಯೋಗ ಅರಸುತ್ತಾ ನಗರಗಳಿಗೆ ವಲಸೆ ಬಂದರು. ಮ್ಯಾಂಚಿಸ್ಟರ್ ನಗರದಲ್ಲಿ ಹತ್ತಿ ಗಿರಣಿಗಳು ಸ್ಥಾಪಿಸಲ್ಪಟ್ಟವು. ಆದ್ದರಿಂದ ಇದನ್ನು ಜಗತ್ತಿನ ಮೊದಲ ಕೈಗಾರಿಕಾ ನಗರವೆಂದು ಕರೆಯುತ್ತಾರೆ. ಕಾರ್ಖಾನೆ ವ್ಯವಸ್ಥೆಯು ನಗರೀಕರಣದ ವೇಗವನ್ನು ಹೆಚ್ಚಿಸಿತು.

ಬಾಲಕಾರ್ಮಿಕ ಪದ್ಧತಿ: ಕೈಗಾರಿಕಾ ಕ್ರಾಂತಿಯಿಂದ ಜನಸಂಖ್ಯೆಯ ಹೆಚ್ಚಳವಾಯಿತು. ಶಿಶು ಮರಣದ ಪ್ರಮಾಣ ಗಮನಾರ್ಹವಾಗಿ ಕಡಿಮೆಯಾಯಿತು. ಅದರೆ ಶಿಕ್ಷಣಕ್ಕೆ ಮಿತವಾದ ಅವಕಾಶವಿತ್ತು. ಮಕ್ಕಳ ಕೆಲಸದ ಸಾಮರ್ಥ್ಯವು ಪ್ರೌಢರೊಂದಿಗೆ ಹೊಲಿಕೆಯಾಗುತ್ತಿದ್ದರೂ ಅವರು ಕಡಿಮೆ ವೇತನಕ್ಕೆ ಕೆಲಸ ಮಾಡುವಂತೆ ಅಪೇಕ್ಷಿಸುತ್ತಿದ್ದರು. ಯಂತ್ರಗಳನ್ನು ಚಲಾಯಿಸಲು ಶಕ್ತಿಯ ಅವಶ್ಯಕತೆ ಇರಲಿಲ್ಲ. ಆದರೆ ಪರಿಣಿತ ಕೆಲಸಗಾರರು ಬೇಕಾಗಿದ್ದರು. ಪರಿಣಿತ ಕೆಲಸಗಾರರು ಸಿಗದೇ ಇದ್ದುದರಿಂದ ಉತ್ಪಾದನಾ ಕೈಗಾರಿಕೆಗಳಲ್ಲಿ ಬಾಲಕಾರ್ಮಿಕರೇ ಆದ್ಯತೆಯ ಆಯ್ಕೆಯಾಗಿದ್ದರು.

ಉಪಸಂಹಾರ: ಹೀಗೆ ಕೈಗಾರಿಕಾ ಕ್ರಾಂತಿಯು ರಾಷ್ಟ್ರಗಳ ಜೀವನದಲ್ಲಿ ಮಹತ್ತರ ಬದಲಾವಣೆಗಳನ್ನು ತಂದಿತು. ಇದು ವಿಪುಲ ಪೌರ ಸೇವೆಗಳನ್ನು ಅಪೇಕ್ಷಿಸುವ ನಗರ ಕೇಂದ್ರಗಳು ಬೆಳೆಯುವಂತೆ ಮಾಡಿತು. ಅದು ವಿಶೇಷ ಹಾಗೂ ಅಂತರಾವಲಂಬನೆಯುಳ್ಳ ಆರ್ಥಿಕ ಜೀವನವನ್ನು ರೂಪಿಸಿತು. ಇದು ನಗರ ಕಾರ್ಮಿಕ ಉದ್ಯೋಗದಾತನ ದಯೆಯನ್ನು ಸಂಪೂರ್ಣವಾಗಿ ಅವಲಂಬಿಸುವಂತೆ ಮಾಡಿತು. ಬಂಡವಾಳಗಾರ ಮತ್ತು ಶ್ರಮಿಕರ ಮಧ್ಯದ ಸಂಬಂಧವನ್ನು ಹದಗೆಡಿಸಿತು. ಮಾರ್ಕ್ಸ್‌ವಾದವು ಅಶಾಂತಿಯ ಪರಿಣಾಮವಾಗಿತ್ತು. ಈ ಕ್ರಾಂತಿಯು ಕಾರ್ಮಿಕರನ್ನು ರಕ್ಷಿಸಿ ಅವಶ್ಯಕ ಸೇವೆಗಳನ್ನು ಒದಗಿಸಲು ಸರ್ಕಾರದ ಹೊಸ ರೀತಿಯ ಹಸ್ತಕ್ಷೇಪದ ಅವಶ್ಯಕತೆಯನ್ನು ತಂದೊಡ್ಡಿತು. ತಾಟಸ್ಥ್ಯ ಧೋರಣೆ ಕ್ರಮೇಣ ಅಮೆರಿಕಾ ಸಂಯುಕ್ತ ಸಂಸ್ಥಾನ, ಬ್ರಿಟನ್ ಹಾಗೂ ಇತರೆಡೆ ಕಲ್ಯಾಣ ಬಂಡವಾಳ ಶಾಹಿತ್ವಕ್ಕೆ ದಾರಿ ಮಾಡಿಕೊಟ್ಟಿತು. ಕೈಗಾರಿಕಾ ಕ್ರಾಂತಿಯು ವೃತ್ತಿಗಳ ಉಗಮ, ಜನಸಂಖ್ಯಾವೃದ್ಧಿ ಮತ್ತು ಜೀವನ ಗುಣಮಟ್ಟದಲ್ಲಿ ಏರಿಕೆಗೆ ಆರ್ಥಿಕ ತಳಹದಿಯನ್ನು ಒದಗಿಸಿತು. ಕೈಗಾರಿಕಾ ಕ್ರಾಂತಿಯು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಗುರಿಯಾಗಿ ಉಳಿದುಕೊಂಡಿದೆ.

ಪ್ರಶ್ನೆಗಳು

ಕೆಳಗಿನವುಗಳನ್ನು ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ ತಲಾ 1 ಅಂಕ)

1. 'ರೆವೊಲೂಷಿಯೋ' ಎಂದರೇನು?
2. ಯಾವ ಕಾಲಾವಧಿಯಲ್ಲಿ ಕೈಗಾರಿಕಾ ಕ್ರಾಂತಿಯು ಘಟಿಸಿತು?
3. ಯಾವ ನಿಗದಿತ ಕ್ಷೇತ್ರದ ಮೇಲೆ ಕೈಗಾರಿಕಾ ಕ್ರಾಂತಿಯು ತನ್ನ ಅಗಾಧ ಪ್ರಭಾವವನ್ನು ಬೀರಿತು?
4. ಕೈಗಾರಿಕಾ ಕ್ರಾಂತಿಯು ಎಲ್ಲಿ ಪ್ರಪ್ರಥಮವಾಗಿ ಆರಂಭಗೊಂಡಿತು?
5. ವಾಟರ್ ಫ್ರೇಮ್ ಅನ್ನು ಯಾರು ಕಂಡು ಹಿಡಿದರು?
6. ಸ್ಪಿನ್ನಿಂಗ್ ಜೆನ್ನಿಯನ್ನು ಯಾರು ಕಂಡು ಹಿಡಿದರು?
7. ಹತ್ತಿ ಕ್ರಾಂತಿಯು ಯಾವ ನಗರದಲ್ಲಿ ಪ್ರಾರಂಭಗೊಂಡಿತು?
8. 'ಪವರ್ ಹೌಸ್ ಆಫ್ ದಿ ನಾರ್ತ್' ಎಂದು ಯಾವ ನಗರವನ್ನು ಕರೆಯಲಾಗಿದೆ?
9. ಕಲ್ಲಿದ್ದಲಿನ ಗಣಿಗಾರಿಕೆಯು ಎಲ್ಲಿ ಮೊದಲು ಪ್ರಾರಂಭಗೊಂಡಿತು?
10. ಜೇಮ್ಸ್ ವ್ಯಾಟ್‌ನು ಯಾವುದಕ್ಕೆ ಹೆಸರುವಾಸಿಯಾಗಿದ್ದಾನೆ?

ಕೆಳಗಿನವುಗಳನ್ನು 2 ಪದ ಅಥವಾ 2 ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ ತಲಾ 2 ಅಂಕಗಳು)

1. ಕ್ರಾಂತಿಯಂದರೇನು?
2. ಕೈಗಾರಿಕಾ ಕ್ರಾಂತಿಯ ಕಾಲದಲ್ಲಿ ಯಾವ ನಿರ್ದಿಷ್ಟ ಕ್ಷೇತ್ರಗಳಲ್ಲಿ ಬದಲಾವಣೆ ಕಂಡು ಬಂದಿತು?

3. ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ಕಂಡುಹಿಡಿದ ಯಾವುದಾದರೂ ಎರಡು ರಾಸಾಯನಿಕಗಳನ್ನು ಹೆಸರಿಸಿ.

4. ಅನಿಲ–ಬೆಳಕನ್ನು ದೊಡ್ಡ ಪ್ರಮಾಣದಲ್ಲಿ ಯಾರು ಕಂಡುಹಿಡಿದರು? ಯಾವ ನಗರದಲ್ಲಿ ಮೊದಲು ಅನಿಲ ಬೆಳಕನ್ನು ಪರಿಚಯಿಸಲಾಯಿತು?

ಕೆಳಗಿನವುಗಳನ್ನು 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ ತಲಾ 5 ಅಂಕಗಳು)

1. ವ್ಯವಸಾಯ, ಸಾರಿಗೆ, ಕಾಲುವೆಗಳು ಮತ್ತು ರಸ್ತೆಗಳು ಈ ಕ್ಷೇತ್ರಗಳ ಮೇಲೆ ಕೈಗಾರಿಕಾ ಕ್ರಾಂತಿಯಿಂದುಂಟಾದ ಪ್ರಮುಖ ಪರಿಣಾಮಗಳೇನು?

2. ಸಮಾಜವಾದ, ಬಂಡವಾಳ ಶಾಹಿತ್ವ, ಕಾರ್ಖಾನೆಗಳು ಹಾಗೂ ನಗರೀಕರಣ ಮತ್ತು ಬಾಲ ಕಾರ್ಮಿಕ ಪದ್ಧತಿಯ ಮೇಲೆ ಕೈಗಾರಿಕಾ ಕ್ರಾಂತಿಯಿಂದುಂಟಾದ ಪ್ರಮುಖ ಪರಿಣಾಮಗಳೇನು?

3. ಕೈಗಾರಿಕಾ ಕ್ರಾಂತಿಯ ಪ್ರಕ್ರಿಯೆಯು ಇಂಗ್ಲೆಂಡ್‌ನಲ್ಲೇ ಏಕೆ ಪ್ರಾರಂಭವಾಯಿತು?

ಕೆಳಗಿನದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ (10 ಅಂಕಗಳು)

1. ಕೈಗಾರಿಕಾ ಕ್ರಾಂತಿಯಿಂದುಂಟಾದ ವಿವಿಧ ಪರಿಣಾಮಗಳನ್ನು ವಿವರಿಸಿ.

8.2 ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮ (1776–83)

ಭೌಗೋಳಿಕ ಅನ್ವೇಷಣೆ ಹಾಗೂ ಅಮೆರಿಕಾದ ಶೋಧನೆ ಯೂರೋಪಿಯನ್ನರು ಅಮೇರಿಕಕ್ಕೆ ವಲಸೆ ಹೋಗಲು ದಾರಿ ಮಾಡಿಕೊಟ್ಟಿತು. ಧಾರ್ಮಿಕ ಸುಧಾರಣೆಯ ನಂತರ ಕ್ಯಾಥೋಲಿಕ್ಕರು ಮತ್ತು ಪ್ರೊಟಸ್ಟಂಟರೂ ಅಮೇರಿಕಕ್ಕೆ ಹೋಗಲಾರಂಭಿಸಿದರು. ಯೂರೋಪಿಯನ್ನರನ್ನು ಹೊತ್ತೊಯ್ದ ಮೊದಲ ಹಡಗು 'ಮೇ–ಫ್ಲವರ್' ಹಾಗೆ ಹೋದ ಮೊದಲ ತಂಡವನ್ನು 'ಪಿಲ್ಗ್ರಿಮ್ ಫಾದರ್ಸ್' ಎಂದು ಕರೆಯಲಾಗಿದೆ. ಅವರಲ್ಲಿ ಹೆಚ್ಚಿನವರು ಬ್ರಿಟೀಷರು, ಫ್ರೆಂಚರು ಹಾಗೂ ಸ್ಪ್ಯಾನಿಷರು. ಬ್ರಿಟೀಷರು ಅಟ್ಲಾಂಟಿಕ್ ಸಮುದ್ರದ ಪೂರ್ವ ತೀರದಲ್ಲಿ (ಈಗಿನ ಯು.ಎಸ್.ಎ) 13 ವಸಾಹತುಗಳನ್ನು ಸ್ಥಾಪಿಸಿದರು ಅವುಗಳೆಂದರೆ– 1. ನ್ಯೂ ಹ್ಯಾಂಪ್‌ಷೈರ್, 2. ಮೆಸ್ಸಾಚುಸೆಟ್ಸ್, 3. ರ್ಹೊಡ್ ಐಲ್ಯಾಂಡ್, 4. ಕನೆಕ್ಟಿಕಟ್, 5. ನ್ಯೂಯಾರ್ಕ್, 6. ನ್ಯೂಜೆರ್ಸಿ, 7. ಮೇರಿ ಲ್ಯಾಂಡ್, 8. ವರ್ಜೀನಿಯಾ, 9. ಉತ್ತರ ಕರೋಲಿನ, 10 .ದಕ್ಷಿಣ ಕರೋಲಿನ, 11. ಡೆಲ್‌ವೇರ್, 12. ಪೆನ್ಸಿಲ್‌ವೇನಿಯಾ, 13. ಜಾರ್ಜಿಯಾ. ಫ್ರೆಂಚರು ಕೆನಡದಲ್ಲಿ ಮತ್ತು ಸ್ಪ್ಯಾನಿಷರು ದಕ್ಷಿಣ ಅಮೇರಿಕಾದಲ್ಲಿ ವಸಾಹತು ಸ್ಥಾಪಿಸಿದರು.

ಬ್ರಿಟೀಷರು ಅಮೇರಿಕದಲ್ಲಿ ತಮ್ಮ ಸಾಮ್ರಾಜ್ಯವನ್ನು ಭದ್ರಗೊಳಿಸಿಕೊಳ್ಳಲು ಹಲವಾರು ಕಾಯಿದೆಗಳನ್ನು ಜಾರಿಗೊಳಿಸಿದರು. ಈ ಕಾಯಿದೆಗಳಿಂದಾಗಿ ವಸಾಹತುಗಾರರಿಗೆ ತಾಯ್ನಾಡಿನ ಮೇಲಿನ ಗೌರವ ಕಡಿಮೆಯಾಗಿ ದ್ವೇಷವು ಹೆಚ್ಚತೊಡಗಿತು. ಬ್ರಿಟೀಷರಿಗೆ ತಮ್ಮಿಂದ ಬೇಕಿರುವುದು ಲಾಭವೇ ಹೊರತು ತಮ್ಮ ಬೆಳವಣಿಗೆಗಳಲ್ಲ ಎಂದು ತಿಳಿದ ವಸಾಹತುಗಾರರು ತಮ್ಮ ಹಕ್ಕು ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡಲು ನಿರ್ಧರಿಸಿದರು.



ಅಮೇರಿಕಾದ 13 ಬ್ರಿಟೀಷ್ ವಸಾಹತುಗಳು

ಕಾರಣಗಳು

1. ಇಂಗ್ಲೆಂಡ್‌ನ ವಾಣಿಜ್ಯ ನೀತಿ:

ವಸಾಹತುಗಳಿರುವುದು ತಾಯ್ನಾಡಿನ ಲಾಭಕ್ಕೆಂದು ತಿಳಿದ ಬ್ರಿಟಿಷ್ ಸಂಸತ್ತು ವಸಾಹತುಗಳ ಮೇಲೆ ಹಲವು ರೀತಿಯ ತೆರಿಗೆ ವಿಧಿಸಿತಲ್ಲದೆ ವ್ಯಾಪಾರ ನಿರ್ಬಂಧಿಸಲು 'ನೌಕಾ ಕಾಯಿದೆ' ಜಾರಿಮಾಡಿತು. ಆ ಕಾಯಿದೆಯ ಮುಖ್ಯ ಲಕ್ಷಣಗಳೆಂದರೆ,

ಅ) ಅಮೇರಿಕಾ ಉತ್ಪಾದಿಸುವ ಕಚ್ಚಾ ವಸ್ತುಗಳನ್ನು (ಕಾಫಿ, ಹತ್ತಿ, ತಂಬಾಕು, ಮುಂತಾದವು) ಇಂಗ್ಲೆಂಡಿಗೆ ಮಾತ್ರವೇ ರಫ್ತು ಮಾಡಬೇಕು.

ಆ) ವಸಾಹತುಗಾರರ ಅಗತ್ಯ ವಸ್ತುಗಳಾದ ಹತ್ತಿ, ಲಿನನ್, ಬಟ್ಟೆ, ಗಾಜು ಸಕ್ಕರೆ ಇತ್ಯಾದಿಗಳನ್ನು ಇಂಗ್ಲೆಂಡಿನಿಂದ ಮಾತ್ರ ಆಮದು ಮಾಡಿಕೊಳ್ಳಬೇಕು.

ಇ) ಇಂಗ್ಲೆಂಡ್ ಯೂರೋಪಿಯನ್ ರಾಷ್ಟ್ರಗಳನ್ನು ವಾಣಿಜ್ಯ ಸ್ಪರ್ಧೆಯಿಂದ ಹೊರಗಿಡುವ ಉದ್ದೇಶದಿಂದ ಅಮೇರಿಕನ್ನರು ತಮ್ಮ ವ್ಯಾಪಾರಕ್ಕೆ ಬ್ರಿಟಷ್ ಹಡಗುಗಳನ್ನು ಮಾತ್ರ ಬಳಸಬೇಕು ಎಂದು ನಿರ್ಬಂಧಿಸಿತು.

ಈ) ಬ್ರಿಟನ್ ಉತ್ಪಾದನೆ ಮಾಡುತ್ತಿದ್ದ ವಸ್ತುಗಳಾದ ಕಬ್ಬಿಣ, ನೀಲಿ, ಕಾಗದ, ಹತ್ತಿ, ಲಿನನ್, ಬಟ್ಟೆ ಇತ್ಯಾದಿಗಳನ್ನು ಅಮೇರಿಕನ್ನರು ಉತ್ಪಾದಿಸಕೊಡದು.

ಉ) ಅಮೇರಿಕನ್ನರು ಬ್ರಿಟಿಷ್ ವರ್ತಕ–ಏಜೆಂಟರನ್ನು ಇಟ್ಟುಕೊಂಡು ಅವರಿಗೆ ರಕ್ಷಣೆ ನೀಡಬೇಕಿತ್ತು.

2. ಸಪ್ತವಾರ್ಷಿಕ ಯುದ್ಧ:

ಫ್ರಾನ್ಸ್‌ನ ಬೆಳವಣಿಗೆಯನ್ನು ಸಹಿಸದ ಇಂಗ್ಲೆಂಡ್, ತನ್ನ ವಸಾಹತುಗಳ ಪಕ್ಕದಲ್ಲಿ ಪ್ರತಿಸ್ಪರ್ಧಿ ಬೆಳೆಯುವುದನ್ನು ಸಹಿಸಲಿಲ್ಲ. ವಸಾಹತುಗಳು ಕೂಡ ಫ್ರಾನ್ಸ್‌ನ ದಾಳಿಯ ಭಯವನ್ನು ಹೊಂದಿದ್ದು, ಫ್ರಾನ್ಸನ ವಿರುದ್ಧ ಇಂಗ್ಲೆಂಡ್ ರಕ್ಷಣೆ ಬಯಸಿದವು. ಆದ್ದರಿಂದ ಇಂಗ್ಲೆಂಡ್ ಫ್ರಾನ್ಸ್‌ನ ಮೇಲೆ 1756 ರಲ್ಲಿ ಯುದ್ಧ ಘೋಷಿಸಿತು, ಅದು 1763ರ

ವರೆಗೆ ನಡೆಯಿತು. ಇದನ್ನು 'ಸಪ್ತವಾರ್ಷಿಕ ಯುದ್ಧ'ವೆಂದು ಕರೆಯಲಾಗಿದೆ. ಈ ಹೋರಾಟದಲ್ಲಿ ಇಂಗ್ಲೆಂಡ್ ಜಯಿಸಿತು, ಯುದ್ಧವು 'ಪ್ಯಾರಿಸ್ ಒಪ್ಪಂದ'ದೊಂದಿಗೆ ಮುಕ್ತಾಯಗೊಂಡಿತು. ಈ ಒಪ್ಪಂದದಂತೆ ಫ್ರಾನ್ಸ್ ಕೆನಡಾವನ್ನು ಇಂಗ್ಲೆಂಡಿಗೆ ಬಿಟ್ಟುಕೊಟ್ಟಿತು. ಇದರೊಂದಿಗೆ ವಸಾಹತುಗಳು ಫ್ರಾನ್ಸ್‌ನ ದಾಳಿಯ ಭಯದಿಂದ ಮುಕ್ತವಾದವು.

3. ಬೌದ್ಧಿಕ ಕಾರಣಗಳು:

ವಸಾಹತುಗಾರರು ತಮ್ಮದೆ ಆದ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದರು. ಅವರ ಜ್ಞಾನೋದಯ ಅವರ ಪರಂಪರೆಯಿಂದಾಗಿತ್ತು. ತತ್ವಜ್ಞಾನಿ **ಜಾನ್ ಆಡಮ್ಸ್** ಪ್ರಕಾರ 'ಕಾಂತ್ರಿಯೆನ್ನುವುದು ಅಮೆರಿಕನ್ನರ ಮೆದುಳು ಹಾಗು ಹೃದಯದಲ್ಲಿತ್ತು, ಆದ್ದರಿಂದ ಅದು ಅಮೆರಿಕ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಮೊದಲೇ ಪ್ರಾರಂಭವಾಗಿತ್ತು'. ಅಮೆರಿಕ ಜ್ಞಾನ ವೃದ್ಧಿಯ ಸಂಕೇತವಾದ **ರೋಜರ್ ವಿಲಿಯ್ಸಂ** ರವರು 'ಧಾರ್ಮಿಕ ಸಹಿಷ್ಣುತೆಯ ಜೊತೆಗೆ ರಾಜ್ಯವನ್ನು ಚರ್ಚ್‌ನಿಂದ ಮುಕ್ತಗೊಳಿಸಬೇಕೆಂದರು' **ಆನ್ ಹಚಿನ್ಸನ್** ರವರು ಕೂಡ 'ಧಾರ್ಮಿಕ ಸಹಿಷ್ಣುತೆ, ಪತ್ರಿಕಾ ಸ್ವಾತಂತ್ರ್ಯ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಒತ್ತಾಯಿಸಿದರು'. ಪ್ರಮುಖ ಬರಹಗಾರರಾದ **ಥಾಮಸ್ ಪೈನ್, ಜಾನ್ ಲಾಕ್, ಸಿಡ್ನಿ ಹ್ಯಾರಿಂಗ್ಟನ್, ಸ್ಯಾಮ್ಯುಯಲ್ ಆಡಮ್ಸ್ ಮತ್ತು ಥಾಮಸ್ ಜಫರ್‌ಸನ್**ರವರು ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಿದರು. **ಇಂಗ್ಲೆಂಡಿನ ಥಾಮಸ್ ಪೈನ್** ತನ್ನ **'ಕಾಮನ್ ಸೆನ್ಸ್'** ಪುಸ್ತಕದಲ್ಲಿ "ಅಮೆರಿಕನ್ನರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು, ಹಾಗೂ ಅವರಿಗೆ ಸ್ವಾತಂತ್ರ್ಯ ಪಡೆಯಲು ಕ್ರಾಂತಿಕಾರಿ ಮಾರ್ಗವು ಅನಿವಾರ್ಯವಾಗಬಹುದು" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಅಮೆರಿಕದ ಖ್ಯಾತ ವಕೀಲರಾದ **ಥಾಮಸ್ ಜಫರ್‌ಸನ್** ರವರು **'ಅಮೆರಿಕ ಸ್ವಾತಂತ್ರ್ಯ ಘೋಷಣೆ'** ಹೊರಡಿಸಿ ಯಾವ ಸರ್ಕಾರ ಜನರ ಮೂಲಭೂತ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡುತ್ತದೆಯೋ ಅಂತಹ ಸರ್ಕಾರವನ್ನು ಕಿತ್ತೊಗೆಯುವ ಹಕ್ಕು ಜನರಿಗಿದೆ ಅಲ್ಲದೆ ಬಲವಂತವಾಗಿ ಹೊಸ ಸರ್ಕಾರವನ್ನು ಸ್ಥಾಪಿಸುವ ಹಕ್ಕಿದೆ' ಎಂದರು. **ಜಾನ್ ಲಾಕ್** ರವರ **'ಟು ಟ್ರಿಟೈಸಸ್ ಆಫ್ ಗೌರ್ನಮೆಂಟ್'** ಎಂಬ ಕೃತಿಯನ್ನು ಅಮೆರಿಕ ಕ್ರಾಂತಿಯ ಬೈಬಲ್ ಎಂದು ಕರೆಯಲಾಗಿದೆ. ಹೀಗೆ ಬುದ್ಧಿಜೀವಿಗಳು, ಮತ್ತು ತತ್ವಜ್ಞಾನಿಗಳು ಅಮೆರಿಕ ಕ್ರಾಂತಿಗೆ ಭದ್ರಬುನಾದಿ ಹಾಕಿದರು.

ಥಾಮಸ್ ಜಫರ್ಸನ್ (1743–1826)



ಥಾಮಸ್ ಜಫರ್ಸನ್ ಅಮೇರಿಕಾದ **'ಸಂಸ್ಥಾಪನಾ ಪಿತಾಮಹ'**. **ಇವರು** ಸ್ವತಂತ್ರ ಘೋಷಣೆಯ ಪ್ರಮುಖ ಕರ್ತೃ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದ 3ನೇ ಅಧ್ಯಕ್ಷ. ಅಮೇರಿಕಾ ಸ್ವತಂತ್ರ ಘೋಷಣೆಯ ಪ್ರಕಾರ ಅಮೇರಿಕಾದ 13 ವಸಾಹತುಗಳು ಬ್ರಿಟಿಷ್ ಸಾಮ್ರಾಜ್ಯದಿಂದ ಹೊರಬಂದು ಸ್ವಾತಂತ್ರ್ಯ ಘೋಷಿಸಿಕೊಂಡದ್ದನ್ನು ಮತ್ತು ಪ್ರತ್ಯೇಕವಾದದ್ದನ್ನು ಸಮರ್ಥಿಸುತ್ತದೆ. ಇದು ಜುಲೈ 4, 1776 ರಂದು 2ನೇ ಕಾಂಟಿನೆಂಟಲ್ ಕಾಂಗ್ರೆಸಿನಿಂದ ಅನುಮೋದಸಲ್ಪಟ್ಟಿತು. ಈ ದಿನವನ್ನು ಪ್ರತಿ ವರ್ಷ ಅಮೇರಿಕದಲ್ಲಿ ಸ್ವತಂತ್ರ ದಿನವನ್ನಾಗಿ ಆಚರಿಸಲಾಗುತ್ತಿದೆ.

4. ಬ್ರಿಟಿಷ್ ತೆರಿಗೆ ನೀತಿ:

ಸಪ್ತವಾರ್ಷಿಕ ಯುದ್ಧದಿಂದ ಬ್ರಿಟನ್ ಮೇಲೆ ಆರ್ಥಿಕ ಹೊರೆ ಹೆಚ್ಚಾಯಿತು. ಅದನ್ನು ಭರಿಸಲು ವಸಾಹತುಗಳು ಆಮದು ಮಾಡಿಕೊಳ್ಳುತ್ತಿದ್ದ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಿತು.

1764 ರಲ್ಲಿ ಜಾರಿ ಮಾಡಿದ **ಸಕ್ಕರೆ ಮತ್ತು ಕಾಕಂಬಿ ಕಾಯಿದೆ**ಯಂತೆ ಸಕ್ಕರೆ ಮತ್ತು ಕಾಕಂಬಿ ಮೇಲೆ ಅಧಿಕ ತೆರಿಗೆ ವಿಧಿಸಿತು. ಕಾಕಂಬಿ ಮೇಲಿನ ತೆರಿಗೆ ಮದ್ಯ ತಯಾರಿಕೆಯನ್ನು ಕುಂಠಿತಗೊಳಿಸಿತು. ಇದರಿಂದ ಕಳ್ಳಸಾಗಣಿಕ

ಚಟುವಟಿಕೆ ಹೆಚ್ಚಾಗಿ ವಸಾಹತುಗಾರರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಆದ್ದರಿಂದ ಅವರು ಬಹಿರಂಗವಾಗಿ ಈ ತೆರಿಗೆಯನ್ನು ವಿರೋಧಿಸಿದರು. ಬ್ರಿಟಿಷ್ ಸಂಸತ್ತು ಸಕ್ಕರೆ ಹಾಗೂ ಕಾಕಂಬಿ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲೇ ಬೇಕಾಯಿತು.

ಬ್ರಿಟಿಷ್ ಸಂಸತ್ತು 1764 ರಲ್ಲಿ **ಸ್ಟ್ಯಾಂಪ್ ಕಾಯಿದೆ** ಜಾರಿಮಾಡಿತು. ಈ ಕಾಯಿದೆಯಂತೆ ವಸಾಹತುಗಾರರು ಅಧಿಕೃತ ದಾಖಲೆಗಳ ಮೇಲೆ ಸ್ಟ್ಯಾಂಪ್ ಅಂಟಿಸಬೇಕಾಗಿತ್ತು. ವಸಾಹತುಗಾರರು ಈ ಕಾಯಿದೆನ್ನು ವಿರೋಧಿಸಿದರು. ತಮಗೆ ಪ್ರಾತಿನಿಧ್ಯ ನೀಡದ ಬ್ರಿಟಿಷ್ ಸಂಸತ್ತಿಗೆ ತಮ್ಮ ಮೇಲೆ ತೆರಿಗೆ ವಿಧಿಸುವ ಹಕ್ಕಿಲ್ಲ ಎಂದರು, **"ಪ್ರಾತಿನಿಧ್ಯವಿಲ್ಲದೆ ತೆರಿಗೆಯಿಲ್ಲ"** ಎಂಬುದು ಅವರ ಘೋಷಣೆಯಾಗಿತ್ತು. ಸ್ಟ್ಯಾಂಪ್‌ಗಳನ್ನು ಸುಟ್ಟು ಹಾಕುವುದರ ಮೂಲಕ ತಮ್ಮ ಕ್ರೋಧವನ್ನು ವ್ಯಕ್ತಪಡಿಸಿದರು. ಇದರಿಂದಾಗಿ ಸಂಸತ್ತು ಈ ಕಾಯಿದೆಯನ್ನು ಹಿಂತೆಗೆದುಕೊಳ್ಳಬೇಕಾಯಿತು.

ಬ್ರಿಟಿಷ್ ಸಂಸತ್ತು 1767 ರಲ್ಲಿ **ಟೌನ್‌ಷೆಂಡ್** ಕಾಯಿದೆ ಜಾರಿಗೊಳಿಸಿತು. ಈ ಕಾಯಿದೆ ಗಾಜು, ಕಾಗದ ಮತ್ತು ಚಹಗಳ ಮೇಲೆ ಅಧಿಕ ತೆರಿಗೆ ವಿಧಿಸಿತು ಈ ತೆರಿಗೆಗಳನ್ನು ಸಂಗ್ರಹಿಸುವ ಅಧಿಕಾರಿಗಳ ಸಹಾಯಕ್ಕಾಗಿ ಬ್ರಿಟಿಷ್ ಸಂಸತ್ತು ಸೇನೆಯನ್ನು ಕಳುಹಿಸಿತು, ಆದಗ್ಯೂ ವಸಾಹತುಗಾರರು ಈ ಕಾಯಿದೆಯನ್ನು ವಿರೋಧಿಸಿದರು. **ಮೊಸ್ಸಾಚುಸೆಟ್ಸ** ಜನರು ದಂಗೆಎದ್ದರು, ದಂಗೆಯನ್ನು ತಡೆಯಲು ಬ್ರಿಟನ್ ಸೇನಾಪಡೆಯನ್ನು ಕಳುಹಿಸಿತು.

1768 ರಲ್ಲಿ ಬ್ರಿಟಿಷ್ ಸೇನಾಪಡೆ ಬೋಸ್ಟನ್ ಅನ್ನು ವಶಪಡಿಸಿಕೊಂಡಿತು. ವಸಾಹತುಗಾರರು ಹಾಗೂ ಬ್ರಿಟಿಷ್ ಸೇನಾಪಡೆ ನಡುವೆ ನಡೆದ ಹೋರಾಟದಲ್ಲಿ 5 ಜನ ಅಮೇರಿಕನ್ನರು ಕೊಲ್ಲಲ್ಪಟ್ಟರು, ಹಲವರು ಗಾಯಗೊಂಡರು ಇದು **'ಬೋಸ್ಟನ್ ಕಗ್ಗೊಲೆ'**(1770) ಎಂದು ಕರೆಯಲ್ಪಟ್ಟಿತು. ಬೋಸ್ಟನ್ ಕಗ್ಗೊಲೆಯ ಪರಿಣಾಮವಾಗಿ ಬ್ರಿಟಿಷ್ ಸಂಸತ್ತು ಚಹಾದ ಮೇಲಿನ ತೆರಿಗೆಯನ್ನು ಹೊರತು ಪಡಿಸಿ ಉಳಿದ ತೆರಿಗೆಯನ್ನು ರದ್ದುಗೊಳಿಸಿತು. ಇದು ಬ್ರಿಟಿಷ್ ಸಂಸತ್ತಿಗೆ ವಸಾಹತುಗಳ ಮೇಲೆ ತೆರಿಗೆ ವಿಧಿಸುವ ಹಕ್ಕು ಇದೆ ಎಂದು ತೋರಿಸಿಲು ಮಾಡಿದ್ದಾಗಿತ್ತು.

ಬೋಸ್ಟನ್ ಟೀ ಪಾರ್ಟಿ (ಚಹ ಕೂಟ–1773)

ಬ್ರಿಟಿಷ್ ಸಂಸತ್ತು 1773 ರಲ್ಲಿ ಕಾನೂನು ಜಾರಿ ಮಾಡಿ, ವಸಾಹತುಗಳಿಗೆ ಟೀ ಪುಡಿಯನ್ನು ಕೊಂಡೊಯ್ಯುವ ಅಧಿಕಾರವನ್ನು ಈಸ್ಟ್ ಇಂಡಿಯಾ ಕಂಪನಿಗೆ ನೀಡಿತು. ಇದಕ್ಕಿಂತ ಕಡಿಮೆ ಬೆಲೆಗೆ ಕಳ್ಳ ಮಾರ್ಗದಲ್ಲಿ ಟೀ ಪುಡಿ ಸಿಗುತ್ತಿದ್ದುದ್ದರಿಂದ ವಸಾಹತುಗಾರರು ಇದನ್ನು ಪ್ರತಿಭಟಿಸಿದರು. ನ್ಯೂಯಾರ್ಕ್ ಹಾಗೂ ಫಿಲಿಡೆಲ್ಫಿಯ ಬಂದರಿಗೆ ಬಂದ ಮೊದಲ ಸರಕಿನ ಹಡಗನ್ನು ಹಿಂದಕ್ಕೆ ಕಳುಹಿಸಿದರು. ಆದರೆ ಮತ್ತೊಂದು ಹಡಗು ಚಹ ಪುಡಿಯೊಂದಿಗೆ 1773 ರಲ್ಲಿ ಬೋಸ್ಟನ್ ಬಂದರಿಗೆ ಬಂದಾಗ **ಪಾಲ್ ರೇವರ್** ನೇತೃತ್ವದಲ್ಲಿ ವಸಾಹತುಗಾರರು ರೆಡ್ ಇಂಡಿಯನ್ನರ ವೇಷದಲ್ಲಿ ಹಡಗನ್ನು ಪ್ರವೇಶಿಸಿ ಅಲ್ಲಿದ್ದ ಚಹ ಪುಡಿ ಪಟ್ಟಿಗೆಯನ್ನು ಸಮುದ್ರಕ್ಕೆಸೆದರು. ಈ ಘಟನೆಯನ್ನು **"ಬೋಸ್ಟನ್ ಟೀ ಪಾರ್ಟಿ"** ಎಂದು ಕರೆಯಲಾಗಿದೆ.

5. ಅಸಹನೀಯ ಶಾಸನಗಳು:

ಬೋಸ್ಟನ್ ಚಹ ಹಗರಣಕ್ಕೆ ಪ್ರತಿಕಾರ ತೆಗೆದುಕೊಳ್ಳಲು ಬ್ರಿಟಿಷ್ ಪ್ರಧಾನಿ ಲಾರ್ಡ್ ನಾರ್ಥ್ ಬ್ರೂಕ್ 1774 ರಲ್ಲಿ ನಾಲ್ಕು ನಿರ್ಬಂಧಕ (coercive) ಶಾಸನಗಳನ್ನು ಜಾರಿಗೆ ತಂದನು. ಅವುಗಳೆಂದರೆ,

1) ಬೋಸ್ಟನ್ ಚಹ ಹಗರಣದಿಂದ ಬ್ರಿಟನ್‌ಗೆ ಆದ ನಷ್ಟವನ್ನು ಮೆಸ್ಸಾಚುಸೆಟ್ಸತುಂಬಿಕೊಡುವ ವರೆಗೆ ಬೋಸ್ಟನ್ ಬಂದರನ್ನು ಮುಚ್ಚಬೇಕು.

2) ಮೆಸ್ಸಾಚುಸೆಟ್ಸ್ ವಸಾಹತುವಿನ ಸನ್ನದನ್ನು ರದ್ದುಗೊಳಿಸಿ ಅಲ್ಲಿಯ ಸೈನ್ಯಾಧಿಕಾರಿಗೆ ಪೂರ್ಣ ಅಧಿಕಾರ ನೀಡಬೇಕು.

3) ಬ್ರಿಟಿಷ್ ಸೈನಿಕರು ಖಾಸಗಿ ಮನೆಗಳಲ್ಲಿ ವಾಸಿಸಲು ಅನುಮತಿ ನೀಡಬೇಕು.

4) ಮೆಸ್ಸಾಚುಸೆಟ್ಸ ನ್ಯಾಯಾಲಯದಲ್ಲಿ ಬ್ರಿಟಿಷ್ ಸೈನಿಕರನ್ನು ವಿಚಾರಣೆಗೆ ಒಳಪಡಿಸಕೊಡದು.

ಈ ಶಾಸನಗಳನ್ನು ವಸಾಹತುಗಾರರು 1774 ರ ಅಸಹನೀಯ ಶಾಸನಗಳೆಂದು ಕರೆದರು, ಆದರೆ ವಸಾಹತುಗಾರರನ್ನು ಒಂದುಗೂಡಿಸಲು ಇವು ಸಹಕಾರಿಯಾದವು.

6. ಕ್ಯೂಬೆಕ್ ಕಾಯಿದೆ:

1774 ರಲ್ಲಿ ಜಾರಿಗೆ ತಂದ ಕ್ಯೂಬೆಕ್ ಕಾಯಿದೆ ಫ್ರೆಂಚರು ಮೊದಲು ಹೊಂದಿದ್ದ ಓಹಿಯೋ ರಾಜ್ಯದ

ಹೆಚ್ಚಿನ ಪ್ರದೇಶಗಳನ್ನು ಅವರಿಗೆ ನೀಡಿತು. ಇದು ವಸಾಹತುಗಾರರಿಗೆ ಇಷ್ಟವಾಗಲಿಲ್ಲ ಕಾರಣ ಅವರು ಪಶ್ಚಿಮದೆಡೆಗೆ ವಿಸ್ತರಿಸುವ ಬಯಕೆ ಹೊಂದಿದ್ದರು. ಅಲ್ಲದೆ ಈ ಕಾಯಿದೆ ಕೆನಡದಲ್ಲಿನ ಫ್ರೆಂಚರಿಗೆ ಕ್ಯಾಥೋಲಿಕ್ ಪಂಥ ಅನುಸರಿಸಲು ಅವಕಾಶ ನೀಡಿತು. ಇದನ್ನು ಅಮೆರಿಕಾದ ಪ್ರೊಟಸ್ಟಂಟರು ವಿರೋಧಿಸಿದರು. ವಸಾಹತುಗಾರರು ಇದನ್ನು ಬ್ರಿಟಿಷರ ಒಡೆದು ಆಳುವ ನೀತಿ ಎಂದು ಭಾವಿಸದ್ದರಿಂದ ಅವರ ವಿರೋಧ ತೀವ್ರವಾಯಿತು.

ಕ್ರಾಂತಿಯ ಗತಿ:

ಸೆಪ್ಟೆಂಬರ್ 5, 1774 ರಂದು ಜಾರ್ಜಿಯ ಹೊರತುಪಡಿಸಿ ಉಳಿದ 12 ವಸಾಹತುಗಳ 56 ಪ್ರತಿನಿಧಿಗಳು ಫಿಲೆಡೆಲ್ಫಿಯಾದಲ್ಲಿ ಸಭೆ ಸೇರಿದರು 'ಪ್ರಥಮ ಫಿಲೆಡೆಲ್ಫಿಯಾ' ಅಧಿವೇಶನದಲ್ಲಿ ಅವರು ಭವಿಷ್ಯದ ಕಾರ್ಯಯೋಜನೆಯನ್ನು ನಿರ್ಧರಿಸಿದರು. 'ಹಕ್ಕುಗಳ ಘೋಷಣೆ' ಸಿದ್ಧಪಡಿಸಿದರು. ಅಲ್ಲದೆ ವಸಾಹತುಗಾರರ ಒಪ್ಪಿಗೆ ಇಲ್ಲದೆ ತೆರಿಗೆ ವಿಧಿಸಬಾರದೆಂದು ನಿಶ್ಚಯಿಸಿದರು.

2ನೇ ಫಿಲೆಡೆಲ್ಫಿಯಾ ಅಧಿವೇಶನ (1775) ಮೊದಲ ಫಿಲೆಡೆಲ್ಫಿಯಾ ಅಧಿವೇಶನದ ನಂತರ ಬ್ರಿಟಿಷ್ ಸೈನಿಕರು ಹಾಗೂ ವಸಾಹತುಗಾರರ ನಡುವೆ ಮೆಸಾಚುಸೆಟ್ಸನ ಲೆಕ್ಸಿಂಗಟನ್ ನಲ್ಲಿ ಹೋರಾಟ ನಡೆಯಿತು. ಇದರ ಪರಿಣಾಮ 1775 ರಲ್ಲಿ 2ನೇ ಫಿಲೆಡೆಲ್ಫಿಯಾ ಅಧಿವೇಶನ ಜರುಗಿತು. ಈಗಲೂ ವಸಾಹತುಗಾರರು ಬ್ರಿಟಿಷ್ ರಾಜಮನೆತನವನ್ನು ಶಾಂತಿಯುತ ಪರಿಹಾರಕ್ಕಾಗಿ ಕೇಳಿಕೊಂಡರು. ಆದರೆ ಬ್ರಿಟಿಷ್ ಅರಸ 3ನೇ ಜಾರ್ಜ್ ವಸಾಹತುಗಾರರನ್ನು ಕ್ರಾಂತಿಕಾರಿಗಳೆಂದು ಭಾವಿಸಿದನು. ಈ ಸಭೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಪ್ರತಿನಿಧಿಗಳು ಜಾರ್ಜ್ ವಾಷಿಂಗ್‌ಟನ್‌ರವರನ್ನು ವಸಾಹತುಗಳ ಸೈನ್ಯದ ಮುಖ್ಯಸ್ಥನನ್ನಾಗಿ ನೇಮಿಸಿದರು. ಹಾಗೂ ವಸಾಹತುಗಾರರು ತಮ್ಮ ಮಾತೃ ದೇಶ ಇಂಗ್ಲೆಂಡ್‌ನ ಹಿಡಿತದಿಂದ ಸ್ವಾತಂತ್ರ್ಯವನ್ನು 1776ರ ಜುಲೈ 4 ರಂದು ಘೋಷಿಸಿಕೊಂಡರು. ಇಂದಿಗೂ ಈ ದಿನವನ್ನು ಅಮೆರಿಕಾದ ಸ್ವಾತಂತ್ರ್ಯ ದಿನವೆಂದು ಆಚರಿಸಲಾಗುತ್ತಿದೆ.

ವಸಾಹತುಗಳ ಮನೋಭಾವ ಬ್ರಿಟಿಷ್‌ರನ್ನು ಕೆರಳಿಸಿತು. ಅವರು ಅಮೇರಿಕದ ಮೇಲೆ ಯುದ್ಧ ಸಾರಿದರು. ಜುಲೈ 1775 ರಲ್ಲಿ **ಬಂಕರ್ ಹಿಲ್** ಎಂಬಲ್ಲಿ ನಡೆದ ಕದನದಲ್ಲಿ ವಸಾಹತು ಸೈನ್ಯ ಸರ್ ವಿಲಿಯಂ ಹೋ ನೇತೃತ್ವದ ಬ್ರಿಟಿಷ್ ಸೈನ್ಯದಿಂದ ಸೋಲಿಸಲ್ಪಟ್ಟಿತು, ನಂತರ ನಡೆದ **ಟ್ರೆಂಟನ್** ಮತ್ತು **ಪ್ರಿನ್ಸ್‌ಟನ್** ಕದನದಲ್ಲಿ ವಸಾಹತು ಸೈನ್ಯ ಜಯಗಳಿಸಿತು. ಇದು ಜಾರ್ಜ್ ವಾಷಿಂಗ್‌ಟನ್‌ರವರ ಕೀರ್ತಿ ಹಾಗೂ ರಾಷ್ಟ್ರದ ಗೌರವ ಹೆಚ್ಚಿಸಿತು. ಅಕ್ಟೋಬರ್ 17, 1777 ರಂದು ನೆಡೆದ **ಸರಟೋಗ** ಕದನದಲ್ಲಿ ಬ್ರಿಟಿಷ್ ಸೇನಾ ಮುಖಂಡ ಸಂಪೂರ್ಣವಾಗಿ ಸೋತು ಶರಣಾದನು. ಈ ನಡುವೆ ಫ್ರಾನ್ಸ್, ಸ್ಪೇನ್ ಹಾಗೂ ಹಾಲೆಂಡ್‌ಗಳು ಅಮೇರಿಕನ್ನರನ್ನು ಯುದ್ಧದಲ್ಲಿ ನೈತಿಕವಾಗಿ ಬೆಂಬಲಿಸಿದವು ಫ್ರಾನ್ಸ್ ಸಕ್ರಿಯವಾಗಿ ಪಾಲ್ಗೊಂಡು ಅಮೆರಿಕನ್ನರಿಗೆ ಸೈನಿಕ ನೆರವನ್ನು ನೀಡಿತು. 1781 ರಲ್ಲಿ ಜಾರ್ಜ್ ವಾಷಿಂಗ್‌ಟನ್ ಮತ್ತು ಫ್ರೆಂಚ್ ಸೇನಾ ನಾಯಕ ಲಫಾಯಟೆಯ ಜಂಟಿ ಸೈನ್ಯ **ಯಾರ್ಕ್‌ಟೌನ್**ಗೆ ಮುತ್ತಿಗೆ ಹಾಕಿದವು. ಲಾರ್ಡ್ ಕಾರ್ನ್‌ವಾಲಿಸ ನಾಯಕತ್ವದ ಬ್ರಿಟಿಷ್ ಸೈನ್ಯ ಸಂಪೂರ್ಣವಾಗಿ ಸೋತು ಶರಣಾಯಿತು. ಹೀಗೆ 1783 ರಲ್ಲಿ ನಡೆದ ಪ್ಯಾರಿಸ್ ಒಪ್ಪಂದದೊಡನೆ ಯುದ್ಧವು ಕೊನೆಗೊಂಡಿತು ಹಾಗೂ ಅಮೇರಿಕ ಸ್ವತಂತ್ರ ವಾಯಿತು.

ಅಮೇರಿಕ ಸ್ವಾತಂತ್ರ್ಯ ಸಂಗ್ರಾಮದ ಸಹಿ

ಸರಟೊಗದಲ್ಲಿ ಬ್ರಿಟಿಷರ ಶರಣಾಗತಿ.

ಪರಿಣಾಮಗಳು:

ಯು.ಎಸ್.ಎ ಉಗಮ:

ಅಮೆರಿಕ ಸಂಯುಕ್ತ ಸಂಸ್ಥಾನ ಎಂಬ ಹೊಸ ರಾಷ್ಟ್ರವು ಅಸ್ತಿತ್ವಕ್ಕೆ ಬಂದಿತು. ಅವರು ಗಣರಾಜ್ಯ ಮಾದರಿಯ ಸರ್ಕಾರ ಅಳವಡಿಸಿಕೊಂಡರು, 1787 ರಲ್ಲಿ ಅಮೆರಿಕವು ಸಂಯುಕ್ತ ಮಾದರಿಯ ಗಣತಂತ್ರ ಸರ್ಕಾರವನ್ನು ಅಳವಡಿಸಿಕೊಂಡಿತು. ಇದು ಲಿಖಿತ ಸಂವಿಧಾನವನ್ನು ಅಳವಡಿಸಿಕೊಂಡ ವಿಶ್ವದ ಮೊಟ್ಟಮೊದಲ ರಾಷ್ಟ್ರ ಎನಿಸಿಕೊಂಡಿತು. ಜಾರ್ಜ್ ವಾಷಿಂಗ್‌ಟನ್ ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಥಮ ಅಧ್ಯಕ್ಷನಾದನು.

ಇಂಗ್ಲೆಂಡ್‌ಗೆ ನಷ್ಟ:

1783 ರ ಪ್ಯಾರಿಸ್ ಒಪ್ಪಂದದ ಪ್ರಕಾರ ಇಂಗ್ಲೆಂಡ್ 13 ಸಂಪನ್ಮೂಲ ವಸಾಹತುಗಳನ್ನು ಕಳೆದುಕೊಂಡು ಆರ್ಥಿಕವಾಗಿ ಅಧಿಕ ನಷ್ಟಕ್ಕೊಳಗಾಯಿತು.

ಪ್ರಜಾಪ್ರಭುತ್ವದ ಜಯಭೇರಿ:

ಅಮೆರಿಕನ್ನರ ಗೆಲುವು ಪ್ರಜಾಪ್ರಭುತ್ವ ತತ್ವಗಳನ್ನು ಪ್ರಪಂಚದಾದ್ಯಂತ ಬಲಪಡಿಸಿತು. ಇದು ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುವ ರಾಷ್ಟ್ರಪ್ರೇಮಿಗಳಿಗೆ ಸ್ಫೂರ್ತಿಯಾಯಿತು.

ಇಂಗ್ಲೆಂಡಿಗೆ ತಕ್ಕ ಪಾಠ:

ಅಮೆರಿಕ ಕ್ರಾಂತಿಯ ನಂತರ 13 ಸಂಪನ್ಮೂಲ ವಸಾಹತುಗಳನ್ನು ಕಳೆದುಕೊಂಡ ಇಂಗ್ಲೆಂಡ್ ಇತರ ವಸಾಹತುಗಳ ಬಗ್ಗೆ ತನ್ನ ಮನೋಭಾವನ್ನು ಬದಲಾಯಿಸಿಕೊಂಡಿತು. 'ಸೂರ್ಯ ಮುಳುಗದ ಸಾಮ್ರಾಜ'ವೆಂಬ ಬ್ರಿಟಿಷರ ನಂಬಿಕೆಗೆ ಕೊಡಲಿ ಪೆಟ್ಟು ಬಿದ್ದಿತು.

ಫ್ರಾನ್ಸ್ ಕ್ರಾಂತಿಗೆ ಪ್ರೇರಣೆ:

ಅಮೆರಿಕ ಕ್ರಾಂತಿಯಲ್ಲಿ ಪಾಲ್ಗೊಂಡ ಫ್ರಾನ್ಸಿನ ಸೈನಿಕರು ಅಮೆರಿಕನ್ನರ ಕ್ರಾಂತಿಕಾರಿ ಘೋಷಣೆಗಳಿಂದ ಪ್ರೇರಿತರಾದರು, ಇದು 1789 ರ ಫ್ರಾನ್ಸ್ ಕ್ರಾಂತಿಗೆ ಕಾರಣವಾಯಿತು.

ಇಂಗ್ಲೆಂಡಿನಲ್ಲಿ ರಾಜಪ್ರಭುತ್ವದ ಅಂತ್ಯ:

ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೀನಾಯ ಸೋಲು ಕಂಡ ಇಂಗ್ಲೆಂಡಿನ ಅರಸ 3ನೇ ಜಾರ್ಜ್ ತನ್ನ ಪ್ರತಿಷ್ಠೆ ಮತ್ತು ಜನಪ್ರಿಯತೆಯನ್ನು ಕಳೆದುಕೊಂಡು ಸಂಸತ್ತಿನ ಅಧೀನಕ್ಕೆ ಒಳಪಟ್ಟನು. ಇದು ಅಲ್ಲಿ ಸಂವಿಧಾನಾತ್ಮಕ ರಾಜಪ್ರಭುತ್ವ ಅಸ್ತಿತ್ವಕ್ಕೆ ಬರಲು ಕಾರಣವಾಯಿತು.

ಜಾರ್ಜ್ ವಾಷಿಂಗ್‌ಟನ್ (1732–1799) ಜಾರ್ಜ್ ವಾಷಿಂಗ್‌ಟನ್ ಫೆಬ್ರವರಿ 22, 1732 ರಲ್ಲಿ ಜನಿಸಿದನು. ಅವನ ತಂದೆ ಅಗಸ್ಟಿನ್ ವಾಷಿಂಗ್‌ಟನ್ ಮತ್ತು ತಾಯಿ ಮೇರಿ ಬಾಲ್ ವಾಷಿಂಗ್‌ಟನ್. ಈತನ ತಂದೆ ವರ್ಜಿನಿಯಾದಲ್ಲಿ ರೈತನಾಗಿದ್ದ. ಈತನು ಯುರೋಪಿನಲ್ಲಿ ಜರುಗಿದ ಸಪ್ತ ವಾರ್ಷಿಕ ಯುದ್ಧದಲ್ಲಿ ಸೈನಿಕ ಅನುಭವವನ್ನು ಪಡೆದುಕೊಂಡನು. ಇದು ಈತನನ್ನು ಒಬ್ಬ ಸಮರ್ಥ ನಾಯಕನನ್ನಾಗಿ ಪ್ರಸಿದ್ಧಿಗೊಳಿಸಿತು. ಯುದ್ಧ ಮುಗಿದ ನಂತರ ತನ್ನ ಜಮೀನಿಗೆ ಹಿಂದಿರುಗಿದ ಈತನನ್ನು ವಸಾಹತು ಸೇನೆಯ ನಾಯಕತ್ವ ವಹಿಸಿಕೊಳ್ಳಲು ಕರೆಸಲಾಯಿತು. ಸೇನಾ ನಾಯಕತ್ವ ವಹಿಸಿಕೊಂಡ ವಾಷಿಂಗ್‌ಟನ್ ಸೇನೆಯಲ್ಲಿ ಹೊಸ ಉತ್ಸಾಹವನ್ನು ತುಂಬಿ ಯಶಸ್ವಿಯಾಗಿ ಮುನ್ನಡೆಸಿದನು. ಅಮೆರಿಕ ಸ್ವಾತಂತ್ರ್ಯ ಸಂಗ್ರಾಮ ಮುಗಿದ ನಂತರ ಜಾರ್ಜ್ ವಾಷಿಂಗ್‌ಟನ್‌ನು ಅಮೆರಿಕದ ಪ್ರಥಮ ಅಧ್ಯಕ್ಷನಾದನು. 1799 ರಲ್ಲಿ ನಿಧನ ಹೊಂದಿದನು.

ಪ್ರಶ್ನೆಗಳು:

ಕೆಳಗಿನವುಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಒಂದು ಅಂಕ)

1. ಅಮೆರಿಕ ಸ್ವಾತಂತ್ರ್ಯ ಸಂಗ್ರಾಮ ನಡೆದ ವರ್ಷ ಯಾವುದು?
2. ವಸಾಹತು ಸೇನಾ ಮುಖ್ಯಸ್ಥರು ಯಾರು?
3. ಅಮೆರಿಕ ಸಂಯುಕ್ತ ಸಂಸ್ಥಾನದ ಪ್ರಥಮ ಅಧ್ಯಕ್ಷ ಯಾರು?
4. ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ಇಂಗ್ಲೆಂಡಿನ ಅರಸ ಯಾರು?
5. ಅಮೆರಿಕಾ ಸ್ವತಂತ್ರ ಸಂಗ್ರಾಮದ ಘೋಷಣೆ ಸಿದ್ಧಪಡಿಸಿದವರು ಯಾರು?
6. ಯಾವ ವರ್ಷ ಅಮೆರಿಕ ಸಂವಿಧಾನವನ್ನು ಆಳವಡಿಸಿಕೊಳ್ಳಲಾಯಿತು?

ಕೆಳಗಿನವುಗಳಿಗೆ ಎರಡು ಪದ ಅಥವಾ ಎರಡು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಎರಡು ಅಂಕಗಳು)

1. ಅಮೆರಿಕದಲ್ಲಿನ ಬ್ರಿಟಿಷರ ಯಾವುದಾದರು ಎರಡು ವಸಾಹತುಗಳನ್ನು ಹೆಸರಿಸಿ.
2. 'ಬೋಸ್ಟನ್ ಟೀ ಪಾರ್ಟಿ' ಎಂದರೇನು?
3. ನೌಕಾ ಕಾಯಿದೆಯ ಯಾವುದಾದರು ಎರಡು ಅಂಶಗಳನ್ನು ತಿಳಿಸಿ?
4. ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದ ಮೇಲೆ ಪ್ರಭಾವ ಬೀರಿದ ಇಬ್ಬರು ತತ್ವಜ್ಞಾನಿಗಳನ್ನು ಹೆಸರಿಸಿ.
5. ಅಮೆರಿಕಾ ಸ್ವಾತಂತ್ರ್ಯ ಘೋಷಣೆಯನ್ನು ಯಾರು ಮತ್ತು ಯಾವ ವರ್ಷ ಸಿದ್ಧಪಡಿಸಿದರು?
6. ಇಂಗ್ಲೆಂಡ್ ವಸಾಹತುಗಳ ಮೇಲೆ ಹೇರಿದ ಯಾವುದಾದರುಎರಡು ತೆರಿಗೆಗಳನ್ನು ಹೆಸರಿಸಿ.

ಕೆಳಗಿನವುಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಐದು ಅಂಕಗಳು)

1. ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳನ್ನು ವಿವರಿಸಿ.

ಕೆಳಗಿನವುಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ ಹತ್ತು ಅಂಕಗಳು)

1. ಅಮೆರಿಕ ಸ್ವಾತಂತ್ರ್ಯ ಸಂಗ್ರಾಮದ ಕಾರಣಗಳನ್ನು ವಿವರಿಸಿ.

8.3 1789 ರ ಫ್ರಾನ್ಸಿನ ಕ್ರಾಂತಿ

1789ರ ಫ್ರಾನ್ಸಿನ ಕ್ರಾಂತಿಯು, ಸಾಮಾನ್ಯವಾಗಿ ಯೂರೋಪ್ ಮತ್ತು ವಿಶ್ವದ ಹಾಗೂ ವಿಶಿಷ್ಠವಾಗಿ ಫ್ರಾನ್ಸಿನ ಇತಿಹಾಸದಲ್ಲಿನ ಅತ್ಯಂತ ಪ್ರಮುಖ ಘಟನೆ. ಹಲವಾರು ಶತಮಾನಗಳಿಂದ ಫ್ರಾನ್ಸಿನಲ್ಲಿದ್ದ ನಿರಂಕುಶ ರಾಜಪ್ರಭುತ್ವವನ್ನು ಈ ಕ್ರಾಂತಿ ಅಂತ್ಯಗೊಳಿಸಿತು. ಇದು ವಿಶ್ವಕ್ಕೆ ಹೊಸ ವಿಚಾರಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳನ್ನು ನೀಡಿತು. "ಫ್ರಾನ್ಸಿನ ಕ್ರಾಂತಿಯ ಆರಂಭದಿಂದಾಗಿ ಯೂರೋಪಿನ ಇತಿಹಾಸವೆಲ್ಲವೂ ಒಂದು ರಾಷ್ಟ್ರದಲ್ಲಿ, ಒಂದು ಘಟನೆಯಲ್ಲಿ ಮತ್ತು ಒಬ್ಬ ವ್ಯಕ್ತಿಯಲ್ಲಿ ವಿಲೀನಗೊಂಡಿತು. ಆ ರಾಷ್ಟ್ರವೇ ಫ್ರಾನ್ಸ್, ಆ ಘಟನೆಯೇ ಫ್ರಾನ್ಸಿನ ಕ್ರಾಂತಿ ಮತ್ತು ಆ ಒಬ್ಬ ವ್ಯಕ್ತಿಯೇ ನೆಪೋಲಿಯನ್ ಬೋನಪಾರ್ಟೆ" ಎಂಬ ಮಾತು ಈ ಕ್ರಾಂತಿಯ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ಫ್ರಾನ್ಸಿನಲ್ಲಿ ಸಾಮಾಜಿಕ–ಆರ್ಥಿಕ ಸಮಾನತೆ ಮತ್ತು ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಈ ಕ್ರಾಂತಿಯ ಮುಖ್ಯ ಉದ್ದೇಶಗಳಾಗಿದ್ದವು.

ಕಾರಣಗಳು:

(1) ರಾಜಕೀಯ ಕಾರಣಗಳು: ಬೋರ್ಬನ್ ಸಂತತಿಯು ಹಲವಾರು ಶತಮಾನಗಳ ಕಾಲ ಫ್ರಾನ್ಸ್ ಅನ್ನು ಆಳ್ವಿಕೆ ಮಾಡಿತು. ಫ್ರಾನ್ಸಿನಲ್ಲಿ ನಿರಂಕುಶ ರಾಜಪ್ರಭುತ್ವವಿತ್ತು. 'ಯೂರೋಪಿನ ಮಹಾರಾಜ'ನೆಂದೇ ಕರೆಯಲ್ಪಟ್ಟಿದ್ದ ಫ್ರಾನ್ಸಿನ ರಾಜ 14ನೇ ಲೂಯಿಯು "ನಾನೇ ರಾಜ್ಯ, ನಾನೇ ಸರ್ಕಾರ" ಎಂದು ಹೇಳುತ್ತಿದ್ದನು. ರಾಜರ ದೈವಿಕ ಸಿದ್ಧಾಂತವನ್ನು ನಂಬಿದ್ದ ಇವನು ಪ್ರಜೆಗಳ ಹಿತವನ್ನು ಕಡೆಗಣಿಸಿ ತನ್ನ ಮನಬಂದಂತೆ ಆಳ್ವಿಕೆ ಮಾಡುತ್ತಿದ್ದನು. ಅವನ ಉತ್ತರಾಧಿಕಾರಿ 15ನೇ ಲೂಯಿಗೆ ರಾಷ್ಟ್ರವನ್ನು ಆಳುವ ಸಾಮರ್ಥ್ಯವಿರಲಿಲ್ಲ. ಇವನ ಆಳ್ವಿಕೆಯ ಕಾಲದಲ್ಲಿ ಫ್ರಾನ್ಸ್ ಹಲವಾರು ಯುದ್ಧಗಳನ್ನು ಮಾಡಿತು. ಅವುಗಳೆಂದರೆ ಆಸ್ಟ್ರಿಯಾ ಉತ್ತರಾಧಿಕಾರತ್ವದ ಯುದ್ಧ, ಸಪ್ತ ವಾರ್ಷಿಕ ಯುದ್ಧ ಮುಂತಾದವು. ಈ ಯುದ್ಧಗಳಲ್ಲಿ ಫ್ರಾನ್ಸ್ ಪರಾಭವ ಗೊಂಡಿದ್ದಲ್ಲದೆ ಫ್ರಾನ್ಸಿನ ಖಜಾನೆಗೆ ಭಾರಿ ಆರ್ಥಿಕ ಹೊರೆಯನ್ನುಂಟು ಮಾಡಿತು. ಪ್ರಾಪಂಚಿಕ ಭೋಗ ಜೀವನದಲ್ಲಿ ಹೆಚ್ಚು ಆಸಕ್ತನಾಗಿದ್ದ ಇವನು ಪ್ರಜೆಗಳ ಸಮಸ್ಯೆಗಳತ್ತ ಗಮನ ಹರಿಸುತ್ತಿರಲಿಲ್ಲ. ಆದರೂ 'ನನ್ನ ನಂತರ ಜಲಪ್ರಳಯ' ಎಂದು ಸಹ ಆಗಾಗ ಹೇಳುತ್ತಿದ್ದ.

ದೈವಿಕ ಸಿದ್ಧಾಂತ: ಇದು ಯೂರೋಪನ್ನು ಒಳಗೊಂಡಂತೆ ಪ್ರಪಂಚದ ಎಲ್ಲಾ ಭಾಗಗಳಲ್ಲಿದ್ದ ರಾಜಕೀಯ–ಧಾರ್ಮಿಕ ಕಲ್ಪನೆ. ಈ ಸಿದ್ಧಾಂತದ ಪ್ರಕಾರ ರಾಜನು ಜನರ ಮೇಲೆ ಆಳ್ವಿಕೆ ಮಾಡಲು ಭೂಮಿಗೆ ಬಂದಿರುವ ದೇವರ ಅವತಾರ ಅಥವಾ ಮಧ್ಯವರ್ತಿ ಅಥವಾ ಪ್ರತಿನಿಧಿಯಾಗಿದ್ದನು. ಆದ್ದರಿಂದ ರಾಜಾಜ್ಞೆಗಳನ್ನು ಪಾಲಿಸುವುದು ತಮ್ಮ ಕರ್ತವ್ಯವೆಂದು ಜನರೂ ಸಹ ನಂಬಿದ್ದರು.

16ನೇ ಲೂಯಿಯು ಈ ಕ್ರಾಂತಿಯ ಸಮಯದಲ್ಲಿದ್ದ ಫ್ರಾನ್ಸಿನ ರಾಜ. ಇವನೂ ಸಹ ಅಸಮರ್ಥ ಮತ್ತು ದುರ್ಬಲ ರಾಜನಾಗಿದ್ದ. ವೈಯಕ್ತಿಕವಾಗಿ ಒಳ್ಳೆಯವನಾಗಿದ್ದರೂ ರಾಜನಾಗಿ ಕೆಟ್ಟ ಆಡಳಿತಗಾರನಾಗಿದ್ದನು. ಶ್ರೀಮಂತರು (ನೋಬಲರು) ಮತ್ತು ಪಾದ್ರಿಗಳ ಪ್ರಭಾವಕ್ಕೆ ಒಳಗಾಗಿದ್ದ. ಇದರ ಜೊತೆಗೆ ಆಸ್ಟ್ರಿಯಾದ ರಾಜಕುಮಾರಿ ಮೇರಿ ಅಂಟಾಯ್‌ನೆಟ್‌ಳನ್ನು ವಿವಾಹವಾಗಿದ್ದನು. ಇದನ್ನು ಫ್ರೆಂಚ್ ಜನತೆ ವಿರೋಧಿಸಿತು. ರಾಜನು ರಾಣಿಯ ಕೈಗೊಂಬೆಯಾಗಿದ್ದನು. ಆಡಳಿತದಲ್ಲಿ ಅವಳು ತಲೆ ಹಾಕುತ್ತಿದ್ದರಿಂದ ಸಾಮಾನ್ಯ ಜನರು ಹಲವಾರು ರೀತಿಯ ತೊಂದರೆಗಳಿಗೆ ಒಳಗಾಗಿದ್ದರು. ಅಲ್ಲದೆ, ತನ್ನ ಐಷಾರಾಮಿ ಜೀವನಕ್ಕೆ ಅಪರಿಮಿತ ಹಣವನ್ನು ವ್ಯಯ ಮಾಡುತ್ತಿದ್ದಳು. ಅವಳ ದುಂದುಗಾರಿಕೆಯಿಂದಾಗಿ ಅವಳಿಗೆ "ಮೇಡಂ ಡೆಫಿಸಿಟ್" ಎಂಬ ಅಡ್ಡ ಹೆಸರೂ ಸಹ ಇತ್ತು.

16ನೇ ಲೂಯಿ

ಮೇರಿ ಅಂಟಾಯ್‌ನೆಟ್

ಫ್ರಾನ್ಸಿನ ಆಡಳಿತ ವ್ಯವಸ್ಥೆಯೂ ದೋಷಪೂರಿತವಾಗಿತ್ತು. ಫ್ರಾನ್ಸಿನ ರಾಜರು ಮಹಿಳೆಯರು, ಮದ್ಯ ಮತ್ತು ಸಂಪತ್ತುಗಳಲ್ಲಿ ಆಸಕ್ತರಾಗಿದ್ದರು. ಅವರು ತಮ್ಮ ಜವಾಬ್ದಾರಿ ಮತ್ತು ಪ್ರಜೆಗಳ ಯೋಗ ಕ್ಷೇಮವನ್ನು ಕಡೆಗಣಿಸಿದ್ದರು. ಅಧಿಕಾರಿಗಳು ಭಾರಿ ಲಂಚಕೋರರಾಗಿದ್ದರು. ರಾಷ್ಟ್ರದಲ್ಲಿ ಏಕರೂಪವಾದ ಕಾನೂನು ಸಂಹಿತೆ ಇರಲಿಲ್ಲ. ಈ ವಿಧವಾದ ರಾಜಕೀಯ ಅರಾಜಕತೆ, ನಿರಂಕುಶ ಪ್ರಭುತ್ವ ಮತ್ತು ಫ್ರೆಂಚ್ ದೊರೆಗಳ ದುರಾಡಳಿತಗಳು ಫ್ರಾನ್ಸಿನ ಜನತೆಯಲ್ಲಿ ಅತೃಪ್ತಿಯನ್ನು ಹೆಚ್ಚಿಸಿ ಕ್ರಾಂತಿಗೆ ಕಾರಣವಾಯಿತು.

(2) **ಸಾಮಾಜಿಕ ಕಾರಣಗಳು:** ಸಾಮಾಜಿಕ ಅಸಮಾನತೆಯು ಫ್ರಾನ್ಸಿನ ಪ್ರಮುಖ ಕಾರಣಗಳಲ್ಲಿ ಒಂದು. ಸಮಾಜ ಷಾಹಿ ವ್ಯವಸ್ಥೆಯ ಉನ್ನತ ಸ್ಥಾನದಲ್ಲಿ ರಾಜ ಮತ್ತು ಅವನ ಕುಟುಂಬ ವರ್ಗ, ನಂತರದಲ್ಲಿ 1ನೇ ಎಸ್ಟೇಟ್ ಎಂದು ಕರೆಯಲ್ಪಡುತ್ತಿದ್ದ ಪಾದ್ರಿಗಳು, 2ನೇ ಎಸ್ಟೇಟ್‌ನ ಶ್ರೀಮಂತರು ಮತ್ತು ಕೆಳಹಂತದಲ್ಲಿ 3ನೇ ಎಸ್ಟೇಟ್‌ನ ಸಾಮಾನ್ಯ ವರ್ಗದ ಜನರಿದ್ದರು. ಮೊದಲ ಎರಡು ಎಸ್ಟೇಟಿನ ಅಂದರೆ ಪಾದ್ರಿಗಳು ಮತ್ತು ಶ್ರೀಮಂತರನ್ನು 'ಸವಲತ್ತಿನ ವರ್ಗ' ವೆಂತಲೂ ಮತ್ತು 3ನೇ ಎಸ್ಟೇಟ್‌ನ ಸಾಮಾನ್ಯ ಜನರಾದ ರೈತರು, ಕಾರ್ಮಿಕರು, ಉಪಾಧ್ಯಾಯರು, ವಕೀಲರು, ವೈದ್ಯರು, ತತ್ವಜ್ಞಾನಿಗಳು, ಮುಂತಾದವರನ್ನೊಳಗೊಂಡ ವರ್ಗವನ್ನು ಯಾವುದೇ 'ಸವಲತ್ತಿಲ್ಲದ ವರ್ಗ' ವೆಂತಲೂ ವಿಂಗಡಿಸಲಾಗಿತ್ತು. ಮೊದಲ ಮತ್ತು 2ನೇ ಎಸ್ಟೇಟ್‌ನ ಜನರು ಅಲ್ಪಸಂಖ್ಯಾತರಾಗಿದ್ದು, ಫ್ರಾನ್ಸಿನ ಜನಸಂಖ್ಯೆಯಲ್ಲಿ ಶೇ.2 ಕ್ಕಿಂತಲೂ ಕಡಿಮೆ ಇದ್ದರೂ ಸೈನ್ಯ, ಚರ್ಚ್ ಮತ್ತು ಸರ್ಕಾರದ ಉನ್ನತ ಹುದ್ದೆಗಳೆಲ್ಲವನ್ನೂ ಇವರೇ ಹೊಂದಿದ್ದರು. ಇವರು ತೆರಿಗೆ ಪಾವತಿಯಿಂದಲೂ ವಿನಾಯಿತಿ ಪಡೆದಿದ್ದರು ಮತ್ತು ನ್ಯಾಯಾಲಯದ ಅಧಿಕಾರದಿಂದಲೂ ವಿಮುಕ್ತರಾಗಿದ್ದರು. ಅಪಾರ ಸಂಪತ್ತಿನ ಒಡೆಯರಾಗಿದ್ದ ಇವರು ರೈತರು ಮತ್ತು ಕಾರ್ಮಿಕರ ಶೋಷಣೆ ಮಾಡುತ್ತಿದ್ದರು. ಮತ್ತೊಂದು ಕಡೆ ಸಾಮಾನ್ಯ ವರ್ಗದ ಜನರ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿದ್ದವು. ಸರ್ಕಾರದ ಎಲ್ಲಾ ತೆರಿಗೆಗಳನ್ನು ಇವರೇ ಪಾವತಿಸಬೇಕಿತ್ತು ಮತ್ತು ಸರ್ಕಾರದ ಯಾವುದೇ ಹುದ್ದೆಗಳಿಗೂ ಇವರು ಅರ್ಹರಾಗಿರಲಿಲ್ಲ. "ಶ್ರೀಮಂತರು ಹೋರಾಡುತ್ತಾರೆ, ಪಾದ್ರಿಗಳು ಪ್ರಾರ್ಥಿಸುತ್ತಾರೆ ಮತ್ತು ಸಾಮಾನ್ಯರು ತೆರಿಗೆ ಪಾವತಿಸುತ್ತಾರೆ" ಎಂಬ ಹೇಳಿಕೆ ಫ್ರಾನ್ಸಿನಲ್ಲಿ ಜನಪ್ರಿಯವಾಗಿತ್ತು. ಹೀಗೆ ಸಾಮಾಜಿಕ ಕೀಳರಿಮೆ ಮತ್ತು ಪಕ್ಷಪಾತ ವ್ಯವಸ್ಥೆಗಳಿಂದ ಬಹುಸಂಖ್ಯಾತ ಫ್ರಾನ್ಸಿನ ಜನರು ಬೇಸರಗೊಂಡಿದ್ದು ಈ ಕ್ರಾಂತಿಯ ಆರಂಭಕ್ಕೆ ಮಾರ್ಗವಾಯಿತು.

(3) **ಆರ್ಥಿಕ ಕಾರಣಗಳು:** ಫ್ರಾನ್ಸಿನ ತೆರಿಗೆ ನೀತಿಯು ದೋಷಪೂರಿತ ಮತ್ತು ಅನ್ಯಾಯಯುತವೂ ಆಗಿತ್ತು. ಪಾದ್ರಿಗಳು ಮತ್ತು ಶ್ರೀಮಂತರು ಎಲ್ಲಾ ವಿಧವಾದ ತೆರಿಗೆಗಳಿಂದ ವಿನಾಯಿತಿ ಪಡೆದಿದ್ದರಿಂದ ತೆರಿಗೆಯ ಹೊರೆ ಸಾಮಾನ್ಯ ಜನರ ಮೇಲೆಯೇ ಇತ್ತು. 'ಟೈಲೆ' (ಸಂಪತ್ತಿನ ತೆರಿಗೆ), 'ಗ್ಯಾಬಿಲ್ಲೆ' (ಉಪ್ಪಿನ ತೆರಿಗೆ), ಟಿತ್ (ಧಾರ್ಮಿಕ ತೆರಿಗೆ) ಮತ್ತಿತರ ಮೇಲು ತೆರಿಗೆಗಳನ್ನು ಸಾಮಾನ್ಯ ಜನರು ಸರ್ಕಾರಕ್ಕೆ ಪಾವತಿಸಬೇಕಿತ್ತು. ಈ ಎಲ್ಲಾ ತೆರಿಗೆಗಳನ್ನು ಪಾವತಿಸಿದ ನಂತರ ರೈತರು ಮತ್ತು ಕಾರ್ಮಿಕರಿಗೆ ತಮ್ಮ ಆದಾಯದಲ್ಲಿ ಕೇವಲ ಶೇ. 18 ರಿಂದ 20 ರಷ್ಟು ಮಾತ್ರ ಉಳಿಯುತ್ತಿತ್ತು. ಬರಗಾಲಗಳಲ್ಲೂ ಅವರು ತೆರಿಗೆ ಪಾವತಿಸಬೇಕಾಗಿದ್ದರಿಂದ ಹೇಳಲಾಗದ ಕಷ್ಟ–ಕಾರ್ಪಣ್ಯಗಳಿಂದ ಬಳಲುತ್ತಿದ್ದರು. ಸಾವಿರಾರು ಜನರು ಹಸಿವಿಂದಲೇ ಅಸುನೀಗಿದ್ದರು. "ಫ್ರಾನ್ಸಿನಲ್ಲಿ 10 ಜನರು ಸತ್ತರೆ, 9 ಜನರು ಹಸಿವಿನಿಂದಲೂ ಮತ್ತು 10ನೇಯವನು ಅಜೀರ್ಣದಿಂದಲೂ ಸಾಯುತ್ತಿದ್ದರು", ಎಂಬುದು ಫ್ರಾನ್ಸ್ ಕ್ರಾಂತಿಯ ಮುನ್ನ ಇದ್ದಂತಹ ಸ್ಥಿತಿಯಾಗಿತ್ತು. ಈ ವಿಧವಾದ ಆರ್ಥಿಕ ಶೋಷಣೆ ಮತ್ತು ಸಾಮಾನ್ಯ ಜನರಲ್ಲಿದ್ದ ಅತೃಪ್ತಿಯು ಸರ್ಕಾರದ ಪಕ್ಷಪಾತ ತೆರಿಗೆ ನೀತಿಯ ವಿರುದ್ಧ ದಂಗೆ ಏಳುವಂತೆ ಮಾಡಿತು.

(4) **ಬೌದ್ಧಿಕ ಕಾರಣಗಳು:** 18ನೇ ಶತಮಾನದ ಫ್ರಾನ್ಸಿನಲ್ಲಿ ಹಲವಾರು ಪ್ರಸಿದ್ಧ ತತ್ವಜ್ಞಾನಿಗಳಿದ್ದರು. ಫ್ರಾನ್ಸಿನಲ್ಲಿದ್ದ ರಾಜಕೀಯ ದುರಾಡಳಿತ, ಸಾಮಾಜಿಕ ಅಸಮಾನತೆ ಮತ್ತು ಆರ್ಥಿಕ ಶೋಷಣೆಗಳನ್ನು ಟೀಕಿಸಿ ಇವರು ಲೇಖನಗಳನ್ನು ಬರೆದು, ಸುಧಾರಣೆಗಳಾಗಬೇಕೆಂದು ಒತ್ತಾಯಿಸಿದರು. ಫ್ರಾನ್ಸಿನ ಕ್ರಾಂತಿಯ ಆರಂಭಕ್ಕಿಂತ ಮುನ್ನ ಫ್ರಾನ್ಸಿನಲ್ಲಿ ಜೀವಿಸಿದ್ದ ತತ್ವಜ್ಞಾನಿಗಳಲ್ಲಿ ಮಾಂಟೆಸ್ಕ್ಯೂ, ವಾಲ್ಟೈರ್, ಜೀನ್ ಜಾಕ್ಸ್ ರೂಸೋ ಮತ್ತು ಡಿಡಿರೋ ಪ್ರಮುಖರು.

ಮಾಂಟೆಸ್ಕ್ಯೂ (1689–1775) 'ದಿ ಸ್ಪಿರಿಟ್ ಆಫ್ ಲಾಸ್' ಎಂಬ ಗ್ರಂಥವನ್ನು ರಚಿಸಿದ. ಇಂಗ್ಲೆಂಡಿನ ಸಂಸದೀಯ ಪ್ರಜಾಪ್ರಭುತ್ವವನ್ನು ಮೆಚ್ಚಿದ ಇವನು 'ಅಧಿಕಾರ ವಿಂಗಡಣಾ ಸಿದ್ಧಾಂತ' ವನ್ನು ಪ್ರತಿಪಾದಿಸಿದ. ಇದರ ಪ್ರಕಾರ ಸರ್ಕಾರದ ದುರಾಡಳಿತ ಮತ್ತು ನಿರಂಕುಶಾಧಿಕಾರಗಳನ್ನು ತಡೆಯಲು ಸರ್ಕಾರದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು. ಆಗ ಮಾತ್ರ ಜನತೆಯ ಸ್ವಾತಂತ್ರ್ಯವನ್ನು ರಕ್ಷಿಸ ಬಹುದು. ಕಾನೂನು ಶ್ರೇಷ್ಠ ಅಧಿಕಾರವಾಗಿರಬೇಕು ಮತ್ತು ಎಲ್ಲಾ ಜನರು ಕಾನೂನಿನ ಅಧೀನಕ್ಕೊಳಪಟ್ಟಿರಬೇಕು ಎಂದೂ ಇವನು ವಾದಿಸಿದನು.

ವಾಲ್ಟೈರ್ (1694–1778) ಒಬ್ಬ ಪ್ರಸಿದ್ಧ ವಿಡಂಬನಾಕಾರನಾಗಿದ್ದನು. ಇವನು 'ದಿ ಲೆಟರ್ಸ್ ಆನ್ ದಿ ಇಂಗ್ಲೀಷ್' ಎಂಬ ಗ್ರಂಥವನ್ನು ರಚಿಸಿದನು. ಪ್ರತಿಯೊಂದು ಕ್ಷೇತ್ರದಲ್ಲಿ 'ವಿವೇಚನೆ'ಯನ್ನು ಅನ್ವಯಿಸುವಂತೆ ಜನರಿಗೆ ಇದರಲ್ಲಿ ತಿಳಿಸಿದನು. ಚರ್ಚ್ ಮತ್ತು ಸಾಮಾಜಿಕ ಅಸಮಾನತೆಯನ್ನು ಪ್ರಬಲವಾಗಿ ಟೀಕಿಸಿದ. ಚರ್ಚ್ ಅಪ್ರಸಿದ್ಧವಾದುದೆಂದು ಇವನು ದೂಷಿಸಿದನು. ಇವನು ಪ್ರಗತಿಪರ ನಿರಂಕುಶ ಪ್ರಭುತ್ವವನ್ನು ಬೆಂಬಲಿಸಿದ. ಆದರೆ ಪ್ರಜಾಪ್ರಭುತ್ವ ಸರ್ಕಾರವನ್ನು ಇವನು ಒಪ್ಪಲಿಲ್ಲ. ನೂರು ಇಲಿಗಳ ಆಳ್ವಿಕೆಗಿಂತ ಒಂದು ಸಿಂಹದ ಆಳ್ವಿಕೆಯೇ ತನಗೆ ಇಷ್ಟವಾದುದೆಂದು ಹೇಳಿದ. ಫ್ರಾನ್ಸಿನ ಪರಿಸ್ಥಿತಿಗಳನ್ನು ಸುಧಾರಿಸಲು ಹಲವಾರು ಸುಧಾರಣೆಗಳಾಗಬೇಕೆಂದು ಇವನು ಒತ್ತಾಯಿಸಿದನು.



ಜೀನ್ ಜಾಕ್ಸ್ ರೂಸೋ (1712–1778)ನನ್ನು 'ಫ್ರಾನ್ಸಿನ ಕ್ರಾಂತಿಯ ಪಿತಾಮಹ' ಎನ್ನಲಾಗಿದೆ ಇವನು ಫ್ರಾನ್ಸ್ ಕ್ರಾಂತಿಯ ತತ್ವಜ್ಞಾನಿಗಳಲ್ಲಿ ಅತ್ಯಂತ ಪ್ರಸಿದ್ಧ. ತನ್ನ ಪ್ರಸಿದ್ಧ ಗ್ರಂಥವಾದ 'ಸೋಷಿಯಲ್ ಕಾಂಟ್ರಕ್ಟ್' (ಸಾಮಾಜಿಕ ಒಪ್ಪಂದ) ಎಂಬುದರಲ್ಲಿ ಇವನು ಜನತೆಯ ಪರಮಾಧಿಕಾರವನ್ನು ಎತ್ತಿ ಹಿಡಿದ. ಕ್ರಾಂತಿಯ ಕಿಡಿಯನ್ನು ಹಚ್ಚಿದ ಈ ಗ್ರಂಥವನ್ನು 'ಫ್ರಾನ್ಸ್ ಕ್ರಾಂತಿಯ ಬೈಬಲ್' ಎಂದು ಪರಿಗಣಿಸಲಾಗಿದೆ. "ಮಾನವ ಹುಟ್ಟಿನಿಂದ ಸ್ವತಂತ್ರ, ಆದರೆ ಎಲ್ಲೆಡೆ ಅವನು ಸರಪಳಿಗಳಿಂದ ಬಂಧಿಸಲ್ಪಟ್ಟಿದ್ದಾನೆ", ಎಂದು ರೂಸೋ ಹೇಳಿದ. ಪ್ರಜೆಗಳು ಮತ್ತು ಪ್ರಭುಗಳ ಮಧ್ಯದ ಸಾಮಾಜಿಕ ಒಪ್ಪಂದದ ಪರಿಣಾಮವೇ ಸರ್ಕಾರ ಎಂಬುದನ್ನು ಇವನು ಸಾಬೀತುಪಡಿಸಿದನು. ಪ್ರಜೆಗಳ ಯೋಗ ಕ್ಷೇಮವನ್ನು ರಾಜನು ನೋಡಿಕೊಳ್ಳಬೇಕು. ಒಂದು ವೇಳೆ ರಾಜ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ವಿಫಲನಾದರೆ ಅವನನ್ನು ಹಿಂದಕ್ಕೆ ಕರೆಸಿಕೊಳ್ಳುವ ಅಥವಾ ಬದಲಾಯಿಸುವ ಹಕ್ಕನ್ನು ಪ್ರಜೆಗಳು ಹೊಂದಿದ್ದಾರೆ ಎಂದು

ತಿಳಿಸಿದ. ಫ್ರಾನ್ಸ್ ಕ್ರಾಂತಿಯ ಮೂರು ತತ್ವಗಳು ಅಥವಾ ಧ್ಯೇಯ ವಾಕ್ಯಗಳಾದ 'ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ' ಗಳನ್ನು ನೀಡಿದವನೇ ರೂಸೋ. 'ಕನ್‌ಫೆಷನ್' ಮತ್ತು 'ಲಾಸ್' ರೂಸೋನ ಇತರ ಗ್ರಂಥಗಳು. ಹೀಗೆ ಅವನ ತಾತ್ವಿಕ ವಿಚಾರಧಾರೆಗಳು ಫ್ರಾನ್ಸ್ ಕ್ರಾಂತಿಗೆ ಸ್ಫೂರ್ತಿಯ ಪ್ರಮುಖ ಸೆಲೆಗಳಾಗಿದ್ದವು. ಆದ್ದರಿಂದ **"ರೂಸೋ ಜನಿಸದಿದ್ದರೆ, ಫ್ರಾನ್ಸಿನ ಕ್ರಾಂತಿಯೇ ಸಂಭವಸುತ್ತಿರಲಿಲ್ಲ"** ಎಂದು ನೆಪೋಲಿಯನ್ ಬೋನಪಾರ್ಟೆ ಹೇಳಿದ ಮಾತು ಸಮಂಜಸವಾಗಿದೆ.

ಡಿಡಿರೋ (1773–1784) ಎನ್‌ಸೈಕ್ಲೊಪೀಡಿಯಾ' ಎಂಬ ಗ್ರಂಥದ ಸಂಪಾದಕ. ಇವನು ವಿಶೇಷ ಸೌಲಭ್ಯಗಳನ್ನು ಹೊಂದಿದ್ದ ವರ್ಗಗಳನ್ನು ಖಂಡಿಸಿದ.

ಹೀಗೆ 1789ರಲ್ಲಿನ ಈ ಮಹಾ ಕ್ರಾಂತಿಗೆ ಮೇಲ್ಕಂಡ ಮತ್ತು ಇತರ ಹಲವಾರು ತತ್ವಜ್ಞಾನಿಗಳ ಬರಹಗಳು ಫ್ರಾನ್ಸಿನ ಜನರಲ್ಲಿ ಪ್ರೇರಣೆ ಮೂಡಿಸಿದವು.

(5) **ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ:** ಇಂಗ್ಲೆಂಡಿನ ವಿರುದ್ಧದ ಅಮೇರಿಕನ್ನರ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹಿಸಲು ಲಫಯಟ್ಟೆಯ ನಾಯಕತ್ವದ ಫ್ರೆಂಚ್ ಸೈನ್ಯ ಅಮೇರಿಕಾಕ್ಕೆ ಹೋಗಿತ್ತು. ಅಮೇರಿಕನ್ನರ ಸ್ವಾತಂತ್ರ್ಯಪ್ರಿಯತೆ, ರಾಜಕೀಯ ಹಕ್ಕುಗಳಿಗಾಗಿ ಹೋರಾಟ ಮತ್ತು ಅವರ ತ್ಯಾಗದ ಮನೋಭಾವಗಳ ಬಗ್ಗೆ ಫ್ರಾನ್ಸಿನ ಸೈನಿಕರು ತಿಳಿದುಕೊಂಡರು. ಈ ಸಂಗ್ರಾಮದಲ್ಲಿ ಅಮೇರಿಕನ್ನರು ಯಶಸ್ವಿಯಾದರು. ಫ್ರಾನ್ಸಿನಲ್ಲೂ ಪ್ರಜಾಪ್ರಭುತ್ವ ಸರ್ಕಾರ ಸ್ಥಾಪಿಸುವ ಉದ್ದೇಶದಿಂದ ಫ್ರಾನ್ಸಿನ ಸೈನಿಕರು ಅಮೇರಿಕಾದಿಂದ ಹಿಂದಿರುಗಿ ಬಂದ ನಂತರ ಅವರ ರಾಜಕೀಯ ವಿಚಾರಗಳನ್ನು ಫ್ರಾನ್ಸಿನಲ್ಲಿ ಹರಡಿದ್ದು ಕ್ರಾಂತಿಗೆ ಕಾರಣವಾಯಿತು.

(6) **ತಕ್ಷಣದ ಕಾರಣ: ಫ್ರಾನ್ಸಿನ ಆರ್ಥಿಕ ದಿವಾಳಿತನ:** 1789ರ ವೇಳೆಗೆ ಫ್ರಾನ್ಸಿನ ಆರ್ಥಿಕ ಸ್ಥಿತಿಯು ತುಂಬಾ ಶೋಚನೀಯವಾಗಿತ್ತು. ದುಬಾರಿ ಯುದ್ಧಗಳು ಮತ್ತು ಐಷಾರಾಮದ ಜೀವನಕ್ಕಾಗಿ ರಾಜ ಮತ್ತು ಅವನ ಕುಟುಂಬ ಮಾಡುತ್ತಿದ್ದ ಅಪರಿಮಿತ ದುಂದು ವೆಚ್ಚಗಳಿಂದಾಗಿ ರಾಷ್ಟ್ರೀಯ ಹೊರೆ ಅಧಿಕವಾಯಿತು. ರಾಜ್ಯದ ಮತ್ತು ರಾಜನ ವೈಯಕ್ತಿಕ ವೆಚ್ಚಗಳ ಮಧ್ಯೆ ಯಾವುದೇ ವ್ಯತ್ಯಾಸವಿರಲಿಲ್ಲ. ಸವಲತ್ತಿಲ್ಲದ ವರ್ಗದ ಜನರೇ ಎಲ್ಲಾ ತೆರಿಗೆಗಳನ್ನು ಕೊಡುತ್ತಿದ್ದರು. ಅವರ ಮೇಲೆ ಇನ್ನೂ ಹೆಚ್ಚಿನ ತೆರಿಗೆಯನ್ನು ವಿಧಿಸುವುದು ಅಸಾಧ್ಯವಾಗಿತ್ತು. ಅತ್ಯಧಿಕ ಆಸ್ತಿಯನ್ನು ಹೊಂದಿದ್ದ ಸವಲತ್ತಿನ ವರ್ಗದ ಜನರು ಯಾವುದೇ ತೆರಿಗೆ ಸಲ್ಲಿಸಲು ಸಿದ್ಧರಿರಲಿಲ್ಲ. ಇದರ ಜೊತೆಗೆ 1788ರಲ್ಲಿ ಫ್ರಾನ್ಸಿನಲ್ಲಿ ಭೀಕರ ಬರಗಾಲ ತಲೆದೋರಿತು. ಮಿಲಿಯಗಟ್ಟಲೆ ಜನರು ಈ ಬರಗಾಲಕ್ಕೆ ತುತ್ತಾದರು. ಇದೆಲ್ಲವು ಫ್ರಾನ್ಸಿನ ಆರ್ಥಿಕ ಸ್ಥಿತಿಯನ್ನು ಇನ್ನೂ ಅಧೋಗತಿಗೆ ಇಳಿಸಿತು.

ಫ್ರಾನ್ಸಿನ ಆರ್ಥಿಕ ಮಂತ್ರಿಗಳಾಗಿದ್ದ ಟೂರ್ಗಟ್, ನೆಕ್ಕರ್ ಮತ್ತು ಕೊಲೋನ್ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸಲು ಮತ್ತು ಸವಲತ್ತುಳ್ಳ ವರ್ಗಗಳ ಮೇಲೂ ಕೆಲವು ತೆರಿಗೆ ವಿಧಿಸಬೇಕೆಂದು ಸಲಹೆ ಮಾಡಿದ್ದನ್ನು ಅವರು ವಿರೋಧಿಸಿದರು. ಸವಲತ್ತಿನ ವರ್ಗಗಳ ಪ್ರಭಾವಕ್ಕೊಳಗಾಗಿ ರಾಜನು ಈ ಮಂತ್ರಿಗಳನ್ನು ಒಬ್ಬರಾದ ಮೇಲೊಬ್ಬರಂತೆ ಅಧಿಕಾರದಿಂದ ತೆಗೆದು ಹಾಕಿದನು. ಹೀಗೆ ಫ್ರಾನ್ಸಿನ ಆರ್ಥಿಕ ಮುಗ್ಗಟ್ಟು ಮುಂದುವರೆಯಿತು. ಇಂತಹ ಸಂದರ್ಭಗಳಲ್ಲಿ ಫ್ರಾನ್ಸಿನ ಆರ್ಥಿಕ ಮುಗ್ಗಟ್ಟಿನ ಬಗ್ಗೆ ಚರ್ಚಿಸಲು ರಾಜ 16ನೇ ಲೂಯಿಯು ಫ್ರಾನ್ಸಿನ ಪಾರ್ಲಿಮೆಂಟ್ **'ಎಸ್ಟೇಟ್ ಜನರಲ್ ಸಭೆ'**ಯನ್ನು ಸಮಾವೇಶಗೊಳಿಸಿದ. ಈ ಸಭೆಯನ್ನು 175 ವರ್ಷಗಳಿಂದಲೂ ಕರೆದಿರಲಿಲ್ಲ. ಇದು ಫ್ರಾನ್ಸ್ ಕ್ರಾಂತಿಯ ಆರಂಭಕ್ಕೆ ತಕ್ಷಣದ ಕಾರಣವಾಯಿತು.

ಕ್ರಾಂತಿಯ ಗತಿ:

ಫ್ರಾನ್ಸಿನ ಕ್ರಾಂತಿಯ ಆರಂಭ: 1789ರ ಮೇ ತಿಂಗಳಿನಲ್ಲಿ 16ನೇ ಲೂಯಿಯು ಆರ್ಥಿಕ ಮುಗ್ಗಟ್ಟಿಗೆ ಪರಿಹಾರ ಕಂಡುಕೊಳ್ಳಲು ಪಾರ್ಲಿಮೆಂಟ್ ಸಭೆ ಕರೆದಿದ್ದ. ಈ ಹಿಂದೆಲ್ಲಾ ಮೂರು ಎಸ್ಟೇಟ್‌ಗಳ ಸದಸ್ಯರು ಪ್ರತ್ಯೇಕವಾಗಿ ಕುಳಿತುಕೊಳ್ಳುತ್ತಿದ್ದರು. ಆದರೆ ಈ ಸಂದರ್ಭದಲ್ಲಿ ಎಲ್ಲರೂ ಒಟ್ಟಿಗೆ ಕುಳಿತುಕೊಳ್ಳಬೇಕೆಂದು 3ನೇ ಎಸ್ಟೇಟ್ ಒತ್ತಾಯಿಸಿದ್ದನ್ನು ಮೊದಲೆರಡು ಎಸ್ಟೇಟ್‌ಗಳು ಮತ್ತು ರಾಜ ಒಪ್ಪಲಿಲ್ಲ. ಆದ್ದರಿಂದ ಬಹುಸಂಖ್ಯಾತರಾಗಿದ್ದ 3ನೇ ಎಸ್ಟೇಟ್‌ನ ಸದಸ್ಯರು ಪಾರ್ಲಿಮೆಂಟ್‌ನಿಂದ ಹೊರಗೆ ನಿರ್ಗಮಿಸಿ, ದಿನಾಂಕ 20ನೇ ಜೂನ್ 1789ರಂದು ಟೆನ್ನಿಸ್ ಕೋರ್ಟ್‌ನಲ್ಲಿ ಸಭೆ ಸೇರಿ, ಫ್ರಾನ್ಸಿಗೆ ಪ್ರತ್ಯೇಕ ರಾಜ್ಯಾಂಗ ರಚನೆ ಯಾಗುವವರೆವಿಗೂ ತಾವು ಅಲ್ಲಿಂದ ಕದಲಬಾರದೆಂದು ಪ್ರತಿಜ್ಞೆ ಕೈಗೊಂಡರು. ಇದನ್ನು 'ಟೆನಿಸ್ ಆಟದ ಮೈದಾನದ ಪ್ರತಿಜ್ಞೆ' ಎನ್ನಲಾಗಿದೆ, ಅಲ್ಲದೆ ಇವರು 'ರಾಷ್ಟ್ರೀಯ ಸಭೆ'ಯನ್ನು ರಚಿಸಿಕೊಂಡರು. ಈ ಸಭೆಯನ್ನು ರಾಜ ವಿಸರ್ಜಿಸುವ ಉದ್ದೇಶ ಹೊಂದಿದ್ದಾನೆಂಬ ಸುದ್ದಿ ಹರಡಿತು. ಆಗ ಪ್ಯಾರಿಸ್ಸಿನ ಜನರು ದಂಗೆ ಎದ್ದು, ಆಡಳಿತವನ್ನು ತಮ್ಮ ಕೈವಶ ಮಾಡಿಕೊಂಡು 1789 ಜುಲೈ 14 ರಂದು ಬ್ಯಾಸ್ಟಿಲ್ ಎಂಬ ಕೇಂದ್ರೀಯ ಕಾರಾಗೃಹಕ್ಕೆ ಮುತ್ತಿಗೆ ಹಾಕಿದರು. ಇದರಲ್ಲಿದ್ದ ಬಂಧಿತರನ್ನು ಬಿಡುಗಡೆ ಮಾಡಿ, ಆಡಳಿತದ ದಬ್ಬಾಳಿಕೆಯ ಸಂಕೇತವಾಗಿದ್ದ ಈ ಕಾರಾಗೃಹವನ್ನು ನೆಲಸಮ ಗೊಳಿಸಿದರು. ಬ್ಯಾಸ್ಟಿಲ್ ಪತನದೊಂದಿಗೆ ಫ್ರಾನ್ಸಿನ ಕ್ರಾಂತಿಯು ಆರಂಭವಾಯಿತು. ಜುಲೈ14ನ್ನು ಫ್ರಾನ್ಸಿನಲ್ಲಿ ಇಂದಿಗೂ 'ರಾಷ್ಟ್ರೀಯ ದಿನ'ವನ್ನಾಗಿ ಆಚರಿಸಲಾಗುತ್ತಿದೆ.

ಕ್ರಾಂತಿಯ ಪ್ರಸಾರ: ಕ್ರಾಂತಿಯು ಫ್ರಾನ್ಸಿನಾದ್ಯಾಂತ ಹರಡಿತು. ಕ್ರಾಂತಿಕಾರಿಗಳಲ್ಲಿ ಎರಡು ಗುಂಪುಗಳಿದ್ದವು. ಅವುಗಳೆಂದರೆ ಜಿರೋಂಡಿಸ್ಟ್‌ರು (ಮಂದಗಾಮಿಗಳು) ಮತ್ತು ಜಾಕೋಬಿನ್ನರು (ತೀವ್ರಗಾಮಿಗಳು). ಚರ್ಚ್ ಮತ್ತು ರಾಜ್ಯಗಳನ್ನು ಸುಧಾರಣೆ ಮಾಡಲಾಯಿತು. ಚರ್ಚಿನ ಆಸ್ತಿಯನ್ನು ರಾಷ್ಟ್ರೀಕರಿಸಿ, ಪಾದ್ರಿಗಳ ವೇತನವನ್ನು ನಿಗದಿಗೊಳಿಸಲಾಯಿತು. ಪ್ಯಾರಿಸ್ಸಿನ ಜನರು ವರ್ಸೇಲ್ಸ್‌ಗೆ ದಂಡು ಹೋಗಿ ರಾಜ, ಮತ್ತು ಅವನ ಕುಟುಂಬವನ್ನು ಕರೆತಂದು ಪ್ಯಾರಿಸ್ಸಿನಲ್ಲಿನ ಟ್ಯೆಲೆರೀಸ್ ಎಂಬ ಅರಮನೆಯಲ್ಲಿ ಸೆರೆಯಿಟ್ಟರು. 1791ರಲ್ಲಿ ಸಂವಿಧಾನ ರಚನಾ ಸಭೆಯನ್ನು ರಚಿಸಲಾಯಿತು. ಇದು ಫ್ರಾನ್ಸಿಗೆ ಸಂವಿಧಾನವನ್ನು ಸಿದ್ಧಪಡಿಸಿ, ಮಾನವನ ಹಕ್ಕುಗಳ ಘೋಷಣೆ ಹೊರಡಿಸಿತು. ಹೊಸ ರಾಜಕೀಯ ವ್ಯವಸ್ಥೆಯು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ತತ್ವಗಳನ್ನಾಧರಿಸಿತ್ತು. ಈ ಘೋಷಣೆಯು ಜನತೆಗೆ ಆಸ್ತಿ, ವಾಕ್, ಬರಹ, ಧಾರ್ಮಿಕ ನಂಬಿಕೆ ಮತ್ತು ರಾಜಕೀಯ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿತು.

ಸಂವಿಧಾನಾತ್ಮಕ ಸಭೆಯು ವಿಸರ್ಜನೆಗೊಂಡು ಹೊಸ ಶಾಸಕಾಂಗ ಸಭೆ ಅಸ್ತಿತ್ವಕ್ಕೆ ಬಂದಿತು. ರಾಜನು ಫ್ರಾನ್ಸಿನಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದನು. ಆದ್ದರಿಂದ ರಾಜನನ್ನು ಅಮಾನತ್ತುಗೊಳಿಸುವಂತೆ ಪ್ಯಾರಿಸ್ಸಿನ ಜನರು ಶಾಸನ ಸಭೆಯನ್ನು ಆಗ್ರಹಿಸಿದರು. ಶಾಸಕಾಂಗ ಸಭೆಯ ಸ್ಥಾನದಲ್ಲಿ ಜಾಕೋಬಿಯನ್ನರ ನಾಯಕತ್ವದ 'ರಾಷ್ಟ್ರೀಯ ಸಭೆ' (ನ್ಯಾಷನಲ್ ಕನ್‌ವೆನ್ಷನ್)ಯನ್ನು ರಚಿಸಲಾಯಿತು.

ಭಯಾನಕ ಆಳ್ವಿಕೆ: 1792ರ ಸೆಪ್ಟಂಬರ್‌ನಲ್ಲಿ ಸಂಶಯಾಸ್ಪದ ರಾಜನಿಷ್ಠರನ್ನು ಗಿಲೋಟಿನ್ ಎಂಬ ಯಂತ್ರದಿಂದ ಕಗ್ಗೊಲೆ ಮಾಡಲಾಯಿತು. ಈ ತಿಂಗಳಲ್ಲಿ ಸಾವಿರಾರು ಜನರನ್ನು ಹತ್ಯೆಗೈದುದರಿಂದ ಇದನ್ನು 'ಸೆಪ್ಟೆಂಬರ್ ಕಗ್ಗೊಲೆ' ಎಂದು ಕರೆಯಲಾಗಿದೆ.



ಗಿಲೋಟಿನ್: ಇದು ಅಪರಾಧಿಯ ಶಿರಚ್ಛೇಧಿಸುವ ಒಂದು ಯಂತ್ರ. ಇದರಲ್ಲಿ ಒಂದು ಭಾರವಾದ ಕತ್ತಿಗೆ ಮರದ ತುಂಡೊಂದು ಆಧಾರವಾಗಿರುತ್ತಿತ್ತು. ಆ ತುಂಡನ್ನು ಸಡಿಲಗೊಳಿಸಿದಾಗ ಕತ್ತಿಯು ಲಂಬವಾಗಿ ಕೆಳಗೆ ಬಂದು ಅಪರಾಧಿಯ ತಲೆಯನ್ನು ಕತ್ತರಿಸುತ್ತಿತ್ತು. ಫ್ರಾನ್ಸ್ ಕ್ರಾಂತಿಯಲ್ಲಿ ಮರಣ ದಂಡನೆ ಶಿಕ್ಷೆಯನ್ನು ನೀಡಲು ಇದನ್ನು ಜಾರಿಗೆ ತರಲಾಗಿತ್ತು. ರಾಷ್ಟ್ರೀಯ ಸಭೆಯ ಸದಸ್ಯನಾಗಿದ್ದ ಜೋಸೆಫ್ ಇಗ್ನೇಸ್ ಗಿಲೋಟಿನ್ ಎಂಬುವನ ಹೆಸರಿನಿಂದ ಈ ಯಂತ್ರವನ್ನು **'ಗಿಲೋಟಿನ್'** ಎಂದು ಕರೆಯಲಾಗಿತ್ತು. ಏಕೆಂದರೆ ಎಲ್ಲಾ ಮರಣ ದಂಡನೆಗಳಿಗೆ ಅಗತ್ಯವಾಗಿದ್ದ ಆದೇಶ ಹೊರಡಿಸುವಲ್ಲಿ ಇವನು ಕಾರಣನಾಗಿದ್ದ.

ರಾಷ್ಟ್ರೀಯ ಸಭೆಯು ರಾಜ ಪ್ರಭುತ್ವವನ್ನು ರದ್ದುಗೊಳಿಸಿತು. 1792ರ ಸೆಪ್ಟಂಬರ್ 22 ರಂದು ಫ್ರಾನ್ಸ್ ಗಣರಾಜ್ಯವಾಯಿತು. ರಾಜ 16ನೇ ಲೂಯಿಯನ್ನು ದೇಶದ್ರೋಹಿ ಎಂದು ತೀರ್ಮಾನಿಸಿದ ರಾಷ್ಟ್ರೀಯ ಸಭೆಯು 1793 ಜನವರಿಯಲ್ಲಿ ಅವನನ್ನು ಗಿಲೋಟಿನ್ ಯಂತ್ರಕ್ಕೆ ಕೊಟ್ಟಿತು. ಇದರ ಪರಿಣಾಮವಾಗಿ ಕ್ರಾಂತಿಯು ತಮ್ಮ ರಾಷ್ಟ್ರಗಳಿಗೂ ಹರಡಬಹುದೆಂಬ ಭಯದಿಂದ ಆಸ್ಟ್ರಿಯಾ, ಪ್ರಷ್ಯಾ, ಬ್ರಿಟನ್, ಹಾಲೆಂಡ್ ಮತ್ತು ಸ್ಪೈನ್ ರಾಷ್ಟ್ರಗಳು ಫ್ರಾನ್ಸಿನ ವಿರುದ್ಧ ಒಕ್ಕೂಟವನ್ನು ರಚಿಸಿಕೊಂಡವು. ಕ್ರಾಂತಿ ವಿರೋಧಿಗಳನ್ನು ದಮನ ಮಾಡಲು ರಚಿಸಲಾದ **'ಸಾರ್ವಜನಿಕ ಸುರಕ್ಷಣಾ ಸಮಿತಿ'**ಗೆ ರಾಷ್ಟ್ರೀಯ ಸಭೆಯು ಕಾರ್ಯಾಂಗದ ಅಧಿಕಾರಗಳನ್ನು ನೀಡಿತು. ಒಕ್ಕೂಟವನ್ನು ಒಡೆಯುವಲ್ಲಿ ಇದು ಯಶಸ್ವಿಯಾಯಿತು. ಆದರೆ ಆಂತರಿಕವಾಗಿ 'ಭಯಾನಕ ಆಳ್ವಿಕೆ'ಗೆ ಕಾರಣವಾಯಿತು. ಈ ಅವಧಿಯಲ್ಲಿ ಮೇರಿ ಅಂಟಾಯ್‌ನೆಟ್, ಹಾಗೂ ರಾಜ ಕುಟುಂಬದ ಮತ್ತಿತರರನ್ನು ಗಿಲೋಟಿನ್‌ಗೆ ಕೊಡಲಾಯಿತು. ಸುರಕ್ಷಣಾ ಸಮಿತಿಯ ಮುಖ್ಯಸ್ಥನಾಗಿದ್ದ ರಬಸ್ಪಿಯರ್ ಎಲ್ಲಾ ವರ್ಗದ ಜನರ ಬಗ್ಗೆಯು ಸಂಶಯಪಟ್ಟು ಅವರನ್ನು ಗಿಲೋಟಿನ್‌ಗೆ ಕೊಟ್ಟನು. ಅಂತಿಮವಾಗಿ 1794ರ ಜುಲೈನಲ್ಲಿ ಫ್ರಾನ್ಸಿನ ಜನರೇ ರಬಸ್ಪಿಯರ್‌ನನ್ನು ಗಿಲೋಟಿನ್‌ಗೆ ಕೊಡುವುದರೊಂದಿಗೆ **'ಭಯಾನಕ ಆಳ್ವಿಕೆ'**ಯು ಅಂತ್ಯಗೊಂಡಿತು.

1795ರಲ್ಲಿ ಐದು ಸದಸ್ಯರ ಡೈರಕ್ಟರಿ ಸರ್ಕಾರವನ್ನು ರಚಿಸಲಾಯಿತು. ನೆಪೋಲಿಯನ್ ಬೋನಪಾರ್ಟೆಯು 1799ರಲ್ಲಿ ಇದನ್ನು ವಿಸರ್ಜಿಸಿ, ಅಧಿಕಾರವನ್ನು ತನ್ನ ಕೈವಶ ಮಾಡಿಕೊಳ್ಳುವವರೆಗೂ ಈ ಸರ್ಕಾರವಿತ್ತು.

ಪರಿಣಾಮಗಳು:

1) ಈ ಕ್ರಾಂತಿಯು ಫ್ರಾನ್ಸಿನ ನಿರಂಕುಶ ರಾಜಪ್ರಭುತ್ವವನ್ನು ರದ್ದುಗೊಳಿಸಿ, ರಾಜಕೀಯ ಅರಾಜಕತೆ ಮತ್ತು ಫ್ರಾನ್ಸಿನ ರಾಜರ ದುರಾಡಳಿತವನ್ನು ಅಂತ್ಯಗೊಳಿಸಿತು. ಮಾಂಟೆಸ್ಕ್ಯೂ, ಜೆ.ಜೆ. ರೂಸೋ, ಮುಂತಾದವರು ಪ್ರತಿಪಾದಿಸಿದಂತಹ ಪ್ರಜಾಪ್ರಭುತ್ವ ತತ್ವಗಳನ್ನಾಧರಿಸಿದ ಗಣರಾಜ್ಯ ಸರ್ಕಾರವನ್ನು ಫ್ರಾನ್ಸ್‌ನಲ್ಲಿ ಸ್ಥಾಪಿಸಲು ಈ ಕ್ರಾಂತಿಯು ದಾರಿಯಾಯಿತು.

2) ಫ್ರಾನ್ಸ್‌ನ ಕ್ರಾಂತಿಯು ಊಳಿಗಮಾನ್ಯಪದ್ಧತಿ ಮತ್ತು ವಂಶ ಪಾರಂಪರಿಕ ಶ್ರೀಮಂತರ ಆಳ್ವಿಕೆಯನ್ನು ಅಂತ್ಯಗೊಳಿಸಿತು. ದಮನಕ್ಕೊಳಗಾದ ಜನರು ಸರ್ಕಾರದ ಅನ್ಯಾಯದ ವಿರುದ್ಧ ದಂಗೆ ಏಳುವರೆಂದು ಇದು ಸಾಬೀತುಪಡಿಸಿತು.

3) ಪಾದ್ರಿಗಳು ಹಾಗೂ ಶ್ರೀಮಂತರ ಸವಲತ್ತುಗಳನ್ನು ರದ್ದುಗೊಳಿಸಿ, ಅವರ ಆಸ್ತಿ–ಪಾಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು. ಇದು ಸಾಮಾಜಿಕ ಅಸಮಾನತೆಯನ್ನು ಕೊನೆಗಾಣಿಸಿತು.

4) ಹೊಸ ಸಂವಿಧಾನವು ಮಾನವನ ಹಕ್ಕುಗಳನ್ನು ಘೋಷಿಸಿ, 'ಜನತೆಯ ಪರಮಾಧಿಕಾರ ಸಿದ್ಧಾಂತ'ವನ್ನು ಎತ್ತಿ ಹಿಡಿಯಿತು.

5) ಕ್ರಾಂತಿಯ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಪ್ರಪಂಚದಾದ್ಯಂತ ಜನಪ್ರಿಯವಾದವು.

6) ಈ ಕ್ರಾಂತಿಯು ಏಕತಾ ಭಾವನೆಯನ್ನು ಹರಡಿ ರಾಷ್ಟ್ರೀಯತೆಯ ತತ್ವವನ್ನು ಫ್ರಾನ್ಸಿನ ಜನರಿಗೆ ಬೋಧಿಸಿತು. ಹೀಗೆ ಇಟಲಿ ಮತ್ತು ಜರ್ಮನಿ ಏಕೀಕರಣ ಚಳುವಳಿಗಳಿಗೆ ಮತ್ತು ಭಾರತವನ್ನೂ ಒಳಗೊಂಡಂತೆ ಅಂತಿಮವಾಗಿ ಪ್ರಪಂಚದ ಇತರ ಭಾಗಗಳಲ್ಲೂ ಸ್ವಾತಂತ್ರ್ಯ ಚಳುವಳಿಗಳಿಗೆ ಈ ಕ್ರಾಂತಿಯು ಸ್ಫೂರ್ತಿಯ ಸೆಲೆಯಾಯಿತು. "ಫ್ರಾನ್ಸಿಗೆ ಶೀತವಾದರೆ ಇಡೀ ಯೂರೋಪ್ ಸೀನುತ್ತದೆ" ಎಂದು ಹೆಚ್.ಎ.ಎಲ್.ಫಿಷರ್ ರವರು ಹೇಳಿದ್ದಾರೆ.

7) ಈ ಕ್ರಾಂತಿಯಿಂದಾಗಿ ಅಪಾರ ರಕ್ತಪಾತವಾಯಿತು. 'ಭಯಾನಕ ಆಳ್ವಿಕೆ'ಯ ಕಾಲದಲ್ಲಿ ಸುಮಾರು 17000 ಜನರು ಕೊಲೆಯಾದರು. ರಾಜ 16ನೇ ಲೂಯಿ, ಅವನ ರಾಣಿ ಮೇರಿ ಅಂಟಾಯ್‌ನೇಟ್ ಮತ್ತಿತರರನ್ನು ಸಹ ಗಿಲೋಟಿನ್‌ಗೆ ಬಲಿ ಕೊಡಲಾಯಿತು.

8) ಕ್ರಾಂತಿಯ ನಂತರ ಅಧಿಕಾರಕ್ಕೆ ಬಂದ ಡೈರಕ್ಟರಿ ಸರ್ಕಾರವು ಸಮರ್ಪಕವಾಗಿ ಆಳ್ವಿಕೆ ಮಾಡುವಲ್ಲಿ ವಿಫಲವಾಯಿತು. ಫ್ರಾನ್ಸಿನಲ್ಲಿ ಪುನಃ ಅವ್ಯವಸ್ಥೆಗಳು ತಲೆದೋರಿದವು. ಫ್ರಾನ್ಸಿನ ಸೈನಿಕ ಸರ್ವಾಧಿಕಾರಿಯಾಗಿ ಹೊರಹೊಮ್ಮಲು ನೆಪೋಲಿಯನ್ ಬೋನಪಾರ್ಟ್‌ಗೆ ಇದು ಅವಕಾಶ ಕಲ್ಪಿಸಿತು. ತಾನು "ಕ್ರಾಂತಿಯ ಶಿಶು" ಎಂದು ಸ್ವತಃ ನೆಪೋಲಿಯನ್ನನೇ ಹೇಳಿಕೊಂಡಿದ್ದಾನೆ.

ಹೀಗೆ ಫ್ರಾನ್ಸ್ ಕ್ರಾಂತಿಯು ನಿಜವಾಗಿಯೂ ಫಾನ್ಸಿನ ಇತಿಹಾಸದಲ್ಲಿಯೇ ಒಂದು ಪ್ರಸಿದ್ಧ ಘಟನೆ. ಕ್ರಾಂತಿಯ ನಂತರದ ರಾಜಕೀಯ ಬೆಳವಣಿಗೆಗಳು ಯೂರೋಪಿನ ಮತ್ತು ವಿಶ್ವದ ಇತಿಹಾಸದ ಗತಿಯನ್ನು ಮಹತ್ತರವಾಗಿ ಬದಲಾಯಿಸಿತು.

ಪ್ರಶ್ನೆಗಳು:

ಪ್ರತಿಯೊಂದನ್ನು ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. [ತಲಾ ಒಂದು ಅಂಕ]

1) ಫ್ರಾನ್ಸ್ ಕ್ರಾಂತಿ ಆರಂಭವಾದ ವರ್ಷ ಯಾವುದು?
2) ಫ್ರಾನ್ಸ್ ಅನ್ನು ಆಳಿದ ಸಂತತಿಯನ್ನು ಹೆಸರಿಸಿ.
3) 'ಯೂರೋಪಿನ ಮಹಾರಾಜ'ನೆಂದು ಯಾರನ್ನು ಕರೆಯಲಾಗಿದೆ?
4) ಫ್ರಾನ್ಸ್ ಕ್ರಾಂತಿಯ ಸಮಯದಲ್ಲಿದ್ದ ಫ್ರಾನ್ಸಿನ ರಾಜ ಯಾರು?
5) ಮೇರಿ ಅಂಟಾಯ್‌ನೇಟಳ ಅಡ್ಡ ಹೆಸರು ಯಾವುದು?
6) ಮಾಂಟೆಸ್ಕ್ಯೂನ ಪ್ರಸಿದ್ಧ ಗ್ರಂಥ ಯಾವುದು?
7) ವಾಲ್ಟೈರ್‌ನ ಗ್ರಂಥವನ್ನು ಹೆಸರಿಸಿ.

8) ಪ್ರಗತಿಪರ ನಿರಂಕುಶ ಪ್ರಭುತ್ವವನ್ನು ಬೆಂಬಲಿಸಿದ ಫ್ರಾನ್ಸಿನ ತತ್ವಜ್ಞಾನಿ ಯಾರು?

9) 'ಫ್ರಾನ್ಸ್ ಕ್ರಾಂತಿಯ ಪಿತಾಮಹ'ನೆಂದು ಯಾರನ್ನು ಕರೆಯಲಾಗಿದೆ?

10) 'ಫ್ರಾನ್ಸ್ ಕ್ರಾಂತಿಯ ಬೈಬಲ್' ಎಂದು ಪರಿಗಣಿಸಿರುವ ಗ್ರಂಥ ಯಾವುದು?

11) ಸೋಷಿಯಲ್ ಕಾಂಟ್ರಾಕ್ಟ್ (ಸಾಮಾಜಿಕ ಒಪ್ಪಂದ) ಗ್ರಂಥವನ್ನು ರಚಿಸಿದವರು ಯಾರು?

12) 'ಬ್ಯಾಸ್ಟಿಲ್ ಪತನ' ವಾದ ವರ್ಷ ಯಾವುದು?

13) 'ಸಾರ್ವಜನಿಕ ಸುರಕ್ಷಣಾ ಸಮಿತಿ'ಯ ಮುಖ್ಯಸ್ಥ ಯಾರು?

ಪ್ರತಿಯೊಂದನ್ನು ಎರಡು ಪದ ಅಥವಾ ವಾಕ್ಯಗಳಲ್ಲಿ ಉತ್ತರಿಸಿ: [ತಲಾ 2 ಅಂಕಗಳು]

1. ಫ್ರಾನ್ಸ್ ಕ್ರಾಂತಿಯ ಮುನ್ನ ಇದ್ದ ಯಾರಾದರೂ ಇಬ್ಬರು ಫ್ರಾನ್ಸಿನ ರಾಜರನ್ನು ಹೆಸರಿಸಿ.
2. ಫ್ರಾನ್ಸ್ ಕ್ರಾಂತಿಯ ಕಾಲದಲ್ಲಿದ್ದ ರಾಜ ಮತ್ತು ರಾಣಿ ಯಾರು?
3. ಫ್ರಾನ್ಸಿನ ಸಮಾಜದಲ್ಲಿನ ಸವಲತ್ತಿನ ಮತ್ತು ಸವಲತ್ತಿಲ್ಲದ ಗುಂಪುಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.
4. ಫ್ರಾನ್ಸಿನ ಸಮಾಜದ 3 ವರ್ಗಗಳನ್ನು ಹೆಸರಿಸಿ.
5. ಫ್ರಾನ್ಸ್ ಕ್ರಾಂತಿಯ ಯಾರಾದರೂ ಇಬ್ಬರು ಪ್ರಮುಖ ತತ್ವಜ್ಞಾನಿಗಳನ್ನು ಹೆಸರಿಸಿ.
6. ಫ್ರಾನ್ಸ್ ಕ್ರಾಂತಿಯ ತತ್ವಗಳು ಅಥವಾ ಧ್ಯೇಯ ವಾಕ್ಯಗಳು ಯಾವುವು?
7. ಜೆ.ಜೆ. ರೂಸೋನ ಯಾವುದಾದರೂ ಎರಡು ಗ್ರಂಥಗಳನ್ನು ಹೆಸರಿಸಿ.
8. ಫ್ರಾನ್ಸ್ ಜನರು ಪಾವತಿಸುತ್ತಿದ್ದ ಯಾವುದಾದರೂ ಎರಡು ತೆರಿಗೆಗಳನ್ನು ಹೆಸರಿಸಿ.
9. ಫ್ರಾನ್ಸ್ ಕ್ರಾಂತಿಯ ಮುನ್ನ ಇದ್ದ ಫ್ರಾನ್ಸಿನ ಯಾರಾದರೂ ಇಬ್ಬರು ಆರ್ಥಿಕ ಮಂತ್ರಿಗಳನ್ನು ಹೆಸರಿಸಿ.
10. ಆರ್ಥಿಕ ಮುಗ್ಗಟ್ಟನ್ನು ಬಗೆಹರಿಸಲು ಫ್ರಾನ್ಸಿನ ಆರ್ಥಿಕ ಮಂತ್ರಿಗಳು ಯಾವ ಸಲಹೆ ನೀಡಿದರು?
11. 'ಟೆನ್ನಿಸ್ ಕೋರ್ಟ್ ಪ್ರತಿಜ್ಞೆ' ಎಂದರೇನು?
12. ಫ್ರಾನ್ಸ್ ಕ್ರಾಂತಿಕಾರಿಗಳಲ್ಲಿನ ಬಣಗಳನ್ನು ಹೆಸರಿಸಿ.
13. 'ಸೆಪ್ಟಂಬರ್ ಕಗ್ಗೊಲೆ' ಎಂದರೇನು?

ಕೆಳಗಿನ ಪ್ರಶ್ನೆಗಳನ್ನು ಪ್ರತಿಯೊಂದನ್ನು 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ: [ತಲಾ 5 ಅಂಕಗಳು]

1. ಫ್ರಾನ್ಸ್ ಕ್ರಾಂತಿಯ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳನ್ನು ವಿವರಿಸಿ.

2. ಫ್ರಾನ್ಸ್ ಕ್ರಾಂತಿಯ ಬೌದ್ಧಿಕ ಕಾರಣಗಳ ಬಗ್ಗೆ ವಿವರಣೆ ನೀಡಿ.
3. ಫ್ರಾನ್ಸಿನ ಕ್ರಾಂತಿಗೆ ರಾಜಕೀಯ ಮತ್ತು ತಕ್ಷಣದ ಕಾರಣಗಳ ಕುರಿತು ಒಂದು ಟಿಪ್ಪಣಿ ಬರೆಯಿರಿ.
4. ಫ್ರಾನ್ಸ್ ಕ್ರಾಂತಿಯ ಪರಿಣಾಮಗಳನ್ನು ವಿಶ್ಲೇಷಿಸಿ.

ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: [ತಲಾ 10 ಅಂಕಗಳು]

1. 1789ರ ಫ್ರೆಂಚ್ ಕ್ರಾಂತಿಯ ಆರಂಭಕ್ಕೆ ವಿವಿಧ ಕಾರಣಗಳನ್ನು ವಿವರಿಸಿ.
2. 1789ರ ಫ್ರಾನ್ಸಿನ ಕ್ರಾಂತಿಯ ಕಾರಣಗಳು ಮತ್ತು ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

8.4 ರಷ್ಯಾದ ಕ್ರಾಂತಿ – 1917

ಪೀಠಿಕೆ: ರಷ್ಯಾದ ಕ್ರಾಂತಿಯು ಮಾರ್ಕ್ಸಿಸ್ಟ್ ಚಿಂತನೆಗಳಿಂದ ಪ್ರಭಾವಿತಗೊಂಡ ಆರ್ಥಿಕ ಕ್ರಾಂತಿಯಾಗಿದೆ. 'ರಾಷ್ಟ್ರಕ್ಕೆ ಶಾಂತಿ, ಹಸಿದವರಿಗೆ ಅನ್ನ, ಉಳುವವನಿಗೆ ಭೂಮಿ' ಪೂರೈಸುವುದೇ ಅದರ ಗುರಿಯಾಗಿತ್ತು. ಜಗತ್ತಿನ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಕಮ್ಯುನಿಸ್ಟ್ ಸರ್ಕಾರದ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಈ ಕ್ರಾಂತಿಯು ಜಗತ್ತಿನ ವಿವಿಧ ದೇಶಗಳಲ್ಲಿ ಇದೇ ರೀತಿಯ ಸರ್ಕಾರಗಳು ಸ್ಥಾಪನೆಗೊಳ್ಳಲು ದಾರಿ ಮಾಡಿಕೊಟ್ಟಿತು. ಅಮೆರಿಕಾ ಮತ್ತು ಫ್ರಾನ್ಸಿನ ಕ್ರಾಂತಿಗಳು ಪ್ರಜಾಸತ್ತಾತ್ಮಕ ತತ್ವ್ವಗಳನ್ನು ಎತ್ತಿ ಹಿಡಿದರೆ, ರಷ್ಯಾ ಕ್ರಾಂತಿಯು ಸಮಾಜವಾದಿ ತತ್ವಗಳನ್ನು ಪ್ರತಿಪಾದಿಸಿತು. ಇದಲ್ಲದೆ, ಫ್ರೆಂಚ್ ಕ್ರಾಂತಿಯ ನಂತರದ ದೀರ್ಘ ಕಾಲಾವಧಿಯಲ್ಲಿ ಕ್ರಾಂತಿಯೊಂದಕ್ಕೆ ಜಗತ್ತು ಸಾಕ್ಷಿಯಾಯಿತು ಎಂಬುದೂ ಗಮನಾರ್ಹವಾಗಿದೆ.

'ಜ಼ಾರ್' ಎಂಬ ಶಬ್ದವು ಲ್ಯಾಟಿನ ಪದವಾದ 'ಸೀಸರ್' ನಿಂದ ನಿಷ್ಪನ್ನಗೊಂಡಿದೆ. ಸೀಸರ್ ಎಂದರೆ 'ಚಕ್ರವರ್ತಿ'. ಇಂಗ್ಲಿಷ್‌ನಲ್ಲಿ ಕೆಲವು ವೇಳೆ 'Tsar' ಶಬ್ದವನ್ನು 'Czar' ಎಂದೂ ಪ್ರಯೋಗಿಸುವುದುಂಟು.

ಕಾರಣಗಳು:

1. **ರಾಜಕೀಯ ಕಾರಣಗಳು:** ರಷ್ಯಾ ದೇಶವು 'ಜ಼ಾರ್'ಗಳಿಂದ (ರಷ್ಯಾ ದೇಶದ ದೊರೆಗಳನ್ನು ಜ಼ಾರ್ ಎನ್ನುತ್ತಾರೆ) ಆಳಲ್ಪಡುತ್ತಿತ್ತು. ಜಗತ್ತಿನಲ್ಲಿಯೇ ಅತ್ಯಂತ ವಿಶಾಲ ದೇಶವಾದ ರಷ್ಯಾವನ್ನು 'ರೊಮನೋವ್' ಮನೆತನದವರು ಆಳುತ್ತಿದ್ದರು. ಜ಼ಾರ್ ದೊರೆಗಳು ನಿರಂಕುಶಪ್ರಭುಗಳು ಹಾಗೂ ಅಸಮರ್ಥರೂ ಆಗಿದ್ದರು. ಅವರು 'ದೈವದತ್ತ ಸಿದ್ಧಾಂತ' ತತ್ವದ ಮೇಲೆ ರಾಜ್ಯವನ್ನು ಆಳುತ್ತಿದ್ದರು. ಆಡಳಿತದ ಕೇಂದ್ರೀಕರಣ ಹಾಗೂ ತೀವ್ರ ಭ್ರಷ್ಟಾಚಾರವು ಜನಜೀವನದ ಮೇಲೆ ಪರಿಣಾಮ ಬೀರಿತು. ಡ್ಯೂಮ (ಸಂಸತ್ತು) ಎಂಬುದು ಶಾಸಕಾಂಗವಾಗಿದ್ದರೂ, ಅದರೊಂದಿಗೆ ಜ಼ಾರನು ನಿಯಮಿತವಾಗಿ ಸಮಾಲೋಚನೆ ನಡೆಸುತ್ತಿರಲಿಲ್ಲ. ವಿವಿಧ ಕಾಲಘಟ್ಟದಲ್ಲಿ ಡ್ಯೂಮವು ಜ಼ಾರನಿಂದ ಹಲವು ಬಾರಿ ರದ್ದುಗೊಂಡಿತ್ತು. ಆಡಳಿತವು ಜ಼ಾರಿನ (ರಾಣಿ) ಅಲೆಕ್ಸಾಂಡ್ರಾ ಹಾಗೂ ಕುಖ್ಯಾತ ಸನ್ಯಾಸಿ ರಾಸ್ ಪುಟಿನ್ ನಂತಹ ಜನರ ಹಸ್ತಕ್ಷೇಪದಿಂದ ತೊಂದರೆಗೊಳಗಾಗಿತ್ತು.

ಜ಼ಾರ್ 2ನೇ ನಿಕೋಲಸ್



ರಾಸ್‌ಪುಟಿನ್

ಜ಼ಾರಿನ ಅಲೆಕ್ಸಾಂಡ್ರಾ ಮತ್ತು ಜ಼ಾರ್ 2ನೇ ನಿಕೋಲಸ್

2. **ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳು:** ಅಂದಿನ ರಷ್ಯಾದ ಸಮಾಜವು ಎರಡು ವರ್ಗಗಳಾಗಿ ವಿಭಜನೆಗೊಂಡಿತ್ತು. ಅ) ಸವಲತ್ತಿನ ವರ್ಗ ಆ) ಸವಲತ್ತಿಲ್ಲದ ವರ್ಗ. ಸವಲತ್ತಿನ ವರ್ಗವು ರಾಜಪರಿವಾರದವರನ್ನು, ಭೂಮಾಲಿಕರನ್ನು ಹಾಗೂ ಬಂಡವಾಳಗಾರರನ್ನು (ಕಾರ್ಖಾನೆಗಳ ಮಾಲಿಕರನ್ನು) ಒಳಗೊಂಡಿತ್ತು. ಅವರು ಶ್ರೀಮಂತರಾಗಿದ್ದು ಸಮಾಜದಲ್ಲಿ ಉನ್ನತ ಸ್ಥಾನಮಾನ ಹೊಂದಿದ್ದರು. ನಾಗರಿಕ, ಆಡಳಿತಾತ್ಮಕ ಹಾಗೂ ಸೈನಿಕ ಹುದ್ದೆಗಳು ಅವರಿಗೆ ಮೀಸಲಾಗಿದ್ದವು. ಸವಲತ್ತಿಲ್ಲದ ವರ್ಗವು ಪ್ರಮುಖವಾಗಿ ರೈತರು ಮತ್ತು ಕಾರ್ಮಿಕರನ್ನು ಒಳಗೊಂಡಿದ್ದು, ಇವರು ಬಹುಸಂಖ್ಯಾತರಾಗಿದ್ದರು. ಇವರುಗಳು ಬಡತನದಲ್ಲಿ ಬದುಕುತ್ತಿದ್ದು, ಸವಲತ್ತುಳ್ಳ ವರ್ಗದಿಂದ ತೀವ್ರ ಶೋಷಣೆಗೆ ಒಳಗಾಗಿದ್ದರು. ಗುಲಾಮಗಿರಿಯನ್ನು 1861ರಲ್ಲಿಯೇ ರದ್ದುಗೊಳಿಸಲಾಗಿದ್ದರೂ, ರೈತರ ಸ್ಥಿತಿಗತಿಯಲ್ಲಿ ಯಾವುದೇ ಸುಧಾರಣೆಗಳಾಗಲಿಲ್ಲ.

ಕ್ರಾಂತಿಗೂ ಮೊದಲ ರಷ್ಯಾದ ಅರ್ಥವ್ಯವಸ್ಥೆ ಕೃಷಿ ಪ್ರಧಾನವಾಗಿತ್ತು. ಕೈಗಾರಿಕಾ ಕ್ರಾಂತಿಯು ಭಾರಿ ಪ್ರಮಾಣದ ಕಾರ್ಮಿಕ ವರ್ಗವನ್ನು ಸೃಷ್ಟಿಸಿತು. ಈ ಕಾರ್ಮಿಕರು ಕಡಿಮೆ ಕೂಲಿಗೆ ಹೆಚ್ಚಿನ ಅವಧಿ ದುಡಿಯಬೇಕಾಗಿತ್ತು. ಅಲ್ಲದೆ, ಅಪಾಯಕಾರಿ ಹಾಗೂ ಅನಾರೋಗ್ಯಕರ ವಾತಾವರಣದಲ್ಲಿ ಕೆಲಸ ನಿರ್ವಹಿಸಬೇಕಾಗಿತ್ತು. ಕಾರ್ಮಿಕರಿಗೆ ಸಂಭವಿಸಬಹುದಾದ ಅವಘಡ ಮತ್ತು ಸಾವಿಗೆ ಯಾವುದೇ ರೀತಿಯ ಪರಿಹಾರ ಸಿಗುತ್ತಿರಲಿಲ್ಲ. ರಷ್ಯಾದ ಕೈಗಾರಿಕೆಗಳು ಮಾಲೀಕರಿಗಾಗಿ ಸಂಪತ್ತನ್ನು ಸೃಷ್ಟಿಸಿತಾದರೂ, ಕೃಷಿಕರುಗಳ ಮೇಲೆ ಕೆಟ್ಟ ಪರಿಣಾಮ ಬೀರಿದವು. ಹೆಚ್ಚಿನ ಭೂಮಾಲೀಕರೇ ಕೈಗಾರಿಕೆದಾರರಾಗಿದ್ದು, ಅವರು ಕೃಷಿಯನ್ನು ಕಡೆಗಣಿಸಿದರು ಮತ್ತು ಕೃಷಿ ಕಾರ್ಮಿಕರು ಕೈಗಾರಿಕೆಗಳಲ್ಲಿ ದುಡಿಯುವಂತೆ ಒತ್ತಾಯಿಸಿದರು. ಇದರಿಂದಾಗಿ ಕೃಷಿ ಉತ್ಪನ್ನವು ಗಣನೀಯವಾಗಿ ಇಳಿಮುಖವಾಯಿತು, ಮತ್ತು ಇದರ ಫಲವಾಗಿ ಹಣದುಬ್ಬರ ಉಂಟಾಯಿತು. ಜನರು ಸಂಕಷ್ಟಕ್ಕೆ ದೂಡಲ್ಪಟ್ಟರು.

ನಿಹಿಲಿಸಂ: ಇದೊಂದು 19ನೇ ಶತಮಾನದ ರಷ್ಯಾದಲ್ಲಿದ್ದ ಕ್ರಾಂತಿಕಾರಿ ಚಳವಳಿ. ನಿಹಿಲಿಸ್ಟರು ಕಾರ್ಯಕಾರಣ ಸಿದ್ಧಾಂತ, ಭೌತಿಕವಾದ ಮತ್ತು ತೀವ್ರಬದಲಾವಣೆಗಳಲ್ಲಿ ನಂಬಿಕೆ ಇಟ್ಟಿದ್ದರು. ಇವರು ಸಮಾಜ ಮತ್ತು ಸರ್ಕಾರದಲ್ಲಿ ಹತ್ಯಾಕಾಂಡ ಮತ್ತು ಭಯೋತ್ಪಾದನೆಯ ಮೂಲಕ ಬದಲಾವಣೆ ತರಬಯಸಿದರು.

3. **ರೂಸೀಕರಣ:** ಜ಼ಾರ್ 3ನೇ ಅಲೆಕ್ಸಾಂಡರ್ ಮತ್ತು ಜ಼ಾರ್ 2ನೇ ನಿಕೋಲಸ್‌ನು ದಮನಕಾರಿ, ನಿರಂಕುಶ ಮತ್ತು ಕೇಂದ್ರೀಕೃತ ಆಡಳಿತವನ್ನು ಜಾರಿಗೆ ತಂದರು. ರಷ್ಯಾಕ್ಕೆ 'ಒಂದು ರಾಷ್ಟ್ರ, ಒಂದು ಭಾಷೆ, ಒಂದು ಚರ್ಚ್ ಮತ್ತು ಒಬ್ಬ ಜಾರ್' ಎಂಬುದು ಇವರ ಘೋಷಣೆಯಾಗಿತ್ತು. ಪೋಲರು (ಪೋಲೆಂಡಿನವರು), ಫಿನ್ನರು, ಯಹೂದಿಗಳು, ಜರ್ಮನ್ನರು ಇತ್ಯಾದಿ ಜನಾಂಗಗಳನ್ನು ಬಲವಂತವಾಗಿ ರಷ್ಯಾವು ತನ್ನ ಈ ನೀತಿಗೆ ಅಧೀನರನ್ನಾಗಿಸಿತು. ಇದಕ್ಕೆ ರೂಸೀಕರಣ ಎನ್ನುವರು. ಈ ನೀತಿಯನ್ನು ಜ಼ಾರ್ 3ನೇ ಅಲೆಕ್ಸಾಂಡರನು ಆರಂಭಿಸಿದನು ಮತ್ತು ಜ಼ಾರ್ 2ನೇ ನಿಕೋಲಸ್‌ನು ಮುಂದುವರೆಸಿದನು. ಈ ನಿರಂಕುಶ ನೀತಿಯನ್ನು ನಿಹಿಲಿಸ್ಟರು ಜ಼ಾರನ ಅಧಿಕಾರಿಗಳನ್ನು ಮತ್ತು ಪ್ರತಿನಿಧಿಗಳನ್ನು ಕೊಲ್ಲುವ ಮೂಲಕ ತೀವ್ರವಾಗಿ ವಿರೋಧಿಸಿದರು. ಸರ್ಕಾರ ಅವರನ್ನು ನಿರ್ದಯೆಯಿಂದ ಬೇಟೆಯಾಡಿತು ಮತ್ತು ಸಾಮೂಹಿಕವಾಗಿ ಹತ್ಯೆ ಮಾಡಿತು. ರಷ್ಯಾವು ಬಾಲ್ಕನ್ ಪ್ರದೇಶದಲ್ಲಿ 'ಪಾನ್–ಸ್ಲಾವ್ ಚಳವಳಿ'ಗೆ ಪ್ರೋತ್ಸಾಹ ನೀಡಿತು. ಇದರಿಂದ ಆ ಬಾಲ್ಕನ್ ರಾಜ್ಯಗಳು ರಷ್ಯಾವನ್ನು 'ದೊಡ್ಡಣ್ಣ' ಎಂಬಂತೆ ನೋಡತೊಡಗಿದವು.

4. **ಬುದ್ಧಿಜೀವಿಗಳ ಪಾತ್ರ:** ರಷ್ಯಾ ಕ್ರಾಂತಿಯಲ್ಲಿ ಬುದ್ಧಿಜೀವಿಗಳ, ಅದರಲ್ಲಿಯೂ ಸಾಹಿತಿಗಳ ಪ್ರಭಾವ ಹಿರಿದಾಗಿದೆ. ಪ್ರಮುಖ ಸಾಹಿತ್ಯ ಕೃತಿಗಳಾದ **ಲಿಯೋ ಟಾಲ್‌ಸ್ಟಾಯ್** ಅವರ 'ವಾರ್ ಅಂಡ್ ಪೀಸ್' ಮತ್ತು 'ಅನ್ನಾ ಕರೆನಿನ', **ಫ್ಯೂಡರ್ ದೊಸ್ತೋವೆಸ್ಕಿ** ಅವರ 'ಪೂರ್ ಫೊಕ್', **ಮಾಕ್ಸಿಂ ಗಾರ್ಕಿ** ಅವರ 'ಮದರ್', ಮತ್ತು 'ಚಿಲ್ಡ್ರನ್ ಆಫ್ ದಿ ಸನ್', **ತರ್ಗಿನೆವ್** ಅವರ 'ಫಾದರ್ಸ್ ಅಂಡ್ ಸನ್ಸ್' ಮುಂತಾದವು. ರಷ್ಯನ್ನರಲ್ಲಿ ಜಾಗೃತಿಯ ಹೊಸ ಪ್ರಜ್ಞೆಯನ್ನು ಮೂಡಿಸಿದವು. ಮಾನವ ಸ್ವಾತಂತ್ರ್ಯ, ವಿಧಿ, ಯಾತನೆ ಮತ್ತು ಜೀವನದ ಅರ್ಥದ ಕುರಿತು ಆಳವಾಗಿ ಯೋಚಿಸಲು ಇವು ಅವರನ್ನು ಪ್ರೇರೇಪಿಸಿದವು. ಮಾನವರು ಹಿಡಿಯಷ್ಟು ಜನ ಸರ್ವಾಧಿಕಾರಿಗಳ ಕೈಯಲ್ಲಿ ದಬ್ಬಾಳಿಕೆಯನ್ನು ಅನುಭವಿಸಲೆಂದೇ ಹುಟ್ಟಿದವರೇನೂ ಅಲ್ಲ ಎಂಬ ಅರಿವು ಅನೇಕ ರಷ್ಯನ್ನರಲ್ಲಿ ಮೂಡತೊಡಗಿತು.



ಲಿಯೋ ಟಾಲ್‌ಸ್ಟಯ್

ಮಾಕ್ಸಿಂ ಗಾರ್ಕಿ



ತರ್ಗಿನೆವ್

ಜರ್ಮನಿಯೊಂದಿಗಿನ ನಿರಂತರ ಸಂಪರ್ಕದ ಫಲವಾಗಿ, ಅನೇಕ ರಷ್ಯನ್ ಬುದ್ಧಿಜೀವಿಗಳು ಮಾರ್ಕ್ಸ್‌ವಾದದ ಸೆಳೆತಕ್ಕೊಳಗಾದರು. ಇವರಲ್ಲಿ ಪ್ರಮುಖರೆಂದರೆ **ಲೆನಿನ್, ಕೌತ್ಸ್‌ಕಿ** ಮತ್ತು **ಟ್ರಾಟ್ಸ್‌ಕಿ. ಕಾರ್ಲ್ ಮಾರ್ಕ್ಸ್** ಮತ್ತು **ಫ್ರೆಡ್ರಿಕ್ ಎಂಜೆಲ್ಸ್**ರ ಬರಹಗಳು ರಷ್ಯಾದಲ್ಲಿ ಹೆಚ್ಚಾಗಿ ಓದಲ್ಪಟ್ಟವು. ಮಾರ್ಕ್ಸ್‌ನು ಬರೆದ ಪ್ರಮುಖ ಕೃತಿಗಳೆಂದರೆ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೊ' (1848) ಮತ್ತು 'ದಾಸ್ ಕ್ಯಾಪಿಟಲ್' (1867). ಈ ಬರವಣಿಗೆಗಳು ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಆಧಾರಿತ ಸಮಾಜವಾದದ ತತ್ವಗಳನ್ನು ಎತ್ತಿಹಿಡಿದವು. ಮಾರ್ಕ್ಸ್‌ನು "ವಿಶ್ವ ಕಾರ್ಮಿಕರೇ

ಒಂದಾಗಿ; ನೀವು ನಿಮ್ಮ ಗುಲಾಮಗಿರಿಯ ಬಂಧನದ ಸಂಕೋಲೆಗಳನ್ನು ಹೊರತು ಬೇರೇನನ್ನೂ ಕಳೆದುಕೊಳ್ಳುವುದಿಲ್ಲ" ಎಂದು ಕಾರ್ಮಿಕರಿಗೆ ಕರೆನೀಡಿದನು. ಇದು ಸಾವಿರಾರು ಯುವಕ–ಯುವತಿಯರಲ್ಲಿ ಸ್ಫೂರ್ತಿ ತುಂಬಿತು.



ಕಾರ್ಲ್ ಮಾರ್ಕ್ಸ್ (1818–1883): ಕಾರ್ಲ್ ಹೆನ್ರಿಚ್ ಮಾರ್ಕ್ಸ್ ಒಬ್ಬ ಜರ್ಮನ್ ತತ್ವಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ಸಮಾಜಶಾಸ್ತ್ರಜ್ಞ, ಇತಿಹಾಸಕಾರ, ಪತ್ರಕರ್ತ ಮತ್ತು ಕ್ರಾಂತಿಕಾರಿ ಸಮಾಜವಾದಿ. ಅವನ ಚಿಂತನೆಗಳು ಸಮಾಜವಿಜ್ಞಾನದ ಆರಂಭ ಮತ್ತು ಸಮಾಜವಾದಿ ಚಳವಳಿಯ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಮಾರ್ಕ್ಸ್‌ನನ್ನು ಗಾಢ ಪ್ರಭಾವ ಬೀರಿದ ಚಿಂತಕರಲ್ಲಿ ಒಬ್ಬನೆಂದು ಇತಿಹಾಸದಲ್ಲಿ ಒಪ್ಪಲಾಗಿದೆ. ಮಾರ್ಕ್ಸ್‌ನ ಇತಿಹಾಸದ ದೃಷ್ಟಿಕೋನವನ್ನು ಐತಿಹಾಸಿಕ ವಸ್ತುನಿಷ್ಠವಾದವೆಂದು ಕರೆಯುತ್ತಾರೆ. ಸಮಾಜ, ಆರ್ಥಿಕತೆ ಮತ್ತು ರಾಜಕೀಯದ ಮೇಲಿನ ಮಾರ್ಕ್ಸ್‌ನ ಸಿದ್ಧಾಂತಗಳನ್ನು ಒಟ್ಟಾರೆಯಾಗಿ 'ಮಾರ್ಕ್ಸಿಸಂ' ಎಂದು ಕರೆಯುತ್ತಾರೆ. ಸಮಾಜವಾದದ ಸ್ಥಾನದಲ್ಲಿ ಅಂತಿಮವಾಗಿ ರಾಜ್ಯರಹಿತ, ವರ್ಗರಹಿತ ಸಮಾಜ ನಿರ್ಮಾಣವೇ 'ಕಮ್ಯುನಿಸಂ' ಎಂಬುದು ಅವನ ನಂಬಿಕೆಯಾಗಿತ್ತು.

5. **ರಕ್ತಸಿಕ್ತ ರವಿವಾರ: 1905ರ** ಜನವರಿ 22ರ ಭಾನುವಾರದಂದು ಫ಼ಾದರ್ ಗ್ಯಾಪನ್‌ನ ನೇತೃತ್ವದಲ್ಲಿ ಬೃಹತ್ ರ್ಯಾಲಿಯನ್ನು ಸಂಯೋಜಿಸಿದರು, ಮತ್ತು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಜ಼ಾರನನ್ನು ಭೇಟಿಯಾಗಲು ಬಯಸಿದರು. ಆದರೆ ಅದರಲ್ಲಿನ ಅನೇಕರನ್ನು ಸೈನ್ಯವು ನಿರ್ದಯವಾಗಿ ಕೊಂದು ಹಾಕಿತು. ಇದನ್ನು 'ರಕ್ತಸಿಕ್ತ ರವಿವಾರ'ವೆಂದು ಕರೆಯಲಾಗಿದೆ. ಇದು ರಷ್ಯನ್ನರಲ್ಲಿ ಜ಼ಾರನ ವಿರುದ್ಧ ತೀವ್ರ ಅಸಮಾಧಾನಕ್ಕೆ ಕಾರಣವಾಯಿತು.

6. **ಸೈನಿಕ ಕಾರಣಗಳು:** 1905ರಲ್ಲಿ ಪುಟ್ಟ ರಾಷ್ಟ್ರವಾದ ಜಪಾನಿನ ಎದುರು ರಷ್ಯಾದ ಸೋಲು ಜ಼ಾರ್ ವಿರುದ್ಧ

ರಕ್ತಸಿಕ್ತ ರವಿವಾರ : 1905ರಲ್ಲಿ ಕ್ರಾಂತಿಯ ಮೊದಲ ಕಿಡಿ ಹೊತ್ತಿಕೊಂಡಿತು. ಮಾಸ್ಕೊ ಮತ್ತು ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ನಿರಂಕುಶ ಪ್ರಭುತ್ವದ ವಿರುದ್ಧ ಮೆರವಣಿಗೆ ಜಾಥವನ್ನು ಏರ್ಪಡಿಸಿದರು. ಜನವರಿ 22, 1905ರ ರವಿವಾರದಂದು ಫಾದರ್ ಗ್ಯಾಪನ್ ನೇತೃತ್ವದಲ್ಲಿ ಅಪಾರ ಸಂಖ್ಯೆಯ ಕಾರ್ಮಿಕರು ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ಜ಼ಾರ್‌ನನ್ನು ಭೇಟಿ ಮಾಡಿ, ಅವನಲ್ಲಿ ತಮ್ಮ ಕುಂದು ಕೊರತೆಗಳನ್ನು ತೋಡಿಕೊಳ್ಳಲು ಹೊರಟರು. ಆದರೆ ಅವರ ಮೇಲೆ ಸೇನೆಯು ದಾಳಿ ನಡೆಸಿ, ಅವರಲ್ಲಿ ಅನೇಕರನ್ನು ನಿರ್ದಯವಾಗಿ ಕೊಂದುಹಾಕಿತು. ಈ ಘಟನೆಯೇ 'ರಕ್ತಸಿಕ್ತ ರವಿವಾರ'. ಇದು ತೀವ್ರ ಅಸಮಾಧಾನಕ್ಕೆ ಕಾರಣವಾಯಿತು ಮತ್ತು ಅಂತಿಮವಾಗಿ ಜ಼ಾರನು ಆಗಸ್ಟ್ 1905ರಲ್ಲಿ ಆಡಳಿತಾತ್ಮಕ ಸುಧಾರಣೆಯನ್ನು ಜಾರಿಗೆ ತರಲು ಒಪ್ಪಿದನು.

ರಷ್ಯನ್ನರಲ್ಲಿ ಮತ್ತಷ್ಟು ಅಸಮಾಧಾನಕ್ಕೆ ಕಾರಣವಾಯಿತು. ರಷ್ಯನ್ನರಿಗೆ ಜ಼ಾರ್ ಅಜೇಯನೆಂಬ ನಂಬಿಕೆ ನುಚ್ಚು ನೂರಾಯಿತು.

ಇದರ ಜೊತೆಗೆ ರಷ್ಯಾವು ಇಂಗ್ಲೆಂಡ್ ಮತ್ತು ಫ್ರಾನ್ಸಿನ ಜೊತೆ ಸೇರಿ ಮೊದಲ ಜಾಗತಿಕ ಯುದ್ಧವನ್ನು ಪ್ರವೇಶಿಸಿತು. ರಷ್ಯಾವು ಅತ್ಯುತ್ತಮ ಫಿರಂಗಿ ದಳವನ್ನು ಹೊಂದಿತ್ತಾದರೂ, ಅದರ ಸೈನ್ಯವು ತೀವ್ರ ಅವ್ಯವಸ್ಥೆಯಿಂದ ಕೂಡಿತ್ತು. ಶಸ್ತ್ರಾಸ್ತ್ರ ಮತ್ತು ಯುದ್ಧ ಸಾಮಗ್ರಿಗಳ ವಿಪುಲ ಸಂಗ್ರಹ ಇದ್ದಾಗಿಯೂ ಕೂಡ, ಕಾಲಕಾಲಕ್ಕೆ ಸೂಕ್ತ ಸೈನಿಕ ನೀತಿಯನ್ನು ರೂಪಿಸಿ, ಜಾರಿಗೊಳಿಸುವಲ್ಲಿ ರಷ್ಯಾ ವಿಫಲವಾಗಿತ್ತು. ಮೊದಲ ಜಾಗತಿಕ ಯುದ್ಧದ ವೇಳೆ 1915ರಲ್ಲಿ ರಷ್ಯಾ ಸೋಲುವ ಮೂಲಕ ಮತ್ತೊಂದು ಸೈನಿಕ ಹಿನ್ನಡೆಯನ್ನು ಎದುರಿಸಿತು. ಈ ಹಿನ್ನಡೆಗಳು ರಷ್ಯಾದ ಸೈನಿಕ ದೌರ್ಬಲ್ಯವನ್ನು ಜಗತ್ತಿಗೆ ಅನಾವರಣಗೊಳಿಸಿತು. ಈ ಮೇಲಿನ ಎಲ್ಲಾ ಕಾರಣಗಳು ರಷ್ಯಾದ ಕ್ರಾಂತಿಗೆ ಕಾರಣವಾದವು.

ಕ್ರಾಂತಿಯ ಗತಿ: ರಷ್ಯಾದ ದುಡಿಯುವ ವರ್ಗವು ಮಾರ್ಕ್ಸ್‌ವಾದದಿಂದ ಪ್ರಭಾವಿತಗೊಂಡಿತ್ತು. ಅವರು 'ಕಾರ್ಮಿಕರ ಸಮಾಜವಾದಿ ಪ್ರಜಾಸತ್ತಾತ್ಮಕ ಪಕ್ಷ'ವನ್ನು ಸಂಘಟಿಸಿದರು. 1903ರಲ್ಲಿ ಈ ಪಕ್ಷವು ತಾತ್ವಿಕ ಹಿನ್ನೆಲೆಯಿಂದ ಇಬ್ಭಾಗವಾಯಿತು. ಲೆನಿನ್‌ನ ನಾಯಕತ್ವದ ತೀವ್ರವಾದಿಗಳನ್ನು ಬೋಲ್ಷವಿಕ್ಕರು ಎಂತಲೂ, ಅಲೆಕ್ಸಾಂಡರ್ ಕೆರೆನ್‌ಸ್ಕಿ ನೇತೃತ್ವದ ಸೌಮ್ಯವಾದಿಗಳನ್ನು ಮೆನ್ಷವಿಕ್ಕರೆಂತಲೂ ಕರೆಯಲಾಯಿತು.

ಬೋಲ್ಷವಿಕ್ಕರು ಮತ್ತು ಮೆನ್ಷವಿಕ್ಕರು

ರಷ್ಯನ್ ಸಮಾಜವಾದಿ ಪ್ರಜಾಸತ್ತಾತ್ಮಕ ಕಾರ್ಮಿಕರ ಪಕ್ಷವು ಒಂದು ಮಾರ್ಕ್ಸ್‌ವಾದಿ ರಾಜಕೀಯ ಪಕ್ಷ. 1903ರಲ್ಲಿ ಪಕ್ಷದ ಸದಸ್ಯರಲ್ಲಿ ಪರಸ್ಪರರ ನಡುವೆ ಭಿನ್ನಾಭಿಪ್ರಾಯ ಮೂಡಿತು. ಪಕ್ಷವು ಬೋಲ್ಷವಿಕ್ ಮತ್ತು ಮೆನ್ಷವಿಕ್ ಎಂಬ ಎರಡು ಗುಂಪುಗಳಾಗಿ ಇಬ್ಭಾಗವಾಯಿತು. 'ಬಹು ಸಂಖ್ಯೆಯಲ್ಲಿರುವವರನ್ನು' ಬೋಲ್ಷವಿಕ್ಕರೆಂದು ಕರೆಯಲಾಯಿತು. "ಅಲ್ಪ ಸಂಖ್ಯೆಯಲ್ಲಿ ಇರುವವರನ್ನು" ಮೆನ್ಷವಿಕ್ಕರೆಂದು ಕರೆಯಲಾಯಿತು.

1915ರಲ್ಲಿ ರಷ್ಯಾವು ಮೊದಲ ಜಾಗತಿಕ ಯುದ್ಧದಲ್ಲಿ ಸೋತ ನಂತರ ಕ್ರಾಂತಿಕಾರಿಗಳು ಜ಼ಾರ್ ಪ್ರಭುತ್ವವನ್ನು ಕಿತ್ತೊಗೆಯಲು ಪಟ್ಟು ಹಿಡಿದರು. 1916ರ ಕೊನೆಯ ಹೊತ್ತಿಗೆ ರಾಸ್‌ಪುಟಿನ್‌ನನ್ನು ಕೊಲ್ಲಲಾಯಿತು. ಯುದ್ಧಕ್ಕೂ ಮೊದಲೇ ಡ್ಯೂಮದಲ್ಲಿ ಸಂವಿಧಾನಿಕ ಸುಧಾರಣೆಗಾಗಿ ಬೇಡಿಕೆ ಆರಂಭವಾಗಿದ್ದವು. ಜ಼ಾರನು ಡ್ಯೂಮವನ್ನು ವಿಸರ್ಜಿಸಿದನಲ್ಲದೆ, ಅದರ ಅನೇಕ ಸದಸ್ಯರನ್ನು ಬಂಧನಕ್ಕೊಳಪಡಿಸಿದನು. ಆಡಳಿತದಲ್ಲಿನ ಉದಾಸೀನತೆಯು ಆಹಾರ ಸರಬರಾಜಿನ ಮೇಲೆ ದುಷ್ಪರಿಣಾಮ ಬೀರಿತು. 1917, ಮಾರ್ಚ್ 8 ರಂದು ಮಹಿಳಾ ಕಾರ್ಮಿಕರು **ಪೆಟ್ರೋಗ್ರಾಡ್**‌ನಲ್ಲಿ ಆಹಾರದ ಬೇಡಿಕೆಯನ್ನು ಮುಂದಿಟ್ಟು ಮುಷ್ಕರವನ್ನು ಸಂಘಟಿಸಿದರು. ಮಾರ್ಚ್ 9 ರಂದು ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಮುಷ್ಕರಕ್ಕೆ ಬಂದು ಸೇರಿಕೊಂಡರು. ಮಾರ್ಚ್ 10ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದರು. ಮುಷ್ಕರ ನಿರತ ಕಾರ್ಮಿಕರ ಮೇಲೆ ಗುಂಡಿನ ದಾಳಿ ನಡೆಸಲು ಸೈನಿಕರಿಗೆ ಆದೇಶ ನೀಡಲಾಯಿತು. ಆದರೆ ಅವರು ಆದೇಶವನ್ನು ಪಾಲಿಸಲು ನಿರಾಕರಿಸಿದರು ಮತ್ತು ಕಾರ್ಮಿಕರಿಗೆ ತಮ್ಮ ಐಕ್ಯಮತವನ್ನು ವ್ಯಕ್ತಪಡಿಸಿದರು. ಇದು ಜ಼ಾರ್ 2ನೇ ನಿಕೊಲಸ್‌ಗೆ ದೊಡ್ಡ ಹೊಡೆತವಾಯಿತು. ಅಂತಿಮವಾಗಿ ಮಾರ್ಚ್ 15 ರಂದು ಜ಼ಾರನು ಸಿಂಹಾಸನ ತ್ಯಜಿಸಲೇಬೇಕಾಯಿತು.

ಜ಼ಾರನ ಪದಚ್ಯುತಿಯ ನಂತರ, ರಷ್ಯಾದಲ್ಲಿ ಕೆರೆನ್‌ಸ್ಕಿ ನೇತೃತ್ವದಲ್ಲಿ ಒಂದು ತಾತ್ಕಾಲಿಕ ಸರ್ಕಾರ ಸ್ಥಾಪನೆಯಾಯಿತು. ಇದನ್ನೆ 'ಮೆನ್ಷವಿಕ್ ಕ್ರಾಂತಿ' ಅಥವಾ 'ಮಾರ್ಚ್ ಕ್ರಾಂತಿ' ಎಂದು ಕರೆಯಲಾಗಿದೆ. ಸರ್ಕಾರವು ವಾಕ್ ಸ್ವಾತಂತ್ರ್ಯ ಮತ್ತು ಸಂಘಟನಾ ಸ್ವಾತಂತ್ರ್ಯವನ್ನು ಬಲಪಡಿಸಿತು ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿದು, ಧಾರ್ಮಿಕ ಮತ್ತು ಉದಾರ ವಿಚಾರಗಳಿಗೆ ಪ್ರೋತ್ಸಾಹ ನೀಡಿತು. ಆದರೆ ತಾತ್ಕಾಲಿಕ ಸರ್ಕಾರವು ಮೊದಲ ಜಾಗತಿಕ ಯುದ್ಧವನ್ನು ಮುಂದುವರಿಸಿತು ಮತ್ತು ಗಂಭೀರವಾದ ಹಿನ್ನಡೆಯನ್ನು ಅನುಭವಿಸಿತು. ಕರೆನ್‌ಸ್ಕಿ ನೇತೃತ್ವದ ಮೆನ್ಷವಿಕ್ ಸರ್ಕಾರವು ರಷ್ಯನ್ನರ ಆಶೋತ್ತರಗಳಾದ ಭೂಮಿ, ಶಾಂತಿ ಮತ್ತು ಭದ್ರತೆಯನ್ನು

ಅಲೆಕ್ಸಾಂಡರ್ ಕೆರೆನ್‌ಸ್ಕಿ

ನೀಡಲಾಗಲಿಲ್ಲವಾದ್ದರಿಂದ ಅಧಿಕಾರದಲ್ಲಿ ವಿಫಲವಾಯಿತು. ಅಂತಿಮವಾಗಿ ಅಕ್ಟೋಬರ್ 15, 1917ರಂದು ಲೆನಿನ್ ನೇತೃತ್ವದ ಬೋಲ್ಷವಿಕ್ಕರು ಮೆನ್ಷವಿಕ್ ಸರ್ಕಾರವನ್ನು ಪ್ರತಿಭಟಿಸಿ ಅಕ್ಟೋಬರ್ 25, 1917ರಂದು ತಾತ್ಕಾಲಿಕ ಸರ್ಕಾರವನ್ನು ಪದಚ್ಯುತಿಗೊಳಿಸಿದರು. ಇದನ್ನೆ 'ಅಕ್ಟೋಬರ್ ಕ್ರಾಂತಿ' ಅಥವಾ 'ಬೋಲ್ಷವಿಕ್ ಕ್ರಾಂತಿ' ಎಂದು ಕರೆಯಲಾಗಿದೆ. ಲೆನಿನನು ಅಧಿಕಾರಕ್ಕೆ ಬಂದ ಕೂಡಲೆ ಕೆಂಪು ಸೇನೆಯ ಸಹಾಯದಿಂದ ಜನತೆಯ ಈ ಎಲ್ಲಾ ಆಶೋತ್ತರಗಳನ್ನು ಪೂರೈಸಿದನು. ಅಕ್ಟೋಬರ್ ಕ್ರಾಂತಿಯ ನಂತರ ಯು.ಎಸ್.ಎಸ್.ಆರ್. (ಯೂನಿಯನ್ ಆಫ್ ಸೋವಿಯತ್ ಸೋಷಿಯಲಿಸ್ಟ್ ರಿಪಬ್ಲಿಕ್) ಸ್ಥಾಪಿಸಿದನು. ಲೆನಿನ್ ಗಣರಾಜ್ಯದ ಮುಖ್ಯಸ್ಥನಾಗಿ 1924ರಲ್ಲಿ ಅವನು ಮರಣ ಹೊಂದುವವರೆಗೂ ಮುಂದುವರಿದನು.

ರಷ್ಯಾದಲ್ಲಿ 1918ರ ಫೆಬ್ರವರಿವರೆಗೆ ಜ್ಯೂಲಿಯನ್ ಕ್ಯಾಲೆಂಡರನ್ನು ಬಳಸಲಾಗುತ್ತಿತ್ತು. ಈ ಕ್ಯಾಲೆಂಡರ್ ಇಂದು ನಾವೆಲ್ಲ ಬಳಸುವ ಗ್ರೆಗೋರಿಯನ್ ಕ್ಯಾಲೆಂಡರ್‌ಗಿಂತ 13 ದಿನ ಹಿಂದೆ ಇತ್ತು. ಜ್ಯೂಲಿಯನ್ ಕ್ಯಾಲೆಂಡರ್ ಪ್ರಕಾರ ಕ್ರಾಂತಿ ನಡೆದದ್ದು ಅಕ್ಟೋಬರ್ 25, 1917ರಂದು. ಆದರೆ ಗ್ರೆಗೋರಿಯನ್ ಕ್ಯಾಲೆಂಡರ್ ಸ್ವೀಕರಿಸಿದ ಮೇಲೆ ರಷ್ಯಾದಲ್ಲಿ ಅಕ್ಟೋಬರ್ ಕ್ರಾಂತಿಯ ದಿನವನ್ನು ನವೆಂಬರ್ 7, ರಂದು ಆಚರಿಸಲಾಗುತ್ತಿದೆ.

ಪರಿಣಾಮಗಳು:

1. ಜ಼ಾರರ ನಿರಂಕುಶ ಅಧಿಕಾರವು ಕೊನೆಗೊಂಡಿತು ಮತ್ತು ಸಮಾಜವಾದಿ ಆದರ್ಶಗಳ ಆಧಾರದ ಮೇಲೆ ಸಂವಿಧಾನಾತ್ಮಕ ಗಣರಾಜ್ಯವು ರಷ್ಯಾದಲ್ಲಿ ರೂಪುಗೊಂಡಿತು.
2. ಯೂನಿಯನ್ ಆಫ್ಲ್ ಸೋವಿಯತ್ ಸೋಷಿಯಲಿಸ್ಟ್ ರಿಪಬ್ಲಿಕ್ (ಯು.ಎಸ್.ಎಸ್.ಆರ್) ಅಸ್ತಿತ್ವಕ್ಕೆ ಬಂದು ಇದು ಯುನೈಟೆಡ್ ಸ್ಟೇಟ್ಸ್ ಆಫ್ಲ್ ಅಮೇರಿಕಾ (ಯು.ಎಸ್.ಎ)ಗೆ ಪ್ರತಿ ಶಕ್ತಿಯಾಯಿತು. ಇದು ಜಗತ್ತಿನಲ್ಲಿ ಎರಡು ಶಕ್ತಿಬಣಗಳ ಉದಯಕ್ಕೆ ಕಾರಣವಾಯಿತು. ಈ ವಿರೋಧಿ ಬಣಗಳೇ ಎರಡನೇ ಜಾಗತಿಕ ಯುದ್ಧದ ನಂತರ ಶೀತಲ ಸಮರಕ್ಕೆ ಕಾರಣವಾದವು.
3. 1921ರಲ್ಲಿ ಜಾರಿಗೆ ತಂದ 'ಹೊಸ ಆರ್ಥಿಕ ನೀತಿ' (ಎನ್.ಇ.ಪಿ) ಯಿಂದಾಗಿ ಕಾರ್ಮಿಕರ ಮತ್ತು ರೈತರ ಸ್ಥಿತಿಗತಿಗಳಲ್ಲಿ ಸುಧಾರಣೆ ಕಂಡಿತು.
4. ಹೊಸ ಕಮ್ಯುನಿಸ್ಟ್ ಸರ್ಕಾರದ ನೇತೃತ್ವದಲ್ಲಿ ರಷ್ಯಾ ಮಹತ್ತರವಾದ ಪ್ರಗತಿಯನ್ನು ಸಾಧಿಸಿತು ಮತ್ತು ಬಲಿಷ್ಠ ರಾಷ್ಟ್ರವಾಗಿ ತಲೆಎತ್ತಿತು.
5. ಏಷ್ಯಾ, ಆಫ್ರಿಕಾ, ಪೂರ್ವ ಯೂರೋಪ್ ಹಾಗೂ ಲ್ಯಾಟಿನ್ ಅಮೆರಿಕಾ ಸೇರಿದಂತೆ ಜಗತ್ತಿನ ವಿವಿಧ ಭಾಗಗಳಲ್ಲಿ ಕಮ್ಯುನಿಸ್ಟ್ ಸಿದ್ಧಾಂತಗಳು ಹರಡಲಾರಂಭಿಸಿತು.

ಆಧುನಿಕ ಜಗತ್ತಿನ ಚರಿತ್ರೆಯಲ್ಲಿ ರಷ್ಯಾದ ಕ್ರಾಂತಿಯು ಒಂದು ಮಹತ್ವದ ಘಟನೆಯಾಗಿದೆ. ಮಾರ್ಕ್ಸ್ ಮತ್ತು ಎಂಗೆಲ್ಸ್‌ರ ವಿಚಾರಗಳು ಕೇವಲ ಆದರ್ಶಗಳಲ್ಲ, ಅವುಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೂ ತರಬಹುದು ಎಂಬುದನ್ನು ಇದು ತೋರಿಸಿ ಕೊಟ್ಟಿತು. ಶೋಷಣೆ, ದಬ್ಬಾಳಿಕೆಗಳನ್ನು ಹತ್ತಿಕ್ಕಿ ಸಮಾನತೆಯಲ್ಲಿ ನಂಬಿಕೆ ಇರುವ ರಾಜ್ಯವನ್ನು ಸ್ಥಾಪಿಸುವ ಶಕ್ತಿ ದುಡಿಯುವ ವರ್ಗಗಳ ಕೈಯಲ್ಲಿದೆ ಎಂಬುದನ್ನು ಇದು ತೋರಿಸಿಕೊಟ್ಟಿತು.

ಸುಯೋಜಿತವಾದ ಆರ್ಥಿಕ ನೀತಿಯಿಂದ ಹಲವು ಪ್ರಗತಿಪರ ಬದಲಾವಣೆಯತ್ತ ದೇಶವನ್ನು ಕೊಂಡೊಯ್ಯಬಹುದು ಎಂಬುದನ್ನೂ ತೋರಿಸಿಕೊಟ್ಟಿತು.

ಕಮ್ಯುನಿಸಂ: ಕಮ್ಯುನಿಸಂ ಎಂಬುದು ಒಂದು ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತವಾಗಿದೆ. ಅದು ಖಾಸಗಿ ಆಸ್ತಿ ಮತ್ತು ಲಾಭಾಂಶ ಆಧಾರಿತ ಆರ್ಥಿಕತೆಯ ಸ್ಥಾನದಲ್ಲಿ ಸಾರ್ವಜನಿಕ ಆಸ್ತಿ ಮತ್ತು ಕನಿಷ್ಠ ಪ್ರಧಾನ ಉತ್ಪಾದನೆಗಳು ಸಮುದಾಯದ ನಿಯಂತ್ರಣದಲ್ಲಿರಬೇಕು (ಉದಾ: ಗಣಿ, ಗಿರಣಿ, ಕಾರ್ಖಾನೆಗಳು). ಮತ್ತು ಸ್ವಾಭಾವಿಕ ಸಂಪತ್ತುಗಳು ಸಮಾಜದ ನಿಯಂತ್ರಣದಲ್ಲಿರಬೇಕು ಎಂಬ ಗುರಿಯನ್ನು ಹೊಂದಿದೆ.

ಸಮಾಜವಾದ: ಸಾಮಾಜಿಕ ಮತ್ತು ಆರ್ಥಿಕ ಚಿಂತನೆಯಾದ ಸಮಾಜವಾದವು ಸ್ವಾಭಾವಿಕ ಸಂಪತ್ತು ಮತ್ತು ಸ್ವತ್ತನ್ನು ನಿಯಂತ್ರಿಸುವ ಅಥವಾ ಖಾಸಗಿ ಮಾಲೀಕತ್ವದ ಬದಲಿಗೆ ಸಾರ್ವಜನಿಕ ಸ್ವತ್ತಿಗೆ ಕರೆನೀಡುತ್ತದೆ. ಸಮಾಜವಾದಿಗಳ ದೃಷ್ಟಿಕೋನದ ಪ್ರಕಾರ ವೈಯಕ್ತಿಕ ಅಥವಾ ಪ್ರತ್ಯೇಕ ದುಡಿಮೆಗೂ ಅವಕಾಶವಿಲ್ಲ. ಆದರೆ ಪ್ರತಿಯೊಬ್ಬರೂ ಸಹಕಾರದೊಂದಿಗೆ ಬದುಕಬೇಕು. ಇನ್ನೂ ಹೆಚ್ಚಿನದಾಗಿ, ಜನರು ಉತ್ಪಾದಿಸುವುದೆಲ್ಲ ಒಂದರ್ಥದಲ್ಲಿ ಸಾಮಾಜಿಕ ಉತ್ಪದನೆಯಾಗಿರುತ್ತದೆ ಮತ್ತು ಒಳ್ಳೆಯದರ ಉತ್ಪಾದನೆಗೆ ಕೊಡುಗೆ ನೀಡುವವರೆಲ್ಲರೂ ಅದರಲ್ಲಿ ಪಾಲುದಾರರಾಗುವ ಹಕ್ಕುಳ್ಳವರಾಗಿರುತ್ತಾರೆ. ಆದ್ದರಿಂದ ಇಡೀ ಸಮಾಜವೇ ತನ್ನೆಲ್ಲಾ ಸದಸ್ಯರ ಉಪಯೋಗಕ್ಕಾಗಿ ಸ್ವತ್ತಿನ ಮಾಲೀಕತ್ವವನ್ನು ಹೊಂದಿರಬೇಕು ಅಥವಾ ನಿಯಂತ್ರಣವನ್ನಾದರೂ ಹೊಂದಿರಬೇಕು.

ಲೆನಿನ್ (1870–1924): ಲೆನಿನನು 1870ರ ಏಪ್ರಿಲ್ 22ರಂದು ಸಿಂಬ್ರಿಸ್ಕ್ ಎಂಬಲ್ಲಿ ಜನಿಸಿದನು. ಅವನ ಮೂಲ ಹೆಸರು ವ್ಲಾಡಿಮೀರ್ ಇಲಿಚ್ ಉಲ್ಯನೋವ್. ಲೆನಿನನ ತಂದೆ ಶಾಲಾ ಇನ್ಸ್‌ಪೆಕ್ಟರ್ ಆಗಿದ್ದರು. ಲೆನಿನ್‌ಗೆ 16 ವರ್ಷ ಆಗಿದ್ದಾಗ ಅವರು ಮರಣ ಹೊಂದಿದರು. ಆನಂತರ ಅಣ್ಣನಾದ ಅಲೆಕ್ಸಾಂಡರನು ಜ಼ಾರ್ 2ನೇ ನಿಕೋಲಸ್‌ನ್ನು ಕೊಲ್ಲುವ ಪ್ರಯತ್ನದಲ್ಲಿ ಭಾಗಿಯಾಗಿದ್ದನೆಂದು ಮರಣ ದಂಡನೆಗೆ ಗುರಿಯಾದನು. ಲೆನಿನನು ಚಿಕ್ಕವಯಸ್ಸಿನಲ್ಲಿಯೇ ಮಾರ್ಕ್ಸ್‌ವಾದದಿಂದ ಪ್ರಭಾವಿತನಾಗಿದ್ದನು ಮತ್ತು ಕ್ರಾಂತಿಕಾರಿಯಾದನು. ಇವನು 1895ರಲ್ಲಿ ಬಂಧಿತನಾದನು ಮತ್ತು ಸೈಬೀರಿಯಾಗೆ ಗಡಿಪಾರಾದನು. ಅಲ್ಲಿ ಅವನು 1899ರಲ್ಲಿ 'ಡೆವಲಪ್‌ಮೆಂಟ್ ಆಫ್ ಕ್ಯಾಪಿಟಲಿಸಂ ಇನ್ ರಷ್ಯಾ' ಎಂಬ ಕೃತಿಯನ್ನು ಬರೆದನು.

ನಂತರ ಸೈಬೀರಿಯಾದಿಂದ ಪಲಾಯನಗೈದು, ಸ್ವಿಟ್ಜರ್‌ಲ್ಯಾಂಡಿನಲ್ಲಿ ದೇಶಭ್ರಷ್ಟನಾಗಿ ಬದುಕಿದನು. 1900ರಲ್ಲಿ ಜಿನೇವಾದಲ್ಲಿ ಪ್ಲೆಖನೋವ್‌ನೊಂದಿಗೆ ಸೇರಿ 'ಇಸ್ಕ್ರಾ' (ಕಿಡಿ) ಎಂಬ ಪತ್ರಿಕೆಯನ್ನು ಹೊರ ತಂದನು. 1903ರಲ್ಲಿ ತೀವ್ರಗಾಮಿ ಕ್ರಾಂತಿಕಾರಿ ಬಣವಾದ ಬೋಲ್ಶವಿಕ್ ಪಕ್ಷದ ನಾಯಕನಾದನು. ಜ಼ಾರ್ ಪ್ರಭುತ್ವದ ವಿರುದ್ಧ ಹೋರಾಟವನ್ನು ಮುಂದುವರಿಸಿದನು ಮತ್ತು 1905ರ ಕ್ರಾಂತಿಯನ್ನು ಬೆಂಬಲಿಸಿದನು. ಅಕ್ಟೋಬರ್ 25, 1917ರಂದು ಕೆರೆನ್‌ಸ್ಕಿ ನೇತೃತ್ವದ ಮೆನ್ಷವಿಕ್ ಸರ್ಕಾರವನ್ನು ಪದಚ್ಯುತಗೊಳಿಸಿದನು. ಅವನು ಸೈನಿಕರು, ಬಡ ರೈತರು ಮತ್ತು ಕಾರ್ಮಿಕರಿಗೆ ಅರಿಕೆ ಮಾಡಿಕೊಂಡನು ಹಾಗೂ ಅವರಿಗೆ "ಶಾಂತಿ, ಭೂಮಿ, ಆಹಾರ" ಒದಗಿಸುವ ಆಶ್ವಾಸನೆ ಇತ್ತನು.

'ಬ್ರೆಸ್ಟ್ ಲಿಟೋಸ್ಕ್' (1917) ಒಪ್ಪಂದದ ಮೂಲಕ ಮೊದಲ ಜಾಗತಿಕ ಯುದ್ಧದಿಂದ ಹಿಂದೆ ಸರಿದನು. 1918ರಲ್ಲಿ ಹೊಸ ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಇವನು ಹೊಸ ಆರ್ಥಿಕ ನೀತಿ (ಎನ್.ಇ.ಪಿ)ಯನ್ನು ಮಾರ್ಚ್ 1921ರಂದು ಜಾರಿಗೆ ತಂದನು. ಯೂನಿಯನ್ ಆಫ್ ಸೋವಿಯತ್ ಸೋಷಿಯಲಿಸ್ಟ್ ರಿಪಬ್ಲಿಕ್ (ಯು.ಎಸ್.ಎಸ್.ಆರ್) ಡಿಸೆಂಬರ್ 30, 1922ರಂದು ರೂಪುಗೊಂಡಿತು. ನಿರುದ್ಯೋಗ ಸಮಸ್ಯೆ, ಆಹಾರದ ಕೊರತೆ ಮತ್ತು ಕುಂಠಿತಗೊಂಡ ಕೈಗಾರಿಕಾ ಬೆಳವಣಿಗೆ ಇವುಗಳನ್ನು ಯಶಸ್ವಿಯಾಗಿ ಪರಿಹರಿಸಿದನು. ವ್ಯಾಪಾರ, ವಾಣಿಜ್ಯ, ಸಂವಹನ ಮಾಧ್ಯಮ, ಕೈಗಾರಿಕೆಗಳು ಮತ್ತು ಬ್ಯಾಂಕುಗಳನ್ನು ರಾಷ್ಟ್ರೀಕರಿಸಿದನು. ಈ ಹೊಸ ಸಿದ್ಧಾಂತವನ್ನು ವಿರೋಧಿಸಿದ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ರಷ್ಯಾದಲ್ಲಿ ಪ್ರತಿಕ್ರಾಂತಿ ಏಳುವಂತೆ ಪ್ರಚೋದನೆ ನೀಡಿದವು. ಲೆನಿನನು ಕೆಂಪು ಸೇನೆ ಮತ್ತು 'ಛೇಕಾ' ಎಂಬ ರಹಸ್ಯ ಪೋಲೀಸ್ ಪಡೆಯ ನೆರವಿನಿಂದ ದೇಶಿಯ ಮತ್ತು ವಿದೇಶಿಯ ಅಪಾಯಕಾರಿ ಶಕ್ತಿಗಳನ್ನು ಯಶಸ್ವಿಯಾಗಿ ನಿಗ್ರಹಿಸಿದನು. ಅಂತಿಮವಾಗಿ 1924, ಜನವರಿ 21 ರಂದು ಲೆನಿನನು ಗಾರ್ಕಿಯಲ್ಲಿ ಕೊನೆಯುಸಿರೆಳೆದನು.

ಚಟುವಟಿಕೆ: ಫ್ರಾನ್ಸಿನ ಕ್ರಾಂತಿ ಮತ್ತು ರಷ್ಯಾದ ಕ್ರಾಂತಿಯ ನಡುವಿನ ಭಿನ್ನತೆ ಮತ್ತು ಸಾಮ್ಯತೆಗಳನ್ನು ಪಟ್ಟಿ ಮಾಡಿ.

ಪ್ರಶ್ನೆಗಳು

ಕೆಳಕಂಡವುಗಳನ್ನು ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 1 ಅಂಕ)

1. ರಷ್ಯಾ ಕ್ರಾಂತಿಯು ಯಾವ ತತ್ವವನ್ನು ಪ್ರತಿಪಾದಿಸಿತು.
2. ಕ್ರಾಂತಿಯ ಕಾಲದಲ್ಲಿ ರಷ್ಯಾವನ್ನು ಆಳುತ್ತಿದ್ದ ಜ಼ಾರ್ ಯಾರು?
3. ಕ್ರಾಂತಿಯ ಕಾಲದಲ್ಲಿ ರಷ್ಯಾವನ್ನು ಆಳುತ್ತಿದ್ದ ಮನೆತನ ಯಾವುದು?
4. ಜ಼ಾರ್ 2ನೇ ನಿಕೋಲಸನ ರಾಣಿಯನ್ನು ಹೆಸರಿಸಿ.
5. ಜ಼ಾರ್ 2ನೇ ನಿಕೋಲಸನ ಆಡಳಿತದ ಮೇಲೆ ಪ್ರಭಾವ ಬೀರಿದ ಸನ್ಯಾಸಿ ಯಾರು?
6. ಜ಼ಾರ್ ದೊರೆಗಳು ಯಾವ ತತ್ವ ಸಿದ್ಧಾಂತದ ಮೇಲೆ ರಷ್ಯಾದಲ್ಲಿ ಆಳ್ವಿಕೆ ನಡೆಸುತ್ತಿದ್ದರು?
7. ರೂಸೀಕರಣ ನೀತಿಯನ್ನು ಪರಿಚಯಿಸಿದವರು ಯಾರು?
8. 'ಪೂರ್ ಫ್ಲೋಕ್' ಕೃತಿಯ ಕರ್ತೃ ಯಾರು?
9. 'ಫ್ಲಾದರ್ಸ್ ಅಂಡ್ ಸನ್ಸ್' ಕೃತಿಯನ್ನು ಬರೆದವರು ಯಾರು?
10. 'ರಕ್ತ ಸಿಕ್ತ ರವಿವಾರ'ದ ಘಟನೆಯು ಯಾವಾಗ ನಡೆಯಿತು?
11. 1905ರಲ್ಲಿ ರಷ್ಯಾವನ್ನು ಯಾವ ರಾಷ್ಟ್ರ ಸೋಲಿಸಿತು?
12. ಮೆನ್ಷವಿಕ್ ಪಕ್ಷದ ನಾಯಕ ಯಾರು?
13. ಲೆನಿನನು ಯಾವ ಪಕ್ಷದ ಮುಖಂಡನಾಗಿದ್ದನು?
14. ರಷ್ಯಾದಲ್ಲಿ ತಾತ್ಕಾಲಿಕ ಸರ್ಕಾರ ಯಾರ ನಾಯಕತ್ವದಲ್ಲಿ ಸ್ಥಾಪನೆಯಾಯಿತು?
15. ಎನ್.ಇ.ಪಿ– ವಿಸ್ತರಿಸಿ.
16. ಯು.ಎಸ್.ಎಸ್.ಆರ್ – ವಿಸ್ತರಿಸಿ.

ಕೆಳಕಂಡವುಗಳನ್ನು 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 2 ಅಂಕಗಳು)

1. ರಷ್ಯಾದ ಸಮಾಜದಲ್ಲಿದ್ದ ಎರಡು ವರ್ಗಗಳನ್ನು ಹೆಸರಿಸಿ.
2. ರೂಸೀಕರಣ ನೀತಿಯ ಘೋಷಣೆ ಯಾವುದು?
3. ರಷ್ಯಾ ಕ್ರಾಂತಿಗೆ ಪ್ರೇರಣೆ ನೀಡಿದ ಇಬ್ಬರು ಬುದ್ಧಿಜೀವಿಗಳನ್ನು ಹೆಸರಿಸಿ.
4. ಲಿಯೋ ಟಾಲ್‌ಸ್ಟಾಯ್ ಅವರ ಎರಡು ಕೃತಿಗಳನ್ನು ಹೆಸರಿಸಿ.
5. ಮಾಕ್ಸಿಂ ಗಾರ್ಕಿ ಯಾರು? ಅವರ ಕೃತಿಯನ್ನು ಹೆಸರಿಸಿ.
6. ಮಾರ್ಕ್ಸ್‌ವಾದದ ಪ್ರಭಾವಕ್ಕೆ ಒಳಗಾದ ರಷ್ಯಾದ ಬುದ್ಧಿಜೀವಿಗಳನ್ನು ಹೆಸರಿಸಿ.
7. ಕಾರ್ಲ್ ಮಾರ್ಕ್ಸ್‌ನ ಎರಡು ಕೃತಿಗಳನ್ನು ತಿಳಿಸಿ.
8. ಕಾರ್ಲ್ ಮಾರ್ಕ್ಸ್ ವಿಶ್ವ ಕಾರ್ಮಿಕರಿಗೆ ಏನೆಂದು ಕರೆಕೊಟ್ಟನು?
9. ರಕ್ತಸಿಕ್ತ ರವಿವಾರ ಎಂದರೇನು?
10. ರಷ್ಯಾ ಕ್ರಾಂತಿಯ ಸಮಯದಲ್ಲಿದ್ದ ಎರಡು ಪಕ್ಷಗಳನ್ನು ಹೆಸರಿಸಿ.

ಕೆಳಕಂಡವುಗಳಿಗೆ 15 – 20 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 5 ಅಂಕಗಳು)

1. ರಷ್ಯಾ ಕ್ರಾಂತಿಗೆ ಕಾರಣವಾದ ಸಾಮಾಜಿಕ ಮತ್ತು ಆರ್ಥಿಕ ಅಂಶಗಳನ್ನು ವಿವರಿಸಿ.
2. ರಷ್ಯಾ ಕ್ರಾಂತಿಯಲ್ಲಿ ಬುದ್ಧಿಜೀವಿಗಳ ಪಾತ್ರವನ್ನು ಕುರಿತು ಬರೆಯಿರಿ.
3. ರಷ್ಯಾ ಕ್ರಾಂತಿಯ ಗತಿಯನ್ನು ವಿವರಿಸಿ.
4. ರಷ್ಯಾ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ.

ಕೆಳಕಂಡ ಪ್ರಶ್ನೆಗೆ 30 – 40 ವಾಕ್ಯಗಳಲ್ಲಿ ಉತ್ತರಿಸಿ. (10 ಅಂಕಗಳು)

1. ರಷ್ಯಾ ಕ್ರಾಂತಿಯ ಕಾರಣಗಳು ಹಾಗೂ ಪರಿಣಾಮಗಳನ್ನು ವಿವರಿಸಿ.

ಅಧ್ಯಾಯ –9

ನೆಪೋಲಿಯನ್ ಬೋನಾಪಾರ್ಟೆ ಮತ್ತು ರಾಷ್ಟ್ರೀಯತೆಯ ಉದಯ:

ರಾಷ್ಟ್ರೀಯತೆ ಎಂದರೆ ತಮ್ಮ ರಾಷ್ಟ್ರದ ಬಗೆಗೆ ಜನರ ನಿಷ್ಠೆ ಹಾಗೂ ಭಕ್ತಿ ಎಂದರ್ಥ. ತಮ್ಮ ಸಂಸ್ಕೃತಿ, ಭಾಷೆ ಮತ್ತು ರಾಷ್ಟ್ರದ ಬಗ್ಗೆ ಜನರ ಉತ್ಕಟ ಪ್ರೀತಿ ಎಂದೂ ಹೇಳಬಹುದು. ಈ ಅಧ್ಯಾಯದಲ್ಲಿ ನೆಪೋಲಿಯನ್ನನ ಯುದ್ಧಗಳು, ನೀತಿಗಳು ಮತ್ತು ಆಡಳಿತ, ಫ್ರಾನ್ಸ್ ಹಾಗೂ ಯೂರೋಪಿನಲ್ಲಿ ಹೇಗೆ ರಾಷ್ಟ್ರೀಯತೆಯ ಉದಯಕ್ಕೆ ಕಾರಣವಾಯಿತೆಂಬುದನ್ನು ವಿವರಿಸಲಾಗಿದೆ. ಇದು ಕೊನೆಗೆ ಇಟಲಿ ಮತ್ತು ಜರ್ಮನಿ ಏಕೀಕರಣಕ್ಕೆ ಕಾರಣವಾಯಿತು.

ಅಧ್ಯಾಯ 9.1

ನೆಪೋಲಿಯನ್ ಬೋನಾಪಾರ್ಟೆ (1769–1821)

ಫ್ರೆಂಚ್ ಕ್ರಾಂತಿಯು ವಿಶ್ವದ ಒಬ್ಬ ಮಹಾನ್ ನಾಯಕ, ಶ್ರೇಷ್ಠ ದಂಡನಾಯಕ ಮತ್ತು ಆಡಳಿತಗಾರನನ್ನು ರೂಪಿಸಿತು. ಸುಮಾರು ಹದಿನೈದು ವರ್ಷಗಳಿಗಿಂತಲೂ ಹೆಚ್ಚು ಕಾಲ ಈತ ಯುರೋಪ್ ಖಂಡದ ಅತ್ಯಂತ ಮಹತ್ವದ ವ್ಯಕ್ತಿಯಾಗಿದ್ದ. ಆತ ಬೇರೆ ಯಾರು ಅಲ್ಲ, ನೆಪೋಲಿಯನ್ ಬೋನಾಪಾರ್ಟೆ. ನಿಜವಾಗಿಯೂ 1799 ರಿಂದ 1815ರ ಕಾಲಾವಧಿಯನ್ನು 'ನೆಪೋಲಿಯನ್‌ನ ಯುಗ'ವೆಂದು ಪರಿಗಣಿಸಲಾಗಿದೆ.

"ನನ್ನ ದೇಶ ಸಾಯುತ್ತಿರುವಾಗ ನಾನು ಜನಿಸಿದೆ" ಎಂದು ನೆಪೋಲಿಯನ್ ಹೇಳಿದ್ದಾನೆ. ಫ್ರಾನ್ಸ್ ದೇಶಕ್ಕೆ ಹೊಸ ಬದುಕಿನ ಉತ್ಸಾಹವನ್ನು ತಂದುಕೊಡಲು ಅವನು ಪ್ರಯತ್ನಿಸಿದನು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಸುಧಾರಣೆಗಳಲ್ಲಿ ಇವನು "ಕ್ರಾಂತಿಯ ಶಿಶುವಾಗಿ" ಸೈನಿಕ ಸಾಧನೆಗಳಲ್ಲಿ "ಕ್ರಾಂತಿಯ ವಿನಾಶಕ" ನಾಗಿದ್ದನು.

ಆರಂಭಿಕ ಜೀವನ:

ನೆಪೋಲಿಯನ್ ಬೋನಾಪಾರ್ಟೆಯು ಕೋರ್ಸಿಕಾ ದ್ವೀಪದ ಅಜಾಸಿಯೋ ಎಂಬಲ್ಲಿ ಅಗಸ್ಟ್ 15, 1769 ರಂದು ಜನಿಸಿದನು. ಕೌಂಟ್ ಚಾರ್ಲ್ಸ್ ಬೋನಾಪಾರ್ಟೆ ಈತನ ತಂದೆ ಮತ್ತು ಕೌಂಟೆಸ್ ಲಿಟಿಸಿಯಾ

ರೊಮಾಲಿನಾ ತಾಯಿಯಾಗಿದ್ದಳು. ಬಾಲ್ಯಾವಸ್ಥೆಯಲ್ಲಿಯೇ ಈತನು ಆತ್ಮವಿಶ್ವಾಸ, ಸತತ ಶ್ರಮ ಹಾಗೂ ಅತ್ಯಂತ ಮಹತ್ವಾಕಾಂಕ್ಷೆಯ ಗುಣಗಳನ್ನು ಹೊಂದಿದ್ದ. ಬ್ರಿಯನ್ನೆ (ಆಸ್ಟ್ರಿಯಾ)ಯಲ್ಲಿ, ನಂತರ ಪ್ಯಾರಿಸ್‌ನ ಸೇನಾ ಅಕಾಡಮಿಯಲ್ಲಿ ಶಿಕ್ಷಣ ಪಡೆದುಕೊಂಡ. ಸೇನಾ ವಿಜ್ಞಾನದಲ್ಲಿ ಅಪಾರ ಆಸಕ್ತಿ ಹೊಂದಿದ್ದು, ಅದರಲ್ಲಿಯೂ ಶಿಕ್ಷಣವನ್ನು ಪಡೆದುಕೊಂಡನು. ನಂತರ ಹದಿನೇಳನೆಯ ವಯಸ್ಸಿಗೆ ಫ್ರೆಂಚ್ ಸೇನೆಯಲ್ಲಿ ಫಿರಂಗಿ ಪಡೆಯ ಅಧಿಕಾರಿಯಾಗಿ ಸೇರಿಕೊಂಡನು. ತನ್ನ ಸಾಮರ್ಥ್ಯದಿಂದ ಹುದ್ದೆಯಿಂದ ಹುದ್ದೆಗೆ ಬಡ್ತಿ ಹೊಂದಿದ. ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಫ್ರಾನ್ಸ್ ಸರ್ಕಾರದ ವಿರುದ್ಧ ಎದ್ದ ಎರಡು ಮುಖ್ಯ ದಂಗೆಗಳನ್ನು ಹತ್ತಿಕ್ಕುವ ಮೂಲಕ ತನ್ನ ಪ್ರತಿಭೆಯನ್ನು ಸಾಬೀತುಪಡಿಸಿದ.

ನೆಪೋಲಿಯನ್‌ನ ಏಳಿಗೆ:

1796 ರಲ್ಲಿ ಡೈರೆಕ್ಟರಿ ಸರ್ಕಾರವು ನೆಪೋಲಿಯನ್ನನನ್ನು ಇಟಲಿಯಲ್ಲಿ ಫ್ರೆಂಚ್ ಸೇನೆಯ ದಂಡನಾಯಕನನ್ನಾಗಿ ನೇಮಿಸಿತು. ಈತನು ಇಟಲಿಯ ಮೇಲೆ ಮಾಡಿದ ದಂಡಯಾತ್ರೆಯು ಅತ್ಯಂತ ಯಶಸ್ವಿಯಾಗಿತ್ತು. ನೆಪೋಲಿಯನ್‌ನು, ಮೊದಲು ಸಾರ್ಡಿನಿಯನ್‌ರನ್ನು ನಂತರ ಆಸ್ಟ್ರಿಯನ್‌ರನ್ನು ಸೋಲಿಸಿದನು. 1797ರಲ್ಲಿ ನಡೆದ 'ಕ್ಯಾಂಪೋ–ಫೋರ್ಮಿಯೋ' ಒಪ್ಪಂದದಿಂದ ಫ್ರಾನ್ಸ್ ದೇಶಕ್ಕೆ ಅಪಾರ ಯಶಸ್ಸನ್ನು ಗಳಿಸಿಕೊಟ್ಟನು.

ನೆಪೋಲಿಯನ್ ಬೋನಾಪಾರ್ಟೆಯು ತನ್ನ ದಿಗ್ವಿಜಯಗಳ ಮೂಲಕ ಯುರೋಪಿನ ನಕಾಶೆಯನ್ನು ಪುನರ್‌ರಚಿಸಲು ಆರಂಭಿಸಿದ. ಹೀಗಾಗಿ ಇಟಲಿ ಹಾಗೂ ಬೆಲ್ಜಿಯಂ ದೇಶಗಳ ಮೇಲೆ ನಿರಂಕುಶ ಆಡಳಿತವನ್ನು ಹೇರಿದನು. ಈತನ ಈಜಿಪ್ತಿನ ಮೇಲಿನ ದಂಡಯಾತ್ರೆಯ ಉದ್ದೇಶವು ಬ್ರಿಟಿಷ್ ಸಾಮ್ರಾಜ್ಯ ಶಾಹಿತ್ವದ ಮೇಲೆ ದಾಳಿ ಮಾಡುವುದಾಗಿತ್ತು. 'ಪಿರಾಮಿಡ್' ಕದನದಲ್ಲಿ ನೆಪೋಲಿಯನ್ನನು ಇಂಗ್ಲೆಂಡಿನ ಮೇಲೆ ದಿಗ್ವಿಜಯ ಸಾಧಿಸಲು ಸಾಧ್ಯವಾಯಿತು. ಆದರೆ 'ನೈಲ್' ಅಥವಾ 'ಅಬುಕೀರ್ ಬೇ' ಎಂಬ ನೌಕಾ ಕದನದಲ್ಲಿ ಆಡ್ಮಿರಲ್ ನೆಲ್ಸನ್ನನಿಂದ ಸೋಲಲ್ಪಟ್ಟನು..

ಕಾನ್ಸುಲೇಟ್ (1799–1804):

ಐದು ಸದಸ್ಯರುಳ್ಳ ಡೈರೆಕ್ಟರಿ ಸರಕಾರವು ಫ್ರಾನ್ಸ್ ದೇಶವನ್ನು 1795 ರಿಂದ 1799ರ ವರೆಗೆ ಆಳ್ವಿಕೆ ಮಾಡಿತು. ನೆಪೋಲಿಯನ್‌ನು 1799ರಲ್ಲಿ ಡೈರಕ್ಟರಿ ಸರಕಾರವನ್ನು ಕಿತ್ತೊಗೆದನು. ಮೂರು ಜನ ಸದಸ್ಯರುಳ್ಳ ಕಾನ್ಸುಲೇಟ್ (ಪ್ರತಿನಿಧಿ) ಸರಕಾರವು ಅಸ್ತಿತ್ವಕ್ಕೆ ಬಂದಿತು. ಕಾನ್ಸುಲೇಟ್‌ನ ಕಾರ್ಯನಿರ್ವಾಹಕ ಅಧಿಕಾರವು ಮೂರು ಕಾನ್ಸಲ್‌ಗಳಿಗಿತ್ತು. ನೆಪೋಲಿಯನ್ ಮೊದಲ ಕಾನ್ಸಲ್ ಆಗಿದ್ದನು. ಅಬ್ಬೆಸಿಯಾಸ್ ಮತ್ತು ಡ್ಯೂಕೋಸ್ ಎರಡನೆಯ ಮತ್ತು ಮೂರನೆಯ ಕಾನ್ಸಲ್‌ಗಳಾಗಿದ್ದರು. ಮೊದಲನೆಯ ಕಾನ್ಸಲ್ ಬಹುತೇಕ ನಿರಂಕುಶಾಧಿಕಾರವನ್ನು ಹೊಂದಿದ್ದನು. ಫ್ರಾನ್ಸ್ ಹೆಸರಿಗೆ ಮಾತ್ರ ಗಣರಾಜ್ಯವಾಗಿ ಉಳಿಯಿತು. ಆದರೆ 1804ರಲ್ಲಿ ಜನಾಭಿಪ್ರಾಯದಂತೆ ಚಕ್ರವರ್ತಿ ಎಂದು ಘೋಷಿಸಿಕೊಂಡನು. ಅವನು ಆಂತರಿಕ ಹಾಗು ವಿದೇಶಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅನೇಕ ಸುಧಾರಣೆಗಳನ್ನು ಜಾರಿಗೊಳಿಸಿದನು. ಇದರಿಂದ ಅವನ ಹೆಸರು ಚಿರಸ್ಥಾಯಿಯಾಗಿದೆ.

ಸುಧಾರಣೆಗಳು:

ನೆಪೋಲಿಯನ್ನನ ಹೆಚ್ಚಿನ ಸುಧಾರಣೆಗಳು ಕಾನ್ಸುಲೇಟ್ ಸರ್ಕಾರದ ಅವಧಿಯಲ್ಲಿ ಮಾಡಿದ್ದಾಗಿತ್ತು. ಅವನ ಆಡಳಿತ ಫ್ರಾನ್ಸನ್ನು ಮರುನಿರ್ಮಾಣದತ್ತ ಕೊಂಡೊಯ್ದಿತು. ಫ್ರಾನ್ಸ್ ಕ್ರಾಂತಿಯ 10 ವರ್ಷಗಳ ತೀವ್ರ ಹಾಗೂ ಅಮೂಲಾಗ್ರ ಬದಲಾವಣೆಗಳ ನಂತರ ಫ್ರಾನ್ಸ್ ಗೊಂದಲ ಮತ್ತು ಅಸ್ತವ್ಯಸ್ತತೆಯನ್ನು ಅನುಭವಿಸುತ್ತಿತ್ತು. ತನ್ನ ಆಡಳಿತಾತ್ಮಕ ಸುಧಾರಣೆಯಿಂದ ಉಂಟಾಗಿದ್ದ ಈ ಗೊಂದಲವನ್ನು ನಿವಾರಿಸಿ ಕ್ರಮಬದ್ಧತೆಯನ್ನು ತಂದನು.

ಆಡಳಿತಾತ್ಮಕ ಸುಧಾರಣೆಗಳು:

ಫ್ರಾನ್ಸ್‌ನ ಸಮಗ್ರ ಸ್ಥಳೀಯ ಆಡಳಿತವನ್ನು ನೆಪೋಲಿಯನ್ ಕೇಂದ್ರೀಕರಿಸಿದನು. ಇಡೀ ದೇಶವನ್ನು ಹಲವು ಪ್ರಾಂತಗಳು ಇಲ್ಲವೆ ಇಲಾಖೆಗಳಾಗಿ ವಿಂಗಡಿಸಿದನು. ಪುನಃ ಇವುಗಳನ್ನು ಆರೊಂಡಿಸ್‌ಮೆಂಟ್ಸ್ ಮತ್ತು ಕಮ್ಯೂನ್‌ಗಳೆಂಬ ಚಿಕ್ಕ ಚಿಕ್ಕ ಘಟಕಗಳಾಗಿ ವಿಭಜಿಸಿದನು. ಎಲ್ಲ ಚುನಾಯಿತ ಮತ್ತು ಇನ್ನಿತರ ಸಂಸ್ಥೆಗಳ ಅಧಿಕಾರಗಳು ಪ್ರಿಫೆಕ್ಟ್ಸ್ ಮತ್ತು ಉಪ ಪ್ರಿಫೆಕ್ಟ್ಸ್‌ಗಳಿಗೆ ಸೇರಿತ್ತು. ಇವರು ನೆಪೋಲಿಯನ್‌ನಿಗೆ ಮಾತ್ರ ಹೊಣೆಗಾರರಾಗಿದ್ದರು.

ಹೊಸ ಆಡಳಿತ ವ್ಯವಸ್ಥೆಯು ಕೇಂದ್ರ ಸರ್ಕಾರದ ಶಾಸನಗಳನ್ನು ಪ್ರಾಮಾಣಿಕವಾಗಿ ಮತ್ತು ಏಕರೂಪವಾಗಿ ಜಾರಿಗೆ ತರುವ ಭರವಸೆ ನೀಡಿತು. ದಕ್ಷ ಆರಕ್ಷಕ ದಳ ಮತ್ತು ನಂಬಿಗಸ್ಥ ಸೈನ್ಯವು ಈ ಎಲ್ಲ ಯೋಜನೆಗಳನ್ನು ಸರಿಯಾಗಿ ಜಾರಿಗೊಳಿಸುವಲ್ಲಿ ಅವನಿಗೆ ಸಹಾಯ ಮಾಡಿದವು. ರಾಜ್ಯ ಕಾರ್ಯದರ್ಶಿ ಮಂಡಳಿಯ ಕಛೇರಿಯನ್ನು ಹೊಸ ಸ್ಥರಕ್ಕೆ ಬೆಳೆಸಿದನು.

ನೆಪೋಲಿಯನ್ನನ ಸಂಹಿತೆ:

ನೆಪೋಲಿಯನ್ನನ ಅತ್ಯಂತ ಮೆಚ್ಚುಗೆಯ ಸುಧಾರಣೆಯೆಂದರೆ, ಕಾನೂನು ಸಂಹಿತೆಯನ್ನು ರೂಪಿಸಿದ್ದು. ಅವುಗಳು ಇನ್ನೂ ಫ್ರಾನ್ಸ್ ದೇಶದ ಕಾನೂನುಗಳಿಗೆ ಆಧಾರಗಳೆನ್ನಿಸಿವೆ. ಸ್ವತಃ ನೆಪೋಲಿಯನ್‌ನೇ ಹೇಳಿಕೊಂಡಂತೆ "ನನ್ನ ನಿಜವಾದ ಕೀರ್ತಿ 40 ಯುದ್ಧಗಳಲ್ಲಿ ಗೆಲುವು ಸಾಧಿಸಿದ್ದಲ್ಲ, ಆದರೆ ಅದು ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿದ್ದು". ಪ್ರಸಿದ್ಧವಾದ ಈ ನೆಪೋಲಿಯನ್ ಸಂಹಿತೆಯು ಯುರೋಪಿನ ಉಳಿದ ಭಾಗಗಳಿಗೆ ಒಂದು ಮಾದರಿ ಕಾನೂನು ಸಂಹಿತೆಯಾಯಿತು.

ಮೊದಲು ಈತನು ನಾಗರಿಕ ಸಂಹಿತೆಯನ್ನು ರೂಪಿಸಿದನು. ನಂತರ ನಾಗರಿಕ ಸಂಹಿತೆ ನಿಯಮ, ಅಪರಾಧಿ ಸಂಹಿತೆ ನಿಯಮ, ದಂಡ ಸಂಹಿತೆ ಮತ್ತು ವಾಣಿಜ್ಯ ಸಂಹಿತೆಗಳನ್ನು ಜಾರಿಗೆ ತಂದನು. ಕ್ರಾಂತಿಯ ಮುಖ್ಯ ಬೇಡಿಕೆಗಳಾದ ನಾಗರಿಕ ಸಮಾನತೆ, ಧಾರ್ಮಿಕ ಸಹಿಷ್ಣುತೆ , ಭೂಮಿಯ ಬಂಧಮುಕ್ತಿ ಮೊದಲಾದವುಗಳು ಈ ಕಾನೂನು ಸಂಹಿತೆಗಳೊಂದಿಗೆ ಸಂಬಂಧಿಸಿದ್ದವು. ಆದ್ದರಿಂದ ನೆಪೋಲಿಯನ್‌ನನ್ನು 'ಎರಡನೆಯ ಜಸ್ಟಿನೀಯನ್'ಎಂದು ಕರೆಯಲಾಗಿದೆ.

ಕಾನ್‌ಕಾರ್ಡಟ್ (ಧಾರ್ಮಿಕ ಒಪ್ಪಂದ):

ಪೋಪನ ಅಧಿಕಾರದ ಒಡಂಬಡಿಕೆಯ ಉಲ್ಲಂಘನೆಯಿಂದಾಗಿ, ಫ್ರಾನ್ಸ್‌ನ ಕ್ರಾಂತಿಯಿಂದ ಪೋಪನಿಗಾದ ನೋವನ್ನು ಉಪಶಮನ ಮಾಡುವುದು ನೆಪೋಲಿಯನ್ನನ ಗುರಿಯಾಗಿತ್ತು. ಧರ್ಮವಿಲ್ಲದ ರಾಜ್ಯ ಖಾಲಿ ಪಾತ್ರೆಯಂತೆ ಎಂದು ಅವನು ಭಾವಿಸಿದ್ದನು. ಆದ್ದರಿಂದ ಪೋಪನೊಂದಿಗಿನ ಸಂಬಂಧವನ್ನು ಸುಧಾರಿಸಿಕೊಳ್ಳುವುದರ ಮೂಲಕ ಕ್ಯಾಥೊಲಿಕ್ಕರ ಅನುಕಂಪವನ್ನು ಮರಳಿ ಪಡೆಯಲು ನಿರ್ಧರಿಸಿದನು. ಪೋಪ್ 7ನೆಯ ಪಯಸ್‌ನೊಂದಿಗೆ ಮಾತುಕಥೆಗಳ ನಂತರ 1802ರಲ್ಲಿ ಧಾರ್ಮಿಕ ಒಪ್ಪಂದವನ್ನು ಮಾಡಿಕೊಂಡನು. ಇದನ್ನು ಕಾನ್‌ಕಾರ್ಡಟ್ ಎಂದು ಕರೆಯಲಾಗಿದೆ. ಈ ಒಪ್ಪಂದದೊಂದಿಗೆ ಕ್ಯಾಥೊಲಿಕ್ ಧರ್ಮ ಫ್ರಾನ್ಸ್ ದೇಶದ ಧರ್ಮವಾಯಿತು. ಪಾದ್ರಿಗಳು ಮತ್ತು ಪುರೋಹಿತರು ನೆಪೋಲಿಯನ್‌ನ ನಿಯಂತ್ರಣಕ್ಕೊಳಪಟ್ಟರು.

ಶಿಕ್ಷಣ:

ನೆಪೋಲಿಯನ್ನನು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೊಳಿಸಿದನು. ನಾಲ್ಕು ಹಂತದ ಶಾಲೆಗಳನ್ನು ರೂಪಿಸಲಾಯಿತು. ಎಲ್ಲ ಶಾಲೆಗಳನ್ನು ಸರ್ಕಾರವೇ ನೋಡಿಕೊಳ್ಳುತ್ತಿತ್ತು. ಪ್ರಾಥಮಿಕ, ಮಾಧ್ಯಮಿಕ, ಉನ್ನತ ಹಾಗೂ ವಿಶೇಷ ಶಾಲೆಗಳೆಂದು ವರ್ಗೀಕರಿಸಲಾಗಿತ್ತು. ವಿಶೇಷ ಶಾಲೆಗಳೆಂದರೆ ತಾಂತ್ರಿಕ ಶಾಲೆಗಳು, ನಾಗರಿಕ

ಸೇವಾ ಶಾಲೆಗಳು, ಅಥವಾ ಸೈನಿಕ ತರಬೇತಿ ಶಾಲೆಗಳು ಇನ್ನೂ ಮುಂತಾದವುಗಳು. ನೆಪೋಲಿಯನ್ನನು ನವೀನ ವಿಶ್ವವಿದ್ಯಾಲಯ ಪದ್ಧತಿ ಶಿಕ್ಷಣವನ್ನು ಪರಿಚಯಿಸಿದನು ಮತ್ತು 1808 ರಲ್ಲಿ ಫ್ರಾನ್ಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದನು. ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ಉದ್ದೇಶ ವಿಶ್ವವಿದ್ಯಾಲಯದ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಮತ್ತು ಎಲ್ಲಾ ಶಾಲೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಾಗಿತ್ತು. ಸಾಮಾನ್ಯವಾಗಿ ಬೋಧಿಸಲಾಗುತ್ತಿದ್ದ ಎರಡು ವಿಷಯಗಳೆಂದರೆ ಕ್ರೈಸ್ತ ಧರ್ಮ ನೀತಿಶಾಸ್ತ್ರ ಮತ್ತು ರಾಷ್ಟ್ರನಿಷ್ಠೆಗಳಾಗಿದ್ದವು.

ಲೋಕೋಪಯೋಗಿ ಕಾರ್ಯಗಳು:

ನೆಪೋಲಿಯನ್ನನು ಅನೇಕ ಲೋಕೋಪಯೋಗಿ ಕಾರ್ಯಗಳನ್ನು ಜಾರಿಗೆ ತಂದನು. ಇದು ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಲು ಸಹಾಯವಾಯಿತು. ಹಲವು ಮಹತ್ವದ ಹೆದ್ದಾರಿಗಳನ್ನು ನಿರ್ಮಿಸಲಾಯಿತು. ಅವುಗಳಲ್ಲಿ ಟ್ರಾನ್ಸ್– ಅಲ್ಪೈನ್ ಎಂಬ ಎರಡು ಹೆದ್ದಾರಿಗಳು ಟ್ಯುರಿನ್, ರೋಮಗಳೊಂದಿಗೆ ಪ್ಯಾರಿಸ್‌ನ್ನು ಹಾಗೂ ಬೇರೆ ಬೇರೆ ಸ್ಥಳಗಳನ್ನು ಸಂಪರ್ಕಿಸುವುದಾಗಿತ್ತು. ಬೃಹತ್ ಸೇತುವೆಗಳನ್ನು ಕಟ್ಟಲಾಯಿತು, ಹಳೆಯ ಕಾಲುವೆಗಳನ್ನು ಹಾಗೂ ಜಲಮಾರ್ಗಗಳನ್ನು ದುರಸ್ಥಿಗೊಳಿಸಲಾಯಿತಲ್ಲದೆ, ಸಮರ್ಪಕವಾಗಿ ಬಳಸಿಕೊಳ್ಳಲಾಯಿತು. ಹೊಸ ರಸ್ತೆಗಳನ್ನು ನಿರ್ಮಾಣ ಮಾಡಿ ತ್ರಿಭುಜಾಕೃತಿಯ ಕಮಾನುಗಳನ್ನೂ ನಿರ್ಮಿಸಿದನು. ಹಳೆಯ ಸೆರೆಮನೆಯೊಂದನ್ನು ಪುನರ್‌ನಿರ್ಮಿಸಿ ಅದನ್ನು ಲೌರೆ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಿದನು. ಪ್ಯಾರಿಸ್ ನಗರವನ್ನು ಮಧ್ಯಕಾಲದ ಪಟ್ಟಣದಿಂದ ಸುಂದರ ನಗರವನ್ನಾಗಿ ಮತ್ತು ಆಧುನಿಕ ರಾಜಧಾನಿಯನ್ನಾಗಿ ಪರಿವರ್ತಿಸಿದನು.

ಆರ್ಥಿಕ ಸುಧಾರಣೆಗಳು:

ರಾಷ್ಟ್ರೀಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ, ವ್ಯವಸ್ಥೆಗೊಳಿಸುವ ನಿಟ್ಟಿನಲ್ಲಿ ನೆಪೋಲಿಯನ್ನನು 1805 ರಲ್ಲಿ ರಾಷ್ಟ್ರೀಯ ಬ್ಯಾಂಕೊಂದನ್ನು ಸ್ಥಾಪಿಸಿದನು. ಅದೇ ಬ್ಯಾಂಕ್ ಆಫ್ ಫ್ರಾನ್ಸ್. ಇಡೀ ಆರ್ಥಿಕ ವ್ಯವಸ್ಥೆಯ ಮೇಲ್ವಿಚಾರಣೆಯಷ್ಟೇ ಅಲ್ಲದೆ ಇದು ವ್ಯಾಪಾರ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನ ನೀಡಿತು. ದೇಶದ ಹಣಕಾಸು ಸ್ಥಿತಿಯ ಸುಧಾರಣೆಗೆ ಈತನು ಪ್ರಯತ್ನಿಸಿದನು. ಜಾಗರೂಕ ತೆರಿಗೆ ಸಂಗ್ರಹಣೆ ಮತ್ತು ಕಠಿಣ ಆರ್ಥಿಕ ಕ್ರಮಗಳನ್ನು ಜಾರಿಗೊಳಿಸಲಾಯಿತು. ತೆರಿಗೆ ಮಂಡಳಿಗಳು ಸ್ಥಾಪನೆಗೊಂಡವು. ಸಾಲದ ಪ್ರಮಾಣವನ್ನು ಕಡಿಮೆಗೊಳಿಸಲಾಯಿತು ಮತ್ತು ಷೇರು ವ್ಯವಹಾರಗಳನ್ನು ಕ್ರಮಬದ್ಧಗೊಳಿಸಲಾಯಿತು. ಭ್ರಷ್ಟಾಚಾರ ಹಾಗೂ ಜೂಜಾಟವನ್ನು ಕಿತ್ತೊಗೆಯಲು ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಂಡನು.

ಲೀಜನ್ ಆಫ್ ಹಾನರ್:

ರಾಷ್ಟ್ರಕ್ಕಾಗಿ ಯಾರು ಸೈನಿಕ ಹಾಗೂ ನಾಗರಿಕ ವಲಯಗಳಲ್ಲಿ ಅತ್ಯಂತ ದಕ್ಷತೆಯಿಂದ ಸೇವೆ ಸಲ್ಲಿಸುವರೋ ಅಂಥವರನ್ನು ಗುರುತಿಸಿ, ಗೌರವಿಸಲು ನೆಪೋಲಿಯನ್‌ನು ಲೀಜನ್ ಆಫ್ ಹಾನರ್ ಎಂಬ ಪ್ರಶಸ್ತಿಯನ್ನು ನೀಡಲು ಆರಂಭಿಸಿದನು. ಈ ಪ್ರಶಸ್ತಿಯು ಯಾವುದೇ ರೀತಿಯ ವರ್ಗ ಮತ್ತು ಧರ್ಮಗಳ ವ್ಯತ್ಯಾಸ ಎಣಿಸದೇ ಸಮಾನತೆಯ ತತ್ವಗಳನ್ನು ಆಧರಿಸಿದುದಾಗಿತ್ತು.

ನೆಪೋಲಿಯನ್‌ನ ದಿಗ್ವಿಜಯಗಳು:

ಫ್ರೆಂಚ್ ಕ್ರಾಂತಿಯ ವಿರುದ್ಧವಾಗಿ ಪ್ರಷ್ಯಾ, ಆಸ್ಟ್ರಿಯಾ, ರಷ್ಯಾ, ಸ್ಪೇನ್ ಮತ್ತು ಇತರ ದೇಶಗಳನ್ನು ಒಳಗೊಂಡು ರಚನೆಯಾದ ಪ್ರಥಮ ಒಕ್ಕೂಟವನ್ನು ನೆಪೋಲಿಯನ್‌ನು ಇಟಲಿಯ ವಿರುದ್ಧದ ವಿಜಯದ ಸಂದರ್ಭದಲ್ಲಿ ಸಂಪೂರ್ಣವಾಗಿ ಧ್ವಂಸಗೊಳಿಸಿದನು. ಈಗ ನೆಪೋಲಿಯನ್ನನ ಗುರಿಯು ಎರಡನೆಯ ಒಕ್ಕೂಟದಲ್ಲಿ

ಪಾಲ್ಗೊಂಡ ರಷ್ಯಾ, ಆಸ್ಟ್ರಿಯಾ, ಟರ್ಕಿ, ನೇಪಲ್ಸ್ ಮತ್ತು ಇಂಗ್ಲೆಂಡ್‌ಗಳನ್ನು ಎದುರಿಸುವುದಾಗಿತ್ತು. ನೆಪೋಲಿಯನ್ನನು ರಷ್ಯಾದ ಝಾರ್ ದೊರೆಯನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾದನು. 1801 ರಲ್ಲಿ ಆಸ್ಟ್ರಿಯಾವನ್ನು ಹೋಹೆಂಜೊಲೆರನ್ ಎಂಬಲ್ಲಿ ಸೋಲಿಸಿದನು. ಈಗ ಇಂಗ್ಲೆಂಡ್ ಮಾತ್ರ ಯಾವ ಸ್ನೇಹಿತರಿಲ್ಲದೇ ಏಕಾಂಗಿಯಾಗುಳಿಯಿತು. ಆದರೆ ಫ್ರಾನ್ಸ್‌ನ ನೌಕಾ ಪಡೆ ಬಲಾಢ್ಯವಾಗಿರದೇ ಇದ್ದುದರಿಂದ ನೆಪೋಲಿಯನ್‌ನು ಇಂಗ್ಲೆಂಡಿನ ಮೇಲೆ ದಾಳಿ ಮಾಡಲು ಸಾಧ್ಯವಾಗಲಿಲ್ಲ.

ಟ್ರಫಾಲ್ಗರ್ ಕದನ (1805)

1804ರಲ್ಲಿ ನೆಪೋಲಿಯನ್ನನು ತಾನೇ ಫ್ರಾನ್ಸ್‌ನ ಚಕ್ರವರ್ತಿ 'ಒಂದನೆಯ ನೆಪೋಲಿಯನ್' ಎಂದು ಕಿರೀಟ ಧರಿಸಿಕೊಂಡನು. 10 ವರ್ಷಗಳ ಈ ಸಾಮ್ರಾಜ್ಯ ಸತತ ಯುದ್ಧಗಳಿಗೆ ಸಾಕ್ಷಿಯಾಯಿತು. ಫ್ರಾನ್ಸ್‌ನ ಶಕ್ತಿ ಬೆಳೆಯುತ್ತಿರುವುದನ್ನು ಗಮನಿಸಿದ ಯುರೋಪಿನ ಇನ್ನಿತರ ರಾಷ್ಟ್ರಗಳಾದ ಇಂಗ್ಲೆಂಡ್, ಆಸ್ಟ್ರಿಯಾ, ರಷ್ಯ ಮತ್ತು ಸ್ವೀಡನ್‌ಗಳು ಫ್ರಾನ್ಸ್ ವಿರುದ್ಧ ಒಂದು ಒಕ್ಕೂಟವನ್ನು ರಚಿಸಿಕೊಂಡವು. ಈ ಅವಧಿಯಲ್ಲಿ ಎರಡು ಮಹತ್ವದ ಯುದ್ಧಗಳು ಜರುಗಿದವು. ಅವುಗಳೆಂದರೆ, 1805ರಲ್ಲಿ ನಡೆದ ಟ್ರಫಾಲ್ಗರ್ ನೌಕಾ ಕದನ ಅದರಲ್ಲಿ ಫ್ರೆಂಚ್ ಸೇನೆ ಸೋತುಹೋಯಿತು. ನೆಪೋಲಿಯನ್ ಮಾಡಿದ ಮತ್ತೊಂದು ಕದನವೇ ಆಸ್ಟರ್‌ಲಿಟ್ಜ್.

ಆಸ್ಟರ್‌ಲಿಟ್ಜ್ ಕದನ (1805):

ನೆಪೋಲಿಯನ್‌ನು, ತನ್ನ ಪ್ರಬಲ ಭೂ ಸೇನೆಯ ಲಾಭವನ್ನು ಪಡೆದುಕೊಂಡನು. ಇದರಿಂದ 1805ರಲ್ಲಿ ಜರುಗಿದ ಆಸ್ಟರ್‌ಲಿಟ್ಜ್ ಕದನದಲ್ಲಿ ಆಸ್ಟ್ರಿಯಾ ಮತ್ತು ರಷ್ಯಾಗಳ ಸಂಯುಕ್ತ ಸೈನ್ಯವನ್ನು ಅತ್ಯಂತ ಹೀನಾಯವಾಗಿ ಸೋಲಿಸಿದನು. ಸೋತ ಆ ದೇಶಗಳು ಆತನ ಅಧೀನಕೊಳ್ಳಪಟ್ಟವು. ಈಗ ನೆಪೋಲಿಯನ್‌ನು, ರಷ್ಯಾದ ಝಾರ್‌ನೊಂದಿಗೆ 1807ರ ಪ್ರಸಿದ್ಧ 'ತಿಲ್‌ಸಿಟ್' ಒಪ್ಪಂದವನ್ನು ಮಾಡಿಕೊಂಡನು. ಈ ಅವಧಿಯಲ್ಲಿ ನೆಪೋಲಿಯನ್ನನು ಅಧಿಕಾರದ ಪರಾಕಾಷ್ಠೆಯನ್ನು ತಲುಪಿದ್ದನು. ಈಗ ಇಂಗ್ಲೆಂಡ್‌ನ್ನು ಹೊರತುಪಡಿಸಿ ಇಡೀ ಯುರೋಪ್ ಖಂಡವೆಲ್ಲ ಈತನ ನಿಯಂತ್ರಣಕ್ಕೊಳಪಟ್ಟಿತ್ತು. ಇಂಗ್ಲೆಂಡ್ ಮಾತ್ರ ನೆಪೋಲಿಯನ್‌ನ ಬದ್ಧ ವೈರಿಯಾಗಿಯೇ ಉಳಿದುಕೊಂಡಿತ್ತು.

ಖಂಡಾಂತರ ಪದ್ಧತಿ:

ಇಂಗ್ಲೆಂಡ್‌ನ ಸಾಮರ್ಥ್ಯವು ಅದರ ವ್ಯಾಪಾರ, ವಾಣಿಜ್ಯದಲ್ಲಿತ್ತು. ಆದ್ದರಿಂದ ನೆಪೋಲಿಯನ್ನನು ಇಂಗ್ಲೆಂಡಿನ ವ್ಯಾಪಾರ ಮತ್ತು ವಾಣಿಜ್ಯವನ್ನು ನಾಶಪಡಿಸಲು ನಿರ್ಧರಿಸಿದನು. ಅವನು 1806ರ ಬರ್ಲಿನ್ ಮತ್ತು 1807ರ ಮಿಲಾನ್‌ನ ಎರಡು ಘೋಷಣೆ (ವಿಧಿ)ಗಳನ್ನು ಹೊರಡಿಸಿದನು. ಇದರ ಪ್ರಕಾರ ಬ್ರಿಟಿಷ್ ವಸ್ತುಗಳನ್ನು ಇಡೀ ಯುರೋಪ್‌ನಿಂದ ಬಹಿಷ್ಕರಿಸಲಾಯಿತು. ಇದನ್ನು ಖಂಡಾಂತರ ಪದ್ಧತಿ ಎಂದು ಕರೆಯಲಾಗಿದೆ. ಸಂಪೂರ್ಣ ಯುರೋಪ್ ಖಂಡವು ವ್ಯಾಪಾರ ಸರಕುಗಳನ್ನು ಪಡೆಯಲು ಇಂಗ್ಲೆಂಡನ್ನೇ ಅವಲಂಬಿಸಿದ್ದರಿಂದ ಇದು ಇಂಗ್ಲೆಂಡ್‌ಗಿಂತ ಫ್ರಾನ್ಸ್‌ಗೆ ಹೆಚ್ಚು ತೊಂದರೆಯುನ್ನುಂಟು ಮಾಡಿತು. ಯುರೋಪಿನ ಎಲ್ಲ ದೇಶಗಳು ಖಂಡಾಂತರ ಪದ್ಧತಿಯ ಜಾರಿಯಿಂದ ಬಹಳ ತೊಂದರೆಗೊಳಗಾದವು, ಏಕೆಂದರೆ ಇಂಗ್ಲೆಂಡ್‌ನಿಂದ ಆಮದಾಗುವ ಸರಕುಗಳನ್ನೇ ಅವು ಅವಲಂಬಿಸಿದ್ದವು. ಇದರ ಪರಿಣಾಮವೇನಾಯಿತೆಂದರೆ ಖಂಡಾಂತರ ಪದ್ಧತಿಯನ್ನು ಅನುಸರಿಸದ ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳ ಮೇಲೆ ಯುದ್ಧಸಾರಿದನು. ಸ್ಪೇನ್‌ನಲ್ಲಿ ಆಂತರಿಕ ಯುದ್ಧ ಸ್ಫೋಟಗೊಂಡಾಗ ನೆಪೋಲಿಯನ್ನನು ತನ್ನ ಸಹೋದರ ಜೋಸೆಫನನ್ನು ಸ್ಪೇನ್‌ದ ಪ್ರಜೆಗಳ ಆಶೋತ್ತರಗಳಿಗೆ ವಿರುದ್ಧವಾಗಿ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಇದರಿಂದ ಸ್ಪೇನ್‌ನಲ್ಲಿ ರಾಷ್ಟ್ರೀಯ ಕ್ರಾಂತಿಯುಂಟಾಯಿತು. ಈ ಪರಿಸ್ಥಿತಿಯನ್ನು

ಉಪಯೋಗಿಸಿಕೊಂಡ ಇಂಗ್ಲೆಂಡ್, ಜನರಲ್ ಆರ್ಥರ್ ವೆಲ್ಲೆಸ್ಲಿಯ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿತು. ಅವನು ಫ್ರಾನ್ಸ್‌ನ್ನು ಸೋಲಿಸಿದನು. ಸ್ಪೈನ್ ಎಂಬ ಅಲ್ಸರ್ ನನ್ನನ್ನು ನಾಶಪಡಿಸಿತು ಎಂದು ಮುಂದೆ ನೆಪೋಲಿಯನ್ನನೇ ಹೇಳಿಕೊಂಡ.

ರಷ್ಯಾದ ದಂಡಯಾತ್ರೆ (1812):

ರಷ್ಯಾದ ದೊರೆ ಝಾರ್ ಅಲೆಗ್ಸಾಂಡರನು ಖಂಡಾಂತರ ಪದ್ಧತಿಯ ನಿಯಮಗಳನ್ನು ಮುರಿದನು ಹಾಗೂ ಬ್ರಿಟಿಷ್ ಸರಕುಗಳನ್ನು ಆಮದು ಮಾಡಿಕೊಳ್ಳಲು ಆರಂಭಿಸಿದನು. ಇದೇ ನೆಪೋಲಿಯನ್‌ನ ರಷ್ಯಾದ ಮಾಸ್ಕೋದ ಮೇಲೆ ದಾಳಿ ಮಾಡಲು ಕಾರಣವಾಯಿತು. ರಷ್ಯಾದ ದಂಡಯಾತ್ರೆಗಾಗಿ ಒಂದು ಬೃಹತ್ ಸೈನ್ಯವನ್ನು ಸಂಘಟಿಸಿದನು. ರಷ್ಯಾದ ಸೈನ್ಯವು ಹಿಂದಕ್ಕೆ ಸರಿಯುವ ನೀತಿಯನ್ನು ಅನುಸರಿಸಿತು. ಫ್ರಾನ್ಸ್‌ನ ಸೈನ್ಯ ಮಾಸ್ಕೋ ಪ್ರವೇಶಿಸಿತು ಮತ್ತು ನೆಪೋಲಿಯನ್ ಝಾರ್ ದೊರೆ ತನಗೆ ಶರಣಾಗುವನೆಂದು ನಿರೀಕ್ಷಿಸಿದನು. ರಷ್ಯಾದ ಸೈನ್ಯವೇ ಮಾಸ್ಕೋ ನಗರಕ್ಕೆ ಬೆಂಕಿ ಹಚ್ಚಿತು. ಆದರೆ, ಆಗ ಅಲ್ಲಿ ವಿಪರೀತ ಮೈ ಕೊರೆಯುವ ಶೀತಲ ವಾತಾವರಣವಿದ್ದುದರಿಂದ ಫ್ರೆಂಚ್ ಸೈನಿಕರು ತೀವ್ರವಾದ ಚಳಿ, ಹಸಿವು ಹಾಗೂ ನೀರಡಿಕೆಗಳಿಂದ ತತ್ತರಿಸಿ ಹೋದರು. ನೆಪೋಲಿಯನ್ನನು ಇದರಿಂದ ಅತ್ಯಂತ ದಯನೀಯವಾಗಿ ಸೋಲನ್ನನುಭವಿಸಿ ಮೂರು ಲಕ್ಷದಷ್ಟು ಸೈನಿಕರನ್ನು ಕಳೆದುಕೊಂಡನು.

ಲಿಪ್‌ಜಿಗ್ ಕದನ (1813):

ರಷ್ಯಾದ ದಂಡಯಾತ್ರೆಯ ನಂತರ, ನೆಪೋಲಿಯನ್ನನ ವೈರಿಗಳ ಸಂಖ್ಯೆಯು ಹೆಚ್ಚಳಗೊಂಡು ನಾಲ್ಕನೆಯ ಒಕ್ಕೂಟ ರಚನೆಯಾಯಿತು. ಆಸ್ಟ್ರಿಯಾ ಮತ್ತು ಪ್ರಷ್ಯಾದ ಸಂಯುಕ್ತ ಸೈನ್ಯಗಳು ಇಂಗ್ಲೆಂಡ್ ಸೇನೆಯ ಸಹಾಯದಿಂದ 1813ರಲ್ಲಿ 'ಲಿಪ್‌ಜಿಗ್'ನಲ್ಲಿ ಜರುಗಿದ ಕದನದಲ್ಲಿ ನೆಪೋಲಿಯನ್‌ನನ್ನು ಸೋಲಿಸಿದವು. ನಂತರ ಆತನನ್ನು ಬಂಧಿಸಿ 'ಎಲ್ಬಾ' ದ್ವೀಪಕ್ಕೆ ಗಡಿಪಾರು ಮಾಡಲಾಯಿತು. ನಂತರ 18ನೇ ಲೂಯಿಯನ್ನು ಫ್ರಾನ್ಸ್‌ನ ಅರಸನ್ನಾಗಿ ಮಾಡಲಾಯಿತು. ಆದರೆ , ನೆಪೋಲಿಯನ್ನನು ಎಲ್ಬಾ ದ್ವೀಪದಿಂದ ತಪ್ಪಿಸಿಕೊಂಡು ಬಂದನು. ಈತ ಮರಳಿ ಬರುತ್ತಿರುವ ವಾರ್ತೆಯನ್ನು ಕೇಳಿದ 18ನೇ ಲೂಯಿ, ಫ್ರಾನ್ಸ್ ಸಿಂಹಾಸನವನ್ನು ತೊರೆದು ಬೆಲ್ಜಿಯಂಗೆ ಓಡಿ ಹೋಗಿ ಆಶ್ರಯ ಪಡೆದನು.

ವಾಟರ್‌ಲೂ ಕದನ (1815):

ಎಲ್ಬಾ ದ್ವೀಪದಿಂದ ಹಿಂದಿರುಗಿ ಬಂದ ನೆಪೋಲಿಯನ್ನನು ನೂರು ದಿನಗಳ ಕಾಲ ಆಳ್ವಿಕೆ ಮಾಡಿದನು. ಮಿತ್ರ (ಒಕ್ಕೂಟ) ರಾಷ್ಟ್ರಗಳು ಮತ್ತೆ ಸೇರಿಕೊಂಡು ಅವನನ್ನು ಸೋಲಿಸಲು ನಿರ್ಧರಿಸಿದವು. ಅವು ನೆಪೋಲಿಯನ್‌ನನ್ನು ಬೆಲ್ಜಿಯಂನ 'ವಾಟರ್ ಲೂ' ಎಂಬಲ್ಲಿ ಜರುಗಿದ ಕದನದಲ್ಲಿ 1815ರಲ್ಲಿ ಸೋಲಿಸಿದವು. ಅಂದು ಬ್ರಿಟಿಷ್ ಸೇನಾನಿಯಾಗಿದ್ದವನು ಸರ್ ಆರ್ಥರ್ ವೆಲ್ಲೆಸ್ಲಿ (ವೆಲ್ಲಿಂಗ್ಟನ್). ಸೋತ ನೆಪೋಲಿಯನ್ನನನ್ನು ನಂತರ ದೂರದ ಅಟ್ಲಾಂಟಿಕ್ ಸಾಗರದ 'ಸೇಂಟ್ ಹೆಲಿನಾ' ದ್ವೀಪಕ್ಕೆ ಗಡಿಪಾರು ಮಾಡಿದರು ಮೇ 5, 1821ರಂದು ಹೊಟ್ಟೆಹುಣ್ಣಿನಿಂದ ನೆಪೋಲಿಯನ್ನನು ಸಾವನ್ನಪ್ಪಿದನು.

ನೆಪೋಲಿಯನ್‌ನ ಅವನತಿಗೆ ಕಾರಣಗಳು:

- ನೆಪೋಲಿಯನ್‌ನು ಅತ್ಯಂತ ಪ್ರತಿಭಾವಂತನಾಗಿದ್ದರೂ, ತನ್ನ ಅಪರಿಮಿತ ಮಹತ್ವಾಕಾಂಕ್ಷೆ, ಸ್ವಪ್ರತಿಷ್ಠೆ ಮತ್ತು ಸ್ವ ಕೇಂದ್ರಿತ ಸ್ವಭಾವಗಳು ಈತನನ್ನು ವಿನಾಶದಲ್ಲಿ ಕೊನೆಗೊಳಿಸಿದವು.
- ನೆಪೋಲಿಯನ್ನನ ಸಾಮ್ರಾಜ್ಯವು ಸ್ಥಾಪನೆಗೊಂಡದ್ದು ಸೇನಾ ಸಂಘಟನೆಯಿಂದಾಗಿ ,ಅದರಲ್ಲಿ ನ್ಯೂನತೆಗಳಿದ್ದವು.

ಈತನ ಸೈನಿಕರು ವಿವಿಧ ರಾಷ್ಟ್ರೀಯತೆಯ ಹಿನ್ನೆಲೆಯುಳ್ಳವರಾಗಿದ್ದರು. ಹಾಗಾಗಿ ಅವರಿಗೆ ನೆಪೋಲಿಯನ್ನನ ಸಾಮ್ರಾಜ್ಯದೊಂದಿಗೆ ಆತ್ಮೀಯ ಸಂಬಂಧವಿರಲಿಲ್ಲ.

- ನೆಪೋಲಿಯನ್ನನ ಸಾಮ್ರಾಜ್ಯದ ವಿರುದ್ಧ ಉದಯವಾದ ರಾಷ್ಟ್ರೀಯತೆಯು ಆತನ ಅವನತಿಗೆ ಮತ್ತೊಂದು ಪ್ರಮುಖ ಕಾರಣವಾಯಿತು. ಸ್ಪೇನ್‌ನಲ್ಲಿ ಆರಂಭವಾದ ಇದು ಇನ್ನಿತರ ದೇಶಗಳಾದ ಆಸ್ಟ್ರೀಯಾ, ಪ್ರಷ್ಯಾ ಮತ್ತು ರಷ್ಯಾಗಳಿಗೆ ಹರಡಿತು. ಇದು ನಂತರ ನೆಪೋಲಿಯನ್‌ನ ವಿರುದ್ಧದ ಬಂಧವಿಮೋಚನೆಯ ಹೋರಾಟಕ್ಕೆ ಎಡೆ ಮಾಡಿಕೊಟ್ಟಿತು.

- ಅವನು ಎಸಗಿದ ಅತ್ಯಂತ ಗುರುತರ ಪ್ರಮಾದವೆಂದರೆ, ಖಂಡಾಂತರ ಪದ್ಧತಿಯನ್ನು ಜಾರಿಗೊಳಿಸಿದ್ದು. ಇದು ಸಂಪೂರ್ಣವಾಗಿ ಜನವಿರೋಧಿ ನೀತಿಯಾಗಿತ್ತು. ಅಪಾರವಾದ ನಷ್ಟದಿಂದ ಯುರೋಪಿನ ಇತರ ದೇಶಗಳು ಈ ಪದ್ಧತಿಯಿಂದ ಹೊರಬಂದವು.

- ರಷ್ಯಾದ ಮೇಲಿನ ದಂಡಯಾತ್ರೆಯು ನೆಪೋಲಿಯನ್ನನ ಕೆಟ್ಟ ವಿಧಿಬರಹವಾಗಿತ್ತು. ಅದಕ್ಕೆ ಜಗತ್ತಿನ ಅತ್ಯಂತ ಶಕ್ತಿಶಾಲಿ ಸೈನ್ಯವು ಅಲ್ಲಿನ ವಾತಾವರಣಕ್ಕೆ ಸಿಕ್ಕಿಕೊಂಡು ನಾಶವಾಗಿ ಹೋಯಿತು. ಇಂಥದೆ ಅವಕಾಶಕ್ಕಾಗಿ ಕಾದು ಕುಳಿತಿದ್ದ ನೆಪೋಲಿಯನ್ನನ ವೈರಿಗಳು ತಕ್ಷಣವೇ ಈ ಸಂದರ್ಭವನ್ನು ಬಳಸಿಕೊಂಡು ಅವನನ್ನು ಸಂಪೂರ್ಣವಾಗಿ ನಾಶಪಡಿಸಲು 4ನೇ ಒಕ್ಕೂಟವನ್ನು ರಚಿಸಿಕೊಂಡಿದ್ದು, ಆತನ ಅವನತಿಗೆ ಕಾರಣವಾಯಿತು.

- ನೆಪೋಲಿಯನ್ನನು ಕ್ಯಾಥೊಲಿಕ್ ಧರ್ಮ ಗುರುವಾದ ಪೋಪನೊಂದಿಗೆ ಅತ್ಯಂತ ಕೆಟ್ಟದಾಗಿ ನಡೆದುಕೊಂಡಿದ್ದು ಇಡೀ ಯುರೋಪಿನ ರೋಮನ್ ಕ್ಯಾಥೊಲಿಕ್ಕರು ವಿರೋಧಿಗಳಾಗುವಂತೆ ಮಾಡಿತು. 1809ರಲ್ಲಿ ಪೋಪನ ಎಲ್ಲ ಪ್ರಾಂತಗಳನ್ನು ವಶಡಿಸಿಕೊಂಡನು ಮತ್ತು ಪೋಪನ ಸ್ಥಾನವನ್ನು ಪ್ಯಾರಿಸ್‌ಗೆ ಸ್ಥಳಾಂತರಿಸಿದನು.

- ಇಂಗ್ಲೆಂಡ್‌ನೊಂದಿಗಿನ ಈತನ ಮುಂದುವರಿದ ವಿರೋಧವು, ಅದರ ಸಾಗರದ ಮೇಲಿನ ಪ್ರಭುತ್ವವು ಮತ್ತು ಇಂಗ್ಲೆಂಡ್‌ನ ದಂಡನಾಯಕರಾದ ಅಡ್ಮಿರಲ್ ನೆಲ್‌ಸನ್ ಮತ್ತು ವೆಲ್ಲಸ್ಲಿಯ ಸಾಮರ್ಥ್ಯಗಳು ನೆಪೋಲಿಯನ್ನನ ಸಾಮ್ರಾಜ್ಯವು ಚೂರುಚೂರಾಗುವಂತೆ ಮಾಡಿದವು. ಇಂಗ್ಲೆಂಡಿಗೆ ಹೋಲಿಸಿದರೆ ನೆಪೋಲಿಯನ್ನನ ನೌಕಾಪಡೆಯು ದುರ್ಬಲವಾಗಿತ್ತು.

- ನೆಪೋಲಿಯನ್ನನು ಅಧಿಕಾರದ ಅತ್ಯುನ್ನತ ಹಂತದಲ್ಲಿದ್ದಾಗ ಆತನಿಂದ ಲಾಭ ಮಾಡಿಕೊಂಡಿದ್ದ ಆತನ ಸ್ನೇಹಿತರು ಮತ್ತು ಸಂಬಂಧಿಕರು ಆತನು ಕಷ್ಟದಲ್ಲಿದ್ದಾಗ ದ್ರೋಹ ಬಗೆದರು.

ನೆಪೋಲಿಯನ್ನನ ಸಮಾಧಿ

ನೆಪೋಲಿಯನ್ನನ ಸಮಾಧಿಯು ಪ್ಯಾರಿಸ್‌ನ ಇಂಗ್ಲೀಷ್ ಡ್ಯೂ ಡೂಮ್ ಚರ್ಚ್‌ನ ಇನ್‌ವ್ಯಾಲೈಡ್ಸ್‌ನ ಕೇಂದ್ರ ಶವಾಗಾರದಲ್ಲಿ ನಿರ್ಮಿಸಲಾಗಿದೆ. ನೆಪೋಲಿಯನ್ನನ ಶವವನ್ನು ಒಂದರೊಳಗೊಂದಿರುವ ಆರು ಶವಪೆಟ್ಟಿಗೆಗಳಲ್ಲಿರಿಸಿ ದೊಡ್ಡ ಕಲ್ಲಿನ ಶವ ಪೆಟ್ಟಿಗೆಯಲ್ಲಿರಿಸಲಾಗಿದೆ. ಆರು ಶವ ಪೆಟ್ಟಿಗೆಗಳು ವಿವಿಧ ಮರಗಳ ಕಟ್ಟಿಗೆಯಿಂದ ತಯಾರಿಸಲಾಗಿದೆ– ಮಹೋಗನಿ, ಎಬೋನಿ ಮತ್ತು ಓಕ್.

ಫ್ರಾನ್ಸ್‌ನಿಂದ ಹೊರಹಾಕಲ್ಪಟ್ಟ ನೆಪೋಲಿಯನ್ನನು 1815ರಿಂದ 1821ರ ವರೆಗೆ ಸೇಂಟ್ ಹೆಲೆನಾ ದ್ವೀಪದಲ್ಲಿದ್ದು ಮೇ 5 ರಂದು ಮಡಿದನು. ಅವನ ಶವವವನ್ನು ಅಕ್ಟೋಬರ್ 15, 1840 ರವರೆಗೆ ಅಲ್ಲಿಯೇ ಹೊಳಲಾಗಿತ್ತು. ಲೂಯಿ ಫಿಲಿಪ್ 1840ರಲ್ಲಿ ಶವವನ್ನು ಸಮಾಧಿಯಿಂದ ಅಗೆದು ತೆಗೆಸಿ ಪ್ಯಾರಿಸ್ ನಗರಕ್ಕೆ ತರಿಸಿ, ಸರ್ಕಾರಿ ಮರ್ಯಾದೆಯೊಂದಿಗೆ ಶವ ಸಂಸ್ಕಾರವನ್ನು ನಡೆಸಿ ಸೇಂಟ್ ಜೆರೋಮ್ ಚರ್ಚ್‌ನಲ್ಲಿರಿಸಿದನು. 1861ರಲ್ಲಿ ನೆಪೋಲಿಯನ್‌ನ ಸಮಾಧಿ ಪೂರ್ಣಗೊಂಡ ನಂತರ ಶವವನ್ನು ಅಲ್ಲಿಗೆ ಸ್ಥಳಾಂತರಿಸಲಾಯಿತು.

ಈ ಸಮಾಧಿಯು ಹಸಿರು ಬಳಪದ ಕಲ್ಲಿನ ತಳಹದಿಯ ಮೇಲೆ ಕೆಂಪು ಶಿಲೆಯ ರಚನೆಗಳಿಂದ ಕೆತ್ತಲ್ಪಟ್ಟು ಗೌರವ ಸೂಚಕ ಶಾಸನಗಳು ಹಾಗೂ ಸಾಮ್ರಾಜ್ಯದ ಮಹಾನ್ ದಿಗ್ವಿಜಯಗಳನ್ನು ಬರೆಯಲಾಗಿದೆ. ವರ್ತುಲಾಕಾರದ ಉಪ್ಪರಿಗೆಯಲ್ಲಿ 'ಸಿಮಾರ್ತ್' ವಿರಚಿತ ಉಬ್ಬು ಚಿತ್ರಗಳು ಹಾಗೂ ಶಿಲ್ಪ ಕಲೆಯಿದೆ. ಸಮಾಧಿಯ ಹಿಂಭಾಗದಲ್ಲಿ ರಾಜಲಾಂಛನ ಹಾಗೂ ಚಿನ್ಹೆಗಳನ್ನು ಧರಿಸಿದ ನೆಪೋಲಿಯನ್‌ನ ಮೂರ್ತಿಯಿದೆ

ಪ್ರಶ್ನೆಗಳು

ಒಂದು ಪದ ಇಲ್ಲವೆ ಒಂದು ವಾಕ್ಯದಲ್ಲಿ ಉತ್ತರಿಸಿ (ಒಂದು ಅಂಕದ ಪ್ರಶ್ನೆಗಳು)

1. ಫ್ರಾನ್ಸ್‌ನ ಮೊದಲ ಕಾನ್ಸಲ್ ಯಾರು?
2. ಅಡ್ಮಿರಲ್ ನೆಲ್ಸನ್ ಯಾರು?
3. ನೆಪೋಲಿಯನ್ ಫ್ರಾನ್ಸ್ ಚಕ್ರವರ್ತಿಯೆಂದು ಕಿರೀಟ ಧರಿಸಿದ್ದು ಯಾವ ವರ್ಷದಲ್ಲಿ?
4. ಬ್ಯಾಂಕ್ ಆಫ್ ಫ್ರಾನ್ಸ್‌ನ್ನು ಸ್ಥಾಪಿಸಿದ್ದು ಯಾರು?
5. ನೆಪೋಲಿಯನ್ನನು ಸ್ಥಾಪಿಸಿದ ವಿಶ್ವವಿದ್ಯಾಲಯ ಯಾವುದು?
6. ಖಂಡಾಂತರ ಪದ್ಧತಿಯನ್ನು ಹೇರಿದವರು ಯಾರು?
7. ನೆಪೋಲಿಯನ್ನನು ನಿಧನನಾದದ್ದು ಎಲ್ಲಿ?
8. ನೆಪೋಲಿಯನ್ನನು ಮಾಡಿದ ಕೊನೆಯ ಯುದ್ಧ ಯಾವುದು?
9. ಎರಡನೆಯ ಜಸ್ಟಿನೀಯನ್ ಎಂದು ಯಾರನ್ನು ಕರೆಯಲಾಗಿದೆ?
10. ವಾಟರ್‌ಲೂ ಕದನವು ಯಾವ ವರ್ಷದಲ್ಲಿ ನಡೆಯಿತು?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಪದ ಇಲ್ಲವೆ ಎರಡು ವಾಕ್ಯಗಳಲ್ಲಿ ಉತ್ತರಿಸಿ (ಎರಡು ಅಂಕಗಳ ಪ್ರಶ್ನೆಗಳು)

1. ನೆಪೋಲಿಯನ್‌ನ ತಂದೆ–ತಾಯಿಗಳ ಹೆಸರೇನು?
2. ನೆಪೋಲಿಯನ್ ಜನಸಿದ್ದು ಎಲ್ಲಿ ಮತ್ತು ಯಾವ ವರ್ಷದಲ್ಲಿ?
3. ತಿಲ್‌ಸಿಟ್ ಒಪ್ಪಂದ ಯಾರ ಮಧ್ಯ ಹಾಗೂ ಯಾವ ವರ್ಷದಲ್ಲಿ ಜರುಗಿತು?
4. ಕಾನ್‌ಕಾರ್ಡಟ್ ಎಂದರೇನು?
5. ಖಂಡಾಂತರ ಪದ್ಧತಿ ಎಂದರೇನು?
6. ಲೀಜನ್ ಆಫ್ ಆನರ್ ಎಂದರೇನು?

ಈ ಕೆಳಗಿನ ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ (5 ಅಂಕದ ಪ್ರಶ್ನೆಗಳು)

1. ನೆಪೋಲಿಯನ್‌ನ ಜೀವನ ಹಾಗೂ ಏಳಿಗೆಯ ಕುರಿತು ಬರೆಯಿರಿ.
2. ನೆಪೋಲಿಯನ್‌ನ ದಂಡಯಾತ್ರೆಗಳ ಕುರಿತು ಬರೆಯಿರಿ.
3. ನೆಪೋಲಿಯನ್‌ನ ಖಂಡಾಂತರ ಪದ್ಧತಿಯ ಕುರಿತು ಚರ್ಚಿಸಿ.
4. ನೆಪೋಲಿಯನ್‌ನ ಅವನತಿಗೆ ಕಾರಣಗಳೇನು? ವಿವರಿಸಿ.
5. ನೆಪೋಲಿಯನ್‌ನು **"ಕ್ರಾಂತಿಯ ಶಿಶು"** ಹಾಗೂ **"ಕ್ರಾಂತಿಯ ನಿರ್ಮೂಲನಕಾರ"** ಈ ಹೇಳಿಕೆಯನ್ನು ಸಮರ್ಥಿಸಿ.

ಈ ಕೆಳಗಿನ ಪ್ರಶ್ನೆಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ (10 ಅಂಕಗಳ ಪ್ರಶ್ನೆಗಳು)

1. ನೆಪೋಲಿಯನ್‌ನ ಆಡಳಿತ ಸುಧಾರಣೆಗಳನ್ನು ವಿವರಿಸಿ.
2. ನೆಪೋಲಿಯನ್‌ನ ಏಳಿಗೆ ಹಾಗೂ ಸೈನಿಕ ದಿಗ್ವಿಜಯಗಳನ್ನು ಬರೆಯಿರಿ.

❖ ❖ ❖ ❖ ❖

9.2 ಇಟಲಿಯ ಏಕೀಕರಣ

ರಾಷ್ಟ್ರೀಯತೆಯ ಉದಯ–ಮ್ಯಾಜಿನಿ, ಕವೂರ್, ಗ್ಯಾರಿಬಾಲ್ಡಿ ಮತ್ತು 2ನೆಯ ವಿಕ್ಟರ್ ಇಮ್ಯಾನ್ಯುಯಲ್‌ರ ಪಾತ್ರ

ಫ್ರಾನ್ಸ್‌ನ ಕ್ರಾಂತಿ ಹಾಗೂ ನೆಪೋಲಿಯನ್ನನ ಯುಗ ಯುರೋಪಿನ ದೇಶಗಳಲ್ಲಿ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಯಿತು. ಕೆಲವು ವ್ಯಕ್ತಿಗಳು ಈ ರಾಷ್ಟ್ರೀಯತೆಯ ಅಲೆಯನ್ನು ಹತ್ತಿಕ್ಕಲು ಪ್ರಯತ್ನಿಸಿದರಾದರೂ ಅವರು ಸಫಲರಾಗಲಿಲ್ಲ. ಇಟಲಿ ಹಾಗೂ ಜರ್ಮನಿಯ ಏಕೀಕರಣದಲ್ಲಿ ರಾಷ್ಟ್ರೀಯತೆಯ ವಿಜಯವನ್ನು ಕಾಣಬಹುದು.

19ನೆಯ ಶತಮಾನಕ್ಕೆ ಮೊದಲು ಇಟಲಿಯು ಕೇವಲ ಒಂದು 'ಭೌಗೋಳಿಕ ಅಭಿವ್ಯಕ್ತಿ'ಯಾಗಿತ್ತು. ಅಲ್ಲಿ ಪರಸ್ಪರ ದ್ವೇಷಿಸುವ ಅನೇಕ ಸಣ್ಣ–ಪುಟ್ಟ ರಾಜ್ಯಗಳಿದ್ದವು. ಅವರಲ್ಲಿ ಐಕ್ಯತೆ ಇರಲಿಲ್ಲ. ಇದರಿಂದ ಈ ರಾಜ್ಯಗಳು ವಿದೇಶೀಯರ ಪ್ರಾಬಲ್ಯಕ್ಕೆ ಬಲಿಯಾದವು. ಉತ್ತರದಲ್ಲಿ ಲೊಂಬಾರ್ಡಿ ಮತ್ತು ವೆನಿಷಿಯಾ ನೇರವಾಗಿ ಆಸ್ಟ್ರಿಯನ್ನರ ಅಧೀನದಲ್ಲಿದ್ದವು. ಇನ್ನೂ ಕೆಲವು ಸಣ್ಣ ರಾಜ್ಯಗಳು ಹ್ಯಾಪ್ಸ್‌ಬರ್ಗ್‌ರ ಅಧೀನದಲ್ಲಿದ್ದವು. ಮಧ್ಯ ಇಟಲಿಯ ರೋಮ್ ಹಾಗೂ ಇತರ ಸಣ್ಣ ಭಾಗಗಳು ಪೋಪನ ಅಧೀನದಲ್ಲಿದ್ದವು. ಪಾರ್ಮ, ಮೊಡೇನ ಮತ್ತು ಟಸ್ಕನಿ ಆಸ್ಟ್ರಿಯಾದ ರಾಜವಂಶದ ಅಧೀನದಲ್ಲಿದ್ದವು. ದಕ್ಷಿಣದಲ್ಲಿ ನೇಪಲ್ಸ್ ಮತ್ತು ಸಿಸಿಲಿ ಫ್ರಾನ್ಸ್‌ನ ಬೋರ್ಬೊನ್ ವಂಶದ ಅಧೀನದಲ್ಲಿದ್ದವು.

ಇಟಲಿಯನ್ನು ನೆಪೋಲಿಯನ್ನನು ಆಕ್ರಮಿಸಿಕೊಂಡಾಗ ಇಟಾಲಿಯನ್ನರು ಅವನನ್ನು ಸ್ವಾಗತಿಸಿದರು. ಫ್ರಾನ್ಸ್‌ನ ಕ್ರಾಂತಿ ಇಟಲಿಯ ಜನರ ಮೇಲೆ ಪ್ರಭಾವವನ್ನು ಬೀರಿತ್ತು. ಅವರು ನೆಪೋಲಿಯನ್‌ನನ್ನು ಫ್ರಾನ್ಸ್‌ನ ಕ್ರಾಂತಿಕಾರಿ ತತ್ವಗಳ ಪ್ರತಿನಿಧಿ ಎಂದು ಪರಿಗಣಿಸಿದರು.

> ಇಟಲಿ ಆಲ್ಪ್ಸ್ ಮತ್ತು ಸಮುದ್ರದಿಂದ ಆವೃತವಾಗಿದೆ. ಅದರ ರಾಷ್ಟ್ರೀಯ ಗಡಿಯು ಸ್ಪಷ್ಟವಾಗಿದೆ. ಇಟಲಿ ಏಕೀಕೃತವಾಗಿ ಒಂದು ರಾಷ್ಟ್ರ ಎಂದು ನೆಪೋಲಿಯನ್ ಹೇಳಿದ್ದನು.

ಇಟಲಿಯ ರಾಜ್ಯಗಳ ಮೇಲೆ ಅವನ ಅಧಿಕಾರ ಬಹಳ ಪ್ರಯೋಜನಕರವಾಗಿತ್ತು. ಇಟಾಲಿಯನ್ನರು ಐಕ್ಯತೆಯ ಅನುಭವವನ್ನು ಪಡೆದರು. ಅವನು ಸುಧಾರಣೆಗಳನ್ನು ಜಾರಿಗೆ ತಂದನು, ಕಾನೂನುಗಳನ್ನು ಜಾರಿಗೆ ತಂದನು ಫ್ರಾನ್ಸ್‌ನ ಕ್ರಾಂತಿಯ ಘೋಷಣೆಗಳಾದ 'ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ' ಇಟಾಲಿಯನ್ನರ ಮೇಲೆ ಪ್ರಭಾವ ಬೀರಿತ್ತು.

ನೆಪೋಲಿಯನ್ನನ ಅವನತಿಯ ನಂತರ ಆಸ್ಟ್ರಿಯಾದ ಪ್ರಧಾನ ಮಂತ್ರಿ ಮೆಟರ್ನಿಕ್ ಪ್ರಭಾವ ಶಾಲಿಯಾದನು. ಅವನ ನೇತೃತ್ವದಲ್ಲಿ ನಡೆದ ವಿಯೆನ್ನಾ ಕಾಂಗ್ರೆಸ್ ನೆಪೋಲಿಯನ್ನನ ಕಾರ್ಯವನ್ನು ನಾಶಗೊಳಿಸಿ ಇಟಲಿಯನ್ನು ವಿಭಜಿಸಲಾಯಿತು. ಲೊಂಬಾರ್ಡಿ ಮತ್ತು ವೆನಿಷಿಯಾ ಆಸ್ಟ್ರಿಯನ್ನರ ಅಧೀನಕ್ಕೆ ಬಂದವು. ಪಾರ್ಮ, ಮೊಡೆನಾ ಮತ್ತು ಟಸ್ಕನಿ ಆಸ್ಟ್ರಿಯಾದ ಹ್ಯಾಬ್ಸ್‌ಬರ್ಗರ ಅಧೀನಕ್ಕೆ ಬಂದವು. ಪೋಪನಿಗೆ ಮತ್ತೆ ರೋಮನ್ನು ನೀಡಲಾಯಿತು. ಅದರೊಂದಿಗೆ ರೊಮಾಗ್ನ ಹಾಗೂ ಬಲೋಗ್ನಾಗಳನ್ನು ನೀಡಲಾಯಿತು. ನೇಪಲ್ಸ್ ಮತ್ತು ಸಿಸಿಲಿಯನ್ನು ಬೋರ್ಬೋನ್ನರಿಗೆ ನೀಡಲಾಯಿತು. ಸಾರ್ಡೀನಿಯಾ ಮತ್ತು ಜಿನೋವಾಗಳನ್ನು ಇಟಲಿಯವನೇ ಆದ ರಾಜನು ಆಳುತ್ತಿದ್ದ ಪಿಯೆಡ್‌ಮಂಟ್‌ಗೆ ನೀಡಲಾಯಿತು. ಹೀಗೆ ಇಟಲಿಯ ಐಕ್ಯತೆಯನ್ನು ನಿಷ್ಫಲಗೊಳಿಸಲಾಯಿತು.

ಏಕೀಕರಣದ ಮೊದಲು ಇಟಲಿಯ ನಕ್ಷೆ

ವಿಯನ್ನಾ ಕಾಂಗ್ರೆಸ್

1815ರಲ್ಲಿ ನೆಪೋಲಿಯನ್ನನ ಅವನತಿಯ ನಂತರ ಯುರೋಪಿಯನ್ ದೇಶಗಳು ಆಸ್ಟ್ರಿಯಾದ ರಾಜಧಾನಿ ವಿಯೆನ್ನಾದಲ್ಲಿ ಸಭೆ ಸೇರಿ ಯೂರೋಪ್‌ನ ಭೂಪಟವನ್ನು ಪುನರ್ರಚಿಸಿದರು. ಆಸ್ಟ್ರಿಯಾದ ಪ್ರಧಾನಮಂತ್ರಿ ಮೆಟರ್ನಿಕ್ ಇದರಲ್ಲಿ ಪ್ರಮುಖ ಪಾತ್ರ ವಹಿಸಿದನು. 1815–1850ರ ಅವಧಿಯನ್ನು 'ಮೆಟರ್ನಿಕ್ ಯುಗ' ಎಂದು ಕರೆಯಲಾಗಿದೆ. ಅವನು ಹಳೆಯ ರಾಜ್ಯಭಾರ ಕ್ರಮವನ್ನು ಪುನ:ಸ್ಥಾಪಿಸಿದನಲ್ಲದೇ ಎಲ್ಲಾ ಉದಾತ್ತ ಚಳುವಳಿಗಳನ್ನು ಹತ್ತಿಕ್ಕಿದನು.

ಆದರೆ ಇಟಲಿಯ ಜನರು, ಇಟಲಿ ಒಂದು ದೇಶ ಎಂಬ ಪಾಠವನ್ನು ಮರೆತಿರಲಿಲ್ಲ. ಅವರು ತಾತ್ಕಾಲಿಕ ಐಕ್ಯತೆ, ಕಾನೂನಿನ ದೃಷ್ಟಿಯಲ್ಲಿ ಸಮಾನತೆ, ಧಾರ್ಮಿಕ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಮತ್ತು ಸ್ವಯಮಾಡಳಿತವನ್ನು ಅನುಭವಿಸಿದ್ದರು.

1820ರ ಹೊತ್ತಿಗೆ ದಂಗೆಗಳು ಆರಂಭವಾದವು. ಆ ದಂಗೆಗಳು ಗುಪ್ತ ಸಂಘಗಳ ಕಾರ್ಯಗಳಾಗಿದ್ದವು. ಅವುಗಳಲ್ಲಿ ಬಹಳ ಬೃಹತ್ ಸಂಘವೆಂದರೆ 'ಕಾರ್ಬೊನರಿ' ಅಥವಾ 'ಕಲ್ಲಿದ್ದಲನ್ನು ಉರಿಸುವವರು'. ಅವರು ವಿದೇಶಿಯ ಆಳ್ವಿಕೆಗೆ ವಿರೋಧವನ್ನು ಸೃಷ್ಟಿಸುವಲ್ಲಿ ಕಾರ್ಯಪ್ರವೃತ್ತರಾಗಿದ್ದರು. 1820–1831ರ ಮಧ್ಯೆ ಅನೇಕ ದಂಗೆಗಳಾದವು. ಆದರೆ ಅವೆಲ್ಲವೂ ಆಸ್ಟ್ರೀಯಾದಿಂದ ಹತ್ತಿಕ್ಕಲ್ಪಟ್ಟವು.

1830 ಮತ್ತು 1848ರ ಫ್ರಾನ್ಸ್‌ನ ಕ್ರಾಂತಿಗಳು ಇಟಾಲಿಯನ್ನರ ಮೇಲೆ ಪ್ರಭಾವ ಬೀರಿದ್ದು, ಇನ್ನೂ ಹೆಚ್ಚಿನ ದಂಗೆಗಳಿಗೆ ಕಾರಣವಾದವು. ಅವೆಲ್ಲವನ್ನೂ ಆಸ್ಟ್ರಿಯಾ ಮತ್ತು ಫ್ರಾನ್ಸ್ ಹತ್ತಿಕ್ಕಿದವು. ಕೊನೆಗೆ ಜೋಸೆಫ್ ಮ್ಯಾಜಿನಿ, ಕೌಂಟ್ ಕವೂರ್, ಗ್ಯಾರಿಬಾಲ್ಡಿ ಮತ್ತು ವಿಕ್ಟರ್ ಇಮ್ಮಾನುಯಲ್ ಇಟಲಿಯ ಏಕೀಕರಣದ ಕನಸನ್ನು ನನಸುಮಾಡಲು ಸಹಾಯಮಾಡಿದರು.

ಜೋಸೆಫ್ ಮ್ಯಾಜಿನಿ (1805–1872)

'ಇಟಲಿಯ ಏಕೀಕರಣದ ಆತ್ಮ' ಎಂದು ಕರೆಸಿಕೊಂಡಿರುವ ಜೋಸೆಫ್ ಮ್ಯಾಜಿನಿ ಜಿನೋವಾದಲ್ಲಿ 1805ರಲ್ಲಿ ಜನಿಸಿದನು. ಅವನು ವೃತ್ತಿಯಲ್ಲಿ ವಕೀಲನಾಗಿದ್ದನು. 'ಲೇಖನಿ ಖಡ್ಗಕ್ಕಿಂತಾ ಹರಿತ' ಎಂದು ನಂಬಿದ್ದ ಅವನು ತನ್ನ ಲೇಖನಗಳ ಮೂಲಕ ಜನರಲ್ಲಿ ದೇಶಾಭಿಮಾನವನ್ನು ಬೆಳೆಸಲು ನಿರ್ಧರಿಸಿದನು. ಅವನು 'ಕಾರ್ಬೊನರಿ'ಯ ಸದಸ್ಯನಾಗಿದ್ದನು. 1831ರಲ್ಲಿ 'ಯಂಗ್ ಇಟಲಿ' ಎಂಬ ಸಂಘವನ್ನು ಸ್ಥಾಪಿಸಿದನು. ಅದು ಯುವಕರ ಗುಪ್ತ ಮತ್ತು ಭೂಗತ ಸಂಘಟನೆಯಾಗಿತ್ತು. ಇಟಾಲಿಯನ್ನರೇ ಏಕೀಕರಣ ಸಾಧಿಸಬೇಕೆಂಬುದು ಅವನ ಅನಿಸಿಕೆಯಾಗಿತ್ತು. 40 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷರಿಗೆ ಈ ಸಂಘದ ಸದಸ್ಯತ್ವವನ್ನು ನೀಡಲಾಗುತ್ತಿತ್ತು. ಅವರು ಇಟಲಿಯ ಸಶಕ್ತ ಯುವಕರಾಗಿದ್ದರು. ಇಟಲಿಯ ಐಕ್ಯತೆಯನ್ನು ಒಂದು ಹೊಸ ಧರ್ಮ ಹಾಗೂ ಪವಿತ್ರ ಕಾರ್ಯವೆಂದು ಬೋಧಿಸಲಾಯಿತು. 'ದೇವರು, ಜನತೆ ಮತ್ತು ಇಟಲಿ' ಈ ಸಂಘದ ಮುಖ್ಯ ಘೋಷಣೆಯಾಗಿತ್ತು. ಈ ಎಲ್ಲಾ ಚಟುವಟಿಕೆಗಳಿಂದಾಗಿ ಅವನನ್ನು ಗಡೀಪಾರು ಮಾಡಲಾಯಿತು. ಅವನು ದೇಶಭ್ರಷ್ಟನಾಗಿ ಫ್ರಾನ್ಸ್, ಸ್ವಿಡ್ಜರ್‌ಲ್ಯಾಂಡ್ ಹಾಗೂ ಇಂಗ್ಲೆಂಡ್‌ಗಳಲ್ಲಿದ್ದು ಅಲ್ಲಿಂದಲೇ ಚಳುವಳಿಯ ಮಾರ್ಗದರ್ಶನವನ್ನು ಮಾಡುತ್ತಿದ್ದನು.

ಮ್ಯಾಜಿನಿಯ ಪ್ರಭಾವ ಎಷ್ಟಿತ್ತೆಂದರೆ 1848ರಲ್ಲಿ ಇಟಲಿಯಲ್ಲಿ ಸಂಘಟಿತ ದಂಗೆಗಳಾದವು. ಲೊಂಬಾರ್ಡಿ, ಪಾರ್ಮ, ಮೊಡೇನ ಮತ್ತು ಟಸ್ಕನಿಯ ಜನರು ತಮ್ಮ ಆಡಳಿತಗಾರರ ವಿರುದ್ಧ ದಂಗೆ ಎದ್ದರು. ಅವರಲ್ಲಿ ಐಕ್ಯತೆ ಇರಲಿಲ್ಲವಾದ್ದರಿಂದ ಆಸ್ಟ್ರೀಯ ಮತ್ತು ಫ್ರಾನ್ಸ್ ಅವುಗಳನ್ನು ಸುಲಭವಾಗಿ ಹತ್ತಿಕ್ಕಿದವು. ಇಟಲಿಯ ದೊರೆ ಚಾರ್ಲ್ಸ್ ಅಲ್ಬರ್ಟ್, ರಾಷ್ಟ್ರೀಯ ಚಳುವಳಿಯ ನೇತೃತ್ವವನ್ನು ವಹಿಸಿದನು ಮತ್ತು ಆಸ್ಟ್ರೀಯವನ್ನು ಲೊಂಬಾರ್ಡಿಯಿಂದ ಹೊರದೂಡಿದನು ಆದರೆ ಈ ಗೆಲುವು ಅಲ್ಪಕಾಲದ್ದಾಗಿತ್ತು. ಆಸ್ಟ್ರಿಯನ್ನರು ಸಾರ್ಡಿನಿಯಾದ ಸೈನ್ಯವನ್ನು ಸೋಲಿಸಿದರು. ಇದರಿಂದ ನಿರಾಸೆಗೊಂಡ ಚಾರ್ಲ್ಸ್ ಅಲ್ಬರ್ಟ್ ಸಿಂಹಾಸನವನ್ನು ತ್ಯಜಿಸಿ ತನ್ನ ಮಗ 2ನೆಯ ವಿಕ್ಟರ್ ಇಮ್ಯಾನ್ಯುಯಲ್‌ನನ್ನು ರಾಜನನ್ನಾಗಿ ಮಾಡಿದನು.

ಕೌಂಟ್–ಡಿ–ಕವೂರ್ (1810–1861)

1810ರಲ್ಲಿ ಪಿಯಡ್‌ಮಂಟ್‌ನಲ್ಲಿ ಜನಿಸಿದ ಕವೂರ್ ಸೈನಿಕ ಶಿಕ್ಷಣವನ್ನು ಪಡೆದನು. ಕೆಲವು ಕಾಲ ಸೈನ್ಯದಲ್ಲಿ ಸೇವೆ ಸಲ್ಲಿಸಿದನು. ಇಟಲಿಯ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನದಿಂದಾಗಿ ದೇಶಾಭಿಮಾನವನ್ನು ಬೆಳೆಸಿಕೊಂಡನು. ಇಂಗ್ಲೀಷರ ಸಂವಿಧಾನತ್ಮಾಕ ವ್ಯವಸ್ಥೆಯನ್ನು ಅವನು ಪ್ರತಿಪಾದಿಸಿದನು.. 1847ರಲ್ಲಿ 'ರಿಸಾರ್ಜಿಮೆಂಟೊ' (ಪುನರುತ್ಥಾನ) ಎಂಬ ವೃತ್ತ ಪತ್ರಿಕೆಯನ್ನು ಆರಂಭಿಸಿದನು. ಈ ಪತ್ರಿಕೆಯ ಸಂಪಾದಕನಾಗಿ ಇಟಲಿಯ ಏಕೀಕರಣಕ್ಕೆ ಜನಬೆಂಬಲವನ್ನು ಒಗ್ಗೂಡಿಸಿದನು.

1850ರಲ್ಲಿ ಪಿಯಡ್‌ಮಂಟ್‌ನ ಸಂಸತ್ತಿಗೆ ಚುನಾಯಿತನಾದಾಗ ಅವನ ರಾಜಕೀಯ ವೃತ್ತಿಜೀವನ ಆರಂಭವಾಯಿತು. 1852ರಲ್ಲಿ 2ನೆಯ ವಿಕ್ಟರ್ ಇಮ್ಯಾನ್ಯುಯಲ್ ಅವನನ್ನು ತನ್ನ ಪ್ರಧಾನಮಂತ್ರಿಯನ್ನಾಗಿ ನೇಮಿಸಿದನು. 1852 ರಿಂದ 1861ರವರೆಗೆ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದನು. ಸಾರ್ಡಿನಿಯಾದ ನಾಯಕತ್ವದಲ್ಲಿ ಇಟಲಿಯ ಏಕೀಕರಣವನ್ನು ಸಾಧಿಸುವ ಕನಸು ಅವನದಾಗಿತ್ತು. ಆದರೆ ಅದಕ್ಕೆ ಮೊದಲು ಸಾರ್ಡಿನಿಯಾವನ್ನು ಪ್ರಬಲ ರಾಜ್ಯವನ್ನಾಗಿ ಮಾಡಲು ಅನೇಕ ಸುಧಾರಣೆಗಳನ್ನು ಜಾರಿಗೆ

ತಂದನು. ಆರ್ಥಿಕ ವ್ಯವಸ್ಥೆಯ ಸುಧಾರಣೆ ಮಾಡಲಾಯಿತು. ವಾಣಿಜ್ಯ ತೆರಿಗೆಗಳನ್ನು ಕಡಿತಗೊಳಿಸಿದನು. ಶಿಕ್ಷಣ ಮತ್ತು ಕೈಗಾರಿಕೆಗಳಿಗೆ ಪ್ರೋತ್ಸಾಹ ನಿಡಿದನು. ಹೀಗೆ ರಾಜ್ಯವನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಸಾರ್ಡೀನಿಯಾ 'ಮಾದರಿ ರಾಜ್ಯ'ವಾಯಿತು.

ಇಟಲಿಯ ಏಕೀಕರಣಕ್ಕೆ 'ಯುದ್ಧ ಮತ್ತು ರಾಜನೀತಿ' ತತ್ವದಲ್ಲಿ ನಂಬಿಕೆಯಿಟ್ಟಿದ್ದನು. ಇಟಲಿಯ ಏಕೀಕರಣವನ್ನು ಇತರ ಯುರೋಪಿಯನ್ ದೇಶಗಳ ಸಹಾಯದಿಂದಲೇ ಸಾಧಿಸಬಹುದೆಂಬುದು ಕವೂರನ ನಂಬಿಕೆಯಾಗಿತ್ತು. ಆದ್ದರಿಂದ ಅವನು ಕ್ರಿಮಿಯನ್ ಯುದ್ಧದಲ್ಲಿ ಭಾಗವಹಿಸಿದನು. 1854–1856ರ ಮಧ್ಯೆ ನಡೆದ ಈ ಯುದ್ಧದಲ್ಲಿ ಇಂಗ್ಲೆಂಡ್ ಹಾಗೂ ಫ್ರಾನ್ಸ್ ಟರ್ಕಿಯ ಪರವಾಗಿ ರಷ್ಯಾ ವಿರುದ್ಧ ಯುದ್ಧ ಮಾಡಿದವು. ಈ ಯುದ್ಧದಲ್ಲಿ ಭಾಗವಹಿಸುವುದಕ್ಕೆ ಕವೂರನಿಗೆ ಯಾವುದೇ ಕಾರಣವಿರಲಿಲ್ಲವಾದರೂ ಇಂಗ್ಲೆಂಡ್ ಹಾಗೂ ಫ್ರಾನ್ಸ್‌ಗಳ ಮುಂದೆ ತನ್ನ ರಾಜ್ಯದ ಪರಿಸ್ಥಿತಿಯನ್ನು ತಿಳಿಸುವ ಮುಂದಾಲೋಚನೆಯಿಂದ ಅವನು ಈ ಯುದ್ಧದಲ್ಲಿ ಭಾಗವಹಿಸಿದನು. **"ಕ್ರಿಮಿಯಾದ ಕೆಸರಿನಲ್ಲಿ ನೂತನ ಇಟಲಿಯನ್ನು ನಿರ್ಮಿಸುತ್ತೇನೆ"** ಎಂದು ಅವನು ಘೋಷಿಸಿದನು. ಯುದ್ಧದ ನಂತರ, ಪ್ಯಾರಿಸ್ ಶಾಂತಿ ಸಂಧಾನದಲ್ಲಿ ಇಟಲಿಯ ಸಮಸ್ಯೆಗಳನ್ನು ನಾಯಕರ ಎದುರಿಟ್ಟನು.

ಒಂದನೇ ನೆಪೋಲಿಯನ್–1804 ರಲ್ಲಿ ಕಿರೀಟಧಾರಣೆಯನ್ನು ಮಾಡಿಸಿಕೊಂಡ ಮೇಲೆ ನೆಪೋಲಿಯನ್ ಬೋನಾಪಾರ್ಟೆ ತನ್ನನ್ನು ಫ್ರಾನ್ಸ್ ದೊರೆ ಒಂದನೆಯ ನೆಪೋಲಿಯನ್ ಎಂದು ಕರೆದುಕೊಂಡನು.

ಎರಡನೇ ನೆಪೋಲಿಯನ್ (1811–1832) – ಇವನು 1ನೆಯ ನೆಪೋಲಿಯನ್ನನ ಮಗನಾಗಿದ್ದನು. 1814ರಲ್ಲಿ ಅವನ ತಂದೆ ಅವನನ್ನು ದೊರೆ ಎಂದು ಘೋಷಿಸಿದನಾದರೂ ವಿರೋಧ ಪಕ್ಷಗಳು ಅವನನ್ನು ಒಪ್ಪಲಿಲ್ಲ. ಅವನೆಂದೂ ಫ್ರಾನ್ಸ್ ಅನ್ನು ಅಳಲಿಲ್ಲ.

ಮೂರನೇ ನೆಪೋಲಿಯನ್_ ಈತ ನೆಪೋಲಿಯನ್ನನ ಸೋದರಳಿಯನಾಗಿದ್ದನು. 1852ರಲ್ಲಿ ಅವನು ಸಿಂಹಾಸನರೂಢನಾದನು. 1870ರವರೆಗೆ ಫ್ರಾನ್ಸ್ ದೊರೆಯಾಗಿ ಆಳಿದನು.

ಫ್ರಾನ್ಸ್‌ನ ದೊರೆ ಮೂರನೆಯ ನೆಪೋಲಿಯನ್ ಇಟಲಿಯ ಏಕೀಕರಣದ ಬಗ್ಗೆ ಅನುಕಂಪವನ್ನು ಹೊಂದಿದ್ದನು. 1858ರಲ್ಲಿ ಕವೂರ್ ಮೂರನೆಯ ನೆಪೋಲಿಯನ್ನನೊಂದಿಗೆ ಪ್ಲಾಂಬಿಯರ್ಸ್‌ನಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿದನು. ಆಸ್ಟ್ರಿಯಾದ ವಿರುದ್ಧ ಕವೂರ್‌ಗೆ ಸಹಾಯ ಮಾಡುವುದಾಗಿ ಒಪ್ಪಿದ ನೆಪೋಲಿಯನ್ ಅದಕ್ಕೆ ಪ್ರತಿಯಾಗಿ ಸವಾಯ್ ಮತ್ತು ನೈಸ್ ಪ್ರದೇಶಗಳನ್ನು ನೀಡಬೇಕೆಂದು ಹೇಳಿದನು. ಕವೂರ್ ತನ್ನ ಸೈನ್ಯವನ್ನು ಬೆಳೆಸಿದನು. ಆಸ್ಟ್ರೀಯ, ಕವೂರ್ ಮತ್ತು ನೆಪೋಲಿಯನ್ನನ ಭೇಟಿ ಹಾಗೂ ಸಾರ್ಡಿನಿಯಾದ ಸೈನಿಕೀಕರಣದ ಬಗ್ಗೆ ಸಂಶಯ ಹೊಂದಿದ್ದು, ಸಾರ್ಡೀನಿಯಕ್ಕೆ ನಿಶ್ಶಸ್ತ್ರೀಕರಣ ಮಾಡುವಂತೆ ಆದೇಶಿಸಿತು. ಇದನ್ನು ಸಾರ್ಡೀನಿಯಾ ತಿರಸ್ಕರಿಸಿದಾಗ 1859ರಲ್ಲಿ ಯುದ್ಧವು ಆರಂಭವಾಯಿತು. ಯುದ್ಧ 2 ತಿಂಗಳ ಕಾಲ ನಡೆಯಿತು. ಮೆಜೆಂಟಾ ಮತ್ತು ಸಾಲ್ಫೆರೆನೊಗಳಲ್ಲಿ ಆಸ್ಟ್ರಿಯನ್ನರು ಸೋತರು. ಆದರೆ ಸಾರ್ಡೀನಿಯಾಗೆ ಯಾವುದೇ ಸುಳಿವು ನೀಡದೆ ನೆಪೋಲಿಯನ್ ಯುದ್ಧವನ್ನು ನಿಲ್ಲಿಸಿ ಆಸ್ಟ್ರಿಯಾದೊಂದಿಗೆ 'ವಿಲ್ಲಾ ಫ್ರಾಂಕಾ" ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಪ್ರಕಾರ ಲೊಂಬಾರ್ಡಿಯಿಂದ ಆಸ್ಟ್ರಿಯಾದ ಸೈನ್ಯವನ್ನು ಹಿಂತೆಗೆದುಕೊಳ್ಳಲಾಯಿತು ಮತ್ತು ಅದನ್ನು 2ನೆಯ ವಿಕ್ಟರ್ ಇಮ್ಯಾನ್ಯುಯಲ್‌ಗೆ ನೀಡಲಾಯಿತು. ಹೀಗೆ ಇಟಲಿಯ ಏಕೀಕರಣದ ಮೊದಲ ಹಂತ ಮುಗಿಯಿತು. ಯುದ್ಧವನ್ನು ಇದ್ದಕ್ಕಿದ್ದಂತೆ ಮುಕ್ತಾಯಗೊಳಿಸಿದ್ದು ಕವೂರನಿಗೆ ನಿರಾಸೆಯನ್ನುಂಟುಮಾಡಿತು. 'ವಿಲ್ಲಾ–ಫ್ರಾಂಕಾ' ಒಪ್ಪಂದವನ್ನು ಅಂಗೀಕರಿಸಬಾರದೆಂದು ಅವನು 2ನೆಯ ವಿಕ್ಟರ್ ಇಮ್ಯಾನ್ಯುಯಲ್‌ನನ್ನು ಒತ್ತಾಯಿಸಿದನು. ಆದರೆ ವಿಕ್ಟರ್ ಇಮ್ಯಾನ್ಯುಯಲ್ ಒಪ್ಪದಿದ್ದಾಗ ಅವನು ರಾಜೀನಾಮೆಯನ್ನು ನೀಡಿದನು.

ಆದರೆ ಕೆಲವೇ ಸಮಯದ ನಂತರ ಅವನನ್ನು ಪುನರಾಯ್ಕೆ ಮಾಡಲಾಯಿತು ಮತ್ತು 1860 ರಲ್ಲಿ ಪ್ರಧಾನಮಂತ್ರಿಯಾದನು. 1860ರಲ್ಲಿ ಮೊಡೆನಾ, ಪಾರ್ಮ, ಟಸ್ಕನಿ, ಉಂಬ್ರಿ, ರೊಮಾಗ್ನ ಮತ್ತು ಮಾರ್ಚಸ್ ಜನತೆ ಸಾರ್ಡೀನಿಯಾದೊಂದಿಗೆ ವಿಲೀನವಾಗಲು ಒಪ್ಪಿಗೆಯನ್ನು ವ್ಯಕ್ತಪಡಿಸಿದವು. ಇದು ಏಕೀಕರಣದ 2ನೇ ಹಂತಕ್ಕೆ ದಾರಿ ಮಾಡಿಕೊಟ್ಟಿತು. 'ಇಟಲಿಯ ಏಕೀಕರಣದ ಮೆದುಳು' ಎನಿಸಿಕೊಂಡಿರುವ ಕವೂರ್ 1861ರಲ್ಲಿ ನಿಧನನಾದನು. ಏಕೀಕರಣವು ಪೂರ್ಣಗೊಳ್ಳುವ ಸುಮಾರು ಒಂದು ದಶಕದ ಮೊದಲೇ ನಿಧನನಾದ ಕವೂರ್‌ನ ಕೊನೆಯ ಮಾತು "ಇಟಲಿಯನ್ನು ಮಾಡಲಾಗಿದೆ ಎಲ್ಲವೂ ಸುರಕ್ಷಿತವಾಗಿದೆ" ಎಂಬುದಾಗಿತ್ತು. ಅದು ನಿಜವಾದ ಆಶಾದಾಯಕ ಹೇಳಿಕೆಯಾಗಿತ್ತು.

ವಿಲ್ಲಾ ಫ್ರಾಂಕ ಒಪ್ಪಂದ 1859ರಲ್ಲಿ ಫ್ರಾನ್ಸ್ ಮತ್ತು ಆಸ್ಟ್ರಿಯಾದ ನಡುವೆ ಈ ಒಪ್ಪಂದವಾಯಿತು. ಆಸ್ಟ್ರೀಯಾ ಲೊಂಬಾರ್ಡಿಯನ್ನು ಫ್ರಾನ್ಸ್‌ಗೆ ವರ್ಗವಾಯಿಸಬೇಕಾಯಿತು. ಅದನ್ನು ಫ್ರಾನ್ಸ್ ಪಿಯಡ್‌ಮಂಟ್‌ಗೆ ವರ್ಗಾಯಿಸಿತು. ವೆನಿಷಿಯಾ ಆಸ್ಟ್ರೀಯಾದ ಅಧೀನದಲ್ಲೇ ಇರಬೇಕಿತ್ತು. ಮಧ್ಯ ಇಟಲಿಯ ಆಡಳಿತಗಾರರನ್ನು ಹಿಂದಕ್ಕೆ ತರಬೇಕಾಯಿತು.

ಗ್ಯಾರಿಬಾಲ್ಡಿ (1807–1882)

ಇಟಲಿಯ ಏಕೀಕರಣದ ಮೂರನೆಯ ಹಂತವನ್ನು ಗ್ಯಾರಿಬಾಲ್ಡಿ ಎಂಬ ಮಹಾನ್ ದೇಶಪ್ರೇಮಿಯು ಸಾಧಿಸಿದನು. 1807ರಲ್ಲಿ ನೈಸ್ ಎಂಬಲ್ಲಿ ಜನಿಸಿದನು. 24ನೆಯ ವಯಸ್ಸಿನಲ್ಲಿ 'ಯಂಗ್ ಇಟಲಿ'ಯ ಸದಸ್ಯನಾದ ಇವನು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸಿದನು. 1834ರಲ್ಲಿ ಸವಾಯ್‌ನಲ್ಲಿ ಮ್ಯಾಜಿನಿ ಸಂಘಟಿಸಿದ ದಂಗೆಯಲ್ಲಿ ಭಾಗವಹಿಸಿದನು. ಆದರೆ ದಂಗೆಯು ವಿಫಲವಾಯಿತು. ರಾಷ್ಟ್ರೀಯ ಚಟುವಟಿಕೆಗಳಿಂದಾಗಿ ಅವನಿಗೆ ಮರಣದಂಡನೆಯನ್ನು ವಿಧಿಸಲಾಯಿತು. ಆದರೆ ದಕ್ಷಿಣ ಅಮೆರಿಕಾಗೆ ಓಡಿಹೋಗಿ 14 ವರ್ಷಗಳ ಕಾಲ ತಲೆಮರೆಸಿಕೊಂಡಿದ್ದನು. ದೇಶಕ್ಕಾಗಿ ತ್ಯಾಗ ಮಾಡುವ ಅನೇಕ ಅನುಯಾಯಿಗಳನ್ನು ಪಡೆದ ಗ್ಯಾರಿಬಾಲ್ಡಿ ಅವರನ್ನು 'ಕೆಂಪು ಅಂಗಿ ದಳ' ಎಂಬ ಸೈನ್ಯವನ್ನಾಗಿ ಪರವರ್ತಿಸಿದನು. 1848ರಲ್ಲಿ ದಂಗೆಗಳಾದಾಗ, ಇಟಲಿಗೆ ಹಿಂದಿರುಗಿ ಇಟಲಿಯ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದನು. ಆಸ್ಟ್ರಿಯಾ ಮತ್ತು ಸಾರ್ಡೀನಿಯಾದ ನಡುವೆ ನಡೆದ ಯುದ್ಧದಲ್ಲಿ ಸಾರ್ಡೀನಿಯಾ ಸೈನ್ಯದ ನಾಯಕತ್ವವನ್ನು ವಹಿಸಿದ್ದನು.

1860ರಲ್ಲಿ, ಸಿಸಿಲಿಯ ಜನರು ಬೋರ್ಬೊನ್ನರ ವಿರುದ್ಧ ಅವನ ಸಹಾಯವನ್ನು ಕೇಳಿದರು. ತಕ್ಷಣವೇ ಅಲ್ಲಿಗೆ ತನ್ನ ಸೈನ್ಯ 'ಕೆಂಪಂಗಿ ದಳ'ದೊಂದಿಗೆ ಹೋಗಿ ಎರಡು ತಿಂಗಳುಗಳಲ್ಲಿಯೇ 2ನೆಯ ಫ್ರಾನ್ಸಿಸ್‌ನನ್ನು ಸೋಲಿಸಿ ಸಿಸಿಲಿಯನ್ನು ವಶಪಡಿಸಿಕೊಂಡನು. ಅಲ್ಲಿಂದ ನೇಪಲ್ಸ್‌ಗೆ ಹೋಗಿ ಅಲ್ಲಿಯೂ 2ನೆಯ ಫ್ರಾನ್ಸಿಸ್‌ನನ್ನು ಸೋಲಿಸಿದನು. ಅಲ್ಲಿಂದ ರೋಮ್‌ಗೆ ಹೋಗಲು ಬಯಸಿದನು. ಆದರೆ ಅವನ ಈ ಹೆಜ್ಜೆಯನ್ನು ಇಷ್ಟಪಡದ ಕವೂರ್, ಅವನನ್ನು ತಡೆಯುವಂತೆ 2ನೆಯ ವಿಕ್ಟರ್ ಇಮ್ಯಾನ್ಯುಯಲ್‌ನ ಮೇಲೆ ಒತ್ತಡ ತಂದನು. ಆದ್ದರಿಂದ 2ನೇಯ ವಿಕ್ಟರ್ ಇಮ್ಯಾನ್ಯುಯಲ್ ರೋಮ್‌ಗೆ ಸೈನ್ಯವನ್ನು ಕಳುಹಿಸಿದನು. ಇಟಲಿಯ ಏಕೀಕರಣವನ್ನೇ ತನ್ನ ಗುರಿಯಾಗಿಟ್ಟುಕೊಂಡಿದ್ದ ಗ್ಯಾರಿಬಾಲ್ಡಿ ನೇಪಲ್ಸ್ ಮತ್ತು ಸಿಸಿಲಿಗಳನ್ನು 2ನೇ ವಿಕ್ಟರ್ ಇಮ್ಯಾನುಯಲ್‌ನ ವಶಕ್ಕೆ ಒಪ್ಪಿಸಿದನು. ಗ್ಯಾರಿಬಾಲ್ಡಿಯನ್ನು 'ಇಟಲಿಯ ಏಕೀಕರಣದ ಖಡ್ಗ' ಎಂದು ಕರೆಯಲಾಗಿದೆ. ನಿಜವಾದ ದೇಶಭಕ್ತನಾಗಿದ್ದ ಗ್ಯಾರಿಬಾಲ್ಡಿಗೆ ನೀಡಿದ ಬಿರುದು ಹಾಗೂ ಪದವಿಗಳನ್ನು ನಿರಾಕರಿಸಿ ತನ್ನ ಸ್ವಗ್ರಾಮಕ್ಕೆ ಹಿಂತಿರುಗಿ ರೈತನಾಗಿ ಜೀವನ ನಡೆಸಿದನು.

2 ನೆಯ ವಿಕ್ಟರ್ ಇಮ್ಯಾನ್ಯುಯಲ್

ಸಾರ್ಡಿನಿಯಾದ ದೊರೆಯಾಗಿದ್ದ ವಿಕ್ಟರ್ ಇಮ್ಯಾನುಯಲ್ ಸ್ವತ: ದೇಶಭಕ್ತನಾಗಿದ್ದು, ಇಟಲಿಯ ಪ್ರಾಮಾಣಿಕ ದೊರೆಯಾಗಿದ್ದನು. ಅವನು ಶಾಂತಿ, ಮಾತುಕತೆಗಳ ಮೂಲಕ ಇಟಲಿಯ ಏಕೀಕರಣವನ್ನು ಸಾಧಿಸಿದನು. ಕೌಂಟ್ ಕವೂರ್‌ನನ್ನು ತನ್ನ ಪ್ರಧಾನಮಂತ್ರಿಯಾಗಿ ನೇಮಿಸಿದನು. 1861ರ ವೇಳೆಗೆ ಕವೂರ್ ಇಟಲಿಯ ಹೆಚ್ಚಿನ ಭಾಗಗಳನ್ನು ಒಂದುಗೂಡಿಸಿದ್ದನು.

1861ರ ಫೆಬ್ರವರಿ 18ರಂದು ಹೊಸ ಸಂಸತ್ತು, ಟ್ಯೂರಿನ್‌ನ ಸಭೆಯಲ್ಲಿ, 2ನೆಯ ವಿಕ್ಟರ್ ಇಮ್ಯಾನ್ಯುಯಲ್‌ನನ್ನು ರಾಜನನ್ನಾಗಿ ಘೋಷಿಸಿತು. ಆದರೆ, ವೆನೀಷಿಯಾ ಹಾಗೂ ರೋಮ್ ಇನ್ನೂ ಇಟಲಿಗೆ ಸೇರಿರಲಿಲ್ಲ. ವೆನೀಷಿಯಾ ಆಸ್ಟ್ರಿಯಾದ ಅಧೀನದಲ್ಲೂ, ರೋಮ್ ಪೋಪನ ಅಧೀನದಲ್ಲೂ ಇದ್ದವು.

1866ರಲ್ಲಿ ಆಸ್ಟ್ರಿಯಾ ಮತ್ತು ಪ್ರಷ್ಯಾಗಳ ನಡುವೆ ಯುದ್ಧವು ಆರಂಭವಾಯಿತು. ಇದರಲ್ಲಿ ವಿಕ್ಟರ್ ಇಮ್ಯಾನ್ಯುಯಲ್ ಪ್ರಷ್ಯಾದ ಪರ ವಹಿಸಿದನು. ಪ್ರಷ್ಯಾ ಆಸ್ಟ್ರಿಯಾವನ್ನು ಸೋಲಿಸಿದ್ದರಿಂದ ಆಸ್ಟ್ರಿಯಾ ವೆನೀಷಿಯಾವನ್ನು ಇಟಲಿಗೆ ನೀಡಲೇಬೇಕಾಯಿತು. 1870ರಲ್ಲಿ ಪ್ರಷ್ಯಾ ಹಾಗೂ ಫ್ರಾನ್ಸ್‌ಗಳ ನಡುವೆ ಯುದ್ಧವು ಆರಂಭವಾಯಿತು. ಪೋಪನ ರಕ್ಷಣೆಗಾಗಿ ರೋಮ್‌ನಲ್ಲಿ ಇಟ್ಟಿದ್ದ ತನ್ನ ಸೈನ್ಯವನ್ನು 3ನೆಯ ನೆಪೋಲಿಯನ್ ಹಿಂತೆಗೆದುಕೊಂಡನು. ತಕ್ಷಣವೇ ವಿಕ್ಟರ್ ಇಮ್ಯಾನುಯಲ್‌ನ ಸೈನ್ಯ ರೋಮ್‌ಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡಿತು. ಹೀಗೆ 1870ರಲ್ಲಿ ಇಟಲಿಯ ಏಕೀಕರಣ ಸಂಪೂರ್ಣಗೊಂಡಿತು. ರೋಮ್, ಏಕೀಕೃತ ಇಟಲಿಯ ರಾಜಧಾನಿಯಾಯಿತು.

ಹೀಗೆ ಮ್ಯಾಜಿನಿಯ ರಾಷ್ಟ್ರಪ್ರೇಮ, ಕವೂರ್‌ನ ಚತುರ ರಾಜನೀತಿ, ಗ್ಯಾರಿಬಾಲ್ಡಿಯ ಯುದ್ಧಗಳು ಮತ್ತು ವಿಕ್ಟರ್ ಇಮ್ಯಾನ್ಯುಯಲ್‌ನ ರಾಜಕೀಯ ಮುತ್ಸದ್ದಿತನ ಇಟಲಿಯ ಏಕೀಕರಣಕ್ಕೆ ಸಹಾಯ ಮಾಡಿದವು.

ಏಕೀಕರಣದ ನಂತರ ಇಟಲಿ

ಪ್ರಶ್ನೆಗಳು

ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೆ 1 ಅಂಕ)

1. ಕಾರ್ಬೊನರಿ ಎಂದರೇನು?
2. 'ಯಂಗ್ ಇಟಲಿ'ಯ ಸ್ಥಾಪಕ ಯಾರು?
3. 'ಲೇಖನಿ ಖಡ್ಗಕ್ಕಿಂತಾ ಹರಿತ' ಎಂದು ಯಾರು ಹೇಳಿದರು?
4. ರಿಸಾರ್ಜಿಮೆಂಟೊ ಪತ್ರಿಕೆಯನ್ನು ಯಾರು ಪ್ರಕಟಿಸಿದರು?
5. ಆಸ್ಟ್ರಿಯಾ ವಿರುದ್ಧದ ಯುದ್ಧದಲ್ಲಿ ಸಾರ್ಡೀನಿಯಾ ಮತ್ತು ಪಿಡ್‌ಮಂಟ್‌ಗಳಿಗೆ ಯಾರು ಸಹಾಯ ಮಾಡಿದರು?
6. ಸಾರ್ಡೀನಿಯಾ ಮತ್ತು ಆಸ್ಟ್ರಿಯಾ ಯುದ್ಧದ ನಂತರ ಯಾವ ಒಪ್ಪಂದ ಏರ್ಪಟ್ಟಿತ್ತು?
7. 'ಕೆಂಪಂಗಿದಳ'ವನ್ನು ಯಾರು ಸ್ಥಾಪಿಸಿದರು?
8. ಏಕೀಕೃತ ಇಟಲಿಯ ಮೊದಲ ದೊರೆ ಯಾರು?
9. ಏಕೀಕೃತ ಇಟಲಿಯ ರಾಜಧಾನಿಯನ್ನು ಹೆಸರಿಸಿ.

ಕೆಳಗಿನವುಗಳಿಗೆ 2 ಪದ ಅಥವಾ 2 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೆ 2 ಅಂಕಗಳು)

1. ಇಟಲಿಯ ಏಕೀಕರಣದ ಶಿಲ್ಪಿಗಳನ್ನು ಹೆಸರಿಸಿ.
2. 'ಯಂಗ್ ಇಟಲಿ'ಯ ಉದ್ದೇಶಗಳೇನು?
3. 'ಇಟಲಿಯ ಏಕೀಕರಣದ ಖಡ್ಗ' ಎಂದು ಯಾರನ್ನು ಕರೆಯಲಾಗಿದೆ? ಅವನು ಸ್ಥಾಪಿಸಿದ ಸೈನ್ಯವನ್ನು ಹೆಸರಿಸಿ.
4. ಇಟಲಿಯ ಯಾವುದಾದರೂ ನಾಲ್ಕು ರಾಜ್ಯಗಳನ್ನು ಹೆಸರಿಸಿ.
5. 2ನೇ ವಿಕ್ಟರ್ ಇಮ್ಯೂನುಯಲ್‌ನ ಪ್ರಧಾನಮಂತ್ರಿ ಯಾರು? ಅವನ ನೀತಿ ಯಾವುದು?

ಕೆಳಗಿನವುಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೆ 5 ಅಂಕಗಳು)

1. ಇಟಲಿಯ ಏಕೀಕರಣದಲ್ಲಿ ಜೋಸೆಫ್ ಮ್ಯಾಜಿನಿಯ ಪಾತ್ರವನ್ನು ಚಿತ್ರಿಸಿ.
2. ಇಟಲಿಯ ಏಕೀಕರಣದಲ್ಲಿ ಕೌಂಟ್ ಕವೂರನ ಪಾತ್ರವನ್ನು ವಿವರಿಸಿ.
3. ಇಟಲಿಯ ಏಕೀಕರಣದಲ್ಲಿ ಗ್ಯಾರಿಬಾಲ್ಡಿಯು ವಹಿಸಿದ ಪಾತ್ರದ ಬಗ್ಗೆ ಬರೆಯಿರಿ

ಕೆಳಗಿನವುಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೆ 10 ಅಂಕಗಳು)

1. ಇಟಲಿಯ ಏಕೀಕರಣದ ಹಂತಗಳನ್ನು ವಿವರಿಸಿ.
2. ಇಟಲಿಯ ಏಕೀಕರಣದಲ್ಲಿ ಮ್ಯಾಜಿನಿ, ಕವೂರ್ ಮತ್ತು ಗ್ಯಾರಿಬಾಲ್ಡಿಯ ಪಾತ್ರವನ್ನು ವಿವರಿಸಿ.

ಅಧ್ಯಾಯ 9.3
ಜರ್ಮನಿಯ ಏಕೀಕರಣ

ಪ್ರಸ್ತಾವನೆ

ಜರ್ಮನಿಯು ಏಕೀಕರಣದ ಪೂರ್ವದಲ್ಲಿ 300ಕ್ಕೂ ಹೆಚ್ಚು ಸಣ್ಣ ಸಣ್ಣ ರಾಜ್ಯಗಳಾಗಿ ವಿಭಜಿಸಲ್ಪಟ್ಟಿತ್ತು. ಈ ರಾಜ್ಯಗಳು ಅಸಮರ್ಥ ನಿರಂಕುಶ ದೊರೆಗಳಿಂದ ಆಳಲ್ಪಡುತ್ತಿದ್ದವು. ಅವುಗಳ ಮೇಲೆ ಇಂಗ್ಲೆಂಡ್, ಡೆನ್ಮಾರ್ಕ್ ಹಾಗು ಸ್ವೀಡನ್‌ಗಳ ಪ್ರಾಬಲ್ಯವಿತ್ತು. ಜರ್ಮನಿಯ ಜನತೆ ಒಂದೇ ಭಾಷೆ (ಜರ್ಮನ್) ಹಾಗು ಸಂಸ್ಕೃತಿಯನ್ನು ಹೊಂದಿದ್ದರಿಂದ ಜರ್ಮನಿಯ ಏಕೀಕರಣವನ್ನು ಬಯಸುತ್ತಿದ್ದರು. ನೆಪೋಲಿಯನ್ ಬೊನಾಪಾರ್ಟೆ ತನ್ನ ದಿಗ್ವಿಜಯಗಳಿಂದ ಜರ್ಮನಿಯನ್ನು ಆಕ್ರಮಿಸಿ ಅವುಗಳನ್ನು 39 ರಾಜ್ಯಗಳನ್ನಾಗಿ ಮಾಡಿ ಉತ್ತಮ ಆಳ್ವಿಕೆಯನ್ನು ನೀಡಿದನು. ಹಿಂದಿನ ಸಮಯಕ್ಕೆ ಹೋಲಿಸಿದಾಗ ದೊಡ್ಡ ರಾಜ್ಯಗಳಾಗಿ ಪರಿವರ್ತಿತವಾಗಿದ್ದ ರಾಜ್ಯಗಳು ಉತ್ತಮ ಆಳ್ವಿಕೆಯಿಂದ ಮೊದಲಿಗಿಂತಲೂ ಪ್ರಬಲವಾದವು. 1815ರಲ್ಲಿ ನೆಪೋಲಿಯನ್ನನ ದಿಗ್ವಿಜಯಗಳಿಂದ ಧ್ವಂಸಗೊಂಡಿದ್ದ ಯುರೋಪಿನ ನಕ್ಷೆಯನ್ನು ಅವನ ಪತನದ ನಂತರ ಪುನರ್‌ರಚಿಸಲು ವಿಯೆನ್ನಾ ಕಾಂಗ್ರೆಸ್‌ನ್ನು ರಚಿಸಲಾಯಿತು.

ಜರ್ಮನ್ ರಾಜ್ಯಗಳನ್ನು ಒಗ್ಗೂಡಿಸಿ ಜನಾಭಿಪ್ರಾಯದಂತೆ ಏಕೀಕರಣ ಮಾಡಬಹುದೆಂದು ಜರ್ಮನ್ ಜನತೆ ನಿರೀಕ್ಷಿಸಿದರು. ಈ ನಿರೀಕ್ಷೆ ಹುಸಿಯಾಗಿ ಅವರಿಗೆ ನಿರಾಶೆಯಾಯಿತು. ವಿಯೆನ್ನಾ ಕಾಂಗ್ರೆಸ್ ಹಿಂದೆ ಇದ್ದ 39 ರಾಜ್ಯಗಳನ್ನು ಉಳಿಸಿಕೊಂಡು **'ರೈನ್ ಒಕ್ಕೂಟ'** ಎಂಬ ಹೆಸರಿನೊಂದಿಗೆ ಅವುಗಳ ಮೇಲೆ ಆಸ್ಟ್ರಿಯಾದ ಪ್ರಾಬಲ್ಯವನ್ನು ಸ್ಥಾಪಿಸಿತು. ಜರ್ಮನ್ ರಾಜ್ಯಗಳ ಮೇಲೆ ತನ್ನ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಆಸ್ಟ್ರಿಯಾ ಪ್ರತಿಗಾಮಿ ನೀತಿಯನ್ನು ಅನುಸರಿಸಿತು. ಪತ್ರಿಕೆಗಳು ಮತ್ತು ವೈಯಕ್ತಿಕ ಪತ್ರಗಳ ಪೂರ್ವ ಪರಿಶೀಲನೆ, ಮುಕ್ತ ಭಾಷಣಕ್ಕೆ ಕಡಿವಾಣ, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಮೇಲೆ ನಿಗ, ರಾಷ್ಟ್ರೀಯ ಚರ್ಚೆಗಳ ನಿಷೇಧ, ಮುಂತಾದ ಕ್ರಮಗಳನ್ನು ಕೈಗೊಂಡ ಆಸ್ಟ್ರಿಯಾ ಜರ್ಮನ್ ಏಕೀಕರಣದ ಪ್ರಯತ್ನಗಳನ್ನು ಹತ್ತಿಕ್ಕಿತು.

ಝಾಲ್ವೇರಿನ್

ರೈನ್ ಒಕ್ಕೂಟದ 39 ಜರ್ಮನ್ ರಾಜ್ಯಗಳಲ್ಲಿ ಪ್ರಷ್ಯ ಅತ್ಯಂತ ಬಲಿಷ್ಠ ರಾಜ್ಯವಾಗಿತ್ತು. ಅದು ಜರ್ಮನ್ ರಾಜ್ಯಗಳ ಆರ್ಥಿಕ ಏಕೀಕರಣಕ್ಕಾಗಿ ಪ್ರಯತ್ನಿಸಿತು. ಈ ಪ್ರಯತ್ನಗಳಿಂದಾಗಿ 1834ರಲ್ಲಿ 'ಝಾಲ್ವೇರಿನ್' ಎಂಬ ಸುಂಕದ ಒಕ್ಕೂಟ ಅಸ್ತಿತ್ವಕ್ಕೆ ಬಂದಿತು. ಇದು 'ಮುಕ್ತ ವ್ಯಾಪರ'ಕ್ಕೆ ಅನುಮತಿಸಿತಲ್ಲದೆ ಜರ್ಮನ್ ರಾಜ್ಯಗಳ ರಕ್ಷಣಾತ್ಮಕ ಆರ್ಥಿಕ ಅಡೆತಡೆಗಳನ್ನು ನಿವಾರಿಸಿ ಕಚ್ಚಾ ವಸ್ತುಗಳ ಮತ್ತು ತಯಾರಿಸಿದ ವಸ್ತುಗಳ ಸಾಗಾಟವನ್ನು ಸುಧಾರಿಸಿತು. ಇದರಿಂದಾಗಿ ವಸ್ತುಗಳ (ಖರೀದಿಸಲು ಅಥವಾ ಮಾರಲು) ಬೆಲೆಗಳು ಕಡಿಮೆಯಾದವು. ಆಸ್ಟ್ರಿಯಾದ ಪ್ರತಿರೋಧವಿದ್ದರೂ ಎಲ್ಲಾ ಜರ್ಮನ್ ರಾಜ್ಯಗಳು ಕೆಲವೇ ವರ್ಷಗಳಲ್ಲಿ ಸುಂಕದ ಒಕ್ಕೂಟದ ಸದಸ್ಯರಾದವು. ಈ ಆರ್ಥಿಕ ಏಕತೆಯು ಮುಂದಿನ ರಾಜಕೀಯ ಏಕತೆಯ ಕಡೆಗೆ ಇಟ್ಟ ಮೊದಲ ಹೆಜ್ಜೆಯಾಗಿತ್ತು.

ಫ್ರಾಂಕ್‌ಫರ್ಟ್ ಸಂಸತ್ತು (1848)

1848ರಲ್ಲಿ ಜರ್ಮನ್ ರಾಜ್ಯಗಳನ್ನೊಳಗೊಂಡಂತೆ, ಯುರೋಪ್‌ನ ಅನೇಕ ರಾಷ್ಟ್ರಗಳು ಕ್ರಾಂತಿಗಳನ್ನು ಎದುರಿಸಿದವು. ಜರ್ಮನ್ ರಾಜ್ಯಗಳಲ್ಲಿ ನಡೆದ ಕ್ರಾಂತಿಗಳು ಜರ್ಮನಿಯ ಏಕೀಕರಣ ಮತ್ತು ಎಲ್ಲಾ ಜರ್ಮನ್

ರಾಜ್ಯಗಳಿಗೆ ಒಂದೇ ಸಂವಿಧಾನವನ್ನು ಪಡೆಯುವ ಉದ್ದೇಶಗಳನ್ನು ಹೊಂದಿತ್ತು. ಇಂತಹ ಸಂವಿಧಾನವು ಸಾರ್ವತ್ರಿಕವಾಗಿ ಪುರುಷರಿಗೆ ಮತದಾನದ ಅಧಿಕಾರ, ಏಕೀಕೃತ ಜರ್ಮನಿಗೆ ಖಾಯಂ ಸಂಸತ್ತು ಹಾಗು ಇದಕ್ಕೆ ಪ್ರಷ್ಯಾದ ಅರಸನ ನಾಯಕತ್ವವನ್ನು ಹೊಂದಿರಬೇಕೆಂದು ಕ್ರಾಂತಿಕಾರಿಗಳು ಬಯಸಿದರು.

27 ಮಾರ್ಚ್ 1849 ರಂದು ಎಲ್ಲಾ ಜರ್ಮನ್ ರಾಜ್ಯಗಳ ಪ್ರತಿನಿಧಿಗಳನ್ನೊಳಗೊಂಡಿದ್ದ ಫ್ರಾಂಕ್‌ಫರ್ಟ್ ಸಂಸತ್ತು ಸಭೆ ಸೇರಿತು. ಈ ಸಂಸತ್ತು ದೀರ್ಘ ಸಮಾಲೋಚನೆಗಳನ್ನು ನಡೆಸಿ ಪ್ರಷ್ಯಾದ ಅರಸ ನಾಲ್ಕನೆಯ ಫ್ರೆಡ್ರಿಕ್ ವಿಲಿಯಂನಿಗೆ ಏಕೀಕೃತ ಜರ್ಮನಿಯ ನಾಯಕತ್ವವನ್ನು **'ಕೈಸರ್'** ಎಂಬ ಬಿರುದಿನೊಂದಿಗೆ ನೀಡುವ ನಿರ್ಣಯ ಕೈಗೊಂಡಿತು. ಜರ್ಮನ್ ರಾಜ್ಯಗಳ ಅರಸರ ಬದಲಾಗಿ ಅವುಗಳ ಪ್ರತಿನಿಧಿಗಳು ನೀಡಿದ ಈ ನಾಯಕತ್ವವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂಬ ಹೇಳಿಕೆಯೊಂದಿಗೆ ನಾಲ್ಕನೆಯ ಫ್ರೆಡ್ರಿಕ್ ವಿಲಿಯಂ ಈ ಪ್ರಸ್ತಾಪವನ್ನು ತಿರಸ್ಕರಿಸಿದನು. ಅಲ್ಲದೇ ಇಂತಹ ಪ್ರಸ್ತಾಪವನ್ನು ಒಪ್ಪುವುದರಿಂದ ಆಸ್ಟ್ರಿಯಾ ಮತ್ತು ರಷ್ಯಾದ ಸೈನ್ಯಗಳ ಹಸ್ತಕ್ಷೇಪದ ಭಯವು ಸಹ ಅವನಿಗಿತ್ತು. ಹೀಗೆ ಏಕೀಕರಣದ ಪ್ರಯತ್ನ ವಿಫಲವಾಯಿತು.

ಬಿಸ್ಮಾರ್ಕ್ (1815–1898)

ಒಟ್ಟೋ ವಾನ್ ಬಿಸ್ಮಾರ್ಕ್

ಎಡ್ವರ್ಡ್ ಲೆಪಾಲ್ಡ್ ಓಟ್ಟೋ ವಾನ್ ಬಿಸ್ಮಾರ್ಕ್ 1815ರಲ್ಲಿ ಪ್ರಷ್ಯಾದ ಒಂದು ಕುಲೀನ ಕುಟುಂಬದಲ್ಲಿ ಜನಿಸಿದನು. ಈತ ಉತ್ತಮ ವಿದ್ಯಾಭ್ಯಾಸವನ್ನು ಪಡೆದನಲ್ಲದೇ ಇಂಗ್ಲೆಂಡ್ ಹಾಗು ಫ್ರಾನ್ಸ್‌ಗಳನ್ನೊಳಗೊಂಡಂತೆ ಇಡೀ ಯುರೋಪಿನ ಪರ್ಯಟನೆಯ ಅನುಭವ ಹೊಂದಿದ್ದನು. ರಷ್ಯಾ ಹಾಗು ಫ್ರಾನ್ಸ್‌ಗಳಲ್ಲಿ ಪ್ರಷ್ಯಾದ ರಾಯಭಾರಿಯಾಗಿ ಕಾರ್ಯ ನಿರ್ವಹಿಸಿದನು. ಹೀಗೆ ಯುರೋಪಿನ ರಾಜಕೀಯದ ಬಗ್ಗೆ ಅಪಾರ ಜ್ಞಾನ ಮತ್ತು ಅನುಭವ ಪಡೆದುಕೊಂಡನು. 1862ರಲ್ಲಿ ಪ್ರಷ್ಯಾದ ಅರಸ ಮೊದಲನೆಯ ವಿಲಿಯಂ ಬಿಸ್ಮಾರ್ಕ್‌ನನ್ನು ಪ್ರಷ್ಯಾದ ಛಾನ್ಸ್‌ಲರ್‌ನನ್ನಾಗಿ ನೇಮಿಸಿದನು.

(ಎಡದಿಂದ ಬಲಕ್ಕೆ) ಬಿಸ್ಮಾರ್ಕ್, ರೂನ್ ಹಾಗು ಮಾಲ್ಟ್ಕೆ

ಪ್ರಷ್ಯಾದ ರಾಜಪ್ರಭುತ್ವದಡಿಯಲ್ಲಿ ಜರ್ಮನಿಯ ಏಕೀಕರಣವನ್ನು ಕೈಗೊಳ್ಳಬೇಕೆಂದು ಬಿಸ್ಮಾರ್ಕ್ ನಿರ್ಧರಿಸಿದ್ದನು. ಪ್ರಷ್ಯಾ ಮಾತ್ರವೇ ಜರ್ಮನ್ ರಾಜ್ಯಗಳನ್ನು ಮುನ್ನಡೆಸುವ ಕ್ಷಮತೆ ಹೊಂದಿದೆ ಮತ್ತು ಏಕೀಕರಣವನ್ನು ಸಾಧಿಸಲು ಆಸ್ಟ್ರಿಯಾವನ್ನು ಯುದ್ಧದಲ್ಲಿ ಸೋಲಿಸುವುದು ಅವಶ್ಯವೆಂದು ತಿಳಿದಿದ್ದನು. ಆದ್ದರಿಂದ ಬಿಸ್ಮಾರ್ಕ್‌ನು ಜನರಲ್ ರೂನ್

ಮತ್ತು ಜನರಲ್ ಮಾಲ್ಟ್ಕರ ಸಹಾಯದೊಂದಿಗೆ ಪ್ರಷ್ಯಾದ ಸೈನ್ಯವನ್ನು ಪುನರ್‌ಸಂಘಟಿಸಿದನು. ಬಹುಬೇಗನೆ ಪ್ರಷ್ಯಾದ ಸೈನ್ಯವು ಯುರೋಪಿನ ಅತ್ಯುತ್ತಮ ಸೈನ್ಯಗಳಲ್ಲಿ ಒಂದು ಎಂದು ಗುರುತಿಸಲ್ಪಟ್ಟಿತು. "ಸಮಯದ ಪ್ರಮುಖ ಸಮಸ್ಯೆಗಳನ್ನು, ಭಾಷಣಗಳು ಹಾಗು ಬಹುಮತದಿಂದ ಪರಿಹರಿಸಲಾಗದು..... ಇದು ಸಾಧ್ಯವಿರುವುದು ರಕ್ತ ಮತ್ತು ಕಬ್ಬಿಣದಿಂದ" ಎಂಬ ಬಿಸ್ಮಾರ್ಕ್‌ನ ಹೇಳಿಕೆಯು **'ರಕ್ತ ಮತ್ತು ಕಬ್ಬಿಣ ನೀತಿ'** (Blood and Iron Policy) ಎಂದು ಪ್ರಸಿದ್ಧವಾಗಿದೆ.

ಡೆನ್ಮಾರ್ಕ್‌ನೊಂದಿಗೆ ಯುದ್ಧ (1864)

ಡೆನ್ಮಾರ್ಕ್‌ನ ಅರಸ ಷಲ್ಸ್‌ವಿಗ್ ಮತ್ತು ಹಾಲ್‌ಸ್ಟೀನ್ ಪ್ರಾಂತ್ಯಗಳನ್ನು, ಅವುಗಳ ಡ್ಯೂಕನಾಗಿ ಆಳುವ ಹಕ್ಕನ್ನು ಹೊಂದಿದ್ದನು. ಷಲ್ಸ್‌ವಿಗ್ ಮತ್ತು ಹಾಲ್‌ಸ್ಟೀನ್ ಪ್ರಾಂತ್ಯಗಳಲ್ಲಿ ಜರ್ಮನರು ಬಹು ಸಂಖ್ಯಾತರಾಗಿದ್ದರು. ಡೆನ್ಮಾರ್ಕಿನ ಹೊಸ ಅರಸ ಒಂಬತ್ತನೆಯ ಕ್ರಿಶ್ಚಿಯನ್ ಈ ಪ್ರಾಂತ್ಯಗಳನ್ನು ಡೆನ್ಮಾರ್ಕಿನೊಂದಿಗೆ ವಿಲೀನಗೊಳಿಸುವುದಾಗಿ ಘೋಷಿಸಿದನು. ಇದರಿಂದ ಈ ಪ್ರಾಂತ್ಯಗಳ ಮತ್ತು ಇತರೆ ಜರ್ಮನ್ ರಾಜ್ಯಗಳ ಜನರು ಅಸಮಾಧಾನಗೊಂಡರು. ಬಿಸ್ಮಾರ್ಕ್ ಈ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ಆಸ್ಟ್ರಿಯಾದೊಂದಿಗೆ ಮೈತ್ರಿ ಮಾಡಿಕೊಂಡನು. ಪ್ರಷ್ಯಾ ಮತ್ತು ಆಸ್ಟ್ರಿಯಾಗಳ ಸಂಯುಕ್ತ ಸೈನ್ಯಗಳು 1864ರಲ್ಲಿ ಡೆನ್ಮಾರ್ಕ್ ಮೇಲೆ ದಾಳಿ ಮಾಡಿದವು. ಕೆಲವು ಜರ್ಮನ್ ರಾಜ್ಯಗಳ ಸಹಾಯದ ನಿರೀಕ್ಷೆಯಲ್ಲಿದ್ದ ಡೆನ್ಮಾರ್ಕ್, ಅದು ದೊರೆಯದೆ ಯುದ್ಧದಲ್ಲಿ ಸೋತುಹೋಯಿತು. ಅಕ್ಟೋಬರ್ 1864ರಲ್ಲಿ ವಿಯೆನ್ನಾ ಒಪ್ಪಂದದೊಂದಿಗೆ ಈ ಯುದ್ಧ ಕೊನೆಯಾಯಿತು. ಗ್ಯಾಸ್ಟಿನ್ ಒಪ್ಪಂದದಂತೆ ಡೆನ್ಮಾರ್ಕ್ ಬಿಟ್ಟುಕೊಟ್ಟ ಪ್ರಾಂತ್ಯಗಳಲ್ಲಿ ಪ್ರಷ್ಯಾ ಷಲ್ಸ್‌ವಿಗ್‌ನ ಮತ್ತು ಆಸ್ಟ್ರಿಯಾ ಹಾಲ್‌ಸ್ಟೀನ್ ಆಡಳಿತದ ಜವಾಬ್ದಾರಿ ವಹಿಸಿದವು.

ಆಸ್ಟ್ರೋ–ಪ್ರಷ್ಯನ್ ಯುದ್ಧ (1866)

ಆಸ್ಟ್ರಿಯಾದೊಂದಿಗೆ ಯುದ್ಧ ನಡೆದಲ್ಲಿ ಫ್ರಾನ್ಸ್‌ನ ತಟಸ್ಥತೆಗಾಗಿ ಬಿಸ್ಮಾರ್ಕ್‌ನು ಫ್ರಾನ್ಸ್‌ನ ಸಾಮ್ರಾಟ ಮೂರನೆಯ ನೆಪೋಲಿಯನ್ನನಿಗೆ ಪರಿಹಾರದ ಭರವಸೆಯನ್ನು ನೀಡಿದನು. ಆಸ್ಟ್ರಿಯಾ ದಾಳಿ ಮಾಡಿದಲ್ಲಿ ಪ್ರಷ್ಯಾ ಮತ್ತು ಇಟಲಿಗಳು ಪರಸ್ಪರ ಸಹಾಯ ಮಾಡಲು ಗುಪ್ತ ಒಪ್ಪಂದ ಮಾಡಿಕೊಂಡವು. ಇದಾದ ನಂತರ ಜರ್ಮನ್ ರಾಜ್ಯಗಳಿಗೆ ಪ್ರಷ್ಯಾವು ಒಂದು ರಾಷ್ಟ್ರೀಯ ಸಂವಿಧಾನ ಮತ್ತು ಸಂಸತ್ತನ್ನು ರಚಿಸುವ ಯೋಜನೆಯನ್ನು ಪ್ರಸ್ತಾಪಿಸಿತು. ಈ ಸಂಸತ್ತಿಗೆ ಪ್ರತಿನಿಧಿಗಳನ್ನು ಸಾರ್ವತ್ರಿಕ ಚುನಾವಣೆಗಳ ಮೂಲಕ ಆಯ್ಕೆ ಮಾಡಬೇಕಾಗಿತ್ತು. ಬಹುತೇಕ ಜರ್ಮನ್ ರಾಜ್ಯಗಳು ಆರಂಭದಲ್ಲಿ ಈ ಪ್ರಸ್ತಾವನೆಯನ್ನು ನಿರ್ಲಕ್ಷಿಸಿದವು. ಪ್ರಷ್ಯಾ ಮತ್ತು ಇಟಲಿಗಳು ಆಸ್ಟ್ರಿಯಾದ ಗಡಿಗಳಲ್ಲಿ ಸೇನಾ ಚಲನವಲನಗಳನ್ನು ಆರಂಭಿಸಿದವು. ಇದಕ್ಕೆ ಪ್ರತಿಯಾಗಿ ಆಸ್ಟ್ರಿಯಾ ಸಹ ಪೂರ್ಣ ಪ್ರಮಾಣದ ಸೈನ್ಯವನ್ನು ಸನ್ನದ್ಧಗೊಳಿಸಿತು. ಗಡಿಗಳಲ್ಲಿ ಪ್ರಚೋದನಾತ್ಮಕ ಘಟನೆಗಳನ್ನು ಏರ್ಪಡಿಸಿದ ಬಿಸ್ಮಾರ್ಕ್‌ನು ಆಸ್ಟ್ರಿಯಾ, ಪ್ರಷ್ಯಾದ ಮೇಲೆ ಯುದ್ಧ ಘೋಷಿಸುವಂತೆ ಮಾಡಿದ್ದಲ್ಲದೇ ಆಸ್ಟ್ರಿಯಾ ಆಕ್ರಮಣಕಾರಿಯಾಗಿ ಕಾಣುವಂತೆ ಮಾಡಿದನು. ಇದರಿಂದಾಗಿ, ಇಲ್ಲಿಯವರೆಗೆ ನಿರ್ಲಕ್ಷ್ಯ ತಾಳಿದ್ದ ಜರ್ಮನ್ ರಾಜ್ಯಗಳು, ರಾಷ್ಟ್ರೀಯ ಭಾವನೆಗಳಿಂದಾಗಿ ಪ್ರಷ್ಯಾದ ಪರ ವಹಿಸಿದವು. ಪೂರ್ವಸಿದ್ಧತೆ ಹೊಂದಿದ್ದ ಪ್ರಷ್ಯಾದ ಸೈನ್ಯವು ಇಟಲಿ ಹಾಗೂ ಬಹುತೇಕ ಜರ್ಮನ್ ರಾಜ್ಯಗಳ ಬೆಂಬಲದೊಂದಿಗೆ ಕದನಗಳಲ್ಲಿ ತ್ವರಿತ ಜಯಗಳನ್ನು ದಾಖಲಿಸಿತು. **ಸಡೋವಾ** ಸಮೀಪ ನಡೆದ ನಿರ್ಣಾಯಕ **ಕಾನಿಗ್ರಾಡ್ಸ್ ಕದನ**ದಲ್ಲಿ ಆಸ್ಟ್ರಿಯಾವನ್ನು ಸಂಪೂರ್ಣವಾಗಿ ಸೋಲಿಸಿತು. ಈ ಯುದ್ಧವನ್ನು **'ಸಪ್ತವಾರಗಳ ಯುದ್ಧ'** ಎಂದು ಕೂಡ ಕರೆಯಲಾಗುತ್ತದೆ.

ಈ ಆಸ್ಟ್ರೋ–ಪ್ರಷ್ಯಾ ಯುದ್ಧವು 1866ರಲ್ಲಿ ಜರುಗಿದ ಪ್ರಾಗ್ ಒಪ್ಪಂದದೊಂದಿಗೆ ಕೊನೆಗೊಂಡಿತು. ಈ ಒಪ್ಪಂದದ ಪ್ರಕಾರ ಷೆಲ್ಸ್‌ವಿಗ್ ಹಾಗು ಹಾಲ್‌ಸ್ಟಿನ್‌ಗಳನ್ನು ಪ್ರಷ್ಯಾ ವಿಲೀನಗೊಳಿಸಿಕೊಂಡಿತು. ಇಟಲಿಗೆ ವೆನಿಸ್‌ನ್ನು ಬಿಟ್ಟುಕೊಡಲಾಯಿತು. ಜರ್ಮನ್ ರಾಜ್ಯಗಳ ಮೇಲಿನ ಮೇಲ್ವಿಚಾರಣಾ ಹಕ್ಕನ್ನು ಆಸ್ಟ್ರಿಯಾ ಬಿಟ್ಟುಕೊಟ್ಟಿತು. ಪ್ರಷ್ಯಾದ ದೊರೆಯ ನೇತೃತ್ವದಲ್ಲಿ **ಉತ್ತರ ಜರ್ಮನ್ ಒಕ್ಕೂಟ**ದ ರಚನೆಯಾಯಿತು. ಇದರಿಂದಾಗಿ ಜರ್ಮನಿಯ

ಏಕೀಕರಣವು ಭಾಗಶಃ ಪೂರ್ಣಗೊಂಡಿತು. ದಕ್ಷಿಣದ ಕೆಲವು ಜರ್ಮನ್ ರಾಜ್ಯಗಳು ಏಕೀಕರಣದಿಂದ ಹೊರಗುಳಿದವು.

ಫ್ರ್ಯಾಂಕೋ–ಪ್ರಷ್ಯನ್ ಯುದ್ಧ (1870–71)

ಫ್ರಾನ್ಸ್‌ನ ತಟಸ್ಥತೆಗಾಗಿ, ನೀಡಿದ್ದ ಪರಿಹಾರದ ಭರವಸೆಯನ್ನು ಬಿಸ್ಮಾರ್ಕ್‌ನು ಪೂರೈಸಲಿಲ್ಲ. ಏಕೀಕರಣವನ್ನು ಪೂರ್ಣಗೊಳಿಸಲು ಫ್ರಾನ್ಸ್‌ನೊಂದಿಗೆ ಬಿಸ್ಮಾರ್ಕ್‌ನು ಯುದ್ಧ ಮಾಡಲು ಇಚ್ಛಿಸಿದ್ದ. ಫ್ರಾನ್ಸ್‌ನೊಂದಿಗೆ ಯುದ್ಧವಾದಲ್ಲಿ ಉಳಿದ ಜರ್ಮನ್ ರಾಜ್ಯಗಳು ಉತ್ತರ ಜರ್ಮನ್ ಒಕ್ಕೂಟಕ್ಕೆ ಸೇರುತ್ತವೆಂದು ಅರಿತುಕೊಂಡಿದ್ದ. ಸಡೋವಾ ಕದನದಲ್ಲಿ ನಿಜವಾಗಿ ಸೋತದ್ದು ಫ್ರಾನ್ಸ್ ಎಂದು ಭಾವಿಸಿದ್ದ ಫ್ರೆಂಚರು ಪ್ರಷ್ಯಾದ ಮೇಲೆ ಕೋಪಗೊಂಡಿದ್ದರು. ಆಸ್ಟ್ರಿಯಾದ ಸೋಲಿನೊಂದಿಗೆ ಯುರೋಪ್‌ನಲ್ಲಿದ್ದ 'ಶಕ್ತಿ ಸಮತೋಲನ' (Balance of Power) ಧ್ವಂಸಗೊಂಡಿತ್ತು. ಆದ್ದರಿಂದ ಫ್ರಾನ್ಸ್ ಕೂಡ ಪ್ರಷ್ಯಾದೊಂದಿಗೆ ಯುದ್ಧವನ್ನು ಬಯಸಿತ್ತು.

ಸ್ಪೇನ್ ಸಿಂಹಾಸನದ ವಿವಾದವು ಯುದ್ಧಕ್ಕೆ ಒಂದು ನೆಪವಾಯಿತು. ಪ್ರಷ್ಯಾದ ದೊರೆಯ ಸಂಬಂಧಿಯಾದ ರಾಜಕುಮಾರ ಲಿಯೋಪಾಲ್ಡನ ವಾರಸುದಾರಿಕೆಯ ಹಕ್ಕನ್ನು ಬಿಸ್ಮಾರ್ಕ್ ಬೆಂಬಲಿಸಿದನು. ಪ್ರಷ್ಯಾದ ಶಕ್ತಿಯ ಬೆಳವಣಿಗೆಯು ಫ್ರಾನ್ಸ್‌ಗೆ ಕಳವಳವನ್ನುಂಟುಮಾಡಿತು. ಫ್ರೆಂಚರು ವಾರಸುದಾರಿಕೆಯ ಈ ಹಕ್ಕನ್ನು ವಿರೋಧಿಸಿದ್ದಲ್ಲದೇ ಲಿಯೋಪಾಲ್ಡನು ಈ ಪ್ರಾಸ್ತಾಪವನ್ನು ತಿರಸ್ಕರಿಸುವಂತೆ ಮಾಡಿದನು. ಸ್ಪೇನ್‌ನ ಗದ್ದುಗೆಗೆ ಯಾವುದೇ ವಾರಸುದಾರಿಕೆಯ ಹಕ್ಕನ್ನು ಪ್ರಷ್ಯಾದ ಅರಸನು ಬೆಂಬಲಿಸುವುದಿಲ್ಲವೆಂಬ ಭರವಸೆಯನ್ನು ಫ್ರೆಂಚರು ಬಯಸಿದರು. ಈ ವಿಷಯದ ಕುರಿತು ಪ್ರಷ್ಯಾ ಬೆಂಬಲಿತ ವಾರಸುದಾರನು ಪ್ರಾಸ್ತಾಪವನ್ನು ತಿರಸ್ಕರಿಸಿರುವ ಕಾರಣ ನೀಡಿ ಫ್ರೆಂಚ್ ರಾಯಭಾರಿಯನ್ನು ಭೇಟಿಯಾಗಲು ನಿರಾಕರಿಸಿದ. ಬಿಸ್ಮಾರ್ಕ್‌ನು ಇದನ್ನು ಒಂದು ರಾಜತಾಂತ್ರಿಕ ವಿಷಯವನ್ನಾಗಿ ಪ್ರಸ್ತುತಪಡಿಸಿ, ಪ್ರಷ್ಯಾದ ಅರಸನು ರಾಯಭಾರಿಯನ್ನು ಭೇಟಿಯಾಗದೇ ಫ್ರಾನ್ಸ್‌ನ್ನು ಅವಮಾನಿಸಿದಂತೆ ಬಿಂಬಿಸಿದನು.

ಮೂರನೆಯ ನೆಪೋಲಿಯನ್ನನು ಪ್ರಷ್ಯಾದ ಮೇಲೆ ಯುದ್ಧವನ್ನು ಘೋಷಿಸಿದನು. ಬಿಸ್ಮಾರ್ಕ್‌ನು ತನ್ನ ರಾಜತಾಂತ್ರಿಕ ಕೌಶಲ್ಯದಿಂದ ಫ್ರಾನ್ಸ್‌ನ್ನು ಒಂಟಿಯನ್ನಾಗಿಸಿ ಯುರೋಪಿನ ಯಾವ ದೇಶವೂ ಬೆಂಬಲಕ್ಕೆ ಬಾರದಂತೆ ನೋಡಿಕೊಂಡನು. ಉತ್ತರ ಜರ್ಮನ್ ಒಕ್ಕೂಟದಿಂದ ಈವರೆಗೂ ಹೊರಗುಳಿದಿದ್ದ ದಕ್ಷಿಣದ ಜರ್ಮನ್ ರಾಜ್ಯಗಳು ಯುದ್ಧದಲ್ಲಿ ಪ್ರಷ್ಯಾಕ್ಕೆ ಬೆಂಬಲ ನೀಡಿದವು. ಪ್ರಷ್ಯಾದ ಸೈನ್ಯವು ಹಲವು ಸ್ಥಳಗಳಲ್ಲಿ ನಡೆದ ಯುದ್ಧಗಳಲ್ಲಿ ಫ್ರಾನ್ಸ್‌ನ್ನು ಹೀನಾಯವಾಗಿ ಸೋಲಿಸಿತು. 1 ಸೆಪ್ಟೆಂಬರ್ 1870ರಲ್ಲಿ ನಡೆದ ಸೆಡಾನ್ ಕದನದಲ್ಲಿ ಫ್ರೆಂಚರನ್ನು ಸಂಪೂರ್ಣವಾಗಿ ಸೋಲಿಸಿದ್ದಲ್ಲದೇ ಸಾಮ್ರಾಟ ಮೂರನೆಯ ನೆಪೋಲಿಯನ್ನನನ್ನು ಸೆರೆ ಹಿಡಿಯಲಾಯಿತು. ಜರ್ಮನ್ನರು ಪ್ಯಾರಿಸ್ ನಗರವನ್ನು ಆಕ್ರಮಿಸಿಕೊಂಡರು. ಪ್ರಷ್ಯಾದ ದೊರೆ ವಿಲಿಯಂನನ್ನು 18 ಜನೆವರಿ 1871ರಂದು ಏಕೀಕೃತ ಜರ್ಮನಿಯ ಅರಸನೆಂದು **'ಕೈಸರ್'** ಬಿರುದಿನೊಂದಿಗೆ, ಪ್ರಸಿದ್ಧ ವರ್ಸೇಲ್ಸ್‌ನ ಸಭಾಗೃಹದಲ್ಲಿ ಕಿರೀಟ ಧಾರಣೆ ಮಹೋತ್ಸವವನ್ನು ಆಚರಿಸಲಾಯಿತು.

10 ಮೇ 1871ರ ಫ್ರಾಂಕ್‌ಫರ್ಟ್ ಒಪ್ಪಂದದೊಂದಿಗೆ ಯುದ್ಧವು ಕೊನೆಗೊಂಡಿತು. ಈ ಒಪ್ಪಂದದ ಪ್ರಕಾರ ಫ್ರಾನ್ಸ್ ಅಲ್ಸೇಸ್ ಹಾಗೂ ಲೊರೈನ್‌ನ ಒಂದು ಭಾಗವನ್ನು ಬಿಟ್ಟುಕೊಡಬೇಕಾಯಿತು. 200,000,000 ಡಾಲರ್ ಯುದ್ಧ ಪರಿಹಾರವನ್ನು ನೀಡಬೇಕಾಯಿತು ಮತ್ತು ಆ ಯುದ್ಧ ಪರಿಹಾರವನ್ನು ಕೊಡುವವರೆಗೆ ಜರ್ಮನ್ ಸೈನ್ಯವನ್ನು ಫ್ರಾನ್ಸ್‌ನಲ್ಲಿ ಇಡಲಾಯಿತು

ಪ್ರಷ್ಯಾದ ದೊರೆಯ ನೇತೃತ್ವದಲ್ಲಿ ಜರ್ಮನ್ ಏಕೀಕರಣವು ಪೂರ್ಣಗೊಂಡಿತು. ಈಗ ಜರ್ಮನಿಯು ಯುರೋಪಿನ ರಾಜಕೀಯದಲ್ಲಿ ಪ್ರಾಬಲ್ಯ ಸಾಧಿಸಿತು ಮತ್ತು ಜರ್ಮನ್ ಏಕೀಕರಣದ ಶಿಲ್ಪಿ ಬಿಸ್ಮಾರ್ಕ್‌ನು ಅತ್ಯಂತ ಪ್ರಭಾವಿ ವ್ಯಕ್ತಿಯಾಗಿ ಹೊರಹೊಮ್ಮಿದನು. ಫ್ರೆಂಚರು ತೀವ್ರ ಅಪಮಾನಕ್ಕೊಳಗಾದರು. ಅವರ ರಾಷ್ಟ್ರಾಭಿಮಾನಕ್ಕೆ ನೋವಾಗಿದ್ದರಿಂದ ಸೇಡು ತೀರಿಸಿಕೊಳ್ಳಬಯಸಿದರು. ಇದು ಪ್ರಥಮ ಜಾಗತಿಕ ಯುದ್ಧದ ಕಾರಣಗಳಲ್ಲೊಂದಾಯಿತು.

ಪ್ರಶ್ನೆಗಳು

ಈ ಕೆಳಗಿನವುಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ (ತಲಾ 1 ಅಂಕ)

1. ಬಿಸ್ಮಾರ್ಕ್‌ನ ಪ್ರಸಿದ್ಧ ನೀತಿ ಯಾವುದು?
2. ಪ್ರಷ್ಯಾ ಯಾವ ವರ್ಷದಲ್ಲಿ ಡೆನ್ಮಾರ್ಕಿನ ಮೇಲೆ ದಾಳಿ ಮಾಡಿತು?
3. ಹಾಲ್‌ಸ್ಟಿನ್ ಹಾಗು ಷಲ್ಸ್‌ವಿಗ್‌ಗಳನ್ನು ವಿಲೀನಗೊಳಿಸುವ ಘೋಷಣೆಯನ್ನು ಡೆನ್ಮಾರ್ಕಿನ ಯಾವ ದೊರೆ ಮಾಡಿದನು?
4. ಆಸ್ಟ್ರೋ–ಪ್ರಷ್ಯನ್ ಯುದ್ಧವನ್ನು ಯಾವ ಒಪ್ಪಂದವು ಕೊನೆಗೊಳಿಸಿತು?
5. ಫ್ರಾಂಕೋ–ಪ್ರಷ್ಯನ್ ಯುದ್ಧವನ್ನು ಯಾವ ಒಪ್ಪಂದವು ಕೊನೆಗೊಳಿಸಿತು?

ಈ ಕೆಳಗಿನವುಗಳಿಗೆ ಎರಡು ಪದಗಳು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ (ತಲಾ 2 ಅಂಕಗಳು)

1. ಝಾಲ್ವೇರಿನ್ ಎಂದರೇನು?
2. ಫ್ರಾಂಕ್‌ಫರ್ಟ್ ಸಂಸತ್ತಿನ ಪ್ರಸ್ತಾಪವನ್ನು ನಾಲ್ಕನೆಯ ಫ್ರೆಡ್ರಿಕ್ ವಿಲಿಯಂ ಏಕೆ ತಿರಸ್ಕರಿಸಿದನು?
3. ಬಿಸ್ಮಾರ್ಕ್‌ನಿಗೆ ಸೈನ್ಯದ ಪುನರ್ ಸಂಘಟನೆಯಲ್ಲಿ ಸಹಾಯ ಮಾಡಿದವರು ಯಾರು?

ಈ ಕೆಳಗಿನ ಪ್ರಶ್ನೆಗೆ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ (5 ಅಂಕಗಳು)

1. ಜರ್ಮನಿಯ ಏಕೀಕರಣದಲ್ಲಿ ಬಿಸ್ಮಾರ್ಕ್‌ನ ಪಾತ್ರವನ್ನು ಚರ್ಚಿಸಿರಿ.

ಈ ಕೆಳಗಿನ ಪ್ರಶ್ನೆಗೆ30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ (10 ಅಂಕಗಳು)

1. ಜರ್ಮನಿಯ ಏಕೀಕರಣದ ವಿವಿಧ ಹಂತಗಳನ್ನು ವಿವರವಾಗಿ ಚರ್ಚಿಸಿರಿ.

❖ ❖ ❖ ❖ ❖

ಅಧ್ಯಾಯ –10

ವಿಶ್ವ ಯುದ್ಧಗಳು ಮತ್ತು ಅಂತಾರಾಷ್ಟ್ರೀಯ ಸಂಘಟನೆಗಳು

ಹಿನ್ನೆಲೆ:

ಎರಡು ವಿಶ್ವ ಯುದ್ಧಗಳಿಗೆ ಸಂಕೀರ್ಣವಾದ ಭೌಗೋಳಿಕ ರಾಜಕೀಯ, ಸಾಂಸ್ಕೃತಿಕ ಹಾಗೂ ಬೌದ್ಧಿಕ ಹಿನ್ನಲೆಗಳು ಇದ್ದವು. 15ನೇ ಮತ್ತು 16ನೇ ಶತಮಾನದ ಭೌಗೋಳಿಕ ಅನ್ವೇಷಣೆ ಯೂರೋಪಿನ ಹಾಗೂ ವಿಶ್ವದ ಬೇರೆ ಬೇರೆ ಭಾಗಗಳ ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಮೇಲೆ ಗಾಢವಾದ ಪರಿಣಾಮ ಬೀರಿತು. ಮುಖ್ಯವಾಗಿ ಈ ಅನ್ವೇಷಣೆಗಳಿಂದ ಪ್ರಪಂಚದ ವಿವಿಧ ದೇಶಗಳಿಗೆ ಹೊಸ ಜಲ ಹಾಗೂ ಭೂಮಾರ್ಗಗಳು ತೆರೆದುಕೊಂಡವು. ಅವು ದೇಶಗಳ ನಡುವಿನ ಬಲಿಷ್ಠ ವ್ಯಾಪಾರ ಸಂಬಂಧ ಮತ್ತು ಮುಕ್ತ ಚಲನೆಯನ್ನು ಬೆಳೆಸಿದವು. ಇದರ ಪರಿಣಾಮವಾಗಿ ಯೂರೋಪಿನ ದೇಶಗಳ ಮಧ್ಯೆ ವಸಾಹತುಗಳ ಸಂಪತ್ತು ಹಾಗೂ ಒಡೆತನಕ್ಕಾಗಿ ತೀವ್ರ ಪೈಪೋಟಿ ಪ್ರಾರಂಭವಾದವು.

ಪುನರುಜ್ಜೀವನವು ಆಧುನಿಕ ಚಿಂತನೆ ಮತ್ತು ವಿಜ್ಞಾನ, ಜಾತ್ಯಾತೀತತೆ ಮುಂತಾದವುಗಳ ಬೆಳವಣಿಗೆಗೆ ನಾಂದಿಯಾಯಿತು. ಪ್ರಜಾಪ್ರಭುತ್ವ, ಜಾತ್ಯಾತೀತತೆ, ಸಮಾಜವಾದ, ಸಮತಾವಾದದಂತಹ ಹೊಸ ರಾಜಕೀಯ ಚಿಂತನೆಗಳು ಪ್ರಪಂಚದಾದ್ಯಂತ ಜನಪ್ರಿಯತೆಯನ್ನು ಪಡೆದವು.

ಅದೇ ರೀತಿಯಾಗಿ ಮತಸುಧಾರಣಾ ಚಳುವಳಿಯು ರಾಜ್ಯದ ಮೇಲಿನ ಧರ್ಮದ ಹಿಡಿತವನ್ನು ದುರ್ಬಲಗೊಳಿಸಿತು. ಪೋಪನ ಅಧಿಕಾರವು ನಿಧಾನವಾಗಿ ರಾಜ್ಯದ ಮೇಲೆ ತನ್ನ ಹಿಡಿತವನ್ನು ಕಳೆದುಕೊಂಡಿತು. ರಾಜ ಪ್ರಭುತ್ವ, ರಾಷ್ಟ್ರೀಯತೆಯ ವಿಚಾರಧಾರೆಗಳು ಮತ್ತು ಪ್ರಜಾ ಪ್ರಭುತ್ವ ಬಲಗೊಂಡವು. ಜನರು ಹೆಚ್ಚಿನ ಬೌದ್ಧಿಕ ಸ್ವಾತಂತ್ರ್ಯವನ್ನು ಅನುಭವಿಸತೊಡಗಿದ್ದರ ಪರಿಣಾಮವಾಗಿ ವಿಜ್ಞಾನ ಮತ್ತು ಇತರೆ ಬೌದ್ಧಿಕ ಕ್ಷೇತ್ರಗಳಲ್ಲಿ ತೀವ್ರತರ ಬೆಳವಣಿಗೆಯಾಯಿತು.

ಅಮೇರಿಕದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಫ್ರೆಂಚ್ ಕ್ರಾಂತಿಯೂ ಕೂಡಾ ವಿಶ್ವ ಯುದ್ಧಕ್ಕೆ ತಮ್ಮದೇ ಆದ ಹಿನ್ನೆಲೆಯನ್ನು ಒದಗಿಸಿದವು. ಈ ಕ್ರಾಂತಿಗಳು ರಾಷ್ಟ್ರೀಯತೆಯ ತತ್ವ ಹಾಗೂ ಪ್ರಜಾ ಪ್ರಭುತ್ವದ ಸಿದ್ಧಾಂತಗಳನ್ನು ಎತ್ತಿ ಹಿಡಿದವು ಮತ್ತು ಜನಪ್ರಿಯಗೊಳಿಸಿದವು. ಈ ಕ್ರಾಂತಿಯ ಸ್ಫೂರ್ತಿ ಯೂರೋಪಿನ ಇತರೆ ರಾಷ್ಟ್ರಗಳಿಗೂ ಹರಡಿತು. ನೆಪೋಲಿಯನ್ನನ ಯುಗ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸಿತು. ಜನರು ತಮ್ಮ ಮೊದಲ ನಿಷ್ಠೆಯನ್ನು ದೇಶಕ್ಕೆ ತೋರಿದರು ಈ ರಾಷ್ಟ್ರೀಯತೆಯ ಸ್ಫೂರ್ತಿಯಿಂದಾಗಿ ಅನೇಕ ಯುದ್ಧಗಳು ನಡೆದು ಅದರ ಪರಿಣಾಮವಾಗಿ ರಾಷ್ಟ್ರೀಯ ಏಕತೆಗೆ ಕಾರಣವಾಯಿತು. 1815 ರಿಂದ 1914 ರವರೆಗೆ ಇಟಲಿ ಹಾಗೂ ಜರ್ಮನಿಯಂತಹ ಅನೇಕ ಹೊಸ ದೇಶಗಳ ಉದಯಕ್ಕೆ ಕಾರಣವಾಯಿತು. ಇದೇ ಸಮಯದಲ್ಲಿ ಮತ ಸುಧಾರಣಾ ಚಳುವಳಿಯ ಪರಿಣಾಮ ಮತ್ತು ವೈಜ್ಞಾನಿಕ ಬೆಳವಣಿಗೆಯಿಂದಾಗಿ ಯುರೋಪಿನ ಜನರು ತೀವ್ರಗತಿಯಲ್ಲಿ ಮುಂದುವರೆದು ಆಧುನಿಕತೆಯತ್ತ ಸಾಗಿದರು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಯುರೋಪಿನ ಸಂಪತ್ತು ಬಹು ದೊಡ್ಡಪ್ರಮಾಣದಲ್ಲಿ ಹೆಚ್ಚಿತು. ಅವರು ಜಗತ್ತಿನ ವಿವಿಧ ಭಾಗಗಳಲ್ಲಿ ವಸಾಹತುವನ್ನು ಸ್ಥಾಪಿಸುವಲ್ಲಿಯೂ ಯಶಸ್ವಿಯಾದರು. ಆದರೆ ಅವರು ಪ್ರಾಂತೀಯ ಹಾಗೂ ಇತರ ವಿವಾದಗಳನ್ನು ನೆರೆಯ ದೇಶಗಳೊಂದಿಗೆ ಶಾಂತಿಯುತವಾಗಿ ಬಗೆ ಹರಿಸಿಕೊಳ್ಳುವ ಕಲೆಯನ್ನು ಕಲಿತಿರಲಿಲ್ಲ. ಇದರ ಪರಿಣಾಮವಾಗಿ ವಿಶ್ವಶಾಂತಿ ಹದಗೆಟ್ಟು 20ನೇ ಶತಮಾನದ ಮೊದಲಾರ್ಧ ಎರಡು ವಿಶ್ವ ಯುದ್ಧಗಳಿಗೆ ಸಾಕ್ಷಿಯಾಯಿತು. ಯುರೊಪಿನ ಅನೇಕ ದೇಶಗಳು ಮತ್ತು ಜಗತ್ತಿನ

ಇತರೆ ದೇಶಗಳು ಇದರಲ್ಲಿ ಭಾಗವಹಿಸಿದ್ದವು. ಈ ಯುದ್ಧಗಳು ಜಗತ್ತು ಹಿಂದೆಂದೂ ಕಾಣದಂತಹ ಘೋರ ವಿನಾಶ ಹಾಗೂ ಅಪಾರ ಜೀವಹಾನಿಗೆ ಕಾರಣವಾದವು. ಈ ಯುದ್ಧಗಳು ಒಂದನೇ ಮತ್ತು ಎರಡನೇ ವಿಶ್ವ ಯುದ್ಧಗಳೆಂದು ಗುರುತಿಸಲ್ಪಡುತ್ತವೆ.

10.1 ಮೊದಲನೇ ಜಾಗತಿಕ ಯುದ್ಧ: 1914–1918

ಮೊದಲ ಜಾಗತಿಕ ಯುದ್ಧವು ಆಧುನಿಕ ಪ್ರಪಂಚದ ಇತಿಹಾಸದಲ್ಲಿ ಅತ್ಯಂತ ಮಹಾನ್ ದೀರ್ಘಾವಧಿಯ ಮತ್ತು ವಿನಾಶಕಾರಿ ಘಟನೆಯಾಗಿದೆ. ಜಗತ್ತಿನಲ್ಲೇ ಮೊದಲ ಬಾರಿಗೆ ಯುರೋಪ್ ಹಾಗೂ ಪ್ರಪಂಚದ ಇತರ ಭಾಗದ ಅನೇಕ ದೇಶಗಳು ಭಾಗವಹಿಸಿದ್ದ ಮೊದಲ ಯುದ್ಧವಾಗಿದ್ದು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹಾನಿಗೊಳಗಾದವು. ಇದು ಹಿಂದೆ ನಡೆದ ಯಾವುದೇ ಯುದ್ಧಕ್ಕಿಂತ ಹೆಚ್ಚಿನ ಜೀವಹಾನಿ ಹಾಗೂ ಆಸ್ತಿಪಾಸ್ತಿಗಳ ನಷ್ಟಕ್ಕೆ ಕಾರಣವಾಯಿತು. ಮೊದಲ ಜಾಗತಿಕ ಯುದ್ಧವು 1914 ರಲ್ಲಿ ಪ್ರಾರಂಭವಾಗಿ 1918 ರಲ್ಲಿ ಕೊನೆಗೊಂಡಿತು. ಇದು ಮೊದಲು ಯುರೋಪಿನಲ್ಲಿ ಆರಂಭವಾಗಿ ಪ್ರಪಂಚದ ಅನೇಕ ರಾಷ್ಟ್ರಗಳಿಗೆ ಹರಡಿತು. ಇದು 20ನೇ ಶತಮಾನದ ಸುಸಂಘಟಿತ ಮತ್ತು ಶಸ್ತ್ರಸಜ್ಜಿತ ರಾಷ್ಟ್ರಗಳ ನಡುವಿನ ಮೊದಲ ಸಂಘರ್ಷವಾಗಿತ್ತು. ಆದ್ದರಿಂದ ಇದನ್ನು ಜಾಗತಿಕ ಯುದ್ಧ ಎಂದು ಕರೆಯಲಾಗಿದೆ. ಸುಮಾರು 30 ದೇಶಗಳು ಯುದ್ಧದಲ್ಲಿ ಭಾಗವಹಿಸಿದ್ದವು.

ಕಾರಣಗಳು:

1) ಉಗ್ರ ರಾಷ್ಟ್ರೀಯತೆ:

ಉಗ್ರ ರಾಷ್ಟ್ರೀಯತೆಯು ಯುದ್ಧ ಪೂರ್ವದಲ್ಲಿ ಅಪಾಯಕಾರಿ ಪ್ರಮಾಣದಲ್ಲಿತ್ತು. ರಾಷ್ಟ್ರೀಯ ಆಶೋತ್ತರಗಳು ರಾಜಕೀಯ ವೈರತ್ವಕ್ಕೆ ಕಾರಣವಾಯಿತು. ಯೂರೋಪಿನಲ್ಲಿ ಯುದ್ಧದ ಪೂರ್ವದಲ್ಲಿ ಉಗ್ರ ರಾಷ್ಟ್ರೀಯತೆ ಬೆಳೆಯಿತು. ಅಂದರೆ ತನ್ನ ದೇಶವನ್ನು ಪ್ರೀತಿಸುವುದು ಅನ್ಯ ದೇಶವನ್ನು ದ್ವೇಷಿಸುವುದಾಗಿತ್ತು. ರಾಷ್ಟ್ರೀಯತೆಯ ಸ್ಫೂರ್ತಿ ಯುರೋಪಿನಲ್ಲಿ 19ನೇ ಶತಮಾನದಲ್ಲಿ ಅನೇಕ ಹೊಸ ರಾಜ್ಯಗಳನ್ನು ಹುಟ್ಟು ಹಾಕಿತು. ಹೀಗೆ ದೇಶಭಕ್ತಿ ಉಗ್ರರೂಪ ತಾಳಿ 'ಸರಿಯಿದ್ದರೂ ತಪ್ಪಿದ್ದರೂ ನನ್ನ ದೇಶ' ಎಂಬುದು ರಾಷ್ಟ್ರೀಯವಾದಿಗಳ ಮಾರ್ಗದರ್ಶಿ ತತ್ವವಾಗಿತ್ತು. ಈ ರಾಷ್ಟ್ರೀಯತೆಯಿಂದಾಗಿಯೇ ಫ್ರಾನ್ಸ್‌ಗೆ ಅಲ್ಸೇಸ್ ಮತ್ತು ಲೊರೈನ್ ಪ್ರಾಂತ್ಯಗಳನ್ನೂ, ಸರ್ಬಿಯಾಗೆ ಬೋಸ್ನಿಯಾ ಮತ್ತು ಹರ್ಜೆಗೋವಿನಾಗಳನ್ನು ಪುನಃ ಪಡೆಯಲು ಸಾಧ್ಯವಾಯಿತು. ರಷ್ಯಾವೂ ಕೂಡ ದಕ್ಷಿಣದ ಕಡೆಗೆ ಸಾಮ್ರಾಜ್ಯವನ್ನು ವಿಸ್ತರಿಸುವ ಉದ್ದೇಶ ಹೊಂದಿತ್ತು. ಈ ಸ್ಪರ್ಧಾತ್ಮಕ ದೇಶಭಕ್ತಿಯು ಬ್ರಿಟನ್ ಮತ್ತು ಜರ್ಮನಿ ನಡುವೆ ಹಗೆತನವನ್ನು ಉಂಟುಮಾಡಿ ಅವರ ಸೈನಿಕ ಹಾಗೂ ನೌಕಾ ಪೈಪೋಟಿಗೆ ಕಾರಣವಾಯಿತು. ಜರ್ಮನಿಯ ಚಕ್ರವರ್ತಿ 2ನೇ ಕೈಸರ್ ವಿಲಿಯಂನು (1888–1918) ಜರ್ಮನ್ ಜನಾಂಗವೇ ಶ್ರೇಷ್ಠ ಎಂದು ನಂಬಿದ್ದನು. ಅವನು ಜರ್ಮನಿಯನ್ನು ವಿಶ್ವದಲ್ಲಿ ಅಗ್ರ ರಾಷ್ಟ್ರವನ್ನಾಗಿಸುವ ಬಯಕೆ ಹೊಂದಿದ್ದನು. ಅವನು 'ವಿಶ್ವ ಶಕ್ತಿ ಅಥವಾ ಪತನ' ಎಂಬ ತತ್ವದಲ್ಲಿ ನಂಬಿಕೆಯಿರಿಸಿದ್ದನು. ಅವನ ವಸಾಹತು ವಿಸ್ತರಣಾನೀತಿ ಯೂರೋಪಿನ ಬೇರೆ ವಸಾಹತು ಸಾಮ್ರಾಜ್ಯಕ್ಕೆ ಬೆದರಿಕೆಯನ್ನುಂಟುಮಾಡಿತ್ತು. ಈ ಉಗ್ರ ರಾಷ್ಟ್ರೀಯತೆ ಮೊದಲನೇ ಜಾಗತಿಕ ಯುದ್ಧಕ್ಕೆ ಪ್ರಮುಖ ಕಾರಣವಾಯಿತು.

2) ಸೇನಾ ಮೈತ್ರಿಕೂಟಗಳು:

1871 ರಲ್ಲಿ ಜರ್ಮನಿಯ ಏಕೀಕರಣದ ನಂತರ, ಇದರ ಛಾನ್ಸಲರನಾದ ಒಟ್ಟೋವನ್ ಬಿಸ್ಮಾರ್ಕ್‌ನು ಶಾಂತಿಯನ್ನು ಬಯಸಿದನು. ಜರ್ಮನಿಯು ಫ್ರಾನ್ಸನ್ನು ತನ್ನ ಪರಮ ಶತ್ರು ಎಂದು ಪರಿಗಣಿಸಿತು ಮತ್ತು ಬಿಸ್ಮಾರ್ಕನು ತನ್ನ ರಾಜತಾಂತ್ರಿಕ ನೀತಿಯಿಂದ ಫ್ರಾನ್ಸ್‌ನ್ನು ಪ್ರತ್ಯೇಕಿಸಲು ಪ್ರಯತ್ನಿಸಿದನು. ಹೀಗಾಗಿ ಬಿಸ್ಮಾರ್ಕನು ಜರ್ಮನಿಯನ್ನು ಸಶಕ್ತಗೊಳಿಸಲು ಹಾಗೂ ಫ್ರಾನ್ಸ್ ಅನ್ನು ಪ್ರತ್ಯೇಕಿಸಲು ಮೈತ್ರಿಕೂಟದ ರಚನೆಯಲ್ಲಿ ತೊಡಗಿದನು. ಇವನು ಪ್ರಾರಂಭದಲ್ಲಿ ಆಸ್ಟ್ರಿಯಾದೊಂದಿಗೆ ಮೈತ್ರಿ ಮಾಡಿಕೊಂಡಿದ್ದರ ಪರಿಣಾಮವಾಗಿ ಎರಡು ಶತ್ರುಕೂಟಗಳ ರಚನೆಗೆ ಕಾರಣವಾಯಿತು. – ಟ್ರಿಪಲ್ ಅಲೈಯನ್ಸ್ ಮತ್ತು ಟ್ರಿಪಲ್ ಎಂಟೆಂಟೆ. ಜರ್ಮನಿ, ಆಸ್ಟ್ರಿಯಾ ಮತ್ತು ಇಟಲಿಗಳು ಸೇರಿ ಟ್ರಿಪಲ್ ಅಲೈಯನ್ಸ್ ರಚಿತವಾಯಿತು. ಈ ಶಕ್ತಿಕೂಟವನ್ನು ಕೇಂದ್ರೀಯ ಬಣ (Central Powers) ವೆಂದೂ ಕರೆಯಲಾಗಿದೆ. ಫ್ರಾನ್ಸ್, ರಷ್ಯ ಮತ್ತು ಇಂಗ್ಲೆಂಡ್‌ಗಳು ಸೇರಿ 1907 ರಲ್ಲಿ ಟ್ರಿಪಲ್ ಎಂಟೆಂಟ್ ರಚಿಸಿಕೊಂಡವು. ಅವುಗಳನ್ನು ಮಿತ್ರರಾಷ್ಟ್ರಗಳೆಂದು ಕರೆಯಲಾಗಿದೆ. ಎರಡೂ ಕೂಟಗಳು ಪರಸ್ಪರ ದ್ವೇಷ, ಅಸೂಯೆಗಳಿಂದ ನೋಡಲಾರಂಭಿಸಿದವು. ಈ ಮೈತ್ರಿಕೂಟಗಳ ರಚನೆ ಆತಂಕದ ವಾತಾವರಣವನ್ನು ಸೃಷ್ಟಿಸಿತು.

3) ಶಸ್ತ್ರಾಸ್ತ್ರಗಳ ಪೈಪೋಟಿ:

ಶಸ್ತ್ರಾಸ್ತ್ರಗಳ ಪೈಪೋಟಿಯೂ ಮತ್ತೊಂದು ಪ್ರಮುಖ ಕಾರಣವಾಗಿದೆ. ಎರಡು ಶತ್ರು ಬಣಗಳ ರಚನೆ – ಟ್ರಿಪಲ್ ಅಲೈಯನ್ಸ್ ಮತ್ತು ಟ್ರಿಪಲ್ ಎಂಟೆಂಟೆ – ಯೂರೋಪಿಯನ್ ರಾಷ್ಟ್ರಗಳ ಮಧ್ಯೆ ಯುದ್ಧ ಸಲಕರಣೆಗಳ ಉತ್ಪಾದನೆಯ ಪೈಪೋಟಿಗೆ ಕಾರಣವಾಯಿತು. ಪ್ರತಿಯೊಂದು ರಾಷ್ಟ್ರವೂ ತನ್ನ ಸೈನಿಕ ಮತ್ತು ನೌಕಾ ಅಸ್ತ್ರಗಳನ್ನು ಹೆಚ್ಚಿಸಲು ಆರಂಭಿಸಿದವು. ಜರ್ಮನಿ ಯುದ್ಧೋಪಕರಣಗಳಾದ ಟ್ಯಾಂಕರ್‌ಗಳು, ಜಲಾಂತರ್ಗಾಮಿಗಳು ಮುಂತಾದವುಗಳ ತಯಾರಿಕೆಯಲ್ಲಿ ಅದ್ಭುತ ಬೆಳವಣಿಗೆಯನ್ನು ಮಾಡಿತು. ಜರ್ಮನಿಯ ಎರಡನೇ ಕೈಸರ್ ವಿಲಿಯಂನ ಯುದ್ಧ ರೀತಿಯ ಧೋರಣೆ ಇಂಗ್ಲೆಂಡ್‌ನ್ನು ಗಾಬರಿಪಡಿಸಿತು. ಆದ್ದರಿಂದ ಇಂಗ್ಲೆಂಡ್ ತನ್ನ ನೌಕಾಬಲವನ್ನು ಹೆಚ್ಚಿಸಿಕೊಳ್ಳತೊಡಗಿಸಿತು. ಫ್ರಾನ್ಸ್, ರಷ್ಯಾ ಮತ್ತು ಇತರ ರಾಷ್ಟ್ರಗಳು ಜರ್ಮನಿ ಭಯದಿಂದ ತನ್ನ ಸೈನಿಕ ಶಕ್ತಿಯನ್ನು ಬಲಗೊಳಿಸಿಕೊಳ್ಳಲಾರಂಭಿಸಿದವು. ಫ್ರಾನ್ಸ್‌ನಲ್ಲಿ ಕಡ್ಡಾಯ ಸೈನಿಕ ತರಬೇತಿಯನ್ನು ಜಾರಿಗೊಳಿಸಲಾಯಿತು. ರಷ್ಯಾ ತನ್ನ ಸೈನಿಕ ವೆಚ್ಚವನ್ನು ದ್ವಿಗುಣಗೊಳಿಸಿತು. ಈ ಶಸ್ತ್ರಾಸ್ತ್ರಗಳ ಪೈಪೋಟಿ ಪರಸ್ಪರ ಭಯ, ಅನುಮಾನ, ಆತಂಕ ಮತ್ತು ಅಪನಂಬಿಕೆಗಳನ್ನು ಸೃಷ್ಟಿಸಿತು.

ಮೊದಲನೇ ಮಹಾಯುದ್ಧ –ಟ್ಯಾಂಕರ್‌ಗಳು

4) ಸಾಮ್ರಾಜ್ಯಶಾಹಿ ಮತ್ತು ಆರ್ಥಿಕ ಪೈಪೋಟಿ

ಯೂರೋಪಿನ ರಾಷ್ಟ್ರಗಳ ಮಧ್ಯೆ ಅಂತಾರಾಷ್ಟ್ರೀಯ ಸಂಘರ್ಷಕ್ಕೆ ಪ್ರಮುಖ ಕಾರಣವೆಂದರೆ ಸಾಮ್ರಾಜ್ಯಶಾಹಿನೀತಿ ಮತ್ತು ಆರ್ಥಿಕ ಪೈಪೋಟಿ. ಕೈಗಾರಿಕಾ ಕ್ರಾಂತಿಯಿಂದ ಸಾಮ್ರಾಜ್ಯಶಾಹಿತ್ವ ಬೆಳೆಯಿತು. ಈ ನೀತಿಯು ವಸಾಹತುಗಳನ್ನು ಸ್ಥಾಪಿಸುವ ಮೂಲಕ ದೇಶದ ಪ್ರಾಬಲ್ಯವನ್ನು ವಿಸ್ತರಿಸುವುದೇ ಆಗಿದೆ. ಯುರೋಪಿನ ರಾಷ್ಟ್ರಗಳ ವಸಾಹತುಗಳ ಮಹತ್ವಾಕಾಂಕ್ಷೆಯೂ ಯುದ್ಧಕ್ಕೆ ಎಡೆಮಾಡಿಕೊಟ್ಟಿತು. ವಸಾಹತುಗಳು ಕಚ್ಚಾವಸ್ತುಗಳ ಪೂರೈಕೆ ಮತ್ತು ಸಿದ್ಧವಸ್ತುಗಳ ಮಾರುಕಟ್ಟೆಗಳನ್ನು ಒದಗಿಸುವ ಮೂಲವಾಗಿತ್ತು. ಜರ್ಮನಿ ಮತ್ತು ಇಂಗ್ಲೆಂಡ್ ನಡುವೆ ವಾಣಿಜ್ಯ ಮತ್ತು ಕೈಗಾರಿಕಾ ಪೈಪೋಟಿ ಏರ್ಪಟ್ಟಿತು. ಇಂಗ್ಲೆಂಡ್ ಹೆಚ್ಚಿನ ವಸಾಹತುಗಳನ್ನು ಹೊಂದಿತ್ತು. ಜರ್ಮನಿಯು ಇಂಗ್ಲೆಂಡಿನ

ವಶದಲ್ಲಿದ್ದ ಮಾರುಕಟ್ಟೆಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದರಿಂದ ಇಂಗ್ಲೆಂಡ್ ಮತ್ತು ಜರ್ಮನಿಯ ನಡುವೆ ಹಗೆತನ ಹೆಚ್ಚಾಯಿತು. ಜರ್ಮನ್ ವಸ್ತುಗಳಿಗೆ ಅನೇಕ ರಾಷ್ಟ್ರಗಳಲ್ಲಿ ಹೆಚ್ಚಿನ ಬೇಡಿಕೆ ಇತ್ತು. ಇಂಗ್ಲೆಂಡ್ ತನ್ನ ಮಾರುಕಟ್ಟೆ ಕಳೆದುಕೊಳ್ಳುವ ಭಯವನ್ನು ಹೊಂದಿತ್ತು. ಇಂಗ್ಲೆಂಡ್ ಯಾವುದೇ ಕಾರಣಕ್ಕೂ ತನ್ನ ವಸಾಹತುಗಳನ್ನು ಕಳೆದುಕೊಳ್ಳಲು ಸಿದ್ಧವಿರಲಿಲ್ಲ. ಆದರೆ ಜರ್ಮನಿ ಎಷ್ಟೇ ಕಷ್ಟವಾದರೂ ಅವುಗಳನ್ನು ಪಡೆದೇ ತೀರಬೇಕೆಂದು ಬಯಸಿತು. ಇದು ಆಫ್ರಿಕಾದಲ್ಲಿ ಪ್ರಮುಖವಾಗಿ ಕಂಡುಬಂದಿತು. ಆಫ್ರಿಕಾದಲ್ಲಿ ಜರ್ಮನಿಯು ತನ್ನ ವೈರಿ ಇಂಗ್ಲೆಂಡ್ ಹಾಗೂ ಇತರ ಯುರೋಪಿನ ರಾಷ್ಟ್ರಗಳನ್ನು ಎದುರಿಸಿ ವಸಾಹತುಗಳನ್ನು ಪಡೆದುಕೊಳ್ಳಲು ಸೈನ್ಯವನ್ನು ಉಪಯೋಗಿಸಲು ಹಿಂಜರಿಯಲಿಲ್ಲ. ಹೀಗೆ ಯೂರೋಪಿನ ರಾಷ್ಟ್ರಗಳ ಮಧ್ಯೆ ಸಾಮ್ರಾಜ್ಯಶಾಹಿ ಮತ್ತು ಆರ್ಥಿಕ ಪೈಪೋಟಿಯೂ ಸಹ ಮೊದಲನೇ ಜಾಗತಿಕ ಯುದ್ಧಕ್ಕೆ ಬಹು ಮುಖ್ಯ ಕಾರಣಗಳಲ್ಲೊಂದಾಯಿತು.

ಸಾಮಾನ್ಯವಾಗಿ ಸಾಮ್ರಾಜ್ಯಶಾಹಿ ಎಂದರೆ ತನ್ನ ಸಾಮ್ರಾಜ್ಯ ವಿಸ್ತರಣೆಗೆ ಮತ್ತೊಂದು ಸಾಮ್ರಾಜ್ಯದ ಭೂಭಾಗವನ್ನು ಆಕ್ರಮಿಸಿಕೊಳ್ಳುವುದಾಗಿದೆ. ವಸಾಹತುಶಾಯಿ ಎಂದರೆ ಸೈನ್ಯ ಅಥವಾ ಇನ್ಯಾವುದೇ ವಿಧಾನದಿಂದ ವಿದೇಶಗಳ ಮೇಲೆ ರಾಜಕೀಯ ಹಿಡಿತ ಸ್ಥಾಪಿಸಿ ರಾಜಕೀಯ, ಆರ್ಥಿಕ ಮತ್ತು ಮಾರುಕಟ್ಟೆ ಅನುಕೂಲಗಳನ್ನು ಪಡೆಯುವುದಾಗಿದೆ.

5) ಬಾಲ್ಕನ್ ಸಮಸ್ಯೆ:

ಟರ್ಕಿಯ ದುರ್ಬಲ ಮತ್ತು ಅದಕ್ಷ ಸುಲ್ತಾನನನ್ನು 'ಯುರೋಪಿನ ರೋಗಿ' ಎಂದು ಕರೆಯಲಾಗುತ್ತಿತ್ತು. ಬಾಲ್ಕನ್ ಪ್ರದೇಶದ ಕ್ರಿಶ್ಚಿಯನ್ ರಾಜ್ಯಗಳಾದ ಬಲ್ಗೇರಿಯಾ, ಬೋಸ್ನಿಯಾ, ರುಮೇನಿಯಾ ಇತ್ಯಾದಿಗಳ ಮೇಲೆ ಟರ್ಕಿ ಸುಲ್ತಾನನ ಹಿಡಿತವು ದುರ್ಬಲವಾಗುತ್ತಾ ಹೋಯಿತು. ಸುಲ್ತಾನನ ದೌರ್ಬಲ್ಯದ ಲಾಭ ಪಡೆದ ಆಸ್ಟ್ರಿಯಾ ಮತ್ತು ರಷ್ಯಾಗಳು ಬಾಲ್ಕನ್ ಪರ್ಯಾಯ ದ್ವೀಪದ ಮೇಲೆ ತಮ್ಮ ಪ್ರಭಾವವನ್ನು ಪಸರಿಸಲು ಪ್ರಯತ್ನಿಸಿದವು. 1908 ರಲ್ಲಿ ಆಸ್ಟ್ರಿಯಾವು ಬೊಸ್ನಿಯಾ ಮತ್ತು ಹರ್ಜೆಗೋವಿನಾಗಳನ್ನು 1878 ರ ಬರ್ಲಿನ ಒಪ್ಪಂದದ ತೀರ್ಮಾನಕ್ಕೆ ವಿರುದ್ಧವಾಗಿ ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡಿತು. ಬರ್ಲಿನ್ ಒಪ್ಪಂದ ಆಸ್ಟ್ರೀಯಾಕ್ಕೆ ಮೇಲ್ವಿಚಾರಣೆಯ ಅಧಿಕಾರವನ್ನು ನೀಡಿತ್ತೇ ಹೊರತು ಆಕ್ರಮಣಕ್ಕಲ್ಲ. ಆಸ್ಟ್ರಿಯಾದ ಕ್ರಮವು ರಷ್ಯಾವನ್ನು ಕೆರಳಿಸಿದ್ದರಿಂದ ಅದು ಆಸ್ಟ್ರಿಯಾದ ವಿರುದ್ಧ ಸರ್ಬಿಯಾವನ್ನು ಬೆಂಬಲಿಸಿತು. ಇದರಿಂದ ಸರ್ಬಿಯಾ ಹಾಗೂ ಅದರ ಮಿತ್ರ ರಾಷ್ಟ್ರವಾದ ರಷ್ಯಾಕ್ಕೆ ಕೋಪವುಂಟಾಯಿತು. ಹೀಗೆ ಎರಡು ವೈರಿ ಬಣಗಳ ಮಧ್ಯೆ ವೈರತ್ವ ಹೆಚ್ಚಾದಂತೆ 1914 ರ ಜಾಗತಿಕ ಯುದ್ಧಕ್ಕೆ ದಾರಿ ಮಾಡಿಕೊಟ್ಟಿತು.

6) ವೃತ್ತ ಪತ್ರಿಕೆಗಳ ಪಾತ್ರ :

ವೃತ್ತಪತ್ರಿಕೆಗಳು ಎರಡು ಬಣಗಳ ನಡುವೆ ಅಂತರ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದವು. ಎಲ್ಲ ರಾಷ್ಟ್ರಗಳಲ್ಲೂ ವೃತ್ತಪತ್ರಿಕೆಗಳು ಯಾವುದೋ ಒಂದು ವಿವಾದವನ್ನು ತೆಗೆದುಕೊಂಡು ರಾಷ್ಟ್ರೀಯ ಭಾವನೆಯನ್ನು ಉದ್ದೀಪಿಸಲು ಪ್ರಯತ್ನಿಸಿದವು. ಯುರೋಪಿನ ಜನರಲ್ಲಿ ಅಪನಂಬಿಕೆಯನ್ನು ಉಂಟುಮಾಡುವಲ್ಲಿ ವೃತ್ತಪತ್ರಿಕೆಗಳು ಕಾರಣವಾದವು.

7) ತತ್‌ಕ್ಷಣದ ಕಾರಣ:

ಮೊದಲನೇ ಜಾಗತಿಕ ಯುದ್ಧಕ್ಕೆ ತತ್‌ಕ್ಷಣದ ಕಾರಣವೆಂದರೆ ಬೋಸ್ನಿಯಾದ ರಾಜಧಾನಿ ಸರಜೇವೊದಲ್ಲಿ 1914 ರ ಜೂನ್ 28 ರಂದು ಆಸ್ಟ್ರಿಯಾದ ರಾಜಕುಮಾರ ಆರ್ಚ್‌ಡ್ಯೂಕ್ ಫರ್ಡಿನಾಂಡ್ ಮತ್ತು ಅವನ ಪತ್ನಿಯ ಕೊಲೆ. ಕೊಲೆಗೈದವನು ಸರ್ಬಿಯಾದ ಪ್ರಜೆ ಗವ್ರಿಲ್ಲೋ ಪ್ರಿನ್ಸೆಪ್ ಎಂಬ ವಿದ್ಯಾರ್ಥಿ. ಆಸ್ಟ್ರಿಯಾ ಸರ್ಬಿಯಾಕ್ಕೆ ಅಪರಾಧಿಗಳನ್ನು ಬಂಧಿಸಿ, ತಮಗೆ ಒಪ್ಪಿಸಲು ಅಂತಿಮ ಗಡುವು ನೀಡಿತು. ಸರ್ಬಿಯಾವು ಗಡುವನ್ನು ತಿರಸ್ಕರಿಸಿತು.

ಹೀಗೆ ಆಸ್ಟ್ರಿಯಾ ಜರ್ಮನಿಯ ಬೆಂಬಲದೊಂದಿಗೆ ಸರ್ಬಿಯಾದ ಮೇಲೆ ಜುಲೈ 28, 1914 ರಂದು ಯುದ್ಧ ಘೋಷಿಸಿತು. ಆಗ ರಷ್ಯಾವು ಸರ್ಬಿಯಾದ ನೆರವಿಗೆ ಬಂದಿತು. ಹೀಗಾಗಿ ಮೊದಲನೇ ಜಾಗತಿಕ ಯುದ್ಧ ಪ್ರಾರಂಭವಾಯಿತು.

ಯುದ್ಧದ ಗತಿ

ಆಸ್ಟ್ರಿಯಾ ಸರ್ಬಿಯಾದ ಮೆಲೆ ಯುದ್ಧ ಸಾರಿದಾಗ, ರಷ್ಯಾ ಸರ್ಬಿಯಾದ ನೆರವಿಗೆ ಬಂದಿತು. ಜರ್ಮನಿಯು ಆಸ್ಟ್ರಿಯಾದ ಸಹಾಯಕ್ಕೆ ಬಂದಿತು. ಇದು ಇತರ ದೇಶಗಳನ್ನು ಯುದ್ದಕ್ಕೆ ಎಳೆದು ತಂದಿತು.

ಮೊದಲನೇ ಮಹಾಯುದ್ಧದ ದ್ವಿಫಲಕಿ ವಿಮಾನಗಳು

ಯುದ್ಧದಲ್ಲಿ ಜರ್ಮನಿ, ಆಸ್ಟ್ರಿಯಾ, ಟರ್ಕಿ ಮತ್ತು ಬಲ್ಗೇರಿಯಾ ಒಂದು ಕಡೆಯಾದರೆ, ಇದಕ್ಕೆ ವಿರುದ್ದವಾಗಿ ಸರ್ಬಿಯಾ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್, ಬೆಲ್ಜಿಯಂ, ಪೋರ್ಚ್‌ಗಲ್ ಇತ್ಯಾದಿ ಇನ್ನೊಂದು ಕಡೆಯಿದ್ದವು. 1915 ರಲ್ಲಿ ಇಟಲಿಯು ಟ್ರಿಪಲ್ ಅಲೈಯನ್ಸ್ ತೊರೆದು ಟ್ರಿಪಲ್ ಎಂಟೆಂಟೆಯ ರಾಷ್ಟ್ರಗಳಿಗೆ ಬೆಂಬಲ ನೀಡಿತು. 1915 ರಲ್ಲಿ ರಷ್ಯಾವು ವಿಪರೀತ ನಷ್ಟ ಅನುಭವಿಸಿತು, ಆದರೆ, ಇಂಗ್ಲೆಂಡ್ ಯುದ್ಧದಲ್ಲಿ ನೌಕಾ ಬಲದಿಂದ ತನ್ನ ಪ್ರಭಾವವನ್ನು ಮುಂದುವರೆಸಿತು. ಜರ್ಮನಿಯು ಸಹ ನೌಕಾ ಪ್ರಾಬಲ್ಯ ಹೊಂದಿತ್ತು. ಇದು ಸಾಕಷ್ಟು ಸಂಖ್ಯೆಯಲ್ಲಿ ಜಲಾಂತರ್ಗಾಮಿ ಅಥವಾ ಯು–ಬೋಟ್‌ಗಳನ್ನು ಹೊಂದಿದ್ದು ಶತ್ರುಗಳಿಗೆ ಅಪಾರ ನಷ್ಟವುಂಟುಮಾಡಿತು. ಜರ್ಮನಿಯು ಅನೇಕ ಅಮೇರಿಕನ್ನರು ಪ್ರಯಾಣಿಸುತ್ತಿದ್ದ ಇಂಗ್ಲೆಂಡ್‌ನ ಲುಸೆಟೇನಿಯನ್ ಹಡಗನ್ನು ನಾಶಮಾಡಿದ್ದರಿಂದ 1917 ರಲ್ಲಿ ಅಮೇರಿಕಾ ಕೂಡ ಮಿತ್ರಕೂಟವನ್ನು ಸೇರಿಕೊಂಡಿತು, ಹೀಗಾಗಿ ಈ ಕದನವು ಜಾಗತಿಕಯುದ್ಧವಾಗಿ ಪರಿವರ್ತನೆಯಾಯಿತು. ಪರಿಸ್ಥಿತಿ ಬದಲಾದಂತೆ ಮಿತ್ರ ರಾಷ್ಟ್ರಗಳು ಜಯಗಳಿಸುತ್ತಾ ಹೋದವು.

ಇದೇ ಸಮಯದಲ್ಲಿ ರಷ್ಯಾದಲ್ಲಿ 1917 ರಲ್ಲಿ ಆಂತರಿಕ ಕ್ರಾಂತಿಯುಂಟಾಯಿತು. ಲೆನಿನ್ ನಾಯಕತ್ವದ ಕಮ್ಯೂನಿಷ್ಟ್ ಸರ್ಕಾರವು ಅಧಿಕಾರಕ್ಕೆ ಬಂದು ರಷ್ಯಾವನ್ನು ಯುದ್ಧದಿಂದ ಹೊರತಂದಿತು. ಯುದ್ಧವು ಭೂ, ಜಲ ಹಾಗೂ ಮೊಟ್ಟ ಮೊದಲನೇ ಬಾರಿಗೆ ಆಕಾಶದಲ್ಲಿ ನಡೆಯಿತು. ಟ್ಯಾಂಕರ್‌ಗಳು, ಬಾಂಬುಗಳು ಮತ್ತು ಜಲಾಂತರ್ಗಾಮಿಗಳಂತಹ ಆಧುನಿಕ ಶಸ್ತಾಸ್ತ್ರಗಳನ್ನು ಈ ಯುದ್ಧದಲ್ಲಿ ಉಪಯೋಗಿಸಲಾಯಿತು. ಇಟಲಿಯಲ್ಲಿ ಆಸ್ಟ್ರಿಯಾ ಸೈನ್ಯವು ನಾಶವಾಯಿತು. ತದನಂತರ ಟರ್ಕಿ, ಬಲ್ಗೇರಿಯಾಗಳೂ ಸಹ ಸೋತವು ಮತ್ತು ಮಿತ್ರ ಕೂಟದ ಮುಂದೆ ಶರಣಾದವು. ಅಂತಿಮವಾಗಿ ಜರ್ಮನಿ ಮತ್ತು ಅದರ ಮಿತ್ರ ಕೂಟಗಳು ನವೆಂಬರ್ 11, 1918 ರಂದು ಸೋತವು. ಜರ್ಮನಿಯ ದೊರೆ ಎರಡನೇ ಕೈಸರ್‌ವಿಲಿಯಂ ಸಿಂಹಾಸನ ತ್ಯಜಿಸಿ ಹಾಲೆಂಡಿಗೆ ಪಲಾಯನಗೈದನು. ಹೀಗೆ ಪ್ರಥಮ ಜಾಗತಿಕ ಯುದ್ಧ ಕೊನೆಗೊಂಡಿತು.

ಚಟುವಟಿಕೆ: ಮೊದಲ ಮಹಾಯುದ್ದದ ವಿವಿಧ ಛಾಯಚಿತ್ರಗಳನ್ನು ಸಂಗ್ರಹಿಸಿ.

ಪರಿಣಾಮಗಳು:

1) ಯುದ್ಧದ ಭೀತಿ ಹಾಗೂ ನೋವುಗಳು ಅಪಾರವಾಗಿದ್ದವು. ಮಿಲಿಯನ್‌ಗಟ್ಟಲೆ ಸದೃಢ ಜನ ನಾಶವಾದರು. ಇನ್ನೂ ಅನೇಕರು ಶಾಶ್ವತವಾಗಿ ಅಂಗವಿಕಲರಾದದ್ದು ಈ ಯುದ್ದದ ಶಾಶ್ವತ ಪರಿಣಾಮವಾಗಿತ್ತು. ಒಂದು ಅಂದಾಜಿನ ಪ್ರಕಾರ ಸುಮಾರು 60 ಮಿಲಿಯನ್ ಸೈನಿಕರು ಯುದ್ಧದಲ್ಲಿ ಭಾಗಿಯಾಗಿದ್ದರು. ಅವರಲ್ಲಿ ಸುಮಾರು ಹತ್ತು ಮಿಲಿಯನ್ ಸೈನಿಕರು ಕೊಲ್ಲಲ್ಪಟ್ಟರು ಮತ್ತು ಸುಮಾರು 20 ಮಿಲಿಯನ್ ಸೈನಿಕರು ಗಾಯಾಳುಗಳಾದರು. ಅವರಲ್ಲಿ ಬಹಳಷ್ಟು ಸೈನಿಕರು 40 ವರ್ಷಗಳಿಗಿಂತ ಕೆಳಗಿನವರಿದ್ದರು. ಅಲ್ಲದೆ, ಮಿಲಿಯನ್‌ಗಟ್ಟಲೆ ನಾಗರೀಕರು ಹಸಿವು, ಕಾಯಿಲೆ ಮತ್ತು ಹಿಂಸೆಗಳಿಂದ ಮರಣ ಹೊಂದಿದರು. ಪರಿಣಾಮವಾಗಿ ಮಹಿಳೆಯರು ಕಾರ್ಖಾನೆಗಳಲ್ಲಿ, ಅಂಗಡಿಗಳಲ್ಲಿ, ದವಾಖಾನೆಗಳಲ್ಲಿ, ಕಛೇರಿಗಳಲ್ಲಿ, ಶಾಲೆ ಮುಂತಾದ ಕಡೆಗಳಲ್ಲಿ ಅನಿವಾರ್ಯವಾಗಿ ಕೆಲಸಮಾಡುವಂತಾಯಿತು. ಅವರು ಪುರುಷರ ಸ್ಥಳಗಳಲ್ಲಿ ಕೆಲಸ ಮಾಡಬೇಕಾಗಿದ್ದರಿಂದ ಪುರುಷ ಮತ್ತು ಮಹಿಳೆ ಮಧ್ಯದ ಸಾಂಪ್ರದಾಯಿಕ ತಡೆಗೋಡೆ ಮುರಿದುಬಿದ್ದಿತು.

2) ಯುದ್ಧದ ಪರಿಣಾಮವಾಗಿ ನಾಲ್ಕು ಹಳೆಯ ಸಾಮ್ರಾಜ್ಯಗಳು ಅಂತ್ಯಗೊಂಡವು. ಅವುಗಳೆಂದರೆ ಆಸ್ಟ್ರಿಯಾದ ಹ್ಯಾಪ್ಸ್‌ಬರ್ಗ್, ಜರ್ಮನಿಯ ಹೋಹೆಂಜೋಲಿರಿನ್, ರಷ್ಯಾದ ರೋಮೊನೋವ್ ಮತ್ತು ಟರ್ಕಿಯ ಸುಲ್ತಾನ ಸಾಮ್ರಾಜ್ಯಗಳು (ಆಟೋಮನ್ ಸಾಮ್ರಾಜ್ಯ). ಫಿನ್‌ಲ್ಯಾಂಡ್, ಲಿಥುವೇನಿಯಾ, ಎಸ್ತೋನಿಯಾ, ಪೋಲೆಂಡ್, ಜೆಕೋಸ್ಲೋವೇಕಿಯಾ, ಯುಗೋಸ್ಲೇವಿಯಾ ಮುಂತಾದ ಹೊಸ ರಾಷ್ಟ್ರಗಳು ಈ ಹಳೆಯ ಅವಶೇಷಗಳ ಮೇಲೆ ಅಸ್ತಿತ್ವಕ್ಕೆ ಬಂದವು.

3) ಯುದ್ಧದ ಪರಿಣಾಮವಾಗಿ ವರ್ಸೇಲ್ಸ್ ಒಪ್ಪಂದ ಏರ್ಪಟ್ಟಿತ್ತು. ಈ ಒಪ್ಪಂದದಿಂದಾಗಿ ಜರ್ಮನಿಯು ಅನೇಕ ಪ್ರದೇಶಗಳನ್ನು ಮತ್ತು ವಸಾಹತುಗಳನ್ನು ಬಿಟ್ಟುಕೊಡಬೇಕಾಯಿತು. ಅಪಾರ ಪ್ರಮಾಣದ ಯುದ್ಧನಷ್ಟ ಪರಿಹಾರವನ್ನು ಹೇರಲಾಯಿತು ಮತ್ತು ಅದರ ಸೈನಿಕ ಶಕ್ತಿಯನ್ನು ಮಿತಿಗೊಳಿಸಲಾಯಿತು.

4) ಯುದ್ಧದ ನಂತರ ಜನರ ಆರ್ಥಿಕ, ಸಾಮಾಜಿಕ ಮತ್ತು ಇತರೆ ಸಮಸ್ಯೆಗಳ ಪರಿಹಾರದ ಮಾರ್ಗದರ್ಶನಕ್ಕಾಗಿ ಸರ್ಕಾರದ ಕಡೆಗೆ ನೋಡುವುದು ಸಾಮಾನ್ಯವಾಯಿತು. ಜೀವನದ ಅನೇಕ ಕ್ಷೇತ್ರಗಳ ಮೇಲೆ ಸರ್ಕಾರದ ಹಿಡಿತ ಹೆಚ್ಚಾಯಿತು. ಅಗತ್ಯ ಸರಕು ಸೇವೆಗಳ ಕೊರತೆಯೂ ಹಣದುಬ್ಬರಕ್ಕೆ ಕಾರಣವಾಯಿತು. ಯುದ್ಧದಲ್ಲಿ ಭಾಗಿಯಾದ ಪ್ರತಿಯೊಂದು ರಾಷ್ಟ್ರವು ಯುದ್ಧ ಖರ್ಚುಗಳನ್ನು ನೀಗಿಸಲು ಹೆಚ್ಚು ತೆರಿಗೆ ವಿಧಿಸಿದವು. ಜಗತ್ತಿನ ಉತ್ಪಾದನೆಯು ಇಳಿಮುಖವಾಯಿತು ಮತ್ತು ಎಲ್ಲಕಡೆ ಬದುಕಿನ ವೆಚ್ಚ ಏರುತ್ತಾ ಹೋಯಿತು. ಯೂರೋಪಿನ ಸಾಲ ನೀಡುವ ಬೃಹತ್ ರಾಷ್ಟ್ರಗಳೇ ಸಾಲದಲ್ಲಿ ಸಿಕ್ಕಿಕೊಂಡವು.

5) ಪ್ರಥಮ ಜಾಗತಿಕ ಯುದ್ಧದ ಪ್ರಮುಖ ರಚನಾತ್ಮಕ ಫಲಿತಾಂಶವೆಂದರೆ ವಿಶ್ವಶಾಂತಿಯ ರಕ್ಷಣೆಗಾಗಿ ಮತ್ತು ಭವಿಷ್ಯತ್ತಿನ ಯುದ್ಧಗಳನ್ನು ತಡೆಯಲು ರಾಷ್ಟ್ರಗಳ ಸಂಘದ ಸ್ಥಾಪನೆ. ಪ್ಯಾರಿಸ್ ಶಾಂತಿಸಮ್ಮೇಳನವು ವುಡ್ರೋ ವಿಲ್ಸನ್‌ನ ಪ್ರಸ್ತಾವನೆಯನ್ನು ಸ್ವೀಕರಿಸಿತು. ರಾಷ್ಟ್ರಸಂಘವು 1920 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದರ ಕೇಂದ್ರ ಕಛೇರಿಯು ಸ್ವಿಡ್ಜರ್ಲ್ಯಾಂಡಿನ ಜಿನೀವಾದಲ್ಲಿತ್ತು.

6) ಯುದ್ಧದ ನಂತರ ಪೋಲೆಂಡ್, ಬೆಲ್ಜಿಯಮ್ ಮತ್ತು ಜೆಕೋಸ್ಲೋವೇಕಿಯಾ ಸ್ವತಂತ್ರವಾದವು.

7) 1919 ರ ಪ್ಯಾರಿಸ್ ಶಾಂತಿಸಮ್ಮೇಳನವು ಅಧಿಕೃತವಾಗಿ ಮೊದಲನೇ ಜಾಗತಿಕ ಯುದ್ಧವನ್ನು ಕೊನೆಗೊಳಿಸಿತು.

ವರ್ಸೇಲ್ಸ್ ಒಪ್ಪಂದ – 1919

ಮೊದಲನೇ ಜಾಗತಿಕ ಯುದ್ಧ ಮುಗಿದ ಕೂಡಲೇ ಶಾಂತಿ ಸ್ಥಾಪನೆಯ ಷರತ್ತುಗಳನ್ನು ವ್ಯವಸ್ಥೆಗೊಳಿಸಲು ಮಿತ್ರರಾಷ್ಟ್ರಗಳು ಪ್ಯಾರಿಸ್‌ನಲ್ಲಿ ಸಭೆ ಸೇರಿದವು. ಈ ಸಮ್ಮೇಳನದಲ್ಲಿ ಗೆದ್ದ ರಾಷ್ಟ್ರಗಳು ಶಾಂತಿ ಸಂಧಾನಗಳನ್ನು

ಹೇಳಿ ಬರೆಸಿದವು. ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಮುಖ ನಾಯಕರುಗಳೆಂದರೆ ಅಮೇರಿಕದ ಅಧ್ಯಕ್ಷ ವುಡ್ರೋವಿಲ್ಸನ್, ಇಂಗ್ಲೆಂಡಿನ ಪ್ರಧಾನಿ ಲಾಯ್ಡ್ ಜಾರ್ಜ್, ಫ್ರಾನ್ಸಿನ ಪ್ರಧಾನಿ ಕ್ಲೆಮೆನ್ ಷ್ಯೂ, ಮತ್ತು ಇಟಲಿಯ ಪ್ರಧಾನಿ ಅರ್ಲಾಂಡೋ. ಜರ್ಮನಿ, ಆಸ್ಟ್ರಿಯಾ, ಹಂಗೇರಿ, ಟರ್ಕಿ ಮತ್ತು ಬಲ್ಗೇರಿಯಾಗಳೊಂದಿಗೆ ಐದು ಪ್ರತ್ಯೇಕ ಒಪ್ಪಂದಗಳನ್ನು ಮಿತ್ರರಾಷ್ಟ್ರಗಳು ಮಾಡಿಕೊಂಡವು. ಅವುಗಳಲ್ಲಿ ಮಿತ್ರಕೂಟ ಮತ್ತು ಜರ್ಮನಿ ಮಧ್ಯೆ 28ನೇ ಜೂನ್ 1919 ರಂದು ನಡೆದ ವರ್ಸೇಲ್ಸ್ ಒಪ್ಪಂದವು ಬಹಳ ಪ್ರಮುಖವಾದುದಾಗಿತ್ತು. ಈ ದಿನವು ಆರ್ಚ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡಿನ ಕೊಲೆಯಾದ 5ನೇ ವರ್ಷದ ದಿನವಾಗಿತ್ತು. ಯುದ್ಧದಲ್ಲಾದ ಅಪಾರ ಹಾನಿ, ಸಾವು ನೋವುಗಳಿಗೆ ಮಿತ್ರ ರಾಷ್ಟ್ರಗಳು ಪ್ರಬಲವಾಗಿ ಜರ್ಮನಿಯನ್ನೇ ಕಾರಣೀಭೂತವನ್ನಾಗಿಸಿದವು. ಜರ್ಮನಿಯು ಬಲವಂತದಿಂದ ವರ್ಸೇಲ್ಸ್ ಒಪ್ಪಂದಕ್ಕೆ ಸಹಿ ಹಾಕಿತು. ಈ ಒಪ್ಪಂದದಿಂದ ಜರ್ಮನಿಗೆ ನೋವು ಮತ್ತು ಅವಮಾನವಾಯಿತು.

ವರ್ಸೇಲ್ಸ್ ಒಪ್ಪಂದದ ಮುಖ್ಯಾಂಶಗಳು

1. ಜರ್ಮನಿಯು ಆಲ್ಸೇಸ್ ಮತ್ತು ಲೊರೈನ್‌ಗಳನ್ನು ಫ್ರಾನ್ಸಿಗೆ ಮರಳಿ ಕೊಡಬೇಕಾಯಿತು. ಇದಲ್ಲದೆ ಜರ್ಮನಿ ಸಂಪದ್ಭರಿತವಾದ ಸಾರ್ ಕಣಿವೆಯ ಕಲ್ಲಿದ್ದಲು ಗಣಿಗಳನ್ನು ಯುದ್ಧದ ವೇಳೆಯಲ್ಲಿ ಫ್ರಾನ್ಸ್‌ನ ಉತ್ತರ ಭಾಗದಲ್ಲಿ ಕಲ್ಲಿದ್ದಲು ಗಣಿಗಳಿಗಾದ ಹಾನಿಗೆ ಪರಿಹಾರವಾಗಿ ಫ್ರಾನ್ಸ್‌ನ ವಶಕ್ಕೆ ಕೊಡಬೇಕಾಯಿತು.
2. ಷೇಲ್ಸ್‌ವಿಗ್ ಮತ್ತು ಹೋಲ್‌ಸ್ಟೇನ್ ಪ್ರದೇಶಗಳನ್ನು ಜರ್ಮನಿಯು ಡೆನ್ಮಾರ್ಕ್‌ಗೆ ಮರಳಿ ಕೊಟ್ಟಿತು. ಜರ್ಮನಿಯ ಡ್ಯಾನ್‌ಜಿಗ್ ಬಂದರನ್ನು ಮುಕ್ತಗೊಳಿಸಲಾಯಿತು.
3. ರೈನ್‌ಲ್ಯಾಂಡ್ ಪ್ರದೇಶದಲ್ಲಿ ಸೈನಿಕ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ಆ ಪ್ರದೇಶದಲ್ಲಿ ಎಲ್ಲಾ ಕೋಟೆಗಳನ್ನು ನಿರ್ನಾಮಗೊಳಿಸಲಾಯಿತು ಮತ್ತು ಪುನಃ ಕೋಟೆಗಳನ್ನು ಕಟ್ಟದಂತೆ ಸೂಚನೆ ನೀಡಲಾಯಿತು.
4. ಪೋಲೆಂಡ್, ಬೆಲ್ಜಿಯಮ್ ಮತ್ತು ಜೆಕೋಸ್ಲೋವೇಕಿಯಾಗಳ ಸ್ವಾತಂತ್ರ್ಯವನ್ನು ಜರ್ಮನಿಯು ಮಾನ್ಯಮಾಡಿತು.
5. ಮಿತ್ರಕೂಟಕ್ಕೆ ಜರ್ಮನಿಯು ತನ್ನ ಎಲ್ಲಾ ವಸಾಹತುಗಳನ್ನು ಬಿಟ್ಟುಕೊಟ್ಟಿತು. ಇವುಗಳನ್ನು ಇಂಗ್ಲೆಂಡ್, ಫ್ರಾನ್ಸ್, ಜಪಾನ್ ಮತ್ತು ಇತರ ರಾಷ್ಟ್ರಗಳು ಹಂಚಿಕೊಂಡವು.
6. ಮೊದಲನೇ ಜಾಗತಿಕ ಯುದ್ಧಕ್ಕೆ ತಾನೇ ಕಾರಣ ಅಥವಾ ನೇರ ಹೊಣೆಯೆಂದು ಜರ್ಮನಿ ಒಪ್ಪಿಕೊಳ್ಳಬೇಕಾಯಿತು. ಆದ್ದರಿಂದ ಯುದ್ದದ ನಷ್ಟ ಪರಿಹಾರವಾಗಿ ಜರ್ಮನಿ 6,600 ಮಿಲಿಯನ್ ಪೌಂಡ್ ನೀಡಬೇಕಾಯಿತು.
7. ಜರ್ಮನಿಯನ್ನು ನಿಶಸ್ತ್ರೀಕರಣಗೊಳಿಸಲಾಯಿತು. ಹಾಗೂ ಅದರ ನೌಕಾಪಡೆಯ ಗಾತ್ರವನ್ನು ಮಿತಿಗೊಳಿಸಲಾಯಿತು ಮತ್ತು ಜರ್ಮನಿ ಸೈನ್ಯವನ್ನು 1 ಲಕ್ಷಕ್ಕೆ ಮಿತಿಗೊಳಿಸಲಾಯಿತು. ಶಸ್ತ್ರಾಸ್ತ್ರಗಳ ಆಮದು ಮತ್ತು ರಫ್ತುವನ್ನು ನಿಷೇಧಿಸಲಾಯಿತು. ಅಲ್ಲದೇ ಮಿಷಿನ್‌ಗನ್ ಹಾಗೂ ರೈಫಲ್‌ಗಳ ತಯಾರಿಕೆಯ ಮೇಲೆ ನಿರ್ಬಂಧವನ್ನು ಹೇರಲಾಯಿತು. ಜರ್ಮನಿ ಯುದ್ಧನೌಕೆಗಳನ್ನು ವಾಣಿಜ್ಯ ಹಡಗುಗಳಾಗಿ ಪರಿವರ್ತಿಸಲಾಯಿತು. ಟ್ಯಾಂಕುಗಳು, ಸಬ್‌ಮೆರಿನ್‌ಗಳು ಹಾಗೂ ಯುದ್ಧವಿಮಾನಗಳನ್ನು ಹೊಂದಲು ಅನುಮತಿ ನೀಡಲಿಲ್ಲ.

ವರ್ಸೇಲ್ಸ್ ಒಪ್ಪಂದದ ಟೀಕೆಗಳು

ವರ್ಸೇಲ್ಸ್ ಒಪ್ಪಂದವನ್ನು ತೀವ್ರವಾಗಿ ಟೀಕೆ ಮಾಡಲಾಯಿತು. ಇದು ಸ್ವಾಭಾವಿಕ ನ್ಯಾಯತತ್ವದಿಂದ ಕೂಡಿರದೆ ಪ್ರತೀಕಾರದ ತಳಹದಿ ಹೊಂದಿದೆ ಎನ್ನಲಾಯಿತು. ಹೀಗಾಗಿ ಒಪ್ಪಂದವು ಅನೇಕ ಹೊಸ ಸಮಸ್ಯೆಗಳಿಗೆ ಕಾರಣವಾಯಿತು. ಇದು ಜರ್ಮನ್ನರ ಭಾವನೆಗಳನ್ನು ನೋಯಿಸಿತು. ಇದರಿಂದ ಜರ್ಮನಿ ಮತ್ತು ಮಿತ್ರ ರಾಷ್ಟ್ರಗಳ ಮಧ್ಯೆ ಅಸಮದಾನ ಮೂಡಿತು. ಒಪ್ಪಂದವು ಭವಿಷತ್ತಿನ ಯುದ್ಧಕ್ಕೆ ಬೀಜಗಳನ್ನು ಬಿತ್ತಿತು. ಜಗತ್ತಿನ ವಿವಿಧ ರಾಷ್ಟ್ರಗಳ ಶಾಂತಿ ಬಯಸುವ ಜನರ ನಿರೀಕ್ಷಿತ ಮಟ್ಟಕ್ಕೆ ಬರಲಿಲ್ಲ. ಮಿತ್ರ ರಾಷ್ಟ್ರಗಳು ಜರ್ಮನಿಯನ್ನು ಹೆಚ್ಚು ಅನುಕಂಪದಿಂದ ಪರಿಗಣಿಸಬೇಕಾಗಿತ್ತು. ಕಾರಣ ಇದು ಜರ್ಮನಿಯ ಆತ್ಮಗೌರವಕ್ಕೆ ದಕ್ಕೆಯನ್ನುಂಟು ಮಾಡಿತು. ಒಪ್ಪಂದದ ಮತ್ತೊಂದು ದೌರ್ಬಲ್ಯವೆಂದರೆ ಇದು ಒತ್ತಾಯಪೂರ್ವಕವಾಗಿ ಹೇರಿದ್ದಾಗಿತ್ತೇ ಹೊರತು ಶಾಂತಿ ಮಾತುಕತೆಯಿಂದ ಕೂಡಿರಲಿಲ್ಲ. ಒಪ್ಪಂದಕ್ಕೆ ಸಹಿ ಹಾಕುವಂತೆ ಜರ್ಮನಿಗೆ ಆದೇಶ ನೀಡಲಾಯಿತು. ಹೀಗಾಗಿ, ಜರ್ಮನ್ನರ ಮನಸ್ಸಿನಲ್ಲಿ ಪ್ರತೀಕಾರ ಬೆಳೆಯಲು ಕಾರಣವಾಯಿತು.

ರಾಷ್ಟ್ರಗಳ ಸಂಘ

ಪ್ರಥಮ ಜಾಗತಿಕ ಯುದ್ಧದ ಸಾವುನೋವುಗಳ ಪರಿಣಾಮಗಳಿಂದ ಅನೇಕ ರಾಷ್ಟ್ರಗಳು ಅಂತಾರಾಷ್ಟ್ರೀಯ ಸಂಘದ ಬಗ್ಗೆ ಚಿಂತನೆ ಮಾಡಲು ಕಾರಣವಾಯಿತು. ಅಮೇರಿಕದ ಅಧ್ಯಕ್ಷ ವುಡ್ರೋ ವಿಲ್ಸನ್‌ನು ಅಂತಾರಾಷ್ಟ್ರೀಯ ಸಹಕಾರ, ಶಾಂತಿ ಮತ್ತು ಭದ್ರತೆ ದೃಷ್ಟಿಯಿಂದ ರಾಷ್ಟ್ರ ಸಂಘದ ಸ್ಥಾಪನೆಗೆ ಪ್ರಸ್ತಾಪಿಸಿದನು. ಇದರ ಫಲವಾಗಿ 1920 ಜನವರಿ 1 ರಂದು ರಾಷ್ಟ್ರಸಂಘ ಅಸ್ತಿತ್ವಕ್ಕೆ ಬಂದಿತು. ಸ್ವಿಡ್ಜರ್‌ಲ್ಯಾಂಡಿನ ಜಿನೀವಾ ನಗರದಲ್ಲಿ ಇದರ ಕೇಂದ್ರ ಕಛೇರಿ ಸ್ಥಾಪಿಸಲ್ಪಟ್ಟಿತು. ಆರಂಭದಲ್ಲಿ ಇದರಲ್ಲಿ 42 ಸದಸ್ಯ ರಾಷ್ಟ್ರಗಳಿದ್ದವು. ಮುಂದೆ ಸದಸ್ಯರ ಸಂಖ್ಯೆ 63 ಕ್ಕೆ ಏರಿತು. ರಾಷ್ಟ್ರ ಸಂಘದ ಪ್ರಮುಖ ಗುರಿಯೆಂದರೆ ಅಂತಾರಾಷ್ಟ್ರೀಯ ಸಹಕಾರ, ಶಾಂತಿ ಮತ್ತು ಭದ್ರತೆಯನ್ನು ಸಾಧಿಸುವುದೇ ಆಗಿತ್ತು. ಇದು ಮಾನವ ಕಲ್ಯಾಣ ಮತ್ತು ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸುವ ಉದ್ದೇಶವನ್ನು ಹೊಂದಿತ್ತು. ಅದು ಬಲಿಷ್ಠ ರಾಷ್ಟ್ರಗಳು ಯುದ್ದನೀತಿಯನ್ನು ಕೈಬಿಡುವಂತೆ ಹಾಗೂ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವಂತೆ ಮಾಡುವುದಾಗಿತ್ತು.

ಸಂಘಟನೆ: ರಾಷ್ಟ್ರ ಸಂಘವು ಮೂರು ಪ್ರಮುಖ ಅಂಗಗಳನ್ನು ಹೊಂದಿತ್ತು.

ಅಸೆಂಬ್ಲಿ: (ಸಾಮಾನ್ಯ ಸಭೆ) ರಾಷ್ಟ್ರ ಸಂಘದ ಅಸೆಂಬ್ಲಿಯು ಸರ್ವೋನ್ನತ ಅಂಗವಾಗಿತ್ತು. ಇದು ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡಿತ್ತು. ಇದು ವರ್ಷಕ್ಕೊಮ್ಮೆ ಸ್ವಿಡ್ಜರ್ಲ್ಯಾಂಡಿನ ಜಿನಿವಾದಲ್ಲಿ ಸಭೆ ಸೇರುತ್ತಿತ್ತು. ಪ್ರತಿ ಸದಸ್ಯ ರಾಷ್ಟ್ರವು ಅಸೆಂಬ್ಲಿಗೆ ಮೂರು ಪ್ರತಿನಿಧಿಗಳನ್ನು ಕಳುಹಿಸಬಹುದಾಗಿತ್ತು. ಆದರೆ ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದೇ ಮತವಿತ್ತು.

ಕೌನ್ಸಿಲ್: ರಾಷ್ಟ್ರ ಸಂಘದ ಮಂಡಳಿಯು ಚಿಕ್ಕದಾದರೂ ಬಹಳ ಶಕ್ತಿಶಾಲಿ ಅಂಗವಾಗಿತ್ತು. ಇದು ಆರಂಭದಲ್ಲಿ ಐದು ಖಾಯಂ ರಾಷ್ಟ್ರಗಳು ಯು.ಕೆ., ಫ್ರಾನ್ಸ್, ಯು.ಎಸ್‌ಎ, ಇಟಲಿ, ಮತ್ತು ಜಪಾನ್ ಹಾಗೂ ನಾಲ್ಕು ತಾತ್ಕಾಲಿಕ ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿತ್ತು. ತರುವಾಯ ರಷ್ಯಾ ಮತ್ತು ಜರ್ಮನಿ ರಾಷ್ಟ್ರ ಸಂಘದ ಮಂಡಳಿಯಲ್ಲಿ ಖಾಯಂ ಸ್ಥಾನ ಪಡೆದವು. ರಾಷ್ಟ್ರ ಸಂಘದ ಮಂಡಳಿಯು ವರ್ಷಕ್ಕೆ ಮೂರು ಬಾರಿ ಸಭೆ ಸೇರುತ್ತಿತ್ತು.

ಕಾರ್ಯಾಲಯ: ರಾಷ್ಟ್ರಸಂಘವು ಪ್ರಧಾನ ಕಾರ್ಯದರ್ಶಿ ಅಡಿಯಲ್ಲಿ ಕಾರ್ಯಾಲಯವನ್ನು ಒಳಗೊಂಡಿತ್ತು. ಇದರಲ್ಲಿ ಸುಮಾರು 700 ಅಧಿಕಾರಿಗಳು ಆಡಳಿತದ ಕೆಲಸ ನಿರ್ವಹಿಸುತ್ತಿದ್ದರು. ಬ್ರಿಟನ್‌ನ ಸರ್ ಜೇಮ್ಸ್ ಎರಿಕ್ ಡ್ರುಮ್ಮಾಂಡ್ ಇದರ ಪ್ರಥಮ ಪ್ರಧಾನ ಕಾರ್ಯದರ್ಶಿಯಾಗಿದ್ದನು.

ಸಹಾಯಕ ಅಂಗಗಳು: ಅಂತಾರಾಷ್ಟ್ರೀಯ ನ್ಯಾಯಾಲಯ, ಅಂತಾರಾಷ್ಟ್ರೀಯ ಕಾರ್ಮಿಕ ಕಛೇರಿ ಮತ್ತು ಮ್ಯಾಂಡೇಟ್ ಕಮೀಷನ್ ಪ್ರಮುಖ ಸಹಾಯಕ ಅಂಗಗಳಾಗಿದ್ದವು. ಅಂತರಾಷ್ಟ್ರೀಯ್ಲ ನ್ಯಾಯಾಲಯದಲ್ಲಿ 15 ನ್ಯಾಯಾಧೀಶರಿದ್ದರು ಮತ್ತು ಇದರ ಕೇಂದ್ರ ಕಛೇರಿಯು ಹಾಲೆಂಡಿನ ಹೇಗ್ ನಗರದಲ್ಲಿತ್ತು. ಅಂತಾರಾಷ್ಟ್ರೀಯ ವ್ಯಾಜ್ಯಗಳನ್ನು ಪರಿಹರಿಸುವುದೇ ಇದರ ಪ್ರಮುಖ ಕಾರ್ಯವಾಗಿತ್ತು. ಅಂತಾರಾಷ್ಟ್ರೀಯ ಕಾರ್ಮಿಕ ಕಛೇರಿ ಜಗತ್ತಿನಾದ್ಯಂತ ಕಾರ್ಮಿಕರ ಸ್ಥಿತಿಯನ್ನು ಉತ್ತಮ ಪಡಿಸುವ ಗುರಿಯನ್ನು ಹೊಂದಿತ್ತು. ಮ್ಯಾಂಡೇಟ್ ಕಮೀಷನ್ ಮೊದಲನೇ ಜಾಗತಿಕ ಯುದ್ಧದಲ್ಲಿ ಸೋತ ವಿವಿಧ ದೇಶಗಳ ವಸಾಹತುಗಳ ಪ್ರದೇಶಗಳ ಮೇಲ್ವಿಚಾರಣೆ ನಡೆಸಬೇಕಾಗಿತ್ತು.

ರಾಷ್ಟ್ರ ಸಂಘವು ರಾಜಕೀಯ ಮತ್ತು ಇತರೆ ಕ್ಷೇತ್ರಗಳಲ್ಲಿ ಬಹಳ ಉಪಯುಕ್ತ ಕಾರ್ಯಮಾಡಿತು. ಆದರೆ, ನಂತರ ಅದು ತನ್ನ ಧ್ಯೇಯೊದ್ದೇಶಗಳ ಗುರಿಮುಟ್ಟುವುದರಲ್ಲಿ ವಿಫಲವಾಯಿತು. ಇದರ ಪರಿಣಾಮವಾಗಿ 1939 ರಲ್ಲಿ ಎರಡನೇ ಜಾಗತಿಕ ಯುದ್ಧ ನಡೆಯಿತು ಮತ್ತು ರಾಷ್ಟ್ರ ಸಂಘವು ಪರಿಣಾಮಕಾರಿಯಾದುದಲ್ಲವೆಂದು ರುಜುವಾತಾಯಿತು ಮತ್ತು ನಿಷ್ಕ್ರಿಯಗೊಂಡಿತು. ಹೀಗಾಗಿ ಇದು ಅಧಿಕೃತವಾಗಿ 19 ಏಪ್ರಿಲ್ 1946 ರಂದು ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.

10.2 ಸರ್ವಾಧಿಕಾರತ್ವಗಳ ಏಳಿಗೆ

ಎರಡು ಜಾಗತಿಕ ಯುದ್ಧಗಳ ನಡುವಿನ 20 ವರ್ಷಗಳು ಯುರೋಪಿನಲ್ಲಿ ಅರಾಜಕತೆ ಹಾಗೂ ಗೊಂದಲಗಳ ಅವಧಿಯಾಗಿತ್ತು. ಮೊದಲನೇ ಜಾಗತಿಕ ಯುದ್ಧವು ರಾಜಕೀಯ ಮತ್ತು ಆರ್ಥಿಕ ಸಂಧಿಗ್ಧಗಳನ್ನು ಸೃಷ್ಟಿಸಿತು. ಮೇಲಿನ ಶೋಚನೀಯ ಸ್ಥಿತಿಯು ಇಟಲಿ, ಜರ್ಮನಿ, ರಷ್ಯಾ, ಮತ್ತು ಇತರ ರಾಷ್ಟ್ರಗಳಲ್ಲಿ ಸರ್ವಾಧಿಕಾರತ್ವದ ಏಳಿಗೆಗೆ ಕಾರಣವಾಯಿತು. ಪ್ರಜಾಪ್ರಭುತ್ವವು ಇಟಲಿಯ ಫ್ಯಾಸಿಸಂ ಮತ್ತು ಜರ್ಮನಿಯ ನಾಜಿ ರಾಜಕೀಯ ಸಿದ್ಧಾಂತಗಳಿಂದ ಅಪಾಯವನ್ನು ಎದುರಿಸಿತು.

ಇಟಲಿಯಲ್ಲಿ ಫ್ಯಾಸಿಸಂ:

ಇಟಲಿಯು ಮೊದಲನೇ ಜಾಗತಿಕ ಯುದ್ಧದಲ್ಲಿ ಅತೃಪ್ತ ವಿಜಯಿ ರಾಷ್ಟ್ರವಾಗಿ ಹೊರಬಂದಿತು. ಏಕೆಂದರೆ 1919 ರ ಪ್ಯಾರಿಸ್ ಶಾಂತಿಒಪ್ಪಂದದಲ್ಲಿ ಅದು ನಿರೀಕ್ಷಿಸಿದ್ದನ್ನು ಪಡೆಯಲಿಲ್ಲ. ಇದರಿಂದ ಇಟಲಿಯ ದೇಶಭಕ್ತರು ತಾವು ಯುದ್ಧದಲ್ಲಿ ವಿಜಯಿಯಾದರೂ ಶಾಂತಿಯಲ್ಲಿ ಸೋತೆವು ಎಂದು ದೂರಿದರು. ಯುದ್ಧದ ನಂತರ ಇಟಲಿಯು ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳನ್ನು ಎದುರಿಸಿತು. ದೇಶವು ದಿವಾಳಿತನ, ಹಸಿವು, ನಿರುದ್ಯೋಗ, ಸಾರ್ವತ್ರಿಕ ಅರಾಜಕತೆಗಳನ್ನು ಎದುರಿಸಿತು. ಕೈಗಾರಿಕಾ ಕಾರ್ಮಿಕರ ಮುಷ್ಕರ ಮತ್ತು ಬೀಗಮುದ್ರೆ ಹಾಗೂ ಹಸಿದ ಜನರ ದಂಗೆ ದಿನನಿತ್ಯದ ಘಟನೆಗಳಾಗಿದ್ದವು. ಸಾಮಾನ್ಯ ಜನ ಶಾಂತಿ ಮತ್ತು ಆಹಾರಕ್ಕಾಗಿ ಹೋರಾಡಬೇಕಾಯಿತು. ಬೆಲೆಗಳು ಶೀಘ್ರವಾಗಿ ಏರಿದವು. ಇಂತಹ ಸನ್ನಿವೇಶದಲ್ಲಿ ಬೆನಿಟೊ ಮುಸೋಲಿನಿ ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದನು.

'ಫ್ಯಾಸಿಸಂ' ಎಂಬ ಪದವು 'ಫೇಸಸ್' ಎಂಬ ಪದದಿಂದ ಬಂದಿದೆ. ಇದರ ಅರ್ಥ ಕೊಡಲಿ ಮತ್ತು ದಂಡಗಳಕಟ್ಟು. ಇದು ಪ್ರಾಚೀನ ರೋಮಿನ ಶಕ್ತಿಯ ಸಂಕೇತವಾಗಿತ್ತು.

ಆರಂಭಿಕ ಜೀವನ :

ಬೆನಿಟೊ ಮುಸೋಲಿನಿ 1883 ರಲ್ಲಿ ಇಟಲಿಯಲ್ಲಿ ಜನಿಸಿದನು. ಈತನ ತಂದೆ ಅಲೆಕ್ಸಾಂಡ್ರೋ ಮುಸೋಲಿನಿ ಕಮ್ಮಾರನಾಗಿದ್ದನು ಹಾಗೂ ತಾಯಿ ರೋಸಾ ಶಾಲಾ ಶಿಕ್ಷಕಿಯಾಗಿದ್ದಳು. ಮುಸೋಲಿನಿ ಶಿಕ್ಷಕನಾಗಿ ಮತ್ತು ಪತ್ರಕರ್ತನಾಗಿ ಕಾರ್ಯನಿರ್ವಹಿಸಿದನು. ನಂತರ ಇವನು 'ಅವಂತಿ' ಎಂಬ ಸಮಾಜವಾದಿ ಪತ್ರಿಕೆಯ ಸಂಪಾದಕನಾದನು ಮೊದಲನೇ ಜಾಗತಿಕ ಯುದ್ಧದ ನಂತರ 1919ರಲ್ಲಿ ಇವನು ಫ್ಯಾಸಿಸ್ಟ್ ಪಕ್ಷವನ್ನು ಮಿಲಾನ್ ನಗರದಲ್ಲಿ ಸ್ಥಾಪಿಸಿದನು. ಈ ಪಕ್ಷದ ಸದಸ್ಯರು ಕಪ್ಪು ಅಂಗಿ (Black Shirts) ಧರಿಸುತ್ತಿದ್ದರು. ಆದ್ದರಿಂದ ಅವರನ್ನು 'ಕಪ್ಪಂಗಿ'ಗಳೆಂದು ಕರೆಯಲಾಗಿತ್ತು. ಇವರು ದೇಶಭಕ್ತರು, ಕಮ್ಯೂನಿಸ್ಟ್ ವಿರೋಧಿಗಳು ಆಗಿದ್ದು ರಾಷ್ಟ್ರೀಯತೆಗೆ ಬದ್ಧರಾಗಿದ್ದರು. 'ನಂಬಿಕೆ, ವಿಧೇಯತೆ, ಮತ್ತು ಹೋರಾಟ'. ಅವನ ಪಕ್ಷದ ಘೋಷಣೆಗಳಾಗಿದ್ದವು. ಬಂದೂಕು ಮತ್ತು ಕೋಲುಗಳಿಂದ ಫ್ಯಾಸಿಸ್ಟರು ಕಮ್ಯೂನಿಸ್ಟ್ ಮತ್ತು ಸಮಾಜವಾದಿಗಳ ಸಭೆಗಳನ್ನು

ಬೆನಿಟೊ ಮುಸೋಲಿನಿ
(1883–1945)

ಸದೆಬಡಿದರು. ಹಾಗೂ ವ್ಯಾಪಾರ ಒಕ್ಕೂಟ ಮತ್ತು ರೈತರ ಸಂಘಟನೆಗಳನ್ನು ಸದೆಬಡಿಯಲಾಯಿತು. 1922ರಲ್ಲಿ ಮುಸೋಲಿನಿ ಮತ್ತು ಅವನ ಹಿಂಬಾಲಕರು ರೋಮ್ ನಗರಕ್ಕೆ ತೆರಳಿ ಸರ್ಕಾರಿ ಕಛೇರಿಗಳು, ರೈಲ್ವೆ, ಅಂಚೆ, ಮತ್ತು ತಂತಿ ಮೊದಲಾದವುಗಳನ್ನು ವಶಪಡಿಸಿಕೊಂಡರು. ಇಟಲಿಯ ರಾಜನಾದ ಮೂರನೇ ವಿಕ್ಟರ್ ಇಮ್ಯಾನುಯಲ್ ಆಂತರಿಕ ಯುದ್ಧಕ್ಕೆ ಹೆದರಿ ಮುಸೋಲಿನಿಯನ್ನು ಸರ್ಕಾರ ರಚಿಸಲು ಕೇಳಿಕೊಂಡನು. ತಕ್ಷಣವೇ ಮುಸೋಲಿನಿ ಇಟಲಿಯಲ್ಲಿ ಫ್ಯಾಸಿಸ್ಟ್ ಆಳ್ವಿಕೆ ಆರಂಭಿಸಿದನು. ಇವನು ತನ್ನೆಲ್ಲಾ ವಿರೋಧಿಗಳನ್ನು ಸದೆಬಡಿದು ಸರ್ವಾಧಿಕಾರಿಯಾದನು.

ಫ್ಯಾಸಿಸಂ ಈ ಕೆಳಕಂಡ ತತ್ವಗಳ ಆಧಾರದ ಮೇಲೆ ನಿಂತಿತ್ತು.

1. ಯುದ್ಧದ ವೈಭವೀಕರಣ
2. ರಾಜ್ಯಕ್ಕೆ ಪ್ರಾಮುಖ್ಯತೆ
3. ಏಕಪಕ್ಷದಲ್ಲಿ ನಂಬಿಕೆ
4. ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕೆ ವಿರೋಧ
5. ಪ್ರಶ್ನಾತೀತ ಪರಮಾಧಿಕಾರ.

ಮುಸೋಲಿನಿಯ ಸಾಧನೆಗಳು:

ಮುಸೋಲಿನಿಯು ಸುವ್ಯವಸ್ಥೆಯನ್ನು ಸ್ಥಾಪಿಸಿ ಕೈಗಾರಿಕಾ ಮುಷ್ಕರಗಳನ್ನು ಸಂಪೂರ್ಣವಾಗಿ ನಿಷೇಧಿಸಿದನು, ಕಮ್ಯೂನಿಸ್ಟರನ್ನು ನಿರ್ದಯವಾಗಿ ಹತ್ಯೆಗೈದನು. ಫ್ಯಾಸಿಸ್ಟ್ ತತ್ವಗಳನ್ನು ಹರಡಲು ಶಿಕ್ಷಣವನ್ನು ರಾಜ್ಯದ ನಿಯಂತ್ರಣಕ್ಕೆ ತಂದನು. ಮುಸೋಲಿನಿ ತಾನು ಅಧಿಕಾರದಲ್ಲಿ ಮುಂದುವರೆಯಲು ಚರ್ಚ್‌ನ ಬೆಂಬಲದ ಪ್ರಾಮುಖ್ಯತೆಯನ್ನು ಅರಿತುಕೊಂಡನು. ಹಾಗಾಗಿ ಅವನು ಪೋಪ್ 11ನೇಯ ಪಯಸ್‌ನೊಂದಿಗೆ 'ಲ್ಯಾಟರನ್ ಒಪ್ಪಂದ'ವನ್ನು 1929 ರಲ್ಲಿ ಮಾಡಿಕೊಂಡನು. ಇದರ ಪ್ರಕಾರ ಪೋಪನು ಇಟಲಿಯ ರಾಜ್ಯಕ್ಕೆ ಮನ್ನಣೆ ನೀಡಿದನು. ಪ್ರತಿಯಾಗಿ ಮುಸೋಲಿನಿಯು ವ್ಯಾಟಿಕನ್ ನಗರದ ಸ್ವಾತಂತ್ಯಕ್ಕೆ ಮನ್ಯತೆ ನೀಡಿದನು. ಫ್ಯಾಸಿಸಂ ಮೂಲಕ ಮುಸೋಲಿನಿ ಸುವ್ಯವಸ್ಥೆ ಮತ್ತು ಶಿಸ್ತನ್ನು ಜಾರಿಗೊಳಿಸಿದನು. ವಿದೇಶಿ ವ್ಯಾಪಾರವನ್ನು ಹೆಚ್ಚಿಸಲು ವಿದ್ಯುತ್ ಉತ್ಪಾದನೆಯನ್ನು, ನೈಸರ್ಗಿಕ ಸಂಪತ್ತಿನ ಉಪಯೋಗವನ್ನು ಪ್ರೋತ್ಸಾಹಿಸಿದನು. ಇವನು ಕೃಷಿ ಕ್ಷೇತ್ರವನ್ನು ಸುಧಾರಿಸಿದನು ಮತ್ತು ಇಟಲಿಯಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿದನು. ವ್ಯಾಪಾರ ಮತ್ತು ವಾಣಿಜ್ಯವನ್ನು ಪುನ:ಶ್ಚೇತನಗೊಳಿಸಿದನು. ರೈಲ್ವೆ ಹಾಗೂ ಹಡಗು ನಿರ್ಮಾಣಕ್ಕೆ ಆದ್ಯತೆ ನೀಡಲಾಯಿತು. ಯುದ್ಧವು ಫ್ಯಾಸಿಸ್ಟ್ ಪಕ್ಷದ ಪ್ರಮುಖ ಲಕ್ಷಣವಾಗಿತ್ತು. ಆದುದರಿಂದ ಕಡ್ಡಾಯ ಸೈನಿಕ ಚಟುವಟಿಕೆ ತರಬೇತಿಯನ್ನು ಜಾರಿಗೆ ತರಲಾಯಿತು. ಭೂಸೇನೆ, ನೌಕಾಪಡೆ, ಮತ್ತು ವಾಯುಪಡೆಯನ್ನು ಬಲಿಷ್ಠಗೊಳಿಸಿದನು. ಇದಲ್ಲದೆ ಜನಸಂಖ್ಯೆ ಹೆಚ್ಚಿಸಲು ಇಟಲಿಯಲ್ಲಿ ಹೆಚ್ಚು ಮಕ್ಕಳು ಹೊಂದಿದ ಕುಟುಂಬಕ್ಕೆ ತೆರಿಗೆ ವಿನಾಯ್ತಿ ಮತ್ತು ಉದ್ಯೋಗ ಮೊದಲಾದ ಸೌಲಭ್ಯಗಳನ್ನು ನೀಡಲಾಯಿತು.

ವಿದೇಶಾಂಗ ನೀತಿ:

ಮುಸೋಲಿನಿ ತನ್ನ ಅಧಿಕಾರವನ್ನು ಇಟಲಿಯಲ್ಲಿ ಭದ್ರಗೊಳಿಸಿಕೊಂಡ ಬಳಿಕ ಇಟಲಿ ದೇಶದ ವಿಸ್ತರಣೆಗೆ ಗಮನಹರಿಸಿದನು. ಇದನ್ನು ಸಾಧಿಸಲು, ಇವನು ತೀವ್ರತರ ಮತ್ತು ಆಕ್ರಮಣಶೀಲ ವಿದೇಶಾಂಗನೀತಿ ಅನುಸರಿಸಿದನು. ಮುಸೋಲಿನಿ ಮಹಾತ್ವಾಕ್ಷಾಂಕ್ಷೆಯುಳ್ಳವನಾಗಿದ್ದನು. 'ಇಟಲಿ ವಿಸ್ತರಿಸಲೇಬೇಕು ಇಲ್ಲವೇ ನಾಶ' ಎಂದು ಸಾರ್ವಜನಿಕವಾಗಿ ಘೋಷಿಸಿದನು. ತನ್ನ ಉದ್ದೇಶ ಈಡೇರಿಕೆಗಾಗಿ ಅಬಿಸೀನಿಯಾ, (ಇಥಿಯೋಪಿಯೊ) ವನ್ನು

1935 ರಲ್ಲಿ ರಾಷ್ಟ್ರಸಂಘದ ವಿರೋಧದ ನಡುವೆಯೂ ಆಕ್ರಮಿಸಿಕೊಂಡನು, ಇಂತಹ ಸನ್ನಿವೇಶದಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಯುದ್ಧಕ್ಕೆ ಬರಬಹುದು ಎಂಬ ಭಯದಿಂದ ಮುಸೋಲಿನಿ ಜರ್ಮನಿಯ ಹಿಟ್ಲರ್ ಕಡೆ ಸೇರಿಕೊಂಡನು. 1936ರ ಅಕ್ಟೋಬರ್‌ನಲ್ಲಿ ಇಟಲಿ ಮತ್ತು ಜರ್ಮನಿ ಸೇರಿಕೊಂಡು ಮಾಡಿಕೊಂಡ ಒಪ್ಪಂದವನ್ನು 'ರೋಮ್–ಬರ್ಲಿನ್ ಆಕ್ಸಿಸ್' ಎಂದು ಕರೆಯಲಾಗಿದೆ. 1936 ನವೆಂಬರ್‌ನಲ್ಲಿ ಜರ್ಮನಿ ಜಪಾನ್‌ನೊಂದಿಗೆ ರಷ್ಯಾದ ವಿರುದ್ಧವಾಗಿ ಮಾಡಿಕೊಂಡ ಒಪ್ಪಂದವನ್ನು ಆ್ಯಂಟಿ ಕೊಮಿಂಟರ್ನ್ ಒಪ್ಪಂದ ಎಂದು ಕರೆಯಲಾಗಿದೆ. 1937 ರಲ್ಲಿ ಜಪಾನ್ ಆಕ್ಸಿಸ್‌ರೊಂದಿಗೆ ಸೇರಿಕೊಂಡಾಗ 'ರೋಮ್–ಬರ್ಲಿನ್–ಟೋಕಿಯೋ ಆಕ್ಸಿಸ್' ಆಗಿ ಪರಿವರ್ತನೆಗೊಂಡಿತು.

ಎರಡನೇ ಜಾಗತಿಕ ಯುದ್ಧ ಆರಂಭವಾದ ಮೇಲೆ ಮುಸೋಲಿನಿ ಜರ್ಮನಿಯೊಂದಿಗೆ ಸೇರಿ ಮಿತ್ರ ರಾಷ್ಟ್ರಗಳ ವಿರೋಧವಾಗಿ ಹೋರಾಡಿದನು. ಮಿತ್ರ ರಾಷ್ಟ್ರಗಳು ಉತ್ತರ ಆಫ್ರಿಕಾದಲ್ಲಿದ್ದ ಇಟಲಿಯ ವಸಾಹತುಗಳನ್ನು ವಶಪಡಿಸಿಕೊಂಡವು. ನಂತರ ಮಿತ್ರ ರಾಷ್ಟ್ರಪಡೆಗಳು 1943 ರಲ್ಲಿ ಇಟಲಿಯ ಪ್ರಮುಖ ಪ್ರದೇಶದ ಮೇಲೆ ದಾಳಿ ಮಾಡಿದವು. ಅಂತಿಮವಾಗಿ ಬೆನಿಟೋ ಮುಸೋಲಿನಿ 1945 ರಲ್ಲಿ ಸೆರೆ ಸಿಕ್ಕಿ ಇಟಲಿಯ ಪ್ರಜೆಗಳಿಂದಲೇ ಕೊಲೆಯಾದನು. ಇದರೊಂದಿಗೆ ಇಟಲಿಯಲ್ಲಿ ಫ್ಯಾಸಿಸಂ ಅಂತ್ಯವಾಯಿತು.

ಜರ್ಮನಿಯಲ್ಲಿ ನಾಜಿಸಂ:

ಮೊದಲನೇ ಜಾಗತಿಕ ಯುದ್ಧದಲ್ಲಿ ಜರ್ಮನಿಯು ಸೋಲನ್ನು ಅನುಭವಿಸಿತು. ನಂತರ ಮಿತ್ರ ರಾಷ್ಟ್ರಗಳು ಜರ್ಮನಿಯ ಮೇಲೆ ವರ್ಸೇಲ್ಸ್ ಒಪ್ಪಂದ ಹೇರಿದವು. ಈ ಒಪ್ಪಂದದ ಪ್ರಕಾರ ಜರ್ಮನಿಯು ತನ್ನ ವಸಾಹತುಗಳನ್ನು ಕಳೆದುಕೊಂಡಿತು. ಮಿತ್ರರಾಷ್ಟ್ರಗಳಿಗೆ ಜರ್ಮನಿಯು ಅಪಾರ ಯುದ್ಧವೆಚ್ಚಗಳನ್ನು ನೀಡಬೇಕಾಯಿತು. ಜರ್ಮನಿಯ ನೆಲ ಮತ್ತು ಕೈಗಾರಿಕೆಗಳು ನಾಶವಾದವು. ಇದಾದ ನಂತರ ಜರ್ಮನಿಯಲ್ಲಿ ಹತಾಶೆ, ಅತೃಪ್ತಿ ಪ್ರತೀಕಾರದ ಮನೋಭಾವಗಳು ಹತ್ತಿ ಉರಿಯುತ್ತಿದ್ದವು ಇದೇ ಸಮಯದಲ್ಲಿ ಜರ್ಮನಿ ಆರ್ಥಿಕವಾಗಿ ದಿವಾಳಿಯಾಯಿತು. ನಿರುದ್ಯೋಗ, ಹಸಿವು, ಆಹಾರದ ಅಭಾವ, ಹಣದುಬ್ಬರ ಹಾಗೂ ಹತಾಶೆ ಆ ದಿನಗಳಲ್ಲಿ ಸಾಮಾನ್ಯವಾಗಿದ್ದವು. ಆ ಸಂದರ್ಭದಲ್ಲಿ ಅಡಾಲ್ಫ್ ಹಿಟ್ಲರ್‌ನು ನಾಜಿ ಪಕ್ಷವನ್ನು 1919 ರಲ್ಲಿ ಸ್ಥಾಪಿಸಿದನು.

ಆರಂಭಿಕ ಜೀವನ:

ಅಡಾಲ್ಫ್ ಹಿಟ್ಲರ್‌ನು ಆಸ್ಟ್ರೀಯಾದಲ್ಲಿ 1889 ರಲ್ಲಿ ಜನಿಸಿದನು. ಇವನ ತಂದೆ ಅಲಾಯಿಸ್ ಹಿಟ್ಲರ್ ಮತ್ತು ತಾಯಿ ಕ್ಲಾರಾ. ಅವನೊಬ್ಬ ಸ್ವಶಿಕ್ಷಿತ ವ್ಯಕ್ತಿ ಹಾಗೂ ಮಹಾವಾಗ್ಮಿಯಾಗಿದ್ದನು. ಮೊದಲನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ಹಿಟ್ಲರ್‌ನು ಜರ್ಮನಿ ಸೇನೆಯನ್ನು ಸೇರಿಕೊಂಡು ತನ್ನ ಪರಾಕ್ರಮಕ್ಕಾಗಿ ಕಬ್ಬಿಣದ ಶಿಲುಬೆ (ಐರನ್‌ಕ್ರಾಸ್) ಪ್ರಶಸ್ತಿಯನ್ನು ಪಡೆದುಕೊಂಡನು. ಯುದ್ಧದ ನಂತರ ಅವನು ರಾಜಕೀಯಕ್ಕೆ ಪ್ರವೇಶಿಸಿ 'ರಾಷ್ಟ್ರೀಯ ಸಮಾಜವಾದಿ ಪಕ್ಷ' ಅಂದರೆ ನಾಜಿ ಪಕ್ಷ ಸಂಘಟಿಸಿದನು ಹಾಗೂ ಕಂದುಅಂಗಿಗಳು (Brown Shirts) ಎಂಬ ಸೈನ್ಯವನ್ನು ಸ್ಥಾಪಿಸಿದನು. ಇದರ ಚಿಹ್ನೆ 'ಸ್ವಸ್ತಿಕ್' ಆಗಿತ್ತು. 1923 ರಲ್ಲಿ ಸರ್ಕಾರ ಉರುಳಿಸಲು ಯತ್ನಿಸಿ ವಿಫಲನಾದನು. ನಂತರ 9 ತಿಂಗಳ ಕಾಲ ಸೆರೆಮನೆ ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದನು. ಹಿಟ್ಲರನು ಜೈಲಿನಲ್ಲಿದ್ದಾಗ ಅವನ ಸುಪ್ರಸಿದ್ಧ ಪುಸ್ತಕವಾದ ಮೈನ್‌ಕ್ಯಾಂಫ್ (ನನ್ನ ಹೋರಾಟ) ಪುಸ್ತಕ ಬರೆದನು. ಈ ಪುಸ್ತಕವು ನಾಜಿತತ್ವಗಳನ್ನು ಒಳಗೊಂಡಿತ್ತು. ಜೈಲಿನಿಂದ ಬಿಡುಗಡೆಯಾದ ನಂತರ ನಾಜಿ ಪಕ್ಷವನ್ನು ಪುನರ್ ಸಂಘಟಿಸಿ ಪ್ರಬಲಗೊಳಿಸಿದನು.

ಅಡಾಲ್ಫ್ ಹಿಟ್ಲರ್
(1889–1945)

ನಾಜೀ ಪಕ್ಷ ರೈಖ್‌ಸ್ಟ್ಯಾಗ್‌ಗೆ (ಸಂಸತ್ತು) ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. 1933ರಲ್ಲಿ ಜರ್ಮನಿ ಅಧ್ಯಕ್ಷ ಹಿಂಡನ್‌ಬರ್ಗ್ ಹಿಟ್ಲರ್‌ನನ್ನು ಛಾನ್ಸಲರ್ ಆಗಿ ನೇಮಕ ಮಾಡಿದನು. 1934 ರಲ್ಲಿ ಹಿಂಡನ್‌ಬರ್ಗ್ ಮರಣದ ನಂತರ ಅವನು ಛಾನ್ಸಲರ್ ಮತ್ತು ಅಧ್ಯಕ್ಷ ಪದವಿಗಳನ್ನು ಒಟ್ಟುಗೂಡಿಸಿ ತಾನೇ ಸರ್ವಾಧಿಕಾರಿಯಾದನು.

ನಾಜಿಸಂನ ಪ್ರಮುಖ ಲಕ್ಷಣಗಳೆಂದರೆ

1. ಏಕ ಪಕ್ಷ ಆಡಳಿತ
2. ನಾಜೀಕರಣ
3. ಜನಾಂಗೀಯ ಶ್ರೇಷ್ಠತೆ
4. ಯಹೂದಿ ವಿರೋಧಿ ಮತ್ತು ಧರ್ಮ ವಿರೋಧಿ
5. ರಾಜ್ಯಕ್ಕೆ ಪ್ರಾಮುಖ್ಯತೆ.
6. ಯುದ್ಧದ ವೈಭವೀಕರಣ.

ನಾಜೀಪಕ್ಷವನ್ನು ಏಕ ಮಾತ್ರ ರಾಜಕೀಯ ಪಕ್ಷವನ್ನಾಗಿ ಮಾಡಿದನು. ಹಿಟ್ಲರ್‌ನು ಪತ್ರಿಕಾ ಮತ್ತು ವಾಕ್ ಸ್ವಾತಂತ್ರ್ಯವನ್ನು ನಿಷೇಧಿಸಿದನು. ಕೇಂದ್ರ ಹಾಗೂ ಸ್ಥಳೀಯ ಸರ್ಕಾರಗಳನ್ನು ಕೇಂದ್ರೀಕರಿಸಿ ಎಲ್ಲಾ ಕಾರ್ಮಿಕರನ್ನು ಹಾಗೂ ಯುವಕರನ್ನು ಸಂಘಟಿಸಿದನು. ಮುದ್ರಣ ಮಾಧ್ಯಮಗಳು ಎಲ್ಲಾ ಆರ್ಥಿಕ ಸಂಸ್ಥೆಗಳು, ರಂಗಭೂಮಿ ಮತ್ತು ಸಿನಿಮಾ ಸೇರಿದಂತೆ ದೇಶದ ಎಲ್ಲಾ ಆಯಾಮಗಳನ್ನು ನಿಯಂತ್ರಿಸಿದನು. ದೇಶದೊಳಗಿನ ಪ್ರತಿಯೊಬ್ಬನು ಮತ್ತು ಪ್ರತಿಯೊಂದನ್ನು ನಾಜೀಕರಣಗೊಳಿಸಿದನು.

ಹಿಟ್ಲರ್‌ನು ಒಬ್ಬ ಅವಕಾಶವಾದಿಯಾಗಿದ್ದನು, ಮತ್ತು ಜರ್ಮನಿಯ ಜನಾಂಗೀಯ ಶ್ರೇಷ್ಠತೆಯನ್ನು ಎತ್ತಿ ಹಿಡಿದನು. ಹಿಟ್ಲರ್‌ನ ಪ್ರಕಾರ ಜರ್ಮನರು ಮಾತ್ರ ಯೂರೋಪ್‌ನ್ನು ಆಳಲು ಸಮರ್ಥರು. ಅಲ್ಲದೇ ಜರ್ಮನಿಯ ನಾರ್ಡಿಕ್ (ಆರ್ಯನ್) ಜನಾಂಗ ಜಗತ್ತಿನಲ್ಲಿಯೇ ಶ್ರೇಷ್ಠ ಎಂದು ಹೇಳಿದನು. ಇತರ ಜನಾಂಗದವರಾದ ಯಹೂದಿಗಳು ಹಾಗೂ ಇತರರನ್ನು ದೇಶದಿಂದ ಹೊರಹಾಕಿದನು. ದೇಶಕ್ಕೆ ಆದ ನಷ್ಟಗಳಿಗೆಲ್ಲಾ ಯಹೂದಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಯಿತು ಅವರಿಗೆ ಚಿತ್ರ ಹಿಂಸೆ ನೀಡಿ ಕೊಲ್ಲಲಾಯಿತು. ಹಿಟ್ಲರ್‌ನು ತನ್ನೆಲ್ಲಾ ವಿರೋಧಿಗಳನ್ನು ದಮನಮಾಡಲು 'ಗೆಸ್ಟೆಪೋ' ಎಂಬ ಗುಪ್ತ ಪೋಲೀಸ್ ದಳವನ್ನು ಸಂಘಟಿಸಿದನು. ಯಹೂದಿಗಳನ್ನು ಸಂಪೂರ್ಣವಾಗಿ ನಾಶಮಾಡಲು ಯಾತನಾ ಶಿಬಿರಗಳನ್ನು ನಿರ್ಮಿಸಿದನು. ವಿದ್ಯುತ್‌ಸ್ಪರ್ಶ, ವಿಷ ಅನಿಲ ಕೋಣೆಗಳಲ್ಲಿ ಕೂಡಿಹಾಕುವುದು, ಹಸಿವಿನಿಂದ ನರಳಿಸುವುದು, ಮೊದಲಾದ ಮಾರ್ಗಗಳ ಮೂಲಕ ಸುಮಾರು ಆರು ಮಿಲಿಯನ್ ಯಹೂದಿಗಳನ್ನು ನಿರ್ದಯವಾಗಿ ನಾಜಿ ಜರ್ಮನಿ ಕೊಂದುಹಾಕಿತು. ಎಲ್ಲಾ ಜನಾಂಗಗಳಲ್ಲಿ ಆರ್ಯ ಜನಾಂಗವೇ ಶ್ರೇಷ್ಠವೆಂದು ಪ್ರತಿಪಾದಿಸಿದನು. ಯಹೂದಿಗಳ ಹಕ್ಕುಗಳನ್ನು ದಮನಗೊಳಿಸಲು ಸರ್ಕಾರದ ಎಲ್ಲಾ ಆಯಕಟ್ಟಿನ ಹುದ್ದೆಗಳಿಗೆ ನಾಜೀಗಳನ್ನು ನೇಮಕ ಮಾಡಲು ಉಗ್ರಕ್ರಮ ಕೈಗೊಂಡನು. ಅದೇ ರೀತಿಯಾಗಿ ಕಮ್ಯೂನಿಸ್ಟರನ್ನು ಕೊಂದು ನಿರ್ಮೂಲ ಮಾಡಿದನು. ನಾಜಿಗಳು ಧರ್ಮದ ವಿರೋಧಿಗಳಾಗಿದ್ದರಿಂದ ಅವರು ಕೈಸ್ತ ಧರ್ಮವನ್ನು ಗೌರವಿಸಲಿಲ್ಲ.

ಹಿಟ್ಲರ್ ಹೇಳಿದಂತೆ ವ್ಯಕ್ತಿ ಇರುವುದು ದೇಶಕ್ಕಾಗಿಯೇ ಹೊರತು ದೇಶವಿರುವುದು ವ್ಯಕ್ತಿಗಾಗಿ ಅಲ್ಲ. ವ್ಯಕ್ತಿಯು ರಾಜ್ಯವನ್ನು ವಿರೋಧಿಸಲೇಬಾರದು ಮತ್ತು ದೇಶಕ್ಕಾಗಿ ಎಲ್ಲಾ ರೀತಿಯ ತ್ಯಾಗಕ್ಕೆ ಸಿದ್ಧನಿರಬೇಕು. ಸುಧಾರಣೆಗಳ ಮೂಲಕ ಹಿಟ್ಲರ್‌ನು ಆಡಳಿತವನ್ನು ಪುನರ್ ಸಂಘಟಿಸಿ ಸೇನೆಯನ್ನು ಬಲಗೊಳಿಸಿ, ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧಿಸಿದನು. ದೇಶದ ಆರ್ಥಿಕ ಪ್ರಗತಿ ಸಾಧಿಸುವುದಕ್ಕಾಗಿ ಚತುರ್‌ವಾರ್ಷಿಕ ಯೋಜನೆಯನ್ನು ಆರಂಭಿಸಿದನು. ಎಲ್ಲಾ ಆರ್ಥಿಕ ಕ್ಷೇತ್ರವನ್ನು ರಾಜ್ಯದ ಅಧೀನಕ್ಕೆ ಒಳಪಡಿಸಿದನು. ಕೃಷಿ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿದನು ನಿರುದ್ಯೋಗ ಸಮಸ್ಯೆಗಳನ್ನು ನಿವಾರಿಸಲು ಬೃಹತ್ ಯೋಜನೆಯ ಕಾರ್ಯಕ್ರಮಗಳನ್ನು ಆರಂಭಿಸಿದನು. ಕಡ್ಡಾಯ ಸೈನಿಕ ತರಬೇತಿಯನ್ನೂ ಜಾರಿಗೆ ತಂದನು.

ಬುಚನ್ ವಾಲ್ಡ್ ಯಾತನಾ ಶಿಬಿರ

ಹಿಟ್ಲರನ ಮುಖ್ಯ ಗುರಿ ವರ್ಸೇಲ್ಸ್ ಒಪ್ಪಂದವನ್ನು ಉಲ್ಲಂಘಿಸುವುದಾಗಿತ್ತು. ಈ ಒಪ್ಪಂದ ಜರ್ಮನಿಗೆ ವಿರೋಧವಾಗಿತ್ತು ಮತ್ತು ಅವರ ಸೈನ್ಯವನ್ನು ಬಲಹೀನಗೊಳಿಸಿತ್ತು. ಅಲ್ಲದೇ ಜರ್ಮನಿಯು ಅಪಾರವಾದ ಯುದ್ಧದ ನಷ್ಟ ತುಂಬಿಕೊಡಬೇಕಾಯಿತು. ಇವೆಲ್ಲಾ ಜರ್ಮನ್ನರಲ್ಲಿ ಹತಾಶೆ ಮತ್ತು ಅತೃಪ್ತಿ ಮೂಡಿಸಿತು. ಇಂಥ ಸನ್ನಿವೇಶಗಳನ್ನು ಹಿಟ್ಲರ್‌ನು ತನ್ನ ಹಿತಕ್ಕಾಗಿ ಬಳಸಿಕೊಂಡನು. ವರ್ಸೇಲ್ಸ್ ಒಪ್ಪಂದವನ್ನು ಹರಿದುಹಾಕಲು ಹಿಟ್ಲರ್‌ನು ಅವಕಾಶಕ್ಕಾಗಿ ಕಾಯುತ್ತಿದ್ದನು. ಮೇಲಿನ ಎಲ್ಲಾ ನೀತಿಗಳನ್ನು ಜಾರಿಗೊಳಿಸಲು ಅವನ ಬೆಂಬಲಕ್ಕಾಗಿ ನಿಂತವರೆಂದರೆ ಗೋಬೆಲ್ಸ್, ಗೊಯೆರಿಂಗ್, ರೋಸೇನ್‌ಬರ್ಗ್ ಮತ್ತಿತರರು.

ವಿದೇಶಾಂಗ ನೀತಿ:

ಹಿಟ್ಲರ್‌ನ ಮುಖ್ಯ ಉದ್ದೇಶ ಹೆಚ್ಚು ಹೆಚ್ಚು ಪ್ರದೇಶಗಳನ್ನು ಆಕ್ರಮಿಸಿಕೊಂಡು ತನ್ನ ಎಲ್ಲಾ ಶಕ್ತಿಯನ್ನು ವೃದ್ಧಿಸಿಕೊಂಡು ಜರ್ಮನಿಯನ್ನು ಜಾಗತಿಕ ಶಕ್ತಿಯನ್ನಾಗಿ ಪರಿವರ್ತಿಸುವುದಾಗಿತ್ತು. ಮುಸೋಲಿನಿಯಂತೆ ಹಿಟ್ಲರ್‌ನು ಸಹ ಯುದ್ಧವನ್ನು ವೈಭವೀಕರಿಸಿದನು. ಹಿಟ್ಲರ್‌ನು ಜರ್ಮನಿಯ ಗಡಿಗಳನ್ನು ವಿಸ್ತರಿಸಲು ಆಜ್ಞಾಪಿಸಿ ಆಕ್ರಮಣಶೀಲ ನೀತಿಯನ್ನು ಅನುಸರಿಸಿದನು.

ಹಿಟ್ಲರ್‌ನು ನಿಶಸ್ತ್ರೀಕರಣ ಸಮ್ಮೇಳನದಿಂದ ಹೊರಬಂದು 1933 ರಲ್ಲಿ ರಾಷ್ಟ್ರ ಸಂಘವನ್ನು ತ್ಯಜಿಸಿದನು. ನಾಜಿ ಪಕ್ಷದ ಪ್ರಮುಖ ಗುರಿ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಎಲ್ಲಾ ಜರ್ಮನ್‌ರನ್ನು ಒಗ್ಗೂಡಿಸುವುದು ಮತ್ತು ಹೆಚ್ಚು ಹೆಚ್ಚು ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದಾಗಿತ್ತು. ಜರ್ಮನಿಯ ಪುನರ್‌ಶಸ್ತ್ರೀಕರಣ ಕಾರ್ಯಕ್ರಮ 1935ರಲ್ಲಿ ಆರಂಭವಾಯಿತು. 1936ರಲ್ಲಿ ಜರ್ಮನಿಯ ಸೈನ್ಯ ರೈನ್‌ಲ್ಯಾಂಡ್ ಪ್ರವೇಶಿಸಿ ಅದನ್ನು ವಶಪಡಿಸಿಕೊಂಡಿತು. ನಂತರ ಆಸ್ಟ್ರಿಯಾವನ್ನು ತನ್ನಾದಿಗಿಸಿಕೊಂಡಿತು. ಅಡಾಲ್ಫ್ ಹಿಟ್ಲರ್ 1937 ರಲ್ಲಿ 'ರೋಮ್ – ಬರ್ಲಿನ್ – ಟೋಕಿಯೋ ಆಕ್ಸಿಸ್' ಬಣವನ್ನು ರಚಿಸಿಕೊಂಡ ನಂತರ ಜಕೋಸ್ಲೋವಾಕಿಯ ಮತ್ತು ಪೋಲೆಂಡ್‌ನ ಮೇಲೆ ದಾಳಿ ಮಾಡಿದನು. ಇದರೊಂದಿಗೆ ಎರಡನೇ ಜಾಗತಿಕ ಯುದ್ಧ ಆರಂಭವಾಯಿತು. ಇವನು ಯುರೋಪಿನಲ್ಲಿ ಒಂದರ ನಂತರ ಮತ್ತೊಂದು ದೇಶಗಳನ್ನು ಗೆಲ್ಲುತ್ತಾ ಹೋದನು. ಆದರೂ ಜರ್ಮನ್ನರು ಯುದ್ಧದಲ್ಲಿ ಸೋತು ಮಿತ್ರ ರಾಷ್ಟ್ರ ಪಡೆಗಳಿಗೆ 1945 ರಲ್ಲಿ ಶರಣಾಗತರಾದರು ಹಾಗೂ ಹಿಟ್ಲರ್ ಆತ್ಮಹತ್ಯೆ ಮಾಡಿಕೊಂಡನು. ಇದರೊಂದಿಗೆ ನಾಜಿ ಸರ್ವಾಧಿಕಾರ ಕೊನೆಗೊಂಡಿತು.

10.3 ಎರಡನೇ ಜಾಗತಿಕ ಯುದ್ಧ 1939–1945

ಮೊದಲನೇ ಜಾಗತಿಕ ಯುದ್ಧದ ನಂತರ ಅಂತಾರಾಷ್ಟ್ರೀಯ ಶಾಂತಿ ಮತ್ತು ಸಹಕಾರ ಬೆಳೆಸಲು ರಾಷ್ಟ್ರಸಂಘ ಸ್ಥಾಪನೆಯಾಯಿತು. ಆದರೆ ರಾಷ್ಟ್ರಗಳ ಸಂಘ ತನ್ನ ಎಲ್ಲ ಧ್ಯೇಯ ಮತ್ತು ಉದ್ದೇಶಗಳಿದ್ದಾಗಿಯೂ ಜಗತ್ತಿನಲ್ಲಿ ಯುದ್ಧ ತಡೆಗಟ್ಟುವಲ್ಲಿ ವಿಫಲವಾಯಿತು. 1929 ರಲ್ಲಿ ಆರ್ಥಿಕ ಮಹಾಕುಸಿತದಿಂದಾಗಿ ಅಂತಾರಾಷ್ಟ್ರೀಯ ಪರಿಸ್ಥಿತಿ ಹದಗೆಟ್ಟು ವಿಶ್ವಯುದ್ಧದ ಕಡೆ ವಾಲಿತು. ಜಗತ್ತಿನ ಮತ್ತೊಂದು ಯುದ್ಧ ಅನಿವಾರ್ಯವಾಯಿತು ಮತ್ತು 1939 ರಲ್ಲಿ ಯುದ್ಧ ಆರಂಭವಾಯಿತು. 1939 ರಿಂದ 1945ರ ವರೆಗೆ 6 ವರ್ಷಗಳ ಕಾಲ 2ನೇ ಜಾಗತಿಕ ಯುದ್ಧ ನಡೆಯಿತು. ಆಕ್ಸಿಸ್ ಶಕ್ತಿಗಳಾದ ಜರ್ಮನಿ, ಇಟಲಿ ಮತ್ತು ಜಪಾನ್ ಹಾಗೂ ಅಲೈಡ್ ಶಕ್ತಿಗಳಾದ ಇಂಗ್ಲೆಂಡ್, ಫ್ರಾನ್ಸ್, ಯು.ಎಸ್.ಎಸ್.ಆರ್. ಹಾಗೂ ಯು.ಎಸ್.ಎ.ಗಳ ಮಧ್ಯೆ ನಡೆಯಿತು. ಈ ಯುದ್ಧ ಮೊದಲನೇ ಜಾಗತಿಕ ಯುದ್ಧಕ್ಕಿಂತ ಹೆಚ್ಚು ಭಯಾನಕವಾಗಿತ್ತು. ಮಾನವನ ಇತಿಹಾಸದಲ್ಲಿ ಮೊಟ್ಟಮೊದಲು ಅಣು ಬಾಂಬುಗಳನ್ನು ಪ್ರಯೋಗಿಸಲಾಯಿತು. ಈ ಯುದ್ಧವು ಶತ್ರು ರಾಷ್ಟ್ರಗಳ ಹೀನಾಯ ಸೋಲಿನೊಂದಿಗೆ ಕೊನೆಗೊಂಡಿತು.

ಕಾರಣಗಳು:

1) ವರ್ಸೇಲ್ಸ್ ಒಪ್ಪಂದ :

1919 ರ ವರ್ಸೇಲ್ಸ್ ಒಪ್ಪಂದವು ಜರ್ಮನಿಯನ್ನು ತೀವ್ರವಾಗಿ ಅವಮಾನಗೊಳಿಸಿತು. ಮಿತ್ರ ರಾಷ್ಟ್ರಗಳು ತಮಗೆ ಇಷ್ಟಬಂದಂತೆ ನಡೆಸಿಕೊಂಡಿದ್ದರಿಂದಾಗಿ ಜರ್ಮನ್ನರಿಗೆ ಸಹಿಸಲಾಗಲಿಲ್ಲ. ಮೊದಲನೇ ಜಾಗತಿಕ ಯುದ್ಧದ ಎಲ್ಲ ನಷ್ಟಗಳಿಗೆ ಜರ್ಮನಿಯನ್ನು ಹೊಣೆಗಾರರನ್ನಾಗಿ ಮಾಡಲಾಯಿತು. ಈ ಒಪ್ಪಂದವೇ ಸೇಡಿನಿಂದ ಕೂಡಿದ್ದಾಗಿತ್ತು. ಜರ್ಮನಿಯು ತನ್ನ ವಸಾಹತುಗಳು ಮತ್ತು ಕಲ್ಲಿದ್ದಲು ಗಣಿಗಳನ್ನು ಕಳೆದುಕೊಂಡಿತು. ಜೊತೆಗೆ ಇದರ ಸೈನಿಕಶಕ್ತಿಯನ್ನು ದುರ್ಬಲಗೊಳಿಸಲಾಯಿತು ಮತ್ತು ಯುದ್ಧದ ನಷ್ಟ ತುಂಬಿಕೊಡುವುದು ಸಾಧ್ಯವಾಗಲಿಲ್ಲ. ಜರ್ಮನಿ ಯುದ್ಧ ನಷ್ಟ ಪರಿಹಾರ ತುಂಬಲು ಸಾಧ್ಯವಾಗದಿದ್ದಾಗ ಫ್ರಾನ್ಸ್ ಜರ್ಮನಿಗೆ ಉಳಿದಿದ್ದ ಏಕೈಕ ರ್ಹೂರ್ ಕಣಿವೆಯನ್ನು ವಶಪಡಿಸಿಕೊಳ್ಳಲು ತನ್ನ ಸೈನ್ಯವನ್ನು ಕಳುಹಿಸಿಕೊಟ್ಟಿತು. ಯುದ್ಧದ ನಂತರದ ಆರ್ಥಿಕ ಸಂಕಷ್ಟಗಳು ಹೆಚ್ಚಿನ ಅಸಮಾಧಾನಕ್ಕೆ ಕಾರಣವಾಯಿತು. ಹಾಗಾಗಿ ಜರ್ಮನಿ ವರ್ಸೇಲ್ಸ್ ಒಪ್ಪಂದವನ್ನು ಮುರಿಯುವ ಅವಕಾಶಕ್ಕಾಗಿ ಕಾಯುತ್ತಿತ್ತು. ಹೀಗೆ ವರ್ಸೇಲ್ಸ್ ಒಪ್ಪಂದವು 2ನೇ ಜಾಗತಿಕ ಯುದ್ಧದ ಬೀಜಗಳನ್ನು ಬಿತ್ತಿತು.

2) ಜಪಾನ್ ಮತ್ತು ಇಟಲಿಯ ವಿಸ್ತರಣಾ ನೀತಿ:

ಜಪಾನ್ ಮತ್ತು ಇಟಲಿ ದೇಶಗಳು ಶಾಂತಿ ಒಪ್ಪಂದದಿಂದ ತೃಪ್ತಿಗೊಂಡಿರಲಿಲ್ಲ. ಸರಿಯಾದ ಯುದ್ಧದ ಲಾಭದ ಅಂಶವನ್ನು ಇವುಗಳು ಪಡೆದುಕೊಂಡಿರಲಿಲ್ಲ. ಈ ಎರಡು ರಾಷ್ಟ್ರಗಳು ತಮ್ಮ ಮಿತವಾದ ಸಂಪನ್ಮೂಲಗಳಿಂದ ಬಲವಾದ ಹೊಡೆತವನ್ನು ಅನುಭವಿಸಿದವು. ಹೀಗೆ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ಆಕ್ರಮಣಕಾರಿ ಹಾಗೂ ವಿಸ್ತರಣಾ ನೀತಿಗೆ ವಾಲಿದವು. ಜಪಾನ್ ಮಿತ್ರ ರಾಷ್ಟ್ರಗಳಿಂದ ಹೊರಬಂದು ಜರ್ಮನಿಯೊಂದಿಗೆ ಸೇರಿತು. ಇದರ ಘೋಷಣೆ ಎಂದರೆ 'ಏಷ್ಯಾ ಏಷ್ಯನ್ನರಿಗೆ'. ಪಾಶ್ಚಿಮಾತ್ಯರ ಹಿಡಿತದಿಂದ ಏಷ್ಯಾವನ್ನು ಮುಕ್ತಗೊಳಿಸಲು ನಿರ್ಧರಿಸಿತು. ಜಪಾನ್ ಸಾಮ್ರಾಜ್ಯಶಾಹಿ ನೀತಿಯನ್ನು ಅನುಸರಿಸಿ ಮಂಚೂರಿಯಾ ಮತ್ತು ಚೀನಾವನ್ನು ಗುರಿಯಾಗಿ ಇಟ್ಟುಕೊಂಡು ಬಲಿಷ್ಠ ನೌಕಾಪಡೆಯನ್ನು ಅಭಿವೃದ್ಧಿಗೊಳಿಸಿತು.

3) ಸರ್ವಾಧಿಕಾರಿಗಳ ಏಳಿಗೆ :

ಇಟಲಿಯಲ್ಲಿ ಮುಸಲೋನಿ, ಜರ್ಮನಿಯಲ್ಲಿ ಅಡಾಲ್ಫ್ ಹಿಟ್ಲರ್ ಮತ್ತು ಜಪಾನಿನಲ್ಲಿ ಟೋಜೋ ಅವರ ನೇತೃತ್ವದಲ್ಲಿಯ ಸರ್ವಾಧಿಕಾರದ ಬೆಳವಣಿಗೆಯು ಯುದ್ಧಕ್ಕೆ ಮತ್ತೊಂದು ಕಾರಣವಾಯಿತು. ಅವರೆಲ್ಲರೂ ಯುದ್ಧವನ್ನು ವೈಭವೀಕರಿಸಿದರು. ಮುಸಲೋನಿ ಪ್ರಾಚೀನ ರೋಮಿನ ವೈಭವನನ್ನು ಮರುಸ್ಥಾಪಿಸುವ ಸಲುವಾಗಿ ಇಟಲಿಯಲ್ಲಿ ಸೈನಿಕ ಸಿದ್ಧಾಂತವನ್ನು ಪ್ರತಿಪಾದಿಸಿದನು. ಹಿಟ್ಲರ್‌ನು ಜರ್ಮನಿಯ ಪ್ರಭುತ್ವಕ್ಕಾಗಿ ಮತ್ತು ಸೇಡು ತೀರಿಸಿಕೊಳ್ಳಲು ಸೇನಾ ಪುನರ್‌ನಿರ್ಮಾಣಕ್ಕೆ ಬದ್ಧನಾದನು. ಯುದ್ಧ ಮತ್ತು ಆಕ್ರಮಣದ ಮೂಲಕ ಜರ್ಮನ್ ಜನಾಂಗದ ಶ್ರೇಷ್ಠತೆ ಮತ್ತು ಸಂಸ್ಕೃತಿಯನ್ನು ಪ್ರಚಾರ ಮಾಡುವ ಮಾತುಗಳನ್ನು ಆಡಿದನು. ಜಪಾನ್ ತನ್ನದೇ ಆದ ಸಾಮ್ರಾಜ್ಯವನ್ನು ಬಯಸಿತು. ಮುಂದೆ ಇಟಲಿ, ಜರ್ಮನಿ, ಜಪಾನ್ ಸೇರಿಕೊಂಡು 1937 ರಲ್ಲಿ 'ರೋಂ–ಬರ್ಲಿನ್–ಟೋಕಿಯೋ ಆಕ್ಸಿಸ್' ಒಪ್ಪಂದ ಮಾಡಿಕೊಂಡವು. ಇದು ಜಗತ್ತಿನ ಶಾಂತಿಗೆ ಅಪಾಯ ತಂದೊಡ್ಡಿತು. ನಂತರ ಸೋವಿಯತ್ ಒಕ್ಕೂಟದಲ್ಲಿ ಜೋಸೆಫ್ ಸ್ಟಾಲಿನ್ ನೇತೃತ್ವದಲ್ಲಿ ಸರ್ವಾಧಿಕಾರ ಸ್ಥಾಪನೆಯಾಯಿತು. ಇದು ಹಿಟ್ಲರ್‌ನ ಸರ್ವಾಧಿಕಾರವನ್ನು ಹೋಲುತ್ತಿತ್ತು. ಹಿಟ್ಲರ್‌ನಂತೆಯೇ ಸ್ಟಾಲಿನ್ ಸಹ ತನ್ನ ವಿರೋಧಿಗಳನ್ನು ನಿರ್ದಯವಾಗಿ ಕೊಲೆಗೈದನು.

4) ವಸಾಹತು ಮತ್ತು ವಾಣಿಜ್ಯ ಪೈಪೋಟಿ :

ವಸಾಹತು ಮತ್ತು ವಾಣಿಜ್ಯ ಪೈಪೋಟಿಯು ಎರಡನೇ ಜಾಗತಿಕ ಯುದ್ಧಕ್ಕೆ ಮತ್ತೊಂದು ಕಾರಣವಾಯಿತು. ಇದೊಂದು ರೀತಿಯಲ್ಲಿ ಆರ್ಥಿಕ ರಾಷ್ಟ್ರೀಯತೆಯಾಗಿತ್ತು. ಇದು ಕಚ್ಚಾವಸ್ತುಗಳಿಗಾಗಿ, ಸಿದ್ಧವಸ್ತುಗಳ ಮಾರುಕಟ್ಟೆಗಾಗಿ ಮತ್ತು ಹೆಚ್ಚಿನ ಜನಸಂಖ್ಯೆಗೆ ವಸಾಹತುಗಳಿಗಾಗಿ ನಡೆದ ಹೋರಾಟವಾಗಿತ್ತು. ಮೊದಲನೇ ಜಾಗತಿಕ ಯುದ್ಧದ ನಂತರ ಇಟಲಿ, ಜರ್ಮನಿ ಮತ್ತು ಜಪಾನ್ ರಾಷ್ಟ್ರಗಳು ಅತೃಪ್ತಗೊಂಡಿದ್ದವು. ಈ ರಾಷ್ಟ್ರಗಳಲ್ಲಿ ಸಂಪನ್ಮೂಲಗಳ ಕೊರತೆ ಇತ್ತು. ಇದರ ಜೊತೆಗೆ ಆರ್ಥಿಕ ಮಹಾ ಮುಗ್ಗಟ್ಟು ಈ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮ ಉಂಟುಮಾಡಿತ್ತು. ಕಚ್ಚಾ ಪದಾರ್ಥಗಳ ಕೊರತೆ ಮತ್ತು ಸಿದ್ಧವಸ್ತುಗಳಿಗೆ ಮಾರುಕಟ್ಟೆಗಳ ಅಭಾವ ಉಂಟಾಗಿ ಆರ್ಥಿಕ ದುಸ್ಥಿತಿ ಉಂಟಾಯಿತು. ಇಂತಹ ಪರಿಸ್ಥಿತಿಯಲ್ಲಿ ಇಟಲಿ, ಜರ್ಮನಿ, ಜಪಾನ್‌ಗಳು ಒಂದಾಗಿ ಅತಿ ಉಗ್ರ ಆಕ್ರಮಣಕಾರಿ ನೀತಿ ಅನುಸರಿಸಿದವು.

5. ರಾಷ್ಟ್ರಗಳ ಸಂಘದ ವಿಫಲತೆ :

ರಾಷ್ಟ್ರಗಳ ಸಂಘವು ಬಹಳ ದುರ್ಬಲಗೊಂಡು ಅಸಮರ್ಥವಾಗಿತ್ತು. ರಾಷ್ಟ್ರಗಳ ಸಂಘ ತನ್ನದೇ ಆದ ಯಾವುದೇ ಸೇನೆ ಹೊಂದಿರಲಿಲ್ಲ. ಇದು ಕೆಲವೇ ರಾಷ್ಟ್ರಗಳಾದ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಹಿಡಿತದಲ್ಲಿತ್ತು. ಅಮೇರಿಕಾ ರಾಷ್ಟ್ರಸಂಘದಿಂದ ಹೊರ ಉಳಿದ ಪರಿಣಾಮವಾಗಿ ರಾಷ್ಟ್ರಗಳಸಂಘ ಯುರೋಪಿನಲ್ಲಿ ಶಾಂತಿ ಕಾಪಾಡುವಲ್ಲಿ ವಿಫಲಗೊಂಡಿತು. ಎರಡು ಬಣಗಳ ಮಧ್ಯೆ ವೈರತ್ವ ಹೆಚ್ಚಾದಾಗ ರಾಷ್ಟ್ರಸಂಘ ತಟಸ್ಥವಾಯಿತು. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಜಪಾನ್ ಚೀನಾದ ಮಂಚೂರಿಯಾದ ಮೇಲೆ ದಾಳಿ ಮಾಡಿತು. ಇಟಲಿ, ಅಬಿಸೀನಿಯಾದ ಮೇಲೆ ಮತ್ತು ಜರ್ಮನಿಯು ರೈನ್‌ಲ್ಯಾಂಡ್ ಮತ್ತು ಆಸ್ಟ್ರೀಯಾದ ಮೇಲೆ ದಾಳಿ ಮಾಡಿದವು ಈ ದಾಳಿಗಳನ್ನು ತಡೆಗಟ್ಟುವಲ್ಲಿ ರಾಷ್ಟ್ರಗಳ ಸಂಘ ವಿಫಲವಾಯಿತು ಹಾಗೂ ಶಸ್ತ್ರಾಸ್ತ್ರಗಳ ಪೈಪೋಟಿ ತಡೆಗಟ್ಟಲಾಗಲಿಲ್ಲ. ಇದರಿಂದ ರಾಷ್ಟ್ರಗಳ ಸಂಘ ತನ್ನ ವಿಶ್ವಾಸಾರ್ಹತೆ ಮತ್ತು ತನ್ನ ಗೌರವವನ್ನು ಕಳೆದುಕೊಂಡಿದ್ದು ದುರದೃಷ್ಟಕರವಾಗಿತ್ತು. ದುಃಖಕರ ಸಂಗತಿ ಎಂದರೆ ಈ ಪರಿಸ್ಥಿತಿಯನ್ನು ಸರಿಪಡಿಸಲು ಸಾಧ್ಯವಿದ್ದ ನಾಯಕರು ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ.

6. ಮರು ಶಸ್ತ್ರೀಕರಣ:

1919 ರ ಶಾಂತಿ ಒಪ್ಪಂದವು ಸಂಪೂರ್ಣವಾಗಿ ಜರ್ಮನಿಯನ್ನು ನಿಶಸ್ತ್ರೀಕರಣಗೊಳಿಸಿತು. ಆದರೆ ಹಿಟ್ಲರ್

'ರಾಷ್ಟ್ರದ ಶಕ್ತಿ ಮತ್ತು ಸಾಧನೆಗೆ ಮರುಶಸ್ತ್ರೀಕರಣವೇ ಏಕೈಕ ಮಾರ್ಗ' ಎಂದು ಘೋಷಿಸಿದನು. ಹಿಟ್ಲರನು ನಿಶಸ್ತ್ರೀಕರಣ ಸಮ್ಮೇಳನದಿಂದ ಜರ್ಮನಿಯನ್ನು ಹೊರತಂದು ಮರುಶಸ್ತ್ರೀಕರಣ ಕೈಗೊಂಡನು. ಅಡಾಲ್ಫ್ ಹಿಟ್ಲರನು ತೀವ್ರವಾಗಿ ಸೈನಿಕ ಶಕ್ತಿ ಹೆಚ್ಚಿಸಲು ಆಧುನಿಕ ಶಸ್ತ್ರಾಸ್ತ್ರಗಳು, ಯುದ್ಧದ ನೌಕೆಗಳು, ಯುದ್ಧವಿಮಾನಗಳು, ಜಲಾಂತರ್ಗಾಮಿಗಳ ಸಂಖ್ಯೆಯನ್ನು ಹೆಚ್ಚಿಸಿದನು. ಇಟಲಿ ಮತ್ತು ಜಪಾನ್ ಹಾಗೂ ಇತರರು ಮರುಶಸ್ತ್ರೀಕರಣ ಕೈಗೊಂಡಿದ್ದರಿಂದ ಎರಡನೇ ಜಾಗತಿಕ ಯುದ್ಧಕ್ಕೆ ಎಡೆ ಮಾಡಿತು.

7. ತತ್‌ಕ್ಷಣದ ಕಾರಣ:

1939 ಸೆಪ್ಟೆಂಬರ್ 01 ರಂದು ಹಿಟ್ಲರ್‌ನು ಪೋಲೆಂಡಿನ ಮೇಲೆ ಮಾಡಿದ ಆಕ್ರಮಣವು ಎರಡನೇ ಜಾಗತಿಕ ಯುದ್ಧಕ್ಕೆ ತತ್‌ಕ್ಷಣದ ಕಾರಣವಾಯಿತು. ಪೋಲೆಂಡ್, ಇಂಗ್ಲೆಂಡ್ ಮತ್ತು ಫ್ರಾನ್ಸ್‌ನ ಮಿತ್ರರಾಷ್ಟ್ರವಾಗಿತ್ತು. ಆದ್ದರಿಂದ ಇಂಗ್ಲೆಂಡ್ ಮತ್ತು ಫ್ರಾನ್ಸ್ ಜರ್ಮನಿಯ ಮೇಲೆ ಯುದ್ಧ ಘೋಷಣೆ ಮಾಡಿದವು.

ಚಟುವಟಿಕೆ: ಎರಡನೇ ಜಾಗತಿಕ ಯುದ್ಧದ ದೃಶ್ಯಾವಳಿಗಳ **ಛಾಯಚಿತ್ರಗ**ಳನ್ನು ಸಂಗ್ರಹಿಸುವುದು

ಯುದ್ಧದ ಗತಿ :

ಯುದ್ಧ ಆರಂಭವಾದ ಕೆಲವೇ ತಿಂಗಳುಗಳಲ್ಲಿ ಹಿಟ್ಲರ್‌ನು ಡೆನ್ಮಾರ್ಕ್, ನಾರ್ವೆ, ಹಾಲೆಂಡ್, ಬೆಲ್ಜಿಯಂ ಮತ್ತು ಫ್ರಾನ್ಸ್‌ಗಳನ್ನು ವಶಪಡಿಸಿಕೊಂಡನು. ನಂತರ ಹಿಟ್ಲರ್‌ನು ಇಂಗ್ಲೆಂಡಿನ ಮೇಲೆ ಭಾರಿ ಸ್ಫೋಟಕಗಳು ಹಾಗೂ ಸಬ್‌ಮೆರಿನ್ ಮೂಲಕ ದಾಳಿ ನಡೆಸಿ ಭಯಭೀತಗೊಳಿಸಿದನು. ಭಾರಿ ಪ್ರಮಾಣದ ಬಾಂಬುಗಳನ್ನು ಲಂಡನ್ ಮತ್ತು ಇತರ ನಗರಗಳ ಮೇಲೆ ಹಾಕಿದನು. ಇದನ್ನು ಇಂಗ್ಲೆಂಡ್ ಯಶಸ್ವಿಯಾಗಿ ತಡೆಯಿತು. 1941ರ ಜೂನ್‌ನಲ್ಲಿ ಹಿಟ್ಲರ್ ರಷ್ಯಾದ ಮೇಲೆ ಆಕ್ರಮಣ ಮಾಡಿದನು. ಜರ್ಮನಿ ಸೇನೆ ಮಾಸ್ಕೊ ಮತ್ತು ಲೆನಿನ್‌ಗ್ರಾಡ್‌ಗಳವರೆಗೆ ಮುನ್ನುಗ್ಗಿತು. ಈ ದಾಳಿಯಿಂದ ರಷ್ಯಾವು ಅಪಾರವಾದ ಹಾನಿ ಅನುಭವಿಸಿತು. ಬ್ರಿಟನ್ ರಷ್ಯಾದ ಸಹಾಯಕ್ಕೆ ಧಾವಿಸಿತು. ರಷ್ಯಾವು ಮಿತ್ರರಾಷ್ಟ್ರಗಳ ಜೊತೆಗೆ ಸೇರಿಕೊಂಡಿತು. 1941 ರ ಕೊನೆಯಲ್ಲಿ ಜಪಾನ್ ಹಿಟ್ಲರ್‌ನೊಂದಿಗೆ ಕೈಜೋಡಿಸಿತು. ಡಿಸೆಂಬರ್ 1941 ರಲ್ಲಿ ಜಪಾನ್ ದೇಶವು ಅಮೇರಿಕಾ ಸಂಯುಕ್ತ ಸಂಸ್ಥಾನದ ಶಾಂತಸಾಗರದ ಪರ್ಲ್‌ಹಾರ್ಬರ್ ನೌಕಾನೆಲೆಯ ಮೇಲೆ ದಾಳಿಮಾಡಿತು. ಅಮೇರಿಕನ್ನರ ಅನೇಕ ಹಡುಗುಗಳನ್ನು ಮುಳುಗಿಸಲಾಯಿತು. ಇದು ಅಮೇರಿಕಾ ಮಿತ್ರರಾಷ್ಟ್ರಗಳೊಂದಿಗೆ ಸೇರಲು ಕಾರಣವಾಯಿತು. ಜಪಾನ್, ಹಾಂಕಾಂಗ್, ಫಿಲಿಫೈನ್ಸ್, ಮಲಯ, ಬರ್ಮ ಇತ್ಯಾದಿಗಳನ್ನು ವಶಪಡಿಸಿಕೊಂಡಿತು.

ಪರ್ಲ್ ಹರ್ಬರ್ – ಡಿಸೆಂಬರ್ 1941

ಬ್ರಿಟನ್ ಮತ್ತು ಇಟಲಿ ಸೈನ್ಯಗಳ ಮಧ್ಯೆ 1941–43 ರಲ್ಲಿ ಉತ್ತರ ಆಫ್ರಿಕಾದಲ್ಲಿ ಭಾರಿ ಸೆಣೆಸಾಟ ನಡೆಯಿತು. ಅಂತಿಮವಾಗಿ ಇಟಲಿಯನ್ನರನ್ನು ಲಿಬಿಯಾದಿಂದ ಹೊರಹಾಕಲಾಯಿತು. 1942 ರಲ್ಲಿ ಆಂಗ್ಲೋ–ಅಮೇರಿಕನ್ ಸೇನೆ ಅಲ್ಜಿರಿಯಾ ಮತ್ತು ಟ್ಯೂನಿಸ್‌ಗಳನ್ನು ವಶಪಡಿಸಿಕೊಂಡು ವೈರಿಗಳನ್ನು ಆಫ್ರಿಕಾದಿಂದ ಹೊರಹಾಕಿತು. ನಂತರ ಮಿತ್ರಪಡೆ 1943 ರಲ್ಲಿ ಇಟಲಿಯನ್ನು ವಶಪಡಿಸಿಕೊಂಡಿತು. ಮುಸಲೋನಿ ಜರ್ಮನಿಯಲ್ಲಿ ಆಶ್ರಯಪಡೆದನು. 1943 ರ ಸೆಪ್ಟೆಂಬರ್‌ನಲ್ಲಿ ಇಟಲಿ ಷರತ್ತುರಹಿತವಾಗಿ ಮಿತ್ರ ಕೂಟಕ್ಕೆ ಶರಣಾಯಿತು. ಏಪ್ರಿಲ್ 1945 ರ ಹೊತ್ತಿಗೆ ಮಿತ್ರ ಪಕ್ಷಗಳು ಜರ್ಮನಿಯ ರಾಜಧಾನಿಯಾದ ಬರ್ಲಿನ್ ವಶಪಡಿಸಿಕೊಂಡವು. ಇದೇ ವೇಳೆಗೆ ಮುಸಲೋನಿಯನ್ನು ಹತ್ಯೆಗೈಯಲಾಯಿತು. ಹಾಗೂ ಹಿಟ್ಲರ್‌ನು ಆತ್ಮಹತ್ಯೆ ಮಾಡಿಕೊಂಡನು.

ಇಟಲಿ ಮತ್ತು ಜರ್ಮನಿಗಳು ಶರಣಾದರೂ ಜಪಾನ್ ಯುದ್ಧಮುಂದುವರಿಸಿತು. ಇದೇ ವೇಳೆಗೆ ಅಮೇರಿಕಾದ ಅಧ್ಯಕ್ಷ ಎಫ್.ಡಿ. ರೂಸ್‌ವೆಲ್ಟ್ ಮರಣ ಹೊಂದಿದನು. ಹ್ಯಾರಿ. ಎಸ್. ಟ್ರೂಮನ್ ಅಮೇರಿಕಾದ ಅಧ್ಯಕ್ಷನಾದನು. ಇವನು ಜಪಾನ್ ಮೇಲೆ ಅಣುಬಾಂಬು ದಾಳಿ ಮಾಡಲು ಅಮೇರಿಕಾ ವಾಯುಪಡೆಗೆ ಆದೇಶ ನೀಡಿದನು. ಅದರಂತೆ 'ಲಿಟಲ್‌ಬಾಯ್' ಎಂಬ ಹೆಸರಿನ ಅಣುಬಾಂಬನ್ನು ಜಪಾನಿನ ಕೈಗಾರಿಕಾ ನಗರಗಳಲ್ಲೊಂದಾದ ಹಿರೋಶಿಮಾದ ಮೇಲೆ ಆಗಸ್ಟ್ 06, 1945 ರಂದು ಮತ್ತು ಇನ್ನೊಂದು 'ಫ್ಯಾಟ್‌ಮ್ಯಾನ್' ಎಂಬ ಹೆಸರಿನ ಬಾಂಬ್‌ನ್ನು ನಾಗಸಾಕಿ ಮೇಲೆ ಆಗಸ್ಟ್ 09, 1945 ರಂದು ಹಾಕಲಾಯಿತು. ಇದರಿಂದಾದ ತೀವ್ರ ವಿನಾಶದ ಪರಿಣಾಮವಾಗಿ ಜಪಾನ್ ಯಾವುದೇ ಷರತ್ತುಗಳಿಲ್ಲದೆ ಅಮೇರಿಕಾ ಪಡೆಗಳಿಗೆ ಶರಣಾಯಿತು. ಹೀಗೆ ಅತ್ಯಂತ ಭಯಾನಕವಾದ ಆರು ವರ್ಷಗಳ ರಕ್ತಸಿಕ್ತ ಯುದ್ಧ ಕೊನೆಗೊಂಡಿತು.

ಹಿರೋಶಿಮಾದ (ಜಪಾನ್)ಮೇಲೆ ಹಾಕಿದ ಅಣುಬಾಂಬ್

ಪರಿಣಾಮಗಳು :

1) ಅದುವರೆಗೂ ನಡೆದಿದ್ದ ಜಗತ್ತಿನ ಎಲ್ಲಾ ಯುದ್ಧಗಳಿಗಿಂತ ಎರಡನೇ ಜಾಗತಿಕ ಯುದ್ಧವು ಅತ್ಯಂತ ವಿನಾಶಕಾರಕವಾಗಿತ್ತು. ಈ ಯುದ್ಧದಲ್ಲಿ ಸುಮಾರು 25 ಮಿಲಿಯನ್ ಜನರು ಪ್ರಾಣ ಕಳೆದುಕೊಂಡರು ಮತ್ತು 50 ಮಿಲಿಯನ್ ಜನರು ಅಂಗವಿಕಲರಾದರು. ಮಿಲಿಯನ್‌ಗಟ್ಟಲೆ ಜನರು ಯುದ್ಧದ ನಂತರ ಹಸಿವು ಮತ್ತು ರೋಗಗಳಿಂದ ಮರಣ ಹೊಂದಿದರು. ಅಪಾರ ಸಂಖ್ಯೆಯಲ್ಲಿ ಮನೆ, ಕೈಗಾರಿಕೆಗಳು, ಸಾರಿಗೆ ಮತ್ತು ಸಂಪರ್ಕಗಳ ವ್ಯವಸ್ಥೆಗಳು ಹಾನಿಗೊಂಡವು. ಹೀಗೆ ಕೃಷಿ ಭೂಮಿ ನಾಶ ಹೊಂದಿದ್ದರಿಂದ ಆಹಾರದ ಕೊರತೆ ಆಯಿತು. ಯುದ್ಧದ ನಂತರ ಅನೇಕ ರಾಷ್ಟ್ರಗಳು ಪುನರ್ ನಿರ್ಮಾಣದ ಸಮಸ್ಯೆಗಳನ್ನು ಎದುರಿಸಿದವು.

2) ಇಟಲಿ ಮತ್ತು ಜರ್ಮನಿಯಲ್ಲಿ ಎರಡನೇ ಜಾಗತಿಕ ಯುದ್ಧದ ನಂತರ ಸರ್ವಾಧಿಕಾರ ಅಂತ್ಯವಾಯಿತು. ಬಡೋಗ್ಲಿ ನೇತೃತ್ವದಲ್ಲಿ ಇಟಲಿಯನ್ನು ಗಣರಾಜ್ಯ ಎಂದು ಘೋಷಿಸಲಾಯಿತು. ಫ್ರಾನ್ಸ್, ಬ್ರಿಟನ್, ರಷ್ಯಾ ಮತ್ತು ಅಮೇರಿಕಾ ಅಧೀನದಲ್ಲಿ ಜರ್ಮನಿಯನ್ನು ನಾಲ್ಕು ವಲಯಗಳಾಗಿ ವಿಭಜಿಸಲಾಯಿತು. ನಾಜಿ ಪಕ್ಷದ ನಾಯಕರುಗಳನ್ನು ನ್ಯೂರಂಬರ್ಗ್‌ನಲ್ಲಿ ವಿಚಾರಣೆಗೆ ಒಳಪಡಿಸಲು ನ್ಯಾಯಾಲಯವನ್ನು ಸ್ಥಾಪಿಸಲಾಯಿತು. ಜಪಾನ್ ದೇಶವು ತನ್ನ ಎಲ್ಲಾ ಹಕ್ಕುಗಳನ್ನು ಚೀನಾಕ್ಕೆ ಬಿಟ್ಟುಕೊಟ್ಟಿತು. ಜಪಾನನ್ನು ಮಿತ್ರ ರಾಷ್ಟ್ರಗಳು ವಶಪಡಿಸಿಕೊಂಡವು. (ಯು.ಎಸ್.ಎ)

3) ಈ ಯುದ್ಧದ ನಂತರ ಜಗತ್ತಿನಲ್ಲಿ ಯುರೋಪಿನ ಪ್ರಭುತ್ವ ಕೊನೆಗೊಂಡಿತು. ಎರಡನೇ ಜಾಗತಿಕ ಯುದ್ಧದ ನಂತರ ಯು.ಎಸ್.ಎ. ಮತ್ತು ಯು.ಎಸ್.ಎಸ್.ಆರ್. ಶಕ್ತಿಶಾಲಿ ರಾಷ್ಟ್ರಗಳಾಗಿ ಹೊರಹೊಮ್ಮಿದವು.

4) ಎರಡನೇ ಜಾಗತಿಕ ಯುದ್ಧದ ನಂತರ ಅಮೇರಿಕಾ ಮತ್ತು ರಷ್ಯಾ ಮಧ್ಯೆ ಅಪನಂಬಿಕೆ ಹೆಚ್ಚಾಯಿತು. ಇದು ಶೀತಲ ಸಮರಕ್ಕೆ ನಾಂದಿಯಾಯಿತು. ಈ ಎರಡು ಶಕ್ತಿಗಳ ಸಂಘರ್ಷ 1945 ರಿಂದ ಅಂತಾರಾಷ್ಟ್ರೀಯ ಸಂಬಂಧದ ಪ್ರಮುಖ ಲಕ್ಷಣವಾಗಿತ್ತು. ಇದರ ಪರಿಣಾಮವಾಗಿ ವಿಶ್ವಶಾಂತಿಗೆ ನಿರಂತರವಾಗಿ ಧಕ್ಕೆಯುಂಟಾಯಿತು.

5) ಜಾಗತಿಕ ಯುದ್ಧದ ಪರಿಣಾಮವಾಗಿ ರಾಷ್ಟ್ರೀಯತೆಯ ತತ್ವದ ವಿಜಯ ಮತ್ತು ವಸಾಹತುಶಾಹಿಯ ಅಂತ್ಯವಾಯಿತು. ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾಗಳಲ್ಲಿ ಯುರೋಪಿನ ವಸಾಹತು ಸಾಮ್ರಾಜ್ಯವು

ಕೊನೆಗೊಂಡಿತು. ಯುದ್ಧದ ನಂತರ ಭಾರತ, ಶ್ರೀಲಂಕಾ, ಇಂಡೋನೇಷಿಯ ಮುಂತಾದ ರಾಷ್ಟ್ರಗಳು ಸ್ವತಂತ್ರಗೊಂಡವು.

6) ಜರ್ಮನಿ ಆಳ್ವಿಕೆ ಸಮಯದಲ್ಲಿ ಯಹೂದಿಗಳು ನಿರ್ಗತಿಕರಾಗಿದ್ದರು. ಯಾತನಾ ಶಿಬಿರದಲ್ಲಿ ಸುಮಾರು 6 ಮಿಲಿಯನ್ ಯಹೂದಿಗಳು ನಾಶವಾದರು. ಯುದ್ಧದ ನಂತರ ಅಮೇರಿಕಾ ಸಹಾಯದಿಂದ ಯಹೂದಿಗಳಿಗಾಗಿ ಒಂದು ಹೊಸ ಮೂಲ ನೆಲೆಯನ್ನು (ಇಸ್ರೇಲ್) 1948 ರಲ್ಲಿ ಸ್ಥಾಪಿಸಲಾಯಿತು.

7) ಅಣುಬಾಂಬುಗಳಿಂದ ಜಪಾನ್ ವಿನಾಶಕಾರಿ ಪರಿಣಾಮಗಳನ್ನು ಅನುಭವಿಸಿತು. ಇಡೀ ವಾತಾವರಣ ವಿಷಾವೃತವಾಯಿತು. ಅನೇಕ ನವಜಾತ ಶಿಶುಗಳು ರೋಗರುಜಿನಗಳಿಗೊಳಗಾಗಿ ಅಂಗವಿಕಲರಾದರು.

8) ಎರಡನೇ ಜಾಗತಿಕ ಯುದ್ಧದ ಅತ್ಯಂತ ಪ್ರಮುಖ ಪರಿಣಾಮವೆಂದರೆ ವಿಶ್ವಸಂಸ್ಥೆ ಸ್ಥಾಪನೆ. ಭವಿಷ್ಯತ್ತಿನಲ್ಲಿ ಯುದ್ಧ ತಡೆಗಟ್ಟಿ, ಶಾಂತಿ ಸ್ಥಾಪಿಸುವ ಉದ್ದೇಶದಿಂದ ಈ ಸಂಸ್ಥೆ ಸ್ಥಾಪನೆಯಾಯಿತು.

10.4 ವಿಶ್ವ ಸಂಸ್ಥೆ

ರಾಷ್ಟ್ರಗಳ ಸಂಘದ ಚಿತಾಭಸ್ಮದಿಂದ ವಿಶ್ವ ಸಂಸ್ಥೆಯು ಹುಟ್ಟಿಕೊಂಡಿತು. ರಾಷ್ಟ್ರಗಳ ಸಂಘವು ಯಶಸ್ಸು ಕಾಣದಿದ್ದರೂ ಇದು ಜಗತ್ತಿನ ರಾಜನೀತಿಜ್ಞರಿಗೆ ಮೂರನೇ ಜಾಗತಿಕ ಯುದ್ಧ ತಡೆಯಲು ಸಂಘಟನೆಯೊಂದರ ವಿಚಾರವನ್ನು ನೀಡಿತು. ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು ಜಗತ್ತಿನ ರಾಜನೀತಿಜ್ಞರ ಬಹಳ ಪ್ರಮುಖವಾದ ಆಶಯವಾಗಿತ್ತು.

ಎರಡನೇ ಜಾಗತಿಕ ಯುದ್ಧದಂತಹ ಘೋರ ದುಷ್ಕೃತ್ಯದ ನಂತರ ಅಮೇರಿಕದ ಅಧ್ಯಕ್ಷ ಎಫ್.ಡಿ ರೂಸ್‌ವೆಲ್ಟ್ ಮತ್ತು ಬ್ರಿಟನ್ ಪ್ರಧಾನಿ ಸರ್. ವಿನ್‌ಸ್ಟನ್ ಚರ್ಚಿಲ್ ಇವರು ಯುದ್ಧತಡೆದು ಶಾಂತಿ ಸ್ಥಾಪನೆ ಮಾಡುವಂತಹ ಸಂಘ ಸ್ಥಾಪಿಸಲು ತವಕದಿಂದ ಮುಂದಾದರು. ಇವರು ತಮ್ಮ ಉದ್ದೇಶವನ್ನು ಆಗಸ್ಟ್ 1941 ರಲ್ಲಿ ಅಟ್ಲಾಂಟಿಕ್ ಚಾರ್ಟರ್‌ನಲ್ಲಿ ಘೋಷಿಸಿದರು.

ಅಟ್ಲಾಂಟಿಕ್ ಚಾರ್ಟರ್‌ನ ನಂತರ ಜಗತ್ತಿನ ನಾಯಕರ ಸಭೆಗಳ ಸರಮಾಲೆಗಳೇ ಜರುಗಿದವು. ಯು.ಎಸ್.ಎಸ್.ಆರ್. ಅಧ್ಯಕ್ಷ ಸ್ಟಾಲಿನ್ ನಂತರದ ಅವಧಿಯಲ್ಲಿ ಮಾತುಕತೆಗೆ ಸೇರಿಕೊಂಡನು. ಈ ಎಲ್ಲಾ ಪ್ರಯತ್ನಗಳ ಫಲವಾಗಿ 1945 ಅಕ್ಟೋಬರ್ 24 ರಂದು ವಿಶ್ವಸಂಸ್ಥೆ ಸ್ಥಾಪನೆಯಾಯಿತು. ಅಕ್ಟೋಬರ್ 24 ನ್ನು ಯು.ಎನ್. ದಿನವಾಗಿ ಆಚರಿಸಲಾಗುತ್ತದೆ. ನ್ಯೂಯಾರ್ಕ್ (ಯು.ಎಸ್.ಎ) ಯು.ಎನ್.ಒ.ದ ಕೇಂದ್ರ ಸ್ಥಾನವಾಗಿದೆ. ಆರಂಭದಲ್ಲಿ ಭಾರತವೂ ಸೇರಿ 51 ಸದಸ್ಯ ರಾಷ್ಟ್ರಗಳಿದ್ದವು, 2012 ಕ್ಕೆ 193 ಸದಸ್ಯ ರಾಷ್ಟ್ರಗಳಿವೆ. ಇದು ಇಂಗ್ಲೀಷ್, ಸ್ಪಾನಿಷ್, ಫ್ರೆಂಚ್, ಚೈನೀಸ್, ರಷಿಯನ್ ಮತ್ತು ಅರೇಬಿಕ್ ಭಾಷೆಗಳನ್ನು ತನ್ನ ಆಡಳಿತ ಭಾಷೆಯನ್ನಾಗಿ ಮಾನ್ಯತೆ ಮಾಡಿದೆ.

ವಿಶ್ವ ಸಂಸ್ಥೆ ಗುರಿ ಮತ್ತು ಉದ್ದೇಶಗಳು:

1. ಅಂತಾರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.
2. ಜಗತ್ತಿನ ರಾಷ್ಟ್ರ– ರಾಷ್ಟ್ರಗಳ ನಡುವೆ ಸ್ನೇಹಯುತ ಸಂಬಂಧವನ್ನು ಬೆಳೆಸುವುದು.
3. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ವೈದ್ಯಕೀಯ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಸಹಕಾರ ಏರ್ಪಡಿಸುವುದು.

4. ಅಂತಾರಾಷ್ಟ್ರೀಯ ಮಾನವನ ಮೂಲಭೂತ ಹಕ್ಕುಗಳನ್ನು ರಕ್ಷಿಸುವುದು.
5. ಜನರ ಜೀವನ ಮಟ್ಟವನ್ನು ಸುಧಾರಿಸುವುದು.
6. ಅಂತಾರಾಷ್ಟ್ರೀಯ ಕಾನೂನು ಮತ್ತು ಒಪ್ಪಂದಗಳನ್ನು ಎತ್ತಿ ಹಿಡಿಯುವುದು.

ವಿಶ್ವ ಸಂಸ್ಥೆಯ ಅಂಗ ಸಂಸ್ಥೆಗಳು

ವಿಶ್ವ ಸಂಸ್ಥೆಯು ಆರು ಪ್ರಧಾನ ಅಂಗಗಳ ಮೂಲಕ ಕಾರ್ಯ ನಿರ್ವಹಿಸುತ್ತದೆ. ಅವುಗಳೆಂದರೆ:

1. ಸಾಮಾನ್ಯ ಸಭೆ
2. ಭದ್ರತಾ ಮಂಡಳಿ
3. ಆರ್ಥಿಕ ಮತ್ತು ಸಾಮಾಜಿಕ ಮಂಡಳಿ
4. ಧರ್ಮದರ್ಶಿ ಮಂಡಳಿ
5. ಅಂತಾರಾಷ್ಟ್ರೀಯ ನ್ಯಾಯಾಲಯ
6. ಸಚಿವಾಲಯ

ವಿಶ್ವಸಂಸ್ಥೆಯ ಲಾಂಛನ

1. ಸಾಮಾನ್ಯ ಸಭೆ:

ಸಾಮಾನ್ಯ ಸಭೆ ವಿಶ್ವಸಂಸ್ಥೆಯ ಸಮಾಲೋಚನಾ ಸಭೆಯಾಗಿದೆ. ಇದು ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರವು 5 ಪ್ರತಿನಿಧಿಗಳ ನಿಯೋಗವನ್ನು ಕಳಿಸುವ ಅವಕಾಶ ಹೊಂದಿದ್ದರೂ ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದೇ ಮತವಿದೆ. ಇದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವ ವಿಷಯವನ್ನು ಚರ್ಚಿಸುವ ಅಧಿಕಾರವನ್ನು ಹೊಂದಿದೆ. ಸಾಮಾನ್ಯ ಸಭೆಯು ವರ್ಷದಲ್ಲಿ ಒಂದು ಬಾರಿ ಸೆಪ್ಟೆಂಬರ್‌ನಲ್ಲಿ ಸಭೆ ಸೇರುತ್ತದೆ. ಭದ್ರತಾ ಮಂಡಳಿಯ ಬಹುಸಂಖ್ಯಾತ ಸದಸ್ಯರ ವಿನಂತಿ ಮೇರೆಗೆ ವಿಶೇಷ ಅಧಿವೇಶನ ಕರೆಯಬಹುದಾಗಿದೆ. ಇದರ ನಿರ್ಣಯಗಳಿಗೆ 2/3 ಬಹುಮತ ಬೇಕಾಗುತ್ತದೆ. ಇದು ಪ್ರಧಾನ ಕಾರ್ಯದರ್ಶಿ, ಭದ್ರತಾ ಮಂಡಳಿಯ ತಾತ್ಕಾಲಿಕ ಸದಸ್ಯರು, ಸಾಮಾಜಿಕ ಮತ್ತು ಆರ್ಥಿಕ ಸಮಿತಿಯ ಸದಸ್ಯರನ್ನು ಮತ್ತು ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರನ್ನು ಆಯ್ಕೆಮಾಡುತ್ತದೆ ಮತ್ತು ಆಯವ್ಯಯದ ಪ್ರಶ್ನೆಗಳನ್ನು ಚರ್ಚಿಸುತ್ತದೆ. ಇದು ತನ್ನದೇ ಆದ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಪ್ರತಿ ವರ್ಷ ಆಯ್ಕೆ ಮಾಡುತ್ತದೆ. ಹೊಸ ಸದಸ್ಯ ರಾಷ್ಟ್ರದ ಪ್ರವೇಶಕ್ಕೆ ಸಾಮಾನ್ಯ ಸಭೆಯ 2/3 ಬಹುಮತ ಬೇಕಾಗುತ್ತದೆ.

2. ಭದ್ರತಾ ಮಂಡಳಿ:

ಭದ್ರತಾಮಂಡಳಿಯು ಕಾರ್ಯನಿರ್ವಾಹಕ ಮಂಡಳಿಯಾಗಿದೆ. ಇದರಲ್ಲಿ 15 ಸದಸ್ಯ ರಾಷ್ಟ್ರಗಳಿರುತ್ತವೆ. 5 ಖಾಯಂ ಸದಸ್ಯರು ಮತ್ತು 10 ತಾತ್ಕಾಲಿಕ ಸದಸ್ಯರು. ಖಾಯಂ ಸದಸ್ಯ ರಾಷ್ಟ್ರಗಳೆಂದರೆ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ ಮತ್ತು ಚೀನಾ. 10 ತಾತ್ಕಾಲಿಕ ಸದಸ್ಯ ರಾಷ್ಟ್ರಗಳನ್ನು 2 ವರ್ಷದ ಅವಧಿಗೆ ಆಯ್ಕೆಮಾಡಲಾಗುತ್ತದೆ. ಯಾವುದೇ ನಿರ್ಣಯ ತೆಗೆದುಕೊಳ್ಳಲು ಎಲ್ಲಾ ಖಾಯಂ ಸದಸ್ಯ ರಾಷ್ಟ್ರಗಳನ್ನೊಳಗೊಂಡಂತೆ 9 ಮತಗಳು ಬೇಕಾಗುತ್ತವೆ. ಭದ್ರತಾ ಮಂಡಳಿಯ ಯಾವುದೇ ನಿರ್ಧಾರದ ವಿರುದ್ಧ ಯಾವುದಾದರೂ ಖಾಯಂ ಸದಸ್ಯ

ರಾಷ್ಟ್ರ ವೀಟೋ ಅಧಿಕಾರವನ್ನು ಚಲಾಯಿಸಬಹುದು. 'ವೀಟೋ' ಐದು ಖಾಯಂ ಸದಸ್ಯ ರಾಷ್ಟ್ರಗಳು ಹೊಂದಿರುವ ವಿಶೆಷ ಅಧಿಕಾರ. ಇದರಂತೆ ವಿಶ್ವಸಂಸ್ಥೆಯ ಯಾವುದೇ ನಿರ್ಣಯವನ್ನು ನಿರಾಕರಿಸುವ ಅಧಿಕಾರ ಖಾಯಂ ಸದಸ್ಯ ರಾಷ್ಟ್ರಗಳು ಪಡೆದುಕೊಂಡಿವೆ. ಅತಿಕ್ರಮಣವನ್ನು ತಡೆದು ಅಂತಾರಾಷ್ಟ್ರೀಯಮಟ್ಟದಲ್ಲಿ ಶಾಂತಿ–ಭದ್ರತೆ ಒದಗಿಸುವ ಜವಾಬ್ದಾರಿಯನ್ನು ಭದ್ರತಾ ಮಂಡಳಿ ಹೊಂದಿದೆ.

3. ಆರ್ಥಿಕ ಮತ್ತು ಸಾಮಾಜಿಕ ಮಂಡಳಿ:

ಆರ್ಥಿಕ ಮತ್ತು ಸಾಮಾಜಿಕ ಮಂಡಳಿಯ ಸದಸ್ಯರ ಸಂಖ್ಯೆ 54. ಇವರು ಸಾಮಾನ್ಯ ಸಭೆಯಿಂದ ಚುನಾಯಿತರಾಗಿರುತ್ತಾರೆ. ಇವರ ಅಧಿಕಾರಾವಧಿ 3 ವರ್ಷ. ಮೂರು ವರ್ಷಕ್ಕೊಮ್ಮೆ 1/3 ರಷ್ಟು ಸದಸ್ಯರು ನಿವೃತರಾಗುತ್ತಾರೆ. ಮಂಡಳಿ ವರ್ಷದಲ್ಲಿ ಕನಿಷ್ಠ ಎರಡು ಬಾರಿ ಸಭೆ ಸೇರುತ್ತದೆ. ಜಗತ್ತಿನ ಕ್ಷೇಮಾಭಿವೃದ್ಧಿ ಇದರ ಪ್ರಮುಖ ಕಾರ್ಯವಾಗಿದೆ ಮತ್ತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಮತ್ತಿತರ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಾಗಿದೆ.

4. ಧರ್ಮದರ್ಶಿ ಮಂಡಳಿ:

ಧರ್ಮದರ್ಶಿ ಮಂಡಳಿಯು 14 ಸದಸ್ಯನ್ನೊಳಗೊಂಡಿರುತ್ತದೆ. ಭದ್ರತಾ ಮಂಡಳಿಯ ಎಲ್ಲಾ ಖಾಯಂ ಸದಸ್ಯರು ಧರ್ಮದರ್ಶಿ ಮಂಡಳಿಯ ಸದಸ್ಯರಿರುತ್ತಾರೆ. ಉಸ್ತುವಾರಿ ಪ್ರಾಂತ್ಯಗಳ ಸ್ಥಿತಿಗತಿಗಳನ್ನು ಪರಿಶೀಲಿಸುವುದು ಮತ್ತು ಸಾಮಾನ್ಯ ಸಭೆಗೆ ಸಲಹೆ ನೀಡುವುದು ಇದರ ಕರ್ತವ್ಯವಾಗಿದೆ. ವಾಸ್ತವವಾಗಿ ಜಪಾನ್ ಮತ್ತು ಇಟಲಿಯಿಂದ ಬೇರ್ಪಟ್ಟ ಎಲ್ಲ 11 ಉಸ್ತುವಾರಿ ಪ್ರಾಂತ್ಯಗಳು 1994 ರಲ್ಲಿ ಸ್ವತಂತ್ರವಾದವು. ಇದರ ಫಲವಾಗಿ 1994ರಲ್ಲಿ ಭದ್ರತಾ ಮಂಡಳಿಯು ಇದರ ಎಲ್ಲಾ ಕಾರ್ಯಾಚರಣೆಗಳನ್ನು ಅಮಾನತ್ತುಗೊಳಿಸಿ ಅವಶ್ಯಕತೆಗನುಗುಣವಾಗಿ ಸಭೆ ಸೇರಲು ನಿರ್ಧರಿಸಿತು.

5. ಅಂತಾರಾಷ್ಟ್ರೀಯ ನ್ಯಾಯಾಲಯ

ಅಂತಾರಾಷ್ಟ್ರೀಯ ನ್ಯಾಯಾಲಯವು ನೆದರ್‌ಲ್ಯಾಂಡಿನ ಹೇಗ್ ನಗರದಲ್ಲಿದೆ. ಸಾಮಾನ್ಯ ಸಭೆಯಿಂದ ಆಯ್ಕೆಯಾದ 15 ಜನ ನ್ಯಾಯಾಧೀಶರನ್ನು ಒಳಗೊಂಡಿರುತ್ತದೆ. ಅಂತಾರಾಷ್ಟ್ರೀಯವಿವಾದಗಳನ್ನು ಬಗೆಹರಿಸುವುದು ಇದರ ಮುಖ್ಯ ಕರ್ತವ್ಯವಾಗಿದೆ. ಇದು ಸಲಹಾ ಸಮಿತಿಯಾಗಿಯೂ ಕಾರ್ಯನಿರ್ವಹಿಸುತ್ತದೆ. ಅಂತಾರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಸೇವಾವಧಿ 9 ವರ್ಷಗಳು. ಮರುನೇಮಕಾತಿಗೂ ಅವಕಾಶವಿದೆ. ಆದರೆ ಯಾವುದೇ ದೇಶವು ಏಕಕಾಲಕ್ಕೆ ಒಬ್ಬರಿಗಿಂತ ಹೆಚ್ಚು ನ್ಯಾಯಾಧೀಶರನ್ನು ಪ್ರತಿನಿಧಿಸುವಂತಿಲ್ಲ.

6. ಸಚಿವಾಲಯ

ಸಚಿವಾಲಯದ ಕೇಂದ್ರ ಕಛೇರಿ ನ್ಯೂಯಾರ್ಕ್‌ನಲ್ಲಿದೆ. ಪ್ರಧಾನ ಕಾರ್ಯದರ್ಶಿ ಸಚಿವಾಲಯದ ಮುಖ್ಯಸ್ಥನಾಗಿರುತ್ತಾನೆ. ಅವನ ಕಾರ್ಯಾವಧಿ 5 ವರ್ಷಗಳು. ವಿಶ್ವಸಂಸ್ಥೆಯ ಕಾರ್ಯಚಟುವಟಿಕೆಗಳು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದು, ಸಾಮಾನ್ಯ ಸಭೆಗೆ ವಾರ್ಷಿಕ ವರದಿ ಒಪ್ಪಿಸುವುದು ಪ್ರಧಾನ ಕಾರ್ಯದರ್ಶಿಯ ಕರ್ತವ್ಯವಾಗಿದೆ. ಸಾಮಾನ್ಯ ಸಭೆಯ, ಭದ್ರತಾಸಮಿತಿಯ ಮತ್ತು ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಎಲ್ಲಾ ಸಭೆಗಳಲ್ಲಿಯೂ ಈತನು ಕಾರ್ಯದರ್ಶಿಯಂತೆ ಕೆಲಸ ನಿರ್ವಹಿಸುತ್ತಾನೆ. ನಾರ್ವೆಯ ಟಿಗ್ವಿಲೀಯು ಪ್ರಥಮ ಪ್ರಧಾನ ಕಾರ್ಯದರ್ಶಿಯಾಗಿ 1946 ರಲ್ಲಿ ನೇಮಕವಾಗಿದ್ದನು. ಪ್ರಸ್ತುತ (2012) ಪ್ರಧಾನ ಕಾರ್ಯದರ್ಶಿ ದಕ್ಷಿಣ ಕೊರಿಯಾದ ಬಾನ್–ಕೀ–ಮೂನ್.

ವಿಶ್ವಸಂಸ್ಥೆಯ ಕೇಂದ್ರಕಛೇರಿ – ನ್ಯೂಯಾರ್ಕ್

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳ ಪಟ್ಟಿ			
	ಹೆಸರು	ದೇಶ	ಅವಧಿ
1.	ಟ್ರಗ್ವಿಲೈ	ನಾರ್ವೆ	1946–1953
2.	ಡಾಗ್ ಹ್ಯಾಮರ್‌ಜೋಲ್ಡ್	ಸ್ವೀಡನ್	1953–1961
3.	ಯು ಥಾಂಟ್	ಮೈಯನ್ಮಾರ್ (ಬರ್ಮಾ)	1961–1971
4.	ಕುರ್ಟ್‌ವಾಲ್ಡ್ ಹೀಂ	ಆಸ್ಟ್ರೀಯಾ	1972–1981
5.	ಜೇವಿಯರ್ ಪೆರೆಜ್ ಡಿ. ಕ್ಯೂಲರ್	ಪೆರು	1982–1991
6.	ಬುತ್ರೋಸ್ .ಬುತ್ರೋಸ್ ಘಾಲಿ	ಈಜಿಪ್ಟ್	1992–1997
7.	ಕೋಫಿ ಅನ್ನಾನ್	ಘಾನ	1997–2006
8.	ಬಾನ್–ಕಿ–ಮೂನ್	ದಕ್ಷಿಣ ಕೊರಿಯಾ	2007– –

ಇವುಗಳಲ್ಲದೇ ನಿರ್ದಿಷ್ಟವಾದ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅನೇಕ ವಿಶೇಷ ಅಂಗಸಂಸ್ಥೆಗಳಿವೆ. ಅವುಗಳಲ್ಲಿ ಕೆಲವು ಪ್ರಮುಖವಾದವುಗಳೆಂದರೆ –

1. I L O – ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ. ಕೇಂದ್ರ ಕಛೇರಿ ಸ್ವಿಡ್ಜರ್‌ಲ್ಯಾಂಡಿನ ಜಿನೀವಾದಲ್ಲಿದೆ.
2. FAO – ಆಹಾರ ಮತ್ತು ಕೃಷಿ ಸಂಸ್ಥೆ. ಕೇಂದ್ರ ಕಛೇರಿ ಇಟಲಿಯ ರೋಮ್‌ನಲ್ಲಿದೆ.
3. UNESCO– ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ. ಕೇಂದ್ರ ಕಛೇರಿ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿದೆ.
4. IBRD – ಅಂತಾರಾಷ್ಟ್ರೀಯ ಪುನರ್‌ನಿರ್ಮಾಣ ಮತ್ತು ಅಭಿವೃದ್ಧಿ ಬ್ಯಾಂಕ್–ಕೇಂದ್ರ ಕಛೇರಿ ಅಮೇರಿಕಾದ ವಾಷಿಂಗಟನ್ ಡಿಸಿಯಲ್ಲಿದೆ.
5. IMF – ಅಂತಾರಾಷ್ಟ್ರೀಯ ಹಣಕಾಸು ನಿಧಿ. ಕೇಂದ್ರ ಕಛೇರಿ ವಾಷಿಂಗಟನ್ ಡಿಸಿಯಲ್ಲಿದೆ
6. WHO – ವಿಶ್ವ ಆರೋಗ್ಯ ಸಂಸ್ಥೆ. ಕೇಂದ್ರ ಕಛೇರಿ ಸ್ವಿಡ್ಜರ್‌ಲ್ಯಾಂಡಿನ ಜಿನೀವಾದಲ್ಲಿದೆ.
7. WTO – ವಿಶ್ವ ವಾಣಿಜ್ಯ ಸಂಸ್ಥೆ. ಕೇಂದ್ರ ಕಛೇರಿ ಸ್ವಿಡ್ಜರ್‌ಲ್ಯಾಂಡಿನ ಜಿನೀವಾದಲ್ಲಿದೆ.
8. IAEA – ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ. ಕೇಂದ್ರ ಕಛೇರಿ ಆಸ್ಟ್ರಿಯಾದ ವಿಯೆನ್ನಾದಲ್ಲಿದೆ.

9. UNICEF – ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಮಕ್ಕಳ ತುರ್ತು ನಿಧಿ. ಕೇಂದ್ರ ಕಛೇರಿ ಅಮೇರಿಕಾದ ನ್ಯೂಯಾರ್ಕ್‌ನಲ್ಲಿದೆ.

10. WMO – ವಿಶ್ವ ಹವಾಮಾನ ಸಂಸ್ಥೆ – ಕೇಂದ್ರ ಕಛೇರಿ ಸ್ವಿಡ್ಜರ್‌ಲ್ಯಾಂಡಿನ ಜಿನೀವಾದಲ್ಲಿದೆ.

11. ICAO – ಇಂಟರ್ ನ್ಯಾಶನಲ್ ಸಿವಿಲ್ ಏವಿಯೇಷನ್ ಆರ್ಗನೈಝೇಷನ್– ಕೇಂದ್ರ ಕಛೇರಿ ಕೆನಡಾದ ಮಾಂಟ್ರಿಯಲ್‌ನಲ್ಲಿದೆ.

ಚಟುವಟಿಕೆ: ವಿಶ್ವಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳ ಲಾಂಛನಗಳನ್ನು ಸಂಗ್ರಹಿಸಿ

ವಿಶ್ವಸಂಸ್ಥೆಯ ಸಾಧನೆಗಳು:

ವಿಶ್ವಸಂಸ್ಥೆ ಅನೇಕ ಯಶಸ್ವಿ ಕಾರ್ಯಕ್ರಮಗಳು ಮತ್ತು ಕಾರ್ಯಾಚರಣೆಗಳನ್ನು ಸಾಧಿಸಿದೆ. ವಿಶ್ವಸಂಸ್ಥೆಯ ಸಾಧನೆಗಳನ್ನು ರಾಜಕೀಯ ಹಾಗೂ ರಾಜಕೀಯೇತರ ಎಂಬ ಎರಡು ವಿಭಾಗಗಳನ್ನಾಗಿ ಮಾಡಬಹುದು.

ರಾಜಕೀಯ ಸಾಧನೆಗಳು

ವಿಶ್ವಶಂಸ್ಥೆಯು ರಾಜಕೀಯ ಕೇತ್ರದಲ್ಲಿ ಗಣನೀಯವಾದ ಸಾಧನೆಯನ್ನು ಮಾಡಿದೆ. 1945 ರಿಂದ ಯಾವುದೇ ಜಾಗತಿಕ ಯುದ್ಧವೂ ನಡೆದಿಲ್ಲದಿರುವುದು ಮತ್ತು ಅಣುಬಾಂಬಿನಂತಹ ಮಾರಾಕಾಸ್ತ್ರಗಳನ್ನು ಉಪಯೋಗಿಸಿಲ್ಲ ಎಂಬುದೇ ಅದರ ಅತ್ಯಂತ ಪ್ರಮುಖ ಸಾಧನೆಯಾಗಿದೆ.

* ಇರಾನಿನ ಸಮಸ್ಯೆಯನ್ನು ಬಗೆಹರಿಸಿದ್ದು ವಿಶ್ವ ಸಂಸ್ಥೆಯ ಮೊದಲನೆಯ ಸಾಧನೆಯಾಗಿದೆ. ಎರಡನೇ ಜಾಗತಿಕ ಯುದ್ಧ ಕಾಲಕ್ಕೆ ರಷ್ಯಾದ ಸೇನಾ ತುಕಡಿಗಳು ಇರಾನಿನ ಉತ್ತರದ ಗಡಿರೇಖೆಯಲ್ಲಿ ಉಳಿದಿದ್ದವು. ಯುದ್ಧಾ ನಂತರ ಇರಾನ್ ವಿಶ್ವ ಸಂಸ್ಥೆಗೆ ದೂರು ಸಲ್ಲಿಸಿತು. ಆದ್ದರಿಂದ ವಿಶ್ವಸಂಸ್ಥೆಯು ಮಧ್ಯೆ ಪ್ರವೇಶಿಸಿ ರಷ್ಯಾದ ಸೇನಾ ತುಕಡಿಗಳನ್ನು 1946 ರಲ್ಲಿ ಇರಾನ್‌ನಿಂದ ಹಿಂಪಡೆಯುವಂತೆ ಮಾಡಿತು.
* 1947 ರಲ್ಲಿ ಹಾಲೆಂಡ್ ಮತ್ತು ಇಂಡೋನೇಷ್ಯಾಗಳ ಮಧ್ಯೆ ಇಂಡೋನೇಷಿಯಾದಲ್ಲಿ ಗಲಭೆ ಆರಂಭವಾಯಿತು. ಇದನ್ನು ವಿಶ್ವಸಂಸ್ಥೆ 1948 ರಲ್ಲಿ ಬಗೆಹರಿಸಿತು.
* 1948 ರ ಸೆಪ್ಟೆಂಬರ್ ತಿಂಗಳಿನಲ್ಲಿ ಫ್ರಾನ್ಸ್, ಇಂಗ್ಲೆಂಡ್, ಮತ್ತು ಯು.ಎಸ್.ಎ. ಗಳು ಬರ್ಲಿನ್ ಪ್ರದೇಶದಲ್ಲಿ ಯು.ಎಸ್.ಎಸ್.ಆರ್.ನ ಬರ್ಲಿನ್ ದಿಗ್ಬಂಧನದ ವಿರುದ್ಧ ವಿಶ್ವ ಸಂಸ್ಥೆಗೆ ಮನವಿ ಸಲ್ಲಿಸಿದರು. ಮುಂದೆ ವಿಶ್ವಸಂಸ್ಥೆಯ ಪರಿಶ್ರಮದಿಂದ ಒಪ್ಪಂದ ಏರ್ಪಟ್ಟಿತು.
* 1948 ರಲ್ಲಿ ಪ್ಯಾಲೆಸ್ಟೈನ್‌ನಲ್ಲಿ ಇಸ್ರೇಲಿ ಯಹೂದಿಗಳು ಹಾಗೂ ಅರಬ್ಬರ ಮಧ್ಯದ ಹೋರಾಟವನ್ನು ತಡೆಯಿತು.
* 1948 ರಲ್ಲಿ ಕಾಶ್ಮೀರದಲ್ಲಿ ವಿಶ್ವಸಂಸ್ಥೆಯು ಯುದ್ಧ ವಿರಾಮವನ್ನು ಘೋಷಿಸಿತು.
* ಕೊರಿಯಾ ಬಿಕ್ಕಟ್ಟಿನಲ್ಲಿ ಉತ್ತರ ಮತ್ತು ದಕ್ಷಿಣ ಕೊರಿಯಾಗಳ ಮಧ್ಯೆ ಯುದ್ಧ ಪ್ರಾರಂಭವಾದಾಗ ವಿಶ್ವಸಂಸ್ಥೆಯು ವಿವಾದವನ್ನು ಬಗೆಹರಿಸಲು ಬಲಪ್ರಯೋಗ ಮಾಡಿತು.
* ಸೂಯೆಜ್ ಕಾಲುವೆಯ ಹಾಗೂ ವಿಯೆಟ್ನಾಂ ಸಮಸ್ಯೆಗಳನ್ನು ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಬಗೆಹರಿಸಲಾಯಿತು.

* 1989 ರಲ್ಲಿ ಇರಾನ್ ಮತ್ತು ಇರಾಕ್ ನಡುವಿನ ಯುದ್ಧವನ್ನು ಕೊನೆಗಾಣಿಸಿತು.

* 1990 ರಲ್ಲಿ ಇರಾಕ್ ಕುವೈತ್‌ನ್ನು ಆಕ್ರಮಿಸಿಕೊಂಡಿತು. ತಕ್ಷಣವೇ ಕುವೈತ್ ಅಗತ್ಯಕ್ರಮಕ್ಕಾಗಿ ವಿಶ್ವಸಂಸ್ಥೆ ಮೊರೆಹೊಕ್ಕಿತು. ಇದರಿಂದ 1991 ರಲ್ಲಿ ಇರಾಕ್ ಕುವೈತ್‌ನಿಂದ ಹೊರಬರುವಂತೆ ವಿಶ್ವಸಂಸ್ಥೆ ಮಾಡಿತು.

* ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಶಾಂತಿ ಸ್ಥಾಪಿಸುವಲ್ಲಿ ವಿಶ್ವಸಂಸ್ಥೆ ಕಾರ್ಯನಿರ್ವಹಿಸಿದೆ. ಗ್ರೀಸ್, ಲೆಬನಾನ್, ಸೈಪ್ರಸ್, ಕಾಂಗೋ, ಕಾಂಬೋಡಿಯಾ, ಕೊರಿಯಾ, ಕೊಸೊವೊ ಮುಂತಾದ ರಾಷ್ಟ್ರಗಳಲ್ಲಿ ಶಾಂತಿಪಾಲನಾ ಕಾರ್ಯಚಾರಣೆ ನಡೆಸಿದೆ.

* ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯಿತ್ತು. ಇದನ್ನು ಅರಿತುಕೊಂಡ ವಿಶ್ವ ಸಂಸ್ಥೆಯು ಇದರ ವಿರುದ್ಧ ಒಂದು ವಿಶೇಷ ಸಮಿತಿ ನೇಮಕ ಮಾಡಿ 1954 ರಲ್ಲಿ ನಿಷೇಧವನ್ನು ಹೇರಿತು.

ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇದ ನೀತಿ ಸಮಸ್ಯೆ

ದಕ್ಷಿಣ ಆಫ್ರಿಕಾದಲ್ಲಿ ಸುಮಾರು ಶೇ.80 ರಷ್ಟು ಜನ ಕರಿಯರು (ನೀಗ್ರೊ) ಮತ್ತು ಶೇ.20 ರಷ್ಟು ಜನ ಬಿಳಿಯರಾಗಿದ್ದರು. (ಬ್ರಿಟೀಷರು) ಆದರೆ ಸರ್ಕಾರವನ್ನು ಬಿಳಿಯರೇ ಮುನ್ನೆಡೆಸುತ್ತಿದ್ದರು. ನೀಗ್ರೊಗಳು ತಮ್ಮ ಎಲ್ಲಾ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ಕಳೆದುಕೊಂಡರು. ಇದುವೇ ಬಿಳಿಯರು ಮತ್ತು ಕರಿಯರ ನಡುವಿನ ವರ್ಣಭೇದ ನೀತಿ ಅಥವಾ ಜನಾಂಗೀಯ ತಾರತಮ್ಯ. ಈ ನೀತಿಯು ಹೋಟೆಲ್, ಆಸ್ಪತ್ರೆಗಳಲ್ಲಿ, ಶಾಲಾಕಾಲೇಜುಗಳಲ್ಲಿ, ರೈಲ್ವೆಬೋಗಿಗಳಲ್ಲಿ, ಸಮುದ್ರ ತೀರಗಳಲ್ಲಿ ಮುಂತಾದ ಕಡೆ ಕಾಣಸಿಗುತ್ತಿತ್ತು.

ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ನೆಲ್ಸನ್ ಮಂಡೇಲಾರವರು ಈ ವರ್ಣಭೇದ ನೀತಿಯ ವಿರುದ್ಧ ಚಳುವಳಿಯನ್ನು ಪ್ರಾರಂಭಿಸಿದರು. ಮಂಡೇಲಾರವರನ್ನು 1964 ರಲ್ಲಿ ರಾಬಿನ್ ದ್ವೀಪದಲ್ಲಿ ಬಂಧಿಸಲಾಯಿತು. ವಿಶ್ವಸಂಸ್ಥೆಯ ಹಾಗೂ ಇತರರ ಪ್ರಯತ್ನದಿಂದ ಅವರನ್ನು 27 ವರ್ಷಗಳ ಸೆರೆಮನೆ ವಾಸದ ಬಳಿಕ 1990 ರಲ್ಲಿ ಬಿಡುಗಡೆಗೊಳಿಸಲಾಯಿತು. ನಂತರ ನೆಲ್ಸನ್ ಮಂಡೇಲಾ ರವರ ಅಧ್ಯಕ್ಷತೆಯಲ್ಲಿ ನೀಗ್ರೊಗಳು ಅವರದೇ ಆದ ಸರ್ಕಾರವನ್ನು ರಚಿಸಿದರು.

ರಾಜಕೀಯೇತರ ಸಾಧನೆಗಳು:

* 1948 ರ ಡಿಸೆಂಬರ್ 10 ರಂದು ಮಾನವ ಹಕ್ಕುಗಳ ಘೋಷಣೆಯನ್ನು ಹೊರಡಿಸಿದ್ದು ವಿಶ್ವಸಂಸ್ಥೆಯ ಮಹತ್ತರ ಸಾಧನೆಯಾಗಿದೆ. ಈ ಘೋಷಣೆಯು ಜೀವಿಸುವ ಹಕ್ಕು, ವ್ಯಕ್ತಿ ಸ್ವಾತಂತ್ರ್ಯ ಮತ್ತು ಭದ್ರತೆ, ಗುಲಾಮಗಿರಿಯಿಂದ ಮುಕ್ತಿ, ಆಲೋಚನಾ ಸ್ವಾತಂತ್ರ, ಮತದಾನದ ಹಕ್ಕು, ದುಡಿಯುವ ಹಕ್ಕು ಇತ್ಯಾದಿಗಳನ್ನು ಒಳಗೊಂಡಿದೆ.

* ವಿಶ್ವ ಸಂಸ್ಥೆಯು ತನ್ನ ವಿಶೇಷ ಸಂಸ್ಥೆಗಳ ಮೂಲಕ ಮಹತ್ತರ ಕೆಲಸಗಳನ್ನು ಮಾಡಿದೆ. ILO (ಅಂತಾರಾಷ್ಟ್ರೀಯಕಾರ್ಮಿಕ ಸಂಸ್ಥೆಯ) ಮುಖಾಂತರ ವಿಶ್ವಕಾರ್ಮಿಕರ ಸ್ಥಿತಿಯನ್ನು ಸುಧಾರಿಸಿದೆ.

* FAO – ಆಹಾರ ಉತ್ಪಾದನೆಯನ್ನು ಹೆಚ್ಚಿಸಲು, ಅರಣ್ಯ, ಮೀನುಗಾರಿಕೆ ಮತ್ತು ಪೌಷ್ಟಿಕಾಂಶಗಳ ಹೆಚ್ಚಿಸುವಿಕೆಗೆ ವಿವಿಧ ದೇಶಗಳಿಗೆ ಸಹಾಯ ಮಾಡಿದೆ. ಅಲ್ಲದೆ ಮಿಲಿಯನ್‌ಗಟ್ಟಲೆ ಹಸಿದ ಮಕ್ಕಳಿಗೆ ಆಹಾರವನ್ನು ಒದಗಿಸಲು ಸಹಾಯ ಮಾಡಿದೆ.

* IMF ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು IBRD ಅಂತಾರಾಷ್ಟ್ರೀಯ ಪುನರ್ ನಿರ್ಮಾಣ ಮತ್ತು

ಅಭಿವೃದ್ಧಿ ಬ್ಯಾಂಕ್ ವಿವಿಧ ಹಿಂದುಳಿದ ರಾಷ್ಟ್ರಗಳಿಗೆ ಆರ್ಥಿಕ ಸಹಾಯ ನೀಡುತ್ತಿವೆ.

* UNESCO ಹಿಂದುಳಿದ ದೇಶಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ತಾಂತ್ರಿಕ ಮತ್ತಿತರ ಕ್ಷೇತ್ರಗಳಲ್ಲಿ ಅನೇಕ ಕೆಲಸಗಳನ್ನು ಮಾಡಿದೆ. ವಿಶ್ವಸಂಸ್ಥೆಯು ಯುದ್ಧ, ಭೂಕಂಪ, ಸುನಾಮಿ ನಿರಾಶ್ರಿತರಿಗೆ ಸಹಾಯ ಮಾಡಿದೆ. ಪ್ರಪಂಚದಾದ್ಯಂತ ಯುದ್ಧಗಳಲ್ಲಿ ತೊಂದರೆಗೊಳಗಾದವರಿಗೆ ಆಹಾರ, ವಸತಿ ಮತ್ತು ಪುನರ್ ನಿರ್ಮಾಣಕ್ಕೆ ವ್ಯವಸ್ಥೆ ಮಾಡಿದೆ. ವಿಶ್ವದ ಅನೇಕ ಪಾರಂಪರಿಕ ಕೇಂದ್ರಗಳ ಸಂರಕ್ಷಣೆ ಮಾಡಿದೆ. ಉದಾ: ಹಂಪಿ, ಪಟ್ಟದಕಲ್ಲು, ಕೊನಾರ್ಕ್, ಇತ್ಯಾದಿ.

* UNICEF ಮಕ್ಕಳ ಹಸಿವು ಮತ್ತು ಅಪೌಷ್ಟಿಕತೆಯ ನಿವಾರಣೆಗೆ ಶ್ರಮಿಸುತ್ತಿದೆ. 1959 ರಲ್ಲಿ ಸಾಮಾನ್ಯಸಭೆಯು 'ಶಿಶುವಿನ ಹಕ್ಕು' ಘೋಷಣೆಯನ್ನು ಮಾಡಿತು. ಇದು ಎಲ್ಲಾ ಸಂದರ್ಭಗಳಲ್ಲೂ ರಕ್ಷಣೆ, ಸಾಮಾಜಿಕ ಭದ್ರತೆ, ಆರೋಗ್ಯ, ಶಿಕ್ಷಣ, ಮುಂತಾದವುಗಳ ಬೆಳವಣಿಗೆಗೆ ನಿಗಾವಹಿಸಿ ಪರಿಹಾರ ದೊರಕಿಸಿಕೊಡುತ್ತದೆ.

* WHO ಜನರ ಆರೋಗ್ಯ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಿದೆ. ಮಲೇರಿಯಾ, ಕಾಲರಾ, ಸಿಡುಬು, ಕ್ಷಯರೋಗ, ಕುಷ್ಠರೋಗ, ಪೋಲಿಯೋ ಮುಂತಾದ ರೋಗ–ರುಜಿನಗಳನ್ನು ತಡೆಗಟ್ಟಲು ನಿರಂತರ ಹೋರಾಟ ನಡೆಸುತ್ತಿವೆ. ಕೆಲವು ರೋಗಗಳನ್ನು ಸಂಪೂರ್ಣವಾಗಿ ತೊಲಗಿಸಿವೆ. ಅದು ಮಕ್ಕಳು ಮತ್ತು ದುರ್ಬಲ ಸಾಮಾಜಿಕ ವರ್ಗಗಳ ವಿಶೇಷ ಅಗತ್ಯಗಳನ್ನು ಪೂರೈಸಲು ಸಹಾಯ ಮಾಡಿದೆ

ವಿಶ್ವ ಸಂಸ್ಥೆಯಲ್ಲಿ ಭಾರತೀಯರು

ಆರಂಭದಿಂದಲೂ ಭಾರತೀಯರು ವಿಶ್ವಸಂಸ್ಥೆಯಲ್ಲಿ ಭಾಗವಹಿಸಿದ್ದಾರೆ. ಅನೇಕ ಭಾರತೀಯರು ವಿಶ್ವ ಸಂಸ್ಥೆಯ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ವಿಜಯ ಲಕ್ಷ್ಮಿ ಪಂಡಿತ್ ಸಾಮಾನ್ಯ ಸಭೆಯ ಪ್ರಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದರು. ಜಸ್ಟಿಸ್ ಡಾಕ್ಟರ್ ನಾಗೇಂದ್ರ ಸಿಂಗ್‌ರು ಅಂತಾರಾಷ್ಟ್ರೀಯನ್ಯಾಯಾಲಯದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸರ್ ರಾಮಸ್ವಾಮಿ ಮೊದಲಿಯಾರ್ ಎಕೋಸಾಕ್ (ECOSOC) ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದರು. ಡಾಕ್ಟರ್ ಎಸ್. ರಾಧಾಕೃಷ್ಣನ್ ಯೂನೆಸ್ಕೋದ ಅಧ್ಯಕ್ಷರಾಗಿದ್ದರು ಮತ್ತು ಶಿವರಾವ್‌ರವರು ಧರ್ಮದರ್ಶಿ ಮಂಡಳಿಯ ಅಧ್ಯಕ್ಷರಾಗಿದ್ದರು. ಶಶಿತರೂರ್ ವಿಶ್ವ ಸಂಸ್ಥೆಯ ಅಧೀನ ಕಾರ್ಯದರ್ಶಿಯಾಗಿದ್ದರು.

ಭದ್ರತಾ ಮಂಡಳಿಯ ವಿಸ್ತರಣೆಗೆ ಬೇಡಿಕೆ

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಮೂಲಭೂತವಾಗಿ 11 ಸದಸ್ಯ ಮಂಡಳಿಯಾಗಿದ್ದು, 5 ಖಾಯಂ ಸದಸ್ಯರು ಮತ್ತು 6 ತಾತ್ಕಾಲಿಕ ಸದಸ್ಯರಿದ್ದರು. ವಿಶ್ವಸಂಸ್ಥೆಯ ಸದಸ್ಯರು ಹೆಚ್ಚಾಗಿದ್ದರಿಂದ 1963 ರಲ್ಲಿ 11 ರಿಂದ 15 ಕ್ಕೆ ಹೆಚ್ಚಿಸಲಾಯಿತು. ಆದರೆ ಅಮೇರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ ಮತ್ತು ಚೀನಾಗಳು ಶಾಶ್ವತ ಸದಸ್ಯರಾಗಿ ಮುಂದುವರೆಯಲ್ಪಟ್ಟವು. ಈಗ ವಿಶ್ವಸಂಸ್ಥೆಯಲ್ಲಿ 193 ಸದಸ್ಯರಾಷ್ಟ್ರಗಳಿದ್ದು ಇನ್ನೂ 5 ಹೊಸ ರಾಷ್ಟ್ರಗಳನ್ನು ವಿಶ್ವ ಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರ ಗಳಾಗಿ ಹೆಚ್ಚಿಸುವ ಅವಶ್ಯಕತೆ ಮತ್ತು ಬೇಡಿಕೆ ಇದೆ. ಭಾರತ, ಜಪಾನ್, ನೈಜೀರಿಯಾ, ಬ್ರೆಜಿಲ್ ಮತ್ತು ಜರ್ಮನಿ ರಾಷ್ಟ್ರಗಳು ವಿಶ್ವ ಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರಗಳ ಪ್ರಸ್ತಾವನೆ ಪಟ್ಟಿಯಲ್ಲಿ ಸೇರಿರುತ್ತವೆ. ಭಾರತವು ವೀಟೋ ಅಧಿಕಾರದೊಂದಿಗೆ ಖಾಯಂಸದಸ್ಯತ್ವ ಪಡೆಯಲು ಪ್ರಯತ್ನ ಚುರುಕುಗೊಳಿಸಿದೆ. ಭಾರತದ ಈ ಬೇಡಿಕೆಯನ್ನು ಅಲಿಪ್ತ ರಾಷ್ಟ್ರಗಳು ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳು ಬೆಂಬಲಿಸುವ ಭರವಸೆ ನೀಡಿವೆ. ವಾಸ್ತವದಲ್ಲಿ ಭಾರತವು ಮುಂದುವರೆಯುತ್ತಿರುವ

ರಾಷ್ಟ್ರಗಳ ಅನೇಕ ಸಮಸ್ಯೆಗಳ ನಿವಾರಣೆಗೆ ಮುಂದಾಳತ್ವವಹಿಸಿಕೊಂಡಿದೆ. ಭಾರತವು ಪ್ರಪಂಚದ ಅತೀ ದೊಡ್ಡ ಪ್ರಜಾಪ್ರಭುತ್ವವಿರುವುದರಿಂದ, ಜಗತ್ತಿನ ಎರಡನೇ ಅತೀ ಹೆಚ್ಚು ಜನಸಂಖ್ಯೆಯುಳ್ಳ ಮತ್ತು ಪ್ರಪಂಚದ ಅತ್ಯಂತ ಶೀಘ್ರಗತಿಯಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾಗಿರುವುದರಿಂದ ವಿಶ್ವ ಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರವಾಗಲು ಅರ್ಹತೆ ಹೊಂದಿದೆ.

ವಿಶ್ವ ಸಂಸ್ಥೆಯ ಖಾಯಂ ಸದಸ್ಯ ರಾಷ್ಟ್ರಗಳ ಭದ್ರತಾ ಮಂಡಳಿಯನ್ನು ವಿಸ್ತರಿಸಲು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 2/3 ಬಹುಮತ ಹಾಗೂ 5 ಖಾಯಂ ಸದಸ್ಯ ರಾಷ್ಟ್ರಗಳ ಮತವನ್ನು ಪಡೆಯಬೇಕಾಗುತ್ತದೆ.

ವಿಶ್ವಸಂಸ್ಥೆಯು ಆಚರಿಸುವ ಪ್ರಮುಖ ದಿನಗಳು

27	ಜನವರಿ	–	ವಿನಾಶಕ್ಕೆ ಬಲಿಯಾದವರ ನೆನಪಿನ ಅಂತಾರಾಷ್ಟ್ರೀಯದಿನಾಚರಣೆ
4	ಫೆಬ್ರುವರಿ	–	ವಿಶ್ವ ಕ್ಯಾನ್ಸರ್ ದಿನಾಚರಣೆ
20	ಫೆಬ್ರುವರಿ	–	ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ.
8	ಮಾರ್ಚ್	–	ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
22	ಮಾರ್ಚ್	–	ವಿಶ್ವ ಜಲ ದಿನಾಚರಣೆ
7	ಏಪ್ರಿಲ್	–	ವಿಶ್ವ ಆರೋಗ್ಯ ದಿನಾಚರಣೆ
25	ಏಪ್ರಿಲ್	–	ವಿಶ್ವ ಮಲೇರಿಯ ದಿನಾಚರಣೆ
1	ಮೇ	–	ವಿಶ್ವ ಕಾರ್ಮಿಕರ ದಿನಾಚರಣೆ
3	ಮೇ	–	ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನಾಚರಣೆ
15	ಮೇ	–	ಅಂತಾರಾಷ್ಟ್ರೀಯ ಕುಟುಂಬ ದಿನಾಚರಣೆ
31	ಮೇ	–	ವಿಶ್ವ ತಂಬಾಕು ರಹಿತ ದಿನಾಚರಣೆ
1	ಜೂನ್	–	ವಿಶ್ವ ತಂದೆ ತಾಯಿಗಳ ದಿನಾಚರಣೆ
5	ಜೂನ್	–	ವಿಶ್ವ ಪರಿಸರ ದಿನಾಚರಣೆ
14	ಜೂನ್	–	ವಿಶ್ವ ರಕ್ತ ದಾನಿಗಳ ದಿನಾಚರಣೆ
11	ಜುಲೈ	–	ವಿಶ್ವ ಜನಸಂಖ್ಯಾ ದಿನಾಚರಣೆ
19	ಅಗಸ್ಟ್	–	ವಿಶ್ವ ಮಾನವತಾ ದಿನಾಚರಣೆ
15	ಸೆಪ್ಟೆಂಬರ್	–	ವಿಶ್ವ ಪ್ರಜಾ ಪ್ರಭುತ್ವ ದಿನಾಚರಣೆ
21	ಸೆಪ್ಟೆಂಬರ್	–	ಅಂತಾರಾಷ್ಟ್ರೀಯ ಶಾಂತಿ ದಿನಾಚರಣೆ
27	ಸೆಪ್ಟೆಂಬರ್	–	ವಿಶ್ವ ಪ್ರವಾಸ ದಿನಾಚರಣೆ
2	ಆಕ್ಟೋಬರ್	–	ಅಂತಾರಾಷ್ಟ್ರೀಯ ಅಹಿಂಸಾ ದಿನಾಚರಣೆ
9	ಆಕ್ಟೋಬರ್	–	ವಿಶ್ವ ಅಂಚೆ ದಿನಾಚರಣೆ

24	ಆಕ್ಟೋಬರ್	–	ವಿಶ್ವ ಸಂಸ್ಥೆ ದಿನಾಚರಣೆ
14	ನವೆಂಬರ್	–	ವಿಶ್ವ ಮಧುಮೇಹ ದಿನಾಚರಣೆ
1	ಡಿಸೆಂಬರ್	–	ವಿಶ್ವ ಏಡ್ಸ್ ದಿನಾಚರಣೆ
10	ಡಿಸೆಂಬರ್	–	ವಿಶ್ವ ಮಾನವ ಹಕ್ಕುಗಳ ದಿನಾಚರಣೆ

ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 1 ಅಂಕ)

1. ಮೊದಲ ಜಾಗತಿಕ ಯುದ್ಧ ಯಾವಾಗ ಆರಂಭವಾಯಿತು?
2. ಮೊದಲ ಜಾಗತಿಕ ಯುದ್ಧದ ಸಂದರ್ಭದಲ್ಲಿ ಜರ್ಮನಿಯ ಚಕ್ರವರ್ತಿ ಯಾರಾಗಿದ್ದರು?
3. ಮೊದಲ ಜಾಗತಿಕ ಯುದ್ಧದ ತಕ್ಷಣದ ಕಾರಣ ಯಾವುದು?
4. ಅಮೇರಿಕಾ ದೇಶವು ಮೊದಲ ಜಾಗತಿಕ ಯುದ್ಧದಲ್ಲಿ ಭಾಗವಹಿಸಲು ಕಾರಣವೇನು?
5. ಯಾವ ಸಮ್ಮೇಳನದೊಂದಿಗೆ ಮೊದಲ ಜಾಗತಿಕ ಯುದ್ಧವು ಅಧಿಕೃತವಾಗಿ ಕೊನೆಗೊಂಡಿತು?
6. ಫ್ಯಾಸಿಸ್ಟ್ ಪಕ್ಷದ ಸ್ಥಾಪಕರು ಯಾರು ?
7. 'ಫ್ಯಾಸಿಸಂ' ಪದದ ಅರ್ಥವೇನು?
8. ಮುಸೋಲಿನಿಯು ಪ್ರಕಟಿಸಿದ ಪತ್ರಿಕೆಯನ್ನು ಹೆಸರಿಸಿ.
9. 'ಇಟಲಿ ವಿಸ್ತರಿಸಲೇಬೇಕು ಅಥವಾ ನಾಶ' ಇದು ಯಾರ ಘೋಷಣೆ ?
10. ಅಡಾಲ್ಫ್ ಹಿಟ್ಲರ್ ಎಲ್ಲಿ ಜನಿಸಿದನು ?
11. ನಾಜಿ ಪಕ್ಷದ ಸ್ಥಾಪಕರು ಯಾರು ?
12. ಹಿಟ್ಲರ್ ಬರೆದ ಕೃತಿ ಯಾವುದು ?
13. ಜರ್ಮನಿಯ ಸಂಸತ್ತಿನ ಹೆಸರನ್ನು ತಿಳಿಸಿ.
14. 'ಗೆಸ್ಟಪೋ' ಎಂದರೇನು ?
15. ಎರಡನೇ ಜಾಗತಿಕ ಯುದ್ಧದಲ್ಲಿ ಅಮೇರಿಕಾ ಭಾಗಿಯಾಗಲು ಕಾರಣವೇನು?
16. ಜಪಾನ್‌ನ ಮೇಲೆ ಅಣುಬಾಂಬ್ ಹಾಕಲು ಅಮೇರಿಕಾ ವಾಯುಪಡೆಗೆ ಆಜ್ಞೆ ಮಾಡಿದವರು ಯಾರು?
17. ಯಹೂದಿಗಳಿಗಾಗಿ ಇಸ್ರೇಲ್ ರಾಷ್ಟ್ರ ಯಾವಾಗ ಸ್ಥಾಪಿಸಲ್ಪಟ್ಟಿತು ?
18. ವಿಶ್ವಸಂಸ್ಥೆ ಯಾವಾಗ ಸ್ಥಾಪಿಸಲ್ಪಟ್ಟಿತು ?
19. ಯಾವ ದಿನವನ್ನು ವಿಶ್ವಸಂಸ್ಥೆಯ ದಿನವೆಂದು ಆಚರಿಸಲಾಗುತ್ತದೆ?
20. ವಿಶ್ವಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ.?

21. ವಿಶ್ವಸಂಸ್ಥೆಯಲ್ಲಿ ಇಂದು ಎಷ್ಟು ಸದಸ್ಯ ರಾಷ್ಟ್ರಗಳಿವೆ ?
22. ಅಂತಾರಾಷ್ಟ್ರೀಯ ನ್ಯಾಯಾಲಯವು ಎಲ್ಲಿದೆ?
23. ವಿಶ್ವಸಂಸ್ಥೆಯ ಇಂದಿನ ಪ್ರಧಾನ ಕಾರ್ಯದರ್ಶಿ ಯಾರು ?
24. ವಿಸ್ತರಿಸಿ ಬರೆಯಿರಿ: ECOSOC, ILO, FAO, UNESCO, IBRD, IMF, WHO, WTO (ಯಾವುದಾದರೂ ಒಂದು)

ಕೆಳಗಿನ ಪ್ರಶ್ನೆಗಳಿಗೆ ಎರಡು ಪದಗಳಲ್ಲಿ ಅಥವಾ ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 2 ಅಂಕಗಳು)

1. ಮೊದಲ ಜಾಗತಿಕ ಯುದ್ಧದ ಎರಡು ವೈರಿ ಬಣಗಳನ್ನು ತಿಳಿಸಿ.
2. ಮಿತ್ರರಾಷ್ಟ್ರಗಳು ಜರ್ಮನಿಯೊಂದಿಗೆ ಮಾಡಿಕೊಂಡ ಒಪ್ಪಂದದ ಹೆಸರು ತಿಳಿಸಿ ಹಾಗು ಯಾವಾಗ ಒಪ್ಪಂದ ನಡೆಯಿತು?
3. ಮೊದಲ ಜಾಗತಿಕ ಯುದ್ಧದ ನಂತರ ಪತನಗೊಂಡ ನಾಲ್ಕು ಸಾಮ್ರಾಜ್ಯಗಳನ್ನು ತಿಳಿಸಿ.
4. ರಾಷ್ಟ್ರಗಳ ಸಂಘ ಯಾವ ವರ್ಷ ಸ್ಥಾಪಿಸಲ್ಪಟ್ಟಿತು ? ಇದರ ಕೇಂದ್ರ ಕಛೇರಿ ಎಲ್ಲಿತ್ತು?
5. ಫ್ಯಾಸಿಸ್ಟ್ ಪಕ್ಷದ ಯಾವುದಾದರೂ ಎರಡು ತತ್ವಗಳನ್ನು ಬರೆಯಿರಿ.
6. ನಾಜಿ ಪಕ್ಷದ ಯಾವುದಾದರೂ ಎರಡು ತತ್ವಗಳನ್ನು ಬರೆಯಿರಿ.
7. ಎರಡನೇ ಜಾಗತಿಕ ಯುದ್ಧದ ಎರಡು ಬಣಗಳನ್ನು ತಿಳಿಸಿ.
8. ಆಕ್ಸಿಸ್ ಬಣದ ರಾಷ್ಟ್ರಗಳನ್ನು ಹೆಸರಿಸಿ.
9. ಮಿತ್ರಪಡೆಯ ರಾಷ್ಟ್ರಗಳನ್ನು ಹೆಸರಿಸಿ.
10. ಎರಡನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ಅಣುಬಾಂಬಿನ ಧಾಳಿಗೆ ತುತ್ತಾದ ಜಪಾನಿನ ಎರಡು ನಗರಗಳನ್ನು ಹೆಸರಿಸಿ.
11. ವಿಶ್ವಸಂಸ್ಥೆಯ ಯಾವುದಾದರೂ ಎರಡು ಧ್ಯೇಯೋದ್ದೇಶಗಳನ್ನು ಬರೆಯಿರಿ.
12. ವಿಶ್ವಸಂಸ್ಥೆಯ ಯಾವುದಾದರು ಎರಡು ಅಧಿಕೃತ ಭಾಷೆಗಳನ್ನು ಹೆಸರಿಸಿ.
13. ಭದ್ರತಾ ಮಂಡಳಿಯ ಐದು ಖಾಯಂ ಸದಸ್ಯರಾಷ್ಟ್ರಗಳನ್ನು ಹೆಸರಿಸಿ.
14. ವಿಟೋ ಅಧಿಕಾರ ಎಂದರೇನು?

ಕೆಳಗಿನ ಪ್ರಶ್ನೆಗಳಿಗೆ 15 – 20 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 5 ಅಂಕಗಳು)

1. ಮೊದಲ ಜಾಗತಿಕ ಯುದ್ಧದ ಫಲಿತಾಂಶಗಳನ್ನು ವಿವರಿಸಿ.
2. ವರ್ಸೇಲ್ಸ್ ಒಪ್ಪಂದದ ಮುಖ್ಯಾಂಶಗಳನ್ನು ಬರೆಯಿರಿ.
3. ಮುಸೋಲಿನಿಯ ಸಾಧನೆಗಳನ್ನು ವಿವರಿಸಿ.

4. ನಾಜಿ ಪಕ್ಷದ ಲಕ್ಷಣಗಳನ್ನು ತಿಳಿಸಿ.
5. ಎರಡನೇ ಜಾಗತಿಕ ಯುದ್ಧದ ಪರಿಣಾಮಗಳನ್ನು ತಿಳಿಸಿ.
6. ವಿಶ್ವಸಂಸ್ಥೆಯ ಪ್ರಧಾನ ಅಂಗ ಸಂಸ್ಥೆಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

ಕೆಳಗಿನ ಪ್ರಶ್ನೆಗಳಿಗೆ 30 –40 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 10 ಅಂಕಗಳು)

1. ಮೊದಲ ಜಾಗತಿಕ ಯುದ್ಧದ ಕಾರಣ ಹಾಗು ಪರಿಣಾಮಗಳನ್ನು ವಿವರಿಸಿ.
2. ಎರಡನೇ ಜಾಗತಿಕ ಯುದ್ಧದ ಕಾರಣಗಳು ಹಾಗು ಪರಿಣಾಮಗಳನ್ನು ತಿಳಿಸಿ.
3. ವಿಶ್ವಸಂಸ್ಥೆಯ ರಾಜಕೀಯ ಮತ್ತು ರಾಜಕೀಯೇತರ ಸಾಧನೆಗಳನ್ನು ವಿವರಿಸಿ.

❖ ❖ ❖ ❖ ❖

ಅಧ್ಯಾಯ–11

ಸಮಕಾಲೀನ ಪ್ರಪಂಚ

ಪೀಠಿಕೆ:

'ಸಮಕಾಲೀನ ಇತಿಹಾಸ' ಎನ್ನುವುದು ಎರಡನೇ ಜಾಗತಿಕ ಯುದ್ಧದ ನಂತರದ ಕಾಲಕ್ಕೆ ಅನ್ವಯಿಸುತ್ತದೆ. ಈ ಅವಧಿಯಲ್ಲಿ ಕಂಡು ಬರುವ ಪ್ರಮುಖ ಘಟನಾವಳಿಗಳೆಂದರೆ, ಶೀತಲಯುದ್ಧ, ಸೋವಿಯತ್ ಒಕ್ಕೂಟದ ವಿಭಜನೆ, ಸಿ.ಐ.ಎಸ್.ನ ರಚನೆ, ಕೊರಿಯಾ ಮತ್ತು ವಿಯಟ್ನಾಂ ಯುದ್ಧಗಳು, ಆಫ್ಘಾನ್ ಆಂತರಿಕ ಯುದ್ಧ, ಜಪಾನ್ ಮತ್ತು ದಕ್ಷಿಣಕೊರಿಯಾಗಳಲ್ಲಿ ಅಮೇರಿಕಾದ ಸೈನ್ಯ ಸ್ಥಾಪನೆ, ಅರಬ್–ಇಸ್ರೇಲೀ ಸಂಘರ್ಷ, ಅರಬ್ ಉತ್ಕರ್ಷ, ಭಾರತದ ಸ್ವಾತಂತ್ರ್ಯ, ಆಫ್ರಿಕಾದಲ್ಲಿ ಆಂತರಿಕ ಯುದ್ಧಗಳು, ಚೈನಾ ಗಣತಂತ್ರ ರಚನೆ, ಮುಂತಾದವು. ಪ್ರಸ್ತುತ ಅಧ್ಯಾಯದಲ್ಲಿ ಮುಖ್ಯವಾಗಿ ಶೀತಲಸಮರ, ಸೋವಿಯತ್ ರಷ್ಯಾ ಒಕ್ಕೂಟದ ಪತನ ಮತ್ತು ಸಿ.ಐ.ಎಸ್, ರಚನೆಗಳನ್ನು ಕುರಿತು ಚರ್ಚಿಸಲಾಗಿದೆ.

ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ, ಅದರ ಹಿಂದಿನ ಇತಿಹಾಸಕ್ಕೆ ಹೋಲಿಸಿದರೆ ವಿಶ್ವದಲ್ಲಿ ಹೆಚ್ಚಿನ ತಂತ್ರಜ್ಞಾನದ ಬೆಳವಣಿಗೆಯಾಯಿತು. ಕಂಪ್ಯೂಟರ್, ಇಂಟರ್‌ನೆಟ್, ಮತ್ತಿತರೆ ಆಧುನಿಕ ತಾಂತ್ರಿಕ ಅವಿಷ್ಕಾರಗಳು ದೈನಂದಿನ ಜೀವನದಲ್ಲಿ ತೀವ್ರಗತಿಯ ಬದಲಾವಣೆ ತಂದವು. ಜಾಗತೀಕರಣ ಮತ್ತು ಅಮೇರಿಕಾದ ಪ್ರಭಾವ (ಅಮೇರಿಕೀಕರಣ) ವೃದ್ಧಿಸಿದವು. ಇದರ ಪರಿಣಾಮದಿಂದ ಜಗತ್ತಿನ ಅನೇಕ ಭಾಗಗಳಲ್ಲಿ, ಅದರಲ್ಲೂ ವಿಶೇಷವಾಗಿ ಮಧ್ಯಪ್ರಾಚ್ಯದಲ್ಲಿ, ಪಾಶ್ಚಿಮಾತ್ಯ ಮತ್ತು ಅಮೇರಿಕಾ ವಿರೋಧಿ ಭಾವನೆಗಳು ಬೆಳೆಯುವಂತಾಯಿತು.

ಸಮಕಾಲೀನ ಪ್ರಪಂಚ

ಸಮಕಾಲೀನ ಯುಗದಲ್ಲಿ ಪ್ರಪಂಚವು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಮೊದಲನೆಯದಾಗಿ ಸಂಪತ್ತು ಪಶ್ಚಿಮದ ಕೈಗಾರೀಕೃತ ರಾಷ್ಟ್ರಗಳು ಮತ್ತು ಕೆಲವು ಏಷಿಯಾದ ರಾಷ್ಟ್ರಗಳ ಮಧ್ಯೆ ಕೇಂದ್ರೀಕೃತವಾಗಿದೆ. ತೃತೀಯ ಜಗತ್ತಿನಲ್ಲಿ ವಿಕಸಿತವಾಗುತ್ತಿರುವ ಅರ್ಥ ವ್ಯವಸ್ಥೆಯನ್ನು ಬೃಹತ್ ರಾಷ್ಟ್ರಗಳ ಮತ್ತು ಶ್ರೀಮಂತ ವ್ಯಕ್ತಿಗಳ ಕೈಯಲ್ಲಿ ತೀವ್ರಗತಿಯಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಿದೆ. ಆದಾಗ್ಯೂ ಅಭಿವೃದ್ಧಿಶೀಲ ರಾಷ್ಟ್ರಗಳು ಅನೇಕ ಸವಾಲುಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ, ಉದಾ: ವೇಗವಾಗಿ ಬೆಳೆಯುತ್ತಿರುವ ಜನಸಂಖ್ಯೆ, ಪರಿಸರ ಸಂರಕ್ಷಣೆಯ ಅಗತ್ಯ. ಎರಡನೆಯದಾಗಿ ಪ್ರಪಂಚದ ಅನೇಕ ಪ್ರದೇಶಗಳನ್ನು ಅಸ್ಥಿರಗೊಳಿಸುತ್ತಿರುವ ಕಾಯಿಲೆಗಳು ಉದಾ: ಹೊಸ ವೈರಸ್‌ಗಳಾದ ಸಾರ್ಸ್, ವೆಸ್ಟ್‌ನೈಲ್, ಹಕ್ಕಿಜ್ವರ, ಮತ್ತು ಹೆಚ್.ಐ.ವಿ. ಭಯೋತ್ಪಾದನೆ, ನಿರಂಕುಶಾಧಿಕಾರತ್ವ ಮತ್ತು ಅಣ್ವಸ್ತ್ರಗಳ ಪ್ರಸರಿಸುವಿಕೆ ಇವು ಸಹ ಗಮನ ಸೆಳೆಯುವ ಅಂಶಗಳಾಗಿವೆ.

ಹವಾಮಾನ ಬದಲಾವಣೆ ಮತ್ತು ಭೂಮಿ ತಾಪಮಾನದಲ್ಲಿ ಏರಿಕೆಗಳು ಗಂಭೀರವಾದ ಸಮಸ್ಯೆಗಳಾಗಿವೆ. ಕಳೆದ ಶತಮಾನದಲ್ಲಾದ ಹವಾಮಾನ ಬದಲಾವಣೆಗೆ ಅನೇಕ ಅಂಶಗಳು ಕಾರಣವಾಗಿದ್ದು ಇದರ ಪರಿಣಾಮವಾಗಿ ಭೂಮಿಯ ತಾಪಮಾನ ಏರುತ್ತಲಿದೆ. ಇದರ ಪ್ರಭಾವ ಪ್ರಾಕೃತಿಕ ಪರಿಸರ ಮತ್ತು ಮಾನವ ಜೀವನದ ಮೇಲೂ ಆಗಿದೆ. ಉದಾ: ಹಿಮಗಡ್ಡೆ ಕರಗುವಿಕೆ, ಸಮುದ್ರಮಟ್ಟದಲ್ಲಿ ಏರಿಕೆ, ಮಳೆಹಂಚಿಕೆಯಲ್ಲಿ ವ್ಯತ್ಯಾಸ, ಮುಂತಾದವು, ಏರುತ್ತಿರುವ ಉಷ್ಣತೆಯಿಂದಾಗಿ ಅನೇಕ ಪ್ರದೇಶಗಳಲ್ಲಿ ನೀರಿನ ಕೊರತೆ, ಪರ್ವತದಲ್ಲಿ ಹಿಮಕರಗುವಿಕೆ, ಹಾಗೂ ಆರೋಗ್ಯದ ಮೇಲೆ ದುಷ್ಪ ಪರಿಣಾಮಗಳು ಉಂಟಾಗಿದೆ. ಇತ್ತೀಚಿನ ಬೆಳವಣಿಗೆಗಳು ಮತ್ತು ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲುಂಟಾದ ಬದಲಾವಣೆಗಳಲ್ಲಿ ಸಮ್ಮಿಳಿತವಾಗಿರುವುದರಿಂದ ಭವಿಷ್ಯದಲ್ಲಿ ಅನೇಕ ಪರಿಣಾಮಗಳನ್ನುಂಟು ಮಾಡಬಹುದಾಗಿದೆ.

ಮಧ್ಯಪ್ರಾಚ್ಯ :

ಮೆಡಿಟರೇನಿಯನ್ ತೀರಪ್ರದೇಶ ಮತ್ತು ಭಾರತ ಹಾಗೂ ಪಾಕಿಸ್ತಾನಗಳ ವಾಯುವ್ಯ ಗಡಿಭಾಗಗಳ ನಡುವಿನ ಪ್ರದೇಶವನ್ನು ಮಧ್ಯಪ್ರಾಚ್ಯವೆಂದು ಪರಿಗಣಿಸಲಾಗಿದೆ. ಟರ್ಕಿ, ಈಜಿಪ್ಟ್, ಪ್ಯಾಲೆಸ್ಟೈನ್, ಇರಾನ್, ಸೌದಿ ಅರೇಬಿಯ, ಇರಾಕ್ ಮತ್ತು ಜೋರ್ಡಾನ್ ದೇಶಗಳು ಈ ಪ್ರದೇಶದ ಮುಖ್ಯ ದೇಶಗಳಾಗಿವೆ.

ಪಶ್ಚಿಮ ಏಷ್ಯಾ :

ಇಸ್ರೇಲ್ ಒಳಗೊಂಡಂತೆ ಸಿರಿಯಾದಿಂದ ಈಜಿಪ್ಟ್‌ವರೆಗೆ ವಿಸ್ತರಿಸಿರುವ ಅರಬ್‌ದೇಶಗಳನ್ನು ಒಟ್ಟಾಗಿ ಪಶ್ಚಿಮ ಏಷ್ಯಾ ಎಂದು ಕರೆಯಲಾಗಿದೆ.

11.1 ಶೀತಲ ಸಮರ (1945–1991)

ಅರ್ಥ:

'ಶೀತಲ ಸಮರ' ಎನ್ನುವ ಪದ ಪ್ರಪಂಚದ ಎರಡನೇ ಜಾಗತಿಕ ಯುದ್ಧದ ನಂತರ ಬಳಕೆಗೆ ಬಂದಿದೆ. ಅಮೇರಿಕಾ ನೇತೃತ್ವದ ಪಾಶ್ಚಿಮಾತ್ಯ ದೇಶಗಳು ಮತ್ತು ಸೋವಿಯತ್ ಒಕ್ಕೂಟ ನೇತೃತ್ವದ ಕಮ್ಯೂನಿಸ್ಟ್ ಶಕ್ತಿಗಳ ನಡುವೆ ಉಂಟಾದ ರಾಜಕೀಯ ಮತ್ತು ಸೈನಿಕ ಸಂಘರ್ಷದಿಂದಾಗಿ ಶೀತಲ ಸಮರ ಬೆಳೆಯಿತು.

ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ಒಕ್ಕೂಟ ಪರಸ್ಪರ ಪೈಪೋಟಿ ನಡೆಸಿ ಪ್ರಪಂಚದ ಎರಡು ಮಹಾಶಕ್ತಿಗಳಾಗಿ ಹೊರಹೊಮ್ಮಿದವು. ಈ ಎರಡು ದೇಶಗಳ ಶತ್ರುತ್ವದಿಂದ ಬಿಗುವಿನ ವಾತಾವಾರಣ ಉಂಟಾಯಿತು, ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಉಂಟಾದ ಈ ಬೆಳವಣಿಗೆಯನ್ನು 'ಶೀತಲ ಸಮರ' ಎಂದು ಉಲ್ಲೇಖಿಸಲಾಗಿದೆ. ಇದು ಯುದ್ಧವೂ ಅಲ್ಲದ ಶಾಂತಿಯೂ ಅಲ್ಲದ ಪರಿಸ್ಥಿತಿಯಾಗಿತ್ತು.

ಎರಡನೇ ಜಾಗತಿಕ ಯುದ್ಧದ ಅಂತ್ಯದಲ್ಲಿ ಆಂಗ್ಲಲೇಖಕ ಹಾಗೂ ಪತ್ರಕರ್ತ ಜಾರ್ಜ್ ಆರ್ವೆಲ್ 1945ರಲ್ಲಿ ಪ್ರಕಟಿಸಿದ 'ಯು ಅಂಡ್ ದಿ ಆಟಂಬಾಂಬ್' ಎಂಬ ತನ್ನ ಪ್ರಬಂಧವೊಂದರಲ್ಲಿ 'ಶೀತಲ ಸಮರ' ಎಂಬ ಪದವನ್ನು ಸಾಮಾನ್ಯ ಶಬ್ದವಾಗಿ ಬಳಸಿದ. ಅಮೇರಿಕಾದ ರಾಜನೀತಜ್ಞನಾದ ಬರ್ನಾರ್ಡ್ ಬಾರುಚ್ 1947 ರಲ್ಲಿ 'ಶೀತಲ ಸಮರ' ಎಂಬ ಪದವನ್ನು ನಿರ್ದಿಷ್ಟ ಅರ್ಥದಲ್ಲಿ ಮೊಟ್ಟಮೊದಲು ಬಳಸಿದನು. ಎರಡು ಬಣಗಳಾಗಿ ಒಡೆದ ಪ್ರಪಂಚವನ್ನು ಇನ್ನೂ ಯುದ್ಧದ ಕರಿನೆರಳಿನಲ್ಲಿಯೇ ಇರುವ ಪ್ರಪಂಚ ಎಂದು ಫ್ರೈಡ್‌ಮನ್ ಹೇಳಿದ. ಹೀಗಾಗಿ ಶೀತಲ ಸಮರ ಎನ್ನುವುದು ಶಸ್ತ್ರಾಸ್ತ್ರ ಯುದ್ಧವಾಗಿರದೆ ಪ್ರಚಾರ ಸಮರ ಹಾಗೂ ಅಸಹಜ ಶಾಂತಿಯ ಯುಗವೆಂದೂ ಕರೆಯಲ್ಪಟ್ಟಿದೆ.

ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು:

ಶೀತಲ ಸಮರದ ಅವಧಿಯಲ್ಲಿ ವಿಶ್ವ ನಾಯಕತ್ವಕ್ಕಾಗಿ ಎರಡು ಪ್ರತಿಸ್ಪರ್ಧಿ ರಾಜಕೀಯ, ಶಕ್ತಿಗಳ ನಡುವೆ ಸಂಘರ್ಷ ನಡೆದಿರುವುದು ಕಂಡು ಬರುತ್ತದೆ. ಪ್ರಪಂಚದ ಅನೇಕ ರಾಷ್ಟ್ರಗಳು ಅಮೇರಿಕಾ ಇಲ್ಲವೇ ರಷ್ಯಾದ ಒಕ್ಕೂಟವನ್ನು ಸೇರಿದ್ದು, ಇದು ಕೇವಲ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವಿನ ಸಂಘರ್ಷವಾಗದೆ, ಇಡೀ ವಿಶ್ವವನ್ನೆ ವ್ಯಾಪಿಸಿತು. ಇದರಿಂದಾಗಿ ಶೀತಲಸಮರದ ರಾಜಕೀಯವು ಮಹಾಶಕ್ತಿಗಳ ಪ್ರಭಾವದ ವಲಯವನ್ನು ವಿಸ್ತರಿಸುವ ಉದ್ದೇಶ ಹೊಂದಿದ್ದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಮಹಾಶಕ್ತಿಗಳು ಪ್ರಚಾರತಂತ್ರ, ಬೇಹುಗಾರಿಕೆ ಮತ್ತು ಸೈನಿಕ ಒಕ್ಕೂಟಗಳನ್ನು ಬಳಸಿ ಪರಸ್ಪರರನ್ನು ದುರ್ಬಲಗೊಳಿಸುವ ಮತ್ತು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಮಾಡಿದವು.

ಶೀತಲ ಸಮರದ ಕಾರಣಗಳು

ಎರಡನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ಸೋವಿಯತ್ ಒಕ್ಕೂಟವು ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾ ಸಂಯುಕ್ತ ಸಂಸ್ಥಾನಗಳನ್ನೊಳಗೊಂಡ ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಸೇರಿಕೊಂಡು ಜರ್ಮನಿ ಮತ್ತು ಅದರ ಮಿತ್ರರಾಷ್ಟ್ರಗಳ ವಿರುದ್ಧ ಹೋರಾಟ ನಡೆಸಿತು. ಆದರೆ ಯುದ್ಧದ ನಂತರ ರಷ್ಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ನಡುವೆ ಪರಸ್ಪರ ಅಪನಂಬಿಕೆ, ಅನುಮಾನಗಳು ಬೆಳೆದವು.

ಶೀತಲ ಸಮರಕ್ಕೆ ಕಾರಣಗಳು ಈ ಕೆಳಕಂಡಂತಿವೆ.

(1) ಇರಾನ್‌ನಿಂದ ಸೈನ್ಯ ಹಿಂತೆಗೆದುಕೊಳ್ಳಲು ರಷ್ಯಾದ ನಿರಾಕರಣೆ :

ಎರಡನೇ ಜಾಗತಿಕ ಯುದ್ಧದ ನಂತರ ಬ್ರಿಟನ್ ಮತ್ತು ಅಮೇರಿಕಾಗಳು ಇರಾನ್‌ನಲ್ಲಿದ್ದ ತಮ್ಮ ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಂಡವು, ಆದರೆ ರಷ್ಯಾ ತನ್ನ ಸೈನ್ಯವನ್ನು ಕರೆಸಿಕೊಳ್ಳಲು ನಿರಾಕರಿಸಿತು. ಕೊನೆಗೆ ವಿಶ್ವಸಂಸ್ಥೆಯ ಮಧ್ಯ ಪ್ರವೇಶದ ನಂತರ ರಷ್ಯಾ ತನ್ನ ಸೈನ್ಯವನ್ನು ಹಿಂತೆಗೆದುಕೊಂಡಿತು. ಇದರಿಂದಾಗಿ ರಷ್ಯಾದ ಒಕ್ಕೂಟ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ನಡುವಿನ ಸಂಬಂಧ ಕಹಿಯಾಯಿತು.

(2) ಪೌರಾತ್ಯ ಯೂರೋಪಿನ ಸೋವಿಯತೀಕರಣ :

ಯಾಲ್ಟಾ ಮತ್ತು ಬಾಲ್ಕನ್ ಒಪ್ಪಂದಗಳನ್ನು ನೆರವೇರಿಸಲಿಲ್ಲವೆಂಬ ಆರೋಪ ರಷ್ಯಾ ಮೇಲಿತ್ತು. ಯಾಲ್ಟಾದಲ್ಲಿ ಪಾಶ್ಚಿಮಾತ್ಯ ಶಕ್ತಿಗಳು ಪೂರ್ವ ಮತ್ತು ಮಧ್ಯ ಯೂರೋಪ್‌ನಲ್ಲಿನ ರಷ್ಯಾದ ಸೈನಿಕ ಅಧಿಪತ್ಯವನ್ನು ಒಪ್ಪಿಕೊಂಡವು, ಆದರೆ ಯೂರೋಪಿನ ಎಲ್ಲಾ ಸ್ವತಂತ್ರ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಸ್ಥಾಪಿಸಿ ಮುಕ್ತ ಚುನಾವಣೆ ನಡೆಸಬೇಕೆಂಬ ಒಪ್ಪಂದಕ್ಕೆ ಬರಲಾಯಿತು. ಎರಡನೇ ಜಾಗತಿಕ ಯುದ್ಧದ ನಂತರ ರಷ್ಯಾದ ಮಧ್ಯಪ್ರವೇಶದಿಂದ ಬಾಲ್ಕನ್ ಪ್ರದೇಶದಲ್ಲಿ ಕಮ್ಯೂನಿಸ್ಟ್ ಬೆಂಬಲಿತ ಸರ್ಕಾರಗಳು ಸ್ಥಾಪನೆಗೊಂಡವು. ಪೌರಾತ್ಯ ಯೂರೋಪಿನಲ್ಲಿ ರಷ್ಯಾದ ಈ ಹಸ್ತಕ್ಷೇಪವನ್ನು ವಿರೋಧಿಸಿದ ಪಾಶ್ಚಿಮಾತ್ಯ ರಾಷ್ಟ್ರಗಳು ರಷ್ಯಾ ಮತ್ತು ಕಮ್ಯೂನಿಸಂ ಪ್ರಭಾವ ತಡೆಯುವ ಸಲುವಾಗಿ ಒಂದಾದವು.

ಯಾಲ್ಟಾ ಸಮಾವೇಶದ ಪ್ರಾಮುಖ್ಯತೆ :

ಯಾಲ್ಟಾ ನಗರವು ಇಂದಿನ ಯುಕ್ರೇನ್‌ನ ಕ್ರಿಮಿಯಾ ನಗರದ ವಿಶ್ರಾಂತಿಧಾಮಗಳಿರುವ ಪ್ರದೇಶವಾಗಿದೆ. ಇಲ್ಲಿ 1945ರಲ್ಲಿ ಅಮೇರಿಕಾದ ಅಧ್ಯಕ್ಷ ರೂಸ್‌ವೆಲ್ಟ್, ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್, ರಷ್ಯಾದ ಅಧ್ಯಕ್ಷ ಜೋಸೆಫ್ ಸ್ಟಾಲಿನ್ನರು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇದರಲ್ಲಿ ಜರ್ಮನಿಯನ್ನು 3 ಆಕ್ರಮಿತ ಭಾಗಗಳಾಗಿ ಮಾಡಲು ನಿರ್ಧರಿಸಲಾಯಿತು. ಫ್ರಾನ್ಸ್ ಸಮ್ಮೇಳನದಲ್ಲಿ ಭಾಗಿಯಾಗಲು ಒಪ್ಪಿದರೆ ನಾಲ್ಕನೆಯ ಭಾಗವನ್ನು ರಚಿಸಲು ತೀರ್ಮಾನಿಸಲಾಯಿತು. ಆದರೆ ಫ್ರಾನ್ಸ್ ಈ ಸಮ್ಮೇಳನದಲ್ಲಿ ಭಾಗವಹಿಸಲು ಒಪ್ಪಲಿಲ್ಲ.

(3) ಗ್ರೀಸ್‌ನಲ್ಲಿ ಸೋವಿಯತ್ ಪ್ರಭಾವ:

ಬ್ರಿಟನ್ ಸಹಕಾರದಿಂದಾಗಿ 1944ರಲ್ಲಿ ಗ್ರೀಸ್ ದೇಶವು ನಾಜಿ ಆಳ್ವಿಕೆಯಿಂದ ಸ್ವತಂತ್ರಗೊಂಡಿತು. ಗ್ರೀಸ್‌ನಿಂದ ಜರ್ಮನ್ ಸೈನ್ಯ ಹೊರ ನಡೆದ ನಂತರ ಬ್ರಿಟೀಷರು ಗ್ರೀಸ್‌ಗೆ ಲಗ್ಗೆ ಹಾಕಿದರು. ಸೋವಿಯತ್ ಒಕ್ಕೂಟ ಮತ್ತು ಬ್ರಿಟನ್ ನಡುವೆ ಆದ ಒಪ್ಪಂದದ ಪ್ರಕಾರ ರಷ್ಯಾವು ಗ್ರೀಸ್‌ನಲ್ಲಿನ ಬ್ರಿಟೀಷ್ ಪ್ರಭಾವವಲಯವನ್ನು ಮಾನ್ಯ ಮಾಡಿತು. ಅದೇ ವೇಳೆಗೆ ಗ್ರೀಸ್‌ನಲ್ಲಿ ಕಮ್ಯೂನಿಸ್ಟರು ಮತ್ತು ರಾಜತ್ವ ನಿಷ್ಠರ ಮಧ್ಯೆ ಸಂಘರ್ಷ ಉಂಟಾಯಿತು. ಸೋವಿಯತ್ ಒಕ್ಕೂಟ ಗ್ರೀಸ್‌ನಲ್ಲಿ ಕಮ್ಯೂನಿಸ್ಟ್ ಕ್ರಾಂತಿಯನ್ನು ಪ್ರಚೋದಿಸುತ್ತಿದೆ ಎಂದು ಪಾಶ್ಚಿಮಾತ್ಯ ಶಕ್ತಿಗಳು ಬಲವಾಗಿ ನಂಬಿದ್ದವು. ಬ್ರಿಟೀಷ್ ಸರ್ಕಾರವು ಅಮೇರಿಕಾದ ಬೆಂಬಲವನ್ನು ಕೋರಿತು. ನಂತರ ಗ್ರೀಸ್ ಸರ್ಕಾರವೂ ಅಮೇರಿಕಾದ ಬೆಂಬಲವನ್ನು ಕೋರಿತು. 1947ರಲ್ಲಿ ಅಮೇರಿಕಾದ ಅಧ್ಯಕ್ಷ ಟ್ರೂಮನ್ ಗ್ರೀಸ್‌ನಲ್ಲಿ ಕಮ್ಯೂನಿಸ್ಟ್ ಪ್ರಭಾವ ತಡೆಯುವ ಉದ್ದೇಶದಿಂದ ಗ್ರೀಸ್‌ಗೆ ಮಿಲಿಟರಿ ಮತ್ತು ಆರ್ಥಿಕ ನೆರವನ್ನು ಘೋಷಿಸಿದನು.

(4) ಟರ್ಕಿಯಲ್ಲಿ ಸೋವಿಯತ್ ಪ್ರಭಾವ :

ಎರಡನೇ ಜಾಗತಿಕ ಯುದ್ಧದ ನಂತರ ಸೋವಿಯತ್ ರಷ್ಯಾ, ಟರ್ಕಿಯು ತನ್ನ ಕೆಲವು ಪ್ರದೇಶಗಳನ್ನು ತನಗೆ ಬಿಟ್ಟು ಕೊಡಬೇಕೆಂದು ಟರ್ಕಿಯ ಮೇಲೆ ಒತ್ತಡ ಹೇರಿತು. ಟರ್ಕಿಯು ಇದನ್ನು ವಿರೋಧಿಸಿದ್ದಲ್ಲದೆ ಅಮೇರಿಕಾದ ಸಹಾಯವನ್ನು ಪಡೆಯಿತು. ಅಮೇರಿಕಾವು ಗ್ರೀಸ್ ಮತ್ತು ಟರ್ಕಿಯ ವಿರುದ್ಧ ಆಗಬಹುದಾದ ರಷ್ಯಾದ ದಾಳಿಯನ್ನು ತಡೆಯುವ ನೀತಿಯನ್ನು ಅನುಸರಿಸಿತು. ಅಮೇರಿಕಾದ ಅಧ್ಯಕ್ಷ ಟ್ರೂಮನ್ ತನ್ನ ಪ್ರಸಿದ್ಧ 'ಟ್ರೂಮನ್ ನೀತಿ'ಯನ್ನು ಘೋಷಿಸಿದನು. ಅಮೇರಿಕಾ ಕಾಂಗ್ರೆಸ್ ತಕ್ಷಣದಲ್ಲೇ ಟರ್ಕಿಗೆ ಆರ್ಥಿಕ ಮತ್ತು ಸೈನಿಕ ಸಹಾಯ ನೀಡಲು ನಿರ್ಧರಿಸಿತು.

(5) ಜರ್ಮನಿಗೆ ಸಂಬಂಧಿಸಿದ ಸಮಸ್ಯೆಗಳು :

ಎರಡನೇ ಜಾಗತಿಕ ಯುದ್ಧದಲ್ಲಿ ಜರ್ಮನಿಯಿಂದ ರಷ್ಯಾ ಅಪಾರ ಹಾನಿಯನ್ನು ಅನುಭವಿಸಿತು. ಯಾಲ್ಟಾ ಅಧಿವೇಶನದಲ್ಲಿ ಸ್ಟಾಲಿನ್ ಜರ್ಮನಿ 10,000 ಮಿಲಿಯನ್ ಡಾಲರ್‌ಗಳ ಯುದ್ಧ ಪರಿಹಾರವನ್ನು ಕೊಡಬೇಕೆಂದು ಬೇಡಿಕೆ ಇಟ್ಟನು. ಯುದ್ಧದ ನಂತರ ರಷ್ಯಾ ಜರ್ಮನಿಯ ಕೈಗಾರಿಕೆಗಳನ್ನೆಲ್ಲ ನಾಶಮಾಡಿತಲ್ಲದೆ, ಬೆಲೆಬಾಳುವ ಜರ್ಮನ್ ಯಂತ್ರಗಳನ್ನು ರಷ್ಯಾಕ್ಕೆ ಕೊಂಡೊಯ್ದಿತು. ಇದರಿಂದಾಗಿ ಜರ್ಮನಿಯ ಅರ್ಥವ್ಯವಸ್ಥೆಯೇ ನಾಶವಾಯಿತು. ಜರ್ಮನಿಯ ಅರ್ಥ ವ್ಯವಸ್ಥೆಯ ಪುನರ್ರಚನೆಗೆ ಬ್ರಿಟನ್ ಮತ್ತು ಅಮೇರಿಕಾಗಳು ಬೃಹತ್ ಮೊತ್ತದ ಆರ್ಥಿಕ ಸಹಾಯ ನೀಡಬೇಕಾಯಿತು.

(6) ಅಣುಬಾಂಬ್ ರಹಸ್ಯ :

ಎರಡನೇ ಜಾಗತಿಕ ಯುದ್ಧದಲ್ಲಿ ರಷ್ಯಾ ಅಮೇರಿಕಾದ ಮಿತ್ರ ರಾಷ್ಟ್ರವಾಗಿದ್ದಾಗ್ಯೂ ಅಮೇರಿಕಾವು ರಷ್ಯಾದಿಂದ ಅಣ್ವಸ್ತ್ರ ತಂತ್ರಜ್ಞಾನವನ್ನು ಗೌಪ್ಯವಾಗಿಟ್ಟಿತ್ತು. ಸ್ಟಾಲಿನ್ ಈ ಬೆಳವಣಿಗೆಯನ್ನು ಅಮೇರಿಕಾ ತನಗೆ ಬಗೆದ ನಂಬಿಕೆ ದ್ರೋಹ ಎಂದು ಭಾವಿಸಿದ್ದಲ್ಲದೆ ರಷ್ಯಾವು ತನ್ನ ರಕ್ಷಣೆಯ ಬಗ್ಗೆಯೂ ಚಿಂತಿಸುವಂತಾಯಿತು.

(7) ಅಮೇರಿಕಾದಲ್ಲಿ ಕಮ್ಯೂನಿಸ್ಟ್ ಚಟುವಟಿಕೆಗಳು:

ಸೋವಿಯತ್ ಒಕ್ಕೂಟವು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಕಮ್ಯೂನಿಸ್ಟ್ ಚಟುವಟಿಕೆ ಮತ್ತು ಗೂಢಚಾರ ಕಾರ್ಯಗಳನ್ನು ಉತ್ತೇಜಿಸಿತು. 1945ರಲ್ಲಿ ಅಮೇರಿಕಾದ ಭದ್ರತಾ ಸೇವಾವಿಭಾಗ ತಮ್ಮ ಅಣ್ವಸ್ತ್ರದ ದಾಖಲೆಗಳು ರಹಸ್ಯವಾಗಿ ರಷ್ಯಾಕ್ಕೆ ರವಾನೆಯಾಗುತ್ತಿರುವ ವಿಷಯ ಕಂಡುಕೊಂಡಿತು. ಮೇಲಾಗಿ ಅಮೇರಿಕಾದ ಕೆಲವು ಉನ್ನತಾಧಿಕಾರಿಗಳು ಅಣ್ವಸ್ತ್ರ ರಹಸ್ಯಗಳನ್ನು ಹಾಗೂ ಯುರೇನಿಯಂನ ಮಾದರಿಗಳನ್ನು ರಷ್ಯಾಕ್ಕೆ ಸೋರಿಕೆ ಮಾಡಿದರು.

ಶೀತಲ ಸಮರದ ಅವಧಿಯಲ್ಲಿ ನಡೆದ ಪ್ರಮುಖ ರಾಜಕೀಯ ಘಟನೆಗಳು :

ಎರಡನೇ ಜಾಗತಿಕ ಯುದ್ಧದ ನಂತರ ಸೋವಿಯತ್ ರಷ್ಯಾ ಪೂರ್ವ ಯೂರೋಪಿನ ರಾಷ್ಟ್ರಗಳಾದ ಪೋಲೆಂಡ್, ಬಲ್ಗೇರಿಯಾ, ಮತ್ತು ರುಮೇನಿಯಾಗಳಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಪ್ರೋತ್ಸಾಹಿಸಿತು.

ಟ್ರೂಮನ್ ನೀತಿ – 1947

1947ರಲ್ಲಿ ಅಮೇರಿಕಾದ ಅಂದಿನ ಅಧ್ಯಕ್ಷ ಟ್ರೂಮನ್ ಇದನ್ನು ಪ್ರತಿಪಾದಿಸಿದನು. ಈ ನೀತಿಯ ಪ್ರಕಾರ ಅಮೇರಿಕಾ ದೇಶ ಜಗತ್ತಿನಲ್ಲಿ ಅಲ್ಪಸಂಖ್ಯಾತರ ಗುಂಪಿನ ಸಶಸ್ತ್ರ ಪಡೆಗಳ ಮತ್ತು ಬಾಹ್ಯ ದಬ್ಬಾಳಿಕೆಗೆ ಒಳಗಾದ ಜನರನ್ನು ಬೆಂಬಲಿಸುವ ಉದ್ದೇಶವನ್ನು ಹೊಂದಿತ್ತು. ಅಂತಹ ಗುಂಪುಗಳು, ಮತ್ತು ಬಾಹ್ಯ ಒತ್ತಡಗಳು, ಸರ್ವಾಧಿಕಾರಿ ಆಡಳಿತಗಳಿಗೆ ಸಹಾಯ ಮಾಡುತ್ತವೆ. ಅಲ್ಲದೇ ಅಂತಾರಾಷ್ಟ್ರೀಯ ಶಾಂತಿ ಮತ್ತು ಅಮೇರಿಕಾದ ರಾಷ್ಟ್ರೀಯ ಭದ್ರತೆಗೆ ಬೆದರಿಕೆಯನ್ನುಂಟು ಮಾಡುತ್ತವೆ ಎಂಬುದು ಟ್ರೂಮನ್ನನ ವಿಚಾರವಾಗಿತ್ತು. ಈ ನೀತಿಯ ಮೂಲಕ ಅವನು ಪೂರ್ವ ಯೂರೋಪಿನ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಪ್ರಭಾವವನ್ನು ತಡೆಯಲು ನಿರ್ಧರಿಸಿದನು. ಈ ನೀತಿಯನ್ನು ರೂಪಿಸುವ ಮೂಲಕ ಅವನು ಗ್ರೀಸ್ ಮತ್ತು ಟರ್ಕಿ ದೇಶಗಳಿಗೆ 400 ಮಿಲಿಯನ್ ಡಾಲರ್‌ಗಳಷ್ಟು ಮಿಲಿಟರಿ ಮತ್ತು ಆರ್ಥಿಕ ನೆರವು ನೀಡಿದನು.

ಮಾರ್ಷಲ್ ಯೋಜನೆ :

ಅಮೇರಿಕಾವು ಮಾರ್ಷಲ್ ಯೋಜನೆ ಎಂಬ ಹೊಸ ಯೋಜನೆಯೊಂದನ್ನು ರೂಪಿಸಿತು. ಈ ಯೋಜನೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಜಾರ್ಜ್ ಮಾರ್ಷಲ್ 1947ರಲ್ಲಿ ತಯಾರಿಸಿದನು. ಈ ಯೋಜನೆಯಲ್ಲಿ ಯುದ್ಧದಲ್ಲಿ ಹಾನಿಗೀಡಾದ ಯುರೋಪಿನ ರಾಷ್ಟ್ರಗಳ ಚೇತರಿಕೆ ಹಾಗೂ ಪುನರ್‌ನಿರ್ಮಾಣಕ್ಕೆ ಅಮೇರಿಕಾದ ಸಹಾಯವನ್ನು ನೀಡಲು ಪ್ರಸ್ತಾಪಿಸಿದನು. ಆದರೆ ಪರೋಕ್ಷವಾಗಿ ಇದರ ಗುರಿ ಯೂರೋಪಿನಲ್ಲಿನ ಕಮ್ಯೂನಿಸಂ ಬೆಳವಣಿಗೆಯನ್ನು ತಡೆಯುವುದಾಗಿತ್ತು.



ಯೂರೋಪ್‌ಗೆ ಮಾರ್ಷಲ್ ಯೋಜನೆಯ ನೆರವು 1948–1952ರವರೆಗೆ ನಕ್ಷೆಯಲ್ಲಿ ತೋರಿಸಿರುವಂತೆ

ಮಾಲೊಟೊವ್ ಯೋಜನೆ :

ರಷ್ಯಾದ ವಿದೇಶಾಂಗ ಸಚಿವ ಯಾಚಸ್ಲೋವ್ ಮಾಲೊಟೊವ್ ಈ ಯೋಜನೆಯನ್ನು ಪ್ರಸ್ತಾಪಿಸಿದನು. ಇದು ಅಮೇರಿಕಾದ ಮಾರ್ಷಲ್ ಯೋಜನೆಗೆ ಪ್ರತಿಕ್ರಿಯೆಯಾಗಿತ್ತು. ರಷ್ಯಾ ಮಾರ್ಷಲ್ ಯೋಜನೆಯ ಹಿಂದಿರುವ ಉದ್ದೇಶಗಳನ್ನು ತಿಳಿದುಕೊಂಡಿತು. ಹಾಗೂ ಪೂರ್ವ ಯೂರೋಪಿನ ತನ್ನ ಅವಲಂಬಿತ ರಾಷ್ಟ್ರಗಳೊಂದಿಗೆ ಅದನ್ನು ವಿರೋಧಿಸಿತು. ರಷ್ಯಾ ತನ್ನದೇ ಆದ ಆರ್ಥಿಕ ಸಹಾಯವನ್ನೂ ಪ್ರತಿಪಾದಿಸಿತು. ಇದನ್ನು COMECON-Council of Mutual Economic Assistance ಎಂದು (ಪರಸ್ಪರ ಆರ್ಥಿಕ ಸಹಾಯ ಮಂಡಳಿ) ಕರೆಯಲಾಗಿದೆ.

ಬರ್ಲಿನ್ ದಿಗ್ಬಂಧನ [ಜರ್ಮನ್ ಬಿಕ್ಕಟ್ಟು] –1949:

ಸೋವಿಯತ್ ರಷ್ಯಾ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ನಡುವಣ ಶೀತಲ ಸಮರದ ಬಿಗುವಿನ ವಾತಾವಾರಣ ಜರ್ಮನ್ ಬಿಕ್ಕಟ್ಟಿನಿಂದಾಗಿ ಉಲ್ಬಣಿಸಿತು. ಎರಡನೇ ಜಾಗತಿಕ ಯುದ್ಧದ ನಂತರ ಜರ್ಮನಿಯು, ವಿಜಯಿ ರಾಷ್ಟ್ರಗಳ ಅಧೀನಕ್ಕೆ ಒಳಪಟ್ಟಿತು. ಜರ್ಮನಿಯನ್ನು ಪೂರ್ವ ಮತ್ತು ಪಶ್ಚಿಮ ಜರ್ಮನಿ ಎಂದು ವಿಭಜಿಸಲಾಯಿತು. ಪೂರ್ವ ಜರ್ಮನಿ ರಷ್ಯಾದ ನಿಯಂತ್ರಣದಲ್ಲಿತ್ತು. ಇದರಿಂದಾಗಿ ರಷ್ಯಾದ ಅಧ್ಯಕ್ಷ ಸ್ಟಾಲಿನ್ ಬರ್ಲಿನ್‌ನನ್ನು ಸಂಪೂರ್ಣವಾಗಿ ದಿಗ್ಬಂಧಿಸಿ ಪಶ್ಚಿಮ ಜರ್ಮನಿ ಮತ್ತು ಬರ್ಲಿನ್ ನಡುವಿನ ಭೂ ಮತ್ತು ಸಮುದ್ರ ಮಾರ್ಗದ ಸಂಪರ್ಕವನ್ನು ಕಡಿದು ಹಾಕಿದನು. ಬರ್ಲಿನ್ ದಿಗ್ಬಂಧನ ಸಂಪೂರ್ಣ ದಿಗ್ಬಂಧನವಾಗಿರಲಿಲ್ಲ. ಕೇವಲ ಮೂರು ವಾಯುರಹದಾರಿ ಮುಖಾಂತರ ಪ್ರವೇಶಕ್ಕೆ ಹಾಗೂ ನಿರ್ಗಮನಕ್ಕೆ ಅವಕಾಶವಿತ್ತು. ಹನ್ನೊಂದು ತಿಂಗಳಿನ ನಂತರ ಈ ದಿಗ್ಬಂಧನವನ್ನು ಹಿಂತೆಗೆದುಕೊಳ್ಳಲಾಯಿತು. ಈ ಘಟನೆಯನ್ನು ಮೊದಲ ಬರ್ಲಿನ್ ಬಿಕ್ಕಟ್ಟು ಎಂದು ಕರೆಯಲಾಗಿದೆ. ಈ ಮಧ್ಯೆ ಅಮೇರಿಕ ತನ್ನ ಕಮ್ಯೂನಿಸ್ಟ್ ವಿರೋಧಿ ಪ್ರಚಾರವನ್ನು ವಿಶ್ವದಾದ್ಯಂತ ಕೈಗೊಂಡಿತು.

ಬ

ಬರ್ಲಿನ್ ನಿರ್ಬಂಧದ ಸಂದರ್ಭದಲ್ಲಿ ಬರ್ಲಿನ್‌ನ ಟೆಂಪಲಾಫ್ ವಾಯುನೆಲೆಯಲ್ಲಿ ಸಿ–47 ವಿಮಾನಗಳು ಸಾಮಾಗ್ರಿಗಳನ್ನು ಇಳಿಸುತ್ತಿರುವುದು.

1949ರಲ್ಲಿ ಮಾವೋತ್ಸೆತುಂಗ್ ನೇತೃತ್ವದ ಕಮ್ಯೂನಿಸ್ಟ್ ಆಳ್ವಿಕೆ ಚೀನಾದಲ್ಲಿ ಆರಂಭವಾಯಿತು. ರಷ್ಯಾ ಮತ್ತು ಚೀನಾಗಳು ಇತರ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಕ್ರಾಂತಿಗಳನ್ನು ಪ್ರೋತ್ಸಾಹಿಸಿದವು. 1949ರಲ್ಲಿ ರಷ್ಯಾ ಅಣುಬಾಂಬ್ ಪರೀಕ್ಷೆ ನಡೆಸಿತು. ಇದರಿಂದಾಗಿ ರಷ್ಯಾ ಮತ್ತು ಅಮೇರಿಕಾದ ನಡುವೆ ಬಿಗುವಿನ ವಾತಾವರಣ ಮತ್ತಷ್ಟು ಉಲ್ಬಣಗೊಂಡಿತು. ಈ ಮಧ್ಯೆ ಪೂರ್ವ ಯೂರೋಪಿನ ಅನೇಕ ರಾಷ್ಟ್ರಗಳು ರಷ್ಯಾದೊಂದಿಗೆ ಸೇರಿಕೊಂಡವು. 1950ರಲ್ಲಿ ರಷ್ಯಾ ಮತ್ತು ಚೀನಾ ರಕ್ಷಣಾ ಒಪ್ಪಂದವೊಂದಕ್ಕೆ ಸಹಿ ಹಾಕಿದವು.

ಕೊರಿಯಾ ಆಂತರಿಕ ಯುದ್ಧ (1950–1953):

1950–53ರ ನಡುವೆ ಉದ್ಭವಿಸಿದ ಕೊರಿಯಾದ ಆಂತರಿಕ ಯುದ್ಧದಿಂದಾಗಿ ಶೀತಲ ಸಮರ ತೀವ್ರಗೊಂಡಿತು. ಅಮೇರಿಕವು ದಕ್ಷಿಣ ಕೊರಿಯಾಕ್ಕೆ, ಚೀನಾವು ಉತ್ತರ ಕೊರಿಯಾಕ್ಕೆ ತಮ್ಮ ನೆರವು ನೀಡಲು ಮುಂದೆ ಬಂದವು. ಕೊನೆಗೆ ಕೊರಿಯಾವು ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ ಎಂದು ಇಬ್ಭಾಗವಾಗುವುದರೊಂದಿಗೆ ಆಂತರಿಕ ಯುದ್ಧ ಕೊನೆಗೊಂಡಿತು. 1953ರಲ್ಲಿ ಎರಡು ಕೊರಿಯಾಗಳ ನಡುವೆ, ಯುದ್ಧ ವಿರಾಮ ಘೋಷಿಸಲ್ಪಟ್ಟಿತು.

ನ್ಯಾಟೋ (NATO), ಸಿಯಾಟೋ(SEATO), ಸೆಂಟೋ(CENTO) ಮುಂತಾದ ರಕ್ಷಣಾ ಒಪ್ಪಂದಗಳು ಅಮೇರಿಕಾದ ನಾಯಕತ್ವದಲ್ಲಿ ಸಹಿಮಾಡಲ್ಪಟ್ಟವು. ಇದಕ್ಕೆ ಪ್ರತಿಯಾಗಿ ರಷ್ಯಾ ವಾರ್ಸಾ ಒಪ್ಪಂದಕ್ಕೆ ಸಹಿ ಹಾಕಿತು. ಈ ಸಂಘಟನೆಗಳ ಬಗ್ಗೆ ಮುಂಬರುವ ಪುಟಗಳಲ್ಲಿ ವಿವರವಾದ ಮಾಹಿತಿಯನ್ನು ನೀಡಲಾಗಿದೆ.

ವಾರ್ಸಾ ಒಪ್ಪಂದ (Warsaw Pact)–1955:

1955ರಲ್ಲಿ ರಷ್ಯಾವು ನ್ಯಾಟೋ ಒಪ್ಪಂದಕ್ಕೆ ವಿರುದ್ಧವಾಗಿ ಪೂರ್ವ ಯೂರೋಪ್‌ನ ದೇಶಗಳಾದ ಬಲ್ಗೇರಿಯಾ, ಹಂಗೇರಿ, ಪೂರ್ವಜರ್ಮನಿ, ಜಕೋಸ್ಲೋವಕೀಯ, ರುಮೇನಿಯ ಮತ್ತು ಪೋಲೆಂಡ್‌ನೊಂದಿಗೆ ವಾರ್ಸಾ ಒಪ್ಪಂದವನ್ನು ಮಾಡಿಕೊಂಡಿತು. ವಾರ್ಸಾ ಪೋಲೆಂಡಿನ ರಾಜಧಾನಿಯಾಗಿದೆ.

ಅಮೇರಿಕವು ಚಂದ್ರನಲ್ಲಿ ಮಾನವನನ್ನು ಇಳಿಸಿದ್ದು

ವಾರ್ಸಾ ಒಪ್ಪಂದದಿಂದಾಗಿ ರಷ್ಯಾ ಮತ್ತು ಅಮೇರಿಕ ನಡುವಿನ ಪ್ರತಿಸ್ಪರ್ಧೆ ತೀವ್ರಗೊಂಡಿತು. ಅಣುಬಾಂಬ್, ಜಲಜನಕ ಬಾಂಬ್‌ಗಳ ಪರೀಕ್ಷೆ ಮತ್ತು ಖಂಡಾಂತರ ಕ್ಷಿಪಣಿಗಳ ಪ್ರಯೋಗ ಶೀತಲ ಸಮರದ ತೀವ್ರತೆಯನ್ನು ಇನ್ನೂ ಹೆಚ್ಚಿಸಿತು. ಬಾಹ್ಯಕಾಶ ಸಂಶೋಧನೆಯಲ್ಲಿಯೂ ಎರಡು ರಾಷ್ಟ್ರಗಳ ನಡುವೆ ಪೈಪೋಟಿ ಮುಂದುವರೆದು

ರಷ್ಯಾ ಮೊದಲ ಉಪಗ್ರಹವನ್ನು ಉಡಾಯಿಸಿದರ ಪ್ರತಿಯಾಗಿ, ಅಮೇರಿಕಾವು ಚಂದ್ರನ ಅಂಗಳದಲ್ಲಿ ಮೊದಲ ಮಾನವನನ್ನು ಇಳಿಸಿತು.

ಎರಡನೇ ಬರ್ಲಿನ್ ಬಿಕ್ಕಟ್ಟು (1958–1961) :

ಜರ್ಮನಿ ಸಮಸ್ಯೆಗೆ ಸಂಬಂಧಿಸಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ಮತ್ತು ರಷ್ಯಾದ ನಡುವಿನ ಸಂಬಂಧದಲ್ಲಿ ಯಾವುದೇ ಪ್ರಗತಿಯಾಗಲಿಲ್ಲ. ರಷ್ಯಾದ ಅಧ್ಯಕ್ಷ ಕೃಶ್ಚೇವ್ 6 ತಿಂಗಳ ಅವಧಿಯಲ್ಲಿ ಪಶ್ಚಿಮ ಬರ್ಲಿನನ್ನು ತೊರೆಯುವಂತೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಗಡುವು ವಿಧಿಸಿದ್ದರಿಂದ, 1958ರಲ್ಲಿ ಜರ್ಮನಿಯಲ್ಲಿ ಎರಡನೇ ಬರ್ಲಿನ್ ಬಿಕ್ಕಟ್ಟು ಉದ್ಭವಿಸಿತು. ಆದರೆ ಈ ಬಿಕ್ಕಟ್ಟು ರಷ್ಯಾದ ಅಧ್ಯಕ್ಷ ಕೃಶ್ಚೇವ್ ಅಮೇರಿಕಾದ ಅಧ್ಯಕ್ಷ ಐಸೆನ್‌ಹೋವರ್‌ನ್ನು ಭೇಟಿ ಮಾಡಲು ಒಪ್ಪುವುದರೊಂದಿಗೆ ಶಮನಗೊಂಡಿತು. ಅಮೇರಿಕವು ಸಹ ಕೃಶ್ಚೇವ್‌ನನ್ನು ತನ್ನ ದೇಶಕ್ಕೆ ಆಹ್ವಾನಿಸಿತು. ಇದರಿಂದಾಗಿ 1959ರ ವೇಳೆಗೆ ರಷ್ಯಾ ಅಮೇರಿಕ ಸಂಬಂಧದಲ್ಲಿ ಸ್ವಲ್ಪಮಟ್ಟಿನ ಸುಧಾರಣೆ ಕಂಡು ಬಂದಿತು.

1961ರಲ್ಲಿ ಜಾನ್.ಎಫ್ ಕೆನಡಿ, ಅಮೇರಿಕಾದ ಅಧ್ಯಕ್ಷನಾದನು. ಇವನು ರಷ್ಯಾದೊಂದಿಗೆ ಸಹಕಾರದ ಸಾಧ್ಯತೆಗಳನ್ನು ಅರೆಸುವ ಪ್ರಯತ್ನ ಮಾಡಿದನು. ಆದರೆ ಪರಿಸ್ಥಿತಿಯು ಅನುಕೂಲಕರವಾಗಿರಲಿಲ್ಲ. ಒಬ್ಬರು ಮತ್ತೊಬ್ಬರ ಮೇಲೆ ರಹಸ್ಯವಾಗಿ ಬೇಹುಗಾರಿಕೆ ನಡೆಸತೊಡಗಿದರು. (ರಷ್ಯಾದ ಕೆ.ಜಿ.ಬಿ. ಹಾಗೂ ಅಮೇರಿಕಾದ ಸಿ.ಐ.ಎ).

1961ರಲ್ಲಿ 25ಮೈಲಿ ಉದ್ದದ ಬರ್ಲಿನ್ ಗೋಡೆಯನ್ನು ನಿರ್ಮಿಸಿ ಪೂರ್ವ ಜರ್ಮನಿಯಿಂದ ಪಶ್ಚಿಮ ಜರ್ಮನಿಗೆ ಜನರು ಪಲಾಯನಗೈಯುವುದನ್ನು ತಡೆಯಲಾಯಿತು.

1) ಕೆ.ಜಿ.ಬಿ – ಕೊಮಿಟೇಟ್ ಗೊಸುಡರ್ ಸ್ಟೆನೋಸ್ ಬೆಜೋಪನಾಟಿ

2) ಸಿ.ಐ.ಎ – ಸೆಂಟ್ರಲ್ ಇಂಟಲಿಜೆನ್ಸ್ ಏಜೆನ್ಸಿ

ಕ್ಯೂಬಾ ಬಿಕ್ಕಟ್ಟು :

ರಷ್ಯಾವು ಕ್ಯೂಬಾದಲ್ಲಿ ಕ್ಷಿಪಣಿಗಳನ್ನು ಇರಿಸಲು ಯೋಜಿಸಿತು. ಅಮೇರಿಕದ ಅಧ್ಯಕ್ಷ ಜಾನ್.ಎಫ್ ಕೆನಡಿ ಕ್ಯೂಬಾದ ಮೇಲೆ ನಿರ್ಬಂಧ ಹೇರಿ, ಕ್ಷಿಪಣಿಗಳನ್ನು ಹೊತ್ತ ಯುದ್ಧ ಹಡಗುಗಳು ಕ್ಯೂಬಾ ಪ್ರವೇಶಿಸುವುದಕ್ಕೆ ತಡೆ ಒಡ್ಡಿದನು. ಅಲ್ಲದೆ ಕ್ಯೂಬಾದ ಅಧ್ಯಕ್ಷ ಕ್ಯಾಸ್ಟ್ರೋನನ್ನು ಹತ್ಯೆ ಮಾಡಲು ಆದೇಶ ನೀಡಿದನು. ಆದರೆ ವಿಫಲನಾದನು. ಪರಿಣಾಮವಾಗಿ ಎರಡು ಬಲಾಢ್ಯ ರಾಷ್ಟ್ರಗಳ ನಡುವಣ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಎರಡು ದೇಶಗಳ ನಡುವೆ ಯುದ್ಧದ ಅನಿವಾರ್ಯತೆ ತಲೆದೋರಿತು. ಆ ವೇಳೆಗೆ ಬಾಹ್ಯಾಕಾಶದಲ್ಲಿ ಯುದ್ಧದ ಭೀತಿ ತಲೆದೋರಿತು. ಆದರೆ ವಿಶ್ವಸಂಸ್ಥೆಯ ಮಧ್ಯ ಪ್ರವೇಶದಿಂದಾಗಿ ಕೃಶ್ಚೇವ್ ಕ್ಯೂಬಾದಿಂದ ರಷ್ಯಾ ಸೈನ್ಯವನ್ನು ಹಿಂತೆಗೆದುಕೊಂಡು ಬಿಕ್ಕಟ್ಟನ್ನು ದೂರಮಾಡಿದನು.

1962ರ ಅಕ್ಟೋಬರ್‌ನಲ್ಲಿ ಕ್ಯೂಬಾ ದ್ವೀಪ ಪ್ರದೇಶದಲ್ಲಿ ಸೋವಿಯತ್ ಯೂನಿಯನ್ ಸ್ಥಾಪಿಸುತ್ತಿದ್ದ ಅಣು ಕ್ಷಿಪಣಿ ತಾಣಗಳನ್ನು ಅಮೇರಿಕದ **ಯು–2** ಗೂಢಚರ್ಯ ವಿಮಾನವು ರಹಸ್ಯವಾಗಿ ಚಿತ್ರೀಕರಿಸಿತು. ಅಧ್ಯಕ್ಷ ಕೆನಡಿ ಅಮೇರಿಕಾ ಪತ್ತೆ ಹಚ್ಚಿದ ಕ್ಷಿಪಣಿಗಳ ರಹಸ್ಯ ರಷ್ಯಾಗಾಗಲೀ, ಕ್ಯೂಬಾಗಾಗಲೀ ಗೊತ್ತಾಗಬಾರದೆಂದು ಬಯಸಿದ್ದರು. ಅವರ ಸಲಹೆಗಾರರ ಜೊತೆ ಅನೇಕ ಸುತ್ತಿನ ಮಾತುಕತೆಗಳನ್ನು ನಡೆಸಿದ ನಂತರ ಕ್ಯೂಬಾದ ಸುತ್ತ ಹಡಗುಗಳ ವೃತ್ತವನ್ನು ನಿರ್ಮಿಸಿ, ಸಮುದ್ರಮಾರ್ಗವನ್ನು ನಿರ್ಬಂಧಿಸಲು ತೀರ್ಮಾನಿಸಿದರು. ಮತ್ತು ರಷ್ಯಾವು ಮಿಲಿಟರಿ ಸರಬರಾಜು ಮಾಡುವುದನ್ನು ನಿರ್ಬಂಧಿಸುವುದೆ ಈ ದಿಗ್ಬಂಧನದ ಉದ್ದೇಶವಾಗಿತ್ತು. ಜೊತೆಗೆ ರಷ್ಯಾವು ಕ್ಯೂಬಾದಲ್ಲಿಟ್ಟಿದ್ದ ಕ್ಷಿಪಣಿಗಳನ್ನು ತೆರವು ಮಾಡುವಂತೆ ಹಾಗೂ ತನ್ನ ನೆಲೆಗಳನ್ನು ನಾಶ ಮಾಡುವಂತೆ ಅಮೇರಿಕಾ ಬೇಡಿಕೆ ಇಟ್ಟಿತ್ತು.

ಅಣುಪರೀಕ್ಷೆ ನಿಷೇಧ ಒಪ್ಪಂದ – 1963 :

1963ರಲ್ಲಿ ರಷ್ಯಾ ಮತ್ತು ಇಂಗ್ಲೆಂಡ್ ಅಣುಪರೀಕ್ಷೆ ನಿಷೇಧ ಒಪ್ಪಂದಕ್ಕೆ ಸಹಿ ಹಾಕಿದವು. (NTBT-Nuclear Test Ban Treaty) ಈ ಮೂಲಕ ಸಮುದ್ರದಾಳದಲ್ಲಾಗಲಿ, ಆಕಾಶದಲ್ಲಾಗಲಿ ಅಣ್ವಸ್ತ್ರ ಪರೀಕ್ಷೆ ಮಾಡದಂತೆ ತೀರ್ಮಾನಿಸಲಾಯಿತು. ಇದರಿಂದ ಶೀತಲ ಸಮರದ ಆತಂಕ ಕಡಿಮೆಯಾಯಿತು.

ಒಂದನೇ ಸಾಲ್ಟ್ ಒಪ್ಪಂದ–1973 ಮತ್ತು ಎರಡನೇ ಸಾಲ್ಟ್ ಒಪ್ಪಂದ–1979 (ಯುದ್ಧ ಶಸ್ತ್ರಾಸ್ತ್ರ ನಿಯಂತ್ರಣ ಮಾತುಕತೆ) : (Strategic Arms Limitation Talks)

ಅಮೇರಿಕಾದ ಅಧ್ಯಕ್ಷ ನಿಕ್ಸನ್ ರಷ್ಯಾದ ಅಧ್ಯಕ್ಷ ಬ್ರೆಜ್ನೇವ್ 1973ರಲ್ಲಿ ಒಂದನೇ ಸಾಲ್ಟ್ ಒಪ್ಪಂದಕ್ಕೆ ಸಹಿ ಹಾಕಿದರು. ಈ ಮಧ್ಯೆ ಬ್ರೆಜ್ನೇವ್ ಅಮೇರಿಕಾಕ್ಕೆ ಸೌಹಾರ್ದಯುತ ಭೇಟಿ ನೀಡಿದರು. 1979ರಲ್ಲಿ ಅಮೇರಿಕಾದ ಅಧ್ಯಕ್ಷನಾಗಿದ್ದ ಜಿಮ್ಮಿ ಕಾರ್ಟರ್ ಎರಡನೇ ಸಾಲ್ಟ್ ಒಪ್ಪಂದವನ್ನು ಮುಂದಿಟ್ಟನು. ಆದರೆ ರಷ್ಯಾದಿಂದ ಪೂರಕ ಪ್ರತಿಕ್ರಿಯೆ ಬರಲಿಲ್ಲ.

ವಿಯಟ್ನಾಂ ಯುದ್ಧ – 1955–1975 :

ದಕ್ಷಿಣ ವಿಯಟ್ನಾಂನ ಪ್ರಜಾಪ್ರಭುತ್ವವಾದಿಗಳು ಹಾಗೂ ಉತ್ತರ ವಿಯಟ್ನಾಂನ ಕಮ್ಯೂನಿಸ್ಟರ ನಡುವೆ ಆಂತರಿಕ ಯುದ್ಧ ನಡೆದಿತ್ತು. ಅಮೇರಿಕಾ ಪ್ರಜಾಪ್ರಭುತ್ವ ವಾದಿಗಳಿಗೆ ಬೆಂಬಲಿಸಿದರೆ, ರಷ್ಯಾ ಮತ್ತು ಚೀನಾಗಳು ಕಮ್ಯೂನಿಸ್ಟರನ್ನು ಬೆಂಬಲಿಸಿದವು. ಇದರಿಂದ ನಿಜವಾದ ಸಮರದ ಆತಂಕವಿತ್ತು. ಅಮೇರಿಕಾ ಹೆಚ್ಚಿನ ನಷ್ಟವನ್ನು ಅನುಭವಿಸಿತು ಮತ್ತು ವಿಯಟ್ನಾಂನಿಂದ ತನ್ನ ಸೈನ್ಯವನ್ನು ಹಿಂತೆಗೆಯಿತು. ವಿಯಟ್ನಾಂ ಯುದ್ಧ 1975ರಲ್ಲಿ ಕೊನೆಗೊಂಡಿತು. ಅದೇ ವರ್ಷ ಎರಡೂ ವಿಯಟ್ನಾಂಗಳು ಒಂದುಗೂಡಿದವು.

ನಿಕ್ಸನ್ ಮತ್ತು ಮಾವೋ 1972

ಲಿಯೋನಿಡ್ ಬ್ರೆಜ್ನೇವ್ ಮತ್ತು ಜಿಮ್ಮಿಕಾರ್ಟರ್ 1973

ಶೀತಲ ಸಮರದ ಅಂತ್ಯ :

1988 ರಲ್ಲಿ ಮಿಖಾಯಿಲ್ ಗೊರ್ಬಚೇವ್ ರಷ್ಯಾದ ಅಧ್ಯಕ್ಷರಾದರು. ಆ ಸಂದರ್ಭದಲ್ಲಿ ರಷ್ಯಾದ ಅರ್ಥವ್ಯವಸ್ಥೆ ಸ್ಥಗಿತಗೊಂಡಿತು. ಹಾಗೂ ತೈಲ ಬೆಲೆಗಳ ಇಳಿತದಿಂದಾಗಿ ವಿದೇಶಿ ವಿನಿಮಯವು ತೀವ್ರವಾಗಿ ಕುಸಿಯತೊಡಗಿತ್ತು. ಈ ಬೆಳವಣಿಗೆಗಳು ರೋಗಗ್ರಸ್ತ ರಾಷ್ಟ್ರವನ್ನು ಸುಧಾರಿಸಲು ಕ್ರಮ ಕೈಗೊಳ್ಳುವಂತೆ ಗೋರ್ಬಚೇವ್‌ನನ್ನು ಪ್ರೇರೆಪಿಸಿತು. ಈ ನಿಟ್ಟಿನಲ್ಲಿ **'ಪೆರಿಸ್ಟ್ರೋಯಿಕ'** (ಪುನರ್‌ರಚನೆ) ಮತ್ತು **'ಗ್ಲಾಸ್‌ನಾಸ್ಟ್'** (ಮುಕ್ತನೀತಿ) ಎಂಬ ಸುಧಾರಣೆಗಳನ್ನು ಪ್ರಕಟಿಸಿದನು. ಸೋವಿಯತ್ ಒಕ್ಕೂಟವು ಕುಸಿತದ ಅಂಚಿನಲ್ಲಿದ್ದುದರಿಂದ ಬಲಹೀನವಾಗುತ್ತಿದ್ದ ವಾರ್ಸಾ ರಾಷ್ಟ್ರಗಳ ಕಮ್ಯೂನಿಸ್ಟ್ ನಾಯಕರು ಸೋವಿಯತ್ ಸೈನಿಕ ಬೆಂಬಲದಿಂದ ವಂಚಿತರಾದರು. ಹೀಗಾಗಿ ಕಮ್ಯೂನಿಸ್ಟ್ ಪಕ್ಷವು ತನ್ನ 73 ವರ್ಷಗಳ ಏಕಸ್ವಾಮ್ಯತ್ವವನ್ನು ಬಿಟ್ಟುಕೊಡಬೇಕಾಯಿತು. ಇದರಿಂದಾಗಿ ರಷ್ಯಾ ಗಣರಾಜ್ಯ 1991 ಡಿಸೆಂಬರ್ 25ರಂದು ಅಧೀಕೃತವಾಗಿ ವಿಭಜಿತವಾಯಿತು. ಇದರೊಂದಿಗೆ ಅಮೇರಿಕಾವು ಅದ್ವಿತೀಯ ಸೈನಿಕ ಶಕ್ತಿಯಾಗಿ ಹೊರಹೊಮ್ಮಿತು. 1992ರಲ್ಲಿ ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಷ್ (ಹಿರಿಯ) ಮತ್ತು ರಷ್ಯಾದ ಅಧ್ಯಕ್ಷ ಬೋರಿಸ್ ಎಲ್ಸಿನ್‌ರವರು ಪರಸ್ಪರ ಭೇಟಿಯಾಗುವುದರೊಂದಿಗೆ ಶೀತಲ ಸಮರ ಅಂತ್ಯಗೊಂಡಿತು.

ಚಟುವಟಿಕೆ : ಶೀತಲ ಸಮರದ ಬಗ್ಗೆ ಪಠ್ಯ ಪುಸ್ತಕದಲ್ಲಿ ತಿಳಿಸದಿರುವ ವಿವರಗಳನ್ನು ಸಂಗ್ರಹಿಸಿ

ಮಿಖಾಯಿಲ್ ಗೋರ್ಬಚೇವ್ ಮತ್ತು ರೊನಾಲ್ಡ್ ರೇಗನ್ ಅಮೇರಿಕಾದ ಶ್ವೇತಭವನದಲ್ಲಿ 1987ರ ಅಣ್ವಸ್ತ್ರ ಕುರಿತ ಒಪ್ಪಂದಕ್ಕೆ ಸಹಿ ಹಾಕುತ್ತಿರುವುದು.

ಪೌರತ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳು

1989ರಲ್ಲಿ ಬರ್ಲಿನ್ ಗೋಡೆಯ ಪತನ

ಶೃಂಗಸಭೆಗಳು 1985–1991:

1) **ಜಿನೀವಾ ಶೃಂಗಸಭೆ (ಪ್ರಥಮ ಶೃಂಗಶಭೆ–1985):**
ನವೆಂಬರ್ 1985ರಲ್ಲಿ (ಸ್ವಿಡ್ಜರ್‌ಲ್ಯಾಂಡಿನ ಜೀನಿವಾದಲ್ಲಿ) ರೇಗನ್ ಮತ್ತು ಗೋರ್ಬಚೇವ್ ತಮ್ಮಲ್ಲಿರುವ ಅಣ್ವಸ್ತ್ರಗಳನ್ನು ಶೇ.50ರಷ್ಟು ಕಡಿತಗೊಳಿಸಲು ತಾತ್ವಿಕವಾಗಿ ಒಪ್ಪಿಕೊಂಡರು.

2) **ರೆಜಾವಿಕ್ ಶೃಂಗಸಭೆ (ದ್ವಿತೀಯ ಶೃಂಗಸಭೆ–1985):**
ಐಸ್‌ಲ್ಯಾಂಡ್‌ನಲ್ಲಿ ನಡೆದ ಈ ಶೃಂಗಸಭೆಯಲ್ಲಿ ರೇಗನ್ ಮತ್ತು ಗೋರ್ಬಚೇವ್ ಮಧ್ಯೆ ನಡೆದ ಮಾತುಕತೆ ವಿಫಲವಾಯಿತು.

3) **ತೃತೀಯ ಶೃಂಗಸಭೆ (ಐ.ಎನ್.ಎಫ್. ಒಪ್ಪಂದ–1987):**
1987ರಲ್ಲಿ ನಡೆದ "ಇಂಟರ್‌ಮೀಡಿಯಟ್ ರೇಂಜ್ ನ್ಯೂಕ್ಲಿಯರ್ ಫೋರ್ಸಸ್ ಟ್ರೀಟಿ" (INF-Intermediate Range Nuclear Forces Treaty) ಒಪ್ಪಂದಕ್ಕೆ ಅಮೇರಿಕ ಮತ್ತು ರಷ್ಯಾ ಸಹಿ ಹಾಕುವುದರೊಂದಿಗೆ ಮಹತ್ವದ ಬೆಳವಣಿಗೆಯಾಯಿತು.

4) **ನಾಲ್ಕನೇ ಶೃಂಗಸಭೆ (ಮಾಸ್ಕೋ ಶೃಂಗಸಭೆ–1989) :**
1989ರಲ್ಲಿ 4ನೇ ಶೃಂಗಸಭೆಯು ಮಾಸ್ಕೋ ನಗರದಲ್ಲಿ ನಡೆಯಿತು. ಗೋರ್ಬಚೇವ್ ಮತ್ತು ಜಾರ್ಜ್‌ಬುಷ್‌ರವರು ಸ್ಟಾರ್ಟ್–1 (START-I Startegic Arms Reduction Treaty) ಕ್ಕೆ ಸಹಿ ಮಾಡಿದರು. ಇದು ಯೋಜಿತವಾಗಿ ಅಣ್ವಸ್ತ್ರಗಳನ್ನು ಕಡಿತಗೊಳಿಸಲು ಮಾಡಿಕೊಂಡ ಒಪ್ಪಂದವಾಗಿತ್ತು.

ಪ್ರಾದೇಶಿಕ ಸೈನಿಕ ಒಪ್ಪಂದಗಳು:

1) ನ್ಯಾಟೋ [ನಾರ್ತ್ ಅಟ್ಲಾಂಟಿಕ್ ಟ್ರೀಟಿ ಅರ್ಗನೈಜೇಷನ್–1949]:

ನ್ಯಾಟೋ ವಾಷಿಂಗ್‌ಟನ್‌ನಲ್ಲಿ 1949ರಲ್ಲಿ ಸ್ಥಾಪನೆಗೊಂಡಿತು. ಇದು ರಷ್ಯಾದ ವಿರುದ್ಧ ಅಮೇರಿಕಾದ ನಾಯಕತ್ವದಲ್ಲಿ 15 ರಾಷ್ಟ್ರಗಳು ರಚಿಸಿಕೊಂಡ ಸೈನಿಕ ಒಪ್ಪಂದವಾಗಿದೆ. ನ್ಯಾಟೋದ ಸದಸ್ಯ ರಾಷ್ಟ್ರಗಳೆಂದರೆ; ಅಮೇರಿಕ, ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಕೆನಡಾ, ಪೋರ್ಚುಗಲ್, ಲಕ್ಸಂಬರ್ಗ್ ಇಟಲಿ, ನಾರ್ವೆ, ಡೆನ್ಮಾರ್ಕ್

ನ್ಯಾಟೋ ರಾಷ್ಟ್ರಗಳು

ಮತ್ತು ಐಸ್‌ಲ್ಯಾಂಡ್. ನಂತರದಲ್ಲಿ ಜರ್ಮನಿಯ ಸಂಯುಕ್ತ ಗಣರಾಜ್ಯ, ಗ್ರೀಸ್ ಮತ್ತು ಟರ್ಕಿಗಳು ಇದರ ಸದಸ್ಯರಾದವು. 1999ರಲ್ಲಿ ಹಂಗೇರಿ ಮತ್ತು ಪೋಲೆಂಡ್‌ಗಳು ನ್ಯಾಟೋಗೆ ಸೇರಿದವು. [ಪ್ರಸ್ತುತ ನ್ಯಾಟೋ ಸದಸ್ಯರ ಒಟ್ಟು ಸಂಖ್ಯೆ 27] ನ್ಯಾಟೋ ಸದಸ್ಯರು ತನ್ನ ಯಾವುದೇ ಸದಸ್ಯರು ವಿದೇಶಿ ಶಕ್ತಿಗಳ ಆಕ್ರಮಣಕ್ಕೆ ಒಳಗಾದಲ್ಲಿ ಅವರಿಗೆ ಸಹಾಯ ಮಾಡುವುದಲ್ಲದೆ ಶತ್ರುವಿನ ವಿರುದ್ಧ ಒಟ್ಟಾಗಿ ಹೋರಾಡುವ ನಿರ್ಧಾರ ಕೈಗೊಂಡರು. ನ್ಯಾಟೋ ಅದರ ಸದಸ್ಯ ರಾಷ್ಟ್ರಗಳ ಸಹಕಾರಿ ಸೈನ್ಯವನ್ನು ಹೊಂದಿದೆ. ಇದರ ಕೇಂದ್ರ ಕಛೇರಿ ಪ್ಯಾರಿಸ್‌ನಲ್ಲಿದೆ.

2) ಸಿಯಾಟೋ [ಮನಿಲಾ ಒಪ್ಪಂದ–1954–ಸೌತ್ ಈಸ್ಟ್ ಏಷ್ಯಾ ಟ್ರೀಟಿ ಆರ್ಗನೈಜೇಷನ್] :

ಸಿಯಾಟೋ, ಕಮ್ಯೂನಿಸಂ ಪ್ರಸರಣದ ಭಯದಿಂದ ಹುಟ್ಟಿಕೊಂಡಿತು. ಚೀನಾದಲ್ಲಿ ಸ್ಥಾಪಿತವಾದ ಕಮ್ಯೂನಿಸ್ಟ್ ಆಳ್ವಿಕೆಯಿಂದ ಆಗ್ನೇಯ ಏಷ್ಯಾದ ಮತ್ತು ಪೆಸಿಫಿಕ್ ರಾಷ್ಟ್ರಗಳಲ್ಲಿ ಕಮ್ಯೂನಿಸಂನ ಪ್ರಸರಣದ ಭಯವನ್ನು ಇನ್ನಷ್ಟು ಹೆಚ್ಚಿಸಿತು. ಈ ಹಿನ್ನಲೆಯಲ್ಲಿ ಅಮೇರಿಕಾ ಮತ್ತು ಪಾಶ್ಚಿಮಾತ್ಯ ಶಕ್ತಿಗಳು ಪ್ರಾದೇಶಿಕ ಸಾಮೂಹಿಕ ರಕ್ಷಣಾ ವ್ಯವಸ್ಥೆಯೊಂದನ್ನು ಸ್ಥಾಪಿಸಲು ನಿರ್ಧರಿಸಿದವು.

ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್, ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್, ಥೈಲ್ಯಾಂಡ್ ಮತ್ತು ಪಾಕಿಸ್ತಾನ ದೇಶಗಳು 1954ರಲ್ಲಿ ಫಿಲಿಫೀನ್ಸ್‌ನ ರಾಜಧಾನಿ ಮನಿಲಾದಲ್ಲಿ ಸಭೆ ಸೇರಿ ಆಗ್ನೇಯ ಏಷ್ಯಾದ ಹಿತದೃಷ್ಟಿಯಿಂದ ಒಪ್ಪಂದವೊಂದಕ್ಕೆ ಸಹಿ ಹಾಕಿದವು.

ಸಿಯಾಟೋನ ಮುಖ್ಯ ಉದ್ದೇಶ ಕಮ್ಯೂನಿಸ್ಟ್ ಅತಿಕ್ರಮಣವನ್ನು ತಡೆಯಲು ಮುಂಜಾಗ್ರತೆ ವಹಿಸುವುದಾಗಿತ್ತು. ಈ ಉದ್ದೇಶವನ್ನು ವಿಯಟ್ನಾಂ ಯುದ್ಧದಲ್ಲಿ ಪರೀಕ್ಷಿಸಲಾಯಿತು. ದೀರ್ಘ ಯುದ್ಧದ ನಂತರ ಅಮೇರಿಕಾ ತನ್ನ ಘನತೆಯನ್ನು ಕಳೆದುಕೊಳ್ಳುವುದರೊಂದಿಗೆ ಸಿಯಾಟೋ ಒಪ್ಪಂದವನ್ನು 1975ರಲ್ಲಿ ವಿಸರ್ಜಿಸಲಾಯಿತು.

3) ಅಂಜುಸ್ ಒಪ್ಪಂದ–1951 :

ಇದು 1951ರಲ್ಲಿ ಜಾರಿಗೆ ಬಂದಿತು. ಇದು ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್ ಮತ್ತು ಅಮೇರಿಕಗಳನ್ನು ಒಳಗೊಂಡ ಸೈನಿಕ ಒಪ್ಪಂದವಾಗಿತ್ತು. ಈ ಒಪ್ಪಂದದಂತೆ ಪೆಸಿಫಿಕ್ ಪ್ರದೇಶದಲ್ಲಿ ಸದಸ್ಯ ರಾಷ್ಟ್ರಗಳ ಮೇಲೆ ನಡೆಯುವ ಯಾವುದೇ ಆಕ್ರಮಣದ ವಿರುದ್ಧ ಪರಸ್ಪರ ಸಹಾಯ ಮಾಡಬೇಕೆಂದು ಒಪ್ಪಿಕೊಳ್ಳಲಾಯಿತು.

ANZUS – A – ಆಸ್ಟ್ರೇಲಿಯ, NZ–ನ್ಯೂಜಿಲ್ಯಾಂಡ್, US–ಅಮೇರಿಕಾ

4) ಸೆಂಟೋ ಅಥವಾ ಬಾಗ್ದಾದ್ ಒಪ್ಪಂದ–1955 [ಸೆಂಟ್ರಲ್ ಟ್ರೀಟಿ ಆರ್ಗನೈಜೇಷನ್] :

ಬಾಗ್ದಾದ್ ಒಪ್ಪಂದಕ್ಕೆ 1955ರಲ್ಲಿ ಸಹಿ ಹಾಕಲಾಯಿತು. ಇಂಗ್ಲೆಂಡ್ ಇದರ ಸಂಘಟನೆಯ ನೇತೃತ್ವವನ್ನು ವಹಿಸಿತ್ತು. ಆದರೆ ಅದು ಸಂಘಟನೆಯ ಸದಸ್ಯತ್ವವನ್ನು ಪಡೆಯಲಿಲ್ಲ. ಟರ್ಕಿ ಮತ್ತು ಇರಾಕ್ ಇದರ ಆರಂಭಿಕ ಸದಸ್ಯರಾಗಿದ್ದರು, ನಂತರ ಇಂಗ್ಲೆಂಡ್, ಪಾಕಿಸ್ತಾನ ಮತ್ತು ಇರಾನ್‌ಗಳು ಸೇರಿಕೊಂಡವು. ಇದು ಮಧ್ಯಪ್ರಾಚ್ಯದಲ್ಲಿ ಸೋವಿಯತ್ ವಿರೋಧಿ ಸೈನಿಕ ಬಣವಾಗಿತ್ತು. ಇರಾಕಿನ ಅಧ್ಯಕ್ಷನಾಗಿದ್ದ ಕರೀಂಖಾಸಿಂ ಇದನ್ನು 1958ರಲ್ಲಿ ತುಚ್ಛೀಕರಿಸಿದನು. ಹೀಗಾಗಿ CENTOಒಂದು ಸೈನಿಕ ಬಣವಾಗಿ ವಿಫಲವಾಯಿತಲ್ಲದೇ ರಷ್ಯಾದ ವಿಸ್ತರಣೆಯನ್ನು ತಡೆಯುವಲ್ಲೂ ಸೋತಿತು.

5) ವಾರ್ಸಾ ಒಪ್ಪಂದ [1955–1991] :

ವಾರ್ಸಾ ಒಪ್ಪಂದದ ಸದಸ್ಯ ರಾಜ್ಯಗಳು :

1) ಬಲ್ಗೇರಿಯಾ
2) ಪೂರ್ವ ಜರ್ಮನಿ
3) ಪೋಲೆಂಡ್
4) ಸೋವಿಯತ್ ಯೂನಿಯನ್
5) ಜೆಕಸ್ಲೋವಾಕಿಯ
6) ಹಂಗೇರಿ
7) ರೊಮೆನಿಯಾ
8) ಅಲ್ಬೇನಿಯಾ

ಈ ಒಪ್ಪಂದದ ಬಗ್ಗೆ ಶೀತಲಸಮರದ ಅವಧಿಯಲ್ಲಿ ನಡೆದ ಪ್ರಮುಖ ರಾಜಕೀಯ ಘಟನೆಗಳನ್ನು ಕುರಿತು ಚರ್ಚಿಸುವಾಗ ಅಭ್ಯಾಸ ಮಾಡಿರುತ್ತೀರಿ. ಈ ಒಪ್ಪಂದವು 1991ರಲ್ಲಿ ಸೋವಿಯತ್ ಒಕ್ಕೂಟದ ವಿಭಜನೆಯೊಂದಿಗೆ ಅಂತ್ಯಗೊಂಡಿತು.

ಶೀತಲ ಸಮರದ ಪರಿಣಾಮಗಳು:

1) ಅಮೇರಿಕ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ಒಕ್ಕೂಟ ಅಣ್ವಸ್ತ್ರ ಮತ್ತು ಖಂಡಾಂತರ ಕ್ಷಿಪಣಿಗಳ ಬೃಹತ್ ಕೋಠಿಗಳನ್ನು ಸ್ಥಾಪಿಸಿಕೊಂಡವು.
2) ಸೈನಿಕ ಒಪ್ಪಂದಗಳಾದ ನ್ಯಾಟೋ ಮತ್ತು ವಾರ್ಸಾ ಅಸ್ಥಿತ್ವಕ್ಕೆ ಬಂದವು.
3) ಇದು ವಿಯಟ್ನಾಂ ಯುದ್ಧ ಮತ್ತು ಕೊರಿಯಾ ಯುದ್ಧಗಳಂತಹ ವಿನಾಶಕಾರಿ ಸಂಘರ್ಷಗಳಿಗೆ ಕಾರಣವಾಯಿತು
4) ಆರ್ಥಿಕ ದುರ್ಬಲತೆಯಿಂದಾಗಿ ಸೋವಿಯತ್ ಒಕ್ಕೂಟ ಕುಸಿಯಿತು.
5) ಬರ್ಲಿನ್ ಗೋಡೆಯ ಧ್ವಂಸವು ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿಯನ್ನು ಒಂದು ಗೂಡಿಸಿತು.
6) ವಾರ್ಸಾ ಒಪ್ಪಂದವು ವಿಸರ್ಜನೆಗೊಂಡಿತು.
7) ಬಾಲ್ಟಿಕ್ ರಾಷ್ಟ್ರಗಳು ಮತ್ತು ಕೆಲವು ಪೂರ್ವ ಸೋವಿಯತ್ ಗಣರಾಜ್ಯಗಳು ಸ್ವಾತಂತ್ರ್ಯಗೊಂಡವು.
8) ಅಮೇರಿಕ ವಿಶ್ವದ ಏಕೈಕ ಬಲಿಷ್ಠ ಶಕ್ತಿಯಾಗಿ ಹೊರಹೊಮ್ಮಿತು.
9) ವಿಶ್ವದಾದ್ಯಂತ ಕಮ್ಯೂನಿಸಂ ಹಿನ್ನಡೆ ಕಂಡಿತು.

11.2 ಸೋವಿಯತ್ ಒಕ್ಕೂಟದ (USSR) ವಿಘಟನೆ–1991

1917ರ ಬೋಲ್ಶೆವಿಕ್ ಕ್ರಾಂತಿಯ ಕಾಲದಿಂದ ಕಮ್ಯೂನಿಸ್ಟ್ ರಷ್ಯಾ ವಿಶ್ವದ ಗಮನ ಸೆಳೆದಿತ್ತು. ಇದರ ಫಲವಾಗಿ, ಸೋವಿಯತ್ ರಷ್ಯಾ ಬಲಿಷ್ಠ ಶಕ್ತಿಯಾಗಿ ಬೆಳೆಯಿತು. ರಷ್ಯಾದ ರಾಜಕೀಯ ಬೆಳವಣಿಗೆಗಳನ್ನು ವಿಶ್ವವು ಕುತೂಹಲದಿಂದ ಗಮನಿಸಿತು. ಶೀತಲಸಮರದ ಅವಧಿಯಲ್ಲಿ ಅಮೇರಿಕ ಮತ್ತು ರಷ್ಯಾಗಳು ವಿಶ್ವದ ಇತರೆಡೆ ತಮ್ಮ ಪ್ರಭಾವವನ್ನು ವೃದ್ಧಿಸಿಕೊಳ್ಳಲು ಪೈಪೋಟಿ ನಡೆಸಿದವು.

1991ರಲ್ಲಿ ಸೋವಿಯತ್ ಒಕ್ಕೂಟ ವಿಘಟನೆಗೊಂಡ ನಂತರ ಅಮೇರಿಕಾ ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮಿತು.

ಸೋವಿಯತ್ ಒಕ್ಕೂಟದ ವಿಘಟನೆಗೆ ಕಾರಣವಾದ ಅಂಶಗಳು:

- ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಅತಿಯಾದ ನಿರ್ಬಂಧ
- ಜನರಲ್ಲಿ ಸಮಾನತೆ ಮೂಡಿಸುವಲ್ಲಿ ವಿಫಲತೆ
- ರಕ್ಷಣಾ ಉದ್ದಿಮೆಗೆ ಅತಿ ಹೆಚ್ಚಿನ ಪ್ರಾಶಸ್ತ್ಯ
- ಕೃಷಿಯ ಕಡೆಗಣನೆ
- ಉಕ್ಕಿನ ಪರದೆ ನೀತಿ
- ಗೊರ್ಬಚೇವ್ ಜಾರಿಗೊಳಿಸಿದ ಉದಾರ ನೀತಿಗಳು
- ಸಾಂಸ್ಕೃತಿಕ ಮತ್ತು ಜನಾಂಗೀಯ ಗುಂಪುಗಳ ನಡುವಿನ ಸಂಘರ್ಷ

ಮಿಖಾಯಿಲ್ ಗೊರ್ಬಚೇವ್ :

1988ರಲ್ಲಿ ಮಿಖಾಯಿಲ್ ಗೊರ್ಬಚೇವ್ ಸೋವಿಯತ್ ರಷ್ಯಾದ ಅಧ್ಯಕ್ಷರಾಗಿ ಆಯ್ಕೆಯಾದರು. ಕೂಡಲೇ ಅವರು ಸೋವಿಯತ್ ಒಕ್ಕೂಟದ ಪ್ರಭಾವಿ ರಾಜಕಾರಿಣಿಯಾದರು. ತಮ್ಮ ವಿಶಿಷ್ಟ ನೀತಿಯ ಮೂಲಕ ಸೋವಿಯತ್ ಒಕ್ಕೂಟದ ಆಡಳಿತ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಗಳನ್ನು ತಂದರು. ಸಮಾಜ ಮತ್ತು ಅರ್ಥ ವ್ಯವಸ್ಥೆಯನ್ನು ಪುನರ್‌ರಚಿಸಿ ಉದಾರ ನೀತಿಯನ್ನು ಅನುಸರಿಸುವುದರ ಮೂಲಕ ಸ್ಟಾಲಿನ್ನನ 'ಉಕ್ಕಿನ ಪರದೆ'ಯ ಚಿತ್ರಣವನ್ನು ಬದಲಾಯಿಸಲು ಪ್ರಯತ್ನಿಸಿದರು. ಗೊರ್ಬಚೇವ್‌ರವರು ವಿದೇಶಿ ಸಂಬಂಧಗಳಲ್ಲಿ 'ಗ್ಲಾಸ್‌ನಾಸ್ಟ್' ಎಂಬ ಮುಕ್ತ ನೀತಿಯನ್ನು ಪರಿಚಯಿಸಿದರು. ಸೋವಿಯತ್ ಸಮಾಜ ಮತ್ತು ಅರ್ಥ ವ್ಯವಸ್ಥೆಯನ್ನು ಪುನರ್‌ರಚಿಸಲು 'ಪೆರಿಸ್ಟ್ರೋಯಿಕ' ಎಂಬ ನೀತಿಯನ್ನು ಆರಂಭಿಸಿದರು. ಇದರಿಂದಾಗಿ ಸೋವಿಯತ್ ರಷ್ಯಾದಲ್ಲಿ ಉದಾರೀಕರಣದ ಯುಗ ಆರಂಭವಾಯಿತು.

ಗೊರ್ಬಚೇವ್‌ರವರು ಸಮಾಜವಾದಕ್ಕೆ ಹೊಸಮುಖ ಮತ್ತು ಪ್ರಜಾಪ್ರಭುತ್ವವಾದಿ ಸ್ವರೂಪವನ್ನು ನೀಡಲು

ಪ್ರಯತ್ನಿಸಿದರು. ಅವರು ಎಲ್ಲಾ ಧರ್ಮಗಳ ಜನರಿಗೆ ಧಾರ್ಮಿಕ ಸ್ವಾತಂತ್ರ್ಯದ ಭರವಸೆ ನೀಡಿದರು. ಮಾನವೀಯ ಹಕ್ಕುಗಳ ವಿಚಾರಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿ ದೇಶವನ್ನು ಹಂತಹಂತವಾಗಿ ಸೈನಿಕ ಮುಕ್ತವನ್ನಾಗಿಸುವ ಕಡೆಗೆ ಗಮನಹರಿಸಿದರು.

ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಪ್ರತ್ಯೇಕಿಸಲ್ಪಟ್ಟ ರಾಜ್ಯಗಳು

1. ಅಜರ್‌ಬೆಜಾನ್ 2. ಅರ್ಮೇನಿಯಾ 3. ಬೆಲಾರೂಸ್ 4. ಎಸ್ತೋನಿಯಾ 5. ಜಾರ್ಜಿಯಾ 6. ಕಜಕಿಸ್ಥಾನ್ 7. ಕಿರಿಗಿಸ್ಥಾನ್ 8. ಲ್ಯಾಟ್‌ವಿಯಾ 9. ಲಿತುವೇನಿಯಾ 10. ಮಾಲ್ಡೋವಾ 11. ರಷ್ಯಾ 12. ತಜಕಿಸ್ಥಾನ್ 13. ತುರ್ಕಮೇನಿಸ್ಥಾನ್ 14. ಯುಕ್ರೇನ್ 15. ಉಜ್ಬೇಕಿಸ್ಥಾನ್

ಉಕ್ಕಿನ ಪರದೆ : ಸೋವಿಯತ್ ಬಣ ಮತ್ತು ಪಾಶ್ಚಿಮಾತ್ಯ ಯೂರೋಪ್‌ಗಳ ನಡುವೆ 1945 ರಿಂದ 1990ರ ಅವಧಿಯಲ್ಲಿ ಸ್ಥಾಪಿಸಲ್ಪಟ್ಟಿದ್ದ ಸೈನಿಕ, ರಾಜಕೀಯ ಮತ್ತು ಸೈದ್ಧಾಂತಿಕ ಪ್ರತಿಬಂಧ. ಈ ನೀತಿಯು ಹೊರಜಗತ್ತಿನ ಬೆಳವಣಿಗೆಗಳು ಜನರನ್ನು ತಲುಪದಂತೆ ಹಾಗೂ ಆಂತರಿಕ ಬೆಳವಣಿಗೆಗಳು ಹೊರಜಗತ್ತಿಗೆ ಹೋಗದಂತೆ ನಿರ್ಬಂಧಿಸುವುದಾಗಿತ್ತು.

ಸ್ಟ್ಯಾಲಿನಿಕರಣದಿಂದ ಮುಕ್ತಿ : ಸ್ಟಾಲಿನ್ನನ ರಾಜಕೀಯ ನೀತಿಗಳು, ವಿಧಾನಗಳು ಮತ್ತು ಅವನ ವೈಯಕ್ತಿಕ ವರ್ಚಸ್ಸನ್ನು ಕಡೆಗಣಿಸುವ ಪ್ರಕ್ರಿಯೆ.

ಸೋವಿಯತ್ ವಿರೋಧ ಪಕ್ಷದ ಹುಟ್ಟು :

ಸೋವಿಯತ್ ಒಕ್ಕೂಟದ ವಿಭಿನ್ನ ಭಾಗಗಳಲ್ಲಿ ಪ್ರತ್ಯೇಕತೆ ಚಳುವಳಿಗಳು ಆರಂಭವಾದವು. ವಿಶೇಷವಾಗಿ ಲಿಥುವೆನಿಯ, ಲ್ಯಾಟ್ವಿಯಾ ಮತ್ತು ಯಸ್ತೊನಿಯಗಳಲ್ಲಿ ಈ ಬೆಳವಣಿಗೆ ಕಂಡು ಬಂದಿತು. ಪ್ರತ್ಯೇಕತಾವಾದಿ ಬಾಲ್ಕನ್ ರಾಷ್ಟ್ರಗಳು ಪ್ರಜಾಪ್ರಭುತ್ವ ಮತ್ತು ಗ್ಲಾಸ್‌ನಾಸ್ಟ್‌ಗಳ ಲಾಭಪಡೆದು ತಮ್ಮನ್ನು ಸೋವಿಯತ್ ಒಕ್ಕೂಟದಿಂದ ಪ್ರತ್ಯೇಕಿಸಿಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಭಾವಿಸಿತು. ಪೆರಿಸ್ಟ್ರೋಯಿಕಾವು ಜನರಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಸೃಷ್ಟಿಸಿ ಅವರಲ್ಲಿ ಸ್ವಯಂ ನಿರ್ಧಾರದ ಭಾವನೆಗಳು ಬೆಳೆಯಲು ಪ್ರೋತ್ಸಾಹಿಸುತ್ತಿದೆ ಎಂದು ಸಮಿತಿಯು ಭಾವಿಸಿತು.

ಗೊರ್ಬಚೇವ್‌ನ ನೀತಿಗಳನ್ನು ಮತ್ತು ಅವನ ಅಧಿಕಾರವನ್ನು ಉಗ್ರವಾಗಿ ಟೀಕಿಸುವ ದೊಡ್ಡ ವಿರೋಧಿ ಬಣ ಹುಟ್ಟಿಕೊಂಡಿತು. 1989ರಲ್ಲಿ ಸೋವಿಯತ್ ಪಾರ್ಲಿಮೆಂಟಿನಲ್ಲಿ 368 ಸದಸ್ಯರ ಗೊರ್ಬಚೇವ್ ವಿರೋಧಿಬಣ ರಚಿತವಾಯಿತು. ಈ ಘಟನೆಯನ್ನು 'ಸೋವಿಯತ್ ವಿರೋಧ ಪಕ್ಷದ ಹುಟ್ಟು' ಎಂದು ವರ್ಣಿಸಲಾಗಿದೆ. ಮಾನವ ಹಕ್ಕುಗಳ ಹೋರಾಟಗಾರರಾದ ಆ್ಯಂಡ್ರಿ ಸಖರೋವ್ ಮತ್ತು ಬೋರಿಸ್ ಎಲ್ಸಿನ್ ಪ್ರಮುಖ ವಿರೋಧಿಗಳಾಗಿದ್ದರು. ಈ ವಿರೋಧಿ ಗುಂಪು ತನ್ನನ್ನು 'ಆಂತರ ಪ್ರಾದೇಶಿಕ ಪ್ರತಿನಿಧಿಗಳ ಬಣ'ವೆಂದು ಗುರ್ತಿಸಿಕೊಂಡಿತು. ಗೊರ್ಬಚೇವ್‌ರವರು ಸೋವಿಯತ್ ಸಮಾಜ ಮತ್ತು ಅರ್ಥ ವ್ಯವಸ್ಥೆಯನ್ನು ಪುನರ್‌ರಚಿಸಲು ಅನೇಕ ಸುಧಾರಣೆಗಳನ್ನು ಸೂಚಿಸಿದ್ದರು. ಪ್ರಾರಂಭದಲ್ಲಿ ಲಿಥುವೆನಿಯ, ಎಸ್ತೊನಿಯ ಮತ್ತು ಲ್ಯಾಟ್ವಿಯಾ ತಮ್ಮ ಸಾರ್ವಭೌಮತ್ವವನ್ನು ಘೋಷಿಸಿಕೊಂಡಿದ್ದನ್ನು 1990ರಲ್ಲಿ ಮಹಾಸೋವಿಯತ್ ಮಾನ್ಯ ಮಾಡಿತು. ಅಕ್ಟೋಬರ್ 1991ರಲ್ಲಿ ಅಜರ್‌ಬೈಜಾನ್ ತನ್ನ ಸ್ವಾತಂತ್ರ್ಯವನ್ನು ಘೋಷಿಸಿಕೊಂಡಿತು.

ಮಹಾ ದುರಂತದೆಡೆಗೆ:

ಪ್ರಖ್ಯಾತ ಭಿನ್ನಮತೀಯನಾದ ಆ್ಯಂಡ್ರಿ ಸಖರೋವ್ ಎಂಬ ಭಿನ್ನಮತೀಯ ಸಾಮ್ರಾಜ್ಯದಂತಹ ರಚನೆಯನ್ನು ಹೊಂದಿದ್ದ ಸೋವಿಯತ್ ಒಕ್ಕೂಟವನ್ನು ಸಂಪೂರ್ಣವಾಗಿ ನಾಶಮಾಡಲು ಕರೆಕೊಟ್ಟನು. ಸ್ವಯಂಪ್ರೇರಿತ

ಒಕ್ಕೂಟ ವ್ಯವಸ್ಥೆಯೊಂದನ್ನು ರಚಿಸಿಕೊಳ್ಳಲು ಸೂಚಿಸಿದನು ಮತ್ತು ಸೋವಿಯತ್ ಒಕ್ಕೂಟದಲ್ಲಿ ಸ್ಟಾಲಿನ್ ಸ್ಥಾಪಿಸಿದ್ದ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ನಾಶಮಾಡಲು ಬಯಸಿದನು. ನೂರು ಜನಾಂಗೀಯ ಗುಂಪುಗಳಿಗಾಗಿ ಪ್ರತ್ಯೇಕಿಸಿದ್ದ 75 ಸೋವಿಯತ್‌ನ ಗಣರಾಜ್ಯಗಳು ಮತ್ತು ಜನ್ಮಭೂಮಿಗಳಿಗೆ ಗರಿಷ್ಠ ಸ್ವಾತಂತ್ರ್ಯ ನೀಡಲು ಒತ್ತಾಯಿಸಿದನು.

ಬೊರಿಸ್ ಎಲ್ಸಿನ್:

1989ರಲ್ಲಿ ಸೋವಿಯತ್ ಒಕ್ಕೂಟವು ಪ್ರಜಾಪ್ರಭುತ್ವ ಸ್ಥಾಪನೆಯತ್ತ ಮುನ್ನಡೆಯಿತು. ಸೋವಿಯತ್ ಮಹಾಸಂಸತ್ತಿಗಾಗಿ ಮೊಟ್ಟಮೊದಲ ಬಹುಸಂಖ್ಯೆಯ ಅಭ್ಯರ್ಥಿಗಳ ಚುನಾವಣೆ ನಡೆಯಿತು. ಗೊರ್ಬಚೇವ್‌ರವರ ವಿರೋಧಿಯಾದ ಬೋರಿಸ್ ಎಲ್ಸಿನ್ ವಿಜೇತರಾಗಿ ಹೊರಹೊಮ್ಮಿದರು. ಸೋವಿಯತ್ ಒಕ್ಕೂಟವು ಆರ್ಥಿಕ ಹಿನ್ನಡೆಯನ್ನು ಎದುರಿಸಬೇಕಾಯಿತು. ಅಜರ್‌ಬೈಜಾನ್ ಮತ್ತು ಅರ್ಮೇನೀಯಗಳಲ್ಲಿ ಜನಾಂಗೀಯ ಹಿಂಸೆಯಿಂದಾಗಿ ರಾಜಕೀಯ ಅಸ್ಥಿರತೆಯುಂಟಾಯಿತು. ರಾಜ್ಯಗಳು ಒಂದರ ನಂತರ ಮತ್ತೊಂದರಂತೆ ಸ್ವಾತಂತ್ರ್ಯ ರಾಷ್ಟ್ರಗಳಾಗಿ ಪ್ರತ್ಯೇಕಗೊಳ್ಳುವುದನ್ನು ತಡೆಯಲು ಗೊರ್ಬಚೇವ್‌ಗೆ ಸಾಧ್ಯವಾಗಲಿಲ್ಲ. ರಷ್ಯಾದ ಅಧ್ಯಕ್ಷನಾದ ಬೊರಿಸ್ ಎಲ್ಸಿನ್ ಅಧಿಕಾರದ ಕೇಂದ್ರವಾಗಿ ಬೆಳೆದ.

ಕ್ಷಿಪ್ರಕ್ರಾಂತಿ [ಕೂಪ್–ಡಿ–ಎಟಾಟ್]–1991:

1991ರ ಆಗಸ್ಟ್ 19ರಿಂದ 21ರವರೆಗೆ ರಷ್ಯಾದಲ್ಲಿ ಒಂದು ಐತಿಹಾಸಿಕ ಘಟನೆ ಸಂಭವಿಸಿತು. ಗೊರ್ಬಚೇವ್ ಕ್ರಿಮಿಯಾದಲ್ಲಿ ರಜೆಯ ಕಾಲವನ್ನು ಕಳೆಯುತ್ತಿದ್ದಾಗ ತೀವ್ರಗಾಮಿಗಳ ಒಂದು ಗುಂಪು ಸರ್ಕಾರವನ್ನು ಪದಚ್ಯುತಿಗೊಳಿಸಿ ಅಧಿಕಾರವನ್ನು ವಶಪಡಿಸಿಕೊಂಡು 6 ತಿಂಗಳ ಕಾಲ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಯಿತು. ಸರ್ಕಾರದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಅವನು ತೀವ್ರ ಅನಾರೋಗ್ಯ ಪೀಡಿತನಾಗಿದ್ದಾನೆಂದು ಬಿಂಬಿಸಿದರು. ಈ ಕ್ಷಿಪ್ರಕ್ರಾಂತಿಯು ವಿಫಲಗೊಂಡು ಆಗಸ್ಟ್ 21ರಂದು ಕೊನೆಯಾಯಿತು. ತೀವ್ರಗಾಮಿಗಳು ತಮ್ಮ ದೇಶದ ಜನರನ್ನೇ ವಿರೋಧಿಸಿದ್ದರಿಂದ ಅವರ ವಿರುದ್ಧ ಅನೇಕ ಪ್ರತಿಭಟನೆಗಳು ನಡೆದವು. ಸಂಸತ್ತು ಗೊರ್ಬಚೇವ್‌ನನ್ನೇ ಅಧ್ಯಕ್ಷರನ್ನಾಗಿ ಪುನರ್ ನೇಮಕಮಾಡಿತು. ದಂಗೆಕೋರ ನಾಯಕರನ್ನು ಬಂಧಿಸಿ ದೇಶದ್ರೋಹದ ಆರೋಪದ ಮೇಲೆ ವಿಚಾರಣೆಗೆ ಒಳಪಡಿಸಲಾಯಿತು. ರಿಪಬ್ಲಿಕ್‌ನ್ನರು ಈ ಕಮ್ಯೂನಿಸ್ಟ್ ಆಳ್ವಿಕೆಯಿಂದ ಹೊರ ಬಂದು ತಮ್ಮ ಸ್ವತಂತ್ರವನ್ನು ಘೋಷಿಸಿಕೊಂಡರು. ಇದರಿಂದಾಗಿ ಗೊರ್ಬಚೇವ್‌ನ ಕನಸು ನುಚ್ಚುನೂರಾಯಿತು. ಮೂರು ಬಾಲ್ಟಿಕ್ ರಾಜ್ಯಗಳಾದ ಲಿಥುವೇನಿಯ, ಲ್ಯಾಟ್ವಿಯಾ ಮತ್ತು ಎಸ್ತೋನೀಯ ಹಾಗೂ ಯುಕ್ರೇನ್, ಜಾರ್ಜಿಯಾ, ಉಜ್‌ಬೇಕಿಸ್ತಾನ್, ಬೆಲಾರಸ್, ಮಾಲ್ಡೇವಿಯ ಮತ್ತು ಕಿರಿಗಿಸ್ಥಾನ್ ಸೋವಿಯತ್ ಒಕ್ಕೂಟದಿಂದ ಹೊರನಡೆದವು.

> ಕ್ಷಿಪ್ರಕ್ರಾಂತಿ [ಕೂಪ್–ಡಿ–ಎಟಾಟ್]: ಸರ್ಕಾರದ ವಿರುದ್ಧ ಜನರ ಗುಂಪೊಂದು ದಂಗೆ ಎದ್ದು ಅನ್ಯಮಾರ್ಗದಿಂದ ಬಲತ್ಕಾರವಾಗಿ ಅಧಿಕಾರ ಪಡೆಯುವುದು.

ಗೊರ್ಬಚೇವ್ ತಕ್ಷಣದಲ್ಲಿ ಅಂದರೆ, ಡಿಸೆಂಬರ್ 25, 1991ರಂದು ಕಮ್ಯೂನಿಸ್ಟ್ ಪಕ್ಷದ ಮುಖ್ಯಸ್ಥ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದನು. ಕಮ್ಯೂನಿಸ್ಟ್ ಪಕ್ಷವು ವಿಸರ್ಜಿಸಲ್ಪಟ್ಟಿತು. 12 ಸೋವಿಯತ್ ಗಣರಾಜ್ಯಗಳ ನಾಯಕರಲ್ಲಿ 11 ಜನ ಅಲ್ಮಾ–ಆಟಾ ಎಂಬಲ್ಲಿ ಐತಿಹಾಸಿಕ ಒಪ್ಪಂದವೊಂದಕ್ಕೆ ಸಹಿ ಹಾಕಿದರು. ಈ ಒಪ್ಪಂದವು ಸ್ವತಂತ್ರ ರಾಜ್ಯಗಳ ಹೊಸ ಕಾಮನ್‌ವೆಲ್ತ್ ಒಕ್ಕೂಟದ ರಚನೆಯನ್ನು ಘೋಷಿಸಿತು. ಹಾಗೂ ಸೋವಿಯತ್ ಒಕ್ಕೂಟದ ವಿಘಟನೆಯನ್ನು ಸಾರಿತು. ಬೊರಿಸ್ ಎಲ್ಸಿನ್ ಈ ಹೊಸ ಸ್ವತಂತ್ರ ರಾಜ್ಯಗಳ ಕಾಮನ್‌ವೆಲ್ತ್ ಒಕ್ಕೂಟದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡನು.

ಸೋವಿಯತ್ ಒಕ್ಕೂಟದ ಪತನ

1991ರ ಕ್ಷಿಪ್ರಕ್ರಾಂತಿ ನಡೆದ ಪ್ರಚಾರ ಪ್ರದೇಶಗಳಲ್ಲಿ ಯುದ್ಧ ಟ್ಯಾಂಕುಗಳು

ಅದ್ವಿತೀಯ ಮಹಾಪ್ರಪಂಚ [ಯುನಿಪೋಲರ್ ವರ್ಲ್ಡ್] :

ಶೀತಲ ಸಮರದ ಅಂತ್ಯದ ವೇಳೆಗೆ ಅದ್ವಿತೀಯ ಪ್ರಪಂಚ ಶಕ್ತಿಯೊಂದು ಉದಯವಾಯಿತು. ಎರಡನೇ ಜಾಗತಿಕ ಯುದ್ಧದ ನಂತರ ವಿಶ್ವಶಕ್ತಿಯು ಎರಡು ಧೃವಗಳಾಗಿ ಹರಿಯಿತು. ಅಮೇರಿಕ ಪಾಶ್ಚಿಮಾತ್ಯ ದೇಶದ ನಾಯಕನಾದರೆ ಸೋವಿಯತ್ ರಷ್ಯಾವು ಪೌರಾತ್ಯ ದೇಶದ ನಾಯಕನಾಯಿತು, ಸೋವಿಯತ್ ರಷ್ಯಾದ ವಿಭಜನೆಯಿಂದಾಗಿ ಅಮೇರಿಕಾವು ಪ್ರಪಂಚದ ಏಕೈಕ ಮಹಾಶಕ್ತಿಯಾಗಿ ಹೊರಹೊಮ್ಮಿತು. ಇದರಿಂದ ಪ್ರಪಂಚದ ಮಹಾಶಕ್ತಿಯ ಧೃವೀಕರಣ ಏಕಮುಖವಾಯಿತು.

11.3 ಸ್ವತಂತ್ರ ರಾಜ್ಯಗಳ ಕಾಮನ್‌ವೆಲ್ತ್ ಒಕ್ಕೂಟ [ಸಿ.ಐ.ಎಸ್–ಕಾಮನ್‌ವೆಲ್ತ್ ಆಫ್ ಇಂಡಿಪೆಂಡೆಂಟ್ ಸ್ಟೇಟ್ಸ್]:

ಈ ಸ್ವತಂತ್ರ ರಾಜ್ಯಗಳ ಕಾಮನ್‌ವೆಲ್ತ್ ಒಕ್ಕೂಟವನ್ನು ಬೆಲಾರಸ್ ಗಣರಾಜ್ಯ, ರಷ್ಯಾದ ಒಕ್ಕೂಟ ಮತ್ತು ಉಕ್ರೇನ್ ರಾಜ್ಯಗಳು ಸೇರಿ 1991ರಲ್ಲಿ ರಚಿಸಿಕೊಂಡವು. ಇದರ ನಾಯಕರು ಬೆಲಾರಸ್‌ನಲ್ಲಿ ಸಭೆ ಸೇರಿ ಸ್ವತಂತ್ರ ರಾಜ್ಯಗಳ ಕಾಮನ್‌ವೆಲ್ತ್ ಒಕ್ಕೂಟವನ್ನು ಮಿನ್ಸ್ಕ್‌ನಲ್ಲಿ ಸ್ಥಾಪಿಸಲು ನಿರ್ಧರಿಸಿ ಒಪ್ಪಂದಕ್ಕೆ ಸಹಿ ಹಾಕಿದರು.

ಸಿ.ಐ.ಎಸ್. ಧ್ವಜ

ಸಿ.ಐ.ಎಸ್ ಚಿನ್ಹೆ

ಸಿ.ಐ.ಎಸ್. ಸನ್ನದು

ಧ್ಯೇಯೋದ್ದೇಶಗಳು :

1) ಪ್ರತಿ ಸದಸ್ಯ ರಾಜ್ಯವು ಒಂದು ಸ್ವಾತಂತ್ರ್ಯ ಮತ್ತು ಸಾರ್ವಭೌಮ ರಾಷ್ಟ್ರ.
2) ಪ್ರತಿಯೊಂದು ಗಣರಾಜ್ಯದ ಗಡಿಯನ್ನು ಮಾನ್ಯ ಮಾಡುವುದು.
3) ಗಣರಾಜ್ಯಗಳನ್ನು ಒಳಗೊಂಡಂತೆ ಒಂದು ಮುಕ್ತ ಮಾರುಕಟ್ಟೆ ವಲಯವನ್ನು ಸ್ಥಾಪಿಸುವುದು.
4) ಗಣರಾಜ್ಯಗಳ ಪ್ರಾತಿನಿಧ್ಯವಿರುವ ಸಂಯುಕ್ತ ರಕ್ಷಣಾ ಪಡೆಯೊಂದನ್ನು ರಚಿಸುವುದು.
5) ಗಡಿ ಉಲ್ಲಂಘಿತ ಅಪರಾಧಗಳನ್ನು ನಿಯಂತ್ರಿಸಲು ಸಹಕಾರ ಬೆಳೆಸುವುದು.
6) ಸದಸ್ಯ ರಾಜ್ಯಗಳ ಪ್ರದೇಶಗಳಲ್ಲಿ ಸಶಸ್ತ್ರ ಹೋರಾಟವನ್ನು ತಡೆಗಟ್ಟುವುದು.
7) ಸದಸ್ಯ ರಾಜ್ಯಗಳ ಆರ್ಥಿಕ ಮತ್ತು ವಿದೇಶಿ ನೀತಿಗಳನ್ನು ಸಂಘಟಿಸುವುದು.

ಸಿ.ಐ.ಎಸ್ ಭೂಪಟ

ಪ್ರಸ್ತುತ ಕಾಮನ್‌ವೆಲ್ತ್ ಸ್ವತಂತ್ರ ರಾಜ್ಯಗಳು :

1) ಅಜರ್‌ಬೈಜಾನ್
2) ಅರ್ಮೇನಿಯಾ
3) ಬೆಲಾರಸ್
4) ಜಾರ್ಜಿಯಾ
5) ಖಜಕೀಸ್ತಾನ್
6) ಮಾಲ್ಡೋವಾ
7) ಖಿರ್ಗಿಜ್‌ಸ್ತಾನ್
8) ರಷ್ಯಾ
9) ತಜಿಕೀಸ್ತಾನ್
10) ತುರ್ಕ್‌ಮೆನಿಸ್ತಾನ್
11) ಉಜ್‌ಬೇಕಿಸ್ತಾನ್
12) ಉಕ್ರೈನ್

ಕಾಮನ್‌ವೆಲ್ತ್ ಒಕ್ಕೂಟ ರಚನೆ
ಒಪ್ಪಂದಕ್ಕೆ ಸಹಿ ಹಾಕುತ್ತಿರುವುದು.

ಕಾಮನ್‌ವೆಲ್ತ್ ಸ್ವತಂತ್ರ ರಾಜ್ಯಗಳ ಕೇಂದ್ರಕಛೇರಿ ಮಿನ್ಸ್ಕ್‌ನಲ್ಲಿದೆ

ಸ್ವತಂತ್ರ ಬಾಲ್ಟಿಕ್ ರಾಜ್ಯಗಳು:

ಈ ಕೆಳಕಂಡ ರಾಜ್ಯಗಳು (ಸಿ.ಐ.ಎಸ್) ಕಾಮನ್‌ವೆಲ್ತ್ ಒಕ್ಕೂಟ ಸೇರಲು ನಿರಾಕರಿಸಿ ಹೊರ ಉಳಿದಿರುವ ರಾಜ್ಯಗಳು :

1) ಎಸ್ತೋನಿಯಾ
2) ಲ್ಯಾಟ್ವಿಯಾ
3) ಲಿಥುವೆನಿಯಾ

*****

ಪ್ರಶ್ನೆಗಳು

ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 1 ಅಂಕ) :

(1) 'ಶೀತಲ ಸಮರ' ಎಂಬ ಪದ ಮೊದಲು ಬಳಕೆಗೆ ಬಂದದ್ದು ಯಾವಾಗ ?

(2) ಶೀತಲ ಸಮರ ಎಂದರೇನು ?

(3) 'ಯೂ ಅಂಡ್ ದಿ ಅಟಾಮಿಕ್ ಬಾಂಬ್' ಎಂಬ ಪ್ರಬಂಧವನ್ನು ಬರೆದವರು ಯಾರು ?

(4) ಶೀತಲ ಸಮರ ಎಂಬ ಪದವನ್ನು ಖಚಿತವಾಗಿ ಮೊದಲು ಬಳಸಿದ ಅಮೇರಿಕಾದ ರಾಜನೀತಜ್ಞನನ್ನು ಹೆಸರಿಸಿ.

(5) ಟ್ರೂಮನ್ ಯಾರು ?

(6) ಮಾರ್ಷಲ್ ಯೋಜನೆಯ ಉದ್ದೇಶವೇನು ?

(7) ಮಾರ್ಷಲ್ ಯೋಜನೆಗೆ ಪ್ರತಿಯಾಗಿ ಯಾವ ಯೋಜನೆಯನ್ನು ಸೋವಿಯತ್ ಒಕ್ಕೂಟ ಜಾರಿಗೆ ತಂದಿತು?

(8) NATO ವಿಸ್ತರಿಸಿ.

(9) SEATO ವಿಸ್ತರಿಸಿ.

(10) CENTO ವಿಸ್ತರಿಸಿ.

(11) ವಾರ್ಸಾ ಒಪ್ಪಂದವನ್ನು ಯು.ಎಸ್.ಎಸ್.ಆರ್ ಯಾವಾಗ ರಚಿಸಿತು ?

(12) ಬರ್ಲಿನ್ ಗೋಡೆಯನ್ನು ಯಾವ ವರ್ಷದಲ್ಲಿ ಕಟ್ಟಲಾಯಿತು ?

(13) ರಷ್ಯಾದ ಗುಪ್ತಚರ ಪಡೆಗೆ ಇರುವ ಹೆಸರು ಯಾವುದು ?

(14) ಅಮೇರಿಕಾದ ಗುಪ್ತಚರ ಪಡೆಯನ್ನು ಹೆಸರಿಸಿ.

(15) ಅಣ್ವಸ್ತ್ರ ಪರೀಕ್ಷೆ ನಿಷೇಧ ಒಪ್ಪಂದಕ್ಕೆ ಯಾವಾಗ ಸಹಿ ಮಾಡಲಾಯಿತು ?

(16) ವಿಯಟ್ನಾಂ ಯುದ್ಧ ಯಾವಾಗ ಕೊನೆಗೊಂಡಿತು ?

(17) SALT ವಿಸ್ತರಿಸಿ.

(18) ಶೀತಲ ಸಮರ ಯಾವ ವರ್ಷ ಕೊನೆಗೊಂಡಿತು ?

(19) ನ್ಯಾಟೋದ ಕೇಂದ್ರ ಕಛೇರಿ ಎಲ್ಲಿದೆ ?

(20) ಸಿಯಾಟೊ ಸ್ಥಾಪನೆಯ ಪ್ರಮುಖ ಉದ್ದೇಶವೇನು ?

(21) ಸೋವಿಯತ್ ಒಕ್ಕೂಟ ಯಾವಾಗ ವಿಘಟನೆಗೊಂಡಿತು ?

(22) ಗ್ಲಾಸ್‌ನಾಸ್ಟ್ ಎಂದರೇನು ?

(23) ಪೆರಿಸ್ಟ್ರೋಯಿಕಾ ಎಂದರೇನು ?

(24) ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಸಿ.ಐ.ಎಸ್ ನ ಮುಖ್ಯಸ್ಥನಾದವನು ಯಾರು ?

(25) ಸಿ.ಐ.ಎಸ್. ಕೇಂದ್ರ ಕಛೇರಿ ಎಲ್ಲಿದೆ ?

ಈ ಕೆಳಕಂಡ ಪ್ರಶ್ನೆಗಳಿಗೆ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 2 ಅಂಕಗಳು):

(1) ನ್ಯಾಟೋದ ಯಾವುದಾದರೂ ನಾಲ್ಕು ರಾಷ್ಟ್ರಗಳನ್ನು ಹೆಸರಿಸಿರಿ.

(2) ಸಿಯಾಟೋದ ಯಾವುದಾದರೂ ನಾಲ್ಕು ರಾಷ್ಟ್ರಗಳನ್ನು ಹೆಸರಿಸಿ.

(3) ಸೆಂಟೋದ ಯಾವುದಾದರೂ ನಾಲ್ಕು ರಾಷ್ಟ್ರಗಳನ್ನು ಹೆಸರಿಸಿ.

(4) ಅಮೇರಿಕಾ ಬಣದ ವಿರೋಧಿ ಸೈನಿಕ ಸಂಘಟನೆ ಯಾವುದು ? ಅದು ಯಾವಾಗ ಅಸ್ತಿತ್ವಕ್ಕೆ ಬಂದಿತು?

(5) ವಾರ್ಸಾ ಒಪ್ಪಂದ ಮಾಡಿಕೊಂಡ ಯಾವುದಾದರೂ ನಾಲ್ಕು ದೇಶಗಳನ್ನು ಹೆಸರಿಸಿ.

(6) ಸ್ವತಂತ್ರ ಬಾಲ್ಟಿಕ್‌ನ ಯಾವುದಾದರೂ ಎರಡು ರಾಜ್ಯಗಳನ್ನು ಹೆಸರಿಸಿ.

(7) ಶೀತಲ ಸಮರವನ್ನು ಮುಕ್ತಾಯಗೊಳಿಸಿದ ಅಮೇರಿಕಾ ಮತ್ತು ರಷ್ಯಾದ ಅಧ್ಯಕ್ಷರುಗಳು ಯಾರು ?

(8) ನ್ಯಾಟೋ ಸ್ಥಾಪನೆಯಾದದ್ದು ಯಾವಾಗ ಮತ್ತು ಎಲ್ಲಿ ?

(9) ರಷ್ಯಾದ ಮಾನವ ಹಕ್ಕುಗಳ ಕಾರ್ಯಕರ್ತರುಗಳು ಯಾರು?

ಈ ಕೆಳಕಂಡ ಪ್ರಶ್ನೆಗಳಿಗೆ 15–20 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 5 ಅಂಕಗಳು):

(1) ಶೀತಲ ಸಮರದ ಕಾರಣಗಳನ್ನು ವಿವರಿಸಿ.

(2) ಬರ್ಲಿನ್ ದಿಗ್ಬಂಧನ ಕುರಿತು ಟಿಪ್ಪಣಿ ಬರೆಯಿರಿ.

(3) ಎರಡನೇ ಬರ್ಲಿನ್ ಬಿಕ್ಕಟ್ಟನ್ನು ಕುರಿತು ಟಿಪ್ಪಣಿ ಬರೆಯಿರಿ.

(4) ಸಿಯಾಟೋ ಒಪ್ಪಂದ ಮತ್ತು ವಾರ್ಸಾ ಒಪ್ಪಂದ ಕುರಿತು ಟಿಪ್ಪಣಿ ಬರೆಯಿರಿ.

(5) ಶೀತಲ ಸಮರದ ಪರಿಣಾಮಗಳು ಯಾವುವು ?

(6) ರಷ್ಯಾದ ವಿಘಟನೆಗೆ ಕಾರಣವಾದ ಅಂಶಗಳು ಯಾವುವು ?

(7) ಸಿ.ಐ.ಎಸ್.ನ ಗುರಿ ಮತ್ತು ಉದ್ದೇಶಗಳು ಯಾವುವು ?

ಈ ಕೆಳಕಂಡ ಪ್ರಶ್ನೆಗಳಿಗೆ 30–40 ವಾಕ್ಯಗಳಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ 10 ಅಂಕಗಳು) :

(1) ಪ್ರಾದೇಶಿಕ ಸೈನಿಕ ಒಪ್ಪಂದಗಳನ್ನು ವಿವರಿಸಿ.

❖ ❖ ❖ ❖ ❖

ಅಧ್ಯಾಯ 12

ಅಲಿಪ್ತ ಚಳುವಳಿ– ಮೂರನೇ ಜಗತ್ತಿನ ಉದಯ

ಅಲಿಪ್ತ ಚಳುವಳಿಯು ಒಂದು ಅಂತಾರಾಷ್ಟ್ರೀಯ ಒಕ್ಕೂಟವಾಗಿದೆ. ಇದು ಶೀತಲ ಸಮರದ ಕಾಲದಲ್ಲಿ ಹುಟ್ಟಿಕೊಂಡಿತು. ಇದು ಅಮೇರಿಕಾ ಅಥವಾ ಸೋವಿಯತ್ ಒಕ್ಕೂಟ ಬಣದ ಜೊತೆ ಸೇರದೆ ಸ್ವತಂತ್ರವಾಗಿರಲು ನಿರ್ಧರಿಸಿದ ರಾಷ್ಟ್ರಗಳ ಒಕ್ಕೂಟವಾಗಿದೆ. ಎರಡನೇ ಜಾಗತಿಕ ಯುದ್ಧದ ನಂತರ ಸ್ವತಂತ್ರಗೊಂಡ ಆಫ್ರಿಕಾ, ಏಷ್ಯಾ ಹಾಗೂ ಲ್ಯಾಟಿನ್ ಅಮೇರಿಕಾ ಖಂಡದ ರಾಷ್ಟ್ರಗಳು ಈ ಕೂಟವನ್ನು ಸೇರಿವೆ. ಅಲಿಪ್ತ ಚಳುವಳಿಯ ರಾಷ್ಟ್ರಗಳೆಲ್ಲವೂ ತೃತೀಯ ಜಗತ್ತಿನ (Third World) ರಾಷ್ಟ್ರಗಳಾಗಿವೆ. ತೃತೀಯ ಜಗತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಗುಂಪಾಗಿದೆ. ಇದು ವಿಶ್ವದ ಎರಡು ಶಕ್ತಿ ಬಣಗಳಲ್ಲಿ ಗುರುತಿಸಿಕೊಳ್ಳದಿರುವುದರಿಂದ ಅಲಿಪ್ತ ಚಳುವಳಿ ಮತ್ತು ತೃತೀಯ ಜಗತ್ತನ್ನು ಒಂದೇ ಅರ್ಥದಲ್ಲಿ ಪರಿಗಣಿಸಲಾಗಿದೆ. ವಿಶ್ವಶಾಂತಿಗಾಗಿ ಅಲಿಪ್ತ ಚಳುವಳಿ ಶ್ರಮಿಸುತ್ತಿದೆ. ಪ್ರಪಂಚದ 120 ದೇಶಗಳು ಅಲಿಪ್ತ ಕೂಟದ ಸದಸ್ಯರಾಗಿವೆ. ವಿಶ್ವದ ಶೇ. 55ಕ್ಕೂ ಹೆಚ್ಚು ಜನಸಂಖ್ಯೆ ಇಲ್ಲಿದ್ದು ವಿಶ್ವದ ಆರ್ಥಿಕ ವ್ಯವಸ್ಥೆಯಲ್ಲಿ ಶೇ.20ರಷ್ಟು ಪಾಲು ಹೊಂದಿದೆ.

ಲ್ಯಾಟಿನ್ ಅಮೇರಿಕಾ:

ಅಮೇರಿಕಾ ಖಂಡಗಳಲ್ಲಿ ಸ್ಪಾನಿಷ್ ಹಾಗೂ ಪೋರ್ಚುಗೀಸ್ ಭಾಷೆಗಳನ್ನು ಬಳಸುವ ಮೆಕ್ಸಿಕೊ, ಮಧ್ಯ ಹಾಗೂ ದಕ್ಷಿಣ ಅಮೇರಿಕಾ, ಕ್ಯೂಬಾ, ಪೊರ್ಟಿರಿಕೊ ಮತ್ತು ಕೆರಬಿಯನ್ ರಾಷ್ಟ್ರಗಳನ್ನು ಲ್ಯಾಟಿನ್ ಅಮೇರಿಕಾ ಎಂದು ಗುರುತಿಸುವರು.



ಅರ್ಥ: ಅಲಿಪ್ತ (Non-alignment) ಎಂಬ ಪದವನ್ನು ವಿ. ಕೆ. ಕೃಷ್ಣ ಮೆನನ್ 1953ರಲ್ಲಿ ವಿಶ್ವಸಂಸ್ಥೆಯ ಭಾಷಣವೊಂದರಲ್ಲಿ ಮೊದಲು ಬಳಸಿದರು. ಇವರು ಭಾರತದ ಪ್ರಧಾನಿ ಜವಾಹರಲಾಲ್ ನೆಹರು ಮಂತ್ರಿಮಂಡಲದಲ್ಲಿ ವಿದೇಶಾಂಗ ಸಚಿವರಾಗಿದ್ದರು. ಆನಂತರದಲ್ಲಿ ನೆಹರು 1954ರಲ್ಲಿ ಕೊಲಂಬೊದಲ್ಲಿ ಮಾಡಿದ ಭಾಷಣವೊಂದರಲ್ಲಿ ಈ ಪದವನ್ನು ಬಳಸಿದರು.

ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟ ರಾಷ್ಟ್ರಗಳು ಅಲಿಪ್ತ ಚಳುವಳಿಯನ್ನು ತಟಸ್ಥ(Neutral) ರಾಷ್ಟ್ರಗಳ ಗುಂಪು ಎಂದು ಕರೆದವು. ತಟಸ್ಥ ಎನ್ನುವುದು ನಿಷ್ಕ್ರಿಯತೆಯನ್ನು ಸೂಚಿಸುತ್ತದೆ ಎಂಬ ಟೀಕೆ ಕೇಳಿ ಬಂದಿತು. ಆದ್ದರಿಂದ, ನೆಹರು ತಟಸ್ಥ ಪದದ ಬದಲಾಗಿ ಅಲಿಪ್ತ ಎಂಬ ಪದವನ್ನು ಬಳಸಿದರು. ಅವರು Non-alignment ಎಂಬ ಪದವನ್ನು ಎರಡೂ ಬಣಗಳಿಗೆ ಸೇರದಿರುವುದು,, ಸಕ್ರಿಯ ತಟಸ್ಥರಾಗಿರುವುದು ಎಂದು ವಿಶ್ಲೇಷಣೆ ಮಾಡಿದರು. ಅಲಿಪ್ತ ನೀತಿ ಚಲನಶೀಲತೆಯನ್ನು ಸೂಚಿಸುತ್ತದೆ ಹಾಗೂ ಎರಡು ಬಲಿಷ್ಠ ಮಿಲಟರಿ ಶಕ್ತಿ ಬಣಗಳ ದಬ್ಬಾಳಿಕೆಯನ್ನು ಶಾಂತಿಯುತವಾಗಿ ಪ್ರತಿಭಟಿಸುವುದು ಎಂಬ ಅರ್ಥ ನೀಡುತ್ತದೆ. ಈ ಚಳುವಳಿ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟ ಬಣಗಳಿಗೆ ಹೊರತಾದುದರಿಂದ **'ಮೂರನೇ ಬಣದ ಚಳುವಳಿ'** (Third World Movement**)** ಎಂದು ಕರೆಯಲಾಗಿದೆ.

ನೆಹರು ದೃಷ್ಟಿಯಲ್ಲಿ ಅಲಿಪ್ತ ಚಳುವಳಿ ಶಸ್ತ್ರಾಸ್ತ್ರಗಳ ಬಲ ಪ್ರಯೋಗವಿಲ್ಲದೇ ಶಾಂತಿ, ಸೌಹಾರ್ದಯುತವಾಗಿ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳುವುದಾಗಿದೆ.

ಒಟ್ಟಿನಲ್ಲಿ ಅಲಿಪ್ತ ಚಳುವಳಿ (Non-aligned Movement) ಎಂದರೆ, ಶಕ್ತಿ ಬಣಗಳ ಆಕ್ರಮಣಶೀಲ ನೀತಿಯನ್ನು ವಿರೋಧಿಸಿ, ಪರಸ್ಪರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದೆ ಸ್ವಾತಂತ್ರ್ಯ, ಸಮಾನತೆಯನ್ನು ಕಾಪಾಡುವುದು ಹಾಗೂ ಶಾಂತಿಯುತ ಸಹಜೀವನವನ್ನು ನಿರ್ಮಿಸುವುದಾಗಿದೆ.

ಪ್ರಥಮ ಜಗತ್ತು: ಬಂಡವಾಳಶಾಹಿ ಮಿಲಟರಿ ಬಣವನ್ನು ಮೊದಲ ಜಗತ್ತು ಎಂದು ಕರೆಯಲಾಗಿದೆ. ಈ ರಾಷ್ಟ್ರಗಳು ವೈಜ್ಞಾನಿಕ, ತಂತ್ರಜ್ಞಾನ ಹಾಗೂ ಆರ್ಥಿಕವಾಗಿ ಮುಂದುವರೆದಿವೆ. ಅವುಗಳೆಂದರೆ, ಅಮೇರಿಕಾ, ಕೆನಡಾ, ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಪಶ್ಚಿಮ ಜರ್ಮನಿ, ಇಟಲಿ, ಪೋರ್ಚುಗಲ್ ಮುಂತಾದವು.

ದ್ವಿತೀಯ ಜಗತ್ತು (1991ರ ಪೂರ್ವದಲ್ಲಿ): ಕಮ್ಯುನಿಸ್ಟ್ ತತ್ವಾಧಾರಿತ ರಾಷ್ಟ್ರಗಳನ್ನು ದ್ವಿತೀಯ ಜಗತ್ತು ಎಂದು ಕರೆಯಲಾಗಿದೆ. ಅವುಗಳೆಂದರೆ, ರಷ್ಯಾ, ಅಲ್ಬೇನಿಯಾ, ಹಂಗೇರಿ, ಪೋಲ್ಯಾಂಡ್, ಜಕೋಸ್ಲಾವಾಕಿಯಾ ಮುಂತಾದವು.

ತೃತೀಯ ಜಗತ್ತು: ತೃತೀಯ ಜಗತ್ತು (Third World) ಎಂಬ ಪದವನ್ನು ಅಲ್ಜೀರಿಯನ್ ಲೇಖಕ ಫ್ರಾಂಟ್ಜ್ ಫೇನಾನ್ (Frantz Fanon) ಮೊದಲು ಬಳಸಿದನು. ಅಭಿವೃದ್ಧಿ ಹೊಂದುತ್ತಿರುವ ಅಥವಾ ಅಲಿಪ್ತ ರಾಷ್ಟ್ರಗಳನ್ನು ತೃತೀಯ ಜಗತ್ತು ಎಂದು ಕರೆಯಲಾಗಿದೆ. ಅವುಗಳೆಂದರೆ, ಭಾರತ, ಈಜಿಪ್ತ. ಯುಗೋಸ್ಲಾವಿಯಾ, ಬ್ರೆಜಿಲ್, ಅರ್ಜೆಂಟೈನಾ, ಮೆಕ್ಸಿಕೋ, ಜಿಂಬಾಬ್ವೆ, ಕಾಂಗೋ, ಕೀನ್ಯಾ, ಶ್ರೀಲಂಕಾ ಮುಂತಾದವು.

* 1991 ರಲ್ಲಿ ಸೋವಿಯತ್ ಅಧ್ಯಕ್ಷ ಗೋರ್ಬಚೆವ್ ಜಾರಿಗೆ ತಂದ ಸುಧಾರಣೆಗಳಿಂದ ಸೋವಿಯತ್ ಒಕ್ಕೂಟ ವಿಸರ್ಜನೆಯಾಯಿತು ಅದ್ದರಿಂದ ದ್ವಿತೀಯ ಜಗತ್ತು ಕಾಣದಾಯಿತು ಹಾಗಾಗಿ ಈಗ ಉಳಿದಿರುವುದು ಮೊದಲ ಮತ್ತು ತೃತೀಯ ಜಗತ್ತು ಮಾತ್ರ.

ಅಲಿಪ್ತ ಚಳುವಳಿಯ ತತ್ವಗಳು:

ಭಾರತ ಮತ್ತು ಚೀನಾ 1954ರಲ್ಲಿ ಸ್ವೀಕರಿಸಿದ ಪಂಚಶೀಲ ತತ್ವಗಳು ಅಲಿಪ್ತ ಚಳುವಳಿಯ ಮುಖ್ಯ ತತ್ವಗಳಾಗಿವೆ. ಅವುಗಳೆಂದರೆ:

1. ಪರಸ್ಪರ ರಾಷ್ಟ್ರಗಳ ಪ್ರಾದೇಶಿಕ ಏಕತೆ ಮತ್ತು ಸಾರ್ವಭೌಮತ್ವವನ್ನು ಗೌರವಿಸುವುದು.
2. ಪರಸ್ಪರರ ಮೇಲೆ ಆಕ್ರಮಣ ಮಾಡದಿರುವುದು.
3. ಅನ್ಯ ರಾಷ್ಟ್ರಗಳ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.
4. ಪರಸ್ಪರ ಸಹಾಯ ಮತ್ತು ಸಮಾನತೆ ತತ್ವದ ಮೇಲೆ ಸ್ನೇಹಸಂಬಂಧ ಬೆಳೆಸುವುದು.
5. ಶಾಂತಿಯುತ ಸಹಬಾಳ್ವೆ.

ಅಲಿಪ್ತ ರಾಷ್ಟ್ರಗಳ ಧ್ಯೇಯಗಳು:

1. ವಿಶ್ವದ ಎರಡು ಬಲಿಷ್ಠ ಸೈನಿಕ ಬಣಗಳಾದ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವಿನ ಶೀತಲಸಮರದ ತೀವ್ರತೆಯನ್ನು ಕಡಿಮೆ ಮಾಡುವುದು ಹಾಗೂ ಈ ಎರಡು ಬಣಗಳಿಂದ ದೂರ ಉಳಿಯುವುದು.
2. ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಶಾಂತಿಯುತ ಮಾತುಕತೆಗಳಿಂದ ಬಗೆಹರಿಸಿಕೊಳ್ಳುವುದು.
3. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ನೀತಿಗಳನ್ನು ವಿರೋಧಿಸುವುದು ಮತ್ತು ಇವುಗಳ ವಿರುದ್ಧ ನಡೆಯುವ ಚಳುವಳಿಗೆ ಬೆಂಬಲ ನೀಡುವುದು.
4. ಅಣ್ವಸ್ತ್ರಗಳನ್ನು ಮಿತಗೊಳಿಸುವ ಒಪ್ಪಂದಗಳಿಗೆ ಬೆಂಬಲ ನೀಡುವುದು ಹಾಗೂ ಸೈನಿಕ ಒಪ್ಪಂದಗಳಿಂದ ಹೊರಬರುವುದು.
5. ಜನಾಂಗೀಯ ಸಂಘರ್ಷ, ವರ್ಗತಾರತಮ್ಯ ಮತ್ತು ವರ್ಣಬೇಧ ನೀತಿಗಳನ್ನು ವಿರೋಧಿಸಿ, ಅವುಗಳ ವಿರುದ್ಧ ಹೋರಾಟವನ್ನು ರೂಪಿಸುವುದು.
6. ವಿಶ್ವದ ಬಲಿಷ್ಠ ಸೈನಿಕ ಬಣಗಳ ಆಕ್ರಮಣ ಹಾಗೂ ಅನ್ಯಾಯಗಳನ್ನು ಖಂಡಿಸುವುದು. ಅವುಗಳ ತಡೆಗೆ ಕ್ರಮಕೈಗೊಳ್ಳುವುದು.
7. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆರ್ಥಿಕ ಶೋಷಣೆಯಿಂದ ದುರ್ಬಲ ರಾಷ್ಟ್ರಗಳನ್ನು ರಕ್ಷಿಸುವುದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಧನ ಸಹಾಯ ನೀಡುವುದು.
8. ಮಾನವನ ಮೂಲಭೂತ ಹಕ್ಕುಗಳನ್ನು ಸಂರಕ್ಷಿಸುವುದು.
9. ಅಲಿಪ್ತ ರಾಷ್ಟ್ರಗಳು ಎದುರಿಸುತ್ತಿರುವ ಬಡತನ, ಹಸಿವು, ಅನಕ್ಷರತೆ ಮುಂತಾದ ಸಮಸ್ಯೆಗಳನ್ನು ಪರಿಹರಿಸುವುದು.
10. ವಿಶ್ವಸಂಸ್ಥೆಯು ಕೈಗೊಳ್ಳುವ ಕಾರ್ಯಕ್ರಮಗಳಿಗೆ ಬೆಂಬಲ ನೀಡುವುದು.
11. ಆರ್ಥಿಕ ಪರಾವಲಂಬನೆಯನ್ನು ಹೋಗಲಾಡಿಸಿ ಸ್ವಾವಲಂಬನೆಯನ್ನು ಮೂಡಿಸುವುದು
12. ಪ್ರಜಾಪ್ರಭುತ್ವ ತತ್ವಗಳನ್ನು ಎತ್ತಿಹಿಡಿವುದು ಮತ್ತು ಅವುಗಳನ್ನು ಜನಪ್ರಿಯಗೊಳಿಸುವುದು.

ಅಲಿಪ್ತ ಒಕ್ಕೂಟ ರಚನೆ:

1961 ಬೆಲ್ಗ್ರೇಡ್ ಸಮ್ಮೇಳನ

ಅಲಿಪ್ತ ಚಳುವಳಿ ಜಗತ್ತಿನ ಬಲಿಷ್ಠ ಎರಡು ಬಣಗಳ ಜೊತೆ ಸೇರದಿರುವುದು ಹಾಗೂ ಅವುಗಳನ್ನು ವಿರೋಧಿಸದಿರುವ ರಾಷ್ಟ್ರಗಳ ಗುಂಪಾಗಿದೆ. ಅಲಿಪ್ತ ರಾಷ್ಟ್ರಗಳ ಮೊದಲ ಸಮ್ಮೇಳನ 1961ರಲ್ಲಿ ಬೆಲ್ಗ್ರೇಡನಲ್ಲಿ ನಡೆಯಿತು. 16ನೇ ಸಮ್ಮೇಳನ ಇರಾನ್‌ನ ಟೆಹರಾನ್‌ಲ್ಲಿ 2012 ರಲ್ಲಿ ನಡೆಯಿತು.

ಅಲಿಪ್ತ ಚಳುವಳಿ ತತ್ವಗಳನ್ನು ಒಪ್ಪಿಕೊಳ್ಳುವ ಯಾವುದೇ ರಾಷ್ಟ್ರ ಈ ಒಕ್ಕೂಟದ ಸದಸ್ಯರಾಗಬಹುದು. ಪ್ರತಿ ಮೂರು ವರ್ಷಕ್ಕೊಮ್ಮೆ ಸಭೆಯನ್ನು ನಡೆಸಲಾಗುವುದು. ಅಲಿಪ್ತ ಚಳುವಳಿ ಒಕ್ಕೂಟಕ್ಕೆ ನಿರ್ದಿಷ್ಠ ಕಛೇರಿ ಇರುವುದಿಲ್ಲ. ವಿಶ್ವಸಂಸ್ಥೆಯಲ್ಲಿದ್ದಂತೆ ಖಾಯಂ ಪ್ರಧಾನ ಕಾರ್ಯದರ್ಶಿ ಇರುವುದಿಲ್ಲ. ಆದರೆ, ಸಮ್ಮೇಳನ ನಡೆಸಿದ ರಾಷ್ಟ್ರದ ಅಧ್ಯಕ್ಷ ಅಥವಾ ಪ್ರಧಾನಿ ಮುಂದಿನ ಮೂರು ವರ್ಷಗಳವರೆಗೆ ಪ್ರಧಾನಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

ಅಲಿಪ್ತ ರಾಷ್ಟ್ರಗಳ ಸಮ್ಮೇಳನ ನಡೆದ ಸ್ಥಳಗಳು ಮತ್ತು ದೇಶ

ಕ್ರಮ ಸಂಖ್ಯೆ	ವರ್ಷ	ಸ್ಥಳ	ದೇಶ
1	1961	ಬೆಲ್ಗ್ರೇಡ್	ಯಗೋಸ್ಲಾವಿಯ
2	1964	ಕೈರೋ	ಈಜಿಪ್ಟ್
3	1970	ಲುಸಾಕ	ಜಾಂಬಿಯಾ
4	1973	ಅಲ್ಜಿರಿಸ್	ಅಲ್ಜೀರಿಯಾ
5	1976	ಕೊಲಂಬೋ	ಶ್ರೀಲಂಕಾ

6	1979	ಹವಾನ	ಕ್ಯೂಬಾ
7	1983	ದೆಹಲಿ	ಭಾರತ
8	1986	ಹರಾರೆ	ಜಿಂಬಾಬ್ವೆ
9	1989	ಬೆಲ್ಗ್ರೇಡ್	ಯಗೋಸ್ಲಾವಿಯ
10	1992	ಜಕಾರ್ತ	ಇಂಡೋನೆಷಿಯಾ
11	1995	ಕಾರ್ತಜೀನ್	ಕೊಲಂಬಿಯಾ
12	1998	ದರ್ಬಾನ್	ದಕ್ಷಿಣ ಆಫ್ರಿಕಾ
13	2003	ಕೌಲಾಲಂಪುರ	ಮಲೇಷಿಯಾ
14	2006	ಹವಾನಾ	ಕ್ಯೂಬಾ
15	2009	ಕೈರೋ	ಈಜಿಪ್ಟ್
16	2012	ಟೆಹರಾನ್	ಇರಾನ್

ಅಲಿಪ್ತ ಚಳುವಳಿ ಉದಯಕ್ಕೆ ಕಾರಣಗಳು:

1. **ರಾಷ್ಟ್ರೀಯತೆಯ ಉದಯ:** ಶೀತಲ ಸಮರಕ್ಕೆ ಮುನ್ನ ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೇರಿಕದಲ್ಲಿ ಕಾಣಿಸಿಕೊಂಡ ರಾಷ್ಟ್ರೀಯತೆಯ ಉದಯದಿಂದ ಅಲ್ಲಿನ ರಾಷ್ಟ್ರಗಳು ಸ್ವಾತಂತ್ರ್ಯಗಳಿಸಿದವು. ಅವುಗಳು ಶಕ್ತಿ ಬಣಗಳಿಂದ ಸ್ವತಂತ್ರವಾಗಿರಲು ನಿರ್ಧರಿಸಿದವು.

2. **ಅಲಿಪ್ತ ರಾಷ್ಟ್ರಗಳ ಸಮಸ್ಯೆಗಳು:** ಸಾಮಾನ್ಯವಾಗಿ ತೃತೀಯ ಜಗತ್ತು ಎದುರಿಸುತ್ತಿದ್ದ ಸಮಸ್ಯೆಗಳಾದ ಬಡತನ, ಅನಕ್ಷರತೆ, ನಿರುದ್ಯೋಗ, ಅತ್ಯಧಿಕ ಜನಸಂಖ್ಯೆ ಮುಂತಾದವುಗಳು ಅಲಿಪ್ತ ಚಳುವಳಿಯ ಉದಯಕ್ಕೆ ಕಾರಣವಾದವು. ಈ ರಾಷ್ಟ್ರಗಳು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಒಂದು ಸಿದ್ಧಾಂತ ಅಥವಾ ಸಂಸ್ಥೆಯ ಅಡಿಯಲ್ಲಿ ಸೇರುವುದು ಅನಿವಾರ್ಯವಾಗಿತ್ತು.

3. **ವಿಶ್ವಶಾಂತಿ ನೀತಿ:** ಬಂಡವಾಳಶಾಹಿ ಮತ್ತು ಸಮಾಜವಾದಿ ಬಣಗಳ ಸಂಘರ್ಷದಿಂದ ವಿಶ್ವಶಾಂತಿಗೆ ಧಕ್ಕೆ ಬಂದಿತ್ತು ಆಗ, ವಿಶ್ವಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ಅಲಿಪ್ತ ಚಳುವಳಿ ಉದಯಿಸಿತು.

4. **ಆರ್ಥಿಕ ಶೋಷಣೆ:** ಅಲಿಪ್ತ ರಾಷ್ಟ್ರಗಳು ಮುಂದುವರೆದ ಜಗತ್ತಿನ ಆರ್ಥಿಕ ಶೋಷಣೆ ಮತ್ತು ಅದರ ಮೇಲಿನ ಅವಲಂಬನೆಯಿಂದ ಮುಕ್ತವಾಗಿ ಅಭಿವೃದ್ಧಿಯನ್ನು ಸಾಧಿಸಲು ಒಂದುಗೂಡಿದವು.

5. **ಶಕ್ತಿ ಬಣಗಳ ಪ್ರಾಬಲ್ಯವನ್ನು ವಿರೋಧಿಸಲು:** ವಿಶ್ವದ ಎರಡು ಶಕ್ತಿ ಬಣಗಳು ತಮ್ಮ ಪ್ರಾಬಲ್ಯವನ್ನು ಇತರ ರಾಷ್ಟ್ರಗಳ ಮೇಲೆ ಹೇರಲಾರಂಭಿಸಿದಾಗ ಅದನ್ನು ವಿರೋಧಿಸಲು ಈ ರಾಷ್ಟ್ರಗಳು ಮುಂದಾದವು.

6. **ಪಂಚಶೀಲ ತತ್ವ:** ನೆಹರು ಅವರ ಪಂಚಶೀಲ ತತ್ವವು ದುರ್ಬಲ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಅಸ್ಥಿತ್ವವನ್ನು ಉಳಿಸಿಕೊಳ್ಳಲು ಸ್ಫೂರ್ತಿ ನೀಡಿತು. ಇದು ಅಲಿಪ್ತ ಚಳುವಳಿಯ ಉಗಮಕ್ಕೆ ಕಾರಣವಾಯಿತು.

7. **ಉತ್ತಮ ನಾಯಕತ್ವ:** ಜವಾಹರಲಾಲ್ ನೆಹರು, ಅಬ್ದುಲ್ ನಾಸೇರ್, ಮಾರ್ಷಲ್ ಟಿಟೋ, ಅಹಮದ್ ಸುಕರ್ನೊ ಮುಂತಾದ ನಾಯಕರು ಅಲಿಪ್ತ ನೀತಿಯ ಅಡಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದರು.

8. **ಶೀತಲ ಸಮರ:** ಎರಡು ಶಕ್ತಿ ಬಣಗಳ ನಡುವೆ ಶೀತಲ ಸಮರ ಆರಂಭವಾಯಿತು. ಇದನ್ನು ನಿಯಂತ್ರಣಕ್ಕೆ ತರಲು ಅಲಿಪ್ತ ಚಳುವಳಿಯ ಅಗತ್ಯತೆ ಇತ್ತು.

ಅಲಿಪ್ತ ರಾಷ್ಟ್ರಗಳ ಲಕ್ಷಣಗಳು:

1. **ಆರ್ಥಿಕವಾಗಿ ಹಿಂದುಳಿದಿರುವುದು:** ಅಲಿಪ್ತ ರಾಷ್ಟ್ರಗಳು ಆರ್ಥಿಕವಾಗಿ ಹಿಂದುಳಿದಿವೆ. ಈ ರಾಷ್ಟ್ರಗಳು ಸಾಂಪ್ರದಾಯಿಕ ಕೃಷಿ ಮತ್ತು ದುರ್ಬಲ ಕೈಗಾರಿಕೆಗಳನ್ನು ಹೊಂದಿವೆ. ಅದ್ದರಿಂದ ಈ ರಾಷ್ಟ್ರಗಳ ರಾಷ್ಟ್ರೀಯ ಉತ್ಪನ್ನ ಹಾಗೂ ತಲಾ ಆದಾಯವು ತುಂಬಾ ಕಡಿಮೆಯಾಗಿರುತ್ತದೆ.

2. **ಪರಾವಲಂಬನೆ:** ವಿಜ್ಞಾನ, ತಂತ್ರಜ್ಞಾನ, ಸೈನಿಕ ಕ್ಷೇತ್ರಗಳಲ್ಲಿ ಅಲಿಪ್ತ ರಾಷ್ಟ್ರಗಳು ತೀರಾ ಹಿಂದುಳಿದಿದ್ದು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಹಾಯದ ಮೇಲೆ ಅವಲಂಬಿತವಾಗಿವೆ.

3. **ಗ್ರಾಮೀಣ ವ್ಯವಸ್ಥೆ ;** ಅಲಿಪ್ತ ರಾಷ್ಟ್ರಗಳು ಬಹುತೇಕವಾಗಿ ಹಳ್ಳಿಗಳಿಂದ ಕೂಡಿವೆ. ಅನೇಕ ಹಳ್ಳಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಈ ರಾಷ್ಟ್ರಗಳು ನಗರೀಕರಣದಿಂದ ದೂರವಿರುವುದರಿಂದ ಅಭಿವೃದ್ಧಿಯಲ್ಲಿ ಹಿಂದುಳಿದಿವೆ.

4. **ಅತ್ಯಧಿಕ ಜನಸಂಖ್ಯೆ :** ಬಡತನ, ಅನಕ್ಷರತೆ, ಮೂಢನಂಬಿಕೆ ಹಾಗೂ ಇತರ ಕಾರಣಗಳಿಂದಾಗಿ ಜನಸಂಖ್ಯೆ ತೀವ್ರವಾಗಿ ಬೆಳೆಯುತ್ತಿದೆ. ಇಲ್ಲಿರುವ ಸರಕಾರಗಳು ಜನಸಂಖ್ಯೆಯನ್ನು ನಿಯಂತ್ರಿಸುವಲ್ಲಿ ವಿಫಲವಾಗಿವೆ. ಜನರ ನಿರಾಸಕ್ತಿಯಿಂದಾಗಿ ಸರಕಾರಗಳು ಜಾರಿಗೆ ತರುವ ಜನಸಂಖ್ಯೆ ನಿಯಂತ್ರಣ ಕಾರ್ಯಕ್ರಮಗಳು ನಿರೀಕ್ಷಿತ ಮಟ್ಟವನ್ನು ತಲುಪಿಲ್ಲ. ಹೆಚ್ಚುತ್ತಿರುವ ಜನಸಂಖ್ಯೆಯು ಆರ್ಥಿಕ ಹಿನ್ನಡೆಗೆ ಕಾರಣವಾಗಿದೆ.

5., **ಬಡತನ ಹಾಗೂ ಹಸಿವು:** ಅಲಿಪ್ತ ರಾಷ್ಟ್ರಗಳಲ್ಲಿನ ಬಡತನ ತುಂಬಾ ಗಂಭೀರ ಸಮಸ್ಯೆಯಾಗಿದೆ. ಈ ರಾಷ್ಟ್ರಗಳಲ್ಲಿ ಆಹಾರ ಧಾನ್ಯಗಳ ಕೊರತೆ ಇದೆ. ಆಹಾರ ಧಾನ್ಯಗಳಿಗಾಗಿ ಮುಂದುವರೆದ ರಾಷ್ಟ್ರಗಳ ಮೇಲೆ ಅವಲಂಬಿಸಿವೆ. ಆಫ್ರಿಕಾದ ಬಹುತೇಕ ಜನತೆ ಬಡತನದಲ್ಲಿ ಜೀವಿಸುತ್ತಿದ್ದಾರೆ. ಬರಗಾಲ, ಪ್ರಾಕೃತಿಕ ವಿಕೋಪ, ವಲಸೆ, ಆಂತರಿಕ ಕಲಹ, ಸಂಪನ್ಮೂಲಗಳ ಅಸಮರ್ಪಕ ಬಳಕೆ ಮುಂತಾದ ಕಾರಣಗಳಿಂದ ಅಲಿಪ್ತ ರಾಷ್ಟ್ರಗಳು ಬಡತನಕ್ಕೆ ತುತ್ತಾಗಿವೆ. ನೈಜೀರಿಯಾ, ಸೋಮಾಲಿಯಾ, ಉಗಾಂಡಾ, ಹೈಟಿ, ಅಂಗೋಲಾ ಮತ್ತು ಇಥೋಪಿಯಾ ಮುಂತಾದ ರಾಷ್ಟ್ರಗಳು ಪೌಷ್ಟಿಕ ಆಹಾರವನ್ನು ನೀಡಲು ಅಸಮರ್ಥವಾಗಿವೆ.

6. **ಸಾಂಕ್ರಾಮಿಕ ರೋಗಗಳ ಹರಡುವಿಕೆ:** ಅಲಿಪ್ತ ರಾಷ್ಟ್ರಗಳಲ್ಲಿ ಆರೋಗ್ಯದ ಬಗ್ಗೆ ನಿರ್ಲಕ್ಷ್ಯತನವಿದೆ. ಸರಿಯಾದ ಆರೋಗ್ಯ ಕಾಳಜಿ ಇಲ್ಲದಿದ್ದರಿಂದ ಈ ರಾಷ್ಟ್ರಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುತ್ತಲಿವೆ. ಇಲ್ಲಿ ಆರೋಗ್ಯ ಸೇವೆಗಳ ಕೊರತೆಯಿದೆ. ವಿಶ್ವ ಮಹಾಮಾರಿ ಏಡ್ಸನಂತಹ ಕಾಯಿಲೆ ಈ ರಾಷ್ಟ್ರಗಳಲ್ಲಿ ಹೆಚ್ಚಾಗಿದೆ.

7. **ಅನಕ್ಷರತೆ:** ಅಲಿಪ್ತ ರಾಷ್ಟ್ರಗಳು ಜಾರಿಗೊಳಿಸುವ ಶೈಕ್ಷಣಿಕ ಅಭಿವೃದ್ಧಿ ಯೋಜನೆಗಳು ವಿಫಲವಾಗಿವೆ. ಇಲ್ಲಿನ ರಾಷ್ಟ್ರಗಳಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಾಗಿದೆ. ಆಫ್ರಿಕಾದ ರಾಷ್ಟ್ರಗಳಲ್ಲಿ ಸಾಕ್ಷರತಾ ಪ್ರಮಾಣ ಕಡಿಮೆಯಿದೆ ಹಾಗೂ ಹೆಣ್ಣು ಮಕ್ಕಳ ಸಾಕ್ಷರತೆಯ ಪ್ರಮಾಣವೂ ತೀರಾ ಕಡಿಮೆಯಿದೆ. ಏಷ್ಯಾದ ರಾಷ್ಟ್ರಗಳು ಇದಕ್ಕೆ ಹೊರತಾಗಿಲ್ಲ.

8. **ಸಾಲಬಾಧೆ:** ಬಹುತೇಕವಾಗಿ ಅಲಿಪ್ತ ರಾಷ್ಟ್ರಗಳು ವಿದೇಶಿ ಸಾಲದ ಬಾಧೆಯಿಂದ ನರಳುತ್ತಿವೆ. ಈ ರಾಷ್ಟ್ರಗಳು ಆಂತರಿಕ ಅಭಿವೃದ್ಧಿ ಯೋಜನೆಗಳಿಗಾಗಿ ವಿಶ್ವ ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದುಕೊಳ್ಳುವುದು ಅನಿವಾರ್ಯವಾಗಿದೆ. ಅವುಗಳು ಹಳೆ ಸಾಲ ಮತ್ತು ಅದರ ಬಡ್ಡಿಯನ್ನು ತೀರಿಸಲು ಹೊಸ ಸಾಲ ಮಾಡಬೇಕಾದ ಪರಿಸ್ಥಿತಿ ಇದೆ.

9. **ವಲಸೆ:** ಉದ್ಯೋಗ, ಆಹಾರ ಮತ್ತು ತಮ್ಮ ಆತ್ಮ ರಕ್ಷಣೆಗಾಗಿ ಒಂದು ದೇಶದಿಂದ ಇನ್ನೊಂದು ದೇಶದ ಸುರಕ್ಷಿತ ಸ್ಥಳಕ್ಕೆ ವಲಸೆ ಹೋಗುವುದು ಸಾಮಾನ್ಯವಾಗಿದೆ. ಆಫ್ರಿಕಾದಲ್ಲಿ ವಲಸೆ ಪ್ರಮಾಣ ಹೆಚ್ಚಿದೆ.

10. ನೀರಿನ ಅಭಾವ, ಅಸ್ಥಿರ ಸರಕಾರಗಳು ಮತ್ತು ಆಧುನಿಕ ಸೈನಿಕ ಶಕ್ತಿಯ ಕೊರತೆ ಮುಂತಾದವುಗಳು ಅಲಿಪ್ತ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿವೆ.

ಅಲಿಪ್ತ ಚಳುವಳಿಯ ಬೆಳವಣಿಗೆ:

1961 ರಿಂದ 2012 ರವರೆಗಿನ ಅಲಿಪ್ತ ರಾಷ್ಟ್ರಗಳ ಸಮ್ಮೇಳನಗಳ ಪಟ್ಟಿ

ಅಲಿಪ್ತ ಚಳುವಳಿ ಉಗಮಕ್ಕೆ ಕಾರಣವಾದ ರಾಷ್ಟ್ರಗಳಲ್ಲಿ ಭಾರತ ಮೊದಲನೆಯದು. ಅಲಿಪ್ತ ಚಳುವಳಿ ಶಿಲ್ಪಿಗಳಲ್ಲಿ ಭಾರತದ ಪ್ರಧಾನಿ ಜವಾಹರಲಾಲ್ ನೆಹರು ಒಬ್ಬರು. 1947ರಲ್ಲಿ ನವದೆಹಲಿಯಲ್ಲಿ ನಡೆದ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಪಾಲ್ಗೊಂಡ ರಾಷ್ಟ್ರಗಳು ಏಷ್ಯಾ ರಾಷ್ಟ್ರಗಳ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಒಂದು ಸಂಘಟನೆಯ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟವು. ಇದು ಮುಂದೆ ಅಲಿಪ್ತ ಚಳುವಳಿಯ ಆರಂಭಕ್ಕೆ ಕಾರಣವಾಯಿತು.

ಬಾಂಡುಂಗ್ ಸಮ್ಮೇಳನ: 1955

ನೆಹರು, ನಕ್ರುಮಹ್, ನಾಸೀರ್, ಸುಕರ್ನೋ ಮತ್ತು ಟಿಟೋ

ಆಫ್ರಿಕಾ ಮತ್ತು ಏಷ್ಯಾ ರಾಷ್ಟ್ರಗಳ ಸಮ್ಮೇಳನವು ಇಂಡೋನೇಷ್ಯಾದ ಬಾಂಡುಂಗ್‌ನಲ್ಲಿ 1955ರಲ್ಲಿ ಜರುಗಿತು. ಇಂಡೋನೇಷ್ಯಾದ ಅಧ್ಯಕ್ಷ ಅಹಮದ್ ಸುಕರ್ನೋ ಈ ಸಮ್ಮೇಳನವನ್ನು ಸಂಘಟಿಸಿ, ಅಧ್ಯಕ್ಷತೆಯನ್ನು ವಹಿಸಿದ್ದರು ಮತ್ತು ಇದರಲ್ಲಿ ಒಟ್ಟು 29 ರಾಷ್ಟ್ರಗಳು ಭಾಗವಹಿಸಿದ್ದವು. ಭಾರತದ ಪ್ರಧಾನಿ ಜವಾಹರಲಾಲ್ ನೆಹರು, ಇಂಡೋನೇಷ್ಯಾದ ಅಧ್ಯಕ್ಷ ಅಹಮದ್ ಸುಕರ್ನೊ, ಯುಗೋಸ್ಲಾವಿಯಾದ ಅಧ್ಯಕ್ಷ ಜೊಸಿಫ್ ಬ್ರಾಜ್ ಟಿಟೊ , ಈಜಿಪ್ತನ ಅಧ್ಯಕ್ಷ ಗಮಾಲ್ ಅಬ್ದುಲ್ ನಾಸೆರ್, ಘಾನಾ ಅಧ್ಯಕ್ಷ ಕ್ವಾಮೆ ನಕ್ರುಮಹ್, ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಮುಖರು. ಇವರನ್ನು ಅಲಿಪ್ತ ಚಳುವಳಿಯ ಸ್ಥಾಪಕರೆಂದು ಕರೆಯಲಾಗಿದೆ. ಇವರು ಅಮೇರಿಕಾ ಹಾಗೂ ಸೋವಿಯತ್ ಒಕ್ಕೂಟದೊಂದಿಗೆ ಶಾಂತಿಯುತ, ಸೌಹಾರ್ದಯುತ, ಸೈನಿಕ, ರಾಜಕೀಯ, ಆರ್ಥಿಕ ದ್ವಿಪಕ್ಷೀಯ ಸಂಬಂಧದ ಅಭಿಲಾಷೆಯನ್ನು ಹೊಂದಿದ್ದರು. ಸಮ್ಮೇಳನದಲ್ಲಿ ನೆಹರು ಪಂಚಶೀಲ ತತ್ವಗಳನ್ನು ಮಂಡಿಸಿದರು, ಅವುಗಳನ್ನು ನಾಸೀರ್, ಟಿಟೋ, ಸುಕರ್ನೊ ಅನುಮೋದಿಸಿದರು.

ವಿಶ್ವ ಶಾಂತಿಯ ಅಗತ್ಯತೆಯನ್ನು ಬಾಂಡುಂಗ್ ಸಮ್ಮೇಳನ ಪ್ರತಿಪಾದಿಸಿತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಪ್ರಬಲ ಸ್ಪರ್ಧೆ ನೀಡುವ ಇಚ್ಛೆ ಈ ಸಭೆಯ ಮೂಲಕ ವ್ಯಕ್ತವಾಯಿತು. ಹೀಗೆ 1947ರ ದೆಹಲಿ ಮತ್ತು ಬಾಂಡುಂಗ್ ಸಮ್ಮೇಳನಗಳು ಅಲಿಪ್ತ ಚಳುವಳಿಗೆ ನಾಂದಿಯಾದವು.

ಪ್ರಮುಖ ನಿರ್ಣಯಗಳು:

- ಆಫ್ರಿಕಾ ಮತ್ತು ಏಷ್ಯಾ ರಾಷ್ಟ್ರಗಳ ನಡುವೆ ಪರಸ್ಪರ ಆರ್ಥಿಕ ಸಹಕಾರ ಮತ್ತು ಸಾಂಸ್ಕೃತಿಕ ವಿನಿಮಯ ಏರ್ಪಡಿಸುವುದು.

- ಅಂತಾರಾಷ್ಟ್ರೀಯ ಶಾಂತಿಯುತ ಸಹಜೀವನಕ್ಕೆ ಒತ್ತು ನೀಡುವುದು.
- ಇತರ ರಾಷ್ಟ್ರಗಳ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.
- ಮಾನವನ ಮೂಲಭೂತ ಹಕ್ಕುಗಳ ರಕ್ಷಣೆ.
- ವಿಶ್ವದ ಬಲಿಷ್ಠ ಸೈನಿಕ ಬಣಗಳಿಗೆ ಸೇರದಿರುವುದು

ಬೆಲ್ಗ್ರೇಡ್ ಸಮ್ಮೇಳನ: 1961

ನಾಸೆರ್, ಟಿಟೋ, ನೆಹರು

ಅಲಿಪ್ತ ಚಳುವಳಿಯ ಮೊದಲ ಸಮ್ಮೇಳನವು ಯುಗೋಸ್ಲಾವಿಯಾದ ರಾಜಧಾನಿ ಬೆಲ್ಗ್ರೇಡ್‌ನಲ್ಲಿ 1961ರಲ್ಲಿ ನಡೆಯಿತು. ಸಮ್ಮೇಳನವನ್ನು ಯುಗೋಸ್ಲಾವಿಯಾದ ಅಧ್ಯಕ್ಷ ಜೊಸಿಪ್ ಬ್ರಾಜ್ ಟಿಟೊ ಅಯೋಜಿಸಿ, ಅಧ್ಯಕ್ಷತೆಯನ್ನು ವಹಿಸಿದ್ದರು. ಆಫ್ರಿಕಾ ಮತ್ತು ಏಷಿಯಾದ ಒಟ್ಟು 25 ರಾಷ್ಟ್ರಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದವು. ಟಿಟೊ, ನೆಹರು ಮತ್ತು ನಾಸೇರ್ ಸಮ್ಮೇಳನದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಇವರನ್ನು ಅಲಿಪ್ತ ಚಳುವಳಿ ಬಣದ 'ತ್ರಿಮೂರ್ತಿ'ಗಳೆಂದು ಕರೆಯಲಾಯಿತು. ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಯಿತು.

ಪ್ರಮುಖ ನಿರ್ಣಯಗಳು:

- ಶೀತಲ ಸಮರದ ತೀವ್ರತೆಯನ್ನು ಕಡಿಮೆ ಮಾಡುವುದು.
- ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಣ್ವಸ್ತ್ರಗಳನ್ನು ನಿಷೇಧಿಸುವುದು.

- ವಸಾಹತುಶಾಹಿಯನ್ನು ವಿರೋಧಿಸುವುದು.
- ನಿಶ್ಯಸ್ತ್ರೀಕರಣ ಜಾರಿಗೊಳಿಸುವುದು.
- ವಿಶ್ವಸಂಸ್ಥೆಯ ಜೊತೆಯಲ್ಲಿ ಮುನ್ನಡೆಯುವುದು.
- ವರ್ಣಭೇದ ನೀತಿಯನ್ನು ಹೋಗಲಾಡಿಸುವುದು.
- ವಿಶ್ವ ಶಾಂತಿಗಾಗಿ ಪ್ರಯತ್ನಿಸುವುದು.

ಈ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರಮುಖ ರಾಷ್ಟ್ರಗಳು: ಭಾರತ, ಅಫಘಾನಿಸ್ತಾನ್, ಅಲ್ಜೀರಿಯಾ, ಬರ್ಮಾ, ಕಾಂಬೋಡಿಯಾ, ಶ್ರೀಲಂಕಾ, ಕ್ಯೂಬಾ, ಈಜಿಪ್ತ್, ಘಾನಾ, ಇರಾಕ್, ಮುಂತಾದವು.

ಅಲಿಪ್ತ ಚಳುವಳಿಯ ಸಾಧನೆಗಳು:

ಅಲಿಪ್ತ ಚಳುವಳಿ ವಿಶ್ವಸಂಸ್ಥೆಯ ಜೊತೆಗೂಡಿ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಲು ಶ್ರಮಿಸುತ್ತಿದೆ. ವಿಶ್ವ ಸಂಸ್ಥೆಯ ಸಾಧನೆಗಳಲ್ಲಿ ಅಲಿಪ್ತ ಚಳುವಳಿಯ ಪಾತ್ರವಿದೆ. ಅಲಿಪ್ತ ಚಳುವಳಿಯ ಸಾಧನೆಗಳು ಈ ಕೆಳಕಂಡಂತೆ ಇವೆ:

1. ಅಲಿಪ್ತ ಚಳುವಳಿ ಶೀತಲ ಸಮರದ ತೀವ್ರತೆಯನ್ನು ಕಡಿಮೆ ಮಾಡಲು ಸಹಾಯ ಮಾಡಿದೆ.
2. ಕೊರಿಯಾ, ವಿಯಾಟ್ನಾಂ, ಕ್ಯೂಬಾ, ಕುವೈತ್‌ಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅಲಿಪ್ತ ಚಳುವಳಿ ವಿಶ್ವಸಂಸ್ಥೆಗೆ ಸಹಾಯ ಮಾಡಿದೆ.
3. ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯನ್ನು ಹೋಗಲಾಡಿಸಲು ಶ್ರಮಿಸಿದೆ.
4. ಅಣ್ವಸ್ತ್ರಗಳನ್ನು ಮಿತಗೊಳಿಸುವ ಒಪ್ಪಂದಗಳಿಗೆ ಸ್ಫೂರ್ತಿಯಾಗಿದೆ.
5. ಶಕ್ತಿ ಬಣಗಳ ಪ್ರಾಬಲ್ಯವನ್ನು ತಡೆಯಲು ಶ್ರಮಿಸಿದೆ.
6. ಪ್ರಜಾಪ್ರಭುತ್ವ ತತ್ವವನ್ನು ಜನಪ್ರಿಯಗೊಳಿಸಿದೆ.
7. ಅಂತಾರಾಷ್ಟ್ರೀಯ ಶಾಂತಿ ಸ್ಥಾಪನೆಗೆ ಶ್ರಮಿಸುತ್ತಿದೆ.
8. ಸದಸ್ಯ ರಾಷ್ಟ್ರಗಳ ಸಮಸ್ಯೆಗಳ ನಿವಾರಣೆಗಾಗಿ ಪ್ರಯತ್ನಿಸುತ್ತಿದೆ.
9. ಸದಸ್ಯ ರಾಷ್ಟ್ರಗಳ ಸ್ವಾವಲಂಬನೆಗಾಗಿ ಹೋರಾಡುತ್ತಿದೆ.

ಅಲಿಪ್ತ ಚಳುವಳಿಯ ಇತಿಮಿತಿಗಳು:

ಅಲಿಪ್ತ ಚಳುವಳಿಯು ಶಾಂತಿ ಮಾರ್ಗವನ್ನು ಅನುಸರಿಸುತ್ತಾ ಬಂದಿದೆ. ಅದು ಮಿಲಟರಿ ಶಕ್ತಿ ಬಣಗಳನ್ನು ವಿರೋಧಿಸುತ್ತಿದೆ. ಆರ್ಥಿಕವಾಗಿ ಹಿಂದುಳಿದ ಹಾಗೂ ಶೀತಲ ಸಮರದ ಕಾಲಕ್ಕೆ ಸ್ವತಂತ್ರಗೊಂಡ ರಾಷ್ಟ್ರಗಳೆಲ್ಲವೂ ತಮ್ಮ ರಾಜಕೀಯ ಸಾರ್ವಭೌಮತ್ವ ಮತ್ತು ಆರ್ಥಿಕ ಅಭಿವೃದ್ಧಿ ಸಾಧನೆಗಾಗಿ ಒಂದೆಡೆ ಸೇರಿದವು. ಅಲಿಪ್ತ ಚಳುವಳಿಯು ಸ್ವಂತ ಸೈನ್ಯವನ್ನಾಗಲೀ, ಆರ್ಥಿಕ ಸಬಲತೆಯನ್ನಾಗಲೀ ಹೊಂದಿಲ್ಲ. ಅನಿವಾರ್ಯವಾಗಿ ಅವು

ಅಭಿವೃದ್ಧಿಹೊಂದಿದ ರಾಷ್ಟ್ರಗಳಿಂದ ಆರ್ಥಿಕ ಸಹಾಯವನ್ನು ಪಡೆಯುತ್ತಾ ಬಂದಿವೆ. ಇದು ಅಲಿಪ್ತ ಚಳುವಳಿಯ ದುರ್ಬಲತೆಯನ್ನು ತೋರಿಸುತ್ತದೆ. ಈ ಕೆಳಗಿನ ಕೆಲವು ಸಂದರ್ಭಗಳಲ್ಲಿ ಅಲಿಪ್ತ ಚಳುವಳಿಯ ಇತಿಮಿತಿಗಳನ್ನು ಕಾಣಬಹುದು:

- 1990 ಆಗಸ್ಟ್ 2ರಂದು ಕುವೈತ್‌ನ್ನು ಇರಾಕ್ ಆಕ್ರಮಿಸಿಕೊಂಡಿತು. ಈ ಎರಡೂ ರಾಷ್ಟ್ರಗಳು ಅಲಿಪ್ತ ಚಳುವಳಿಯ ಸದಸ್ಯರಾಗಿದ್ದರೂ ಸಮಸ್ಯೆಯನ್ನು ಬಗೆಹರಿಸುವಲ್ಲಿ ಅದು ವಿಫಲವಾಯಿತು.
- ಅರಬ್ ರಾಷ್ಟ್ರಗಳು ಅಲಿಪ್ತ ಕೂಟದ ಬಗ್ಗೆ ಪೂರ್ಣ ಆಸಕ್ತಿ ಹೊಂದಿಲ್ಲ.
- ಅಲಿಪ್ತ ಚಳುವಳಿಗೆ ಆರಂಭದಲ್ಲಿ ದೊರೆತ ಸಮರ್ಥ ನಾಯಕತ್ವ ಈಚೆಗೆ ದೊರೆಯುತ್ತಿಲ್ಲ.
- ಅಲಿಪ್ತ ರಾಷ್ಟ್ರಗಳ ನಡುವೆ ಇರುವ ಆಂತರಿಕ ಜಗಳ ಹಾಗೂ ಏಕತೆಯ ಕೊರತೆಯಿಂದಾಗಿ ಅದು ದುರ್ಬಲವಾಗುತ್ತಿದೆ.
- ಅಲಿಪ್ತ ರಾಷ್ಟ್ರಗಳು ಒಂದೆಡೆ ನಿಶ್ಯಸ್ತ್ರೀಕರಣವನ್ನು ಬೋಧಿಸುತ್ತಿವೆಯಾದರೂ, ಇನ್ನೊಂದೆಡೆ ಬಲಿಷ್ಠ ರಾಷ್ಟ್ರಗಳಿಂದ ಶಸ್ತ್ರಾಸ್ತ್ರಗಳನ್ನು ಖರೀದಿಸುತ್ತಿವೆ
- ಅಲಿಪ್ತ ರಾಷ್ಟ್ರಗಳಿಗೆ ಸ್ವಂತ ಸೇನಾ ಬಲವಿಲ್ಲ, ಕೇವಲ ಖಂಡನೆ, ಶಾಂತಿಮಾತುಗಳಿಂದ ಸಾಧನೆ ಮಾಡುವುದು ಅಸಾಧ್ಯವಾಗಿದೆ.
- ಭಯೋತ್ಪಾದನೆಯನ್ನು ನಿಯಂತ್ರಿಸುವಲ್ಲಿ ಅಲಿಪ್ತ ರಾಷ್ಟ್ರಗಳು ಸೋತಿವೆ.

ಭಾರತ ಮತ್ತು ಅಲಿಪ್ತ ಚಳುವಳಿ:

ಅಲಿಪ್ತ ಚಳುವಳಿಯ ಸ್ಥಾಪನೆಯಲ್ಲಿ ಭಾರತವು ಪ್ರಮುಖ ಪಾತ್ರವನ್ನು ವಹಿಸಿದೆ. ಭಾರತದ ಪ್ರಧಾನಿ ಜವಾಹರಲಾಲ್ ನೆಹರು ಅವರನ್ನು ಅಲಿಪ್ತ ಚಳುವಳಿಯ ಶಿಲ್ಪಿ ಎಂದು ಕರೆಯಲಾಗಿದೆ. ಅವರ **'ಪಂಚಶೀಲವು'** ಅಲಿಪ್ತ ಚಳುವಳಿಯ ಮುಖ್ಯ ತತ್ವಗಳಾಗಿವೆ. ಭಾರತ ಅಲಿಪ್ತ ಚಳುವಳಿಗೆ ಹೆಸರು ನೀಡುವುದರೊಂದಿಗೆ ಸ್ಫೂರ್ತಿಯನ್ನೂ ನೀಡಿದೆ. ಈ ಕೆಳಗಿನ ಅಂಶಗಳು ಭಾರತ ಮತ್ತು ಅಲಿಪ್ತ ಚಳುವಳಿ ನಡುವಿನ ಸಂಬಂಧವನ್ನು ತಿಳಿಸುತ್ತವೆ:

- ಭಾರತವು ಇತರ ಅಲಿಪ್ತ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದೆ. ಅಲಿಪ್ತ ನೀತಿಯನ್ನು ಅಧಿಕೃತವಾಗಿ ಘೋಷಿಸಿದ ಬಾಂಡುಂಗ್ ಸಮ್ಮೇಳನದಲ್ಲಿ ನೆಹರು ಅವರ ತತ್ವಗಳಿಗೆ ವಿಶ್ವಮನ್ನಣೆ ದೊರೆಯಿತು.
- ಅಲಿಪ್ತ ರಾಷ್ಟ್ರಗಳ 7ನೇಯ ಸಮ್ಮೇಳನವು 1983ರಲ್ಲಿ ಭಾರತದ ರಾಜಧಾನಿ ದೆಹಲಿಯಲ್ಲಿ ನಡೆಯಿತು. ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ನಾವು ಒಗ್ಗಟ್ಟಿನ ಧ್ವನಿಯಾಗಬೇಕೆಂದರು. ಈ ಸಮ್ಮೇಳನದಲ್ಲಿ ನಿಶ್ಯಸ್ತ್ರೀಕರಣ, ಆರ್ಥಿಕ ಅಭಿವೃದ್ಧಿ, ತಾಂತ್ರಿಕ ನೆರವು ಮುಂತಾದ ವಿಷಯಗಳನ್ನು ಚರ್ಚಿಸಲಾಯಿತು. ಪ್ಯಾಲೆಸ್ಟೈನ್‌ನಿಂದ ಇಸ್ರೇಲ್ ತನ್ನ ಸೈನ್ಯವನ್ನು ವಾಪಸ್ಸು ಕರೆಯಿಸಿಕೊಳ್ಳಬೇಕೆಂದು ಭಾರತ ಆಗ್ರಹಿಸಿತು.
- ಹರಾರೆಯಲ್ಲಿ ನಡೆದ 8ನೇಯ ಸಮ್ಮೇಳನದಲ್ಲಿ ಭಾರತದ ಪ್ರಧಾನಿ ರಾಜೀವ್‌ಗಾಂಧಿಯವರು ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾರನ್ನು ಬಿಡುಗಡೆಗೊಳಿಸುವಂತೆ ಆಗ್ರಹಿಸಿದರು ಹಾಗೂ ಕರಿಯರು ನಡೆಸುತ್ತಿದ್ದ ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡುವ ಸಲುವಾಗಿ **'ಆಫ್ರಿಕಾ ನಿಧಿ'**ಯನ್ನು ಸ್ಥಾಪಿಸಿದರು.

- ಅಲಿಪ್ತ ರಾಷ್ಟ್ರಗಳ 9ನೇಯ ಸಮ್ಮೇಳನವು ಯುಗೋಸ್ಲಾವಿಯಾದ ರಾಜಧಾನಿ ಬೆಲ್ಗ್ರೇಡ್‌ನಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ರಾಜೀವ್‌ಗಾಂಧಿಯವರು ಪರಿಸರ ಸಂರಕ್ಷಣೆಗಾಗಿ **'ಭೂ ಸಂರಕ್ಷಣಾ ನಿಧಿ'**ಯನ್ನು ಸ್ಥಾಪಿಸುವಂತೆ ಕರೆ ನೀಡಿದರು.

- ಅಲಿಪ್ತ ರಾಷ್ಟ್ರಗಳ 12 ಮತ್ತು 13ನೇ ಸಮ್ಮೇಳನದಲ್ಲಿ ಭಾರತದ ಪ್ರಧಾನಿ ಅಟಲ್‌ಬಿಹಾರಿ ವಾಜಪೇಯಿಯವರು ಅಂತಾರಾಷ್ಟ್ರೀಯ ಭಯೋತ್ಪಾದನೆ ನಿಗ್ರಹಕ್ಕೆ ಸ್ಪಷ್ಟ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂದು ಕರೆ ನೀಡಿದರು. ಅಣ್ವಸ್ತ್ರಗಳ ಮೇಲೆ ನಿಷೇಧ ಹೇರುವ ಒತ್ತಾಯವನ್ನು ಭಾರತ ಬೆಂಬಲಿಸಿತು.

- 14ನೇ ಸಮ್ಮೇಳನದಲ್ಲಿ ಭಾರತದ ಪ್ರಧಾನಿ ಮನಮೋಹನ್‌ಸಿಂಗ್ ಅವರು ಅಂತಾರಾಷ್ಟ್ರೀಯ ಭಯೋತ್ಪಾದನೆ ಹಾಗೂ ಅಣ್ವಸ್ತ್ರಗಳ ಮೇಲೆ ನಿಷೇಧ ಹೇರುವ ವಿಷಯವನ್ನು ಪ್ರಸ್ತಾಪಿಸಿದರು. 15ನೇ ಸಮ್ಮೇಳನದಲ್ಲಿ ಅವರು ಮುಂಬೈ ದಾಳಿ ಮತ್ತು ಭಯೋತ್ಪಾದನೆ ವಿಷಯಗಳನ್ನು ಅಲಿಪ್ತ ರಾಷ್ಟ್ರಗಳ ಗಮನಕ್ಕೆ ತಂದರು.

- ಇರಾನ್‌ನಲ್ಲಿ ನಡೆದ 16ನೇ ಸಮ್ಮೇಳನದಲ್ಲಿ ಭಾರತದ ಪ್ರಧಾನಿ ಮನಮೋಹನ್‌ಸಿಂಗ್ ಅಣ್ವಸ್ತ್ರ ಮತ್ತು ಭಯೋತ್ಪಾದನೆ ಪ್ರಸರಣ ವಿರುದ್ಧ ಜಾಗತಿಕ ಕ್ರಮದ ಅಗತ್ಯತೆಯನ್ನು ಪ್ರತಿಪಾದಿಸಿದರು. ಸಿರಿಯಾ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಸರ್ವಸಮ್ಮತವಾಗುವ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಕರೆ ನೀಡಿದರು

ಹೀಗೆ, ಭಾರತವು ಅಲಿಪ್ತ ಚಳುವಳಿಯೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಂಡಿದೆ.

ಪ್ರಶ್ನೆಗಳು

ಕೆಳಗಿನವುಗಳನ್ನು ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ (ಪ್ರತಿಯೊಂದಕ್ಕೂ ಒಂದು ಅಂಕ)

1) 'ಅಲಿಪ್ತ' ಎಂಬ ಪದವನ್ನು ಮೊದಲು ಬಳಸಿದವರು ಯಾರು?
2) ಅಲಿಪ್ತ ಚಳುವಳಿ ಎಂದರೇನು?
3) ನೆಹರು ದೃಷ್ಟಿಯಲ್ಲಿ ಅಲಿಪ್ತ ಚಳುವಳಿ ಎಂದರೇನು?
4) ಅಲಿಪ್ತ ರಾಷ್ಟ್ರಗಳ ಮೊದಲ ಸಮ್ಮೇಳನ ಎಲ್ಲಿ ನಡೆಯಿತು?
5) ಬಾಂಡುಂಗ್ ಸಮ್ಮೇಳನ ನಡೆದ ವರ್ಷ ಯಾವುದು?
6) ಬೆಲ್ಗ್ರೇಡ್ ಸಮ್ಮೇಳನ ನಡೆದ ವರ್ಷ ಯಾವುದು?
7) ಬಾಂಡುಂಗ್ ಸಮ್ಮೇಳನದಲ್ಲಿ ಭಾಗವಹಿಸಿದ ಭಾರತೀಯ ಪ್ರಧಾನಿ ಯಾರು?
8) ಬಾಂಡುಂಗ್ ಸಮ್ಮೇಳನದಲ್ಲಿ ಭಾಗವಹಿಸಿದ ಇಂಡೋನೇಷ್ಯಾದ ಅಧ್ಯಕ್ಷ ಯಾರು?
9) ಬಾಂಡುಂಗ್ ಸಮ್ಮೇಳನದಲ್ಲಿ ಭಾಗವಹಿಸಿದ ಈಜಿಪ್ತ್‌ನ ಅಧ್ಯಕ್ಷನನ್ನು ಹೆಸರಿಸಿ.
10) ದೆಹಲಿಯಲ್ಲಿ ನಡೆದ ಅಲಿಪ್ತರಾಷ್ಟ್ರಗಳ ಸಮ್ಮೇಳನದ ಅಧ್ಯಕ್ಷತೆಯನ್ನು ಯಾರು ವಹಿಸಿದ್ದರು?

ಕೆಳಗಿನವುಗಳಿಗೆ ಎರಡು ಪದ ಅಥವಾ ಎರಡು ವಾಕ್ಯದಲ್ಲಿ ಉತ್ತರಿಸಿ(ಪ್ರತಿಯೊಂದಕ್ಕೆ ಎರಡು ಅಂಕಗಳು)

1) 'ಅಲಿಪ್ತ' ಎಂಬ ಪದವನ್ನು ಮೊದಲು ಬಳಸಿದವರು ಯಾರು ಮತ್ತು ವರ್ಷ ಯಾವುದು?
2) ಜವಹಾರಲಾಲ್ ನೆಹರು ಅಲಿಪ್ತ ಎಂಬ ಪದವನ್ನು ಬಳಸಿದ್ದು ಎಲ್ಲಿ ಮತ್ತು ವರ್ಷ ಯಾವುದು?
3) ಅಲಿಪ್ತ ಚಳುವಳಿಯ ಎರಡು ತತ್ವಗಳನ್ನು ತಿಳಿಸಿ.
4) ಬಾಂಡುಂಗ್ ಸಮ್ಮೇಳನ ನಡೆದ ವರ್ಷ ಯಾವುದು ಮತ್ತು ಅದರ ಅಧ್ಯಕ್ಷರು ಯಾರು?
5) ಬಾಂಡುಂಗ್ ಸಮ್ಮೇಳನದ ಇಬ್ಬರು ನಾಯಕರನ್ನು ಹೆಸರಿಸಿ.
6) ಅಲಿಪ್ತ ಚಳುವಳಿ ಬಣದ ತ್ರಿಮೂರ್ತಿಗಳೆಂದು ಯಾರನ್ನು ಕರೆಯಲಾಗಿದೆ?
7) ಬೆಲ್ಗ್ರೇಡ್ ಸಮ್ಮೇಳವು ನಡೆದ ವರ್ಷ ಯಾವುದು ಮತ್ತು ಅದರ ಅಧ್ಯಕ್ಷರು ಯಾರು?
8) ಅಲಿಪ್ತ ಚಳುವಳಿ ಯಾವ ಸ್ಥಳದಿಂದ ಆರಂಭವಾಯಿತು? ಯಾವಾಗ?
9) ಅಲಿಪ್ತ ರಾಷ್ಟ್ರಗಳ ಮೊದಲ ಸಮ್ಮೇಳನ ಯಾವಾಗ ನಡೆಯಿತು? ಅದರ ಅಧ್ಯಕ್ಷರು ಯಾರು?
10) ಅಲಿಪ್ತ ರಾಷ್ಟ್ರಗಳ 7ನೇ ಸಮ್ಮೇಳನ ನಡೆದ ವರ್ಷಯಾವುದು? ಎಲ್ಲಿ?

ಕೆಳಗಿನವುಗಳಿಗೆ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ(ಪ್ರತಿಯೊಂದಕ್ಕೆ 5 ಅಂಕಗಳು)

1) ಅಲಿಪ್ತ ಚಳುವಳಿಯ ಧ್ಯೇಯಗಳನ್ನು ವಿವರಿಸಿ.
2) ಅಲಿಪ್ತ ಚಳುವಳಿಯ ಉದಯಕ್ಕೆ ಕಾರಣಗಳನ್ನು ವಿವರಿಸಿ.
3) ಅಲಿಪ್ತ ಚಳುವಳಿಯ ಲಕ್ಷಣಗಳನ್ನು ವಿವರಿಸಿ.
4) ಅಲಿಪ್ತ ಚಳುವಳಿಯ ಸಾಧನೆಗಳನ್ನು ವಿವರಿಸಿ.
5) ಅಲಿಪ್ತ ಚಳುವಳಿಯ ಇತಿಮಿತಿಗಳೇನು?
6) ಭಾರತ ಮತ್ತು ಅಲಿಪ್ತ ಚಳುವಳಿಯ ಸಂಬಂಧವನ್ನು ಕುರಿತು ಬರೆಯಿರಿ.

ಕೆಳಗಿನ ಪ್ರಶ್ನೆಗೆ 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ (10 ಅಂಕಗಳು)

ಅಲಿಪ್ತ ಚಳುವಳಿಯ ಬೆಳವಣಿಗೆಯನ್ನು ವಿವರಿಸಿ.

❖ ❖ ❖ ❖ ❖

ಅಧ್ಯಾಯ 13 – ಭೂಪಟ

ಪ್ರಪಂಚದ ಪ್ರಮುಖ ಐತಿಹಾಸಿಕ ಸ್ಥಳಗಳು

(1)	ಬ್ಯಾಬಿಲೋನಿಯಾ	(11)	ಲಂಡನ್
(2)	ಅಥೆನ್ಸ್	(12)	ಪ್ಯಾರಿಸ್
(3)	ರೋಮ್	(13)	ವಾಟರ್ಲೂ
(4)	ಅಲೆಗ್ಸಾಂಡ್ರಿಯಾ	(14)	ಬರ್ಲಿನ್
(5)	ಜೆರೂಸಲೆಂ	(15)	ಮಾಸ್ಕೋ
(6)	ಮೆಕ್ಕಾ	(16)	ವರ್ಸೇಲ್ಸ್
(7)	ವೆನಿಸ್	(17)	ಹಿರೋಶಿಮಾ
(8)	ಕಾನ್‌ಸ್ಟಾಂಟಿನೋಪಲ್	(18)	ನಾಗಸಾಕಿ
(9)	ಕೇಪ್ ಆಫ್ ಗುಡ್‌ಹೋಪ್	(19)	ನ್ಯೂಯಾರ್ಕ್
(10)	ಲಿಸ್ಬನ್	(20)	ಜಿನೀವಾ

ಸೂಚನೆ:

1. ಕೊಟ್ಟಿರುವ 20 ಸ್ಥಳಗಳಲ್ಲಿ ಯಾವುದಾದರೂ **8** ಸ್ಥಳಗಳನ್ನು ಪ್ರಪಂಚದ ಭೂಪಟದಲ್ಲಿ ಗುರುತಿಸಲು ಕೇಳಲಾಗುವುದು. ವಿದ್ಯಾರ್ಥಿಗಳೂ ಪ್ರಪಂಚದ ಭೂಪಟದಲ್ಲಿ **ಐದು** ಸ್ಥಳಗಳನ್ನು ಗುರುತಿಸಿ, ಗುರುತಿಸಲಾದ ಪ್ರತಿಯೊಂದು ಸ್ಥಳದ ಬಗ್ಗೆಯೂ ಎರಡು ವಾಕ್ಯಗಳಲ್ಲಿ ವಿವರಣೆ ನೀಡುವುದು. ಭೂಪಟದ ಪ್ರಶ್ನೆಗೆ ಒಟ್ಟು 10 ಅಂಕಗಳು ನಿಗದಿಯಾಗಿದ್ದು, 5 ಅಂಕಗಳನ್ನು ಸ್ಥಳಗಳನ್ನು ಗುರುತಿಸಿದ್ದಕ್ಕೂ ಮತ್ತು 5 ಅಂಕಗಳನ್ನು ವಿವರಣೆ ಬರೆಯುದಕ್ಕೂ ನೀಡಲಾಗುವುದು.

2. ವಿದ್ಯಾರ್ಥಿಯು ಸ್ಥಳಗಳ ಐತಿಹಾಸಿಕ ಪ್ರಾಮುಖ್ಯತೆಯ ಬಗ್ಗೆ ಈ ಪುಸ್ತಕದಲ್ಲಿ ವಿವರಿಸಿರುವಂತೆ ಬರೆಯುವುದು.

3. ಭೂಪಟಕ್ಕೆ ಬದಲಾಗಿ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ 10 ಅಂಕಗಳ ಪ್ರಬಂಧ ರೀತಿಯ ಪರ್ಯಾಯ ಪ್ರಶ್ನೆಯನ್ನು ಕೇಳಲಾಗುವುದು.

4. ಪ್ರಶ್ನೆ ಪತ್ರಿಕೆ ತಯಾರಕರು ಒಂದು ಖಂಡದಿಂದ ಮೂರಕ್ಕಿಂತ ಹೆಚ್ಚು ಸ್ಥಳಗಳನ್ನು ಕೇಳಬಾರದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಂತರವಿರುವಂತೆ ಸ್ಥಳಗಳನ್ನು ಗುರುತಿಸಲು ಸೂಚಿಸುವುದು. ಒಂದೇ ರಾಷ್ಟ್ರದಿಂದ ಎರಡು ಸ್ಥಳಗಳನ್ನು ಕೇಳಬಾರದು.


ಪ್ರಮುಖ ಪ್ರಮುಖ ಐತಿಹಾಸಿಕ ಸ್ಥಳಗಳು

1. **ಬ್ಯಾಬಿಲೋನಿಯಾ:** ಇದು ಪ್ರಸ್ತುತ ಇರಾಕಿನಲ್ಲಿದೆ. ಇದು ಮೆಸೊಪೊಟೇಮಿಯಾ ನಾಗರಿಕತೆಯ ರಾಜಧಾನಿಯಾಗಿತ್ತು. ಪ್ರಸಿದ್ಧ ಕಾನೂನು ತಜ್ಞನಾಗಿದ್ದ ಹಮ್ಮುರಾಬಿಯು ಇಲ್ಲಿಂದ ಆಳ್ವಿಕೆ ಮಾಡಿದ. ನೆಬುಖಡ್ನೇಜರ್ ಎಂಬ ಅರಸನು 'ಬ್ಯಾಬಿಲೋನಿಯಾದ ತೂಗುದೋಟ'ವನ್ನು ನಿರ್ಮಿಸಿದ.

2. **ಅಥೆನ್ಸ್:** ಇದು ಪ್ರಸ್ತುತ ಗ್ರೀಸ್ ದೇಶದ ರಾಜಧಾನಿ. ಪ್ರಾಚೀನ ಗ್ರೀಕ್ ನಾಗರಿಕತೆಯ ಒಂದು ನಗರ ರಾಜ್ಯವೂ ಆಗಿತ್ತು. ಅಥೆನಾ ದೇವತೆಯಿಂದಾಗಿ ನಗರವು ಈ ಹೆಸರನ್ನು ಪಡೆದಿದೆ. ಪ್ರಸಿದ್ಧವಾದ ಪಾರ್ಥೆನಾನ್ ದೇವಾಲಯವು ಇಲ್ಲಿದೆ.

ಗ್ರೀಕರ ನಂತರ ಅಥೆನ್ಸಿನ ಮೇಲೆ ರೋಮನ್ನರು ಆಳಿದರು. ಸಾ.ಶ. 15ನೇ ಶತಮಾನದಲ್ಲಿ ಆಟೋಮನ್ ತುರ್ಕರು ಇದನ್ನು ವಶಪಡಿಸಿಕೊಂಡರು. 19ನೇ ಶತಮಾನದ ಗ್ರೀಕರ ಸ್ವಾತಂತ್ರ್ಯ ಯುದ್ಧದ ನಂತರ 1834 ರಲ್ಲಿ ಅಥೆನ್ಸ್‌ಅನ್ನು ನೂತನ ಸ್ವತಂತ್ರ ಗ್ರೀಕ್ ರಾಜ್ಯದ ರಾಜಧಾನಿಯನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು.

3. **ರೋಮ್:** ರೋಮ್ ನಗರವು ಪ್ರಸ್ತುತ ಇಟಲಿಯ ರಾಜಧಾನಿ. ಇದು ರೋಮನ್ ಸಾಮ್ರಾಜ್ಯದ ರಾಜಧಾನಿಯೂ ಆಗಿತ್ತು. ಕ್ಯಾಥೋಲಿಕ್ಕರ ಧಾರ್ಮಿಕ ಮುಖ್ಯಸ್ಥ ಪೋಪನ ಕೇಂದ್ರವಾದ ವ್ಯಾಟಿಕನ್ ನಗರವು ರೋಮ್‌ನಲ್ಲಿದೆ.

ರೋಮಿನ ದಂತ ಕಥೆಯ ಪ್ರಕಾರ ಸಾ.ಶ.ಪೂ. 8 ನೇ ಶತಮಾನದಲ್ಲಿ **ರೋಮ್ಯುಲಸ್ ಮತ್ತು ರೀಮಸ್** ಎಂಬ ಅವಳಿ ಸಹೋದರರು ರೋಮ್ ನಗರವನ್ನು ಸ್ಥಾಪಿಸಿದರು. ಮತ್ತೊಂದು ವಿವರಣೆಯ ಪ್ರಕಾರ ಈ ಹೆಸರು ಗ್ರೀಕ್ ಪದವಾದ **'ರ್ಹೋಮ್'** ಅಂದರೆ **'ಬಲ'** ಅಥವಾ **'ಶಕ್ತಿ'** ಎಂಬುದರಿಂದ ಬಂದಿದೆ.

4. **ಅಲೆಗ್ಸಾಂಡ್ರಿಯಾ:** ಈಜಿಪ್ಟಿನ ಉತ್ತರ ದಿಕ್ಕಿನಲ್ಲಿದೆ. ಅಲೆಗ್ಸಾಂಡರ್ ಮಹಾಶಯ ಈ ನಗರವನ್ನು ಸ್ಥಾಪಿಸಿದ. ಗ್ರೀಸ್ ಮತ್ತು ಸಮೃದ್ಧ ನೈಲ್ ನದಿ ಕಣಿವೆಯೊಂದಿಗೆ ಸಂಪರ್ಕ ಕಲ್ಪಿಸುವುದು ಇದರ ಮೂಲ ಉದ್ದೇಶವಾಗಿತ್ತು.

'ರ್ಹೊಕೋಟಿಸ್' ಎಂಬ ಈಜಿಪ್ಟಿನ ನಗರ ಈಗಾಗಲೇ ಸಮುದ್ರ ದಂಡೆಯ ಮೇಲಿತ್ತು. ನಂತರದಲ್ಲಿ ಇದಕ್ಕೆ 'ಅಲೆಗ್ಸಾಂಡ್ರಿಯಾ' ಎಂಬ ಹೆಸರು ನೀಡಲಾಯಿತು. ಈಜಿಪ್ಟ್ ಭಾಷೆಯಲ್ಲಿ ಅಲೆಗ್ಸಾಂಡ್ರಿಯಾ ಎಂದರೆ **"ಅದು ಯಾವುದೆಂದರೆ ನಿರ್ಮಾಣಗೊಂಡಿದ್ದು"**.

5. **ಜೆರುಸಲೆಂ:** ಇದು ಇಸ್ರೇಲಿನಲ್ಲಿದೆ. ಇದು ಮೂರು ಪ್ರಮುಖ ಧರ್ಮಗಳಾದ ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಪವಿತ್ರ ನಗರವಾಗಿದೆ. ಈ ನಗರದಲ್ಲಿ ಸಾ.ಶ. 30 ರಲ್ಲಿ ಏಸು ಕ್ರಿಸ್ತನನ್ನು ಶಿಲುಬೆಗೇರಿಸಲಾಯಿತು.

6. **ಮೆಕ್ಕಾ:** ಇದು ಸೌದಿ ಅರೇಬಿಯಾದಲ್ಲಿದೆ. ಇಸ್ಲಾಂ ಧರ್ಮದ ಸ್ಥಾಪಕರಾದ ಪ್ರವಾದಿ ಮಹಮದರು ಇಲ್ಲಿ ಜನಿಸಿದರು. ಇದು ಇಸ್ಲಾಂ ಧರ್ಮದ ಪವಿತ್ರ ನಗರವೆಂದು ಪರಿಗಣಿಸಲ್ಪಟ್ಟಿದೆ.

7. **ವೆನಿಸ್:** ಇದು ಇಟಲಿ ರಾಷ್ಟ್ರದಲ್ಲಿದೆ. ಮಧ್ಯಕಾಲೀನ ಯುಗದಲ್ಲಿ ವ್ಯಾಪಾರ ಮತ್ತು ವಾಣಿಜ್ಯದ ಕೇಂದ್ರವಾಗಿತ್ತು. ಪ್ರಸಿದ್ಧ ಪ್ರವಾಸಿಗರಾದ ಮಾರ್ಕೊಪೋಲೋ ಮತ್ತು ನಿಕಲೋಪೋಲೋ ಎಂಬುವರು ಈ ನಗರಕ್ಕೆ ಸೇರಿದವರಾಗಿದ್ದರು.

ಮಾರ್ಕೋಪೋಲನು ವಿಷ್ಯಾದ ರಾಷ್ಟ್ರಗಳ ಶ್ರೀಮಂತಿಕೆಯ ಕುರಿತಂತೆ **'ಟ್ರಾವೆಲ್ಸ್ ಆಫ್ ಮಾರ್ಕೋಪೋಲೋ ದಿ ವೆನಿಷನ್'** ಎಂಬ ತನ್ನ ಗ್ರಂಥದಲ್ಲಿ ರೋಮಾಂಚಕಾರಿ ವಿವರಣೆ ನೀಡಿದ್ದ. ಐರೋಪ್ಯ ನಾವಿಕರು ಹೊಸ ಜಲಮಾರ್ಗಗಳನ್ನು ಅನ್ವೇಷಣೆ ಮಾಡಲು ಅವನ ಈ ವಿವರಣೆಗಳು ಸ್ಫೂರ್ತಿ ಮೂಡಿಸಿದವು.

8. **ಕಾನ್‌ಸ್ಟಾಂಟಿನೋಪಲ್:** ಪ್ರಸ್ತುತ ಇಸ್ತಾನ್‌ಬುಲ್ ಎಂದು ಕರೆಯಲಾಗುತ್ತಿರುವ ಈ ನಗರವು ಟರ್ಕಿಯಲ್ಲಿದೆ. ಇದು ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಸಾ.ಶ. 1453 ರಲ್ಲಿ ಆಟೋಮನ್

ತುರ್ಕರು ಕಾನ್‌ಸ್ಟಾಂಟಿನೋಪಲ್ ಅನ್ನು ಆಕ್ರಮಿಸಿಕೊಂಡರು. ಇದು ಹೊಸ ಜಲಮಾರ್ಗಗಳ ಶೋಧನೆಗೆ ಕಾರಣವಾಯಿತು.

ಕಾನ್‌ಸ್ಟಾಂಟಿನೋಪಲ್‌ನ ಮೊದಲ ಹೆಸರು **ಬೈಜಾಂಟಿಯಂ** ಎಂಬುದು. **ಬೈಜಾಸ್** ಎಂಬ ಗ್ರೀಕ್ ದೊರೆ ಈ ನಗರವನ್ನು ಸಾ.ಶ.ಪೂ. 7ನೇ ಶತಮಾನದಲ್ಲಿ ಸ್ಥಾಪಿಸಿದ. ರೋಮನ್ ಸಾಮ್ರಾಜ್ಯದ ಚಕ್ರವರ್ತಿ ಕಾನ್‌ಸ್ಟಾಂಟೈನ್ ಎಂಬುವನು ಸಾ.ಶ. 4 ನೇ ಶತಮಾನದಲ್ಲಿ ಇದನ್ನು ರೋಮನ್ ಸಾಮ್ರಾಜ್ಯದ ಹೊಸ ಪೂರ್ವ ರಾಜಧಾನಿಯನ್ನಾಗಿ ಮಾಡಿಕೊಂಡ. ಆಗ ಇದು ಕಾನ್‌ಸ್ಟಾಂಟಿನೋಪಲ್ ಎಂದಾಯಿತು. ಇದರ ಅರ್ಥವೆಂದರೆ, **'ಕಾನ್‌ಸ್ಟಾಂಟೈನನ ನಗರ'**.

9. **ಕೇಪ್ ಆಫ್ ಗುಡ್ ಹೋಪ್:** ಇದು ದಕ್ಷಿಣ ಆಫ್ರಿಕಾದಲ್ಲಿದೆ. ಬರ್ಥೊಲೋಮಿಯೋ ಡಯಾಜ್ ಇದನ್ನು 'ಬಿರುಗಾಳಿ ಭೂಶಿರ' ಎಂದು ಕರೆದ. ಅಲ್ಲಿಂದ ಮುಂದೆ ಅನ್ವೇಷಣೆ ಕೈಗೊಂಡು ಭಾರತವನ್ನು ತಲುಪಬಹುದೆಂಬ ಭರವಸೆ ಮೂಡಿದ್ದರಿಂದ ಪೋರ್ಚುಗಲ್ಲಿನ ರಾಜ ಜಾನನ ನಿರ್ದೇಶನದನ್ವಯ ವಾಸ್ಕೋಡಿ ಗಾಮನು ಇದನ್ನು 'ಕೇಪ್ ಆಫ್ ಗುಡ್ ಹೋಪ್' ಎಂದು ಮರು ನಾಮಕರಣ ಮಾಡಿದ.

10. **ಲಿಸ್ಬನ್:** ಇದು ಪೋರ್ಚುಗಲ್ಲಿನ ರಾಜಧಾನಿ. ಭೌಗೋಳಿಕ ಸಂಶೋಧನೆಯ ಯುಗದಲ್ಲಿ ವಾಸ್ಕೋ–ಡಿ–ಗಾಮನನ್ನು ಒಳಗೊಂಡಂತೆ ಬಹುತೇಕ ಪೋರ್ಚುಗೀಸ್ ನಾವಿಕರು ಲಿಸ್ಬನ್ ಬಂದರಿನಿಂದಲೇ ತಮ್ಮ ನೌಕಾಯಾನ ಆರಂಭಿಸಿದರು.

11. **ಲಂಡನ್:** ಇದು ಯುನೈಟೆಡ್ ಕಿಂಗ್‌ಡಂನ ರಾಜಧಾನಿಯಾಗಿದ್ದು, ಇದು ಥೇಮ್ಸ್ ನದಿಯ ದಂಡೆಯ ಮೇಲೆ ಇದೆ. ಇದು ಕೈಗಾರಿಕಾ ಕ್ರಾಂತಿಯ ಪ್ರಮುಖ ಕೇಂದ್ರವಾಗಿತ್ತು. ಪ್ರಸಿದ್ಧ ಶೈಕ್ಷಣಿಕ ಕೇಂದ್ರವೂ ಆಗಿದೆ.

ಒಂದು ಮೂಲದ ಪ್ರಕಾರ ಲಂಡನ್ ಅಂದರೆ **"ಲಂಡಿನೋಸ್"** ಎಂಬ ವ್ಯಕ್ತಿಗೆ ಸೇರಿದ ಸ್ಥಳ ಎಂದರ್ಥ. ಮತ್ತೊಂದು ದೃಷ್ಟಿಯಲ್ಲಿ ಲಂಡನ್ ಮೂಲಕ ಹರಿಯುವ ನದಿ ಥೇಮ್ಸ್‌ನಿಂದಾಗಿ **'ಲೊವೊನಿಡಾ'** ಅಂದರೆ **"ಹಾಯ್ದು ಹೋಗಲು ಅತ್ಯಂತ ಅಗಲ ನದಿ"** ಎಂಬುದರಿಂದಾಗಿದೆ. ಹೀಗೆ ಲಂಡನ್ ಪದದ ಶಬ್ದ ನಿಷ್ಪತ್ತಿ ಸಮರ್ಪಕವಾಗಿಲ್ಲ.

12. **ಪ್ಯಾರಿಸ್:** ಇದು ಫ್ರಾನ್ಸಿನ ರಾಜಧಾನಿ. 1789 ರ ಫ್ರಾನ್ಸಿನ ಕ್ರಾಂತಿಯವರೆಗೂ ಬೋರ್ಬನ್ ಮನೆತನ ಫ್ರಾನ್ಸಿನಲ್ಲಿ ಆಳ್ವಿಕೆ ಮಾಡಿತು. ಆಧುನಿಕ ಕಾಲದಲ್ಲಿ ಹಲವಾರು ಐತಿಹಾಸಿಕ ಒಪ್ಪಂದಗಳಿಗೆ ಇಲ್ಲಿ ಸಹಿ ಮಾಡಲಾಯಿತು.

ಪ್ಯಾರಿಸ್ ಎಂಬ ಹೆಸರು ಈ ನಗರದ ಆರಂಭಿಕ ನಿವಾಸಿಗಳಾಗಿದ್ದ 'ಪ್ಯಾರಿಸಿ' ಎಂಬುದರಿಂದ ಬಂದಿದೆ. ಪ್ಯಾರಿಸಿ ಎಂದರೆ 'ದುಡಿಯುವ ಜನರು' ಅಥವಾ 'ಕಸುಬುಗಾರರು' ಎಂದರ್ಥ.

ಪ್ಯಾರಿಸ್ ನಗರವು ಹಲವಾರು ಅಡ್ಡ ಹೆಸರುಗಳನ್ನು ಹೊಂದಿದೆ. ಪ್ರಸಿದ್ಧ ಶೈಕ್ಷಣಿಕ ಕೇಂದ್ರವಾಗಿದ್ದರಿಂದ **'ಜ್ಯೋತಿಯ ನಗರ'** ಎಂಬುದು ಅವುಗಳಲ್ಲಿ ಬಹು ಪ್ರಮುಖವಾಗಿದೆ. ಇದನ್ನು **'ಪ್ರವಾಸಿಗರ ಸ್ವರ್ಗ'** ಎಂದೂ ಸಹ ಕರೆಯುತ್ತಾರೆ.

13. **ವಾಟರ್ಲೂ:** ಇದು ಬೆಲ್ಜಿಯಂನಲ್ಲಿದೆ. ನೆಪೋಲಿಯನ್ ಬೋನಪಾರ್ಟೆಯು 1815ರಲ್ಲಿ ಯುರೋಪಿನ ಮಿತ್ರ ರಾಷ್ಟ್ರಗಳೊಂದಿಗೆ ತನ್ನ ಕೊನೆಯ ಕದನವನ್ನು ಇಲ್ಲಿ ಮಾಡಿದ. ಇದು ವಾಟರ್ಲೂ ಕದನವೆಂದೇ ಪ್ರಸಿದ್ಧವಾಗಿದೆ.

14. **ಬರ್ಲಿನ್:** ಈಶಾನ್ಯ ಜರ್ಮನಿಯ ಸ್ಪಾರೀ ನದಿಯ ದಂಡೆಯ ಮೇಲಿರುವ ಬರ್ಲಿನ್ ಪ್ರಸ್ತುತ ಜರ್ಮನಿಯ ರಾಜಧಾನಿ. 2ನೇ ಜಾಗತಿಕ ಯುದ್ಧದ ನಂತರ ಈ ನಗರವನ್ನು ಪೂರ್ವ ಮತ್ತು ಪಶ್ಚಿಮ ಬರ್ಲಿನ್‌ಗಳೆಂದು ವಿಭಜಿಸಿ, ವಿಭಜಿತ ಗೋಡೆಯನ್ನು ನಿರ್ಮಿಸಲಾಯಿತು. 1990ರಲ್ಲಿ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳನ್ನು ಮರು ಏಕೀಕರಣಗೊಳಿಸಿದಾಗ ಈ ಬರ್ಲಿನ ಗೋಡೆಯನ್ನು ತೆಗೆದುಹಾಕಲಾಯಿತು.

15. **ಮಾಸ್ಕೋ:** ಇದು ರಷ್ಯಾದ ರಾಜಧಾನಿ ಮತ್ತು **'ಮಾಸ್ಕ್ವಾ'** ನದಿಯ ದಂಡೆಯ ಮೇಲಿದೆ. 1917ರ ರಷ್ಯಾ ಕ್ರಾಂತಿಯ ಕೇಂದ್ರಗಳಲ್ಲಿ ಒಂದಾಗಿತ್ತು ಮತ್ತು ಯುಎಸ್ಎಸ್ಆರ್ ನ ರಾಜಧಾನಿಯಾಗಿತ್ತು.

ಮಾಸ್ಕೋ ನಗರದ ಹೆಸರು **'ಮಾಸ್ಕ್ವಾ'** ಎಂಬ ನದಿಯಿಂದ ಬಂದಿದ್ದು; ಅಂದರೆ **'ಮಾಸ್ಕ್ವಾ ನದಿಯಿಂದಾಗಿರುವ ನಗರ'** ಎಂದರ್ಥ.

16. **ವರ್ಸೇಲ್ಸ್:** ಇದು ಫ್ರಾನ್ಸಿನಲ್ಲಿದೆ. 14ನೇ ಲೂಯಿ ಎಂಬ ಅರಸನು ಇಲ್ಲಿ ಬೃಹತ್ ಅರಮನೆಯನ್ನು ನಿರ್ಮಿಸಿದ. 1ನೇ ಜಾಗತಿಕ ಯುದ್ಧದ ನಂತರ 1919ರಲ್ಲಿ ಜರ್ಮನಿ ಮತ್ತು ಮಿತ್ರ ರಾಷ್ಟ್ರಗಳ ಮಧ್ಯೆ ಇಲ್ಲಿ ವರ್ಸೇಲ್ಸ್ ಒಪ್ಪಂದವಾಯಿತು.

ಆರಂಭದಲ್ಲಿ ವರ್ಸೇಲ್ಸ್ ಒಂದು ಗ್ರಾಮವಾಗಿತ್ತು. ಇದರ ಸುತ್ತಲಿದ್ದ ಕಾಡಿಗೆ ಫ್ರಾನ್ಸಿನ ರಾಜ 13ನೇ ಲೂಯಿಯು ಬೇಟೆಗೆ ಹೋಗುತ್ತಿದ್ದ. ಆ ಸ್ಥಳದ ಸೌಂದರ್ಯದಿಂದ ಉಲ್ಲಾಸಿತನಾದ ರಾಜ 1624ರಲ್ಲಿ ಇಲ್ಲಿ ಬೇಟೆಯ ವಸತಿಯೊಂದನ್ನು ನಿರ್ಮಿಸಿದ. ಅವನ ಉತ್ತರಾಧಿಕಾರಿ 14ನೇ ಲೂಯಿಯು ಅದನ್ನು ವಿಸ್ತರಿಸಿ ಪ್ರಪಂಚದ ದೊಡ್ಡ ಅರಮನೆಯನ್ನಾಗಿ ಪರಿವರ್ತಿಸಿದ. 1682ರಿಂದ ಅವನು ತನ್ನ ಆಸ್ಥಾನವನ್ನು ಇಲ್ಲೇ ಸ್ಥಾಪಿಸಿದ.

17. **ಹಿರೋಶಿಮಾ:** ಇದು ಜಪಾನಿನಲ್ಲಿದೆ. 1945ರಲ್ಲಿ 2ನೇ ಜಾಗತಿಕ ಯುದ್ಧದ ಕೊನೆಯಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನವು ಈ ನಗರದ ಮೇಲೆ ಪ್ರಪ್ರಥಮ ಅಣುಬಾಂಬ್ ಅನ್ನು ಹಾಕಿತು. ಇದರ ಪರಿಣಾಮವಾಗಿ ಅಂದಾಜು 80000 ಜನರು ಕೊಲೆಯಾದರು.

ಹಿರೋಶಿಮಾ ಎಂದರೆ **'ಅಗಲವಾದ ದ್ವೀಪ'** ಎಂದರ್ಥ. 2ನೇ ಜಾಗತಿಕ ಯುದ್ಧದ ಸಮಯದಲ್ಲಿ ಈ ನಗರವು ಬೃಹತ್ ಪ್ರಮಾಣದ ಸೈನಿಕ ಪೂರೈಕೆಯ ದಾಸ್ತಾನನ್ನು ಹೊಂದಿತ್ತು. ಯುದ್ಧದ ಕೊನೆಯಲ್ಲಿ ಜಪಾನ್ ಮಿತ್ರ ರಾಷ್ಟ್ರಗಳಿಗೆ ಶರಣಾಗದಿದ್ದರಿಂದ 1945ರ ಆಗಸ್ಟ್ 6ರ ಸೋಮವಾರ ಬೆಳಿಗ್ಗೆ 8–15ಕ್ಕೆ **'ಲಿಟ್ಲ್ ಬಾಯ್'** ಎಂಬ ಹೆಸರಿನ ಅಣು ಬಾಂಬ್ ಅನ್ನು ನೇರವಾಗಿ ಹಿರೋಶಿಮಾ ನಗರದ ಮೇಲೆ ಹಾಕಿದ್ದರಿಂದ ಅಂದಾಜು 80 ಸಾವಿರ ಜನರು ಕೊಲೆಯಾದರು. 1945ರ ಅಣು ಬಾಂಬ್ ಸ್ಫೋಟದ ನಂತರ ಹಿರೋಶಿಮಾ ನಗರದಲ್ಲಿ ಮೊದಲು ಅರಳಿದ್ದು ಕಣಗಿಲೆ ಪುಷ್ಪವಾದ್ದರಿಂದ ಅದು ಆ ನಗರದ ಅಧೀಕೃತ ಪುಷ್ಪವಾಗಿದೆ.

18. **ನಾಗಸಾಕಿ:** ಇದು ಜಪಾನಿನಲ್ಲಿದೆ. 2ನೇ ಜಾಗತಿಕ ಯುದ್ಧದ ಸಮಯದಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನವು 1945 ಆಗಸ್ಟ್ 9ರಂದು ಈ ನಗರದ ಮೇಲೆ ಅಣು ಬಾಂಬ್ ಹಾಕಿತು. ಇದರ ಪರಿಣಾಮವಾಗಿ 70 ಸಾವಿರ ಜನರು ಮರಣ ಹೊಂದಿದರು.

ನಾಗಸಾಕಿ ಎಂದರೆ **'ಉದ್ದನೆಯ ಭೂಶಿರ'** ಎಂದರ್ಥ. 16ನೇ ಶತಮಾನದಲ್ಲಿ ಇದನ್ನು ಪೋರ್ಚುಗೀಸರು ಸ್ಥಾಪಿಸಿದರು. 2ನೇ ಜಾಗತಿಕ ಯುದ್ಧದಲ್ಲಿ **'ಫ್ಯಾಟ್ ಮ್ಯಾನ್'** ಎಂಬ ಹೆಸರಿನ ಅಣುಬಾಂಬ್ ಅನ್ನು ಈ ನಗರದ ಮೇಲೆ ಹಾಕಲಾಯಿತು.

19. **ನ್ಯೂಯಾರ್ಕ್:** ಇದು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿದೆ. ಇದು ಬ್ರಿಟಿಷರ ವಸಾಹತುಗಳಲ್ಲಿ ಒಂದಾಗಿತ್ತು. ವಿಶ್ವಸಂಸ್ಥೆಯ ಪ್ರಧಾನ ಕಛೇರಿ ಇಲ್ಲಿದೆ.

ಇಂಗ್ಲೆಂಡ್ ಮತ್ತು ಸ್ಕಾಟ್‌ಲೆಂಡಿನ ಜೇಮ್ಸ್ ಸ್ಟುವರ್ಟ್ ಎಂಬ ಯಾರ್ಕ್‌ನ ಡ್ಯೂಕನ ಹೆಸರಿನಿಂದಾಗಿ 17ನೇ ಶತಮಾನದಲ್ಲಿ ಈ ರಾಜ್ಯ ಮತ್ತು ನಗರವನ್ನು **'ನ್ಯೂಯಾರ್ಕ್'** ಎಂದು ಕರೆಯಲಾಯಿತು. ಮೂಲತಃ ಡಚ್ ವಸಾಹತುವಾಗಿದ್ದ ಇದು **'ನ್ಯೂ ಆಮ್‌ಸ್ಟರ್ ಡಾಂ'** ಎಂದು ಕರೆಯಲ್ಪಟ್ಟಿತ್ತು. ತದನಂತರದಲ್ಲಿ ಇದನ್ನು ಇಂಗ್ಲೀಷರು ವಶ ಪಡಿಸಿಕೊಂಡು 'ನ್ಯೂಯಾರ್ಕ್' ಎಂದು ಹೆಸರಿಸಿದರು.

20. **ಜಿನೀವಾ:** ಇದು ಸ್ವಿಟ್ಜರ್‌ಲ್ಯಾಂಡ್‌ನಲ್ಲಿದೆ. ಇದು ಪ್ರೊಟೆಸ್ಟೆಂಟ್ ಚಳುವಳಿಯ ಕೇಂದ್ರಗಳಲ್ಲಿ ಒಂದಾಗಿತ್ತು. ಅಂತರಾಷ್ಟ್ರೀಯ ಸಂಘಟನೆಗಳಾದ ILO, WHO, WTO ಮತ್ತು GATT ಗಳ ಕೇಂದ್ರ ಕಛೇರಿಗಳು ಇಲ್ಲಿವೆ.

ಪ್ರಶ್ನೆಗಳು:

1) ನಿಮಗೆ ಕೊಟ್ಟಿರುವ ಪ್ರಪಂಚದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ, ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. **5+5=10**

i) ವಾಟರ್ಲೂ ii) ಹಿರೋಶಿಮಾ iii) ಲಿಸ್ಬನ್
iv) ಮಾಸ್ಕೋ v) ಮೆಕ್ಕಾ vi) ಬರ್ಲಿನ್
vii) ಕಾನ್‌ಸ್ಟಂಟಿನೋಪಲ್ viii) ಕೇಪ್ ಆಫ್ ಗುಡ್‌ಹೋಪ್

2) ನಿಮಗೆ ಕೊಟ್ಟಿರುವ ಪ್ರಪಂಚದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ, ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. **5+5=10**

i) ರೋಮ್ ii) ಪ್ಯಾರಿಸ್ iii) ನಾಗಸಾಕಿ
iv) ಬ್ಯಾಬಿಲೋನಿಯಾ v) ಅಲೆಗ್ಸಾಂಡ್ರಿಯಾ vi) ಲಂಡನ್
vii) ಜಿನಿವಾ viii) ಅಥೆನ್ಸ್

3) ನಿಮಗೆ ಕೊಟ್ಟಿರುವ ಪ್ರಪಂಚದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ, ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. **5+5=10**

i) ವೆನಿಸ್ ii) ವರ್ಸೇಲ್ಸ್ iii) ಜರುಸಲೆಂ
iv) ನ್ಯೂಯಾರ್ಕ್ v) ಹಿರೋಶಿಮಾ vi) ಕೇಪ್ ಆಫ್ ಗುಡ್‌ಹೋಪ್
vii) ಮಾಸ್ಕೋ viii) ಮೆಕ್ಕಾ

*****

Q.P.TOTAL MARKS:100

WORLD HISTORY

Chapters	Knowledge		Understanding		Application		Skill		Total					
	VSA	SA	VSA	SA/ET	SA	ET	SA	ET	1	2	5	Map	10	Total
	1/2	5	1/2	5/10	5	10	5	10						
1	1 1				5				2		5			07
2	1 2				5				1	2	5			08
3	1 2					10			1	2			10	13
4	1 1 2					10*			2	2				04
5	1 2			5					1	2	5			08
6	2			5						2	5			07
7	1 1 1			5*10					3				10	13
8	1 1 2* 2 2					10*			2	4				06
9	1 1 1 2			10*					3	2				05
10	1 1 1			5		10*			3		5			08
11	2* 2			5						2	5			07
12	1 1 2			5*					2	2				04
13								10				10		10
Total	**40**		**30**		**20**		**10**		**20**	**20**	**30**	**10**	**20**	**100**

1. EASY	40%	KNOWLEDGE BASED	40%	VERY SHORT ANSWER	1/2Marks
2. AVERAGE	40%	UNDERSTANDING BASED	30%	SHORT ANSWER	5Marks
3. DIFFICULT	20%	APPRICIATION BASED	20%	ESSEY TYPE	10Marks
		SKILL BASED	10%	Map	10Marks
2. AVERAGE	40%	UNDERSTANDING BASED	30%	SHORT ANSWER	5Marks
3. DIFFICULT	20%	APPRICIATION BASED	20%	ESSEY TYPE	10Marks
		SKILL BASED	10%	Map	10Marks

ಪ್ರಥಮ ಪಿ.ಯು.ಸಿ. ಮಾದರಿ ಪ್ರಶ್ನೆ ಪತ್ರಿಕೆ

ವಿಷಯ ಸಂಕೇತ: 21 **ಜಾಗತಿಕ ಇತಿಹಾಸ** ಒಟ್ಟು ಪ್ರಶ್ನೆಗಳು: 37

ಸಮಯ: 3–15 ಗಂಟೆಗಳು ಗರಿಷ್ಠ ಅಂಕಗಳು: 100

ಸೂಚನೆ: (1) ಪ್ರಶ್ನೆಗಳ ಕ್ರಮ ಸಂಖ್ಯೆಯನ್ನು ಸರಿಯಾಗಿ ನಮೂದಿಸುವುದು.

(2) ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳು ಭಾಗ–ಡಿ ಯಲ್ಲಿ ಭೂಪಟದ ಪ್ರಶ್ನೆಗಳಾದ ಪ್ರಶ್ನೆ ಸಂಖ್ಯೆ 31 'ಎ' ಬದಲಿಗೆ ಪ್ರಶ್ನೆ ಸಂಖ್ಯೆ 31 'ಬಿ' ಯನ್ನು ಉತ್ತರಿಸುವುದು.

(3) ಪ್ರಶ್ನೆಯ ಸೂಚನೆಗಳಿಗನ್ವಯವಾಗಿ ಉತ್ತರಿಸಿ.

ಭಾಗ– ಎ

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ **10 x 1=10**

1) 'ದಿ ಸಿಟಿ ಆಫ್ ಗಾಡ್' ಗ್ರಂಥವನ್ನು ಬರೆದವರು ಯಾರು?

2) ಚೀನಾದ ಮಹಾಗೋಡೆಯ ನಿರ್ಮಾಣ ಆರಂಭಿಸಿದ ರಾಜನನ್ನು ಹೆಸರಿಸಿರಿ.

3) ಗೈಯಸ್ ಜೂಲಿಯಸ್ ಸೀಜರ್ ಯಾರು?

4) 'ಹಿಜಿರಾ' ಎಂದರೇನು?

5) ಆಟೋಮನ್ ಟರ್ಕರು ಕಾನ್‌ಸ್ಟ್ಯಾಂಟಿನೋಪಲ್ ಅನ್ನು ಯಾವಾಗ ವಶಪಡಿಸಿಕೊಂಡರು?

6) ರಷ್ಯಾ ಕ್ರಾಂತಿಯ ಮುನ್ನ ರಷ್ಯಾವನ್ನು ಆಳುತ್ತಿದ್ದ ದೊರೆ ಯಾರಾಗಿದ್ದರು?

7) ನೆಪೋಲಿಯನ್ ಬೋನಪಾರ್ಟೆಯ ಕೊನೆಯ ಕದನ ಯಾವುದು?

8) ಯಾವ ಒಪ್ಪಂದದೊಂದಿಗೆ ಮೊದಲ ಜಾಗತಿಕ ಯುದ್ಧ ಕೊನೆಗೊಂಡಿತು?

9) ಹಿಟ್ಲರನ ಪ್ರಸಿದ್ಧ ಗ್ರಂಥ ಯಾವುದು?

10) 'ಅಲಿಪ್ತ ಚಳುವಳಿ' ಎಂಬ ಪದವನ್ನು ಮೊದಲು ಬಳಸಿದವರು ಯಾರು?

ಭಾಗ – ಬಿ

II. ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡು ಪದ ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ **10 x 2 = 20**

11) ಭೂಮಿಯ ಉಗಮದ ಯಾವುದಾದರೂ ಎರಡು ಸಿದ್ಧಾಂತಗಳನ್ನು ನಮೂದಿಸಿರಿ,

12) ನಾಗರೀಕತೆಯ ಬೆಳವಣಿಗೆಗೆ ಸಹಾಯಕವಾದ ಯಾವುದಾದರೂ ಎರಡು ಅಂಶಗಳನ್ನು ಬರೆಯಿರಿ.

13) ಪ್ರಾಚೀನ ಗ್ರೀಕರ ಯಾವುದಾದರೂ ಎರಡು ನಗರ–ರಾಜ್ಯಗಳನ್ನು ಹೆಸರಿಸಿ.

14) ಕ್ರೈಸ್ತರ ಯಾವುದಾದರೂ ಎರಡು ಹಬ್ಬಗಳನ್ನು ಬರೆಯಿರಿ.

15) ಉನ್ನತ ಮಧ್ಯಯುಗದ ಪ್ರಮುಖ ಬೌದ್ಧಿಕ ವ್ಯಕ್ತಿಗಳು ಯಾರು?

16) ಕ್ರಾಂತಿ ಎಂದರೇನು?

17) ಅಮೇರಿಕಾದಲ್ಲಿನ ಬ್ರಿಟೀಷರ ಯಾವುದಾದರೂ ಎರಡು ವಸಾಹತುಗಳನ್ನು ಹೆಸರಿಸಿ.

18) ಕಾರ್ಲ್‌ಮಾರ್ಕ್ಸ್‌ರ ಎರಡು ಪ್ರಮುಖ ಗ್ರಂಥಗಳಾವುವು?

19) ಜರ್ಮನಿಯ ಏಕೀಕರಣದ ಶಿಲ್ಪಿ ಯಾರು? ಅವನ ನೀತಿ ಏನಾಗಿತ್ತು?

20) ಟ್ರೂಮನ್ ಯಾರು? ಟ್ರೂಮನ್ ಸಿದ್ಧಾಂತದ ಪ್ರಮುಖ ಅಂಶವೇನು?

21) ವಿಸ್ತರಿಸಿ: ಸಿ.ಐ.ಎಸ್. (CIS) ಅದರ ಕೇಂದ್ರ ಕಛೇರಿ ಎಲ್ಲಿದೆ?

22) ಅಲಿಪ್ತ ಚಳುವಳಿ ಬಣದ ತ್ರಿಮೂರ್ತಿಗಳೆಂದು ಯಾರನ್ನು ಕರೆಯಲಾಗಿದೆ?

ಭಾಗ – ಸಿ

III. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 15 ರಿಂದ 20 ವಾಕ್ಯಗಳಲ್ಲಿ ಉತ್ತರಿಸಿ: 6 x 5=30

23) ಇತಿಹಾಸ ಅಧ್ಯಯನದ ಯಾವುದಾದರೂ ಐದು ಪ್ರಾಮುಖ್ಯತೆಗಳನ್ನು ಬರೆಯಿರಿ.

24) ಮಾನವನ ವಿಕಸನದ ಯಾವುದಾದರೂ ಎರಡು ಪೂರಕ ಅಂಶಗಳನ್ನು ವಿವರಿಸಿ.

25) ಪ್ರವಾದಿ ಮಹಮದನ ಬೋಧನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿರಿ.

26) ಊಳಿಗ ಮಾನ್ಯ ಪದ್ಧತಿಯ ಅವನತಿಯ ಕಾರಣಗಳ ಬಗ್ಗೆ ವಿವರಣೆ ನೀಡಿ.

27) ಪುನರುಜ್ಜೀವನದ ಸಾಹಿತ್ಯ ಪ್ರಗತಿಯ ಬಗ್ಗೆ ಟಿಪ್ಪಣಿ ಬರೆಯಿರಿ.

28) 2ನೇ ಜಾಗತಿಕ ಯುದ್ಧದ ಪರಿಣಾಮಗಳನ್ನು ತಿಳಿಸಿರಿ.

29) ಶೀತಲ ಸಮರದ ಪ್ರಾದೇಶಿಕ ಸೈನಿಕ ಒಪ್ಪಂದಗಳ ಬಗ್ಗೆ ವಿವರಣೆ ನೀಡಿ.

30) ಅಲಿಪ್ತ ಚಳುವಳಿಯಲ್ಲಿ ಭಾರತದ ಪಾತ್ರವನ್ನು ವಿವರಿಸಿ.

ಭಾಗ – ಡಿ

IV. ಸೂಚನೆಗಳನ್ವಯ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ:

31ಎ) ನಿಮಗೆ ಒದಗಿಸಿರುವ ಪ್ರಪಂಚದ ಭೂಪಟದಲ್ಲಿ ಈ ಕೆಳಗಿನ ಯಾವುದಾದರೂ ಐದು ಐತಿಹಾಸಿಕ ಸ್ಥಳಗಳನ್ನು ಗುರುತಿಸಿ ಮತ್ತು ಗುರುತಿಸಿದ ಪ್ರತಿಯೊಂದು ಸ್ಥಳದ ಬಗ್ಗೆ ಎರಡು ವಾಕ್ಯಗಳಲ್ಲಿ ವಿವರಣೆ ಬರೆಯಿರಿ. **5+5=10**

ಎ) ರೋಮ್ ಬಿ) ಜೆರುಸಲೇಂ ಸಿ) ಕೇಪ್ ಆಫ್ ಗುಡ್ ಹೋಪ್
ಡಿ) ನ್ಯೂಯಾರ್ಕ್ ಇ) ಲಂಡನ್ ಎಫ್) ಬರ್ಲಿನ್ ಜಿ) ಹಿರೋಶಿಮಾ
ಹೆಚ್) ಮಾಸ್ಕೋ

ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

31ಬಿ) ಕೆಳಗಿನ ಪ್ರಶ್ನೆಯನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **1 x 10 = 10**

ಈಜಿಪ್ಟ್ ನಾಗರಿಕತೆಯ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ವಿವರಿಸಿ.

ಅಥವಾ

ಇಟಲಿಯ ಏಕೀಕರಣದಲ್ಲಿ ಮ್ಯಾಜಿನಿ, ಕವೂರ್ ಮತ್ತು ಗ್ಯಾರಿಬಾಲ್ಡಿಯವರ ಪಾತ್ರದ ಬಗ್ಗೆ ಟಿಪ್ಪಣಿ ಬರೆಯಿರಿ.

ಭಾಗ – ಇ

V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದನ್ನು 30 ರಿಂದ 40 ವಾಕ್ಯಗಳಲ್ಲಿ ಉತ್ತರಿಸಿ: **2 x 10 =20**

32) ಸಾಹಿತ್ಯ, ವಿಜ್ಞಾನ ಮತ್ತು ತತ್ವಶಾಸ್ತ್ರದ ಕ್ಷೇತ್ರಗಳಲ್ಲಿ ಗ್ರೀಕರ ಕೊಡುಗೆಗಳನ್ನು ವಿವರಿಸಿ.

33) ಮತ ಸುಧಾರಣಾ ಚಳುವಳಿಯಲ್ಲಿ ಮಾರ್ಟಿನ್ ಲೂಥರನ ಪಾತ್ರವನ್ನು ವಿವರಿಸಿ.

34) 1789ರ ಫ್ರಾನ್ಸಿನ ಕ್ರಾಂತಿಯ ಕಾರಣಗಳು ಮತ್ತು ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

35) ವಿಶ್ವ ಸಂಸ್ಥೆಯ ಸಾಧನೆಗಳನ್ನು ಕುರಿತು ಚರ್ಚಿಸಿ.

ಭಾಗ – ಎಫ್

VI. 36) ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ. **5**

1.	ನೆಹರು	ಸೂರ್ಯ ಕೇಂದ್ರ ಸಿದ್ಧಾಂತ
2.	ನೆಬುಖಿಡ್ನೇಜರ್	ಹೊಸ ಆರ್ಥಿಕ ನೀತಿ
3.	ಕೋಪರ್‌ನಿಕಸ್	ಕೆಂಪಂಗಿ ದಳ
4.	ಲೆನಿನ್	ಡಿಸ್ಕವರಿ ಆಫ್ ಇಂಡಿಯಾ
5.	ಗ್ಯಾರಿಬಾಲ್ಡಿ	ಬ್ಯಾಬಿಲೋನಿಯಾದ ತೂಗು ಉದ್ಯಾನವನ

37) ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ. **5**

1. ವರ್ಸೇಲ್ಸ್ ಒಪ್ಪಂದ
2. ಬಾಂಡುಂಗ್ ಸಮ್ಮೇಳನ
3. ಪಾರ್ಥೆನಾನ್ ದೇವಾಲಯದ ನಿರ್ಮಾಣ
4. ಜರ್ಮನಿಯ ಏಕೀಕರಣ
5. ಮುದ್ರಣ ಯಂತ್ರದ ಶೋಧನೆ.

*****

ಪ್ರಥಮ ಪಿ.ಯು.ಸಿ. ಜಾಗತಿಕ ಇತಿಹಾಸ

ಮೌಲ್ಯಮಾಪನ ಯೋಜನೆ

[SCHEME OF VALUATION]

ಭಾಗ–ಎ

I.

(1) ಸಂತ ಅಗಸ್ಟೈನ್ 1

(2) ಷಿ ಹೂವಾಂಗ್ ಟಿ 1

(3) ಶ್ರೇಷ್ಠ ಸೇನಾನಿ, ಸರ್ವಾಧಿಕಾರಿ, ಸುಧಾರಕ ಮತ್ತು ಪ್ರಾಚೀನ ರೋಮಿನ ಪ್ರತೀಕ 1

(4) ಮೆಕ್ಕಾದಿಂದ ಮದೀನಾಕ್ಕೆ ಪ್ರವಾದಿ ಮಹಮದರ ಗುಪ್ತ ಪ್ರಯಾಣ 1

(5) ಸಾ.ಶ. 1453 1

(6) ಜ಼ಾರ್ 2ನೇ ನಿಕೋಲಸ್ 1

(7) ವಾಟರ್ಲೂ ಕದನ 1

(8) 1919ರ ಪ್ಯಾರಿಸ್ ಒಪ್ಪಂದ 1

(9) ಮೈನ್ ಕ್ಯಾಂಫ್/ಮೈ ಸ್ಟ್ರಗಲ್/ನನ್ನ ಹೋರಾಟ 1

(10) ಭಾರತದ ವಿ.ಕೆ. ಕೃಷ್ಣ ಮೆನನ್ 1

ಭಾಗ–ಬಿ

II.

(11) ಸ್ಥಿರ ಭೂಮಿ ಸಿದ್ಧಾಂತ, ಮಿಡಿತ ಸಿದ್ಧಾಂತ, ಮಹಾ ಸ್ಫೋಟ ಸಿದ್ಧಾಂತ ಮುಂತಾದವು. [ಯಾವುದಾದರೂ ಎರಡು] **1+1**

(12) ಸಂಚಯಿಸಿದ ಫಲವತ್ತಾದ ಮಣ್ಣು, ನೀರಿನ ಸರಬರಾಜು, ವಾಸ ಯೋಗ್ಯವಾದ ವಾಯುಗುಣ, ಹೆಚ್ಚಿನ ಆಹಾರದ ಲಭ್ಯತೆ, ನದಿಗಳು ವ್ಯಾಪಾರಾಭಿವೃದ್ಧಿಗೆ ಸಹಾಯಕ. [ಯಾವುದಾದರೂ ಎರಡು] **1+1**

(13) ಅಥೆನ್ಸ್, ಸ್ಪಾರ್ಟಾ, ಕೊರಿಂಥ್ ಮತ್ತು ತಿಬ್ಸ್ [ಯಾವುದಾದರೂ ಎರಡು] **1+1**

(14) ಕ್ರಿಸ್‌ಮಸ್, ಗುಡ್‌ಫ್ರೈಡೆ, ಈಸ್ಟರ್ ಸಂಡೆ [ಯಾವುದಾದರೂ ಎರಡು] **1+1**

(15) ರಾಬರ್ಟ್ ಗ್ರಾಸ್‌ಟೆಸ್ಟ್, ರೋಜರ್ ಬೇಕನ್, ಪೀಟರ್ ಅಬೆಲಾರ್ಡ್ ಮತ್ತು ಸೈಂಟ್ ಥಾಮಸ್ ಅಕ್ವಿನಾಸ್ [ಯಾರಾದರೂ ಇಬ್ಬರು] **1+1**

(16) ಲ್ಯಾಟಿನ್ ಪದ 'ರೆವೊಲೂಷಿಯೋ' ಎಂಬುದರಿಂದ ಬಂದಿದೆ. ಅಂದರೆ ಸಂಪೂರ್ಣ ಬದಲಾವಣೆ. ಅತ್ಯಲ್ಪ ಅವಧಿಯಲ್ಲಿ ಆಡಳಿತ ಅಥವಾ ಸಂಘಟನಾತ್ಮಕ ರೂಪರೇಷೆಗಳಲ್ಲಿ ಬರುವ ಮೂಲಭೂತ ಬದಲಾವಣೆ. **2**

(17) ನ್ಯೂ ಹ್ಯಾಂಪ್‌ಷೈರ್, ಮೆಸ್ಸಾಚುಸೆಟ್ಸ್, ರ್ಹೋಡ್ ಐಲ್ಯಾಂಡ್, ಕನೆಕ್ಟಿಕಟ್, ನ್ಯೂಯಾರ್ಕ್, ನ್ಯೂಜೆರ್ಸಿ, ಮೇರಿಲ್ಯಾಂಡ್, ವರ್ಜಿನಿಯಾ, ಉತ್ತರ ಕರೋಲಿನ, ದಕ್ಷಿಣ ಕರೋಲಿನ, ಡೆಲ್‌ವೇರ್, ಪೆನ್ಸಿಲ್ ವೇನಿಯಾ ಮತ್ತು ಜಾರ್ಜಿಯಾ [ಯಾವುದಾದರೂ ಎರಡು] **1+1**

(18) ಕಮ್ಯುನಿಸ್ಟ್ ಮ್ಯಾನಿಫೆಸ್ಟೊ ಮತ್ತು ದಾಸ್ ಕ್ಯಾಪಿಟಲ್ **1+1**

(19) ಬಿಸ್ಮಾರ್ಕ್ – ರಕ್ತ ಮತ್ತು ಕಬ್ಬಿಣ ನೀತಿ **1+1**

(20) ಅಮೇರಿಕಾದ ಅಧ್ಯಕ್ಷ. ಇದರ ಪ್ರಕಾರ ಗ್ರೀಸ್ ಮತ್ತು ಟರ್ಕಿ ದೇಶಗಳಿಗೆ 400 ಮಿಲಿಯನ್ ಡಾಲರ್‌ಗಳಷ್ಟು ಸೈನಿಕ ಮತ್ತು ಆರ್ಥಿಕ ನೆರವು ನೀಡಿದನು. **1+1**

(21) ಕಾಮನ್‌ವೆಲ್ತ್ ಆಫ್ ಇಂಡಿಪೆಂಡೆಂಟ್ ಸ್ಟೇಟ್ಸ್/ ಕಾಮನ್‌ವೆಲ್ತ್‌ನ ಸ್ವತಂತ್ರ ರಾಜ್ಯಗಳು– ಮಿನ್ಸ್ಕ್‌ನಲ್ಲಿದೆ **1+1**

(22) ಜೋಸಿಫ್ ಬ್ರೋಜ್ ಟಿಟೋ, ನೆಹರು ಮತ್ತು ಗಮಾಲ್ ಅಬ್ದುಲ್ ನಾಸೇರ್ [ಯಾರಾದರೂ ಇಬ್ಬರು] **1+1**

ಭಾಗ–ಸಿ

ಖಖಖ.(23) ಇತಿಹಾಸವು ಗತಕಾಲದ ಘಟನೆಗಳ ಸ್ಮರಣೆಯಾಗಿದೆ. ಧಾರ್ಮಿಕ ಸಹಿಷ್ಣುತೆಯನ್ನು ಬೋಧಿಸುತ್ತದೆ, ಸ್ಫೂರ್ತಿಯ ಮೂಲವಾಗಿದೆ, ದೇಶಾಭಿಮಾನ ಮೂಡಿಸುತ್ತದೆ, ಸಮಾಜ ವಿಜ್ಞಾನಗಳ ಪ್ರಯೋಗಶಾಲೆ, ಉದಾತ್ತ ಧ್ಯೇಯಗಳನ್ನು ಬೆಳೆಸುತ್ತದೆ, ದೃಷ್ಟಿಕೋನವನ್ನು ವಿಸ್ತರಿಸುತ್ತದೆ, ವಿಶ್ವಶಾಂತಿಯನ್ನು ಬೆಳೆಸುತ್ತದೆ, ವೃತ್ತಿಪರ ಉಪಯೋಗಗಳನ್ನು ಹೊಂದಿದೆ ಮತ್ತು ಪೂರ್ವ ಗ್ರಹಗಳನ್ನು ಹೋಗಲಾಡಿಸುತ್ತದೆ. [3 ರಿಂದ 4 ವಾಕ್ಯಗಳ ವಿವರಣೆಯೊಂದಿಗೆ ಯಾವುದಾದರೂ ಐದು] **5**

(24) ವಾಯುಗುಣ ಬದಲಾವಣೆ, ಮಿದುಳಿನ ಗಾತ್ರದಲ್ಲಿ ವೃದ್ಧಿ, ಆಹಾರ ಮತ್ತು ಆಶ್ರಯ ತಾಣ, ದ್ವಿಪಾದ ಚಲನೆ, ಉಪಕರಣಗಳ ತಯಾರಿಕೆ, ಭಾಷೆ, ಪಶುಪಾಲನೆ ಮತ್ತು ಕೃಷಿ [8 ರಿಂದ 10 ವಾಕ್ಯಗಳಲ್ಲಿ ಯಾವುದಾದರು ಎರಡು]. **5**

(25) ಇಸ್ಲಾಂ ಧರ್ಮ–ಇಸ್ಲಾಂ ಅಂದರೆ "ದೇವರಾದ ಅಲ್ಲಾಹುಗೆ ಶರಣಾಗು" ಎಂದರ್ಥ. ಪವಿತ್ರ ಗ್ರಂಥ ಕುರಾನ್. ಇಸ್ಲಾಮಿನ 5 ಆಧಾರ ಸ್ತಂಭಗಳು– ಕಲೀಮ, ನಮಾಜ್, ಜಕಾತ್, ರೋಜಾ (ರಂಜಾನ್) ಮತ್ತು ಹಾಜ್ ಇತರೆ ಬೋಧನೆಗಳು. **5**

(26) ಪ್ರಬಲ ಪ್ರಭುತ್ವಗಳ ಉದಯ, ಬದಲಾದ ನಿಷ್ಠೆ, ವಾಣಿಜ್ಯ ಕೈಗಾರಿಕೆಗಳ ಬೆಳವಣಿಗೆ, ಹಣದ ಆಧಾರಿತ ಅರ್ಥ ವ್ಯವಸ್ಥೆಯ ಪ್ರಾಬಲ್ಯ, ರಾಜರಿಂದ ಬಲಿಷ್ಠ ಸೇನೆಗಳ ನಿರ್ಮಾಣ, ಕಾರ್ಮಿಕರ ಕೊರತೆ, ಭೂ ಮಾಲೀಕರ ನಡುವೆ ಪರಸ್ಪರ ಹೊಡೆದಾಟ. [ಪ್ರತಿಯೊಂದರ ಬಗ್ಗೆ ತಲಾ 2–3 ವಾಕ್ಯಗಳ ವಿವರಣೆ] **5**

(27) ಮಾನವ ಮತ್ತು ಅವನ ಚಟುವಟಿಕೆಗಳ ಬಗ್ಗೆ ಬರಹ–ಮಾನವಿಕ ಚಳುವಳಿ–ಯೂರೋಪಿನ ಪ್ರಾಂತೀಯ ಭಾಷೆಗಳ ಬೆಳವಣಿಗೆ– ಲಿಯೋನಾರ್ಡೊ ಬ್ರೂನಿಯು ಪ್ಲೇಟೋ, ಅರಿಸ್ಟಾಟಲ್ ಮತ್ತು ಸಾಕ್ರೆಟಿಸ್‌ರ ಕೃತಿಗಳನ್ನು ಇಟಾಲಿಯನ್ ಭಾಷೆಗೆ ಭಾಷಾಂತರಿಸಿದ. ಪೆಟ್ರಾರ್ಕ್ ಸಾನೆಟ್ ಪದ್ಯಗಳು, ಡಾಂಟೆ–ಡಿವೈನ್ ಕಾಮಿಡಿ, ಬೊಕಾಷಿಯೋ–ಡೆಕಾಮೆರಾನ್, ಎರಾಸ್ಮಸ್–ಪ್ರೈಸ್ ಅಂಡ್ ಫಾಲಿ, ಮೆಕಿಯಾವಲ್ಲಿ–ದಿ ಪ್ರಿನ್ಸ್, ಸರ್ವಾಂಟ್ಸ್–ಡಾನ್ ಕ್ವಿಕ್ಸೋಟ್, ಥಾಮಸ್ ಮೋರ್–ಉಥೋಪಿಯಾ, ಮಿಲ್ಟನ್–ಪ್ಯಾರಡೈಸ್ ಲಾಸ್ಟ್, ವಿಲಿಯಂ ಷೇಕ್‌ಸ್ಪಿಯರ್–57 ನಾಟಕಗಳು–ಜೂಲಿಯಸ್ ಸೀಜರ್, ಹ್ಯಾಮ್ಲೇಟ್, ರೋಮಿಯೋ ಅಂಡ್ ಜೂಲಿಯಟ್ ಮುಂತಾದವು, **5**

(28) ಅತ್ಯಂತ ವಿನಾಶಕಾರಿ ಯುದ್ಧ, ಇಟಲಿ ಮತ್ತು ಜರ್ಮನಿಯಲ್ಲಿ ಸರ್ವಾಧಿಕಾರತ್ವಗಳ ಅಂತ್ಯ, ಯುಎಸ್‌ಎ ಮತ್ತು ಯುಎಸ್‌ಎಸ್‌ಆರ್ ಗಳು ಶಕ್ತಿಶಾಲಿ ರಾಷ್ಟ್ರಗಳಾಗಿ ಹೊರ ಹೊಮ್ಮಿದವು, ಶೀತಲ ಯುದ್ಧಕ್ಕೆ ದಾರಿಯಾಯಿತು, ರಾಷ್ಟ್ರೀಯತೆಯ ತತ್ವದ ವಿಜಯ ಮತ್ತು ವಸಾಹತು ಷಾಹಿಯ ಅಂತ್ಯವಾಯಿತು, ಯಹೂದಿಗಳಿಗಾಗಿ ಇಸ್ರೇಲ್ ರಾಷ್ಟ್ರ ರಚನೆ, ಜಪಾನಿನಲ್ಲಿ ವಿನಾಶಕಾರಿ ಅಣುಬಾಂಬ್‌ಗಳ ದುಷ್ಪರಿಣಾಮಗಳು– ವಿಶ್ವಶಾಂತಿ ಸ್ಥಾಪನೆ ಮತ್ತು ಯುದ್ಧ ತಡೆಗಟ್ಟುವ ಉದ್ದೇಶದಿಂದ ವಿಶ್ವಸಂಸ್ಥೆ ಸ್ಥಾಪನೆ. **5**

(29) ● ನ್ಯಾಟೋ (NATO) 1949ರ ವಾಷಿಂಗ್‌ಟನ್‌ನಲ್ಲಿ 27 ಯೂರೋಪಿಯನ್ ರಾಷ್ಟ್ರಗಳ ಒಕ್ಕೂಟ– ರಷ್ಯಾದ ವಿರುದ್ಧ ಹೋರಾಡಲು.

● ಸಿಯಾಟೋ (ಮನಿಲಾ ಒಪ್ಪಂದ–1954) ಕಮ್ಯುನಿಸ್ಟ್ ಆಕ್ರಮಣವನ್ನು ಹಿಮ್ಮೆಟ್ಟಲು– ಆಗ್ನೇಯ ಏಷ್ಯಾ ಮತ್ತು ಪೆಸಿಫಿಕ್ ರಾಷ್ಟ್ರಗಳಲ್ಲಿ.

● ಅಂಜುಸ್ ಒಪ್ಪಂದ 1951– ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಮತ್ತು ಅಮೇರಿಕಾಗಳು – ಪೆಸಿಫಿಕ್ ಪ್ರದೇಶದಲ್ಲಿನ ಆಕ್ರಮಣಗಳ ವಿರುದ್ಧ ರಚನೆ.

● ಸೆಂಟೋ (CENTO) (ಬಾಗ್ದಾದ್ ಒಪ್ಪಂದ 1955 ಬ್ರಿಟನ್, ಟರ್ಕಿ, ಇರಾಕ್, ಪಾಕಿಸ್ತಾನ್ ಮತ್ತು ಇರಾನ್ –ಮಧ್ಯ ಪ್ರಾಚ್ಯದಲ್ಲಿ ಸೋವಿಯತ್ ವಿರೋಧಿ ಬಣ.

● ವಾರ್ಸಾ ಒಪ್ಪಂದ (1955–1991) ರಷ್ಯಾದ ನಾಯಕತ್ವದಲ್ಲಿ ಪೂರ್ವ ಯೂರೋಪಿಯನ್ ವಿರೋಧಿ ಸಂಘಟನೆ – ಬಲ್ಗೇರಿಯಾ, ಚೆಕಸ್ಲೋವಾಕಿಯಾ ಹಂಗೇರಿ, ಪೋಲೆಂಡ್ ಮುಂತಾದ ರಾಷ್ಟ್ರಗಳು. ರಷ್ಯಾ ಶಕ್ತಿಶಾಲಿ ರಾಷ್ಟ್ರವಾಯಿತು. ಇದು 1991ರಲ್ಲಿ ವಿಸರ್ಜನೆ. 5

(30) ಭಾರತದಲ್ಲಿ ಉಗಮ– ಪಂಚಶೀಲ ತತ್ವಗಳು – ನೆಹರುರವರನ್ನು ಶಿಲ್ಪಿ ಎಂದು ಪರಿಗಣಿಸಲಾಗಿದೆ. 1983ರಲ್ಲಿ 7ನೇ ಸಮ್ಮೇಳನ ದೆಹಲಿಯಲ್ಲಿ – ಇಂದಿರಾಗಾಂಧಿ – 8ನೇ ಸಮ್ಮೇಳನ ಹರಾರೆಯಲ್ಲಿ – ರಾಜೀವ್‌ಗಾಂಧಿಯವರು ನೆಲ್ಸನ್ ಮಂಡೇಲಾರವರ ಬಿಡುಗಡೆಗೆ ಆಗ್ರಹ – 12 ಮತ್ತು 13ನೇ ಸಮ್ಮೇಳನಗಳಲ್ಲಿ ಅಟಲ್‌ಬಿಹಾರಿ ವಾಜಪೇಯಿಯವರು ಅಣ್ವಸ್ತ್ರಗಳ ಮೇಲೆ ನಿಷೇಧ ಮತ್ತು ಅಂತರಾಷ್ಟ್ರೀಯ ಭಯೋತ್ಪಾದನೆ ನಿಗ್ರಹಕ್ಕೆ ಆಗ್ರಹ– 15ನೇ ಸಮ್ಮೇಳನದಲ್ಲಿ ಮನಮೋಹನ್ ಸಿಂಗ್‌ರವರು ಮುಂಬೈದಾಳಿ ಮತ್ತು ಭಯತ್ವಾದನೆಯನ್ನು ಖಂಡಿಸಿದರು ಮತ್ತು ಅಣ್ವಸ್ತ್ರಗಳ ನಿಶಸ್ತ್ರೀಕರಣವನ್ನು ಸಹ ಬೆಂಬಲಿಸಿದರು. 5

ಭಾಗ–ಡಿ

IV. 31 ಎ a) ರೋಮ್: ಇಟಲಿಯ ರಾಜಧಾನಿ– ರೋಮನ್ ಸಾಮ್ರಾಜ್ಯದ ರಾಜಧಾನಿ. ವ್ಯಾಟಿಕನ್ ನಗರ– ಪೋಪನ ಕೇಂದ್ರ. 1

b) ಜೆರುಸಲೆಂ: ಇಸ್ರೇಲ್‌ನಲ್ಲಿದೆ. ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಪವಿತ್ರ ನಗರ– ಜೀಸಸ್‌ನನ್ನು ಇಲ್ಲಿ ಶಿಲುಬೆಗೇರಿಸಲಾಯಿತು. 1

c) ಕೇಪ್ ಆಫ್ ಗುಡ್ ಹೋಪ್: ದಕ್ಷಿಣ ಆಫ್ರಿಕಾದಲ್ಲಿದೆ. ಡಯಾಜ್ ಇದನ್ನು 'ಕೇಪ್ ಆಫ್ ಸ್ಟಾರ್ಮ್ಸ್' ಎಂದು ಕರೆದ. 'ಕೇಪ್ ಆಫ್ ಗುಡ್ ಹೋಪ್' ಎಂದು ಮರು ನಾಮಕರಣ. 1

d) ನ್ಯೂಯಾರ್ಕ್: ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿದೆ. ಬ್ರಿಟೀಷರ 13 ವಸಾಹತುಗಳಲ್ಲಿ ಒಂದು. ವಿಶ್ವಸಂಸ್ಥೆಯ ಕೇಂದ್ರ ಕಛೇರಿ ಇಲ್ಲಿದೆ. 1

e) ಲಂಡನ್: ಯುನೈಟೆಡ್ ಕಿಂಗ್‌ಡಂನ ರಾಜಧಾನಿ. ಕೈಗಾರಿಕಾ ಕ್ರಾಂತಿಯ ಕೇಂದ್ರವಾಗಿತ್ತು. 1

f) ಬರ್ಲಿನ್: ಜರ್ಮನಿಯ ರಾಜಧಾನಿ. 2ನೇ ಜಾಗತಿಕ ಯುದ್ಧದ ನಂತರ ಪೂರ್ವ ಮತ್ತು ಪಶ್ಚಿಮ ಜರ್ಮನಿ ಎಂದು ವಿಭಜನೆ. 1990ರಲ್ಲಿ ಮರು ಏಕೀಕರಣ. 1

g) ಹಿರೋಶಿಮಾ: ಜಪಾನಿನಲ್ಲಿದೆ. 1945ರಲ್ಲಿ ಯುಎಸ್‌ಎ ಅಣು ಬಾಂಬ್ ಹಾಕಿದ್ದರಿಂದ 80 ಸಾವಿರ ಜನರು ಕೊಲೆಯಾದರು. 1

h) ಮಾಸ್ಕೋ: ರಷ್ಯಾದ ರಾಜಧಾನಿ. 1917ರ ರಷ್ಯಾ ಕ್ರಾಂತಿಯ ಕೇಂದ್ರಗಳಲ್ಲಿ ಒಂದು. 1

ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

31 ಬಿ ನಗರ ರಾಜ್ಯಗಳ ರಚನೆ– ರಾಜ್ಯಗಳ ಉದಯ– ಈಜಿಪ್ಟ್‌ಅನ್ನು 30 ಸಂತತಿಗಳು ಆಳಿದವು. ಈಜಿಪ್ಟಿನ ರಾಜರನ್ನು 'ಫೆರ್ಹೋ' ಎಂದು ಕರೆಯುತ್ತಿದ್ದರು. 'ದೇವರ ಪ್ರತಿನಿಧಿ' –ಮೆನಿಸ್ ಎಂಬ ರಾಜ ಮೇಲಿನ ಹಾಗು ಕೆಳಗಿನ ಈಜಿಪ್ಟನ್ನು ಒಂದುಗೂಡಿಸಿದ. ಹಳೆಯ, ಮಧ್ಯ ಮತ್ತು ಹೊಸ ರಾಜ್ಯಗಳ ಆಳ್ವಿಕೆಯ ಕಾಲ– 1ನೇ ಥಟ್‌ಮೋಸ್, ರಾಣಿ ಹತ್ಸೆಪ್ಸುಟ್– ಜಾಗತಿಕ ಇತಿಹಾಸದ ಪ್ರಥಮ ಸಾಮ್ರಾಜ್ಞಿ.

ಸಮಾಜ: 3 ವರ್ಗಗಳು, ಮೇಲ್ವರ್ಗ, ಮಧ್ಯಮ ಮತ್ತು ಗುಲಾಮರು.

ಮಹಿಳೆಯರಿಗೆ ಉನ್ನತ ಸ್ಥಾನಮಾನ, ಪಿತ್ರಾರ್ಜಿತ ಆಸ್ತಿಯಲ್ಲಿ ಸಮಪಾಲು– ರಾಜಮನೆತನಗಳಲ್ಲಿ ಪರಿವಾರದಲ್ಲಿಯೆ ವಿವಾಹ. **ಆರ್ಥಿಕ:** ಕೃಷಿ ಪ್ರಧಾನ ಅರ್ಥ ವ್ಯವಸ್ಥೆ, ಗೋಧಿ ಬಾರ್ಲಿ, ಹತ್ತಿ, ಬಟಾಣಿ, ಬೆಳ್ಳುಳ್ಳಿ, ಹಣ್ಣು ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದರು. ಕಾಲುವೆ ಮತ್ತು ಏತ ನೀರಾವರಿ. ಕೈ ಕಸಬುಗಳು ಮತ್ತು ಉತ್ಪಾದಕರು ವ್ಯಾಪಾರ ವಾಣಿಜ್ಯವಿತ್ತು– ವಸ್ತು ವಿನಿಮಯ ಪದ್ಧತಿ– ತೆರಿಗೆಗಳು.

ಅಥವಾ

ಮ್ಯಾಜಿನಿ: 'ಇಟಲಿ ಏಕೀಕರಣದ ಆತ್ಮ' 'ಲೇಖನಿಯು ಖಡ್ಗಕ್ಕಿಂತ ಶಕ್ತಿ ಯುತವಾದದು'. ರಾಷ್ಟ್ರಾಭಿಮಾನ ಮೂಡಿಸಿದ. 1931 ಯುವಕ ಇಟಲಿ ಸ್ಥಾಪನೆ. ಗಡಿಪಾರು– ಚಳುವಳಿಗೆ ಮಾರ್ಗದರ್ಶನ.

ಕೌಂಟ್–ಡಿ–ಕವೂರ್: 2ನೇ ವಿಕ್ಟರ್ ಇಮ್ಯಾನುಯಲ್ ಪ್ರಧಾನಮಂತ್ರಿ. ಕ್ರಿಮಿಯಾ ಯುದ್ಧದಲಿ ಭಾಗವಹಿಸಿದ. ಇಟಲಿ ಏಕೀಕರಣದ ಬಗ್ಗೆ ಫ್ರಾನ್ಸಿನ ಅನುಕಂಪ ಮತ್ತು ಸಹಾಯ. ಆಸ್ಟ್ರೀಯಾದ ವಿರುದ್ಧ ಯುದ್ಧ – ಲೊಂಬಾರ್ಡಿ ವಶ. ಮೊಡೆನ್ನಾ, ಪಾರ್ಮ, ಟಸ್ಕನಿ, ರೊಮಾನ್ನ, ಉಂಬ್ರಿ ಮುಂತಾದವು ಸಾರ್ಡಿನಿಯಾದಲ್ಲಿ ವಿಲೀನ. **ಗ್ಯಾರಿಬಾಲ್ಡಿ:** ಪ್ರಸಿದ್ಧ ದೇಶಾಭಿಮಾನಿ. 'ಇಟಲಿ ಏಕೀಕರಣದ ಖಡ್ಗ'. ಕೆಂಪಂಗಿ ದಳದ ಸ್ಥಾಪನೆ. ಸಿಸಿಲಿ ಮತ್ತು ನೇಪಲ್ಸ್ ರಾಜ್ಯಗಳನ್ನು ಗೆದ್ದ.

1861ರಲ್ಲಿ ಇಟಲಿ ಏಕೀಕರಣ ಘೋಷಣೆ, ಟ್ಯೂರಿನ್ ರಾಜಧಾನಿ 1870ರ ವೇಳೆಗೆ ವೆನಿಷಿಯಾ ಮತ್ತು ರೋಮ್‌ಗಳನ್ನು ಗೆದ್ದು ಏಕೀಕರಣ ಪೂರ್ಣಗೊಳಿಸಲಾಯಿತು. ರೋಮ್ ರಾಜಧಾನಿಯಾಯಿತು. 10

ಭಾಗ–ಇ

V. (32) ಸಾಹಿತ್ಯ, ವಿಜ್ಞಾನ ಮತ್ತು ತತ್ವ ಶಾಸ್ತ್ರಗಳಲ್ಲಿ ಗ್ರೀಕರ ಕೊಡುಗೆಗಳು:

ಸಾಹಿತ್ಯ: ಮಾಹಾಕಾವ್ಯ, ಪದ್ಯ, ನಾಟಕ ಮತ್ತು ಇತಿಹಾಸ– ಈಲಿಯಡ್ ಮತ್ತು ಒಡೆಸ್ಸಿ ಮಹಾಕಾವ್ಯ – ಹೋಮರ್, ಭಾವಗೀತೆಗಳ ರಚನೆ – ಪಿಂಡರ್ ಮತ್ತು ಸ್ಯಾಪ್ಫೊ – ದುರಂತ ನಾಟಕಗಳು – ಈಸ್ಕಿಲಸ್, ಸೋಪೋಕ್ಲಿಸ್, ಯೂರಿಪಿಡಿಸ್ ಮತ್ತು ಅವರ ನಾಟಕಗಳು – ಹಾಸ್ಯಕವಿ ಅರಿಸ್ಟೊಫೆನೆಸ್. ಇತಿಹಾಸಕಾರರು – ಹೆರೋಡೊಟಸ್, ಥುಸಿಡೈಡಿಸ್, ಪ್ಲುಟಾರ್ಕ್, ಡೆಮಾಸ್ತಾನೀಸ್– ವಾಕ್ ಚಾತುರ್ಯ.

ವಿಜ್ಞಾನ: ಅರಿಸ್ಟಾಟಲ್– ನೈಸರ್ಗಿಕ ವಿಜ್ಞಾನದ ಅಧ್ಯಯನ, ಥಿಯೋಫ್ರೆಸ್ಟಾಸ್– ಸಸ್ಯಶಾಸ್ತ್ರ, ಹಿಪ್ಪೋಕ್ರಾಟ್ಸ್– 'ವೈದ್ಯಶಾಸ್ತ್ರದ ಪಿತಾಮಹ' ಹಿರೋಫಿಲಸ್– ಅಂಗ ರಚನಾಶಾಸ್ತ್ರ, ಅರಿಸ್ಟಾರ್ಕಸ್– ಗ್ರಹಗಳು ಸೂರ್ಯನ ಸುತ್ತ ಸುತ್ತುತ್ತವೆ, ಟಾಲೆಮಿ– ಸೌರಮಂಡಲದ ಬಗ್ಗೆ. ಪೈಥೋಗೋರಸ್ ಮತ್ತು ಯುಕ್ಲಿಡ್ ಗಣಿತಶಾಸ್ತ್ರ, ಆರ್ಕಿಮಿಡಿಸ್ ಪ್ರಸಿದ್ಧ ವಿಜ್ಞಾನಿ.

ತತ್ವಶಾಸ್ತ್ರ: 'ಫಿಲಾಸಾಫಿಯಾ'– 'ಅರಿವಿನ ಬಗ್ಗೆ ಪ್ರೀತಿ' ಪ್ರಸಿದ್ಧ ತತ್ವಜ್ಞಾನಿಗಳು– ಸಾಕ್ರೆಟಿಸ್, ಪ್ಲೇಟೋ ಮತ್ತು ಅರಿಸ್ಟಾಟಲ್– ಅವರ ವಿಚಾರ ಮತ್ತು ಗ್ರಂಥಗಳು. 10

(33) ಮಾರ್ಟಿನ್ ಲೂಥರನ ಪಾತ್ರ: (1483–1546)

ಮತ ಸುಧಾರಣೆಯ ನಾಯಕ, ಜರ್ಮನಿಯಲ್ಲಿ ಜನನ. ಧರ್ಮಶಾಸ್ತ್ರದಲ್ಲಿ ಎಂ.ಎ. ಮತ್ತು ಪ್ರಾಧ್ಯಪಕ ವೃತ್ತಿ. 1511ರಲ್ಲಿ ರೋಂಗೆ ಭೇಟಿ. ಪೋಪನ ಭ್ರಷ್ಟತೆ ಮತ್ತು ಅನೀತಿಯುತ ಜೀವನ ಕಂಡು ದಿಗ್ಭ್ರಮೆಗೊಂಡ. ಕ್ಷಮಾಪತ್ರಗಳ ಮಾರಾಟ. 'ದಿ ಮ್ಯಾನಿಫೆಸ್ಟೋ ಆಫ್ ರಿಫಾರ್ಮೇಷನ್' ಎಂಬ ಗ್ರಂಥ ರಚಿಸಿದ. 95 ನಿಬಂಧನೆಗಳು. ವಿಟ್ಟನ್ ಬರ್ಗ್ ಚರ್ಚಿನ ಬಾಗಿಲಿಗೆ ಅಂಟಿಸಿದ. ಕ್ಯಾಥೋಲಿಕ್ ಚರ್ಚಿನ ಸಿದ್ಧಾಂತಗಳ ವಿರುದ್ಧ ಸಮರ ಸಾರಿದ. ಪೋಪ್ 10ನೇ ಲಿಯೋ 'ಧರ್ಮ ಬಹಿಷ್ಕಾರ', 'ಪಾಪಲ್ ಬುಲ್'–ಬೈಬಲ್ ಗ್ರಂಥವನ್ನು ಜರ್ಮನ್ ಭಾಷೆಗೆ– ಪ್ರೊಟೆಸ್ಟೆಂಟ್ ಚಳುವಳಿ ಆರಂಭ. ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟರ ಮಧ್ಯ ಸಂಘರ್ಷ– 1555ರ ಆಗಸ್‌ಬುರ್ಗ್ ಶಾಂತಿ ಒಪ್ಪಂದ– ಇತರೆ ಯೂರೋಪಿನ ರಾಷ್ಟ್ರಗಳಿಗೂ ಹರಡಿತು. 10

(34) ಫ್ರಾನ್ಸಿನ ಕ್ರಾಂತಿಯ ಕಾರಣ ಮತ್ತು ಪರಿಣಾಮಗಳು:

1789ರ ಕ್ರಾಂತಿ ರಾಜಪ್ರಭುತ್ವದ ದಬ್ಬಾಳಿಕೆ ವಿರುದ್ಧ

ಕಾರಣಗಳು:

1. ರಾಜಕೀಯ: ಬೋರ್ಬನ್ ಮನೆತನ–ನಿರಂಕುಶ ದರ್ಪಿಷ್ಟ ರಾಜರು. 14, 15 ಮತ್ತು 16ನೇ ಲೂಯಿ, ಜನರ ಹಿತಾಸಕ್ತಿ ಕಡೆಗಣನೆ. ಐಷಾರಾಮಿ ಜೀವನ–16ನೇ ಲೂಯಿ ರಾಣಿಯ ಕೈಗೊಂಬೆ.
2. ಸಾಮಾಜಿಕ: ಅಸಮಾನತೆ ಸವಲತ್ತುಳ್ಳ ಮತ್ತು ಸವಲತ್ತಿಲ್ಲದ ವರ್ಗಗಳು – ತಾರತಮ್ಯತೆ.
3. ಆರ್ಥಿಕ: ದೋಷಪೂರಿತ ಮತ್ತು ಅನ್ಯಾಯಯುತ ತೆರಿಗೆ ನೀತಿ. ಪಾದ್ರಿಗಳು ಮತ್ತು ನೋಬಲರು ತೆರಿಗೆ ವಿನಾಯಿತಿ. ಸಾಮಾನ್ಯರು ಎಲ್ಲ ತೆರಿಗೆ ಕೃಷಿಕರು ಮತ್ತು ಕಾರ್ಮಿಕರ ಬವಣೆಗಳು.
4. ಬೌದ್ಧಿಕ: ಮಂಟೆಸ್ಕ್ಯೂ, ವಾಲ್ಟೇರ್, ರೊಸೋ ಮತ್ತು ಡಿಡಿರೋ – ದಿ ಸ್ಪಿರಿಟ್ ಆಫ್ ಲಾಸ್, ಲೆಟರ್ಸ್ ಅನ್ ದಿ ಇಂಗ್ಲಿಷ್, ಸೋಷಿಯಲ್ ಕಾಂಟ್ರಕ್ಟ್ – ಕ್ರಾಂತಿಯ ತತ್ವಗಳು – ಸ್ವಾತಂತ್ರ್ಯ, ಸಮಾನತೆ ಮತ್ತು ಬ್ರಾತೃತ್ವ.
5. ಅಮೇರಿಕಾ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವ.
6. ತಕ್ಷಣದ ಕಾರಣ – ಫ್ರಾನ್ಸಿನ ಆರ್ಥಿಕ ದಿವಾಳಿತನ

ಪರಿಣಾಮಗಳು:

1. ನಿರಂಕುಶ ರಾಜ ಪ್ರಭುತ್ವವನ್ನು ರದ್ದುಗೊಳಿಸಿತು. ಊಳಿಗ ಮಾನ್ಯ ಪದ್ಧತಿ ಮತ್ತು ವಂಶ ಪಾರಂಗತ ಶ್ರೀಮಂತರ ಆಳ್ವಿಕೆಯನ್ನು ಅಂತ್ಯಗೊಳಿಸಿತು.
2. ಪಾದ್ರಿಗಳು ಮತ್ತು ನೋಬಲರ ವಿಶೇಷ ಸವಲತ್ತುಗಳನ್ನು ರದ್ದುಪಡಿಸಲಾಯಿತು.
3. 'ಜನತೆಯ ಪರಮಾಧಿಕಾರ ಸಿದ್ಧಾಂತ'ವನ್ನು ಎತ್ತಿ ಹಿಡಿಯಿತು.
4. ಸ್ವಾತಂತ್ರ್ಯ, ಸಮಾನತೆ ಮತ್ತು ಬ್ರಾತೃತ್ವ ತತ್ವಗಳನ್ನು ಜನಪ್ರಿಯಗೊಳಿಸಿತು.
5. ಏಕತಾ ಭಾವನೆಯನ್ನು ಹರಡಿ ರಾಷ್ಟ್ರೀಯತೆಯ ತತ್ವವನ್ನು ಹರಡಿತು.
6. ಅಪಾರ ರಕ್ತಪಾತಕ್ಕೆ ಕಾರಣವಾಯಿತು. ಭಯಾನಕ ಆಳ್ವಿಕೆಯ ಕಾಲದಲ್ಲಿ ಸುಮಾರು 17 ಸಾವಿರ ಜನರು ಕೊಲೆಯಾದರು.
7. ಫ್ರಾನ್ಸಿನ ಸೈನಿಕ ಸರ್ವಾಧಿಕಾರಿಯಾಗಿ ಹೊರಹೊಮ್ಮಲು ನೆಪೋಲಿಯನ್ನನಿಗೆ ಅವಕಾಶ ಕಲ್ಪಿಸಿತು. 'ಕ್ರಾಂತಿಯ ಶಿಶು' [6 ಅಂಕಗಳು ಕಾರಣಗಳಿಗೆ ಮತ್ತು 4 ಅಂಕಗಳು ಪರಿಣಾಮಗಳಿಗೆ] 10

(35) ವಿಶ್ವ ಸಂಸ್ಥೆಯ ಸಾಧನೆಗಳು: ರಾಜಕೀಯ ಮತ್ತು ರಾಜಕೀಯೇತರ

ರಾಜಕೀಯ:

1. ಇರಾನಿನ ಉತ್ತರ ಗಡಿಯಲ್ಲಿದ್ದ ರಷ್ಯಾದ ಸೈನ್ಯವನ್ನು ಹಿಂತೆಗೆದುಕೊಳ್ಳುವಂತೆ ನಿರ್ದೇಶನ.
2. ಹಾಲೆಂಡ್ ಮತ್ತು ಇಂಡೋನೇಷ್ಯಾದ ಜಗಳವನ್ನು 1948ರಲ್ಲಿ ಇತ್ಯರ್ಥ.
3. 1948ರಲ್ಲಿ ಕಾಶ್ಮೀರದಲ್ಲಿ ಯುದ್ಧ ವಿರಾಮವನ್ನು ಘೋಷಿಸಿತು.

4. ಉತ್ತರ ಮತ್ತು ದಕ್ಷಿಣ ಕೊರಿಯಾಗಳ ನಡುವಿನ ಜಗಳವನ್ನು ಇತ್ಯರ್ಥಪಡಿಸಿತು.
5. ಸುಯಜ್ ಕಾಲುವೆ ಮತ್ತು ವಿಯಾಟ್ನಾಂ ಸಮಸ್ಯೆಗಳ ಪರಿಹಾರ.
6. 1991ರಲ್ಲಿ ಇರಾಕ್, ಕುವೈತ್‌ನ ಆಕ್ರಮಣ– ಇತ್ಯರ್ಥ–
7. ಗ್ರೀಸ್, ಲೆಬನಾನ್, ಸೈಪ್ರಸ್, ಕಾಂಗೋ, ಕಾಂಬೋಡಿಯಾ ಮುಂತಾದ ರಾಷ್ಟ್ರಗಳಲ್ಲಿ ಶಾಂತಿ ಪಾಲನಾ ಕಾರ್ಯಾಚರಣೆ.
8. 1991ರಲ್ಲಿ ದಕ್ಷಿಣ ಆಫ್ರಿಕಾದಲ್ಲಿನ ವರ್ಣ ಬೇಧ ನೀತಿಯನ್ನು ಅಂತ್ಯಗೊಳಿಸಿತು.

ರಾಜಕೀಯೇತರ:

1. 1948ರ ಡಿಸೆಂಬರ್ 10ರಂದು ಮಾನವ ಹಕ್ಕುಗಳ ಘೋಷಣೆ.
2. ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಕಾರ್ಮಿಕರ ಸ್ಥಿತಿಯನ್ನು ಸುಧಾರಿಸಿದೆ.
3. FAO– ಆಹಾರ ಉತ್ಪಾದನೆಯನ್ನು ಹೆಚ್ಚಿಸಿದೆ.
4. IMF & IBRDಗಳು ಆರ್ಥಿಕಾಭಿವೃದ್ಧಿಗೆ ಆರ್ಥಿಕ ಸಹಾಯ.
5. UNESCO– ಹಲವಾರು ಕ್ಷೇತ್ರಗಳಲ್ಲಿ ಸಾಧನೆ. ವಿಶ್ವ ಪಾರಂಪರಿಕ ಕೇಂದ್ರಗಳ ಸಂರಕ್ಷಣೆ.
6. UNICEF ಮಕ್ಕಳ ಹಸಿವು ಮತ್ತು ಅಪೌಷ್ಟಿಕತೆ ನಿವಾರಣೆ. WHO ಜನರ ಆರೋಗ್ಯ ಸ್ಥಿತಿಯನ್ನು ಸುಧಾರಿಸಿದೆ. 10

VI. (36) 1) ನೆಹರು – ಡಿಸ್ಕವರಿ ಆಫ್ ಇಂಡಿಯಾ. 1

2) ನೆಬುಖಡ್ನೇಜರ್ – ಬ್ಯಾಬಿಲೋನಿಯಾದ ತೂಗು ಉದ್ಯಾನವನ. 1

3) ಕೋಪರ್‌ನಿಕಸ್ – ಸೂರ್ಯ ಕೇಂದ್ರ ಸಿದ್ಧಾಂತ. 1

4) ಲೆನಿನ್ – ಹೊಸ ಆರ್ಥಿಕ ನೀತಿ. 1

5) ಗ್ಯಾರಿ ಬಾಲ್ಡಿ – ಕೆಂಪಂಗಿ ದಳ 1

(37) 1) ಪಾರ್ಥೇನಾನ್ ದೇವಾಲಯದ ನಿರ್ಮಾಣ. 1

2) ಮುದ್ರಣ ಯಂತ್ರದ ಶೋಧನೆ. 1

3) ಜರ್ಮನಿ ಏಕೀಕರಣ. 1

4) ವರ್ಸೇಲ್ಸ್ ಒಪ್ಪಂದ. 1

5) ಬಾಂಡುಂಗ್ ಸಮ್ಮೇಳನ. 1


ಹಿರೋಷಿಮಾ
ಬರ್ಲಿನ್
ಮಾಸ್ಕೋ
ಬೀಜಿಂಗ್
ಲಂಡನ್
ಪ್ಯಾರಿಸ್
ನ್ಯೂಯಾರ್ಕ್
ಟೋಕಿಯೋ